# ವೇದಾಂತ ಸಂದೇಶಗಳು

## ಸಂಪುಟ – 3

# ಆಧ್ಯಾತ್ಮದ ಬೆಳಕು



ಸಂಸ್ಥಾಪಕರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ – 573211
08175–273820
2010

# ಶ್ರೀಶ್ರೀಗಳವರ ಕೃತಿಗಳು

## (ಅಧ್ಯಾತ್ಮಪ್ರಕಾಶ ಪತ್ರಿಕೆಯಿಂದ ಆಯ್ದ ಲೇಖನಗಳ ಸಂಗ್ರಹ)

1923ರಲ್ಲಿ ಪ್ರಾರಂಭವಾದ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ 1975ರವರೆಗೂ ಶ್ರೀ ಶ್ರೀಗಳವರೇ ಭಕ್ತಿ ಜ್ಞಾನ, ವೈರಾಗ್ಯ ಮತ್ತು ವೇದಾಂತದಲ್ಲಿ ಅಭಿರುಚಿಯನ್ನುಂಟು ಮಾಡುವಂತಹ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು ಈಗ ಹಳೆಯ ಸಂಪುಟಗಳು ದೊರಕುತ್ತಿಲ್ಲ. ಈ ಲೇಖನಗಳು ಈಗಿನ ಸನ್ನಿವೇಶಕ್ಕೂ ಸಹ ಉಪಯುಕ್ತವಾಗುತ್ತವೆ ಎಂದು ಅನೇಕ ಭಕ್ತರ ಅಪೇಕ್ಷೆಯಂತೆ ಗ್ರಂಥ ರೂಪದಲ್ಲಿ ಹೊರತಂದಿರುವ ಕೆಲವು ಪುಸ್ತಕಗಳ **ಕಿರುಪರಿಚಯ.**

**1. ಋಗ್ವೇದೀಯ ಪುರುಷಸೂಕ್ತ (ಮಂತ್ರಾರ್ಥ ವಿವೇಚನೆ)**

ಅ.ಪ್ರ. ಪತ್ರಿಕೆಯ 24ನೆ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ಪೂಜೆ ಮಾಡುವ ಪ್ರತಿಯೊಬ್ಬ ಆಸ್ತಿಕನಿಗೂ ತುಂಬ ಉಪಕಾರಿಯಾಗಿದೆ. ನಿಜವಾದ ಅರ್ಥವು ತಾತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ ಉಪಾಸನೆ, ಜ್ಞಾನಪರವಾಗಿದೆಯೆಂಬುದನ್ನು ಮಾರ್ಮಿಕವಾಗಿ ಹೃದಯಕ್ಕೆ ತಾಕುವ ಹಾಗೆ ಶ್ರೀ ಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲ ವೇದದವರಿಗೂ ಮತ್ತು ಆಸ್ತಿಕ ಮಹಾಶಯರಿಗೂ ಉಪಯುಕ್ತವಾದ ಗ್ರಂಥ. **(ಎರಡನೆಯ ಮುದ್ರಣ, 2011, ಪು. 115, ಬೆಲೆ. 30 ರೂ.)**

**2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ)**

1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ ''ಈ ತಿಂಗಳ ಸಂದೇಶ'' ಎಂಬ ಶೀರ್ಷಿಕೆಯಲ್ಲಿ ಶ್ರೀಶ್ರೀಗಳವರು ಬರೆದು ಅ.ಪ್ರ. ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. ''ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ, ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು'' ಎಂಬಿವೇ ಮುಂತಾದ ಮಹತ್ತೂರ್ಣವಾದ ವಿಚಾರಗಳಿಂದ ತುಂಬಿ, ತತ್ತ್ವಜಿಜ್ಞಾಸುಗಳಿಗೆ ದಾರಿದೀಪದಂತಿದೆ. ಸಂಸ್ಕೃತ ಬಾರದವರಿಗೂ, ಸರಿಯಾದ ಗುರುಗಳು ದೊರಕದವರಿಗೂ ಈ ಗ್ರಂಥವು ಮಾರ್ಗದರ್ಶನವಾಗಿದೆ.

**(ಎರಡನೆಯ ಮುದ್ರಣ, 2011, ಪು. 218, ಬೆಲೆ. 50 ರೂ.)**

**3. ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ ಸಿರಿ)**

ಬೇರೆ ಬೇರೆ ಉಪನಿಷತ್ತುಗಳ ವಾಕ್ಯಗಳನ್ನು ಸಂಚಿಕೆಗೊಂದರಂತೆ ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 8, 9, 21, 26, 27ರಲ್ಲಿ ಪ್ರಕಟಿಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶಶಾಂತಿ ಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇರಿವಿನ ಅರಿವು (2) ಆನಂದ ಸ್ವರೂಪವಾದ ಆತ್ಮನ ವಿಚಾರ (3) ಅಧ್ಯಾತ್ಮ ಸಾಧನಗಳು (4) ಜ್ಞಾನಸಾಧನೆಗಳು ಮತ್ತು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಧ್ಯಾನಯೋಗವನ್ನು ಹೇಗೆ ಮಾಡಬೇಕು ಮತ್ತು ಉಪಾಸನಾ ಕ್ರಮವನ್ನೂ ಶಾಸ್ತ್ರೀಯ ರೀತಿಯಲ್ಲಿ ತಿಳಿಸಿದೆ.

**(ಎರಡನೆಯ ಮುದ್ರಣ, 2012, ಪು. 247, ಬೆಲೆ. 60 ರೂ.)**

**(ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.)**

ಅಧ್ಯಾತ್ಮ ಗ್ರಂಥಾವಳಿ :

# ವೇದಾಂತ ಸಂದೇಶಗಳು–ಸಂಪುಟ 3

## (ಅಧ್ಯಾತ್ಮದ ಬೆಳಕು)

ಲೇಖಕರು
**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು**
ಪೂರ್ವಾಶ್ರಮದ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮ,
(ವೈ. ಸುಬ್ಬರಾವ್)

ಕ್ರಮಾಂಕ: 245

**ಪ್ರಕಾಶಕರು :**

**ಅಧ್ಯಾತ್ಮ ಪ್ರಕಾಶ ಕಾರ್ಯಾಲಯ**
ಹೊಳೆನರಸೀಪುರ–573211
ದೂರವಾಣಿ : 08175 273820
www.adhyatmaprakasha.org
Email: coordinator_apk@yahoo.com
**2012**

Vedanta Sandeshagalu Part IV - Collection of Articles Published in Adhyatma Prakasha Magazines, written by Sri Sri Satchidanandendra Saraswathi Swamiji ; Now Published by Adhyatma Prakasha Karyalaya, Holenarasipura 573211, Karnataka.
Ph. : 08175-273820
**www.adhyatmaprakasha.org**
**Email: coordinator_apk@yahoo.co**

| | | | |
|---|---|---|---|
| ಮೊದಲನೆಯ ಮುದ್ರಣ | : | 2010 | (1000 ಪ್ರತಿಗಳು |
| First Edition | : | 2010 | (1000 Copies) |
| ಎರಡನೆಯ ಮುದ್ರಣ | : | 2012 | (1000 ಪ್ರತಿಗಳು) |
| Secondt Edition | : | 2012 | (1000 Copies) |

| | | |
|---|---|---|
| ಬಳಸಿದ ಕಾಗದ | : | 70 ಜಿಎಸ್‌ಎಮ್, ಮ್ಯಾಪ್‌ಲಿಥೊ |
| ಆಕಾರ | : | 1/8 ಡೆಮಿ |
| ಪುಟಗಳು | : | 10 + 346 = 356 |
| ಬೆಲೆ | : | **70.00 ರೂ.** |
© : ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

**ಅಕ್ಷರ ಜೋಡಣೆ :**
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್
ನಾಗಸಂದ್ರ, ಬೆಂಗಳೂರು - 560 028 ದೂ. : 26761529

**ಮುದ್ರಣಸ್ಥಾನ :**
**ಶ್ರೀರಾಮ ಪ್ರಿಂಟರ್ಸ್**
ನಂ. 25, 15ನೇ ಕ್ರಾಸ್, ಶ್ರೀನಿಧಿ ಲೇಔಟ್,
ಬೆಂಗಳೂರು - 560 062, ದೂ. 98453 46197

# ಪ್ರಕಾಶಕರ ಅರಿಕೆ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ಅಸಾಧಾರಣ ವೇದಾಂತ ಪುರುಷ ಶ್ರೇಷ್ಠರು. ತಮ್ಮ ಇಡಿಯ ಜೀವನವನ್ನು ಆಳವಾದ ವೇದಾಂತ ಅಧ್ಯಯನ, ತಿಳಿಯಾದ ರೀತಿಯ ಅಧ್ಯಾಪನ ಮತ್ತು ಮನಮುಟ್ಟುವ ಸೊಗಸಾದ ಶೈಲಿಯ ಬೋಧಕ ಬರಹಗಳಿಂದ ಕನ್ನಡ ಸಾರಸ್ವತ ಲೋಕದ ಅಧ್ಯಾತ್ಮವಿಭಾಗಕ್ಕೆ ಅನುಪಮವಾದ ಸೇವೆಯನ್ನು ಸಲ್ಲಿಸಿದವರು.

ಸಾಟಿಯಿಲ್ಲದ ಅವರ ಬರಹಗಳು ಸಂಖ್ಯೆ ಮತ್ತು ಗುಣದಲ್ಲಿ ಹೆಚ್ಚಳವನ್ನು ಪಡೆದವು. **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'** (ಸಂಸ್ಕೃತ) ದಂತಹ ಮೇರುಕೃತಿಯೂ, ವಿಚಾರ-ತರ್ಕಗಳಿಂದ ಜರಡಿ ಹಿಡಿದ **'ಶ್ರೀ ಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವ'**, ಎಲ್ಲ ಶಂಕರಭಾಷ್ಯಗಳ ಕನ್ನಡಾನುವಾದಗಳೂ ಪಂಡಿತಮಾನ್ಯವಾದರೆ, **'ಪರಮಾರ್ಥ ಚಿಂತಾಮಣಿ'** ಯಂತಹ ಶ್ರೇಷ್ಠ ಸ್ವತಂತ್ರ ಗ್ರಂಥಗಳು, ಚಾರಿತ್ರಿಕವೆನಿಸಬಹುದಾದ **'ವೇದಾಂತ ವಿಚಾರದ ಇತಿಹಾಸ'**, ಜನಾದರಣೀಯವಾದ **'ಭಗವದ್ಗೀತೆಯ ಉಪನ್ಯಾಸಗಳು'** ಮತ್ತು ಇತರ ಸಾರವತ್ತಾದ ಉಪನ್ಯಾಸಗಳ ಹಿಂಡು, ಮಧ್ಯಮವರ್ಗದ ಓದುಗರಿಗಾಗಿ **'ಉಪನಿಷತ್ ಮಂಜರಿಗಳು'**, ವೇದಾಂತವನ್ನು ಇಣುಕಿ ನೋಡುವರಿಗಾಗಿ **'ಅಧ್ಯಾತ್ಮ ವಿದ್ಯೆ'**, **'ವೇದಾಂತ ಬಾಲಬೋಧೆ'**, **'ವೇದಾಂತ ಪ್ರವೇಶಿಕೆ'** ಮೊದಲಾದ ಪುಸ್ತಕಗಳು, ವಿವರಣಾಸಹಿತ ಸ್ತೋತ್ರಗಳು, ಸಂಶೋಧನಾರೂಪದ ಆದರೆ ಅನವಶ್ಯಕ ವಿವಾದವೆಬ್ಬಿಸಿದ **'ಮೂಲಾವಿದ್ಯಾನಿರಾಸ'** (ಶಂಕರ ಹೃದಯ)ಮತ್ತು ತಾವೇ 1923ರಲ್ಲಿ ಪ್ರಾರಂಭಿಸಿ 1974ರ ಕೊನೆಯುವರೆಗೂ (ಅವರು ಮುಕ್ತರಾಗುವ ಕೆಲವು ತಿಂಗಳುಗಳವರೆಗೂ) ಸಂಪಾದಿಸಿದ **'ಅಧ್ಯಾತ್ಮಪ್ರಕಾಶ'** ಪತ್ರಿಕೆಯ ವಿವಿಧ ಹಂತಗಳ ನೂರಾರು ಲೇಖನಗಳು ಮತ್ತು ತಮ್ಮ ಧೀಮಂತ ಜೀವನದ ಎಲ್ಲ ಕ್ಷಣಗಳನ್ನೂ ವೇದಾಂತ ಚಿಂತನೆ-ಪ್ರಸಾರಕ್ಕಾಗಿಯೇ ಸವೆಸಿದ ಅವರನ್ನು ಹಿರಿಯ, ಶ್ರೇಷ್ಠ ವೇದಾಂತ ಪ್ರಾಜ್ಞರ ಸಾಲಿನಲ್ಲಿ ನಿಲಿಸಿವೆ.

'ಅಧ್ಯಾತ್ಮಪ್ರಕಾಶ' ಪತ್ರಿಕೆಯಲ್ಲಿ ಬಂದ ಲೇಖನಗಳನ್ನು ಒಂದು ಕಡೆ ಕೂಡಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿದ ಈಗ ಒಂದೆರಡು ಪ್ರತಿಗಳನ್ನು ಬಿಟ್ಟರೆ, ಹೆಚ್ಚಿನವು ಅಲಭ್ಯವಾಗಿರುವ ಪತ್ರಿಕೆಗಳ ಎಲ್ಲ ಬರಹಗಳೂ ಉತ್ಸಾಹೀ ಓದುಗರಿಗೆ ದೊರೆಯಲಿ, ಅತ್ಯುಪಯುಕ್ತವಾಗಿರುವ ಇವು ಕಾರ್ಯಾಲಯದಲ್ಲಿ ಸುಲಭ ಬೆಲೆಯಲ್ಲಿ ದೊರಕುವಂತಿರಲಿ ಎಂಬ ಉದ್ದೇಶದಿಂದ ಈ ಮುಂಚೆ ಉಪನಿಷತ್‌ಮಂಜರಿ ಮತ್ತಿತರ ಅನೇಕ ಪುಸ್ತಕಗಳನ್ನು ಪ್ರಕಟಿಸಿದೆ. ಈಚೆಗೆ ವೇದಾಂತ ಸಂದೇಶಗಳು ಸಂಪುಟ-1 (ಪರಮಾರ್ಥ ಚಿಂತನೆ) ಮತ್ತು ಪುರುಷ ಸೂಕ್ತ (2009, ನವೆಂಬರ್), ವೇದಾಂತ ಸಂದೇಶಗಳು, ಸಂಪುಟ-2 (ಉಪನಿಷತ್ ಸಿರಿ-ಏಪ್ರಿಲ್ 2010) ಪ್ರಕಟವಾಗಿವೆ.

ಇದು ಈಚಿನ ಈ ಸಾಲಿನಲ್ಲಿ ನಾಲ್ಕನೆಯ ಪುಸ್ತಕ. ಪ್ರಾರಂಭ ದೆಸೆಯಲ್ಲಿರುವವರನ್ನು ಸೆಳೆದು ಅಧ್ಯಾತ್ಮ ಪರಿಚಯ, ಮತ್ತು ಸಾಧನಕ್ಕೆ ಬೇಕಾದ ಪೂರ್ವಸಿದ್ಧತೆಯ ಕರ್ಮಾನುಷ್ಠಾನಗಳು, ಸಾಧನಾ ಮಾರ್ಗಗಳು ಇವುಗಳನ್ನು ಕಣ್ತೋರಿಸುವ 'ಅಧ್ಯಾತ್ಮದ ಬೆಳಕು', ಅದರ ಮೂಲಕ ದೊರಕುವ ಜ್ಞಾನವನ್ನು ಹಂಚುವದೇ ಈ ಪುಸ್ತಕದ ಮೂಲ ಉದ್ದೇಶ. ಹೊರತೋರಿಕೆಗೆ ಸುಲಭವೆಂದು ಕಾಣಬರುವ–ನಿತ್ಯವೂ ಕೆಲವೇ ಜನರಾದರೂ ನಡೆಸಿಕೊಂಡು ಬರುತ್ತಿರುವ ಕರ್ಮಾನುಷ್ಠಾನಗಳು, ವೇದಾಂತಾಭ್ಯಾಸಗಳು ಆಚರಣೆಗೆ ತರುವಾಗ ಯಾಂತ್ರಿಕವಾಗಿ ಸಾಧಾರಣವೂ, ಶುಷ್ಕವೂ ಆಗಿರುವುದೆಂದೆಣಿಸುವಂತಿರುವುವು. ಆದರೆ ಅವುಗಳ ಅರ್ಥಾನುಸಂಧಾನದೊಡನೆ ಮಂತ್ರ, ಆಚರಣೆಗಳ ಅಂತರಂಗವನ್ನು ಬೆಳಗುವ ಶ್ರೀ ಶ್ರೀಗಳವರ ಸರಳ, ಸುಂದರ ಲೇಖನಗಳು ಅರ್ಥ ಗರ್ಭಿತವೂ ಅತ್ಯುಪಯುಕ್ತವಾಗಿಯೂ ಇವೆ; ಸಾಮಾನ್ಯ ಓದುಗನನ್ನೂ ಸಹ ಈ ದಿಕ್ಕಿಗೆ ಸೆಳೆದು ಅವುಗಳಲ್ಲಿ ಆಸಕ್ತಿ ಮತ್ತು ಶ್ರದ್ಧೆಗಳನ್ನು ಬೆಳೆಸುವಲ್ಲಿ ಸಹಾಯವಾಗಿವೆ ಎಂಬುದರಲ್ಲಿ ಸಂಶಯವಿಲ್ಲ. ಇದರಿಂದ ಇದನ್ನು ಒಂದು ಬಾರಿ ಕಣ್ಣು ಹಾಯಿಸಿ, ಮತ್ತೊಂದು ಬಾರಿ ನಿಧಾನವಾಗಿ ಓದುವುದರಿಂದ ಈ ಪುಸ್ತಕದ ಉಪಯುಕ್ತತೆ ಹೆಚ್ಚಾಗುತ್ತಿರುತ್ತದೆ ಎಂದು ಅನಿಸುವುದು ಸಹಜವೇ ಆಗಿ ಇದು ಓದುಗರ ಭಕ್ತಿಯುತ ನೆರವಿನ ಕೈಪಿಡಿಯಾಗುವುದು ಸಾಧ್ಯವಿದೆ. ಎಲ್ಲಕ್ಕೂ ಮೇಲಾಗಿ ಅಧ್ಯಾತ್ಮ ವಿಚಾರದ ಸೊಬಗನ್ನು ಸವಿಯಲು ದಾರಿಮಾಡುವ ದ್ವಾರವೆನಿಸಿದರೆ, ಈ ಪುಸ್ತಕವನ್ನು ಹೊರತಂದ ಶ್ರಮ ಸಾರ್ಥಕವಾದೀತು.

ಈ ಕಾರಣವೇ ಶ್ರೀ ಶ್ರೀಗಳು ಬರೆಯುತ್ತಿದ್ದ ವೇದಾಂತ ಲೇಖನಗಳಿಗೆ ಮೂಲ ಚಾಲನೆ. ಆದರೆ ಸೀಸೆಯಲ್ಲಿಟ್ಟ ಜೇನು ಸಣ್ಣ ಶಾಖಕ್ಕೂ ಉಕ್ಕಿ ಹರಿಯುವಂತೆ ಅದರೊಳಗೆ ತುಂಬಿಕೊಂಡ ಅಧ್ಯಾತ್ಮಮಕರಂದ ಯಾವುದೇ ಸಣ್ಣ ಕಾರಣ–ಒಂದು ಮಾತು, ಪ್ರಶ್ನೆ, ಪ್ರಸಂಗ... ಪ್ರಚೋದನೆಯಾದರೂ ಸರಿ ದಡಮೀರಿ ಹರಡುವ ಸಾಮಾನ್ಯ ರೀತಿಯಂತೆ ಹಲವು ಕವಲುಗಳಲ್ಲಿ ಹತ್ತಾರು ವಿಷಯಗಳನ್ನು ಕುರಿತ ಲೇಖನಗಳು ಬರುತ್ತಿದ್ದುವು. ಅಷ್ಟೇನೂ ದೃಢವಲ್ಲದ ಸಾಮಾನ್ಯಆರೋಗ್ಯ, ಉಪನ್ಯಾಸಗಳು ಮತ್ತು ಇತರ ನಿಬಿಡ ಕಾರ್ಯಗಳಿಂದ ಒಂದೇ ನಿಟ್ಟಿನಲ್ಲಿ ಅವರ ಲೇಖನಗಳು ಮುಂದುವರೆಯುತ್ತಿರಲಿಲ್ಲ. ಸುಪ್ರಷ್ಟವಾದ ಮರದ ಟೊಂಗೆಗಳು ಟಿಸಿಲೊಡೆದು ವಿಸ್ತಾರವಾಗಿ ಹರಡಿ, ಹೂ ಹಣ್ಣುಗಳಲ್ಲದೆ ನೆರಳಿನಾಶ್ರಯವನ್ನೂ ನೀಡುವಂತೆ ಶ್ರೀ ಶ್ರೀಗಳ ಪ್ರಸಾರ ಮುಂದುವರೆಯಿತು. ಹೀಗಾಗಿ ಇಲ್ಲಿಯ ಆರು ಅಧ್ಯಾಯಗಳಲ್ಲಿರುವ ಸುಮಾರು 200 ಬಿಡಿ ಲೇಖನಗಳು, ಕೆಲವೊಮ್ಮೆ ಪ್ರತಿ ತಿಂಗಳೂ ಮತ್ತೆ ಕೆಲವು ಒಂದೆರಡು ವರ್ಷಗಳ ಅಂತರದಲ್ಲೂ, 1923ರಿಂದ 1974 ರವರೆಗೂ ಬಂದವು.

ಇವುಗಳಲ್ಲಿ ಅರ್ಧಪುಟದಿಂದ ಹಿಡಿದು ಮೂರು, ಅಪರೂಪಕ್ಕೆ ನಾಲ್ಕು ಪುಟಗಳ ಲೇಖನಗಳೂ ಸೇರಿವೆ. ಆಗಾಗ ಅವರ ಒಲವಿಗೆ ಬಂದ ಕ್ರಮದಲ್ಲಿ (ವಿಷಯ ಒಂದೇ ಆದರೂ) ಬರೆದ ಲೇಖನಗಳನ್ನು, ತಿಳಿದಮಟ್ಟಿಗೆ ಜೋಡಿಸಿ ಸ್ಥೂಲವಾಗಿ ಅಧ್ಯಾಯಗಳ ರೂಪದಲ್ಲಿ ತಂದು ಓದುಗರ ಮುಂದೆ ಇಟ್ಟಿದೆ. ಮೂಲ ಲೇಖನಗಳು ಕಂಡುಬರುವ ಸಂಪುಟ, ಪುಟ ಸಂಖ್ಯೆಯನ್ನು, ಸಾಧ್ಯವಾದಷ್ಟೂ ಪ್ರತಿ ಲೇಖನದ ಕೊನೆಯಲ್ಲಿ ಸಂ:...,... (ಉದಾ: ಸಂಪುಟ–25, ಪುಟ–148 ಎಂಬುದು ಸಂ–25, 148)ಎಂದು ಸೂಚಿತ ವಾಗಿದೆ. ಅನೇಕ ಲೇಖನಗಳು ವೈ. ಸುಬ್ಬರಾವ್ (ಪೂರ್ವಾಶ್ರಮದ ಹೆಸರು) ಶ್ರೀ ಶ್ರೀಗಳು, ಓನಾಮ, ತಿಳಿದದ್ದು ನುಡಿಯಪ್ಪ, ಯ.ಸು. ಸುಬ್ರಹ್ಮಣ್ಯ.... ಹೀಗೆ ಬೇರೆ ಬೇರೆ ಹೆಸರುಗಳಲ್ಲಿ ಅಚ್ಚಾಗಿದೆ. ಹಲವಾರು ಸೂಕ್ತಿಗಳನ್ನು ಶ್ರೀಗಳವರೇ ಕನ್ನಡಕ್ಕೆ ತಂದಿರು ವುದರಿಂದ ಅವೆಲ್ಲವನ್ನೂ ಶ್ರೀಗಳವರ ಹೆಸರಿನದೇ ಎಂದು ಸೇರಿಸಿದೆ.

ಪ್ರತಿ ಬಾರಿ ಪುಸ್ತಕವನ್ನು ಸಿದ್ಧಪಡಿಸುವಲ್ಲಿ ತಮ್ಮ ಸೂಕ್ತ ಸಲಹೆ, ಮಾರ್ಗದರ್ಶನ ನೀಡಿ ಅತ್ಯುತ್ತಮ ಸಹಕಾರ ನೀಡುತ್ತಿರುವ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು ಶ್ರೀ ಎಸ್. ರಾಮಚಂದ್ರಶಾಸ್ತ್ರಿಗಳಿಗೆ ಕಾರ್ಯಾಲಯ ವಿಶ್ವಾಸಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸುಮಾರು 1950ರ ದಶಕದ ಮೊದಲು ಶ್ರೀ ಶ್ರೀಗಳವರ ಸಂಪರ್ಕಕ್ಕೆ ಬಂದು, ನಿಕಟವರ್ತಿಗಳೂ, ಭಕ್ತರೂ ಆಗಿ 1950–60ರಲ್ಲಿ ಶ್ರೀಗಳನ್ನು 'ಈಗಿನ ಕಾಲದ ಶ್ರೀ ಶಂಕರಾಚಾರ್ಯರೇ' ಎಂದು ಕರೆದು, ಅವರ ಸೂಚನೆಯಂತೆ ಟ್ರಸ್ಟ್ ರಚನಾ ಸಮಿತಿಯಲ್ಲಿ ಅನಂತರದ ಒಂದೆರಡು ವರ್ಷ ಟ್ರಸ್ಟಿಯಾಗಿ, ಆಮೇಲೆಯೂ ಶ್ರೀ ಶ್ರೀಗಳಿರುವವರೆಗೂ ಸೇವೆಸಲ್ಲಿಸಿದ ಚಿಕ್ಕಮಗಳೂರಿನ ಲಾಯರ್, ಶ್ರೀ ಕೆ. ಕೃಷ್ಣಸ್ವಾಮಿರಾವ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ವಿನುತಮ್ಮನವರ ಪರವಾಗಿ ಕಾಣಿಕೆಯನ್ನು, ಅವರ ಮಕ್ಕಳು 'ವೇದಾಂತ ಸಂದೇಶಗಳು–ಸಂಪುಟ–2' ಪುಸ್ತಕಕ್ಕೆ ಸಲ್ಲಿಸಿರುತ್ತಾರೆ. ಈಗ ಮಮತೆಯ ಮಾತೆಯಾಗಿ ಸನ್ಮಾರ್ಗದ 'ಬೆಳಕಿ'ನಲ್ಲಿ ಮಕ್ಕಳನ್ನು ಬೆಳೆಸಿ, ಅವರಿಗೆ ಜೀವನದ ಮೌಲ್ಯವನ್ನು ಧಾರೆ ಎರೆದು, ಬಂಧು–ಬಾಂಧವರಲ್ಲಿ ವಿಶ್ವಾಸದ ಬೆಳದಿಂಗಳನ್ನು ಹರಿಸಿ, ಸದ್ಗೃಹಿಣಿಯಾಗಿ ಮನೆಯ ದೀಪವಾಗಿ ಬಾಳಿ ಬದುಕಿದ ಶ್ರೀ ವಿಜಯಲಕ್ಷ್ಮಿಯವರ ನೆನಪಿನಲ್ಲಿ ಅವರ ಮಕ್ಕಳು ಈ ಪುಸ್ತಕಕ್ಕೆ ಕಾಣಿಕೆಯನ್ನು ಅರ್ಪಿಸಿರುತ್ತಾರೆ. ಇವರೆಲ್ಲರಿಗೂ ಕಾರ್ಯಾಲಯದ ಪರವಾಗಿ ಧನ್ಯವಾದಗಳು. ಇನ್ನೂ ಅನೇಕ ಭಕ್ತಾದಿಗಳು ಈ ಗ್ರಂಥ ಪ್ರಕಟನೆಗೆ ಧನ ಸಹಾಯಮಾಡಿರುತ್ತಾರೆ.

ಈ ಪುಸ್ತಕದ ಪ್ರಕಟಣೆಗೆ ಸಹಾಯಕರಾದ ಗ್ರಂಥಪ್ರಕಾಶನ ಸಮಿತಿಯ ಅಧ್ಯಕ್ಷರು–ಸದಸ್ಯರಿಗೂ, ಎಂದಿನಂತೆ ಶ್ರಮವಹಿಸಿ ಅಂದವಾದ ಅಕ್ಷರಜೋಡಣೆಯನ್ನೂ, ಉತ್ತಮ

ವಿನ್ಯಾಸದ ರಕ್ಷಾಪುಟವನ್ನೂ ಮಾಡಿಕೊಟ್ಟಿರುವ ಶ್ರೀ ಸುರೇಶ್, ಶ್ರೀಮತಿ ಭಾರ್ಗವಿ ದಂಪತಿಗಳಿಗೂ, ಮುದ್ರಣವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ಸ್ಟಾಂಡರ್ಡ್ ಪ್ರೆಸ್‌ನ ಶ್ರೀನಾಗರಾಜ್‌ರಿಗೂ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪುಸ್ತಕವನ್ನು ಹೊರತರಲು ಸಹಾಯ ಮಾಡಿದ ಎಲ್ಲಾ ಭಕ್ತವೃಂದದವರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು. ಎಂದಿನಂತೆ ಮಹಾಜನರು ಪುಸ್ತಕವನ್ನು ಬರಮಾಡಿಕೊಂಡು, ಇನ್ನೂ ಕೆಲವು ಸಂಪುಟಗಳು ಶೀಘ್ರವಾಗಿ ಹೊರಬರುವಂತೆ ಪ್ರೋತ್ಸಾಹಿಸ ಬೇಕಾಗಿ ವಿನಂತಿ.

ವಿಕೃತಿ ಸಂವತ್ಸರ, ಮಾರ್ಗಶಿರ ಬಹುಳ
ಅಷ್ಟಮಿ, ಮಂಗಳವಾರ **ಪ್ರಕಾಶಕರು**
(ಶ್ರೀಶ್ರೀಗಳ 130ನೇ ಜಯಂತಿ)
**28–12–2010**

********

## ಪ್ರಕಾಶಕರ ಬಿನ್ನಹ (ಎರಡನೆಯ ಮುದ್ರಣಕ್ಕೆ)

ಮೊದಲನೆಯ ಬಾರಿಗೆ 2010ರಲ್ಲಿ ಪ್ರಕಟವಾದ ಶ್ರೀ ಶ್ರೀಗಳವರ ಈ ಗ್ರಂಥವು ಈಗ ಎರಡನೆ ಬಾರಿಗೆ ಪುನರ್ಮುದ್ರಣ ಮಾಡಿ ಹೊರತರುತ್ತಿದ್ದೇವೆ. ಕರ್ನಾಟಕ ಸರ್ಕಾರದವರು ತಮ್ಮ ಎಲ್ಲಾ ಸಾರ್ವಜನಿಕ ಗ್ರಂಥಾಲಯಗಳಲ್ಲಿ ನಮ್ಮ ಅನೇಕ ಪ್ರಕಟಣೆಗಳನ್ನು ಸಾರ್ವಜನಿಕರಿಗೆ ಓದಲು ದೊರಕುವಂತೆ ಮಾಡಿರುತ್ತಾರೆ. ಅವರಿಗೆ ನಮ್ಮ ಧನ್ಯವಾದಗಳು.

ಎಂದಿನಂತೆ ಈ ಪುಸ್ತಕವನ್ನು ಬರಮಾಡಿಕೊಂಡು ಕಾರ್ಯಾಲಯದಿಂದ ಸತತವಾಗಿ ನಡೆಯುತ್ತಿರುವ ಗ್ರಂಥ ಪ್ರಕಟನೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

**15–8–2012** **ಪ್ರಕಾಶಕರು**

# ವೇದಾಂತ ಸಂದೇಶಗಳು ಸಂಪುಟ–3

## ಅಧ್ಯಾತ್ಮಬೆಳಕು

ವಿ.ಸೂ.: ಕಂಸಗಳಲ್ಲಿ ಹಾಕಿರುವ ಸಂಖ್ಯೆಗಳು (1) ಪುಟ ಸಂಖ್ಯೆಯನ್ನು ಸೂಚಿಸುತ್ತವೆ.


**1. ಅಧ್ಯಾತ್ಮವಿದ್ಯೆ 1–17**

ಪೀಠಿಕೆ (1), ಜೀವನದಲ್ಲಿ ಸಾರ (5), ನಾನೆಂಬ ಅರಿವು (6), ಅಧ್ಯಾತ್ಮವಿದ್ಯೆ (7), ಅಧ್ಯಾತ್ಮ ಜ್ಞಾನದ ಬೆಲೆ (8), ಅಧ್ಯಾತ್ಮವನ್ನು ಹಿಡಿಯುವುದು ಹೇಗೆ (11), ಸ್ವಾಸ್ಥ್ಯ (12), ಅಧ್ಯಾತ್ಮಯೋಗ (13), ವಿಶ್ವಶಾಂತಿಗೆ ಅಧ್ಯಾತ್ಮವಿದ್ಯೆ (14), ಅಧ್ಯಾತ್ಮವಿದ್ಯಾಸಾಧನ (15), ಅಧ್ಯಾತ್ಮವಿದ್ಯಾಪ್ರಚಾರ (15), ಪೂರ್ಣವಿದ್ಯೆ (16).

**2. ಅಧ್ಯಾತ್ಮದ ಮೊದಲ ಸೋಪಾನ 18–56**

ಸಂಧ್ಯಾವಂದನೆ (18), ಮಾರ್ಜನೆಯ ಮಂತ್ರ (21), ತೀರ್ಥಸ್ನಾನ (24), ಮಂತ್ರಾಚಮನ (26), ಉಪಾಕರ್ಮ (31), ಜನಿವಾರ (33), ಗಾಯತ್ರೀಮಂತ್ರ (35), ದೇಹವೆಂಬುದೊಂದು ದೇವಾಲಯ (37), ಜೀವನೇ ದೇವನು (39), ಸೋಹಂಭಾವದ ಪೂಜೆ (41), ದೇವಾಲಯ (44), ಈಶ್ವರನನ್ನು ಎಲ್ಲಿ ಕಾಣಬಹುದು (45), ನಿಜವಾದ ಪೂಜೆ (46), ಜೈನರ ದೇವರ ಪೂಜೆ (49), ಬಾಹ್ಯಶೌಚ (51), ವರಾಹ ಭಗವಂತನು ಪಿತೃಪೂಜೆಯ ಕ್ರಮವನ್ನು ಸ್ಥಾಪಿಸಿದ್ದು (53), ಪಿತೃಪಕ್ಷ (55).

**3. ಅಧ್ಯಾತ್ಮಸಾಧನಗಳು 57–184**

ಅಧ್ಯಾತ್ಮಸಾಧನೆಗೆ ಒಂಬತ್ತು ನಿಯಮಗಳು (57), ಅಧ್ಯಾತ್ಮ ವಿದ್ಯಾರ್ಥಿಗಳಿಗೆ ಸೂಚನೆಗಳು (58), ಸಾಧಕರಿಗೆ ಸೂಚನೆಗಳು (59), ಶಾಸ್ತ್ರೀಯ ವಿಚಾರಕ್ರಮ (ಮತ್ತು ಜಿಜ್ಞಾಸುವಿನ ಲಕ್ಷಣಗಳು) (61), ಸಂಕಲ್ಪಗಳು (62), ಸಭ್ಯಗೃಹಸ್ಥನ ಲೌಕಿಕ, ಧಾರ್ಮಿಕ ಕರ್ತವ್ಯ ಕರ್ಮಗಳು (69), ಶ್ರೀಮಹಾವೀರಸ್ವಾಮಿಯ ಆದೇಶ (70), ಬೋಧಾಮೃತ (72), ಶಿವರಾತ್ರೆ (73), ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು (73), ಬೆಳಗಿನ ಮುಂಜಾವದಲ್ಲಿ ಎಚ್ಚರುವುದು (74), ಪ್ರಜ್ಞಾಲೋಕ (76), ಆರೋಗ್ಯಭಾಗ್ಯ (78), ಸ್ನಾನ (80), ಧ್ಯಾನ (82), ಧ್ಯಾನ (ಜೈನ ಸಿದ್ಧಾಂತದಂತೆ) (84), ಧ್ಯೇಯ (85), ಸಗುಣಧ್ಯಾನ (86), ನಿರ್ಗುಣ ಧ್ಯಾನ (92), ವೇದಾಂತವಿಹಿತಜ್ಞಾನ (94), ಮಾನಸಪೂಜೆ (96),

ಭಜನ (100), ಸಮಾಧಿ (101), ನಿಜವಾದ ಸಮಾಧಿಯೆಂದರೆ ಯಾವದು? (102), ಜಪ (104), ವ್ಯಾಯಾಮ (107), ಇಂದ್ರಿಯ ನಿಗ್ರಹ (109), ಇಂದ್ರಿಯಗಳ ಸ್ವಭಾವ (111), ನಿಮ್ಮೊಳಗೇ ಕಿವಿಗೊಟ್ಟು ಆಲಿಸಿರಿ (113), ಪಾರಾಯಣ (116), ಪಾರಾಯಣಕ್ರಮ (118), ಸದ್ವ್ಯವಹಾರ (120), ತ್ರಿಕರಣ ಸಂಯಮ (124), ಸಾತ್ತ್ವಿಕಾಹಾರ (125), ಆಳವಾಗಿ ತೋಡಿದರೆ ಧ್ರುವಜಲ ಬರುತ್ತದೆ (129), ಬ್ರಹ್ಮಚರ್ಯ (129), ಸಂಪೂರ್ಣ ಬ್ರಹ್ಮಚರ್ಯ (130), ಬುದ್ಧಿಯ ಅನೀತಿ (132), ವಾಕ್ಸಂಯಮ (132), ಮಾತಿನಲ್ಲಿ ದೋಷಗಳು (133), ಸತ್ಯಪ್ರಿಯ ವಚನ (134), ಭಗವನ್ನಾಮೋಚ್ಚಾರಣ (135), ನಾಮವೇ ದೇವರು (137), ಮೌನ (139), ಮನಃ ಸಂಯಮನ ವಿಚಾರದ ಆವಶ್ಯಕತೆ (140), ಆತ್ಮಶೋಧನೆ (141), ಚಿತ್ತಶುದ್ಧಿ (142), ಸರ್ವಾತ್ಮ ಭಾವನೆ (143), ಸಾಧನ ವಿಚಾರ (144), ಸಾಧನದ ಆವಶ್ಯಕತೆ (146), ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ (149), ತತ್ತ್ವವಿಚಾರ (150), ತತ್ತ್ವನಿರ್ಣಯಕ್ಕಾಗಿ ಚರ್ಚೆ (152), ತತ್ತ್ವಪ್ರಚಾರಣೆಗೆ ಬೇಕಾದ ಸಮದೃಷ್ಟಿ (153), ಪರಮಾರ್ಥಾನ್ವೇಷಣೆಯ ಪ್ರಕಾರಗಳು (156), ಆತ್ಮ ನಿವೇದನ (158), ಮಿಕ್ಕ ಮಾತುಗಳನ್ನು ಬಿಡಿ (159), ಗುರುತಿಲ್ಲದ ದಾರಿ (161), ಮನಸ್ಸಿನ ಸಂಸ್ಕಾರ (163), ಮನಸ್ಸಿನಿಂದ ಹೆಚ್ಚಿನ ಲಾಭವನ್ನು ಪಡೆಯುವ ಉಪಾಯ (164), ಮನೋರಥ (166), ಮನೋರೋಗ (167), ಮನಸ್ಸಿನ ಗಾಯಗಳು ಮಾಯುವ ಬಗೆ (168), ಮನಶ್ಶಾಂತಿಗೆ ಸುಲಭೋಪಾಯ (169), ಸತ್ಕಾಲಕ್ಷೇಪ (170), ಸ್ಥೈರ್ಯ (170), ಶಾಂತಿ (171), ವೈರಾಗ್ಯ (172), ವೇದಾಂತದ ಅಭ್ಯಾಸಕ್ರಮಗಳು (173), ಉಪಾಸನೆ ಎಂದರೇನು ? (175), ವೇದಾಂತದ ಶಾಸ್ತ್ರಗಳನ್ನು ಹೇಗೆ ಉಪಯೋಗಿಸಬೇಕು ? (175), ಅಂತಃಕರಣಕ್ಕೆ ಸಂಸ್ಕಾರದ ಆವಶ್ಯಕತೆ (176), ನಮ್ಮ ಜೀವನದ ಸ್ವರೂಪ–ಹೆಗ್ಗುರಿ (176), ಯಾವ ಸಾಧನವನ್ನು ಮಾಡಲಿ ?(178), ತೀರ್ಥಗಳಿಂದ ಲಾಭವನ್ನು ಪಡೆಯುವ ಬಗೆ (179), ಪರಮಹಂಸನಿಷ್ಠೆ (184).

**4. ಅಧ್ಯಾತ್ಮಪ್ರಕಾಶ 185–203**

ನಮ್ಮೊಳಗಿನ ಹೆಬ್ಬೆಳಕು (185), ಬೆಳಕುಗಳಿಗೆಲ್ಲ ಬೆಳಕು (185), ನಮ್ಮ ಸುತ್ತಲಿರುವ ಕಗ್ಗತ್ತಲೆ (186), ಒಳಬೆಳಕು (187), ಅಧ್ಯಾತ್ಮದ ಬೆಳಕು ಏಕೆ ಕಾಣಿಸುವದಿಲ್ಲ (188), ಅಧ್ಯಾತ್ಮದರಿವಿನಿಂದಾಗುವ ಪ್ರಯೋಜನ (189), ಅರಿತವರೂ ಅರಿಯದವರೂ (190), ಅಧ್ಯಾತ್ಮಪ್ರಕಾಶದಿಂದಾಗುವ ದುಃಖ ನಿವಾರಣೆ (192), ಅಧ್ಯಾತ್ಮಪ್ರಕಾಶದ ಆನಂದ (194), ಆನಂದವಾಗಿರುವದಕ್ಕೆ ಏನು ಮಾಡಬೇಕು

(194), ಅಧ್ಯಾತ್ಮಪ್ರಕಾಶದ ಬಲ (195), ಬಡತನಕ್ಕೆ ಮದ್ದು (196), ಸವೆಯದ ಸಂಪತ್ತು (198), ಅಧ್ಯಾತ್ಮಪ್ರಯಾಣ (199), ಅಧ್ಯಾತ್ಮಜ್ಞಾನನಿತ್ಯತ್ವ (201), ಅಧ್ಯಾತ್ಮಸಾಕ್ಷಾತ್ಕಾರಕ್ಕೆ ಸಾಧನ (202).

**5. ಅಧ್ಯಾತ್ಮಚಿಂತನ** **204–266**

ಅಧ್ಯಾತ್ಮಚಿಂತನ (204), ಅಧ್ಯಾತ್ಮಚಿಂತನೆಯಿಂದ ದೊರಕುವ ಜಯ (205), ಅಧ್ಯಾತ್ಮ ಚಿಂತಕರೂ ಸಮಾಜವೂ (206), ಮಾನವನ ಹೆಚ್ಚುಗಾರಿಕೆ (207), ವ್ಯವಹಾರವೂ ಪರಮಾರ್ಥವೂ (208), ಪರಮಪುರುಷಾರ್ಥ (209), ಪರಮಮುಕ್ತಿ (212), ಆತ್ಮನೇ ಎಲ್ಲಕ್ಕಿಂತಲೂ ಪ್ರಿಯನು (213), ನಾಲ್ಕು ಉಪದೇಶಗಳು (216), ಕಾಮಜಯ (217), ಅಯೋಧ್ಯೆಯಲ್ಲಿ ಸ್ವರ್ಗ (219), ಪರಮಾವಲಂಬನೆ (223), ಮುಪ್ಪು ತಪ್ಪದು (225), ಪ್ರಪಂಚವನ್ನು ತ್ಯಜಿಸಿ ಬ್ರಹ್ಮವನ್ನು ಸೇರುವುದು (226), ನಾವು ತೆಗೆದುಕೊಂಡು ಹೋಗಲಿರುವ ಗಂಟು (226), ನಿತ್ಯ ವ್ಯವಹಾರದಲ್ಲಿ ಅಂತಸ್ತುಗಳು (228), ದ್ವೇಷಬುದ್ಧಿ (231), ಸ್ವಾರ್ಥ (232), ಧರ್ಮವೂ ಮನುಷ್ಯ ಜೀವನವೂ (233), ಸರಳ ಜೀವನ (236), ಗುರು ಪರಮೇಶ್ವರನಲ್ಲಿ ಭಕ್ತಿ (237), ಗುರುವಾಕ್ಯದಲ್ಲಿ ಶ್ರದ್ಧೆ (239), ಗುರುಭಕ್ತಿ, ಗುರುಪೂರ್ಣಿಮೆ (240), ವಿಭೂತ್ಯುಪಾಸನೆ (247), ಪರಮಾತ್ಮನ ವಿಭೂತಿ (248), ನಾವು ಆಕಾಶದಂತಿರುವ ಆತನಲ್ಲಿ, ಆತನು ನಮ್ಮಲ್ಲಿ (249), ಋಣಪೂಜೆ (250), ಋಷಿಗಳ ದಾನ (251), ಗೋರಕ್ಷಣೆ (252), ದೇವರ ಕಡೆಗೆ ತಿರುಗುವುದು (254), ಎಲ್ಲಕ್ಕೂ ಕಷ್ಟವಾದದ್ದು (254), ಪ್ರಯಾಣ ಮುಗಿದಾಗ (256), ಧರ್ಮದ್ರೋಹ ಸಂಸ್ಕೃತ ದ್ರೋಹ (257), ದೇಶಪ್ರೀತಿ, ಈಶಪ್ರೀತಿ (257), ದ್ವಂದ್ವಮೋಹ (258), ದ್ವಂದ್ವಗಳನ್ನು ದಾಟುವುದು (259), ಒಳಗಿನ ದ್ವಂದ್ವಗಳನ್ನು ಮೀರುವ ಬಗೆ (261), ಮನಸ್ಸಿನ ಏರಿಳಿತಗಳು ತೊಲಗುವದುಂಟೆ? (262), ಮನುಷ್ಯನು ಏತರಿಂದ ಬದುಕಿರುತ್ತಾನೆ (263), ಮುಪ್ಪು ಬರುವದರೊಳಗೆ ಮಾಡಿಕೊಳ್ಳಬೇಕಾದುದ್ದು (266).

**6. ಅಧ್ಯಾತ್ಮಜ್ಞಾನ** **267–346**

ಅಧ್ಯಾತ್ಮಶ್ರವಣ (267), ಮನನದ ಸ್ವರೂಪ (270), ಮನನದ ಮಹತ್ತ್ವ (273), ನಿದಿಧ್ಯಾಸನ (275), ಬ್ರಹ್ಮಜ್ಞಾನ (278), ಬ್ರಹ್ಮಾತ್ಮ ಜ್ಞಾನ (282), ದರ್ಶನಗಳು:ಸಾಂಖ್ಯದರ್ಶನ (284), ಯೋಗದರ್ಶನ (288), ನ್ಯಾಯದರ್ಶನ (291), ವೈಶೇಷಿಕದರ್ಶನ (294), ಪೂರ್ವಮೀಮಾಂಸೆ (297), ಸರಿಯಾದ

ಜ್ಞಾನದ ಸ್ವರೂಪ (300), ಜ್ಞಾನಿಗಳಿಗೆ ಪರಮಾತ್ಮನೇ ಬೇಕು (303), ಜ್ಞಾನಿಯ ಸ್ಥಿತಿ (303), ಆತ್ಮವೂ ಕರ್ಮವೂ (304), ಕೋ ವಿಧಿಃ ಕೋ ನಿಷೇಧಃ (306), ವಿಭೂತಿಯೋಗ (308), ವಸಂತ (310), ದ್ವಯಮಂತ್ರ (312), ಚರಮ ಶ್ಲೋಕ (314), ಸದ್ದರ್ಶನ (316), ಸದ್ದರ್ಶನ ಸೂಕ್ತಿಗಳು (318), ಅಮೃತಸ್ಯ ಪುತ್ರಾಃ (319), ಸ್ವತ್ತಿನ ಸದುಪಯೋಗ (320), ಭಗವಂತನ ಸ್ಮರಣೆಯು ಪವಿತ್ರವಾದದ್ದು (321), ಭಗವದ್ಗೀತೆಯ ಸಾಕ್ಷಾತ್ಕಾರ (322), ಅವಚನೇನೈವ ಪ್ರೋವಾಚ (324), ಸಾಧುಸಂಗದ ಫಲ (326), ನಾನು ಕೊಟ್ಟಿದ್ದನ್ನು ಹೇಗೆ ಉಪಯೋಗಿಸಿದೆ ?(327), ಬೌದ್ಧ ಸಿದ್ಧಾಂತದ ಮೂಲತತ್ತ್ವಗಳು (327), ಬೌದ್ಧಮತದಲ್ಲಿ ಕರ್ಮವಿಪಾಕ (332), ಬೇಕಾದದ್ದನ್ನು ಆರಿಸಿಕೋ (334), ಉತ್ಥಾನ ದ್ವಾದಶಿ (336), ಭಕ್ತಿಯ ಸೆಳವು (337), ನಿಜವಾದ ಭಕ್ತಿಯ ಸ್ವಭಾವ (337), ಪರಮಾತ್ಮ (337), ಪರಮಯೋಗಿ ಯಾರು ?(338), ಆಕಾಶಪರೀಕ್ಷೆ (339), ವಾಯು (340), ಅಗ್ನಿ (341), ನೀರು (342), ಭೂಮಿ (343), ಭಗವಂತ (344), ನಾರದರು ಎಲ್ಲರಿಗಿಂತಲೂ ದೊಡ್ಡವರೆಂಬುದೇಕೆ ?(344), ಶುಭ ಹಾರೈಕೆ (345).

*******

# 1. ಅಧ್ಯಾತ್ಮವಿದ್ಯೆ

## ಪೀಠಿಕೆ

(1923 ಏಪ್ರಿಲ್ (ರುಧಿರೋದ್ಗಾರಿ, ಚೈತ್ರ) ಮಾಸದಲ್ಲಿ 'ಅಧ್ಯಾತ್ಮಪ್ರಕಾಶ' ಪತ್ರಿಕೆಯನ್ನು ಪ್ರಾರಂಭಿಸಿದಾಗ ಸಂಪಾದಕರಾದ ಶ್ರೀ ವೈ. ಸುಬ್ಬರಾವ್‌ರವರು (ಅನಂತರ ಶ್ರೀ ಸಚ್ಚಿದಾನಂದೇಂದ್ರಸರಸ್ವತಿಗಳು) ಬರೆದ 'ಸಂಪಾದಕರ ವಿಜ್ಞಾಪನೆ')

ಜಗತ್ತೆಲ್ಲ ಅಧ್ಯಾತ್ಮ, ಅಧಿಭೂತ ಎಂಬ ಎರಡು ದೊಡ್ಡ ಪಂಗಡವಾಗಿರುವದು. ಅಧಿಭೂತವೆಂದರೆ ನಮ್ಮ ಹೊರಗೆ ತೋರುವ ಪ್ರಪಂಚವು; ಅಧ್ಯಾತ್ಮವೆಂದರೆ ನಮ್ಮೊಳಗೆ ತೋರುವ ಪ್ರಪಂಚವು. ಈ ಎರಡು ಪ್ರಪಂಚಗಳ ವಿಚಾರವನ್ನೂ ನಮ್ಮ ಪೂರ್ವಜರು ತಕ್ಕಂತೆ ನಡೆಸಿ ಅವುಗಳ ಬೆಲೆಯನ್ನು ಕಟ್ಟಿ ಲೋಕವ್ಯವಹಾರವನ್ನು ನಡೆಸುತ್ತಿದ್ದದ್ದರಿಂದ ಸುಖದ ಸೂರೆಯನ್ನು ಮಾಡಿಕೊಂಡರೆಂಬುದು ಇತಿಹಾಸದಿಂದ ತಿಳಿಯಬರುತ್ತಿರುವದು.

ಆದರೆ ಅವರ ವಂಶಜರಾಗಿರುವ ನಮಗೆ ಕಾಲವಶದಿಂದ ಪ್ರಪಂಚದ ಮುಖ್ಯಭಾಗ ವಾದ 'ಅಧ್ಯಾತ್ಮ'ವೆಂಬುದು ಕಣ್ಮರೆಯಾಗಿ 'ಅಧಿಭೂತ'ವೊಂದೇ ಪ್ರಪಂಚವೆಂಬ ಬಯಲು ಭ್ರಮೆಯುಂಟಾಗುತ್ತಿರುವದು. ಕಲಿಮಹಿಮೆಯಿಂದಲೋ ಏನೋ ನಮಗೆ ಹಿಂದಿನವರ ಸದುಕ್ತಿಗಳಲ್ಲಿ ಉದಾಸೀನವುಂಟಾಗುತ್ತಿರುವದು. ಎಲ್ಲಾ ದೇಶಗಳಲ್ಲಿಯೂ ಈಚೀಚೆಗೆ ಸಂಭವಿಸಿರುವ ಸಾಂಘಿಕ ರಾಜಕೀಯ ವಿಚಾರಗಳ ವಿಪರಿವರ್ತನಗಳಿಂದ ಜನರ ಮನಸ್ಸು ಕದಡಿ ಕಲ್ಲೋಲವಾಗುತ್ತಿರುವವದರ ಪರಿಣಾಮವು ಅಧ್ಯಾತ್ಮವಿದ್ಯೆಯ ತೌರುಮನೆಯೆನಿಸಿದ ನಮ್ಮ ಭರತಖಂಡದಲ್ಲಿಯೂ ತಲೆದೋರಿರುವದು. ಆದ್ದರಿಂದ ಭೌತಿಕಸಂಪತ್ತಿನ ಸುಖವನ್ನು ಅನುಭವಿಸುವುದಕ್ಕೆ ಅಧ್ಯಾತ್ಮವಿದ್ಯೆಯ ತಳಹದಿಯು ಬೇಕೆಂಬುದನ್ನು ನಮ್ಮ ಜನರಿಗೆ ಮತ್ತೆ ನೆನಪುಕೊಡುವ ಕಾಲವು ಒದಗಿರುವದು.

ಅಧ್ಯಾತ್ಮವಿದ್ಯೆಯೆಂಬ ವೃಕ್ಷದ ತಾಯಿಬೇರೆಂದರೆ ವೇದಾಂತವು; ವೇದಾಂತಸಿದ್ಧಾಂತದ ಆವಾಸಸ್ಥಾನಗಳು ಉಪನಿಷತ್ತುಗಳು. ಮಿಕ್ಕ ದೇಶಗಳಲ್ಲಿಯೂ ಅಧ್ಯಾತ್ಮವಿಚಾರಗಳು ಜರುಗಿರುವದು ನಿಜ; ಆದರೆ ವೇದಾಂತಸಿದ್ಧಾಂತದ ಸಾಕ್ಷಾದಾಧಾರದ ಮೇಲೆ, ಅಥವಾ ಪರಂಪರೆಯಿಂದ ಅವುಗಳಿಂದ ಪ್ರೇರಿತವಾಗಿ, ಹುಟ್ಟಲಿಲ್ಲವೆಂಬ ಅಧ್ಯಾತ್ಮಕಲೆಯನ್ನು ಕಾಣುವುದು ಇದುವರೆಗೆ ಕಷ್ಟವಾಗಿ ತೋರಿರುವದು. ಆದ್ದರಿಂದ ಅಧ್ಯಾತ್ಮವಿದ್ಯೆಗೆಲ್ಲ ಮೂಲವಾಗಿರುವ ಉಪನಿಷತ್ಸಿದ್ಧಾಂತವನ್ನೂ ಇದನ್ನು ಪರಿಪುಷ್ಟಿಗೊಳಿಸುವ ಮಿಕ್ಕ ದರ್ಶನಗಳನ್ನೂ ನಮ್ಮ ಕರ್ಣಾಟಕಪ್ರಾಂತದ ನಿವಾಸಿಗಳಿಗೆ ಪರಿಚಯಮಾಡಿಕೊಡಬೇಕೆಂಬ ಉದ್ದೇಶದಿಂದ ಈ 'ಅಧ್ಯಾತ್ಮಪ್ರಕಾಶ' ಮಾಸಿಕಪತ್ರದ ಪ್ರಕಾಶಕ್ಕೆ ಕೈ ಹಾಕಿರುವೆವು.

ಕನ್ನಡದಲ್ಲಿ ಆಗಾಗ್ಗೆ ಹೊರಟಿದ್ದು ಮೈಗರೆದಿರುವ, ಈಗಲೂ ಅಲ್ಲಲ್ಲಿ ಬಡಕಲಾಗಿ ಮೈದೋರಿಸುತ್ತಿರುವ ಅಧ್ಯಾತ್ಮ ವಿಚಾರದ ಪತ್ರಿಕೆಗಳು ಹಲವಿದ್ದರೂ ಮತ್ತೊಂದು ಪತ್ರಿಕೆಯನ್ನು ಹೊರಡಿಸುವ ಅವಶ್ಯಕತೆ ಏನೆಂದು ಸಂದೇಹ ಬರಬಹುದು. ಈ ಪತ್ರಿಕೆಗೂ ಮಿಕ್ಕವುಗಳಿಗೂ ಕೆಲವು ವಿಶೇಷ ವ್ಯತ್ಯಾಸಗಳಿವೆ:- **ಮೊದಲನೆಯದು** ಕರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಯೋಗ ಮುಂತಾದ ಅಧ್ಯಾತ್ಮವಿಚಾರದ ಯಾವದಾದರೊಂದು ಪ್ರಭೇದಕ್ಕೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ಇದೆಲ್ಲ ಒಂದೇ ಗತಿಯನ್ನು ಕಾಣುವ ಪ್ರಸ್ಥಾನ ಭೇದವನ್ನು ಮನಗಾಣಿಸುವ ಪ್ರಯತ್ನವು. ಒಬ್ಬ ಮನುಷ್ಯನು ದೇಹದಲ್ಲಿ ಆರೋಗ್ಯವಾಗಿ ಪುಷ್ಟಿಯಾಗುವದಕ್ಕೆ ಕೈ, ಕಾಲು ಮುಂತಾದ ಕರ್ಮೇಂದ್ರಿಯಗಳೂ ಕಣ್ಣು, ಕಿವಿ ಮುಂತಾದ ಜ್ಞಾನೇಂದ್ರಿಯಗಳೂ ಪ್ರಾಣವೂ- ಎಲ್ಲವೂ ಹೇಗೆ ತಮ್ಮ ತಮ್ಮ ಕಾರ್ಯಗಳನ್ನು ಉತ್ತಮರೀತಿಯಿಂದ ಜರುಗಿಸುವದು ಅವಶ್ಯಕವೋ ಹಾಗೆ ಅಧ್ಯಾತ್ಮ ವಿಚಾರದಲ್ಲಿಯೂ ಅಂಗಗಳೆಲ್ಲವೂ ತಮ್ಮ ತಮ್ಮ ಕೆಲಸವನ್ನು ಮಾಡಬೇಕು. ಇದರಿಂದಲೇ ನಾವು ಪತ್ರಿಕೆಗೆ ಜ್ಞಾನ, ಭಕ್ತಿ-ಮುಂತಾದ ಚಿಕ್ಕ ಪಂಗಡದ ಸಾಧನವನ್ನು ಹೇಳುವ ವಿಶೇಷಣಗಳಿಂದ ಕೂಡಿದ ನಾಮನಿರ್ದೇಶವನ್ನು ಮಾಡಲಿಲ್ಲ, **ಎರಡನೆಯ** ವಿಶೇಷವೇನೆಂದರೆ, ವೈದಿಕದರ್ಶನಗಳಲ್ಲಿ ಹೇಗೋ ಹಾಗೆ ಅವೈದಿಕ ಮತಗಳಲ್ಲಿರುವ ವಿಚಾರಗಳನ್ನೂ ಸಾರಗ್ರಾಹಕದೃಷ್ಟಿಯಿಂದ ಅವಕಾಶವಿದ್ದಂತೆ ಪ್ರಕಟಿಸುವದು. ಕೇವಲ ವೇದದ ಪ್ರಮಾಣವನ್ನು ಅಂಗೀಕರಿಸದೆ ಇದ್ದರೂ ಪ್ರಪಂಚದಲ್ಲಿ ಅಮೋಘವಾದ ನೀತಿಮಾರ್ಗಕ್ಕೆ ಪ್ರೋತ್ಸಾಹಕೊಟ್ಟ ಬೌದ್ಧಜೈನಾದಿದರ್ಶನಗಳು ಈಗಿನಕಾಲಕ್ಕೆ ಗ್ರಂಥಸ್ಥವಾದ ವಿಷಯಗಳಾಗಿರುವವು. ನಮ್ಮ ಮತಗ್ರಂಥಗಳಲ್ಲಿ ಹೇಳಿರುವ ಅವೈದಿಕ ದರ್ಶನಗಳ ಪೂರ್ವಪಕ್ಷಗಳ ಬಲಾಬಲಗಳನ್ನು ಆಯಾ ಮತದವರು ಹೇಳುವ ಅಭಿಪ್ರಾಯಗಳಿಂದ ತಿಳಿಯುವದೇ ಯುಕ್ತವೆಂಬುದು ಶಾಂತಚಿತ್ತರಿಗೆ ತೋರದೆ ಇರಲಾರದು. ಪೂರ್ವ ದಲ್ಲಿದ್ದ ಚಾರ್ವಾಕಾದಿಮತಗಳು ವೇದದ ಆಧಾರದಮೇಲೆ ಹುಟ್ಟದಿದ್ದರೂ ಆಯಾ ಮತಗ್ರಂಥಗಳನ್ನು ನಮ್ಮ ಮತಾಚಾರ್ಯರುಗಳು ನೋಡಿ ಅವುಗಳಲ್ಲಿ ಗುಣಾಗುಣಗಳನ್ನು ವಿಚಾರಮಾಡಿದರೆಂಬುದು ಅವರು ಬರೆದಿಟ್ಟಿರುವ ಅಮೋಘವಾದ ಭಾಷ್ಯಗಳಿಂದಲೇ ವ್ಯಕ್ತವಾಗುವದು. ಈಗ ಪ್ರಾಚೀನಕಾಲದ ಅವೈದಿಕ ಮತಗಳು ಲುಪ್ತವಾಗಿ ಹೊಸಮತಗಳು ತಲೆದೋರಿವೆ. ವೇದದ ಆಧಾರವನ್ನೂ ಪೂರ್ಣವಾಗಿ ಅಥವಾ ಸ್ವಲ್ಪಮಟ್ಟಿಗೆ ಒಪ್ಪಿಕೊಂಡು ನಮ್ಮ ಭರತಖಂಡದಲ್ಲಿಯೇ ಪ್ರಬಲವಾದ ಸಂಸ್ಥೆಗಳು ಏರ್ಪಟ್ಟಿರುತ್ತವೆ. ಈ ನವೀನಮತಗಳು ಎಲ್ಲಿಯೋ ಗಣನೆಗೆ ಬರದ ಅಲ್ಪಸಂಖ್ಯೆಯ ಜನರ ಸಂಬಂಧ ವಿದ್ದುವುಗಳಾಗಿರದೆ ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ಬಹುಭಾಗದ ಜನರಮೇಲೆ ತಮ್ಮ ಉಪದೇಶಪರಿಣಾಮವನ್ನುಂಟುಮಾಡಿರುತ್ತವೆ. ಈ ಮತಗಳಿಂದ ಜಗತ್ತಿನ ಇತಿಹಾಸವೇ

ಬದಲಾಯಿಸುತ್ತಿರುವ ಸಮಯದಲ್ಲಿಯೂ ಅವುಗಳ ಸಾರಾಸಾರವನ್ನು ಗ್ರಹಿಸದೆ ಉಪೇಕ್ಷಿಮಾಡುವದು ಕೂಪಮಂಡೂಕವೃತ್ತಿಯನ್ನು ಅನುಕರಿಸುವದರಲ್ಲಿ ಸಂಶಯವಿಲ್ಲ. ಇದೂ ಅಲ್ಲದೆ, ಅನೇಕ ಶೋಧಕರು ಮತಗಳ ಸಿದ್ಧಾಂತಗಳ ಪರೀಕ್ಷೆ ಮಾಡುತ್ತಾ ಹೋದಹಾಗೆಲ್ಲ ಪ್ರಾಚೀನಾರ್ಯರ ಸನಾತನ ವೈದಿಕ ಸಿದ್ಧಾಂತವೇ ಬಗೆಬಗೆಯಾಗಿ ಮಾರ್ಪಾಡುಗಳನ್ನು ಹೊಂದಿ ಆಯಾ ಹೊಸ ಹೆಸರುಗಳನ್ನು ಪಡೆಯುತ್ತ ಬಂದಿರುವದೆಂದು ಕೂಡ ಅಭಿಪ್ರಾಯಪಡುತ್ತಿರುವರು. ಈ ಎಲ್ಲಾ ಕಾರಣಗಳಿಂದ ಅಧ್ಯಾತ್ಮವಿಚಾರಸಾಮಾನ್ಯವೇ ಭೌತಿಕವಿಚಾರಸಮುದ್ರದ ಕಲ್ಲೋಲಗಳ ಹೊಡೆತದಲ್ಲಿ ಮುಳುಗಿ ಹೋಗುವ ಭಯವಿರುವ ಈ ಕಾಲದಲ್ಲಿ ಶ್ಲೋ॥ ಯುಕ್ತಿಯುಕ್ತಮುಪಾದೇಯಂ ಬಾಲಾದಪಿ ಶುಕಾದಪಿ (ಯುಕ್ತಿ ಇರುವ ಮಾತನ್ನು ಹುಡುಗನು ಹೇಳಲಿ, ಕೊನೆಗೊಂದು ಗಿಣಿ ಹೇಳಲಿ, ತೆಗೆದುಕೊಳ್ಳಬೇಕು) ಎಂಬ ನ್ಯಾಯವನ್ನನುಸರಿಸಿ ಅಧ್ಯಾತ್ಮವಿಚಾರವು ಎಲ್ಲೆಲ್ಲಿ ಹೇಗೆ ಹೇಗೆ ಕವಲೊಡೆದು ಎಂಥೆಂಥ ಫಲಪುಷ್ಪಗಳನ್ನು ಬಿಡುತ್ತಿರುವ ದೆಂಬುದನ್ನು ವಿಚಾರಿಸುವದು ಪ್ರಯೋಜನಕಾರಿಯಾಗದೆ ಇರಲಾರದೆಂದು ನಾವು ದೃಢವಾಗಿ ನಂಬಿರುತ್ತೇವೆ ಮತ್ತು ಇದೇ ಅಭಿಪ್ರಾಯವುಳ್ಳ ನಮ್ಮ ಮಿತ್ರರನೇಕರ ಅಪೇಕ್ಷೆಯಂತೆ ಈಗ ಭರತಖಂಡದಲ್ಲಿ ಕೇಳಿ ಅಥವಾ ನೋಡಿ ಪ್ರಸಿದ್ಧವಾಗಿರುವ ಆರ್ಯಸಮಾಜ, ಬ್ರಹ್ಮಸಮಾಜ, ಪ್ರಾರ್ಥನಾಸಮಾಜ, ಕ್ರೈಸ್ತಮತ, ಮಹಮ್ಮದೀಯಮತ, ಥಿಯೋಸಫಿ ಮುಂತಾದ ದರ್ಶನಗಳು ಜೈನ, ಬೌದ್ಧ ಮುಂತಾದ ಪ್ರಾಚೀನ ದರ್ಶನಗಳು ಇವುಗಳಲ್ಲಿ ದೊರೆಯಬಹುದಾದ ಅಧ್ಯಾತ್ಮವಿಚಾರವನ್ನು ನಿಷ್ಪಕ್ಷಪಾತಿಗಳಾದ ಲೇಖಕರು ಮಾಡುವ ಸಹಾಯ ದೊರೆತಂತೆ ನಮ್ಮ ಕರ್ಣಾಟಕರಸಲುವಾಗಿ ಪ್ರಕಟಿಸುತ್ತಾ ಬರುವೆವು. **ಮೂರನೆಯದು,** ಪ್ರಾಚೀನಗ್ರಂಥಗಳನ್ನು ಹೊರಕ್ಕೆ ತರುವದು. ಈ ಕೆಲಸವು ಬಲುದೊಡ್ಡದೆಂಬುದರ ಮೇಲೆ ಶಕ್ತಿಯಿದ್ದಷ್ಟು ಕ್ರಮಕ್ರಮವಾಗಿ ಮೂಲಗ್ರಂಥಗಳನ್ನು ಸದ್ಯಸ್ಥಿತಿಗೆ ತಕ್ಕ ಟಿಪ್ಪಣಿಗಳ ಸಮೇತ ಪ್ರಕಟಣೆಮಾಡುವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ. ಇದು "ಶ್ರೀ ಶಂಕರಾಚಾರ್ಯರವರ ಅಭಿಪ್ರಾಯ", "ಹೀಗೆಂದು ರಾಮಾನುಜಾಚಾರ್ಯರು ಹೇಳುತ್ತಾರೆ"- ಎಂದು ಬರಿಯುಮಾತುಗಳನ್ನಾಡಿ ತೋರಿಸುವದು ನಮ್ಮ ಕರ್ಣಾಟಕದಲ್ಲಿ ಈಚೀಚೆಗೆ ಹೆಚ್ಚಾಗಿರುವಂತೆ ಕಂಡುಬರುತ್ತದೆ. ನಿಜವಾದ ಸ್ಥಿತಿಯನ್ನು ತಿಳಿಯಬೇಕೆಂಬವರ ಸೌಕರ್ಯಕ್ಕಾಗಿ, ನಮ್ಮ ಅಭಿಪ್ರಾಯಗಳನ್ನು **ಬೆರೆಸದೆಯೂ,** ವ್ಯಾಖ್ಯಾನಗಳ ವಿಸ್ತಾರದಿಂದ **ಮೂಲವೇ ಮರೆತುಹೋಗುವಂತೆ** ಮಾಡದೆಯೂ ಮೂಲದ ಸಾಕ್ಷಾದನುವಾದಗಳನ್ನು ಕನ್ನಡದಲ್ಲಿ ತರುವದು ಒಂದು ಅವಶ್ಯಕವಾದ ಕಾರ್ಯವೆ. ನಮಗಿರುವ ಸ್ಥಲಸಂಕೋಚದಲ್ಲಿ ಅಧ್ಯಾತ್ಮಸಿದ್ಧಾಂತವನ್ನು ಉಪನಿಷತ್ತುಗಳ ಆಧಾರದ ಮೇಲೆ ಭಾಷ್ಯಗಳಿಂದ ನೆಲೆಗೊಳಿಸಿದ ಆಚಾರ್ಯರುಗಳಲ್ಲಿ

ನಮಗೆ ಗೊತ್ತಿರುವಂತೆ ಆದಿಭಾಷ್ಯಕಾರರಾಗಿಯೂ ಭರತಖಂಡದಲ್ಲೆಲ್ಲಾ ಮತ ಸ್ಥಾಪನೆಗಾಗಿ ಸಂಚರಿಸಿ ಈಗಲೂ ಜಗತ್ತನ್ನೆಲ್ಲಾ ಪ್ರಭೆಯಿಂದ ಬೆಳಗುತ್ತಿರುವ ಈ ವೇದಾನ್ತಸಿದ್ಧಾನ್ತವನ್ನು ಸ್ಥಾಪಿಸಿ ವಿಶ್ರಾಂತಿಗೆಂದು ಕರ್ಣಾಟಕದಲ್ಲಿಯೇ ಮಠಸ್ಥಾಪನೆ ಮಾಡಿದವರಾಗಿಯೂ ಇರುವ ಸುಪ್ರಸಿದ್ಧ ಶ್ರೀ ಶಂಕರಾಚಾರ್ಯರವರ ಭಾಷ್ಯಾದಿ ಮುಖ್ಯಗ್ರಂಥಗಳನ್ನು ಆದಷ್ಟು ಹೊರಕ್ಕೆ ತರಲು ನಿಶ್ಚಯಿಸಿರುವೆವು. ಅವಕಾಶದೊರೆತಂತೆ ಉಳಿದ ಆಚಾರ್ಯರುಗಳ ಗ್ರಂಥಗಳ ಸಾರವನ್ನಾದರೂ ಆಗಾಗ್ಗೆ ಕೊಡುತ್ತಾ ಹೋಗುವೆವು. ಇನ್ನು ನಾಲ್ಕನೆಯ ವಿಶೇಷವೇನೆಂದರೆ ಮೂಲಗ್ರಂಥಗಳು ಶಾಸ್ತ್ರೀಯ ದೃಷ್ಟಿಯಿಂದ ತಿಳಿಸುವ ವಿಷಯಗಳನ್ನು ಸಾಮಾನ್ಯರಿಗೆ ವಿಶದಪಡಿಸುವ ಚಿಕ್ಕಗ್ರಂಥಗಳನ್ನು ತರುವದು. ಇಂಥ ಗ್ರಂಥಗಳು ಸುಲಭಶೈಲಿಯಲ್ಲಿ ಬರೆದಿರುವ ಪ್ರಶ್ನೋತ್ತರ, ಕಥಾವಲಿ, ಕೀರ್ತನ, ಕಾದಂಬರಿ, ನಾಟಕ ಮುಂತಾದ ನಿಬಂಧಗಳಾಗಿರುವವು. ಜನರಿಗೆ ವಿನೋದವಾಗಿ ಓದಿ ಅಧ್ಯಾತ್ಮವಿಚಾರಗಳನ್ನು ಮನಸ್ಸಿನಲ್ಲಳವಡಿಸಿಕೊಳ್ಳುವದಕ್ಕೆ ಸಹಾಯವಾಗಿರಬೇಕೆಂಬುದೇ ಇವುಗಳ ಉದ್ದೇಶವು.

ಮೇಲೆ ವಿವರಿಸಿರುವ ಪತ್ರಿಕೆಯ ('ಅಧ್ಯಾತ್ಮಪ್ರಕಾಶ' ಮಾಸಿಕ) ಸ್ವರೂಪದಿಂದ ಈ ಕಾರ್ಯದ ಅವಶ್ಯಕತೆಯನ್ನೂ ಇದು ಎಷ್ಟರಮಟ್ಟಿಗೆ ತಮ್ಮ ಹಸ್ತಾವಲಂಬನೆಗೆ ಯೋಗ್ಯವೆಂಬುದನ್ನೂ ಗ್ರಾಹಕರು ನಿರ್ಣಯಿಸಬೇಕಾಗಿರುವದು. ಅಧ್ಯಾತ್ಮವಿಚಾರದ ಎಲ್ಲಾ ಶಾಖೆಗಳನ್ನೂ ಒಳಗೊಂಡಿರುವ ಈ ಪತ್ರಿಕೆಗೆ ಯಾರೊಬ್ಬರ ಲೇಖನದಿಂದ ಮಾತ್ರ ಮನೋರಥ ಪೂರ್ತಿಯಾಗುವದೆಂಬ ಆಸೆಯಿಲ್ಲವಷ್ಟೆ. ವಿದ್ಯಾವಂತರೂ ಲೋಕೋಪಕಾರನಿರತರೂ ಆದ ಮಹನೀಯರು ತಮತಮಗೆ ಅನುವಾಗುವ ವಿಷಯಗಳನ್ನು ಆರಿಸಿಕೊಂಡು ಲೇಖಗಳನ್ನು ಕಳುಹಿಸಿಕೊಟ್ಟು ಈ ಕಾರ್ಯಕ್ಕೆ ನೆರವಾಗಬೇಕೆಂಬುದು ನಮ್ಮ ಸವಿನಯಪ್ರಾರ್ಥನೆ. ಮತಾಂತರಗಳನ್ನು ದೂಷಣೆಮಾಡದೆ ಜನಸಾಮಾನ್ಯಕ್ಕೆ ತಿಳಿಯುವಂತೆ ಸುಲಭರೀತಿಯಲ್ಲಿ ತಿಳಿಸುವ ಅಧ್ಯಾತ್ಮಸಾಧನ ವಿಷಯಕವಾದ ಅಥವಾ ಸಿದ್ಧಾನ್ತ ವಿಷಯಕವಾದ ಲೇಖನಗಳನ್ನು ಆದರದಿಂದ ಬರಮಾಡಿಕೊಳ್ಳುವೆವು. ಜಿಜ್ಞಾಸುಗಳಾಗಿರುವ ಮಹನೀಯರು ಪೂರ್ವ ಮಹರ್ಷಿಗಳ ಸೇವೆಯೂ ಅಧ್ಯಾತ್ಮವಿಚಾರದಲ್ಲಿ ಕಾಲಕ್ಷೇಪವೂ ದೊರೆಯುವ ಈ ಸುಯೋಗವನ್ನು ಕಳೆದುಕೊಳ್ಳದೆ ತಮ್ಮ ಮಿತ್ರಮಂಡಲಿಯಲ್ಲಿ ಇದರ ಪ್ರಯೋಜನವನ್ನು ಮಾಡಿಕೊಟ್ಟು ನಮ್ಮ ಪ್ರಯತ್ನವನ್ನು ಸಫಲಗೊಳಿಸಬೇಕಾಗಿ ಬೇಡುತ್ತೇವೆ. **ಸಂ-1, 2**

# ಜೀವನದಲ್ಲಿ ಸಾರ

ಯಾರಿಗಾದರೂ ಬದುಕಿರುವದು ಬೇಕು, ಆದರೆ ಬದುಕಿನಲ್ಲಿರುವ ಸವಿ ಯಾವದು? ಏತಕ್ಕಾಗಿ ನಾವು ಬದುಕಿರಬೇಕು?–ಎಂಬ ಪ್ರಶ್ನೆಗೆ ಎಲ್ಲರೂ ಒಂದೇ ಉತ್ತರವನ್ನು ಕೊಡುವದಿಲ್ಲ. ಅದೇ ಮನುಷ್ಯನು ಬೇರೆ ಬೇರೆಯ ಸ್ಥಿತಿಯಲ್ಲಿ ಬೇರೆ ಬೇರೆಯ ಉತ್ತರವನ್ನು ಕೊಡುತ್ತಾನೆ.

ಚಿಕ್ಕಮಕ್ಕಳಿಗೆ ಆಟವು ಬೇಕು. ಅವಕ್ಕೆ ಊಟ, ತಿಂಡಿ–ಮುಂತಾದವುಗಳೂ ಬೇಕಾದರೂ ಮುಖ್ಯವಾಗಿ ಆಟವು ಬೇಕು. ಪ್ರಪಂಚವೆಲ್ಲ ಹುಡುಗರಿಗೆ ಒಂದು ವಿಚಿತ್ರ ಪ್ರದರ್ಶನಶಾಲೆಯಾಗಿರುತ್ತದೆ. ಅವರು ಕಂಡಕಂಡದ್ದನ್ನೆಲ್ಲ ನೋಡಿ ನಲಿಯಬೇಕು; ಅವರು ಮನಬಂದಂತೆ ಓಡಾಡಬೇಕು, ಜೊತೆಯವರೊಡನೆ ಆಡುತ್ತಿರಬೇಕು. ನಗುತ್ತಿರಬೇಕು. ಎಷ್ಟೋ ಜನರು ಮಕ್ಕಳಾಗಿಯೇ ಉಳಿದುಕೊಂಡುಬಿಟ್ಟಿರುತ್ತಾರೆ. ಅವರಿಗೆ ವಿನೋದದಿಂದ ಕಾಲವನ್ನು ಕಳೆಯುತ್ತಿರಬೇಕೆಂದು ಬಲವಾದ ಇಚ್ಛೆಯಿರುತ್ತದೆ. ಆದರೆ ಅವರು ಬೇಡವೆಂದರೂ ದುಃಖವು ಮೇಲೆ ಬೀಳುತ್ತಿರುತ್ತದೆ.

ಕೆಲವರಿಗೆ ಊಟ, ತಿಂಡಿ, ಉಡಿಗೆತೊಡಿಗೆ–ಇವುಗಳಿಗಾಗಿ ಬದುಕಿರಬೇಕೆನಿಸಿರುತ್ತದೆ. ಅವರಿಗೆ ಬಗೆಬಗೆಯ, ಸವಿಸವಿಯಾದ, ಆಹಾರಗಳೂ ಪಾನಗಳೂ ಬೇಕು; ಉತ್ಕೃಷ್ಟವಾದ, ಸುಂದರವಾದ ಉಡುಪು ಬೇಕು. ಆದರೆ ಅನ್ನವೂ ಬಟ್ಟೆಯೂ ಅವರು ಬಯಸಿದಷ್ಟು ಸಿಕ್ಕವುದಿಲ್ಲ; ಅಥವಾ ಅವು ಸಿಕ್ಕುವ ಹೊತ್ತಿಗೆ ಆ ಸುಖವನ್ನು ಅನುಭವಿಸುವ ಯೋಗ್ಯತೆಯು ಕುಗ್ಗಿಹೋಗಿರುತ್ತದೆ.

ಕೆಲವರಿಗೆ ವಿದ್ಯೆ ಬೇಕು, ಕೆಲವರಿಗೆ ಧನವು ಬೇಕು, ಕೆಲವರಿಗೆ ಕೀರ್ತಿಯು ಬೇಕು, ಕೆಲವರಿಗೆ ದಾಂಪತ್ಯದ ಸುಖವು ಬೇಕು, ಕೆಲವರಿಗೆ ಅಧಿಕಾರವು ಬೇಕು, ಕೆಲವರಿಗೆ ಗೌರವವು ಬೇಕು, ಹೀಗೆ ಅವರವರಿಗೆ ಬೇಕಾದದ್ದು ಇದ್ದರೆ ಜೀವನವು ಸವಿಯಾಗಿರುತ್ತದೆ; ಇಲ್ಲದಿದ್ದರೆ ಜೀವನದಲ್ಲಿ ಯಾವ ಸವಿಯೂ ಇರುವದಿಲ್ಲವೆಂದು ತೋರುತ್ತದೆ. ಒಬ್ಬನಿಗೇ ಒಂದು ಕಾಲದಲ್ಲಿ ಬೇಕಾದದ್ದು ಇನ್ನೊಂದು ಕಾಲದಲ್ಲಿ ಬೇಡವಾಗುತ್ತದೆ; ಮೊದಲು ಬೇಡವಾಗಿದ್ದದ್ದು ಆಮೇಲೆ ಬೇಕಾಗುತ್ತದೆ. ಯಾವಾಗ ಯಾವನಿಗೆ ಯಾವದು ಬೇಕೋ, ಆಗ ಅವನಿಗೆ ಅದೇ ಜೀವನದ ಸಾರವಾಗಿರುತ್ತದೆ. ಆದರೆ ಇವುಗಳಲ್ಲಿ ಯಾವದೊಂದೂ ಯಾವಾಗಲೂ ಎಲ್ಲರಿಗೂ ಬೇಕಾಗಿರುವದಿಲ್ಲವೆಂಬುದು ನಿಶ್ಚಯವು.

ಲೋಕದಲ್ಲಿ ಎಲ್ಲರಿಗೂ ಯಾವಾಗಲೂ ಬೇಕಾಗುವ ಯಾವದಾದರೊಂದು ವಸ್ತು ಇರುವದೆ? ಯಾವದೊಂದು ಇದ್ದರೆ ನಮಗೆ ಮಿಕ್ಕದ್ದು ಅದಕ್ಕಾಗಿ ಬೇಕೆನಿಸುವದೋ, ಯಾವದೊಂದು ಎಂದಿಗೂ ನಮಗೆ ಬೇಡ ಎನ್ನಿಸುವ ಸಂಭವವೇ ಇಲ್ಲವೋ, ಅಂಥ ಒಂದು ಪದಾರ್ಥವು ಉಂಟೆ?

ಈ ಪ್ರಶ್ನೆಗೆ ಹಿಂದೆ ಬಹು ಪುರಾತನಕಾಲದಲ್ಲಿ ಯಾಜ್ಞವಲ್ಕ್ಯನೆಂಬ ಋಷಿಯು ತನ್ನ ಪ್ರಿಯ ಪತ್ನಿಯಾದ ಮೈತ್ರೇಯಿಗೆ ಈ ಉತ್ತರವನ್ನು ಹೇಳಿರುತ್ತಾನೆ: "ಗಂಡ, ಹೆಂಡತಿ, ಧನ, ಪಶುಗಳು, ಜಾತಿ, ಲೋಕಗಳು, ದೇವತೆಗಳು, ವೇದಗಳು, ಉಳಿದ ಜೀವರುಗಳು–ಇವುಗಳಲ್ಲಿ ಯಾವದೊಂದೂ ತನತನಗಾಗಿ ಬೇಕೆನಿಸುವದಿಲ್ಲ; ಎಲ್ಲವೂ ತನಗಾಗಿ ಪ್ರಿಯವಾಗಿರುತ್ತದೆ". ಆದ್ದರಿಂದ ಲೋಕದಲ್ಲಿ "ತಾನು" ಎಂಬ ಪದಾರ್ಥವು ಅತ್ಯಂತ ಪ್ರಿಯವಾಗಿರುತ್ತದೆ, ತನಗಾಗಿ ಮಿಕ್ಕದ್ದೆಲ್ಲವೂ ಬೇಕಾಗಿರುತ್ತದೆ. ಮನೆ, ಮಕ್ಕಳು, ದೇಹ–ಮುಂತಾದವುಗಳಲ್ಲಿ ತಾನು, ತನ್ನದು–ಎಂಬ ಅಭಿಮಾನವಿರುವವರೆಗೂ ಅವೆಲ್ಲವೂ ಬೇಕೆನಿಸುತ್ತವೆ. ಆ ಅಭಿಮಾನವು ಹೋದಕೂಡಲೆ ಅವು ಬೇಡವಾಗುತ್ತವೆ.

"ತಾನು" ಎಂಬುದನ್ನು ಸಂಸ್ಕೃತದಲ್ಲಿ ಆತ್ಮ ಎನ್ನುವರು. ಆತ್ಮನೇ ನಮಗೆಲ್ಲರಿಗೂ ಬೇಕು, ಆತ್ಮನಿಗಾಗಿ ಮಿಕ್ಕದ್ದೆಲ್ಲವೂ ಬೇಕು. ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲ. ಇಡಿಯ ಜಗತ್ತನ್ನೇ ಸಂಪಾದಿಸಿದರೂ ಆತ್ಮಲಾಭಕ್ಕೆ ಅದು ಎಂದಿಗೂ ಸಮನಾಗಲಾರದು. ಯಾವನು ತನ್ನ ನಿಜವಾದ ಸ್ವರೂಪವನ್ನು ಕಂಡುಕೊಳ್ಳುವನೋ ಅವನಿಗೆ ಇನ್ನು "ಇದು ಬೇಕು" ಎಂಬ ಹಂಬಲಿಕೆಯು ಉಳಿಯುವದಿಲ್ಲ. ಆದ್ದರಿಂದಲೇ ಯಾಜ್ಞವಲ್ಕ್ಯನು ಮೈತ್ರೇಯಿಗೆ "ಎಲೆ, ಆತ್ಮನನ್ನೇ ಕಂಡುಕೊಳ್ಳಬೇಕು; ಅದಕ್ಕಾಗಿ ಆತ್ಮನ ವಿಷಯವಾಗಿಯೇ ಕೇಳಬೇಕು, ಮನನಮಾಡಬೇಕು, ಆತ್ಮನನ್ನೇ ಅನುಭವಕ್ಕೆ ತಂದುಕೊಳ್ಳಬೇಕು, ಆತ್ಮನನ್ನು ಕಂಡುಕೊಂಡರೆ, ಆತ್ಮನನ್ನು ಕುರಿತು ಕೇಳಿ, ಮನನಮಾಡಿ, ಮನದಟ್ಟು ಮಾಡಿಕೊಂಡರೆ ಇದೆಲ್ಲವನ್ನೂ ಅರಿತುಕೊಂಡಂತೆ ಆಗುವದು" ಎಂದು ಹೇಳಿರುತ್ತಾನೆ. ಆತ್ಮಸ್ವರೂಪವನ್ನು ಕಂಡುಕೊಳ್ಳುವ ವಿದ್ಯೆಯೇ ಅಧ್ಯಾತ್ಮವಿದ್ಯೆ. **ಸಂ–16, 66**

## ನಾನೆಂಬ ಅರಿವು

ನಾನು ಎಂಬ ಅರಿವು ನಮಗೆಲ್ಲರಿಗೂ ಉಂಟಾಗುತ್ತಿರುವದು. ಆದರೆ ನಾನೆಂದರೆ ಯಾವ ಪದಾರ್ಥ ಎಂಬ ಬಗ್ಗೆ ನಮ್ಮಗಳಲ್ಲಿ ಬಲುಮಂದಿಗೆ ನಿಶ್ಚಿತವಾದ ತಿಳಿವಳಿಕೆಯಿರುವದಿಲ್ಲ. ಇದನ್ನು ನಿಶ್ಚಯಿಸುವದಕ್ಕೆ ಹೊರಟರೆ ದಾರಿಯಲ್ಲಿ ಅಡ್ಡಲಾಗುವ ಎಡರುಗಳು ಅಷ್ಟಿಷ್ಟಲ್ಲ. ಸಾಮಾನ್ಯವಾಗಿ ಹೊರಗಿನ ವಸ್ತುಗಳ ವಿಚಾರದಲ್ಲಿಯೇ ನಾವು ಮಗ್ನರಾಗಿರುತ್ತೇವೆ. "ಇದು ಏನು?" ಎಂಬ ಪ್ರಶ್ನೆಯು ನಮ್ಮೆಲ್ಲರ ಬಾಯಿಯಲ್ಲಿಯೂ ಆಗಿಂದಾಗ್ಗೆ ಬರುತ್ತದೆ. ಆದರೆ "ನಾನು ಯಾರು?" ಎಂಬ ಪ್ರಶ್ನೆಯು ಹೊರಡುವದು ಬಹಳ ಅಪರೂಪ. 'ನಾನು' ಎಂಬ ಅರಿವು ಯಾವಾಗಲೂ ನಮಗೆ ಉಂಟಾಗುವದೂ ಇಲ್ಲ.

ಆದರೂ 'ನಾನು' ಇಲ್ಲದೆ ಯಾವದೊಂದರ ಅರಿವೂ ಆಗುವ ಹಾಗಿರುವದಿಲ್ಲ. ಬೆಳಕಿಲ್ಲದೆ ಯಾವ ವಸ್ತುವನ್ನೂ ನಾವು ಕಾಣಲಾರೆವಾದರೂ 'ಇದು ಕುರ್ಚಿ' ಎಂದು

ಮುಂತಾಗಿಯೇ ನಾವು ವ್ಯವಹರಿಸುತ್ತೇವೆ. ಅಲ್ಲವೆ? ಹಾಗೆಯೇ ವ್ಯವಹಾರದಲ್ಲಿ ನಾನಿಲ್ಲದೆ ಯಾವದೊಂದೂ ಇಲ್ಲ; ಆದರೂ ವ್ಯವಹಾರದಲ್ಲೆಲ್ಲ ಈ ನಾನು ಮರೆಯಾಗಿದ್ದುಕೊಂಡೇ ಮಿಕ್ಕದ್ದನ್ನು ಬೆಳಗುತ್ತಿರುವದು.

ನಾನು ಎಂಬ ಅರಿವು ಒಂದೇ ವಸ್ತುವನ್ನು ಹೇಳುತ್ತಿರುವದಿಲ್ಲ. ತೀರ ತಿಳಿಯದ ಜನರಿಗೆ ಹೆಂಡಿರುಮಕ್ಕಳು; ಹೊಲ ಮನೆ-ಮುಂತಾದವುಕೂಡ 'ನಾನು' ಎಂದಾಗಿ ಬಿಟ್ಟಿರುತ್ತವೆ. ದೇಹವನ್ನು ನಾನು ಎನ್ನುವವರಂತೂ ಸಾವಿರಗಟ್ಟಲೆಯ ಜನರಿರುವರು. ದೇಹವನ್ನು ನಾನೆಂದು ನಿಶ್ಚಯವಾಗಿ ಬಗೆದೇ ನಾವುಗಳು ವ್ಯವಹಾರದಲ್ಲಿ ತೊಡಗಿರುವದು. ಹಸಿವು, ಬಾಯಾರಿಕೆ, ಮುಪ್ಪು, ಬೇನೆ-ಮುಂತಾದವುಗಳನ್ನು ಪರಿಹರಿಸಿಕೊಳ್ಳುವದಕ್ಕೂ ಅನ್ನ, ಬಟ್ಟೆ, ಆರೋಗ್ಯ, ದೇಹದ ಸೌಖ್ಯ-ಇವುಗಳನ್ನು ಸಂಪಾದಿಸಿಕೊಳ್ಳುವದಕ್ಕೂ ನಮ್ಮ ಜೀವನದ ಬಹುಭಾಗವು ವೆಚ್ಚವಾಗುತ್ತಿರುತ್ತದೆ.

ದೇಹದ ಹೊರಗಡೆಯನ್ನಲ್ಲದೆ, ಇದರ ಒಳಗೆ ನಡೆಯುತ್ತಿರುವ ನೋಡುವದು, ಕೇಳುವದು, ಮೂಸುವದು-ಮುಂತಾದ ಇಂದ್ರಿಯವ್ಯಾಪಾರಗಳನ್ನೂ ಯೋಚಿಸುವದು, ಇಚ್ಛಿಸುವದು, ಅಂಜುವದು-ಮುಂತಾದ ಮನೋವ್ಯಾಪಾರಗಳನ್ನೂ ನಮ್ಮದೆಂದೇ ನಾವು ಕರೆಯುತ್ತಿರುವೆವು. "ನಾನು ನೋಡಿದೆನು ಕಾಣಿಸಲಿಲ್ಲ, ಕಿವಿಗೊಟ್ಟು ಆಲೈಸಿದೆನು, ಶಬ್ದವು ಕೇಳಲಿಲ್ಲ" ಎನ್ನುತ್ತಿರುವೆವು. ಇಲ್ಲಿ ಇಂದ್ರಿಯಗಳೇ 'ನಾನು' ಎಂಬ ಶಬ್ದಕ್ಕೆ ತಕ್ಕವಾಗಿವೆ. ಹೀಗೆಯೇ "ಯೋಚಿಸುತ್ತೇನೆ, ತಿಳಿಯುವದಿಲ್ಲ" ಎಂಬಲ್ಲಿ ಮನಸ್ಸೇ ನಾನು. ಆದರೆ ನಿಜವಾದ 'ನಾನು' ಯಾವದು? **ಸಂ-16, 215**

# ಅಧ್ಯಾತ್ಮವಿದ್ಯೆ

ಶ್ರುತಿಸ್ಮೃತಿಪುರಾಣಗಳಲ್ಲಿ ಹೇಳಿರುವ ಅಧ್ಯಾತ್ಮವಿದ್ಯೆಯ ವಿಷಯದ ಪರಿಚಯವು ಈಗ ನಾಗರಿಕಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಹರಡಿರುತ್ತದೆ. ಆದರೆ ಅದರ ಬಗೆಗೆ ಇರುವಷ್ಟು ವಿವಿಧ ವಿರುದ್ಧಭಾವನೆಗಳು ಮತ್ತೆಯಾವ ಶಾಸ್ತ್ರದ ವಿಷಯಕ್ಕೂ ಇಲ್ಲವೆಂಬುದು ಶೋಚನೀಯವಾಗಿದೆ.

ಅಧ್ಯಾತ್ಮವಿದ್ಯೆಗೆ ಮೂಲವಾದ ಗನಿಯು ಉಪನಿಷತ್ತುಗಳು. ಆ ಉಪನಿಷತ್ತುಗಳಿಗೆ ಬಹುಪ್ರಾಚೀನಕಾಲದಿಂದಲೂ ಅನೇಕ ಆಚಾರ್ಯರುಗಳು ಭಾಷ್ಯಗಳನ್ನೂ ವೃತ್ತಿಗಳನ್ನೂ ಬರೆದಿರುತ್ತಾರೆ. ಕೆಲವು ಆಚಾರ್ಯರುಗಳು ತಮ್ಮ ಮತವನ್ನು ಈ ದೇಶದಲ್ಲಿ ಹರಡಿ ಪ್ರಖ್ಯಾತರಾಗಿರುತ್ತಾರೆ; ಅವರ ಗ್ರಂಥಗಳನ್ನು ಅಭ್ಯಾಸಮಾಡಿರುವ, ಆ ಆಚಾರ್ಯರುಗಳು ಉಪದೇಶಿಸಿದವುಗಳೆಂಬ ಆಚಾರಗಳನ್ನು ಅನುಸರಿಸುವವರು ಈಗಲೂ ತಕ್ಕಷ್ಟು ಸಂಖ್ಯೆಯವರು ಇರುತ್ತಾರೆ. ಆದರೆ ವಿಷಾದದ ಸಂಗತಿಯೇನೆಂದರೆ; ಈ ಸಿದ್ಧಾಂತಗಳ

ಅನುಯಾಯಿಗಳೆಂದುಕೊಳ್ಳುವ ಪಂಡಿತರುಗಳು ಒಬ್ಬರ ಸಿದ್ಧಾಂತಗ್ರಂಥಗಳನ್ನು ಮತ್ತೊಬ್ಬರು ಖಂಡಿಸುವದರಲ್ಲಿಯೇ ತಮ್ಮ ಪಾಂಡಿತ್ಯವನ್ನು ಹೆಚ್ಚಾಗಿ ವಿನಿಯೋಗಿಸುತ್ತಿದ್ದಾರೆ.

ಈಗ ಸಕಲವಿದ್ಯಾನಿಲಯಗಳೆಂದು ಪ್ರಸಿದ್ಧವಾಗಿರುವ ಸಂಸ್ಥೆಗಳಲ್ಲಿ ಇಂಗ್ಲಿಷುಭಾಷೆಯ ಮೂಲಕವೂ ಈ ಸಿದ್ಧಾಂತಗಳ ಇಹಿಹಾಸವನ್ನು ಮತಪ್ರವರ್ತಕರ ಉಪದೇಶಗಳನ್ನೂ ಬೋಧಿಸುವ ಪದ್ಧತಿಯು ಆಚರಣೆಯಲ್ಲಿದೆ. ಆದರೆ ಈ ಸಂಸ್ಥೆಗಳಲ್ಲಿ ಬೋಧಿಸುವ 'ಪ್ರೊಫೆಸರ್' ಎಂಬ ಬಿರುದನ್ನಾಂತ ಅಧ್ಯಾಪಕರು ಈ ಸಿದ್ಧಾಂತಗಳನ್ನು ಐತಿಹಾಸಿಕ ದೃಷ್ಟಿಯಿಂದಲೇ ಬಹುವಾಗಿ ಚರ್ಚಿಸುತ್ತಾರೆ. ಅಲ್ಲಿ ಓದುವ ವಿದ್ಯಾರ್ಥಿಗಳೂ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದುವದಕ್ಕೆಂದೇ ಈ ಸಿದ್ಧಾಂತಗ್ರಂಥಗಳನ್ನು ಓದುತ್ತಿರುವದರಿಂದ ಇವು ಬೌದ್ಧಿಕವಿಚಾರದ ಗ್ರಂಥಗಳೇ ಆಗುತ್ತಾ ಬಂದಿರುತ್ತವೆ.

ಉಪನಿಷತ್ತುಗಳಲ್ಲಾಗಲಿ, ಭಗವದ್ಗೀತೆಯಲ್ಲಾಗಲಿ, ಬ್ರಹ್ಮಸೂತ್ರಗಳಲ್ಲಾಗಲಿ–ಪ್ರತ್ಯಕ್ಷಾದಿ ಪ್ರಮಾಣಗಳನ್ನಾಗಲಿ ತರ್ಕಶಾಸ್ತ್ರದ ನ್ಯಾಯಗಳನ್ನಾಗಲಿ ಎಲ್ಲಿಯೂ ಪರಾಮರ್ಶಿಸಿರುವದಿಲ್ಲ. ಆದರೂ ಗ್ರಂಥಾಭ್ಯಾಸಿಗಳು ಮಾತ್ರ ತರ್ಕಕ್ಕೂ ಶಾಸ್ತ್ರವಾಕ್ಯಗಳ ಉದಾಹರಣೆಗಳಿಗೂ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಈ ಅಧ್ಯಾತ್ಮಗ್ರಂಥಗಳಲ್ಲಿ ಹೇಳಿರುವ ಅನುಭವಗಳು ಯಾವಕಾಲಕ್ಕಾಗಲಿ ದೇಶಕ್ಕಾಗಲಿ ಸೀಮಿತವಾದಂತೆ ಬರೆದಿರುವದಿಲ್ಲ. ಆದರೂ ಅವುಗಳ ಅನುಭವವು ತಮಗೆ ಆಗಿದೆಯೆಂದೂ ಯಾರೂ ಹೇಳುತ್ತಿಲ್ಲ; ಈ ದಯನೀಯಸ್ಥಿತಿಗೆ ಅಧ್ಯಾತ್ಮವಿದ್ಯೆಯು ಹೇಗೆ ಬಂದಿತು? ಇದನ್ನು ಶುದ್ಧೀಕರಿಸಿ ಅಧ್ಯಾತ್ಮವಿದ್ಯೆಯನ್ನು ಅದಕ್ಕೆ ತಕ್ಕ ಗದ್ದಿಗೆಯಮೇಲೆ ಕೂರಿಸುವದಕ್ಕಾದೀತೆ? ಇದನ್ನು ಪ್ರಾಜ್ಞರು ಆಲೋಚಿಸಬೇಕಾಗಿದೆ. **ಸಂ–39, 214**

## ಅಧ್ಯಾತ್ಮಜ್ಞಾನದ ಬೆಲೆ

ವೇದದಲ್ಲಿರುವ ಉಪದೇಶಕ್ಕೆಲ್ಲ ಒಂದೇ ಒಂದು ಪಲ್ಲವಿಯಿರುವದೆಂದು ಸೂಕ್ಷ್ಮದೃಷ್ಟಿಯುಳ್ಳವರಿಗೆ ಗೊತ್ತಾಗುವದು. ಆ ಪಲ್ಲವಿಯ ಅಭಿಪ್ರಾಯವೇನೆಂದರೆ, "ಸ್ವಸ್ಥರಾಗಿರಿ". ಸ್ವಸ್ಥರಾಗಿರುವದೆಂದರೇನು? ನಮ್ಮನಮ್ಮಲ್ಲಿ ನಾವಿದ್ದುಕೊಂಡಿರುವದು, ಹೊರಗೆ ಹರಿಯದೆ ಇರುವದು. ನಮ್ಮ ಸ್ವರೂಪಕ್ಕಿಂತ ಹೆಚ್ಚಿನ ಪದಾರ್ಥವೇ ಇಲ್ಲವೆಂದೂ ಇದೇ ಹೆಚ್ಚಿನ ವಸ್ತುಗಳಲ್ಲೆಲ್ಲಾ ಹೆಚ್ಚಿನದಾದ್ದರಿಂದ ಪರಬ್ರಹ್ಮವೆನಿಸಿಕೊಂಡಿರುವದೆಂದೂ ವೇದವು ಬಿಡದೆ ಸಾರುತ್ತಿರುವದು.

ಹೀಗೆ ಸ್ವಸ್ಥರಾಗಿರುವದೆಂಬುದು ನಮ್ಮಲ್ಲಿ ಕೋಟಿಜನರಲ್ಲಿ ಒಬ್ಬನಿಗೆ ಆಗುವದೋ ಇಲ್ಲವೋ ಅದಂತಿರಲಿ, ಆಗಾಗ್ಗೆ ತಮ್ಮ ಕಡೆಗೆ ಹೋಗಿಬರುವ ಪ್ರಯತ್ನವನ್ನಾದರೂ ಮಾಡುವ ಜನರು ಸಾವಿರಕ್ಕೊಬ್ಬರು ಸಿಗುವದು ಕಷ್ಟವಾಗುತ್ತಿರುವದು. ಬಹುಜನರಿಗೆ

ನಮ್ಮ ನೆನಪೇ ಇರುವದಿಲ್ಲ. ದೇವಮೇರು, ಅಸುರಮೇರು-ಇವುಗಳವರೆಗಿನ ಭೂಗೋಳದ ಸಂಗತಿಯನ್ನಾದರೂ ತಿಳಿಯುವದಕ್ಕೆ ಮನಸ್ಸು ಹಾಕುವರು; ಕೋಟಿಗಟ್ಟಲೆಯ ಮೈಲಿಗಳ ದೂರದಲ್ಲಿರುವ ಸೂರ್ಯಚಂದ್ರ ಮೊದಲಾದ ಗ್ರಹಗಳ ಮತ್ತು ನಕ್ಷತ್ರಗಳ ಸ್ವರೂಪ, ಗತಿ ಮುಂತಾದವನ್ನು ಕುರಿತು ಯೋಚಿಸುವದಕ್ಕೂ ಸಿದ್ಧವಾಗುವರು; ಪ್ರಾಣಿವರ್ಗ, ಸಸ್ಯವರ್ಗ, ಧಾತುವರ್ಗ ಮುಂತಾದ ಭೌತಿಕಭಾಗಗಳ ಆಗುಹೋಗುಗಳನ್ನೂ ನೆಲೆಯನ್ನೂ ನಿರೂಪಿಸುವದಕ್ಕೆ ಹೋಗುವರು; ಎಂದೂ ಕಂಡುಕೇಳದ ಚಮತ್ಕಾರಗಳಿಂದ ಕೂಡಿದ ಕಟ್ಟುಕಥೆಗಳನ್ನಾದರೂ, ಮತ್ತೊಬ್ಬರಿಗೆ ಹೇಳುವದಕ್ಕೂ ಅವರಿಂದ ಕೇಳುವದಕ್ಕೂ ಅಕ್ಕರೆಯನ್ನು ತೋರಿಸುವರು. ಆದರೆ ತಮ್ಮಲ್ಲಿಯೇ ಇರುವ ತಮ್ಮ ಸ್ವರೂಪವನ್ನು ಕುರಿತು ಒಮ್ಮೆಯಾದರೂ ಚಿಂತಿಸರು. ಬಹುಧನವು ವ್ಯಯವಾಗುವದೆಂಬುದನ್ನಾಗಲಿ ದಾರಿಯಲ್ಲಿ ಪಡುವ ದೇಹಾಯಾಸ ವನ್ನಾಗಲಿ ಕೊನೆಗೆ ಸಿಕ್ಕುವ ಫಲದ ಅಲ್ಪತೆಯನ್ನಾಗಲಿ ಲೆಕ್ಕಿಸದೆ ಮೋಟಾರು, ರೈಲು, ಹಡಗು, ಜಹಜು ಮುಂತಾದ ಯಾನಗಳಮೇಲೆ ದೀರ್ಘಪ್ರಯಾಣಗಳನ್ನು ಬೆಳೆಸಿ ಪಡಬಾರದ ಕ್ಲೇಶವನ್ನು ಪಟ್ಟಾದರೂ ದೇಶಾಂತರಗಳನ್ನು ನೋಡಲೆಳಸುವರು; ಸಮುದ್ರದಲ್ಲಿ ಮುಳುಗಿಯಾದರೂ ವಿಮಾನಗಳಿಂದ ಅಂತರಿಕ್ಷಗಳಲ್ಲಿ ಸಂಚರಿಸಿ ಯಾದರೂ ಪ್ರಪಂಚವೈಚಿತ್ರ್ಯಗಳನ್ನು ಪರೀಕ್ಷಿಸುವರು; ಆದರೆ ಯಾವ ಕಾಸುವೀಸದ ವೆಚ್ಚವೂ ಇಲ್ಲದೆ ಎಳ್ಳಷ್ಟೂ ಆಯಾಸಪಡಬೇಕಾದ್ದಿಲ್ಲದೆ ಫಲವೂ ಅನಂತವಾಗಿರುವ, ಪ್ರಯಾಣವೇ ಇಲ್ಲದೆ ತಮ್ಮ ತಮ್ಮಲ್ಲಿಯೇ ಕಂಡುಕೊಳ್ಳುವ, ಸ್ವರೂಪದ ಕಡೆಗೆ ಆಗಾಗ್ಗೆ ಕಡೆಗಣ್ಣಾದರೂ ಹಾಕಿರೆಂದು ವೇದಶಾಸ್ತ್ರಗಳಲ್ಲಿ ಹೊಡೆಯುತ್ತಿರುವ ಭಗವಂತನ ಆಜ್ಞಾರೂಪವಾದ ಡಂಗುರಕ್ಕೆ ಮನಸ್ಸು ಕೊಡದೆ ಇರುವರು.

**ಇದೇನು ಮಾಯೆ!** ಎಂದು ಕೆಲವರು ಯೋಚಿಸಬಹುದು. ಇದು ಮಾಯೆಯಲ್ಲ, ಹಿಡಿದಮಾರ್ಗಕ್ಕೆ ಸಿಕ್ಕ ಊರು. ಪೂರ್ವದಕಡೆಗೆ ಹೊರಟವನಿಗೆ ಉತ್ತರಕ್ಕಿರುವ ಊರು ಸಿಗುವದುಂಟೋ? ಎಂದಿಗೂ ಇಲ್ಲ. "ಮನೆಗೆ ಮಾರಿ, ಹೆರರಿಗೆ ಉಪಕಾರಿ" ಎಂಬಂತೆ ಜನರಿಗೆ ತಮ್ಮ ಮನೆಯಾದ ತಮ್ಮ ಆತ್ಮವು ಕಾಣದೆ ಇರುವದರಿಂದ ನಿಮ್ಮ ಸ್ವರೂಪವನ್ನು ಕುರಿತು ವಿಚಾರಮಾಡಿಕೊಳ್ಳಿ ಎಂದ ಕೂಡಲೆ ಕೆಂಡದಂಥ ಸಿಟ್ಟು ಬರುವದು. ಅತ್ತನೋಡಿ, ಇತ್ತನೋಡಿ, ಎಂದರೆ ಇವರಿಗೆ ಬಲು ಅಕ್ಕರೆಯ ಮಾತು. ನಮ್ಮ ಮನೆಯಾದ ನಮ್ಮ ಸ್ವರೂಪಕ್ಕೆ ನಾವು ತೀರ ಹೊಸಬರು, ಅದನ್ನು ನಾವು ಎಂದೂ ನೋಡಲಿಲ್ಲ. ಅದನ್ನು ನೋಡುವದಕ್ಕಿಂತಲೂ ಹೊರಮುಖವಾಗಿರುವದೇ ನಮಗೆ ಸಹಜವಾಗಿರುವದು. "ಬ್ರಹ್ಮನು ಇಂದ್ರಿಯಗಳನ್ನು ಹೊರಮುಖವಾಗಿ ತೆರೆಯುವಂತೆಯೇ ಕೊರೆದಿರುವನು, ಆದ್ದರಿಂದ ಮನುಷ್ಯನು ಹೊರಗೆ

ನೋಡುತ್ತಾನೆಯೇ ಹೊರತು ಒಳಗಿರುವ ತನ್ನ ರೂಪವನ್ನು ನೋಡನು" ಎಂದು ಉಪನಿಷತ್ತಿನಲ್ಲಿರುವದು. ಯಾರು ಇಂದ್ರಿಯಗಳ ಮೂಲಕ ಹೊರಗೇ ನೋಡುವ ಅಭ್ಯಾಸವನ್ನು ಬಿಟ್ಟು ಒಳಗೆ ನೋಡುವ ಅಭ್ಯಾಸವನ್ನು ಮಾಡುವರೋ ಅಂಥಾ ಧೀರರಿಗೆ ಮಾತ್ರ ತಾವು ಯಾರೆಂಬುದು ಗೊತ್ತಾಗುವದು.

ತಾವು ಯಾರೆಂಬುದನ್ನು ಏಕೆ ತಿಳಿಯಬೇಕು? ಸ್ವಭಾವದಿಂದ ಯಾವ ಕಡೆಗೆ ಮನಸ್ಸು ಹರಿಯುತ್ತಿರುವದೋ ಆಕಡೆಗೇ ಏತಕ್ಕೆ ಅದನ್ನು ಬಿಡಬಾರದು? ಲೋಕಕ್ಕೆ ವಿಲಕ್ಷಣವಾದ ರೀತಿಯಿಂದ ನಡೆಯುವದಕ್ಕೆ ಏತಕ್ಕೆ ಯತ್ನಿಸಬೇಕು? ಎಂದು ಯಾರಿಗಾದರೂ ಸಂಶಯ ಬಂದೀತು. ಇದಕ್ಕೆ ಉತ್ತರವೇನೆಂದರೆ, ಲೋಕದಲ್ಲಿ ಕಾಡು ಜನರು ಸ್ವಭಾವಕ್ಕನುಸರಿಸಿಯೇ ಇರುವರು, ನಾಗರಿಕರೊ ಎಂದರೆ ಹುಟ್ಟಿದಂತೆ ಇರದೆ ಬಗೆಬಗೆಯ ಸಂಸ್ಕಾರಗಳನ್ನು ಪಡೆದುಕೊಂಡು ಸುಖಪಡುತ್ತಿರುವರು. "ನಾಗರಿಕತೆಯು ಕಷ್ಟವಾದ್ದರಿಂದ ನಾಗರಿಕತೆಯ ಸುಖಬೇಡ, ತೆಪ್ಪನೆ ಇದ್ದಂತೆ ಇರೋಣ" ಎನ್ನುವದುಂಟೆ? ಇದರಂತೆ ತನ್ನನ್ನು ತಾನು ತಿಳಿಯುವದು ಎಷ್ಟು ಕಷ್ಟವಾಗಿರಲಿ, ಆ ತಿಳಿವನ್ನು ಅವಶ್ಯವಾಗಿ ಪಡೆದು ಸುಖಪಡುವದು ಮನುಷ್ಯನ ಕರ್ತವ್ಯವಾಗಿದೆ.

ಇಂದ್ರಿಯಗಳಿಂದ ಹೊರಗಿನ ವಸ್ತುಗಳನ್ನು ನವನವಮಾರ್ಗಗಳಿಂದ ವಶಮಾಡಿ ಕೊಂಡು ಸುಖಪಡಬೇಕೆಂದಿರುವ ನಾವು ಯೋಚಿಸಬೇಕಾದ ಒಂದು ವಿಷಯವುಂಟು. ಒಂದು ಮರದಲ್ಲಿರುವ ಒಂದು ಹಣ್ಣಿಗೆ ಹೆಚ್ಚು ಬೆಲೆಯೊ? ಅಥವಾ ಆ ಮರಕ್ಕೆ ಹೆಚ್ಚು ಬೆಲೆಯೋ? ಆ ಮರವು ಒಂದು ಸಲ ಬಿಟ್ಟ ಹಣ್ಣುಗಳನ್ನೆಲ್ಲ ಸೇರಿಸಿದರಾದರೂ ಆ ಮರದ ಬೆಲೆಗೆ ಸರಿಯಾದೀತೆನ್ನಬಹುದೆ? ಇಲ್ಲ, ಮರವು ಆ ಹಣ್ಣುಗಳಿಗೆಲ್ಲ ಆಧಾರವಾದದ್ದಾಗಿರುವದರಿಂದ ಅದರ ಬೆಲೆಯೇ ಹೆಚ್ಚು. ನಾವೇ ಮರವಿದ್ದಂತೆ, ನಮ್ಮ ಇಂದ್ರಿಯಗಳೇ ಕೊಂಬೆ ಇದ್ದಂತೆ, ಇಂದ್ರಿಯಗಳಿಂದಾಗುವ ವಿಷಯಜ್ಞಾನಗಳೇ ಚಿಗುರು, ಹೂ ಮುಂತಾದವಿದ್ದಂತೆ. ಇವುಗಳಲ್ಲಿ ಯಾರಿಗೆ ಬೆಲೆ ಹೆಚ್ಚು? ನಮಗೇ. ಇದೂ ಅಲ್ಲದೆ ಮರಕ್ಕೆ ಸೇರಿರುವಾಗಲೆ ಕೊಂಬೆಗೂ ಚಿಗುರಿಗೂ ಹೂವಿಗೂ ಹಣ್ಣಿಗೂ ಬೆಲೆ, ಬೇರೆಯಾದರೆ ಮೊದಲಿನ ಸೌಂದರ್ಯವಿಲ್ಲ. ನಮ್ಮ ದೇಶದಲ್ಲಿ ಬೆಳೆಯುವ ಯಾವದಾದರೊಂದು ಮರದ ಹಣ್ಣನ್ನು ತೆಗೆದು ಒಣಗಿಸಿ ಕೆಡದಂತೆ ಸಂಸ್ಕಾರಮಾಡಿ ದೇಶಾಂತರಕ್ಕೆ ಕಳುಹಿಸಿ ವರ್ಷಗಟ್ಟಲೆ ಕಾಲವಾದಮೇಲೆ ಆ ಮರವೇ ಆ ಹಣ್ಣನ್ನು ನೋಡಿದರೂ ಅದನ್ನು ಗುರ್ತಿಸೀತೇನು? ಗುರ್ತಿಸಲಾರದು. ನಾವೂ ವಿಷಯಗಳೂ ಇಂಥ ಮರಹಣ್ಣುಗಳ ಸಂಬಂಧವುಳ್ಳವರಾಗಿದ್ದೇವೆ. ನಮ್ಮ ಶರೀರವೇ ಮರವು, ಮನಸ್ಸೆ ಇದರಲ್ಲಿರುವ ಉತ್ತಮವಾದ ಫಲವು, ನಮ್ಮ ಸ್ವರೂಪವಾಗಿರುವ ಆತ್ಮವೇ ಇದಕ್ಕೆ ತಾಯಿಬೇರು. ಆ ತಾಯಿಬೇರನ್ನು ಅರಿತು ಅದಕ್ಕೂ ಉಳಿದ ಅವಯವಗಳಿಗೂ

ಇರುವ ಸಂಬಂಧವನ್ನು ಅರಿತರೇ ಆ ಅವಯವಗಳಿಗೆ ಬೆಲೆ ಬರುವದು. ವೃಕ್ಷಸ್ಥಾನದಲ್ಲಿರುವ ನಾವು "ಇದು ನನ್ನ ಕೊಂಬೆ, ಇದು ನನ್ನ ಕಾಯಿ, ಇದು ನನ್ನ ಹಣ್ಣು" ಎಂದು ಹೊರಗಿನ ವಸ್ತುಗಳನ್ನು ಅರಿಯಬೇಕು. ಆಗಲೇ ಅವಕ್ಕೆ ಬೆಲೆ, ಇಲ್ಲದಿದ್ದರೆ ದೇಶಾಂತರಕ್ಕೆ ಹೋಗಿ ಬಾಡಿ ಬತ್ತಿರುವ ಹೂಹಣ್ಣುಗಳಂತೆ ಅವು ಹೊರಗಿನ ವಸ್ತುಗಳಾಗಿ ಕಾಣುವವು.

ಹೆಚ್ಚೇನು? ನಮ್ಮ ಸ್ವರೂಪದಲ್ಲಿಯೇ ಎಲ್ಲವನ್ನೂ ಕಾಣಬೇಕು. ಇದನ್ನೊಂದನ್ನು ಅರಿತರೆ ಎಲ್ಲವನ್ನೂ ಅರಿತಂತಾಯಿತು. ಶುಕಾನುಶಾಸನದಲ್ಲಿ ವ್ಯಾಸಮಹರ್ಷಿಗಳು ಅಪ್ಪಣೆಕೊಡಿಸಿರುವದೇನೆಂದರೆ : ವೃ॥ ವೇದಾಂಶ್ಚ ವೇದ್ಯಂ ತು ವಿಧಿಂ ಚ ಕೃತ್ಸ್ನಮಥೋ ನಿರುಕ್ತಂ ಪರಮಾರ್ಥತಾಂ ಚ ॥ ಸರ್ವಂ ಶರೀರಾತ್ಮನಿ ಯಃ ಪ್ರವೇದ ತಸ್ಯೈವ ದೇವಾಃ ಸ್ಪೃಹಯನ್ತಿ ನಿತ್ಯಂ ॥ ಶಾಂತಿಪರ್ವ 245–30 (ವೇದಗಳು, ತಿಳಿಯಬೇಕಾದ ವಸ್ತುಗಳು, ಕರ್ಮಶಾಸ್ತ್ರ, ನಿರುಕ್ತ, ಪರಮಾರ್ಥ–ಇವುಗಳನ್ನೆಲ್ಲ ಈ ಶರೀರಾತ್ಮನಲ್ಲಿಯೇ ಯಾವಾತನು ಸಾಕ್ಷಾತ್ಕಾರಮಾಡಿಕೊಳ್ಳುವನೋ ಆತನನ್ನೇ ಸೇವಿಸಬೇಕೆಂದು ದೇವತೆಗಳು ನಿತ್ಯವೂ ಹಾತುವರಿಯುತ್ತಿರುವರು.) **ಸಂ–1, 26**

## ಅಧ್ಯಾತ್ಮವನ್ನು ಹಿಡಿಯುವದು ಹೇಗೆ ?

ಅಧ್ಯಾತ್ಮವನ್ನು ಹಿಡಿದರೆ ಹಾಗಾಗುತ್ತದೆ, ಹೀಗಾಗುತ್ತದೆ–ಎಂದು ವರ್ಣಿಸುವರು; ಆದರೆ ಅದನ್ನು ಹಿಡಿಯುವದು ಹೇಗೆ? ಇದು ನಮ್ಮಲ್ಲಿ ಅನೇಕರಿಗೆ ಒಂದು ಒಗಟಾಗಿಬಿಟ್ಟಿದೆ.

ಸರಿಯಾಗಿ ನೋಡಿದರೆ ಅಧ್ಯಾತ್ಮದಲ್ಲಿ ಹಿಡಿಯತಕ್ಕದ್ದೇನೂ ಇಲ್ಲ, ಬಿಡತಕ್ಕದ್ದು ಬಹಳವಾಗಿ ಇದೆ. ಮೊಟ್ಟಮೊದಲು 'ನಾನು', 'ನನ್ನದು'–ಎಂಬ ಅಭಿಮಾನವನ್ನು ಬಿಡಬೇಕು. ದೇಹವನ್ನು 'ನಾನು' ಎಂದು ನಮ್ಮಲ್ಲಿ ಬಹುಜನರು ಪಟ್ಟುಹಿಡಿದಿದ್ದೇವೆ. ಈ 'ನಾನು' ಎಷ್ಟೋ ವಸ್ತುಗಳಲ್ಲಿ 'ನನ್ನದು' ಎಂಬ ಅಭಿಮಾನಕ್ಕೆ ಕಾರಣವಾಗಿರುತ್ತದೆ. ಕನಸಿನಲ್ಲಿ ನಮಗೆ ಯಾವದೋ ಒಂದು ದೇಹವು ತೋರಿಕೊಳ್ಳುತ್ತದೆ. ಆಗ್ಗೆ ನಾವು ಅದನ್ನೇ 'ನಾನು' ಎಂದುಕೊಳ್ಳುತ್ತೇವೆ. ಕೂಡಲೆ ಎಷ್ಟು ಪದಾರ್ಥಗಳನ್ನು 'ನನ್ನದು' ಎಂದು ಕರೆಯುವದಕ್ಕೆ ಪ್ರಾರಂಭಿಸಿಬಿಡುತ್ತೇವೆ, ನೋಡಿ !

ದೇಹದಲ್ಲಿರುವ ಅಭಿಮಾನದಿಂದಲೇ ಕಾಮ, ಕ್ರೋಧ, ಲೋಭಗಳೆಂಬ ಮೂರು ದೊಡ್ಡ ಮನೋದೋಷಗಳು ತಲೆದೋರುವವು. ಅಂಜಿಕೆ, ಇಲ್ಲದ ಯೋಚನೆ, ಕಳವಳ, ಹೊಟ್ಟೆಯಕಿಚ್ಚು, ಸೇಡುತೀರಿಸಿಕೊಳ್ಳುವ ಬುದ್ಧಿ, ಅಪಮಾನದಿಂದ ನೊಂದುಕೊಳ್ಳುವದು, ವಿಷಾದ, ಅಧೈರ್ಯ, ವ್ಯಸನ, ಚಿಂತೆ, ಕೆಲಸದ ಒತ್ತಡದ ಯೋಚನೆ–ಮುಂತಾದವುಗಳೆಲ್ಲ

ದೇಹಾಭಿಮಾನದ ಮರಿಗಳೇ, ದೇಹವೇ ನಮಗೆ ವ್ಯವಹಾರದ ಆತ್ಮನು. ಅದರ ಹೊಟ್ಟೆಯ ಚಿಂತೆ, ಅದರ ಬಟ್ಟೆಯ ಚಿಂತೆ, ಅದರ ಆರೋಗ್ಯದ ಚಿಂತೆ-ಇವೇ ನಮ್ಮ ದಿನದಿನದ ವ್ಯವಹಾರಗಳು. ಹೇಗಾದರೂ ಮಾಡಿ ಈ ದೇಹಾತ್ಮನ ಹಿಡಿತದಿಂದ ಬಿಡಿಸಿಕೊಂಡರೆ ಸರಿ, ಅಧ್ಯಾತ್ಮಕ್ಕೆ ನಾವು ಹತ್ತಿರವಾಗಿಬಿಡುವೆವು.

ವಾಚಕರೆ, ನಿಜವಾಗಿ ನಿಮ್ಮನಿಮ್ಮಲ್ಲಿ ನೀವು ವಿಚಾರಮಾಡಿಕೊಂಡು, ನಿಮಗೆ ನೀವೇ ಉತ್ತರವನ್ನು ಕೊಟ್ಟುಕೊಳ್ಳಿರಿ. ನೀವು 'ನಾನು', 'ನನ್ನದು'-ಎಂಬ ಅಭಿಮಾನವನ್ನು ಬಿಡುವದಕ್ಕೆ ಸಿದ್ಧವಾಗಿದ್ದೀರ? ದೇಹಾತ್ಮನ ಹಿಡಿತದಿಂದ ಪಾರಾಗಬೇಕೆಂಬ ಯೋಚನೆಯು ನಿಮಗೆ ನಿಜವಾಗಿಯೂ ಇದೆಯೆ? ಅದು ನಿಮಗೆ ಇಷ್ಟವೆ? ಸಂ-7, 222

## ಸ್ವಾಸ್ಥ್ಯ

ಸ್ವಾಸ್ಥ್ಯವೆಂದರೆ ತನ್ನಲ್ಲಿ ತಾನಿರುವದು. ಬಹುಜನರು, ಅದೇಕೋ, ತಮ್ಮಲ್ಲಿ ತಾವು ನಿಂತುಕೊಳ್ಳುವ ಪರಿಯನ್ನರಿಯದೆ ಹಿಂದಕ್ಕೂ ಮುಂದಕ್ಕೂ ತೂಗಾಡುತ್ತಿರುವರು. ಅವರಿಗೆ ಶರೀರದಲ್ಲಾಗಲಿ ಮನಸ್ಸಿನಲ್ಲಾಗಲಿ ಸ್ವಸ್ಥತೆಯಿರುವದಿಲ್ಲ.

ಶರೀರದಲ್ಲಿ ಸ್ವಸ್ಥತೆಯುಂಟಾಗುವದು ಹೇಗೆ? ಆಯುರ್ವೇದದಂತೆ ನಮ್ಮ ಶರೀರದಲ್ಲಿ ವಾತ, ಪಿತ್ತ, ಶ್ಲೇಷ್ಮ-ಎಂಬ ಮೂರು ಧಾತುಗಳುಂಟು; ಇವುಗಳ ಹೆಚ್ಚುಕಡಿಮೆಯೇ ನಮಗೆ ಆಗುವ ಬೇನೆಗಳಿಗೆಲ್ಲ ಕಾರಣವು. ಇವುಗಳು ಸಮತೆಯನ್ನು ಹೊಂದಿದರೆ, ಎಂದರೆ ಇರಬೇಕಾದ ಪ್ರಮಾಣದಲ್ಲಿ ನಿಂತುಬಿಟ್ಟರೆ ಸ್ವಸ್ಥತೆಯುಂಟಾಗಿಬಿಡುವದು.

ಮನಸ್ಸಿನಲ್ಲಿ ಸ್ವಸ್ಥತೆಯುಂಟಾಗುವದು ಹೇಗೆ? ಎಂದರೆ ಬಲ್ಲವರು ಹೀಗೆನ್ನುವರು: ಮನಸ್ಸಿನಲ್ಲಿ ಕಾಮ, ಕ್ರೋಧ-ಮುಂತಾದ ದೋಷಗಳಿರುವವು, ಆ ದೋಷಗಳು ತೊಲಗಿ ಮನಸ್ಸು ಶುದ್ಧವಾದರೆ ಅದು ಸ್ವಸ್ಥವಾಗುವದು. ಶರೀರಕ್ಕೆ ಧಾತುವೈಷಮ್ಯವು ಹೇಗೆ ಅಸ್ವಸ್ಥತೆಗೆ ಕಾರಣವೋ ಅದರಂತೆಯೇ ಮನಸ್ಸಿಗೆ ವಿಷಯಗಳ ಆಸಕ್ತಿಯಿಂದುಂಟಾಗುವ ವೃತ್ತಿವೈಷಮ್ಯವೇ ಅಸ್ವಸ್ಥತೆಗೆ ಕಾರಣವಾಗಿರುತ್ತದೆ.

ಹೊರಗಿನ ಕಣ್ಣಿಂದ ನೋಡಿದರೆ ಶರೀರಸ್ವಸ್ಥತೆಯಾಗಲಿ ಮನಸ್ಸಿನ ಸ್ವಸ್ಥತೆಯಾಗಲಿ ಬಹು ಜನರಿಗೆ ದಕ್ಕುವದಿಲ್ಲ; ದಕ್ಕಿದರೆ ಬಹುಕಾಲ ನಿಲ್ಲುವದಿಲ್ಲ. ಏಕೆಂದರೆ ಶರೀರದಲ್ಲಿ ವೈಷಮ್ಯಗಳುಂಟಾಗುತ್ತಲೇ ಇರುವದೂ ಮನಸ್ಸಿಗೆ ಮಾರ್ಪಾಡುಗಳನ್ನು ಹೊಂದುತ್ತಲೇ ಇರುವದೂ ಸ್ವಭಾವವು. ಗಾಳಿಗೆ ಬೀಸುವದು ಹೇಗೆ ಸ್ವಭಾವವೋ ಹಾಗೆ ವೈಷಮ್ಯವು ಇವುಗಳಿಗೂ ಸ್ವಭಾವವಾಗಿರುತ್ತದೆ. ಹೀಗಿರುವಲ್ಲಿ ಹೊರಗಿನ ಔಷಧೋಪಚಾರಗಳಾಗಲಿ ಒಳಗಿನ ಪಥ್ಯಕ್ರಮವಾಗಲಿ ಹೆಚ್ಚಿನ ಸಹಾಯವನ್ನುಂಟುಮಾಡಲಾರವೆಂದು ಹೇಳಬೇಕಾದದ್ದೇನು?

ಆದರೆ ಮತ್ತೊಂದು ದೃಷ್ಟಿಕೋಣವನ್ನು ಅವಲಂಬಿಸಿದರೆ ಸ್ವಸ್ಥತೆಯು ನಿತ್ಯಸಿದ್ಧ ವಾಗಿರುವದು. ಸ್ವಸ್ಥತೆಯೆಂದರೆ ತನ್ನಲ್ಲಿ ತಾನಿರುವದೇ ಅಲ್ಲವೆ? ಈ ಅರ್ಥದಲ್ಲಿ ನಮ್ಮ ಪರಮಾರ್ಥಸ್ವರೂಪವಾದ ಆತ್ಮನಲ್ಲಿಯೇ ನಾವು ಯಾವಾಗಲೂ ಇದ್ದುಕೊಂಡೇ ಇರುವೆವು. ಇದನ್ನು ನಾವು ಅರಿತುಕೊಳ್ಳಬೇಕಾಗಿರುವದು, ಅಷ್ಟೆ. ಹೀಗೆ ನೋಡಿದರೆ ನಮ್ಮ ಸ್ವರೂಪದಲ್ಲಿ ನಾವಿದ್ದೇವೆಂಬುದನ್ನು ಮನಗಾಣುವದೇ ಸ್ವಾಸ್ಥ್ಯವು, ಅದನ್ನರಿಯದ್ದೇ ಅಸ್ವಾಸ್ಥ್ಯವು–ಎನ್ನಬಹುದಾಗಿದೆ. ಇದು ನಿಜವಾದರೆ ನಮ್ಮ ಸ್ವರೂಪವನ್ನು ನಾವು ಕಂಡುಕೊಂಡು ಎಲ್ಲಾ ಬಗೆಯಲ್ಲಿಯೂ ಸ್ವಾಸ್ಥ್ಯವನ್ನು ಏತಕ್ಕೆ ಹೊಂದಬಾರದು?

**ಸಂ–7, 353**

# ಅಧ್ಯಾತ್ಮಯೋಗ

ನಮ್ಮ ದುಃಖಗಳಿಗೆಲ್ಲ ಅಶುಭವಾಸನೆಗಳೇ ಮೂಲ; ಅಶುಭವಾಸನೆಗಳನ್ನು ಹೋಗಲಾಡಿಸಿಕೊಳ್ಳುವದಕ್ಕೆ ಶುಭವಾಸನೆಗಳನ್ನು ಎಬ್ಬಿಸಿ ಬೆಳೆಯಿಸಿಕೊಳ್ಳಬೇಕು; ಶುಭವಾಸನೆಗಳು ಎದ್ದುಕೊಳ್ಳುವದಕ್ಕೆ ಅಧ್ಯಾತ್ಮಚಿಂತನೆಯೇ ಉಪಾಯವು. ಈ ಉಪಾಯವನ್ನೇ **ಅಧ್ಯಾತ್ಮಯೋಗ**ವೆಂದು ಕರೆಯುತ್ತಾರೆ.

ಅಧ್ಯಾತ್ಮಯೋಗವೆಂಬ ಶಬ್ದಕ್ಕೆ ನಮ್ಮೊಳಗಿನ ಆತ್ಮನ ಸಂಬಂಧವೆಂದು ಅರ್ಥ ವಾಗುತ್ತದೆ. ನಮ್ಮೊಳಗೆಲ್ಲ ಒಂದಾನೊಂದು ಹೆಚ್ಚಿನ ಶಕ್ತಿಯಿರುತ್ತದೆ. ಈಗ 'ನಾನು', 'ನಾನು'–ಎಂದು ನಾವು ಹೇಳಿಕೊಳ್ಳುತ್ತಿರುವ ನಮ್ಮ ಸ್ವರೂಪಕ್ಕೂ ಒಳಗಿದ್ದುಕೊಂಡು ಬಲವನ್ನು ಕೊಡುತ್ತಿರುವ ಶಕ್ತಿಯದು. ಈ ಹೊರಗಿನ 'ನಾನು' ನಿಜವಾಗಿ ನಮ್ಮ ಸ್ವರೂಪವಲ್ಲ, ಇದರ ತಿರುಳಾಗಿರುವ ಆ ಒಳಗಿನ ಶಕ್ತಿಯೇ ನಿಜವಾಗಿ ನಮ್ಮ ಸ್ವರೂಪವು. ಆ ಸ್ವರೂಪವನ್ನೇ ಪರಮಾತ್ಮನೆನ್ನುವರು. ನಮ್ಮಲ್ಲಿ ಒಬ್ಬೊಬ್ಬರಲ್ಲಿ ಒಂದೊಂದು 'ನಾನು' ಇರುವದು. ಇದನ್ನು 'ಪುರುಷ' ಎನ್ನುವದಾದರೆ ಪರಮಾತ್ಮನನ್ನು **ಪುರುಷೋತ್ತಮ** ನೆನ್ನಬಹುದು. ಆದ್ದರಿಂದ **ಅಧ್ಯಾತ್ಮಯೋಗವೆಂದರೂ** ಒಂದೇ, **ಪುರುಷೋತ್ತಮಯೋಗವೆಂದರೂ** ಒಂದೇ.

ಪುರುಷೋತ್ತಮಯೋಗವು ಹೇಗೆ ದೊರಕುವದು? ಈ ಪ್ರಶ್ನೆಗೆ ದೊಡ್ಡವರು ಕೊಟ್ಟಿರುವ ಉತ್ತರವನ್ನು ಕೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಈ ಯೋಗವು ಯಾವದಾದರೂ ಪ್ರಯತ್ನವನ್ನು ಮಾಡಿ ಸಂಪಾದಿಸಿಕೊಳ್ಳುವದರಿಂದ ದೊರಕುವದಿಲ್ಲ; ಇದುವರೆಗೆ 'ನಾನು', 'ನನ್ನದು'–ಎಂದು ನಾವು ಇಟ್ಟುಕೊಂಡಿರುವ ಅಭಿಮಾನದ ವಿಯೋಗದಿಂದ, ಎಂದರೆ ಆ ಅಭಿಮಾನವನ್ನು ಬಿಟ್ಟುಬಿಡುವದರಿಂದ ಅದನ್ನು ದೊರಕಿಸಿಕೊಳ್ಳಬೇಕಾಗಿದೆ ! ಪುರುಷೋತ್ತಮನ ಸಂಬಂಧವು ನಮಗೆಲ್ಲರಿಗೂ

ಅವ್ಯಕ್ತವಾಗಿ ಇದ್ದುಕೊಂಡೇ ಇದೆ; ಅದನ್ನು ನಾವು ಹೊರಗಿನ ಸುತ್ತುಗಟ್ಟುಗಳನ್ನೆಲ್ಲ ಒಡೆದುಹಾಕಿ ವ್ಯಕ್ತಪಡಿಸಿಕೊಳ್ಳಬೇಕು, ಅಷ್ಟೆ.

ಯಾವನಿಗೆ ಪುರುಷೋತ್ತಮಯೋಗವು ದೊರಕಿರುವದೋ ಅವನೇ ಪುರುಷೋತ್ತಮನ ಭಕ್ತನೆನಿಸುವನು. ಅವನಿಗೆ ಅಶುಭವಾಸನೆಗಳ ಕಾಟವು ಇರುವದೇ ಇಲ್ಲ.

"ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।
ಭವನ್ತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥"

(ವಿಷ್ಣು.ಸ.ನಾ. ಫಲಶ್ರುತಿ 13)

(ಭಾವಾರ್ಥ: ಯಾವ ಪುಣ್ಯವಂತರು ಪುರುಷೋತ್ತಮನ ಭಕ್ತರಾಗಿರುವರೋ ಅವರಿಗೆ ಸಿಟ್ಟು ಬರುವದಿಲ್ಲ, ಹೊಟ್ಟೆಕಿಚ್ಚು ಉಂಟಾಗುವದಿಲ್ಲ, ಜಿಪುಣತನವು ಹುಟ್ಟುವದಿಲ್ಲ, ಕೆಟ್ಟ ಬುದ್ಧಿಯು ಹತ್ತಿರ ಸೇರುವದಿಲ್ಲ.) **ಸಂ–6, 261**

## ವಿಶ್ವಶಾಂತಿಗೆ ಅಧ್ಯಾತ್ಮವಿದ್ಯೆ

ಭೂಲೋಕದಲ್ಲಿ ಒಂದೊಂದು ದೇಶದಲ್ಲಿಯೂ ಪ್ರಜೆಗಳೂ, ಬೇರೆಬೇರೆಯ ಜನಾಂಗಗಳೂ ಒಬ್ಬರನ್ನೊಬ್ಬರು ತಮಗಿಂತ ಹೆರರೆಂದು ಭಾವಿಸಿಕೊಂಡು, ಸಂಶಯಗ್ರಸ್ತರಾಗಿ ರಾಗದ್ವೇಷಾದಿಗಳಿಂದ ತರ್ಕಿಸುತ್ತಿರುವದರ ಫಲವಾಗಿ ಎಲ್ಲೆಲ್ಲಿಯೂ ಅಶಾಂತಿಯು ಹಬ್ಬುತ್ತಿದೆ. ಇವಕ್ಕೆಲ್ಲ ಕಾಮ, ಕ್ರೋಧ, ಲೋಭ–ಎಂಬ ಮೂರು ನರಕದ್ವಾರಗಳೇ ಕಾರಣವೆಂದೂ ಅವುಗಳನ್ನು ಬಿಟ್ಟು ದಯೆ, ದಮ, ದಾನ–ಎಂಬ ಸಾಧನಗಳನ್ನು ಅಳವಡಿಸಿಕೊಳ್ಳಬೇಕೆಂದೂ ಅಧ್ಯಾತ್ಮಶಾಸ್ತ್ರಗಳಾದ ಶ್ರುತಿಸ್ಮೃತಿಗಳು ಸಾರುತ್ತಿವೆ.

ಸರ್ವಭೂತಗಳ ಹೃದಯದಲ್ಲಿಯೂ ಒಬ್ಬನೇ ಈಶ್ವರನು ಆತ್ಮರೂಪದಿಂದ ಇದ್ದುಕೊಂಡಿರುತ್ತಾನೆಂಬ ಅಮೋಘತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳುವ ಮಾರ್ಗವನ್ನು ಉಪನಿಷತ್ತುಗಳಲ್ಲಿಯೂ ಭಗವದ್ಗೀತೆಯಲ್ಲಿಯೂ ಉಪದೇಶಿಸಿದೆ. ಅಧ್ಯಾತ್ಮವಿದ್ಯೆಯನ್ನು ಪರೋಪದೇಶಕ್ಕೆ ಉಪಯೋಗಿಸುವ ಪಾಂಡಿತ್ಯದಿಂದ ಸಂಪಾದಿಸುವದು ಎಂದಿಗೂ ಆಗದು, ಅಮಾನಿತ್ವವೇ ಮುಂತಾದ ಜ್ಞಾನಸಾಧನಗಳನ್ನು ಅಳವಡಿಸಿಕೊಳ್ಳುವದರಿಂದಲೇ ಆ ವಿದ್ಯೆಯು ಅನುಭವಕ್ಕೆ ಬರುತ್ತದೆ–ಎಂದು ಅನುಭವಿಗಳಾದ ಋಷಿಗಳೂ ಆಚಾರ್ಯರುಗಳೂ ಏಕಕಂಠರಾಗಿ ಉಪದೇಶಿಸಿರುತ್ತಾರೆ. ಅಧ್ಯಾತ್ಮಸಾಧನದ ಎಲ್ಲಾ ಹಂತಗಳಲ್ಲಿಯೂ ಭಗವದ್ಭಕ್ತಿಯೇ ಕಾರ್ಯಕಾರಿ ಎಂಬುದನ್ನು ಗೀತಾಚಾರ್ಯನಾದ ಶ್ರೀಕೃಷ್ಣಭಗವಂತನು ಮತ್ತೆ ಮತ್ತೆ ಉಪದೇಶಿಸಿರುತ್ತಾನೆ.

ಆದ್ದರಿಂದ ಈ ಕಾಲಕ್ಕೆ ಭಗವದ್ಭಕ್ತಿಯಿಂದ ಬ್ರಹ್ಮಾತ್ಮಾನುಭವವನ್ನು ಪಡೆದಿರುವ ಮಹಾತ್ಮರು ಒಂದೊಂದು ದೇಶದಲ್ಲಿ ಒಬ್ಬೊಬ್ಬರು ಜನಿಸಿದ್ದರೂ ಸಾಕು. ಅಂಥ ಮಹಾಮಹಿಮರ ಜೀವನದ ಆದರ್ಶದಿಂದಲೂ ಉಪದೇಶಾಮೃತದಿಂದಲೂ ಇದೇ ಭೂಲೋಕವು ವೈಕುಂಠವಾಗಿ ಪರಿಣಮಿಸುವದರಲ್ಲಿ ಸಂಶಯವಿಲ್ಲ. ಭಗವಂತನ ಕೃಪೆಗೆ ಭಗವದ್ಭಕ್ತರೇ ದ್ವಾರವಾಗಿರುವದರಿಂದ ಅಂಥ ಮಹನೀಯರ ಆವಿರ್ಭಾವವಾಗಲೆಂದು ವಿಶ್ವಾಶಾಂತಿಯಲ್ಲಿ ಪ್ರೇಮವುಳ್ಳ ಆಸ್ತಿಕರೆಲ್ಲರೂ ವರ್ಣ, ಜಾತಿ, ಕುಲ, ಧನಸಂಪತ್ತು-ಮುಂತಾದ ಭೇದವೆಲ್ಲವನ್ನೂ ಬದಿಗೊತ್ತಿ ಭಗವಂತನಲ್ಲಿ ಪ್ರತಿಯೊಂದು ದಿನವೂ ಮೊರೆಯಿಡಬೇಕು. ತಮ್ಮ ಮತ್ತು ತಮ್ಮ ನೆರೆಯವರ ಹೃದಯಪರಿವರ್ತನೆಗಾಗಿ ಭಗವಂತನನ್ನು ನಮ್ರತೆಯಿಂದ ಸತತವಾಗಿ ಪ್ರಾರ್ಥಿಸುವದೇ ವಿಶ್ವಶಾಂತಿಗೆ ಇರುವ ಒಂದೇ ಉಪಾಯ-ಎಂದು ಬಲ್ಲವರು ಹೇಳುತ್ತಿದ್ದಾರೆ. **ಸಂ-39, 119**

## ಅಧ್ಯಾತ್ಮವಿದ್ಯಾಸಾಧನ

ಅಧ್ಯಾತ್ಮವಿದ್ಯೆ ಎಂಬುದು ನಮ್ಮ ಅಂತಃಕರಣಕ್ಕೆ ಸೇರಿದ್ದು. ಈಗಿರುವಂತೆ ನಮ್ಮ ಅಂತಃಕರಣವು ಹೊರಗಿನ ವಿಷಯಗಳ ಚಿಂತೆಯಿಂದ ಬಹಳ ಹೊಲಸಾಗಿರುತ್ತದೆ. ಊರಿಗೆಲ್ಲ ಇರುವ ಒಂದೇ ಕುಂಟೆಯಲ್ಲಿ ಸ್ನಾನ, ಮುಸುರೆ ಉಜ್ಜುವದು, ದನಗಳ ಮೈ ತೊಳೆಯುವದು, ಬಟ್ಟೆ ಒಗೆಯುವದು-ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದರೆ ಹೇಗೆ ಅದು ಬಲುಬೇಗನೆ ಕೊಳೆಯಾಗಿ ಪಾನಾದಿಗಳಿಗೆ ಅನರ್ಹವಾಗಿಬಿಡುವದೋ, ಹಾಗೆ ಹೊರಗಿನ ವಿಷಯಗಳಲ್ಲಿಯೂ ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ರಾಗದ್ವೇಷಗಳಿಂದ ಕೂಡಿ ಅನಾದಿಕಾಲದಿಂದ ವರ್ತಿಸುತ್ತಿರುವ ನಮ್ಮ ಮನಸ್ಸು ಅತ್ಯಂತಕಲ್ಮಷಯುಕ್ತವಾಗಿರುತ್ತದೆ. ಉತ್ತಮವಾದ ಆಚಾರ, ನಿತ್ಯವೂ ಭಗವಚ್ಚಿಂತನೆ, ಸರ್ವತ್ರಭಗವದ್ಭಾವನೆ-ಇಂಥ ಸಾಧನಗಳಿಂದ ಆ ಅಂತಃಕರಣವು ಶುದ್ಧವಾಗುವದು. ಆಗ ಅದರಲ್ಲಿ ಭಗವತ್ತತ್ತ್ವದ ನಿಜವು ತಾನೇ ಹೊರತೋರಿ ಕೊಳ್ಳುವದು.

**ಸಂ-30, 105**

## ಅಧ್ಯಾತ್ಮವಿದ್ಯಾಪ್ರಚಾರ

ಅಧ್ಯಾತ್ಮವಿದ್ಯೆ ಎಂಬುದು ನಮ್ಮೊಳಗಿನ ಬೆಳಕು. ಆತ್ಮನು ಚೈತನ್ಯಪ್ರಕಾಶಸ್ವರೂಪನೇ ಆಗಿರುವದರಿಂದ ಅವನನ್ನು ಬೆಳಗುವದಕ್ಕೆ ಮತ್ತೊಂದು ಬೆಳಕು ಬೇಕಿಲ್ಲ.

ಮನೆಯೊಳಗಿರುವ ಮಹಾದೀಪದ ಪ್ರಕಾಶವು, ಬಾಗಿಲು ಕಿಟಕಿಗಳನ್ನು ಮುಚ್ಚಿಕೊಂಡಿರುವದರಿಂದಲೂ ಗೋಡೆಯ ಸುತ್ತುಗಟ್ಟಿನಿಂದಲೂ ಹೊರಕ್ಕೆ ಹರಿಯದೆ ಇರುವದರಿಂದ ಹೇಗೆ ರಾತ್ರೆ ಸರಿಹೊತ್ತಿನಲ್ಲಿ ಜನರು ಕಗ್ಗತ್ತಲೆಯಲ್ಲಿ ಎಡವುತ್ತಲೂ

ಮುಗ್ಗರಿಸುತ್ತಲೂ ಇರುವರೋ, ಹಾಗೆ ನಮ್ಮೊಳಗಿನ ಅಧ್ಯಾತ್ಮಪ್ರಕಾಶವನ್ನು ಶರೀರೇಂದ್ರಿಯ ಮನೋಬುದ್ಧಿಗಳೆಂಬ ಉಪಾಧಿಗಳು ಸುತ್ತುವರಿದಿರುವದರಿಂದ ಆ ಪ್ರಕಾಶವು ಹೊರಸೂಸದೆ ಇರುತ್ತದೆ. ಯಾವಾಗ ಅಂತಃಕರಣದ ಕಲ್ಮಷವು ಹೋಗಿ, ಇಂದ್ರಿಯಗಳು ಸಾತ್ವಿಕವಿಷಯಸೇವನೆಯಿಂದ ಸ್ವಚ್ಛವಾಗುವವೋ, ಆಗ ಆತ್ಮಪ್ರಕಾಶವು ಎಲ್ಲೆಲ್ಲಿಯೂ ಹರಡಿಕೊಳ್ಳುವದು; ಮಾದರಿಯ ಆತ್ಮನಿಷ್ಠರ ನಡತೆಯೇ ಅಧ್ಯಾತ್ಮವಿದ್ಯಾ ಪ್ರಸಾರಕ್ಕೆ ಬೇಕಾಗಿರುವ ಮುಖ್ಯಸಾಧನವು. ಉಪದೇಶಗಳೂ, ಉಪನ್ಯಾಸಗಳೂ, ಗ್ರಂಥಗಳೂ ಆ ಸಾಧನವಿಲ್ಲದೆ ಇದ್ದರೆ ಬರಿಯ ಅರಣ್ಯರೋದನವಾಗಿರುವವು. **ಸಂ-29, 191**

# ಪೂರ್ಣವಿದ್ಯೆ

ವಿದ್ಯೆಯು ಎಂದಿಗೆ ಪೂರ್ಣವಾದಂತೆ ಆಯಿತು? ವಿದ್ಯೆ ಎಂದರೆ ಸರಿಯಾದ ತಿಳಿವಳಿಕೆ, ಅಜ್ಞಾನದಿಂದ ಆಗಬಹುದಾದ ಎಲ್ಲಾ ಅನರ್ಥವನ್ನೂ ಹೋಗಲಾಡಿಸುವ ತಿಳಿವಳಿಕೆ. ಮನುಷ್ಯನು ನೆಮ್ಮದಿಯಿಂದ ಇರುವದಕ್ಕೆ ಬೇಕಾದ ತಿಳಿವಳಿಕೆಯೇ ವಿದ್ಯೆ. ಇಂಥ ವಿದ್ಯೆಯು ಪೂರ್ಣವಾಗುವ ಸಂಭವವೆಲ್ಲಿದೆ? ತಿಳಿವಳಿಕೆಯು ದಿನದಿನಕ್ಕೂ ಹೆಚ್ಚುತ್ತಲೇ ಇರಬೇಕಲ್ಲವೆ? ಈ ಶಂಕೆಯು ಕೆಲವರಿಗೆ ಉಂಟಾಗುತ್ತದೆ.

ನಾವು ಸದ್ಯಕ್ಕೆ ತಿಳಿದುಕೊಂಡಿರುವ ಅರ್ಥದಲ್ಲಿ ವಿದ್ಯೆಯು ಪೂರ್ಣವಾಗುವ ಸಂಭವವೇ ಇಲ್ಲ, ಆದ್ದರಿಂದ ಈ ಶಂಕೆ ಯುಕ್ತವಾಗಿದೆ. ಇಂದ್ರಿಯಗಳಿಂದ ತಿಳಿಯ ಬರುವ ನಮ್ಮ ಹೊರಗಿನ ವಸ್ತುಗಳ ವಿಷಯಗಳ ತಿಳಿವಳಿಕೆಯನ್ನೇ ನಾವು 'ವಿದ್ಯೆ' ಎಂಬ ಹೆಸರಿನಿಂದ ಕರೆಯುತ್ತಿದ್ದೇವೆ. ಹೊರಗಿನ ಜ್ಞೇಯರಾಶಿಯನ್ನೆಲ್ಲ ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ-ಎಂಬ ಐದರಲ್ಲಿ ನಮ್ಮ ಹಿರಿಯರು ಅಡಕಮಾಡಿರುತ್ತಾರೆ. ಇವಕ್ಕೆ 'ಮಹಾಭೂತ'ಗಳು ಎಂದು ಹೆಸರು. ಈಗಿನ ವಿಜ್ಞಾನಶಾಸ್ತ್ರವು (Science) ಈ ಭೂತಗಳಿಂದಾಗಿರುವ ವಸ್ತುಗಳ ತತ್ತ್ವವನ್ನೇ ಶೋಧನಮಾಡುತ್ತಿದೆ. ಆದ್ದರಿಂದ ಅದಕ್ಕೆ **ಆಧಿಭೌತಿಕವಿದ್ಯೆ** ಎಂಬ ಹೆಸರನ್ನು ಕೊಡಬಹುದು. ಈ ವಿದ್ಯೆಯು ದಿನದಿನಕ್ಕೂ ಬೆಳೆಯುತ್ತಲೇ ಇರುವದು. ಇಂದಿನ ನಮ್ಮ ನಾಗರಿಕತೆಯೆಲ್ಲವೂ ಈ ವಿದ್ಯೆಯ ತಳಹದಿಯಮೇಲೆಯೇ ನಿಂತುಕೊಂಡಿರುತ್ತದೆ.

ಆದರೆ ಈ ವಿಶ್ವದ ವ್ಯಾಪಾರಗಳನ್ನೆಲ್ಲ ಮೇಲುವಿಚಾರಣೆಯಲ್ಲಿಟ್ಟುಕೊಂಡಿರುವ 'ದೇವತೆಗಳು' ಬೇರೆ ಇದಾರೆಂದು ವೇದದಲ್ಲಿ ಹೇಳಿರುತ್ತದೆ. ಆಸ್ತಿಕರು ಹಾಗೆಂದು ನಂಬಿಯೂ ಇರುತ್ತಾರೆ. ದೇವತೆಗಳ ಅನುಗ್ರಹವಿಲ್ಲದೆ ನಮ್ಮ ಹೊರಗಿನ ಪ್ರಪಂಚದ ವ್ಯಾಪಾರವು ಯಾವದೂ ನಡೆಯುವದೇ ಇಲ್ಲ; ನಮ್ಮ ಶರೀರದೊಳಗಿನ ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ-ಇವುಗಳ ವ್ಯಾಪಾರವೂ ಅವರ ನೆರವಿಲ್ಲದೆ ನಡೆಯುವದಿಲ್ಲವೆಂದು ಋಷಿಗಳು ನಂಬಿದ್ದರು. ಈ ದೇವತೆಗಳ ವಿದ್ಯೆಗೆ **ಆಧಿದೈವಿಕವಿದ್ಯೆ**

ಎಂಬ ಹೆಸರನ್ನು ಕೊಡಬಹುದು. ಮನುಷ್ಯನು ಈಗಿನ ಭೌತಿಕವಿದ್ಯೆಯು ತನಗೆ ಕೊಟ್ಟಿರುವ ಹೆಚ್ಚಿನ ತಿಳಿವಳಿಕೆಯಿಂದ ತಲೆತಿರುಗಿ ಮದಾಂಧನಾಗದೆ ಇರುವದಕ್ಕೆ ಆಧಿದೈವಿಕವಿದ್ಯೆಯೂ ಬೇಕು. ಆ ವಿದ್ಯೆಯನ್ನು ಭೌತಿಕವಿದ್ಯೆಯ ಪ್ರಕಾರದಿಂದ ನಿರೀಕ್ಷಣ ಪರೀಕ್ಷಣಾದಿಗಳಿಂದ ಸಂಪಾದಿಸುವದಕ್ಕೆ ಆಗುವದಿಲ್ಲ. ಅದಕ್ಕೆ 'ಉಪಾಸನೆ' ಎಂಬ ಒಂದಾನೊಂದು ಮಾನಸಕಲೆಯು ಬೇಕು, ದೇವತೆಗಳಿಗೆಲ್ಲ ದೇವನಾಗಿರುವ, ಮಹಾದೇವನನ್ನು ಈಶ್ವರರುಗಳಿಗೆಲ್ಲ ಈಶ್ವರನಾದ ಪರಮೇಶ್ವರನನ್ನು ಒಲಿಸಿ ಕೊಳ್ಳುವದಕ್ಕೂ ಈ ಉಪಾಸನಾರೂಪವಾದ 'ಆಧಿದೈವಿಕವಿದ್ಯೆ'ಯು ಬೇಕಾಗುತ್ತದೆ.

ಆದರೆ ಇಷ್ಟುಮಾತ್ರದಿಂದ ವಿದ್ಯೆಯು ಪೂರ್ಣವಾಗುವದಿಲ್ಲ. ನಮ್ಮ ಲೌಕಿಕ ವ್ಯವಹಾರವಾಗಲಿ ಶಾಸ್ತ್ರೀಯವ್ಯವಹಾರವಾಗಲಿ, ಒಂದಾನೊಂದು ಅಜ್ಞಾನದ ಕ್ಷೇತ್ರದಲ್ಲಿಯೇ ನಡೆಯುತ್ತಿರುವದೆಂಬ ಘನತತ್ತ್ವವನ್ನು ಪುರಾತನರಾದ ಮಹರ್ಷಿಗಳು ಕಂಡುಹಿಡಿದಿರುತ್ತಾರೆ. ಆ ಅಜ್ಞಾನವೇ ಎಲ್ಲಾ ಅಜ್ಞಾನಗಳಿಗೂ ತಾಯಿಬೇರಾಗಿರುವ ಮೂಲಾಜ್ಞಾನವು. ಆ ಅಜ್ಞಾನದಿಂದಲೇ ನಾವು ಜ್ಞಾತೃಗಳು, ಕರ್ತೃಗಳು, ಭೋಕ್ತೃಗಳು–ಎಂಬ ತಿಳಿವಳಿಕೆಯು ನಮ್ಮಗಳಿಗೆ ಅನಾದಿಯಿಂದಲೂ ಬಂದಿರುವದೆಂದು ಬಲ್ಲವರ ಕಲ್ಪನೆಯಾಗಿರುತ್ತದೆ. ಈ ಅಜ್ಞಾನವು ಹೋಗುವದಕ್ಕೆ ಬೇಕಾದ ಜ್ಞಾನವು ಅಧ್ಯಾತ್ಮವಿದ್ಯೆಯಿಂದ ಬರುತ್ತದೆ. ನನ್ನ ನಿಜವಾದ ಸ್ವರೂಪವು ಯಾವದು, ಆ ನನ್ನ ಸ್ವರೂಪಕ್ಕೂ ಆಧಿಭೌತಿಕಪ್ರಪಂಚಕ್ಕೂ ಆಧಿದೈವಿಕಪ್ರಪಂಚಕ್ಕೂ ಸಂಬಂಧವೇನು?–ಎಂಬುದು ಅಧ್ಯಾತ್ಮವಿದ್ಯೆಯಿಂದ ತಿಳಿಯಬರುತ್ತದೆ. ಆ ವಿದ್ಯೆಯು ನಮಗೆ ಅಳವಟ್ಟಾಗ, ನಮ್ಮ ನಿಜವಾದ ಆತ್ಮನೇ ಇಡಿಯ ಪ್ರಪಂಚದ ಆತ್ಮನು; ಅವನೇ ಪರಮಾತ್ಮನು–ಎಂಬ ತಿಳಿವಳಿಕೆಯಾಗುವದು. ಆದ್ದರಿಂದ ಅದಕ್ಕೆ ಬ್ರಹ್ಮವಿದ್ಯೆಯೆಂದೂ ಹೆಸರು. ಆ ವಿದ್ಯೆಯು ಬಂದಾಗ ವಿದ್ಯೆಯು ಪೂರ್ಣವಾಗುವದು.

ಬ್ರಹ್ಮವಿದ್ಯೆಯು ಪೂರ್ಣವೆಂದು ಕರೆದಿರುವದರಿಂದ ಆಧಿದೈವಿಕವಿದ್ಯೆಯೂ ಭೌತಿಕ ವಿದ್ಯೆಯೂ ಅದರ ಅಂಶವಾಗಿರುವ ವಿದ್ಯೆ ಎಂದು ತಿಳಿಯಬಾರದು. ಏಕೆಂದರೆ ಬ್ರಹ್ಮವೆಂಬುದೇ ಪರಮಾರ್ಥವು, ಅದರಲ್ಲಿ ಮಿಕ್ಕದ್ದೆಲ್ಲವೂ ಕಲ್ಪಿತವಾಗಿದ್ದು ತತ್ಕಾಲಕ್ಕೆ ತೋರುತ್ತಿರುತ್ತದೆ ಎಂಬುದು ಬ್ರಹ್ಮಜ್ಞಾನಿಗಳ ಅಭಿಪ್ರಾಯವು. ಬ್ರಹ್ಮವನ್ನು ನಮ್ಮೆಲ್ಲರ ಆತ್ಮನೆಂದು ತಿಳಿದುಕೊಂಡರೆ, ಅದೊಂದೇ ಪರಮಾರ್ಥವೆಂದೂ ಗೊತ್ತಾಗಿಬಿಡುತ್ತದೆ. ಆಮೇಲೆ ಅರಿತುಕೊಳ್ಳಬೇಕಾದದ್ದು ಯಾವದೊಂದೂ ಉಳಿದಿರುವದೇ ಇಲ್ಲ; ಆಗ ಎಲ್ಲಾ ಬಗೆಯ ಅಜ್ಞಾನವೂ ಆತ್ಯಂತಿಕವಾಗಿ ಹೋಗಿಬಿಡುತ್ತದೆ. ಈ ಅರ್ಥದಲ್ಲಿಯೇ ಬ್ರಹ್ಮವಿದ್ಯೆಯು ಪೂರ್ಣವಿದ್ಯೆ. ಮಿಕ್ಕದ್ದೆಲ್ಲವೂ ವ್ಯವಹಾರದೃಷ್ಟಿಯಿಂದ ಮಾತ್ರವೇ ವಿದ್ಯೆಯೆನಿಸಿರುತ್ತದೆ.

**ಸಂ–27, 10**

****

# 2. ಅಧ್ಯಾತ್ಮದ ಮೊದಲ ಸೋಪಾನ

## ಸಂಧ್ಯಾವಂದನೆ

ವೇದೋಕ್ತ ಕರ್ಮಗಳಲ್ಲೆಲ್ಲ ಸಂಧ್ಯಾವಂದನೆಯು ಮೊದಲನೆಯದಾಗಿಯೂ ವೇದದಲ್ಲಿ ಹೇಳಿರುವ ಧರ್ಮದ ಸಾರವನ್ನೆಲ್ಲ ಒಳಗೊಂಡಿರುವದಾಗಿಯೂ ಇರುವದು. ಈಗಿನ ಬಹುಜನ ದ್ವಿಜರಲ್ಲಿ ಸಂಧ್ಯಾವಂದನೆಯೊಂದೇ ದ್ವಿಜತ್ವದ ಗುರುತಾಗಿ ನಿಂತಿರುವದು. ನಾವು ಸಾಯುವವರೆಗೂ ಪ್ರತಿದಿನವೂ ಆಚರಿಸುತ್ತಿರುವ ಈ ಕರ್ಮದ ಸ್ವರೂಪವನ್ನೂ ಇದರಲ್ಲಿರುವ ಮಂತ್ರಗಳ ಅರ್ಥವನ್ನೂ ಉಪೋದ್ಘಾತರೀತಿಯಿಂದ ಕೆಲವು ವಿಷಯಗಳನ್ನೂ ಸೂಚಿಸುವೆನು.

"ಸಂಧ್ಯಾವಂದನೆ" ಎಂಬ ಶಬ್ದವು ಈಚಿನದೆಂದು ತೋರುತ್ತಿದೆ. ಶ್ರುತಿಯಲ್ಲಿಯೂ ಸ್ಮೃತಿಯಲ್ಲಿಯೂ ಈ ಕರ್ಮಕ್ಕೆ "ಸಂಧ್ಯಾ" ಎಂಬ ಹೆಸರೇ ಕಂಡುಬರುತ್ತಿದೆ. "ದಿನದಿನವೂ ಸಂಧ್ಯೆಯನ್ನು ಉಪಾಸನೆ ಮಾಡಬೇಕು" ಎಂದು ಶ್ರುತಿವಾಕ್ಯವಿರುವದು. "ಯಾವನು ಸಂಧ್ಯೆಯನ್ನು ತಿಳಿಯನೋ ಯಾವನು ಸಂಧ್ಯೆಯನ್ನು ಉಪಾಸನೆ ಮಾಡಲಿಲ್ಲವೊ "ಅವನು ಬದುಕಿರುವಾಗಲೇ ಶೂದ್ರನಾಗಿ ಸತ್ತಮೇಲೆ ನಾಯಿಯಾಗಿ ಹುಟ್ಟುವನು" ಎಂದು ಗೋಭಿಲಸ್ಮೃತಿಯಲ್ಲಿ ಹೇಳಿರುವುದು. ಇವೆರಡು ಕಡೆಯಲ್ಲಿಯೂ ಸಂಧ್ಯೆ ಎಂಬುದು ಒಂದು ಕ್ರಿಯೆಯ ಹೆಸರೆಂಬುದು ಸ್ಪಷ್ಟವಾಗಿದೆ. ಆದರೆ ಈಚೆಗೆ ಸಂಧ್ಯಾವಂದನೆಯೆಂಬ ಹೆಸರು ಬಂದು ರೂಢಿಯಲ್ಲಿದೆ. ಇಲ್ಲಿ ಸಂಧ್ಯಾ ಎಂದರೆ ಈ ಕರ್ಮದಲ್ಲಿ ನಾವು ಉಪಾಸನೆಮಾಡುವ ದೇವತೆಯ ಹೆಸರು; ಇದಕ್ಕೂ ಒಂದು ಸ್ಮೃತಿಯ ಆಧಾರವಿರುವುದು. ವಸಿಷ್ಠಸ್ಮೃತಿಯಲ್ಲಿ ಹೇಳಿರುವದೇನೆಂದರೆ "ಸಂಧ್ಯೆಯೆಂದರೆ ಜಗತ್ತಿಗೆಲ್ಲ ಕಾರಣವಾಗಿರುವ ಮಾಯೆಗೆ ಅತೀತವಾಗಿರುವ ನಿಷ್ಕಲವಾದ ಈಶ್ವರಶಕ್ತಿ; ಈ ದೇವತೆಯನ್ನು ಸೂರ್ಯಮಂಡಲದಲ್ಲಿರುವಂತೆ ಧ್ಯಾನಮಾಡುತ್ತಾ ಗಾಯತ್ರೀ ಮಂತ್ರವನ್ನು ಜಪಿಸಬೇಕು". ಅಂತೂ ಸಂಧ್ಯಾವಂದನೆಯೆಂದರೆ ಗೊತ್ತಾದ ಕಾಲದಲ್ಲಿ ದ್ವಿಜರೆಲ್ಲರೂ ನಡೆಸುವ ಈಶ್ವರಧ್ಯಾನವೆಂದು ಸಿದ್ಧವಾಯಿತು.

ಸಂಧ್ಯಾವಂದನೆಯು ಬ್ರಾಹ್ಮಣನಿಗೆ ಏಳು ತುಂಬಿ ಎಂಟನೆಯ ವರ್ಷದಲ್ಲಿ ಪ್ರಾರಂಭವಾಗುವದು; ಕ್ಷತ್ರಿಯವೈಶ್ಯರಿಗೆ ಸ್ವಲ್ಪ ಹೆಚ್ಚು ಕಾಲದ ಮೇಲೆ ಪ್ರಾರಂಭಿಸುವುದು. ಅಂತೂ ಇದು ಚಿಕ್ಕ ವಯಸ್ಸಿನಲ್ಲಿ ಪ್ರಾರಂಭವಾಗುವ ಕರ್ಮವಷ್ಟೆ. ಆದ್ದರಿಂದಲೇ ಏನೋ, ಈಚೆಗೆ ಇದರ ಸಾರವನ್ನು ಅರಿಯದವರನೇಕರು ಇದನ್ನು ಹುಡುಗರಿಗೆ ಹೇಳಿದ ಸಾಮಾನ್ಯಕರ್ಮವೆಂದು ಭಾವಿಸಿ ಇದರಲ್ಲಿ ಉದಾಸೀನತೆಯನ್ನು ವಹಿಸಿರುವರು.

ಆದರೆ ಇದು ಸರಿಯಲ್ಲ; ಏಕೆಂದರೆ "ಯಾವನು ಸಂಧ್ಯೆಯನ್ನು ಆಚರಿಸಲಿಲ್ಲವೋ ಆತನು ಅಶುಚಿಯು, ಆತನು ಎಂದೂ ಯಾವ ಕರ್ಮಕ್ಕೂ ಯೋಗ್ಯನಾಗನು, ಬೇರೆಯ ಕರ್ಮವನ್ನನುಸರಿಸಿದರೂ ಅದರ ಫಲವೂ ಆತನಿಗೆ ದಕ್ಕಲಾರದು" ಎಂದು ದಕ್ಷ ಸ್ಮೃತಿಯಲ್ಲಿ ಹೇಳಿರುವದು. ಯಾವ ವ್ರತಾದಿ ಕಾಮ್ಯಕರ್ಮಗಳನ್ನು ಹೇಳಿದರೂ ಯಾವ ಉಪಾಸನಾದಿ ಚಿತ್ತಶುದ್ಧಿಯ ಸಾಧನೆಗಳನ್ನು ಹೇಳಿದರೂ ಮೊದಲು ವಿಧ್ಯುಕ್ತವಾದ ಸಂಧ್ಯೆ ಮೊದಲಾದ ಕರ್ಮಗಳನ್ನು ಆಚರಿಸಿ ಶುದ್ಧನಾಗಿ ಮುಂದಿನ ಕರ್ಮಕ್ಕೆ ಕೈ ಹಾಕಬೇಕೆಂದು ಶಾಸ್ತ್ರಕಾರರು ನಿಯಮಿಸಿರುವರು. ಇಷ್ಟು ಹೆಚ್ಚಿನ ಮಹಿಮೆಯು ಸಂಧ್ಯೆಯಲ್ಲಿ ಬರುವುದಕ್ಕೇನು ಕಾರಣ? ಇದನ್ನು ದ್ವಿಜರೆಲ್ಲರೂ ಯೋಚಿಸಬೇಕಾದದ್ದು. ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವ ಒಂದು ಆಖ್ಯಾಯಿಕೆಯನ್ನು ಇಲ್ಲಿ ನೆನಪು ಕೊಡಬೇಕಾಗಿದೆ. "ಕಶ್ಯಪಪ್ರಜಾಪತಿಯು ಲೋಕಗಳ ಸಾರವೇನೆಂದು ಚೆನ್ನಾಗಿ ಧ್ಯಾನಮಾಡಿ ನೋಡಲಾಗಿ ಮೂರು ವೇದಗಳು ಕಾಣಿಸಿಕೊಂಡವು. ಇವುಗಳ ಸಾರವೇನೆಂದು ಗ್ರಹಿಸಲು ಯತ್ನಿಸಲಾಗಿ ಭೂರಾದಿಯಾಗಿ ಮೂರು ವ್ಯಾಹೃತಿಗಳು ಹೊರಹೊಮ್ಮಿದವು, ಇವುಗಳ ಸಾರವೇನೆಂದು ನೋಡಲಾಗಿ ಓಂಕಾರವು ಹೊರಬಿತ್ತು. ಹೀಗೆ ಓಂಕಾರವೇ ಎಲ್ಲಾ ವಾಕ್ಪ್ರಪಂಚದಲ್ಲಿಯೂ ಎಲೆಯಲ್ಲಿ ಅದರ ನಾಳವೂ ಹೆಣೆದುಕೊಂಡಿರುವಂತೆ ಹೆಣೆದುಕೊಂಡಿರುವದು" ಎಂದು ಆ ಶ್ರುತಿಯ ವಚನವಿರುವದು. ಸಂಧ್ಯಾವಂದನೆಯ ಸಾರವಾದ ಗಾಯತ್ರಿಯಲ್ಲಿ ಈ ಲೋಕವೇದಗಳ ಸಾರವು ಅಡಗಿಕೊಂಡಿರುವದು. ಹೇಗೆ ಕೊಂಬೆರೆಂಬೆಗಳಾಗಿ ಒಡೆದುಕೊಂಡಿರುವ ವೃಕ್ಷಕ್ಕೆ ಬೇರೆಂಬುದು ಸಾರವೋ ಆ ಬೇರಿಗೂ ಬೀಜವೇ ಹೇಗೆ ಸಾರವೋ ಹಾಗೆ ವೈದಿಕ ವಿದ್ಯೆಯಲ್ಲಿ ಹೇಳಿರುವ ಪ್ರಪಂಚವೃಕ್ಷಕ್ಕೆಲ್ಲ ಗಾಯತ್ರಿಯು ಸಾರವಾಗಿರುವದು. ಬೀಜವನ್ನು ಹಾಕದೆ ಪೈರು ಕಾಣುವದು ಹೇಗೆ ದುರ್ಲಭವೋ ಹಾಗೆ ಅಧ್ಯಾತ್ಮವಿದ್ಯೆಗೆಲ್ಲ ಸಾರವಾಗಿ ವೇದದಲ್ಲಿ ಪ್ರತಿಪಾದಿಸುವ ಗಾಯತ್ರಿಯ ಉಪಾಸನೆಯನ್ನು ಮಾಡದೆ ಮಿಕ್ಕ ಕರ್ಮಗಳನ್ನು ಮಾಡುವದು ವೃಥಾಶ್ರಮವಾಗುವದು. ಆದ್ದರಿಂದ ಬೀಜವು ಸಣ್ಣದೆಂದು ಅನಾದರಣೆ ಮಾಡುವ ರೈತನು ಎಂಥ ಅವಿವೇಕಿಯೋ ಸಂಧ್ಯಾವಂದನೆಯು ಸಣ್ಣ ಕರ್ಮವೆಂದು ಕಡೆಗಣಿಸುವಾತನು ಅಂಥ ಅವಿವೇಕಿಯೆ ಆಗುವನೆಂದು ಅರಿಯಬೇಕು.

ಸಂಧ್ಯಾವಂದನೆಯು ಇಷ್ಟು ಮಹತ್ತ್ವದ ಕರ್ಮವಾಗಿರಲು ಮತ್ತೊಂದು ಕಾರಣವೂ ಉಂಟು. ಅದೇನೆಂದರೆ ಯೂನಿವರ್ಸಿಟಿಯೆಂಬ ಸಕಲವಿದ್ಯಾನಿಲಯ ಪ್ರವೇಶಕ್ಕೆ ಮೊದಲು ನಡೆಯುವ ಯೋಗ್ಯತಾನಿರ್ಣಯ ಪರೀಕ್ಷೆಗೆ, ಮುಂದೆ ವಿಸ್ತಾರವಾಗಿ ನಡೆಯಬೇಕಾದ ಪಾಠಗಳ ಸಾರವನ್ನು ತಿಳಿದಿರುವದವಶ್ಯವಾಗಿರುವದೆಂಬುದನ್ನು ನಮ್ಮಲ್ಲನೇಕರು ಬಲ್ಲೆವಲ್ಲವೆ? ಈ ಪರೀಕ್ಷೆಗೆ ಸ್ವಲ್ಪ ಗಣಿತ, ಸ್ವಲ್ಪ ಭೌತಿಕಶಾಸ್ತ್ರ, ಸ್ವಲ್ಪ

ಮಟ್ಟಿಗೆ ಪ್ರಪಂಚದ ವರ್ಣನೆ ಮತ್ತು ಇತಿಹಾಸ, ಸ್ವಲ್ಪಮಟ್ಟಿಗೆ ವ್ಯವಹಾರಮರ್ಮ- ಹೀಗೆ ಸಾರಗ್ರಹಣೆ ಮಾಡಿರಬೇಕೆಂಬ ನಿಯಮವನ್ನಿಟ್ಟಿರುವರು. ಆಯಾ ವಿಷಯವನ್ನು ಓದಿ ಅವುಗಳ ಸವಿಕಂಡವರು ಮುಂದೆ ತಮಗೆ ಯಾವ ವಿದ್ಯೆಯನ್ನು ಬಲಪಡಿಸಿ ಕೊಳ್ಳಬೇಕೆಂಬ ಆಸೆ ಹುಟ್ಟುವದೋ ಅದರಲ್ಲಿ ವಿಶೇಷ ವಿಸ್ತಾರವಾಗಿ ಓದಿಕೊಳ್ಳುವದಕ್ಕೆ ಯೂನಿವರ್ಸಿಟಿಯವರು ಅವಕಾಶ ಕಲ್ಪಿಸಿರುತ್ತಾರೆ. ಇದರಂತೆಯೇ ಸಂಧ್ಯಾವಂದನೆಯೂ ಅಧ್ಯಾತ್ಮವಿದ್ಯಾನಿಲಯಕ್ಕೆ ಪ್ರವೇಶಪರೀಕ್ಷೆಯಾಗಿರುವದು. ಇದರಲ್ಲಿ ಅಧ್ಯಾತ್ಮವಿದ್ಯೆಗೆ ಬೇಕಾದ ಸಾಧನೆಗಳು ಎಲ್ಲವೂ ಸ್ವಲ್ಪಸ್ವಲ್ಪವಾಗಿ ಅಡಕವಾಗಿರುವವು. ಅರ್ಥವನ್ನು ತಿಳಿದುಕೊಂಡು ಇದನ್ನು ಕೆಲಕಾಲ ಅನುಷ್ಠಾನ ಮಾಡಿದವರು ಮುಂದೆ ವಿಶೇಷವಾಗಿ ಆ ವಿದ್ಯೆಯ ಪ್ರಧಾನಭಾಗಗಳಲ್ಲಿ ವಿಶಾರದರಾಗಲು ಯತ್ನಿಸಬಹುದು. ಹೇಗೆಂದರೆ ಅಧ್ಯಾತ್ಮವಿದ್ಯೆಗೆ ಈ ಜಗತ್ತಿನಲ್ಲಿರುವ ಅಧಿಕಾರಿಗಳ ಮನಸ್ಸುಗಳನ್ನು ಸಾಮಾನ್ಯವಾಗಿ ನಾಲ್ಕು ಪಂಗಡಗಳಾಗಿ ವಿಂಗಡಿಸಬಹುದು. ಕೆಲವರಿಗೆ ಕೆಲಸದಲ್ಲಿ ಆದರ, ಕೆಲವರಿಗೆ ಜನರಲ್ಲಿ ಪ್ರೇಮವನ್ನು ಇಡುವ ಇಚ್ಛೆ, ಇನ್ನು ಕೆಲವರಿಗೆ ತಮ್ಮೊಳಗೆ ತಾವು ಧ್ಯಾನ ಮಾಡುತ್ತಿರಬೇಕೆಂಬ ಆಸೆ, ಮತ್ತೂ ಕೆಲವರಿಗೆ ತತ್ತ್ವವಿಚಾರದಲ್ಲಿ ಆಸಕ್ತಿ. ಈ ನಾಲ್ಕು ಬಗೆಯ ಅಧಿಕಾರಿಗಳಿಗೆ ತಕ್ಕಂತೆ ನಾಲ್ಕು ವಿಧವಾದ ಸಾಧನಗಳನ್ನು ನಮ್ಮ ಪೂರ್ವಜ ರಾದ ಋಷಿಗಳು ಕಲ್ಪಿಸಿರುತ್ತಾರೆ. ಕೆಲಸಕ್ಕಾಗಿ ಕೆಲಸ ಮಾಡುವವರಿಗೆ ಕರ್ಮಯೋಗ, ಪ್ರೇಮವೃತ್ತಿಯನ್ನು ಬೆಳೆಸುವವರಿಗೆ ಭಕ್ತಿಯೋಗ, ಭಾವನೆಯಲ್ಲಿ ಆಸಕ್ತಿಯಿರುವವರಿಗೆ ಧ್ಯಾನಯೋಗ, ವಿಚಾರದಲ್ಲಿಯೇ ನಿರತರಾಗಿರಬೇಕೆಂಬುವರಿಗೆ ಜ್ಞಾನಯೋಗ. ಈ ನಾಲ್ಕು ವಿಧವಾದ ಯೋಗಗಳೂ ಪ್ರಕೃತವಾದ ಸಂಧ್ಯೆಯಲ್ಲಿ ಬೀಜರೂಪವಾಗಿ ಇದ್ದು ಕೊಡಿರುತ್ತವೆ. ಉದಾಹರಣೆಗೆ ನೋಡಿ: ಆಚಮನ, ಮಾರ್ಜನ, ನಮಸ್ಕಾರ ಮುಂತಾದವು ಕರ್ಮಯೋಗದ ಬೀಜ; ಆಸನ ಪ್ರಾಣಾಯಾಮಗಳು ಧ್ಯಾನಯೋಗದ ಬೀಜ, ಕೇಶವಾದಿನಾಮಸ್ಮರಣೆ, ಕೊನೆಯಲ್ಲಿ ಹೇಳುವ ಪರಮಾತ್ಮ ಮಹಿಮಾವರ್ಣನ ರೂಪ ವಾದ ಪುರಾಣಶ್ಲೋಕಗಳು-ಇವು ಭಕ್ತಿಯೋಗದ ಬೀಜ; ಸಂಧ್ಯಾವಂದನೆಯ ಸಾರ ವಾಗಿರುವ ಗಾಯತ್ರಿಯು ಜ್ಞಾನಯೋಗದ ಬೀಜವು. ಹೀಗೆ ನಾಲ್ಕೂಯೋಗದ ಬೀಜವು ಈ ಸಂಧ್ಯಾವಂದನೆಯಲ್ಲಿರುವದೂ ಇದರ ಹೆಚ್ಚಿಗೆಗೆ ಒಂದು ಕಾರಣವಾಗಿರುವದು.

ಸಂಧ್ಯಾವಂದನೆಯಲ್ಲಿರುವ ಮತ್ತೊಂದು ಸ್ವಾರಸ್ಯವನ್ನು ಗಮನಿಸಿ. ಈ ಭೌತಿಕ ಪ್ರಪಂಚದಲ್ಲಿ ಕಾಣುವ ವೈಚಿತ್ರ್ಯಕ್ಕೆಲ್ಲ ಸೂರ್ಯನೇ ಮೂಲಸ್ಥಾನವೆಂಬುದು ಸಾಮಾನ್ಯ ರಿಗೂ ಕೂಡ ತಿಳಿದಿರುವ ಮಾತಷ್ಟೆ. ಸೂರ್ಯನೇ ನಮಗೆ ಬೆಳಕಿಗೂ ಔಷ್ಣ್ಯಕ್ಕೂ ಮೂಲಸ್ಥಾನನಾಗಿರುವನು. ಸೂರ್ಯನ ಬೆಳಕಿನಿಂದ ನಮ್ಮ ವ್ಯವಹಾರಗಳೆಲ್ಲ ಸಾಗುವವು. ಸೂರ್ಯನ ಔಷ್ಣ್ಯದಿಂದ ಜಗತ್ತಿನ ಸಸ್ಯವರ್ಗವೂ ಪ್ರಾಣಿವರ್ಗವೂ ಪೋಷಣದ್ರವ್ಯವನ್ನು

ಪಡೆಯುವದು. "ಜಗತ್ತಿಗೆಲ್ಲ ಕಣ್ಣು" ಎಂದು ಈ ಸೂರ್ಯನಿಗೆ ಶಾಸ್ತ್ರದಲ್ಲಿ ಬಂದಿರುವ ಹೆಸರು ಅನ್ವರ್ಥವಾಗಿರುವದು. ಇಂಥ ಪರಿಶುದ್ಧಪ್ರಚಂಡಪ್ರಕಾಶದ ಮಂಡಲವಾದ ಈ ಸೂರ್ಯನನ್ನು ಅಧ್ಯಾತ್ಮವಿದ್ಯೆಗೆಲ್ಲ ಧ್ಯೇಯವಾಗಿರುವ ಪರಬ್ರಹ್ಮಮೂರ್ತಿಯ ಚಿಹ್ನೆಯಾಗಿಯೂ ಸ್ಥಾನವಾಗಿಯೂ ಉಪದೇಶಮಾಡುವದು ಸಂಧ್ಯಾವಂದನೆಯ ಮುಖ್ಯೋದ್ದೇಶಗಳಲ್ಲಿ ಒಂದಾಗಿದೆ. ಲೋಕವಿಲಕ್ಷಣವಾಗಿ ಲೋಕಕ್ಕೆಲ್ಲ ಆಧಾರವಾಗಿ ಚೈತನ್ಯಪ್ರಕಾಶದಿಂದ ಕೂಡಿ ಸಮಸ್ತ ಜೀವರ ಬುದ್ಧಿಪ್ರೇರಣೆಯನ್ನೂ ಮಾಡುವ ಅನ್ತರ್ಯಾಮಿಯಾದ ಪರಮೇಶ್ವರನೇ ಸೂರ್ಯಮಂಡಲದಲ್ಲಿರುವ ನಾರಾಯಣ ಸ್ವಾಮಿಯೆಂದು ಈ ಕರ್ಮವು ನೆನಪು ಕೊಡುವದು. ಅನಾದಿಕಾಲದಿಂದಲೂ ಪ್ರಖ್ಯಾತ ವಾದ ಈ ವೈದಿಕಕರ್ಮದ ಮಹತ್ತ್ವವನ್ನು ವೇದವು ಹೀಗೆಂದು ಕೊಂಡಾಡಿರುವದು:

**ಶ್ರು॥ ಉದ್ಯನ್ತಮಸ್ತಂಯನ್ತಮಾದಿತ್ಯಮಭಿಧ್ಯಾಯನ್ ಕುರ್ವನ್ ಬ್ರಾಹ್ಮಣೋ ವಿದ್ವಾಂಥ್ಸಕಲಂ ಭದ್ರಮಶ್ನುತೇಽಸಾವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ॥**

–ತೈ. ಆ. 2–2

ಉದಯಿಸುತ್ತಲೂ ಅಸ್ತಮಿಸುತ್ತಲೂ ಇರುವ ಆದಿತ್ಯನನ್ನು ಧ್ಯಾನಮಾಡುತ್ತಾ ಕರ್ಮಮಾಡುವ ಬ್ರಾಹ್ಮಣನು ತತ್ತ್ವವನ್ನು ತಿಳಿದು ಸಕಲವಾದ ಮಂಗಲವನ್ನೂ ಪಡೆಯುವನು. ಈ ಆದಿತ್ಯನೇ ಬ್ರಹ್ಮನು, ಹೀಗೆಂದು ಯಾವನು ತಿಳಿಯುವನೋ ಆತನು ಮೊದಲೇ ಬ್ರಹ್ಮವಾಗಿದ್ದು ಬ್ರಹ್ಮದಲ್ಲಿಯೇ ಸೇರಿಕೊಳ್ಳುವನು. **ಸಂ–1, 30**

## ಮಾರ್ಜನೆಯ ಮಂತ್ರ

ಸಂಧ್ಯಾವಂದನೆಯಲ್ಲಿ ಮಾರ್ಜನೆ, ಅರ್ಘ್ಯಪ್ರದಾನ, ಗಾಯತ್ರೀಜಪ, ಉಪಸ್ಥಾನ– ಇವೇ ಮುಖ್ಯವಾದ ಮಂತ್ರಗಳು. ಇವುಗಳ ಅಭಿಪ್ರಾಯವನ್ನು ಮನಗಂಡು ಈ ಕರ್ಮವನ್ನು ಮಾಡುವವರಿಗೆ ಇದರ ಪೂರ್ಣಫಲವು ದೊರೆಯುವದು. ಸಂಧ್ಯಾ ವಂದನೆಯನ್ನು ಮಾಡದಿರುವ ವರ್ಣಕ್ಕೆ ಸೇರಿದವರಿಗೂ ಈ ಮಂತ್ರದ ಅಭಿಪ್ರಾಯವನ್ನು ತಿಳಿದುಕೊಳ್ಳುವದರಿಂದ ಎಷ್ಟೋ ಪ್ರಯೋಜನವುಂಟು.

ಮಾರ್ಜನೆಯೆಂದರೆ ತೊಳೆಯುವದೆಂದರ್ಥ. ಈ ಮಂತ್ರಗಳನ್ನು ಉಚ್ಚರಿಸುತ್ತಾ ಮಂತ್ರಾರ್ಥವನ್ನು ಮನಸ್ಸಿನಲ್ಲಿ ತಂದುಕೊಂಡು ಮಂತ್ರಪೂತವಾದ ಜಲವನ್ನು ಪ್ರೋಕ್ಷಣ ಮಾಡಿಕೊಳ್ಳುವದರಿಂದ ಪ್ರತಿದಿನವೂ ದೇಹಶುದ್ಧಿಯಾಗುವದರಿಂದ ಈ ಸಂಸ್ಕಾರ ವನ್ನುಂಟುಮಾಡುವ ಇವುಗಳಿಗೆ ಮಾರ್ಜನೆಯ ಮಂತ್ರಗಳೆಂಬ ಹೆಸರು ಬಳಕೆಯಲ್ಲಿದೆ.

ಇವುಗಳೊಳಗೆ "ಆಪೋಹಿಷ್ಠಾ" ಎಂಬ ಮಂತ್ರವು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ–ಈ ನಾಲ್ಕರಲ್ಲಿಯೂ ಇರುವದು. ಈ ಮಂತ್ರದ

ತಾತ್ಪರ್ಯವೇನೆಂದರೆ: "ಎಲೈ ನೀರುಗಳೆ, ನೀವು ಸುಖಕ್ಕೆ ಕಾರಣವಾಗಿರುವಿರಿ. ನಮಗೆ ಅನ್ನವನ್ನು ಕೊಡಿರಿ, ಹೆಚ್ಚಿನ ರಮಣೀಯವಾದ ಜ್ಞಾನವನ್ನು ಕೊಡಿರಿ. ನಿಮ್ಮಲ್ಲಿರುವ ಆನಂದಕರವಾದ ರಸವನ್ನು ಪ್ರೇಮವುಳ್ಳ ತಾಯಿಯರು ಮಕ್ಕಳನ್ನು ಸ್ತನ್ಯಪಾನವನ್ನು ಕೊಟ್ಟು ಕಾಪಾಡುವಂತೆ, ನಮಗೆ ದೊರಕಿಸಿರಿ. ಯಾವ ರಸದಲ್ಲಿರುವದರಿಂದ ನೀವು ಪರಮಾನಂದಭರಿತರಾಗಿರುವಿರೋ, ಆ ರಸಕ್ಕಾಗಿ ನಿಮ್ಮನ್ನು ಆದರಪೂರ್ವಕವಾಗಿ ಸಮೀಪಿಸಿರುವೆವು. ಎಲೈ ನೀರುಗಳೆ, ನಮ್ಮನ್ನು ವಂಶವರ್ಧಕರನ್ನಾಗಿ ಮಾಡಿರಿ."

ಜಡವಾದ ನೀರನ್ನು ಪ್ರಾರ್ಥಿಸುವದರಿಂದ ಯಾವ ಪ್ರಯೋಜನವೂ ಸಿದ್ಧಿಸುವದಿಲ್ಲ-ವಾದಕಾರಣ ನೀರೆಂಬ ಉಪಾಧಿಯಿಂದ ಕೂಡಿದ ಪರಮಾತ್ಮನನ್ನೇ ಈ ಮಂತ್ರದಲ್ಲಿ ಪ್ರಾರ್ಥಿಸಿರುತ್ತದೆಯೆಂದರಿಯಬೇಕು. ಪರಮಾತ್ಮನು ಸರ್ವವ್ಯಾಪಿಯೆಂದು ವೇದದಲ್ಲಿ ಎಷ್ಟೋ ಕಡೆಗಳಲ್ಲಿ ತಿಳಿಸಿರುತ್ತದೆಯಷ್ಟೆ; ಅಂಥ ಪರಮಾತ್ಮನ ಅನುಗ್ರಹದಿಂದಲೇ ನಮಗೆ ಸುಖವು ದೊರಕಬೇಕು. ನಾವು ತಿನ್ನುವ ಆಹಾರವು ಪ್ರಾಣ, ಬಲ, ತಪಸ್ಸು, ಶ್ರದ್ಧಾ, ಮೇಧಾ-ಮುಂತಾದವುಗಳ ವೃದ್ಧಿಯ ಕ್ರಮದಿಂದ ಉತ್ತಮವಾದ ಜ್ಞಾನಕ್ಕೆ ಕಾರಣವಾಗಬೇಕಾದರೆ ಆತನ ಅನುಗ್ರಹವೇ ಬೇಕು. ಲೋಕದಲ್ಲೆಲ್ಲ ನೀರು ಇರುವದು; ಅದನ್ನು ಉಪಯೋಗಿಸುವದರಿಂದ ಪರಮಾತ್ಮನ ಹೊರಮಯ್ಯೇ ಅದೆಂದು ನಾವು ತಿಳಿದಿದ್ದರೂ ತಿಳಿಯದಿದ್ದರೂ ಅದರಿಂದಾಗುವಷ್ಟು ಪ್ರಯೋಜನವು ಆಗಿಯೇ ಆಗುವದು. ಆದರೆ ದೇಹದಲ್ಲಿಯೂ ಮನಸ್ಸಿನಲ್ಲಿಯೂ ಶುದ್ಧಭಾವನೆಯನ್ನು ತಂದುಕೊಂಡು "ಪರಮಾತ್ಮನೆ, ನೀನೇ ಈ ಬ್ರಹ್ಮಾಂಡಕ್ಕೆಲ್ಲ ರಸಸ್ವರೂಪನು, ನೀನೇ ಈ ಬ್ರಹ್ಮಾಂಡದಲ್ಲಿರುವ ಸವಿಯು, ನಿನ್ನ ಸ್ವರೂಪದ ಸವಿಯನ್ನು ನಮಗೆ ಹತ್ತಿಸು; ಹೊರಗಿನ ಅಶುಚಿಯಾದ ಯೋಚನೆಗಳ ಸವಿಯನ್ನು ಬಿಡಿಸು; ಮಕ್ಕಳಿಗೆ ಪ್ರೇಮದಿಂದ ಎದೆಯ ಹಾಲನ್ನು ಕೊಟ್ಟು ಪುಷ್ಟಿಗೂ ಮುಂದಿನ ಬೆಳೆವಣಿಗೆಗೂ ಕಾರಣವಾಗುವ ತಾಯಿಯರಂತೆ ನೀನು ನಮ್ಮನ್ನು ನಿನ್ನ ಆನಂದರಸದ ಸವಿಯನ್ನು ಕೊಟ್ಟು ಕಾಪಾಡ ಬೇಕು; ನಾವೆಲ್ಲರೂ ಮಕ್ಕಳು, ನೀನು ನಮ್ಮೆಲ್ಲರ ತಾಯಿಯು" ಎಂದು ಭಗವದ್ಭಾವನೆ ಯಿಂದ ಮಂತ್ರಪೂತವಾದ ನೀರನ್ನು ನಮ್ಮ ಮೇಲೆ ನಾವು ಚಿಮುಕಿಸಿಕೊಳ್ಳುವಾಗ ನಮ್ಮ ಮನಸ್ಸಿನ ಸ್ಥಿತಿಯು ಹೇಗಿರಬೇಕು! ಅದನ್ನು ಅನುಭವದಿಂದಲೇ ತಿಳಿಯಬೇಕಲ್ಲದೆ ಮಾತಿನಿಂದ ವರ್ಣಿಸುವದಕ್ಕೆ ಎಂದಿಗೂ ಬರುವಹಾಗಿಲ್ಲ. ಈ ಮನಸ್ಸಿನ ಸ್ಥಿತಿಯನ್ನು ತಂದುಕೊಡುವದೇ "ಆಪೋಹಿಷ್ಠಾ" ಎಂಬ ಮಾರ್ಜನಮಂತ್ರದ ಪ್ರಯೋಜನವು.

ಈ ಮಂತ್ರದಲ್ಲಿರುವ ಮಾತುಗಳ ಅಕ್ಷರಾರ್ಥದ ಕಡೆಗೇ ಲಕ್ಷ್ಯವನ್ನಿಟ್ಟು "ಹಿಂದುಗಳು ಬಲು ಪುರಾತನಕಾಲದಲ್ಲಿ "ಪರಮಾತ್ಮನು ಒಬ್ಬನೇ" ಎಂಬ ತಿಳಿವಳಿಕೆಯಿಲ್ಲದವ ರಾಗಿದ್ದರು. ಆಗ ನೀರು, ಬೆಂಕಿ, ಗಾಳಿ-ಮುಂತಾದ ಪ್ರಪಂಚದ ಭೌತಿಕಭಾಗಗಳನ್ನೇ

ಅವುಗಳಲ್ಲಿರುವ ಶಕ್ತಿವಿಶೇಷವನ್ನು ಗುರಿಯಲ್ಲಿಟ್ಟು ದೇವರೆಂದು ಭಾವಿಸುತ್ತಿದ್ದರು. ಆ ಕಾಲದಲ್ಲಿ ಪಂಚಭೂತಗಳನ್ನೇ ಅವರು ಭಕ್ತಿಯಿಂದ ಪೂಜಿಸುತ್ತಿದ್ದರು; ಈಚೆಗೆ ನಾಗರಿಕರಲ್ಲಿ ಉಂಟಾಗಿರುವ ಏಕೇಶ್ವರಮತಕ್ಕೂ ಅವರ ಮತಕ್ಕೂ ಬಹಳ ತಾರತಮ್ಯವುಂಟು" ಎಂದು ಕೆಲವರು ಅನ್ನುತ್ತಿರುವರು. ಇದು ಶುದ್ಧವಾಗಿಯೂ ತಪ್ಪುಭಾವನೆಯು. ಗ್ರೀಸ್ ಮುಂತಾದ ಕೆಲವು ಪಾಶ್ಚಾತ್ಯದೇಶಗಳಲ್ಲಿ ಪಂಚಭೂತಗಳಿಗೆ ಜಗತ್ಕಾರಣತ್ವವನ್ನು ಹೇಳುವ ತತ್ತ್ವವಾದಿಗಳು ಇದ್ದರು; ಆದ್ದರಿಂದ ಆ ದೇಶದ ಜನರು ಮೊದಮೊದಲು ಪಂಚಭೂತಗಳನ್ನೇ ಪೂಜಿಸುತ್ತಿದ್ದರೇನೋ ಎಂದು ಸಂದೇಹಪಡು ವದಕ್ಕೂ ಅವಕಾಶವಿದೆ. ಆದರೆ ನಮ್ಮ ದೇಶದಲ್ಲಿ ಹಾಗಲ್ಲ. ಪರಮಾತ್ಮನನ್ನು ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ಉಪಾಧಿಗಳ ಮೂಲಕವಾಗಿ ಉಪಾಸನೆ ಮಾಡುವದು ಬಹು ಪುರಾತನಕಾಲದಿಂದಲೂ ನಮ್ಮ ಪೂರ್ವಿಕರ ಪದ್ಧತಿಯು. "ಆ ಪರಮಾತ್ಮನ ಮಹಿಮೆ ಯನ್ನು ಹಿಮವತ್ಪರ್ವತವು ಹೊಗಳುತ್ತಿರುವದು" ಎಂದು ಋಗ್ವೇದದ ಒಂದು ಮಂತ್ರದಲ್ಲಿ ಹೇಳಿರುವದು ಕಂಡುಬಂದಿದೆ. ಅದಿರಲಿ, ಪ್ರಕೃತದಲ್ಲಿ ನೀರಿಗೆ ಸಂಸ್ಕೃತದಲ್ಲಿ "ಆಪಃ" ಎಂದು ಹೆಸರಾಗಿರುವದರಿಂದ ಸರ್ವವ್ಯಾಪಿಯಾದ ಭಗವಂತನನ್ನು "ಆಪಃ" ಎಂಬ ಹೆಸರಿನಿಂದ ಋಷಿಗಳು ಕರೆದಿರುತ್ತಾರೆಂದು ತಿಳಿಯಬೇಕು. "ಆಪ್ನುವನ್ತೀತಿ ಆಪಃ" (ವ್ಯಾಪಿಸಿರುವದರಿಂದ "ಆಪಃ" ಎಂದು ಹೆಸರು) ಎಂಬುದು ಈ ಶಬ್ದದ ವ್ಯುತ್ಪತ್ತಿಯು. ಇದೇ ಸರಿಯಾದ ಅಭಿಪ್ರಾಯವೆಂಬುದಕ್ಕೆ ಈ ಕೆಳಗಿನ ಮಂತ್ರವೂ ಸಾಕ್ಷಿಯಾಗಿರುವದು:

**ಆಪೋ ವಾ ಇದಂ ಸರ್ವಂ ವಿಶ್ವಾ ಭೂತಾನ್ಯಾಪಃ ಪ್ರಾಣಾ ವಾ ಆಪಃ ಪಶವ ಆಪೋಽನ್ನಮಾಪೋಽಮೃತಮಾಪಃ ಸಮ್ರಾಡಾಪೋ ವಿರಾಡಾಪಃ ಸ್ವರಾಡಾಪಶ್ಛನ್ದಾಂ-ಸ್ಯಾಪೋ ಜ್ಯೋತೀಂಷ್ಯಾಪೋ ಯಜೂಂಷ್ಯಾಪಃ ಸತ್ಯಮಾಪಃ ಸರ್ವಾ ದೇವತಾ ಆಪೋ ಭೂರ್ಭುವಃ ಸುವರಾಪ ಓಮ್ ॥** —ತೈ. ಮಹಾ. 29–47

ಅರ್ಥ: "ಇದೆಲ್ಲವೂ ನೀರೇ. ಸಮಸ್ತ ಭೂತಗಳೂ ನೀರೇ; ಪ್ರಾಣಗಳೂ ನೀರೇ; ಪಶುಗಳೂ ನೀರೇ; ಅನ್ನವೂ ನೀರು; ಅಮೃತವೂ ನೀರು; ಸಮ್ರಾಜನೂ [ಸ್ಥೂಲಪ್ರಪಂಚ ವೆಂಬ ಉಪಾಧಿಯಿಂದ ಪರಮಾತ್ಮನಿಗೆ ವಿರಾಜನೆಂದೂ ಸೂಕ್ಷ್ಮಪ್ರಪಂಚವೆಂಬ ಉಪಾಧಿಯಿಂದ ಸ್ವರಾಜನೆಂದೂ ಅವ್ಯಾಕೃತವಾದ ಕಾರಣಪ್ರಪಂಚವೆಂಬ ಉಪಾಧಿಯಿಂದ ಸಂರಾಜನೆಂದೂ ಹೆಸರಾಗಿರುವವು.] ನೀರು, ವಿರಾಜನೂ ನೀರು, ಸ್ವರಾಜನೂ ನೀರು; ವೇದಛಂದಸ್ಸುಗಳೆಲ್ಲ ನೀರು; ನಕ್ಷತ್ರಗಳೆಲ್ಲ ನೀರು; ಯಜುಸ್ಸುಗಳೂ ನೀರು; ಸತ್ಯವೂ ನೀರು; ದೇವತೆಗಳೆಲ್ಲರೂ ನೀರು; ಭೂಲೋಕವೂ ಭುವರ್ಲೋಕವೂ ಸುವರ್ಲೋಕವೂ ನೀರು; ನೀರೇ ಓಂಕಾರದಿಂದ ಹೇಳಲ್ಪಡುವ ಪರಮಾತ್ಮನು."

ಸರ್ವವ್ಯಾಪಿಯಾದ ಪರಮಾತ್ಮನಿಗೆ "ಆಪಃ" ಎಂದು ಹೆಸರಿಟ್ಟಿದೆಯೆಂದೂ "ಆಪಃ" ಎಂದರೆ ನೀರೆಂದು ರೂಢಿಯ ಅರ್ಥವಾದ್ದರಿಂದ ನೀರಿನ ಉಪಾಧಿಯ ಮೂಲಕ ಪರಮಾತ್ಮನನ್ನೇ "ಆಪಃ" ಎಂಬ ಹೆಸರಿನಿಂದ ಕರೆದು ಈ ಮಾರ್ಜನಮಂತ್ರದಲ್ಲಿ ಪ್ರಾರ್ಥನೆಮಾಡಿರುತ್ತದೆಯೆಂದೂ ಇದರಿಂದ ಸ್ಪಷ್ಟವಾಗುವದಿಲ್ಲವೆ? **ಸಂ-3, 136**

## ತೀರ್ಥಸ್ನಾನ

ಒಂದಾನೊಂದು ಕಾಲದಲ್ಲಿ ಧರ್ಮರಾಯನು ಭೀಷ್ಮರನ್ನು ಈ ಪ್ರಶ್ನೆಯನ್ನು ಮಾಡಿದನು: "ಎಲೈ ಪಿತಾಮಹನೆ, ತೀರ್ಥಗಳಲ್ಲೆಲ್ಲ ಹೆಚ್ಚಿನದು ಯಾವದು? ಯಾವ ತೀರ್ಥದಲ್ಲಿ ಮಿಂದವನು ಅತ್ಯಂತವಾಗಿ ಶುದ್ಧನಾಗುವನು? ಇದನ್ನು ನನಗೆ ಹೇಳಿಕೊಡಬೇಕು."

ಇದಕ್ಕೆ ಭೀಷ್ಮರು ಹೇಳಿದ ಉತ್ತರವೇನೆಂದರೆ: "ಅಯ್ಯ, ಧರ್ಮರಾಯನೆ, ತಿಳಿದಾತನಿಗೆ ಎಲ್ಲಾ ತೀರ್ಥಗಳಲ್ಲಿಯೂ ಗುಣವಿರುವದು. ಆದರೆ ಯಾವದು ತೀರ್ಥವೆನಿಸುವದು, ಯಾವದು ಶುಚಿತ್ವವೆನಿಸುವದು-ಎಂಬುದನ್ನು ತಿಳಿಯಹೇಳುತ್ತೇನೆ, ಚಿತ್ತವಿಟ್ಟು ಕೇಳು. ಮನುಷ್ಯನು ಯಾವಾಗಲೂ ಸತ್ತ್ವಗುಣವನ್ನವಲಂಬಿಸಿಕೊಂಡು, ಆಳವಾಗಿಯೂ ನಿರ್ಮಲವಾಗಿಯೂ ಶುದ್ಧವಾಗಿಯೂ ಇರುವ ಸತ್ಯವೆಂಬ ನೀರಿನಿಂದ ಕೂಡಿರುವ ಧೃತಿಯೆಂಬ ಮಡುವಿನಲ್ಲಿ ಸ್ನಾನಮಾಡಬೇಕು. ಇದೊಂದು ಮಾನಸತೀರ್ಥವು. ಯಾವದೊಂದನ್ನೂ ಬಯಸದಿರುವದು, ಸರಳತನದಿಂದಿರುವದು, ಸತ್ಯದಿಂದಲೂ ಮೃದುತ್ವದಿಂದಲೂ ಕೂಡಿರುವದು, ಯಾವ ಪ್ರಾಣಿಯನ್ನೂ ಹಿಂಸೆಮಾಡದಿರುವದು, ದಯೆಗೂಡಿರುವದು, ದಮ, ಶಮ-ಇವುಗಳೆಲ್ಲವೂ ತೀರ್ಥಶೌಚವೆನಿಸುವದು.

"ನಾನುನನ್ನದೆಂಬ ಅಭಿಮಾನವಿಲ್ಲದೆ ಶೀತೋಷ್ಣಗಳನ್ನು ಸಹಿಸಿಕೊಂಡು, ರಾಗದ್ವೇಷಾದಿಗಳಿಗೆ ಈಡಾಗದೆ, ನನ್ನದೆಂಬ ಮೋಹದ ಆಸ್ತಿಯನ್ನು ಕೂಡಿಹಾಕಿಕೊಳ್ಳದೆ ಯಾವಾಗಲೂ ಶುಚಿಯಾಗಿದ್ದುಕೊಂಡು ಭಿಕ್ಷಾವೃತ್ತಿಯಿಂದ ಜೀವಿಸುವವರು ಯಾವಾಗಲೂ ತೀರ್ಥಸ್ವರೂಪರೇ. ಅವರನ್ನು ಸೇವಿಸುವದರಿಂದ ಮನುಷ್ಯನು ಶುದ್ಧನಾಗುವನು.

"ತತ್ತ್ವವನ್ನು ತಾನು ತಿಳಿದಿದ್ದರೂ ಅಹಂಕಾರವಿಲ್ಲದಿರುವದೆಂಬುದು ಹೆಚ್ಚಿನ ತೀರ್ಥವು; ಚೆನ್ನಾಗಿ ನೋಡಿದರೆ ಶುಚಿತ್ವಕ್ಕೆ ಇದೇ ಹೆಗ್ಗುರುತೆಂದು ನಿನಗೆ ಮನವರಿಕೆಯಾಗುವದು. ಸತ್ತ್ವ, ರಜಸ್ಸು, ತಮಸ್ಸು-ಎಂಬ ಮೂರು ಗುಣಗಳ ಮಲವನ್ನು ನೀಗಿ, ಮಡಿಮೈಲಿಗೆಗಳೆರಡರಲ್ಲಿಯೂ ಸಮಬುದ್ಧಿಯುಳ್ಳವರಾಗಿ, ತಾವು ಮಾಡತಕ್ಕದ್ದೇನೆಂಬುದನ್ನೇ ಹುಡುಕುತ್ತಿರುವವರಾಗಿಯೂ ಎಲ್ಲವನ್ನೂ ತ್ಯಾಗಮಾಡುವದರಲ್ಲಿ ಪ್ರೀತಿಯುಳ್ಳವರಾಗಿ

ಸರ್ವಜ್ಞರಾಗಿ ಎಲ್ಲೆಲ್ಲಿಯೂ ಸಮಬುದ್ಧಿಯುಳ್ಳವರಾಗಿಯೂ ನಡತೆಯ ಶುದ್ಧಿಯೇ ಮುಖ್ಯವಾದದ್ದೆಂದು ಯಾರು ಬಗೆದಂದಿರುವರೋ ಅವರೇ ಶುದ್ಧತೀರ್ಥಸ್ವರೂಪ ರಾಗಿರುತ್ತಾರೆ. ಅಂಥವರ ಸೇವೆಯನ್ನು ಮಾಡಿದಾತನು ತಾನೂ ಶುದ್ಧನಾಗುವನು".

"ನೀರಿನಿಂದ ಮೈಯನ್ನು ಒದ್ದೆಮಾಡಿಕೊಂಡ ಮಾತ್ರದಿಂದ ಸ್ನಾನ ಮಾಡಿದವನಾಗು ವದಿಲ್ಲ; ಯಾವನು ಇಂದ್ರಿಯನಿಗ್ರಹದಿಂದ ಸ್ನಾನಮಾಡಿರುವನೋ ಅವನೇ ನಿಜವಾಗಿ ಸ್ನಾನಮಾಡಿದವನು, ಅವನೇ ಒಳಗೂ ಹೊರಗೂ ಮಡಿಯಾಗಿರುವನು, ಕಳೆದು ಹೋದದ್ದರಲ್ಲಿ ಹಂಬಲಿಕೆಯಿಲ್ಲದೆ, ಬಂದೊದಗಿದ್ದರಲ್ಲಿ ತಮ್ಮದೆಂಬ ಅಭಿಮಾನವಿಲ್ಲದೆ, ನಿಸ್ಪೃಹರಾಗಿಯೇ ಯಾರು ಇರಬಲ್ಲರೋ ಅವರೇ ಪರಮಶುದ್ಧರು."

"ಶರೀರವು ಮಡಿಯಾಗಬೇಕಾದರೆ ಪ್ರಜ್ಞಾನವೇ ಮೊದಲನೆಯ ಕಾರಣವು, ತನ್ನ ದೆಂಬುದಿಲ್ಲದಿರುವದು ಎರಡನೆಯದು, ಮನಸ್ಸು ಪ್ರಸನ್ನವಾಗಿರುವದು ಮೂರನೆಯದು. ನಡತೆಯಲ್ಲಿ ಶುದ್ಧನಾಗಿರಬೇಕು. ಮನಸ್ಸಿನಲ್ಲಿ ಶುದ್ಧನಾಗಿರಬೇಕು. ಆಮೇಲೆ ಮಾಡಿದ ತೀರ್ಥಸ್ನಾನವೇ ಮಡಿಯನ್ನುಂಟುಮಾಡುವದು. ಜ್ಞಾನದಿಂದ ಉಂಟಾಗಿರುವ ಶುದ್ಧಿಯು ಎಲ್ಲಕ್ಕೂ ಹೆಚ್ಚಿನದು. ಮನಸ್ಸಿನಲ್ಲಿ ಬೆಳಕುಂಟಾಗಿ ಬ್ರಹ್ಮಜ್ಞಾನವೆಂಬ ಜಲದ ಮಾನಸತೀರ್ಥದಲ್ಲಿ ಯಾವನು ಮಿಂದಿರುವನೋ ಆ ತತ್ತ್ವದರ್ಶಿಯ ಸ್ನಾನವೇ ನಿಜವಾದ ಸ್ನಾನವು. ಮುಖ್ಯವಾಗಿ ಭಾವಶುದ್ಧಿಯಿರಬೇಕು. ಭಾವದಿಂದ ಮಡಿ ಯಾಗಿರುವನು ಯಾವಾಗಲೂ ಮಡಿಯಾಗಿರುವನೆಂದು ತಿಳಿಯಬೇಕು".

"ಇದುವರೆಗೆ ಶರೀರದೊಳಗಡೆಯ ತೀರ್ಥಗಳ ವಿಚಾರವನ್ನು ಹೇಳಿದೆನು. ಶರೀರ ದೊಳಗೆ ನಾನು ಹೇಳಿದ ಶಮದಮಪ್ರಜ್ಞಾನವೇ ಮುಂತಾದವುಗಳು ಹೇಗೆ ಶುದ್ಧಿಯನ್ನುಂಟುಮಾಡುವವೋ ಅದರಂತೆ ಈ ಭೂಮಿಯ ಕೆಲವು ಭಾಗಗಳೂ ಪುಣ್ಯಜಲಗಳೂ ಶುದ್ಧಿಕರವಾಗಿರುವವು. ತೀರ್ಥದ ನಾಮಕೀರ್ತನೆಮಾಡುವದು, ಅದರಲ್ಲಿ ಸ್ನಾನಮಾಡುವದು, ಪಿತೃಗಳಿಗೆ ಅವುಗಳ ನೀರಿನಿಂದ ತರ್ಪಣವನ್ನು ಕೊಡುವದು– ಈ ಸಾಧನಗಳಿಂದ ಪಾಪವನ್ನು ಕಳೆದುಕೊಳ್ಳುವವರು ಉತ್ತಮಗತಿಯನ್ನೈದುವರು. ಸಾಧುಗಳು ಸೇವಿಸಿರುವದರಿಂದಲೂ ಪೃಥ್ವಿಯ ಭಾಗದ ವಿಶೇಷಗುಣದಿಂದಲೂ ಆಯಾ ತೀರ್ಥಗಳು ಪುಣ್ಯತೀರ್ಥಗಳೆನಿಸಿರುವವು."

"ಯಾವನು ನಾನು ಹೇಳಿರುವ ಮಾನಸತೀರ್ಥಗಳಲ್ಲಿಯೂ ಬಾಹ್ಯ ತೀರ್ಥ ಗಳಲ್ಲಿಯೂ ಭಕ್ತಿಯಿಂದ ಸ್ನಾನಮಾಡುವನೋ ಅವನಿಗೆ ಬೇಗ ಸಿದ್ಧಿಯಾಗುವದು. ಕೆಲಸಮಾಡದೆ ಬರಿಯ ಬಲವಿದ್ದಮಾತ್ರದಿಂದ ಹೇಗೆ ಪ್ರಯೋಜನವಿಲ್ಲವೋ ಹಾಗೆ ಬಲವಿಲ್ಲದೆ ಕೆಲಸಮಾಡುವದೂ ನಿಷ್ಪ್ರಯೋಜನವಷ್ಟೆ; ಬಲಕ್ರಿಯೆಗಳೆರಡೂ ಒಂದ

ಕ್ಕೊಂದು ಸಹಾಯಮಾಡುತ್ತಾ ಕಾರ್ಯಸಿದ್ಧಿಯನ್ನು ಮಾಡಿಕೊಡುವವಲ್ಲವೆ? ಇದರಂತೆ ನಮ್ಮೊಳಗಿನ ಮಾನಸತೀರ್ಥಗಳಲ್ಲಿ ಮಿಂದು ಹೊರಗಿನ ತೀರ್ಥಗಳಲ್ಲಿಯೂ ಮಿಂದಾತನು ಎಲ್ಲಾ ಬಗೆಯಿಂದಲೂ ಶುದ್ಧನಾಗಿ ಪರಮಸಿದ್ಧಿಯನ್ನು ಪಡೆಯುತ್ತಾನೆ".

ವಾಚಕರೆ, ಇಂದು ನಮ್ಮಗಳಲ್ಲನೇಕರಿಗೆ ತೀರ್ಥಾದಿಯಾತ್ರೆಗಳನ್ನು ಕಾಲುನಡಗೆಯಲ್ಲಿ ಮಾಡುವ ಉತ್ಸಾಹವೂ ಶಕ್ತಿಯೂ ಕಡಿಮೆಯಾಗಿಬಿಟ್ಟಿರುವವು; ರೈಲು, ಮೋಟಾರು-ಮುಂತಾದ ಸಾಧನಗಳಿಂದ ಬೇಗನೆ ಹೋಗಿ ಬರುವದು ಬಡವರಿಗೆ ದಕ್ಕುವ ಹಾಗೂ ಇಲ್ಲ, ತೀರ್ಥಯಾತ್ರೆಯು ಆ ಕ್ರಮದಲ್ಲಿ ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಆಗುವ ಸಂಭವವೂ ಇಲ್ಲ. ಎಷ್ಟೋ ತೀರ್ಥಗಳಲ್ಲಿ ತೀರ್ಥದ ಕಾಗೆಗಳೆಂಬ ಬಿರುದನ್ನು ಪಡೆದಿರುವ "ಪಂಡ" (ಪುರೋಹಿತ)ರ ಕಾಟವು ಬೇರೆ ನಮ್ಮ ಶ್ರದ್ಧೆಗೆ ಅಡ್ಡಬರುತ್ತಿರುವದು. ಆದರೆ ಮಾನಸತೀರ್ಥಗಳಿಗೆ ಯಾವ ಅಡ್ಡಿಯೂ ಇಲ್ಲ, ಯಾವ ಹಣಕಾಸಿನ ನಿರೀಕ್ಷಣೆಯೂ ಇಲ್ಲ; ಮನಸ್ಸೊಂದು ಬಂದರೆ ಅವುಗಳಲ್ಲಿ ಮಿಂದು ಮಡಿಯಾಗುವದು ನಮ್ಮೆಲ್ಲರಿಗೂ ಶಕ್ಯವಿದೆ. ಆ ತೀರ್ಥಗಳಲ್ಲಿ ಸ್ನಾನಮಾಡಿ ಹತ್ತಿರದಲ್ಲಿ ನಮಗೆ ಸಿಕ್ಕಬಹುದಾದ ನದೀ ಸರೋವರಗಳಲ್ಲಿಯೇ ತೀರ್ಥಭಾವನೆಯಿಂದ ಸ್ನಾನಮಾಡುವ ಕೆಲಸವನ್ನು ನಾವೇಕೆ ಕೈಕೊಳ್ಳಬಾರದು?

**ಮನೋ ನಿವೃತ್ತಿಃ ಪರಮೋಪಶಾನ್ತಿಃ ಸಾ ತೀರ್ಥವರ್ಯಾ ಮಣಿಕರ್ಣಿಕಾ ಚ । ಜ್ಞಾನ-ಪ್ರವಾಹಾ ವಿಮಲಾದಿಗಂಗಾ ಸಾ ಕಾಶಿಕಾಹಂ ನಿಜಬೋಧರೂಪಾ ॥**- ಮನಸ್ಸು ವಿಷಯಗಳಿಂದ ಹಿಮ್ಮೆಟ್ಟಿ ಯಾವದೊಂದನ್ನೂ ನೆನೆಯದೆ ಹೆಚ್ಚಿನ ಉಪಶಾಂತಿಯನ್ನು ಪಡೆಯುವದೇ ಮಣಿಕರ್ಣಿಕೆಯೆಂಬ ಶ್ರೇಷ್ಠ ತೀರ್ಥವು; ಅದೇ ಜ್ಞಾನವೆಂಬ ಪ್ರವಾಹದ ನಿರ್ಮಲವಾದ ಆದಿಗಂಗೆಯು. ಆದ್ದರಿಂದ ಆತ್ಮಚೈತನ್ಯರೂಪವೆಂದು ಪ್ರಸಿದ್ಧವಾದ ನಾನೇ ಕಾಶಿಯು (ಕಾಶೀಪಂಚಕ). **ಸಂ-4, 90**

## ಮಂತ್ರಾಚಮನ

ಸಂಧ್ಯಾವಂದನೆಯಲ್ಲಿ ದೇಹದ ಶುದ್ಧಿಗಾಗಿಯೂ ಮನಸ್ಸಿನ ಶುದ್ಧಿಗಾಗಿಯೂ ಕೆಲವು ಮಂತ್ರಗಳನ್ನು ಉಪಯೋಗಿಸುವದು ರೂಢಿಯಲ್ಲಿದೆಯಷ್ಟೆ. ಇವುಗಳಲ್ಲಿ ದೇಹಶುದ್ಧಿಗಾಗಿ ಉಪಯೋಗಿಸುವ ಮಂತ್ರಗಳಿಗೆ ಮಾರ್ಜನೆಯ ಮಂತ್ರಗಳೆಂದೂ ಮನಃಶುದ್ಧಿಗಾಗಿ ಉಪಯೋಗಿಸುವ ಮಂತ್ರಗಳಿಗೆ ಜಲಪಾನಮಂತ್ರಗಳೆಂದೂ ಹೆಸರು. ಜಲಪಾನ ಮಂತ್ರಗಳನ್ನು ಹೇಳಿಕೊಂಡು ಅವುಗಳ ಅರ್ಥದ ಭಾವನೆಯಿಂದ ಪವಿತ್ರವಾದ ನೀರನ್ನು ಕುಡಿಯುವದನ್ನು "ಮಂತ್ರಾಚಮನ"ವೆನ್ನುವರು.

ಸಾಯಂಕಾಲದಲ್ಲಿ "ಅಗ್ನಿಶ್ಚ ಮಾಮನ್ಯುಶ್ಚ" ಎಂಬ ಮಂತ್ರವನ್ನೂ ಬೆಳಗ್ಗೆ "ಸೂರ್ಯಶ್ಚ ಮಾ ಮನ್ಯುಶ್ಚ" ಎಂಬ ಮಂತ್ರವನ್ನೂ ಮಧ್ಯಾಹ್ನದಲ್ಲಿ "ಆಪಃ ಪುನನ್ತು ಪೃಥಿವೀಮ್" ಎಂಬ ಮಂತ್ರವನ್ನೂ ಉಪಯೋಗಿಸುತ್ತಾರೆ. ಈ ಮಂತ್ರಗಳೆಲ್ಲ ತೈತ್ತಿರೀಯಾರಣ್ಯಕದಲ್ಲಿರುತ್ತವೆ. –ತೈ.ಆ.ಮಹಾ.30, 31, 32, 48, 49, 50ನೇ ಅನುವಾಕ

ಸಾಯಂಕಾಲದ (ಸಾಯಂಕಾಲದ ಮಂತ್ರಕ್ಕೂ ಬೆಳಗಿನ ಮಂತ್ರಕ್ಕೂ ಅಷ್ಟೇನೂ ಹೆಚ್ಚುಕಡಿಮೆಯಿಲ್ಲ. "ಅಗ್ನಿ" ಎಂಬುದಕ್ಕೆ ಸೂರ್ಯ, "ಯದಹ್ನಾ" ಎಂಬುದಕ್ಕೆ "ಯದ್ರಾತ್ರಿಯಾ", "ಅಹಃ" ಎಂಬುದಕ್ಕೆ "ರಾತ್ರಿಃ", "ಸತ್ಯೇ" ಎಂಬುದಕ್ಕೆ "ಸೂರ್ಯೇ"– ಹೀಗೆ ಬೇರೆ ಮಾತುಗಳು ಬಂದಿರುತ್ತವೆ. ಆದ್ದರಿಂದ ಸಾಯಂಕಾಲದ ಮಂತ್ರದ ಅರ್ಥದ ವಿಚಾರದಿಂದಲೇ ಬೆಳಗಿನ ಮಂತ್ರಕ್ಕೆ ತಾತ್ಪರ್ಯವೇನೆಂಬುದನ್ನೂ ವಾಚಕರು ಸುಲಭವಾಗಿ ಗೊತ್ತುಪಡಿಸಿಕೊಳ್ಳಬಹುದಾಗಿರುತ್ತದೆ.) ಮಂತ್ರದ ಅಕ್ಷರಾರ್ಥವೇನೆಂದರೆ: "ಅಗ್ನಿಯೂ ಮನ್ಯುವೂ ಮನ್ಯುಪತಿಗಳೂ, ಸಿಟ್ಟಿನಿಂದ ನಾನು ಮಾಡಿದ ಪಾಪಗಳಿಂದ ನನ್ನನ್ನು ಬಿಡುಗಡೆಮಾಡಿ ಕಾಪಾಡಲಿ. ಹಗಲುಹೊತ್ತಿನಲ್ಲಿ ಮನಸ್ಸಿನಿಂದಲೂ ವಾಕ್ಕಿನಿಂದಲೂ ಕೈಗಳಿಂದಲೂ ಕಾಲುಗಳಿಂದಲೂ ಹೊಟ್ಟೆಯಿಂದಲೂ ಶಿಶ್ನದಿಂದಲೂ ಯಾವ ಪಾಪವನ್ನು ಮಾಡಿರುವೆನೋ, ಹಗಲು ಅದನ್ನು ನಾಶಗೊಳಿಸಲಿ. ಇದಲ್ಲದೆ ನನ್ನಿಂದ ಇನ್ನೂ ಯಾವ ಪಾಪವಾಗಿರುವದೋ ಇದನ್ನೂ ನನ್ನನ್ನೂ ಅಮೃತಯೋನಿಯಾದ ಸತ್ಯಜ್ಯೋತಿಯಲ್ಲಿ ಹೋಮಮಾಡುವೆನು; ಇದು ಸರಿಯಾಗಿ ಹೋಮಮಾಡಿದ್ದಾಗಲಿ."

ಇಲ್ಲಿ "ಅಗ್ನಿ", "ಮನ್ಯು", "ಮನ್ಯುಪತಿಗಳು", "ಅಹಸ್ಸು"–ಎಂಬಿವು ದೇವತೆಗಳ ಹೆಸರು. ಪರಮಾತ್ಮನು ತೋರಿಕೊಳ್ಳುವ ಬಗೆಬಗೆಯ ವಿಭೂತಿಗಳಾದ ಈ ಅಗ್ನಿಯೇ ಮುಂತಾದವುಗಳ ಮೂಲಕ ಪರಮಾತ್ಮನನ್ನೇ ಇಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇವೆಂಬುದನ್ನು ಉಪಾಸಕನು ನೆನಪಿನಲ್ಲಿಟ್ಟರೆ ವೇದದಲ್ಲಿ ಬರುವ ದೇವತಾವಾಚಿಗಳಾದ ಶಬ್ದಗಳ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳುವದರಲ್ಲಿ ಯಾವ ತೊಡಕೂ ಉಂಟಾಗುವದಿಲ್ಲ. ಇದಿರಲಿ, ಅಗ್ನಿ ಎಂದರೆ ರಾತ್ರಿಯಲ್ಲಿ ತೋರಿಕೊಳ್ಳುವ ಎಲ್ಲಾ ಬಗೆಯ ಬೆಳಕಿನ ಅಭಿಮಾನಿದೇವತೆ; ಮನ್ಯು ಎಂದರೆ ಸಿಟ್ಟಿನ ಅಭಿಮಾನಿದೇವತೆ; ಮನ್ಯುಪತಿಗಳು ಎಂದರೆ ರಾಗದ್ವೇಷಗಳೇ ಮುಂತಾದ ಭಾವಗಳ ಅಭಿಮಾನಿದೇವತೆಗಳು, ಅಹಸ್ಸೆಂದರೆ ಹಗಲಿಗೆ ಅಭಿಮಾನಿಯಾದ ದೇವತೆ–ಇವರೆಲ್ಲರೂ, ಎಂದರೆ ಈ ರೂಪದಲ್ಲಿ ತೋರಿಕೊಳ್ಳುತ್ತಿರುವ ಪರಮಾತ್ಮನು, ನನ್ನ ಪಾಪವನ್ನು ತೊಲಗಿಸಲಿ–ಎಂಬುದು ಒಟ್ಟು ತಾತ್ಪರ್ಯ.

"ಸಿಟ್ಟಿನಿಂದ ನಾನು ಮಾಡಿದ ಪಾಪಗಳು" ಎಂಬುದರ ಅರ್ಥವನ್ನು ಇಲ್ಲಿ ಸ್ವಲ್ಪ ವಿವೇಚನೆಮಾಡುವದು ಅವಶ್ಯವು. ಮೂಲದಲ್ಲಿರುವ "ಮನ್ಯು" ಎಂಬ ಮಾತಿಗೆ ಕೋಪ,

ಶೋಕ-ಎಂಬ ಎರಡು ಅರ್ಥಗಳೂ ಉಂಟು. ಮನುಷ್ಯನು ಮಾಡುವ ಪಾಪಗಳಿಗೆಲ್ಲ ಅಹಂಕಾರವೇ ಮೂಲವು, ಅವನು ತನ್ನ ಕಾಮವು ಪರಿಪೂರ್ತಿಯಾದರೆ ಉಬ್ಬುತ್ತಾನೆ; ಇಲ್ಲದಿದ್ದರೆ ಸಿಟ್ಟಾಗುತ್ತಾನೆ, ಸಿಟ್ಟು ನಡೆಯದಿದ್ದರೆ ಅಳುತ್ತಾನೆ. ಹೀಗೆ ಕಾಮವೊಂದೇ ಆಯಾ ಸಂದರ್ಭಕ್ಕೆ ತಕ್ಕಂತೆ ಕ್ರೋಧ, ಲೋಭ, ಮದ, ಮಾತ್ಸರ್ಯ, ಶೋಕ-ಮುಂತಾದ ರೂಪಗಳನ್ನು ತೆಗೆದುಕೊಳ್ಳುತ್ತಾಹೋಗುತ್ತದೆ. ಈ ಎಲ್ಲಾ ಪಾಪಭಾವನೆಗಳ ಒಟ್ಟನ್ನೇ ಇಲ್ಲಿ ಮನ್ಯುವೆಂದು ಕರೆದಿದೆ. ಪರಮಾತ್ಮನನ್ನು ಶರಣುಹೊಕ್ಕರೆ ಈ ಭಾವನೆಗಳ ಬಿಕ್ಕಟ್ಟನ್ನು ಬಿಡಿಸಿಕೊಂಡು ಪಾರಾಗಬಹುದು, ಇಲ್ಲದಿದ್ದರೆ ಇವುಗಳ ಹಿಡಿತಕ್ಕೆ ಸಿಕ್ಕಿಬಿದ್ದು ಅಸುರಸಂಪತ್ತಿನ ಸಂಸಾರದಲ್ಲಿ ಬಿದ್ದು ನರಳಬೇಕಾಗುವದು.

ಮನ್ಯುವಿಗೆ ವಶನಾದ ಮನುಷ್ಯನು ಏನೇನು ಪಾಪವನ್ನು ಮಾಡುವನು? ಮನಸ್ಸಿನಲ್ಲಿ ಮತ್ತೊಬ್ಬರ ವಿಷಯದಲ್ಲಿ ಕೆಟ್ಟದ್ದನ್ನು ಆಲೋಚಿಸುವನು; ಮಾತಿನಲ್ಲಿ ಮತ್ತೊಬ್ಬರಿಗೆ ನೋವಾಗುವ ಸುಳ್ಳುಮಾತುಗಳನ್ನು ಕೇಳುವದಕ್ಕೆ ಕಠೋರವಾಗಿರುವಂತೆ ಆಡುತ್ತಿರುವನು; ಕೈಯಿಂದ ಹೊಡೆಯುವದು ಬಡಿಯುವದು ಮುಂತಾದ ರೂಪಗಳಲ್ಲಿ ಪ್ರಾಣಿಗಳನ್ನು ಪೀಡಿಸುವನು; ಕಾಲುಗಳಿಂದ ದೊಡ್ಡವರನ್ನು ಕೂಡ ಒದೆಯುವದಕ್ಕೆ ಹೋಗುವನು; ತಿನ್ನಬಾರದ್ದನ್ನು ತಿನ್ನುವದು, ಕುಡಿಯಬಾರದ್ದನ್ನು ಕುಡಿಯುವದು, ಯೋಗ್ಯವಾದದ್ದನ್ನಾದರೂ ಮಿತಿಮೀರಿ ತಿನ್ನುವದು, ಮಿತಿಮೀರಿ ಕುಡಿಯುವದು-ಹೀಗೆಲ್ಲ ಮಾಡುತ್ತಾ ಹೊಟ್ಟೆಬಾಕನಾಗುವನು; ಸ್ತ್ರೀಸಂಗಾದಿಗಳಲ್ಲಿಯೂ ನೀತಿಯ ಮೇರೆಯನ್ನು ದಾಟಿ ನಡೆಯುವನು. ಇದೆಲ್ಲ ನಾಶವಾಗಬೇಕಾದರೆ, ಈ ಕೃತ್ಯಗಳಿಗೆಲ್ಲ ಮೂಲವಾದ ಮನ್ಯುವನ್ನೇ ಗೆಲ್ಲಬೇಕು; ಇದಕ್ಕೆ ಮನ್ಯುವಿಗೆಲ್ಲ ಒಡೆಯನಾದ ಪರಮಾತ್ಮನನ್ನೇ ಶರಣುಹೋಗಬೇಕು.

ಪಾಪಗಳು ಇಷ್ಟೆಂಬ ಲೆಕ್ಕವಿಲ್ಲ; ಇಂಥಿಂಥ ಪಾಪಗಳನ್ನು ನಾನು ಮಾಡಿದ್ದೇನೆಂದು ಮನುಷ್ಯನು ಅವುಗಳನ್ನು ಗೊತ್ತುಹಚ್ಚುತ್ತಾ ಕೂರುವದಕ್ಕೂ ಆಗುವದಿಲ್ಲ. ಆದರೆ ಯಾವಯಾವ ಪಾಪವನ್ನು ನಾನು ಅರಿತೋ ಅರಿಯದೆಯೋ ಮಾಡಿರುವೆನೋ ಅದೆಲ್ಲವನ್ನೂ ಬಿಡುಗಡೆಮಾಡಿಸಲೆಂದು ಪರಮೇಶ್ವರನಲ್ಲಿ ಮೊರೆಯಿಟ್ಟರೆ ಅವುಗಳೆಲ್ಲಕ್ಕೂ ಶುದ್ಧಿಯಾದಂತಾಯಿತು. ಏಕೆಂದರೆ ಅಂತಃಕರಣದಲ್ಲಿರುವ ಮನ್ಯುವೊಂದು ಹೋದರೆ ಸಕಲಪಾಪಗಳೂ ಹೋದಂತೆಯೇ. ಈ ಮನ್ಯುವೇ ಸಕಲ ಪಾಪಗಳಿಗೂ ಬೀಜವಾಗಿದೆ.

ಪರಮಾತ್ಮನು "ಅಮೃತಯೋನಿಯು", ಎಂದರೆ ನಾಶರಹಿತನಾದ ಜಗತ್ಕಾರಣನು; ನಾಶರಹಿತವಾದ ಮೋಕ್ಷಸ್ವರೂಪಕ್ಕೂ ಕಾರಣನು. ಆತನ ಭಾವನೆಯನ್ನು ಬಲವಾಗಿ ಮನಸ್ಸಿಗೆ ತಂದುಕೊಂಡು "ಹೇ ಭಗವಂತ, 'ನಾನು' ಎಂಬ ವ್ಯಕ್ತಿಭಾವನೆಯನ್ನು ನನ್ನಲ್ಲಿರಗೊಡಬೇಡ. ಈ 'ನಾನು' ಎಂಬ ಭಾವನೆಯಿಂದ ಬಗೆಬಗೆಯ ಪಾಪಗಳನ್ನು

ಆಚರಿಸಿ ಬಳಲಿರುತ್ತೇನೆ; ಈ 'ನಾನು' ಎಂಬುದನ್ನೇ ಒಂದು ಹೋಮದ್ರವ್ಯವಾಗಿಮಾಡಿ ಪರಮಾರ್ಥಸತ್ಯನಾದ ನಿನ್ನನ್ನು ಅಗ್ನಿಯಾಗಿ ಮಾಡಿಕೊಂಡು ಇಗೋ ನನ್ನನ್ನು ನಿನ್ನಲ್ಲಿ ಹೋಮಮಾಡಿರುತ್ತೇನೆ. "ಇನ್ನು ಮೇಲೆ ನಿನಗಿಂತ ಬೇರೆಯಾಗಿ ಈ ನಾನೆಂಬ ವ್ಯಕ್ತಿಭಾವನೆಯು ಹೊರತೋರದಂತೆ ಸುಟ್ಟು ಬೂದಿಮಾಡಿಬಿಡು!" ಎಂದು ಭಾವಿಸಿದರೆ ಸಕಲ ಪಾಪಗಳಿಗೂ ಪ್ರಾಯಶ್ಚಿತ್ತವಾಯಿತೆಂದು ಮತ್ತೆ ಹೇಳುವದು ಅವಶ್ಯವಾದೀತೆ?
ಸಂ-4, 209

ಮಧ್ಯಾಹ್ನದಲ್ಲಿ ಉಪಯೋಗಿಸುವ "ಆಪಃ ಪುನನ್ತು ಪೃಥಿವೀಮ್" ಎಂಬ ಮಂತ್ರದ ಅಕ್ಷರಾರ್ಥವು ಹೀಗಾಗುವದು: "ನೀರುಗಳು ಭೂಮಿಯನ್ನು ಪರಿಶುದ್ಧಿಗೊಳಿಸಲಿ; ಹೀಗೆ ಪರಿಶುದ್ಧಗೊಂಡ ಭೂಮಿಯು ನನ್ನನ್ನು ಪರಿಶುದ್ಧಿಗೊಳಿಸಲಿ, ವೇದಾಚಾರ್ಯನನ್ನು ಪರಿಶುದ್ಧಿಗೊಳಿಸಲಿ; ವೇದವು ಪವಿತ್ರವಾಗಿ ನನ್ನನ್ನು ಪವಿತ್ರಗೊಳಿಸಲಿ. ಉಚ್ಛಿಷ್ಟ, ಅಭೋಜ್ಯ-ಇವುಗಳನ್ನು ಉಂಡ ಮತ್ತು ಮತ್ತೆ ಯಾವದಾದರೂ ದುರಾಚಾರವನ್ನು ಮಾಡಿದ, ದೋಷವನ್ನೆಲ್ಲವನ್ನೂ ಬಿಡುಗಡೆಮಾಡಿಸಿ ನನ್ನನ್ನು ಶುದ್ಧಿಗೊಳಿಸಲಿ, ಮತ್ತು ಕೆಟ್ಟವರಿಂದ ದಾನವನ್ನು ತೆಗೆದುಕೊಂಡ ದೋಷವನ್ನೂ ಪರಿಹರಿಸಿ ಶುದ್ಧಿಗೊಳಿಸಲಿ. ಇದು ಸರಿಯಾದ ಹೋಮವಾಗಲಿ."

ಈ ಮಂತ್ರದಲ್ಲಿ ಮೂರು ಭಾಗಗಳಿರುವವು. ಭೂಮಿಯು ನನ್ನನ್ನು ಶುದ್ಧಿಗೊಳಿಸಲೆಂದು ಪ್ರಾರ್ಥಿಸುವದು ಮೊದಲನೆಯ ಭಾಗ; ವೇದವು ನನ್ನನ್ನು ಶುದ್ಧಿಗೊಳಿಸಲೆಂದು ಪ್ರಾರ್ಥಿಸುವದು ಎರಡನೆಯ ಭಾಗ; ಆಹಾರದೋಷವೂ ದುರಾಚಾರವೂ ಬಿಡುಗಡೆಯಾಗಲೆಂದು ಪ್ರಾರ್ಥಿಸುವದು ಮೂರನೆಯ ಭಾಗ. ಈ ಮೂರಕ್ಕೂ ಪವಿತ್ರಕಾರಣವಾದದ್ದು ನೀರೆ. ಇಲ್ಲಿ ನೀರೆಂದರೆ (ನೀರೆಂಬ ಉಪಾಧಿಯ ಮೂಲಕ ಸರ್ವವ್ಯಾಪಿಯಾದ ಪರಮಾತ್ಮನನ್ನೇ ಪ್ರಾರ್ಥನೆಮಾಡಿರುತ್ತದೆ) ಪರಮಾತ್ಮನ ಉಪಾಧಿಯಾಗಿರುವ ಪರಿಶುದ್ಧವಸ್ತುವೆಂಬರ್ಥವನ್ನೇ ಇಟ್ಟುಕೊಳ್ಳಬೇಕು.

ಭೂಮಿಯ ಮೇಲೆ ಚೆನ್ನಾಗಿ ಮಳೆಬಿದ್ದು, ಎಲ್ಲೆಲ್ಲೂ ಶುದ್ಧಿಯಾಗಲೆಂಬುದು ಮೊದಲನೆಯ ಹಾರೈಕೆಯು. ಭೂಮಿಯು ಶುದ್ಧವಾಗಿರಬೇಕು, ಅದರ ಮೇಲೆ ಶುದ್ಧವಾದ ನೀರು ಹರಿಯುತ್ತಿರಬೇಕು; ಇಂಥ ಶುದ್ಧವಾದ ನೀರಿನಲ್ಲಿಯೇ ಸಂಧ್ಯಾವಂದನೆಯನ್ನು ಮಾಡಬೇಕು-ಎಂದು ವಿಧಿಯಿದೆ. ಹಿಂದೆ ಋಷಿಗಳು ನದಿಯ ದಂಡೆಗಳಲ್ಲಿರುವ ಬಯಲುಗಳಲ್ಲಿಯೇ ವಾಸಮಾಡಿಕೊಂಡು ಇದ್ದದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಶುದ್ಧವಾದ ಗಾಳಿ, ಶುದ್ಧವಾದ ನೆಲ, ಶುದ್ಧವಾದ ನೀರು-ಇವು ಮೂರೂ ಮನಶ್ಶುದ್ಧಿಗೂ ಮನಶ್ಶಾಂತಿಗೂ ಕಾರಣವಾಗುವವು. ಈಗಿನ ಕಾಲದಲ್ಲಿ ಋಷಿಗಳ ಹಾಗೆ ದೇಶಕೋಶವನ್ನು ಬಿಟ್ಟು ನಾವು ದೂರವಾಗಿ ಬಯಲುಗಳಲ್ಲಿ

ಪರ್ಣಶಾಲೆಯನ್ನು ಕಟ್ಟಿಕೊಂಡು ಇರುವದು ಸಾಧ್ಯವಲ್ಲವಾದರೂ ನಾವು ವಾಸವಾಗಿರುವ ಮನೆಯ ಒಳಗೂ ಹೊರಗೂ ನೆಲವನ್ನು ಚೊಕ್ಕಟವಾಗಿ ಗುಡಿಸಿಟ್ಟುಕೊಳ್ಳುವದು, ಬೀದಿಯಲ್ಲಿ ಸಿಕ್ಕಿದ ಕಡೆ ಕಸವನ್ನು ಹಾಕದಿರುವದು-ಇವೆರಡೂ ಈಗಲೂ ಸಾಧ್ಯವಾಗಿವೆ. ಜಲ ಸಮೃದ್ಧಿಯಿರುವಂತೆ ಪ್ರತಿಯೊಬ್ಬನೂ ಮಾಡಿಕೊಳ್ಳುವದಕ್ಕೆ ಆಗದಿದ್ದರೂ ಊರಿನಲ್ಲವರೆಲ್ಲರೂ ಸೇರಿ ಪ್ರಯತ್ನಮಾಡಿದರೆ ಅಲ್ಲಲ್ಲಿ ಕೆರೆ, ಕಟ್ಟೆ, ಭಾವಿಗಳನ್ನು ಮಾಡಿಕೊಂಡು ಅವುಗಳನ್ನು ಶುಚಿಯಾಗಿಟ್ಟುಕೊಳ್ಳುವದಕ್ಕೆ ಪ್ರಯತ್ನಮಾಡುವದು ಕಷ್ಟವಲ್ಲ. ಇದು ಹೇಗೇ ಇರಲಿ; ದ್ವಿಜನಾದವನು, ಅದರಲ್ಲಿಯೂ ಬ್ರಾಹ್ಮಣನೆನಿಸಿಕೊಂಡವನು, ತಾನಿರುವ ಸ್ಥಳವೆಲ್ಲವೂ ಶುಚಿಯಾಗಿ ಪವಿತ್ರವಾಗಿ ತನಗೂ ತನ್ನ ನೆರೆಯವರಿಗೂ ಮನಶ್ಶಾಂತಿಯಾಗುವದಕ್ಕೆ ಸಹಾಯಕವಾಗಿರಬೇಕೆಂಬುದನ್ನು ಪ್ರತಿಯೊಂದು ದಿನವೂ ಮಾಧ್ಯಾಹ್ನಿಕವನ್ನು ಮಾಡುವಾಗ ನೆನಪಿಗೆ ತಂದುಕೊಳ್ಳುವದು ಅತ್ಯವಶ್ಯವು.

ವೇದವನ್ನು ಹೇಳುವ ಆಚಾರ್ಯನೂ ಅದನ್ನು ಕಲಿಯುವ ಶಿಷ್ಯನೂ ಪರಿಶುದ್ಧ ರಾಗಿದ್ದುಕೊಂಡಿರಬೇಕೆಂಬುದು ಎರಡನೆಯ ಹಾರೈಕೆಯು. ಹೊರಗೆ ಸ್ಥಳಶುದ್ಧಿ, ದೇಹಶುದ್ಧಿ-ಇವುಗಳಿಂದ ಕೂಡಿರುವವರು ಮಾಡುವ ವೇದಶಾಸ್ತ್ರಗಳ ಅಭ್ಯಾಸವು ಮನಸ್ಸಿಗೂ ಶುದ್ಧಿಯನ್ನು ಕೊಡುವದು, ಅದಕ್ಕೆ ವೀರ್ಯವೂ ಬರುವದು. ಅಂಥ ವಿದ್ಯಾಭ್ಯಾಸವೇ ಮುಂದೆ ವ್ಯವಹಾರದಲ್ಲಿ ತನಗೂ ಲೋಕಕ್ಕೂ ಕಲ್ಯಾಣವನ್ನುಂಟು ಮಾಡುವದು. ನಮ್ಮ ಗುರುಗಳು ತಾವೂ ಶುದ್ಧಾಚಾರದಲ್ಲಿದ್ದುಕೊಂಡು ಶುದ್ಧಮನಸ್ಸಿನಿಂದ ನನಗೆ ವೇದಾಭ್ಯಾಸವನ್ನು ಮಾಡಿಸಲಿ, ನಾನೂ ಸ್ನಾನಾದಿಗಳಿಂದ ಶುದ್ಧನಾಗಿ ಶುದ್ಧಮನಸ್ಸಿನಿಂದ ಕಲಿತು ಅದರಿಂದ ಪವಿತ್ರನಾಗುವಂತೆ ಆಗಲಿ-ಎಂಬುದು ಎರಡನೆಯ ಭಾಗದ ಭಾವಾರ್ಥವು. ತಾನೂ ವೇದಶಾಸ್ತ್ರಗಳನ್ನು ಕಲಿಯುವದು, ಮತ್ತೊಬ್ಬರಿಗೂ ಕಲಿಸುವದು-ಇವೆರಡೂ ಬ್ರಾಹ್ಮಣನ ಧರ್ಮಗಳಲ್ಲಿ ಬಹುಮುಖ್ಯವಾದವು. ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಜ್ಞಾನಾರ್ಜನೆಯನ್ನು ಮಾಡಬೇಕು, ಇತರರಿಗೆ ಕಲಿಸಬೇಕು. ಇದೇ ಬ್ರಾಹ್ಮಣನ ಗುರಿಯಾಗಿರಬೇಕೆಂಬುದನ್ನು ಈ ಮಂತ್ರವು ನೆನಪುಕೊಡುತ್ತದೆ.

ಮನುಷ್ಯನು ಎಂಥ ಆಚಾರವನ್ನಿಟ್ಟುಕೊಂಡಿರುವನೋ ಅಂಥ ಮನಸ್ಸು ಅವನಿಗೆ ಬರುವದು. ಶುಚಿಯಗಿರುವದಕ್ಕೂ ಜ್ಞಾನಾರ್ಜನೆಯಲ್ಲಿ ಆಸಕ್ತಿಯುಂಟಾಗುವದಕ್ಕೂ ಅನುಕೂಲವಾಗುವದು ಸದಾಚಾರ. ಆಹಾರವು ಶುದ್ಧವಾಗಿದ್ದರೆ ಅದು ಜೀರ್ಣವಾಗಿ ದೇಹಕ್ಕಂಟಿದ ಮೇಲೆ ಅದಕ್ಕೆ ತಕ್ಕ ಶುದ್ಧವಾಸನೆಗಳೇ ಉಂಟಾಗುವವು. ಅಯೋಗ್ಯವಾದ ಆಹಾರವನ್ನುಣ್ಣುವದು, ಕುಡಿಯಬಾರದ್ದನ್ನು ಕುಡಿಯುವದು, ತಿನ್ನಬಾರದ್ದನ್ನು ತಿನ್ನುವದು, ಮಾಡಬಾರದ್ದನ್ನು ಮಾಡುವದು-ಮುಂತಾದ ದುಶ್ಚರಿತಗಳನ್ನು ಬಿಟ್ಟು ಸದಾಚಾರದಲ್ಲಿ ನಿರತನಾದವನಿಗೇ ಒಳ್ಳೆಯಬುದ್ಧಿಯು ಹುಟ್ಟುವದು. ಆದ್ದರಿಂದ ಯಾವದಾದರೂ

ದುರಾಚಾರಗಳನ್ನು ತಾನು ಅರಿಯದೆ ಮಾಡಿದ್ದರೆ ಅಂಥ ದೋಷವನ್ನೂ ಪರಮಾತ್ಮನು ಪರಿಹರಿಸಲಿ ಎಂದು ಪ್ರಾರ್ಥಿಸುವದು ಮೂರನೆಯ ಭಾಗದ ಉದ್ದೇಶವು.

"ಪರಮಾತ್ಮನೆ, ನನ್ನ ಸುತ್ತಮುತ್ತಲಿನ ಪ್ರದೇಶವು ಶುದ್ಧವಾಗಿದ್ದು ನನ್ನ ಮನಶ್ಶುದ್ಧಿಗೆ ಕಾರಣವಾಗಲಿ; ನಾನು ಆಚಾರ್ಯನಿಂದ ಕಲಿಯುವ ಪಾಠವು ನನ್ನ ಮನಶ್ಶುದ್ಧಿಗೆ ಕಾರಣವಾಗಲಿ; ನನ್ನ ಮನಸ್ಸಿನಲ್ಲಿರುವ ಕೆಟ್ಟ ವಾಸನೆಗಳೆಲ್ಲ ತೊಲಗಿ ನಾನು ಶುದ್ಧಮನಸ್ಕನಾಗಿಯೇ ವರ್ತಿಸುವಂತೆ ಅನುಗ್ರಹಿಸು"–ಎಂದು ಮನಃ ಪೂರ್ವಕವಾಗಿ ಧ್ಯಾನಿಸಿ ಅಭಿಮಂತ್ರಿಸಿದ ನೀರನ್ನು ಕುಡಿಯುವದರಿಂದ ಮನಸ್ಸಿನ ಮೇಲೆ ಉತ್ತಮಪರಿಣಾಮವಾಗುವದೆಂಬುದನ್ನು ಮತ್ತೆ ಹೇಳುವದೇನಿದೆ? ಸಂ–4, 469

## ಉಪಾಕರ್ಮ

ಉಪಾಕರ್ಮವೆಂದರೆ ಆ ದಿವಸ ಋಷಿಪೂಜೆಮಾಡುವದು, ಯಜ್ಞೋಪವೀತದ ದಾನಧಾರಣೆಗಳನ್ನು ಮಾಡುವದು, ಮಾರನೆಯ ದಿನ ಗಾಯತ್ರೀಜಪವನ್ನು ಮಾಡುವದು –ಇಷ್ಟು ನಡೆಯುತ್ತವೆ. ಆಮೇಲೆ ಅದರ ವಿಚಾರವನ್ನು ಬಹುಜನರು ಮರೆತುಬಿಡುತ್ತಾರೆ.

ಉಪಾಕರ್ಮಶಬ್ದದ ನಿಜವಾದ ಅರ್ಥವೇನು? ವೇದದ ಅಧ್ಯಯನವನ್ನು ಮಾಡುತ್ತಿದ್ದವರು ಇದುವರೆಗೆ ಅಧ್ಯಯನಮಾಡಿದ ವೇದಗಳು ವೀರ್ಯವತ್ತಾಗಲಿ ಎಂದು, ಮತ್ತೆ ಮುಂದೆ ಅಧ್ಯಯನವು ಸರಿಯಾಗಿ ನಡೆಯಲಿ ಎಂದು ಮಾಡಿಕೊಳ್ಳುವ ಒಂದಾನೊಂದು ಸಂಸ್ಕಾರವದು. ವೇದವನ್ನು ಅಧ್ಯಯನ ಮಾಡುವದಕ್ಕೆ ಪ್ರಾರಂಭಿಸಿ ಇಂತಿಷ್ಟು ಕಾಲದವರೆಗೆ ಎಂದು ಓದಿ ಅದನ್ನು ಸ್ವಾಧೀನಕ್ಕೆ ತಂದುಕೊಳ್ಳುವದೂ ಹಳೆಯ ಪಾಠವನ್ನು (ಉತ್ಸರ್ಜನ) ಮುಗಿಸಿ ಬಿಟ್ಟು ಹೊಸದನ್ನು ಆರಂಭಿಸುವದೂ ಉಪಾಕರ್ಮದ ಉದ್ದೇಶವು. ವೇದದ ಕಾಂಡಗಳ ಋಷಿಗಳನ್ನು ಯಜುರ್ವೇದಿಗಳು ಸ್ಮರಿಸುವರು. ಋಗ್ವೇದದ ಮಂಡಲಗಳ ಋಷಿಗಳನ್ನು ಋಗ್ವೇದಿಗಳು ಸ್ಮರಿಸುವರು. ಈ ಪದ್ಧತಿಯೆಲ್ಲ ಈಗ ಲುಪ್ತಪ್ರಾಯವಾಗಿಬಿಟ್ಟಿದೆ. ಹೊಸದೊಂದು ಜನಿವಾರವನ್ನು ಹಾಕಿಕೊಳ್ಳುವದರಲ್ಲಿ ಅದು ಕೊನೆಗಾಣುತ್ತಿದೆ !

ನಮ್ಮ ದೇಶದಲ್ಲಿ ದ್ವಿಜರ ಸಂಸ್ಕಾರವು ಉತ್ತಮಗೊಳ್ಳುವದು ಅವಶ್ಯ; ಅದರಲ್ಲಿಯೂ ಬ್ರಾಹ್ಮಣರು ತಮ್ಮ ಹಿಂದಿನ ಸಂಸ್ಕೃತಿಯ ಭಾಂಡಾಗಾರವಾದ ವೇದದ ಬಾಗಿಲ ಬೀಗವನ್ನು ತೆಗೆದು ಒಳಗೆ ಏನಿದೆ ಎಂದು ನೋಡುವದು ಅತ್ಯವಶ್ಯ. ಉಪನಯನ ಮಾಡಿಸಿಕೊಳ್ಳುವ ಬ್ರಹ್ಮಚಾರಿಗಳಿಗೆ ವಿಜೃಂಭಣೆಯಿಂದ ಒಂದು ದಿನ ಹಬ್ಬವನ್ನು ಮಾಡಿ ಯಜ್ಞೋಪವೀತವನ್ನು ಹಾಕಿದ್ದರಿಂದ ತೃಪ್ತರಾಗದೆ ವೇದದ ಕೆಲಕೆಲವು ಭಾಗಗಳನ್ನಾದರೂ ಅರ್ಥಸಹಿತವಾಗಿ ಅಧ್ಯಯನಮಾಡಿಸುವ ಪದ್ಧತಿಯನ್ನು ಮಾಡಿಕೊಳ್ಳಬೇಕು.

'ವೇದದ ಪರಿಚಯ' ಎಂಬ ಹೆಸರಿನಿಂದ ದೇಶಭಾಷೆಯಲ್ಲಿ ವೇದಗಳ ಭಾಗವನ್ನೂ ಅದರಲ್ಲಿರುವ ಮುಖ್ಯ ವಿಚಾರಗಳನ್ನೂ ತಿಳಿಸುವ ಪುಟ್ಟಗ್ರಂಥವೊಂದನ್ನು ಏರ್ಪಡಿಸಬೇಕು. ಉಪನಯನವಾದ ಹುಡುಗರಿಗೆ ತಮ್ಮತಮ್ಮ ವೇದಶಾಖೆಯ ಅತಿಮುಖ್ಯವಾದ ಕೆಲವು ಮಂತ್ರಗಳನ್ನೂ ಆರಿಸಿ ಅರ್ಥಸಹಿತವಾಗಿ ಅಚ್ಚುಮಾಡಿಸಿ ಧರ್ಮಾರ್ಥವಾಗಿ ಹಂಚುವದನ್ನು ಬ್ರಾಹ್ಮಣರ ಮುಂದಾಳುಗಳು ಮೇಲುಪಙ್ಕ್ತಿ ಹಾಕಿ ತೋರಿಸಿದರೆ ಉಳಿದವರೂ ಆ ಉತ್ತಮಪದ್ಧತಿಯನ್ನು ಅನುಕರಿಸುವರು.

ಗಾಯತ್ರೀಮಂತ್ರದ ಜಪವನ್ನು ಮಾಡುವ ದಿನ ದ್ವಿಜರೆಲ್ಲರೂ ಮಿಕ್ಕ ಕಾರ್ಯಗಳನ್ನೂ ಬದಿಗಿರಿಸಿ ಶ್ರದ್ಧಾಭಕ್ತಿಗಳಿಂದ ಮಡಿಯನ್ನುಟ್ಟು ಅನುಷ್ಠಾನಮಾಡಬೇಕು. ಆ ಮುನ್ನಿನ ದಿವಸವೇ ಗಾಯತ್ರಿಯ ಮಹಿಮೆಯನ್ನು ಕುರಿತ ಭಾಷಣಗಳನ್ನು ಪಂಡಿತರಿಂದ ಮಾಡಿಸಬೇಕು; ಮನೆಯಲ್ಲಿ ದೊಡ್ಡವರೆಲ್ಲರೂ ಗಾಯತ್ರೀಜಪವನ್ನು ಮಾಡಿ ಮಕ್ಕಳೂ ಮಾಡುವಂತೆ ಪ್ರೋತ್ಸಾಹಿಸಬೇಕು. ಗಾಯತ್ರಿಯು ವೇದಮಾತೆಯು; ಆಕೆಯ ಅನುಗ್ರಹವಾದರೆ ನಮಗೆ ನಮ್ಮ ಸಂಸ್ಕೃತಿಯ ಒಳಗುಟ್ಟು ವಶವಾಗುವದು.

ಆ ದಿನ ದ್ವಿಜರಲ್ಲದ ಹಿಂದುಗಳುಕೂಡ ಭಗವಂತನ ಪ್ರಾರ್ಥನೆಯನ್ನೂ ಭಜನೆಯನ್ನೂ ವಿಶೇಷವಾಗಿ ಆಚರಿಸಬೇಕು. ಜಗತ್ಕಾರಣನಾಗಿರುವ ದೇವನ ಚೈತನ್ಯ ಪ್ರಕಾಶವನ್ನು ನಾವು ಧ್ಯಾನಮಾಡೋಣ; ಆತನ ಅನುಗ್ರಹದಿಂದ ನಮಗೆ ಉತ್ತಮವಾದ ಬುದ್ಧಿವೃತ್ತಿಗಳುಂಟಾಗಲಿ-ಎಂಬುದೇ ಗಾಯತ್ರಿಯ ಅರ್ಥದ ಸಾರವು. 'ಭಗವಂತನೆ, ನಮಗೆ ಒಳ್ಳೆಯ ಬುದ್ಧಿಯನ್ನು ಕೊಡು; ನಮ್ಮನ್ನು ಕುಮಾರ್ಗದಿಂದ ತಪ್ಪಿಸು!' ಎಂದು ಪ್ರಾರ್ಥಿಸುವ ಈ ಮಂತ್ರವನ್ನು ಎಷ್ಟೋ ಸಾವಿರ ವರ್ಷಗಳ ಹಿಂದೆ ನಮ್ಮ ಋಷಿಗಳು ಉಚ್ಚರಿಸಿದರು. ಅವರ ಅನುಗ್ರಹಕ್ಕೆ ಪಾತ್ರರಾಗಬೇಕೆನ್ನುವವರೆಲ್ಲರೂ ಭಗವಂತನನ್ನು ಪ್ರಾರ್ಥನೆಮಾಡಬೇಕು. ಯಾರು ಗಾಯತ್ರಿಯನ್ನು ಜಪಿಸುವರೋ ಅವರನ್ನು ಆ ಮಂತ್ರವು ಅನರ್ಥದಿಂದ ತಪ್ಪಿಸಿ ಕಾಪಾಡುತ್ತದೆ. ಗಾಯತ್ರೀದೇವಿಯ ಅನುಗ್ರಹದಿಂದ ಅವರಿಗೆ ಅಭ್ಯುದಯವೂ ನಿಃಶ್ರೇಯಸವೂ ದೊರಕುವವು. **ಸಂ-24, 376**

ಉಪಾಕರ್ಮವೆಂಬುದು ಹೊಸದಾಗಿ ವೇದವನ್ನು ಆರಂಭಿಸುವ ಪವಿತ್ರ ದಿನವು. ಆದರೆ ದ್ವಿಜರು ಆ ದಿವಸವನ್ನು ಬಹುಮಟ್ಟಿಗೆ ಹೇಗೆ ಉಪಯೋಗಿಸುತ್ತಾರೆ? ಊಟ ಉಪಚಾರಗಳು, ಉಡಿಗೆತೊಡಿಗೆಗಳು-ಇವುಗಳಲ್ಲಿ ಆ ದಿನವು ಒಂದು ಹಬ್ಬವಾಗಿರುತ್ತದೆ. ಪುರೋಹಿತರು ಹೇಳಿಕೊಡುವ ಒಂದೆರಡು ಮಂತ್ರಗಳನ್ನು ಹೇಳುವದು, ಯಜ್ಞೋಪವೀತ (ಜನಿವಾರ) ವನ್ನು ದಾನಮಾಡುವದು, ಬ್ರಾಹ್ಮಣರಿಗೆ ದಕ್ಷಿಣೆಕೊಡುವದು, ಋಷಿಪೂಜೆ, ಹೊಸ ಯಜ್ಞೋಪವೀತದ ಧಾರಣೆ-ಇಷ್ಟನ್ನು

ಮಾಡಿದರೆ ತಮ್ಮ ಕೆಲಸವಾಯಿತೆಂದು ಭಾವಿಸುವವರೇ ಹೆಚ್ಚು. ಇನ್ನೂ ಕೆಲವು ದಿನಗಳು ಹೀಗೆಯೇ ನಡೆದರೆ ಅದೂ ನಿಂತುಹೋಗಬಹುದು. ದ್ವಿಜರಿಗೆ ಇದಕ್ಕಿಂತ ಲಾಂಛನಾಸ್ಪದವಾದದ್ದು ಬೇರೆ ಬೇಕೆ?

ದ್ವಿಜರಲ್ಲೆಲ್ಲ ಕೈಮುಗಿದು ಈ ಲೇಖಕನು ಬೇಡಿಕೊಳ್ಳುವದಿಷ್ಟು; ತಾವುಗಳು ಭರತ ಖಂಡದ ಸಂಸ್ಕೃತಿಯ ಪಾಲಕರು, ಭರತಖಂಡದ ಋಷಿಗಳು ಕೂಡಿಹಾಕಿರುವ ಜ್ಞಾನ ಭಂಡಾರವನ್ನು ತೆಗೆಯುವ ಬೀಗದ ಕೈ ತಮ್ಮಲ್ಲಿದೆ. ಅದನ್ನು ಹದಗೆಡಿಸಬೇಡಿರಿ. ಅದಕ್ಕೆ ತುಕ್ಕು ಹಿಡಿಯಗೊಡಬೇಡಿರಿ. ದಯವಿಟ್ಟು ಸಂಸ್ಕೃತದ ಕಡೆಗೆ, ವೇದದ ಕಡೆಗೆ, ನಿಮ್ಮ ಪ್ರಾಚೀನರ ಆಚಾರವ್ಯವಹಾರಗಳ ಕಡೆಗೆ, ದೃಷ್ಟಿಯನ್ನು ಹೊರಳಿಸಿರಿ. ಕಾಲಕಾಲಕ್ಕೆ ಉಪನಯನವನ್ನು ನಿಮ್ಮ ಮಕ್ಕಳಿಗೆ ಮಾಡಿಸಿರಿ. ದೊರೆತಷ್ಟು ವಿರಾಮಕಾಲದಲ್ಲಿ ನೀವೂ ಧಾರ್ಮಿಕವಾಙ್ಮಯದ ಪರಿಚಯವನ್ನು ಮಾಡಿಕೊಳ್ಳಿರಿ. ದ್ವಿಜರಲ್ಲದವರಿಗೂ ಪವಿತ್ರವಾದ ಈ ಸಂಸ್ಕೃತಿಯ ಸವಿಯನ್ನು ತಿಳಿಸಿಕೊಡಿರಿ.

## ಜನಿವಾರ

ಜನಿವಾರವೆಂಬುದು ದ್ವಿಜರ ಹೊಣೆಗಾರಿಕೆಯನ್ನೂ ಭರತಖಂಡದ ಸಂಸ್ಕೃತಿಯ ಪಾವಿತ್ರ್ಯವನ್ನೂ ಗುರುತಿಸುವ ಒಂದು ಬಗೆಯ ಬಾವುಟ. ಜನಿವಾರಕ್ಕೆ ಪಾವಿತ್ರ್ಯವು ಬಂದಿರುವದು ಬರಿಯ ನೂಲಿನಿಂದಲ್ಲ, ಅದಕ್ಕೂ ವೈದಿಕಸಂಸ್ಕೃತಿಗೂ ಇರುವ ಸಂಬಂಧದ ಭಾವನೆಯಿಂದ. ಆದ್ದರಿಂದ ಆ ಭಾವನೆಯು ಮೂಡುವದಕ್ಕೂ ಬೆಳೆಯುವದಕ್ಕೂ ಫಲಕಾರಿಯಾಗುವದಕ್ಕೂ ಅನುಕೂಲವಾಗುವ ರೀತಿಯಿಂದಲೇ ಅದನ್ನು ಸಜ್ಜುಗೊಳಿಸಬೇಕು. ಹಾಗೆಯೇ ಅದನ್ನು ಧರಿಸಬೇಕು.

ಎಲ್ಲಕ್ಕೂ ಮೊದಲಾಗಿ ಜನಿವಾರದ ಪವಿತ್ರತೆಯನ್ನು ಕಾಪಾಡಿಕೊಳ್ಳಿರಿ. ಜನಿವಾರ ವನ್ನು ಕೊಂಡುಕೊಳ್ಳುವ ಅಪವಿತ್ರಪದ್ಧತಿಯನ್ನು ಬಿಟ್ಟುಬಿಡಿರಿ. ನಿಮ್ಮ ಸಂಸ್ಕೃತಿಯ ಜೀವಿತವೇ ಅದರಲ್ಲಿದೆಯೆಂದು ನಂಬಿರಿ. ಜನಿವಾರವನ್ನು ನೀವೇ ನಿಮ್ಮ ಸ್ವಂತ ಕೈಗಳಿಂದಲೇ ಪವಿತ್ರವಾಗಿರುವ ಮನಸ್ಸಿನಿಂದ ಪವಿತ್ರವಾದ ಶರೀರದಿಂದ ಸಜ್ಜುಗೊಳಿಸ ಬೇಕೆಂಬುದನ್ನು ನೆನಪಿನಲ್ಲಿಡಿರಿ. ಮಿಂದು ಮಡಿಯುಟ್ಟು ಪವಿತ್ರವಾದ ಮಂತ್ರಗಳನ್ನು ಉಚ್ಚರಿಸುತ್ತಾ, ಪರಮಾತ್ಮನ ಧ್ಯಾನವನ್ನು ಮಾಡುತ್ತಾ, ಜನಿವಾರವನ್ನು ಮಾಡಿಕೊಳ್ಳಿರಿ. ಅವುಗಳನ್ನು ಮಾಡುವ ಪದ್ಧತಿಯನ್ನು ನಿಮ್ಮ ಹುಡುಗರಿಗೂ ತಿಳಿಸಿಕೊಡಿರಿ.

ಈಗೀಗ ಜನಿವಾರವನ್ನು ತಯಾರಿಸುವ ಪದ್ಧತಿಯು ವಿಚಿತ್ರವಾಗಿದೆ. ಕೆಲವು ಬ್ರಾಹ್ಮಣರು, ಯಾವ ದೇಶದಲ್ಲಿಯೋ ಯಾವ ಹಳ್ಳಿಯಲ್ಲಿಯೋ ತಮಗೆ ತೋಚಿದಂತೆ

ತಾವು ಸಿದ್ಧಗೊಳಿಸಿದ ಜನಿವಾರದ ನೂಲನ್ನು ಗಂಟುಹಾಕಿ ಅಥವಾ ಹಾಕದೆ ಊರೂರಿಗೆ ತಂದುಕೊಡುತ್ತಾರೆ. ದ್ವಿಜರು ಅವುಗಳನ್ನು ಚೌಕಾಸಿಯಿಂದ ವ್ಯಾಪಾರಮಾಡಿ ಕೊಂಡುಕೊಳ್ಳುತ್ತಾರೆ. ಆಮೇಲೆ ಅವನ್ನು ಉಪಾಕರ್ಮಗಳಲ್ಲಿ ದಾನಕ್ಕೂ ಧಾರಣೆಗೂ ಉಪಯೋಗಿಸುತ್ತಾರೆ, ಮನೆಯಲ್ಲಿಯೂ ಬಳಕೆಗೆ ಇಟ್ಟುಕೊಳ್ಳುತ್ತಾರೆ ! ಇಂಥ ಜನಿವಾರದಲ್ಲಿ ಪವಿತ್ರಸಂಬಂಧವನ್ನು ಸೂಚಿಸುವ ಯೋಗ್ಯತೆ ಹೇಗೆ ಬರಬೇಕು ?

ಒಂದೂರಿನಲ್ಲಿ ಆಗುವ ಜನಿವಾರವು ಆ ಊರಿನ ಜನರಿಂದಲೇ ದೊರೆಯದಿದ್ದರೆ ಅಲ್ಲಿಯ ದ್ವಿಜರಿಗೆ ದ್ವಿಜತ್ವದ ಕಳೆಯು ಎಂದಿಗೂ ಸಂಪೂರ್ಣವಾಗಿ ದೊರೆಯಲಾರದು. ಜನಿವಾರಕ್ಕಿಂತ ತಮ್ಮ ಉದ್ಯೋಗವೂ ನಮ್ಮ ವ್ಯವಹಾರಗಳೂ ಮಿಕ್ಕಮಾತುಗಳೂ ಹೆಚ್ಚು ಬೆಲೆಯುಳ್ಳವು ಎಂದು ಯಾವ ದ್ವಿಜನು ಭಾವಿಸುವನೋ ಅವನು ದ್ವಿಜನೆನ್ನಿಸಿ ಕೊಳ್ಳುವದಕ್ಕೆ ಅರ್ಹನಲ್ಲ.

ಯಜ್ಞೋಪವೀತವನ್ನು ತಮ್ಮತಮ್ಮ ಊರಿನಲ್ಲಿಯೇ ಮಾಡಿಕೊಳ್ಳುವದನ್ನು ಪ್ರೋತ್ಸಾಹಿಸಬೇಕು-ಯಾರೋ ಕೆಲವರು ಯಾಚಕಬ್ರಾಹ್ಮಣರು ಹೇಗೋ ಮಾಡಿದ ಜನಿವಾರಗಳನ್ನು ಮಾರುವದಕ್ಕೆ ಬರುವದಕ್ಕೆ ಅಡ್ಡಿಹಾಕಬೇಕು. ಮಹಾತ್ಮಗಾಂಧಿಯವರು ನಮ್ಮ ದೇಶದ ಜನರು ತಮ್ಮ ಕೈಯಿಂದ ನೂತ ನೂಲಿನಿಂದ ಬಟ್ಟೆಯನ್ನು ಹೊದೆಯ ಬೇಕೆಂದು ಮಾಡಿದ ಉಪದೇಶವು ದೇಶದಲ್ಲೆಲ್ಲ ಹರಡಿ ಎಂಥ ಉತ್ಸಾಹದ ಅಲೆಯನ್ನು ಹಬ್ಬಿಸಿತೆಂಬುದನ್ನು ನೋಡಿದವರು ಪವಿತ್ರವಾದ ಯಜ್ಞೋಪವೀತವನ್ನು ತಮ್ಮತಮ್ಮ ಸ್ಥಲಗಳಲ್ಲಿ ಸಿದ್ಧಗೊಳಿಸುವದಕ್ಕೆ ಏರ್ಪಡಿಸುವದು ಶ್ರಮಸಾಧ್ಯವೆಂದು ಎಂದಿಗೂ ಹೇಳಲಾರರು.

ಯಾವನು ಹುಟ್ಟಿದ್ದರಿಂದ ವಂಶವು ಉನ್ನತಿಯನ್ನು ಹೊಂದಿತೋ ಅವನೇ ನಿಜವಾಗಿ ಹುಟ್ಟಿದವನೆಂದು ಸುಭಾಷಿತವಿರುತ್ತದೆ. ಈ ಅರ್ಥದಿಂದ ಯಾವನು ಉಪನಯನವಾದ ಮೇಲೆ ಭರತಖಂಡದ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವನೋ ಅವನೇ ನಿಜವಾಗಿ ದ್ವಿಜನು. ಅವನ ಎರಡನೆಯ ಹುಟ್ಟಿನಿಂದಲೇ ಭಾರತಮಾತೆಯು ಪುತ್ರವತಿಯೆನಿಸುವಳು. ಇಂಥ ಪವಿತ್ರಬುದ್ಧಿಯ ಸುಪುತ್ರರು ಹೆಚ್ಚಿನ ಸಂಖ್ಯೆಯಿಂದ ಜನಿಸುವಂತೆ ಮಹರ್ಷಿಗಳು ಅನುಗ್ರಹಿಸಲಿ ! ಸಂ-12, 133

# ಗಾಯತ್ರೀಮಂತ್ರ

ಸಂಧ್ಯಾವಂದನೆಯ ಮುಖ್ಯಭಾಗವು ಗಾಯತ್ರೀಮಂತ್ರದಲ್ಲಿ ಅಡಗಿರುತ್ತದೆ. ಗಾಯತ್ರೀಮಂತ್ರವನ್ನು ಸರಿಯಾಗಿ ಜಪಮಾಡುವದೇ ಸಂಧ್ಯಾವಂದನೆಯೆಂದು ಹೇಳಿದರೂ ಸಲ್ಲುವಂತಿದೆ. ಸಂಧ್ಯಾವಂದನೆಯಲ್ಲಿ ಮಾರ್ಜನ, ಅರ್ಘ್ಯ–ಇವು ಎರಡೂ ಮೊದಲಿನ ಭಾಗ; ಗಾಯತ್ರೀಹೃದಯಪಠನ, ಗಾಯತ್ರೀಜಪ–ಇವೆರಡೂ ಎರಡನೆಯ ಭಾಗ; ಉಪಸ್ಥಾನವು ಮೂರನೆಯ ಭಾಗ. ಇವುಗಳಲ್ಲಿ ಮೊದಲನೆಯ ಭಾಗವನ್ನು ಸಂಧ್ಯೋಪಾಸನೆಗೆ ಸಿದ್ಧವಾಗುವ ಭಾಗವೆಂದು ಹೇಳಬಹುದು, ಮೂರನೆಯ ಭಾಗವನ್ನು ಸಂಧ್ಯಾವಂದನೆಯ ಉಪಸಂಹಾರಭಾಗವೆಂದು ಕರೆಯಬಹುದು; ಉಳಿಯುವ ನಡುವಿನ ಭಾಗವೇ ಈ ಕರ್ಮದ ತಿರುಳಾಗಿರುತ್ತದೆ.

ಗಾಯತ್ರೀಮಂತ್ರವು ಎಷ್ಟು ಪ್ರಧಾನವೆಂಬುದನ್ನು ಮನಗಾಣಬೇಕಾದರೆ ಅದನ್ನು ಎಲ್ಲೆಲ್ಲಿ ಉಪಯೋಗಿಸಿದೆ ಎಂಬುದನ್ನು ಲಕ್ಷ್ಯವಿಟ್ಟು ನೋಡಬೇಕು. ಸಂಧ್ಯಾವಂದನೆಯನ್ನು ಮಾಡುತ್ತೇನೆಂದು ಸಂಕಲ್ಪಮಾಡುವದಕ್ಕೆ ಪೂರ್ವದಲ್ಲಿಯೇ ಪ್ರಾಣಾಯಾಮವನ್ನು ಮಾಡಬೇಕಷ್ಟೆ; ಪ್ರಾಣಾಯಾಮಕ್ಕೆ ಗಾಯತ್ರಿಯು ಅವಶ್ಯವಾಗಿ ಬೇಕಾಗುತ್ತದೆ. ಮಾರ್ಜನ, ಅರ್ಘ್ಯ–ಇವುಗಳ ಮೊದಲೂ ಪ್ರಾಣಾಯಾಮವು ಬೇಕೇಬೇಕಾಗಿರುವದರಿಂದ ಆಗಲೂ ಗಾಯತ್ರಿಯು ಬೇಕು. ಅರ್ಘ್ಯವನ್ನು ಬಿಡುವಾಗಲೂ ಗಾಯತ್ರೀಮಂತ್ರವೇ ಬೇಕು. ಆಮೇಲಂತೂ ಗಾಯತ್ರಿಯ ಹೃದಯಪಠನಪೂರ್ವಕವಾಗಿ ಗಾಯತ್ರಿಯನ್ನೇ ನೇರಾಗಿ ಜಪಿಸಬೇಕಾಗುವದು. ಆದ್ದರಿಂದ ಗಾಯತ್ರೀಮಂತ್ರವು ಸಂಧ್ಯಾವಂದನೆಯಲ್ಲಿ ಅತ್ಯಂತ ಮುಖ್ಯಸ್ಥಾನವನ್ನು ಹೊಂದಿರುವದೆಂದಾಯಿತು.

ಗಾಯತ್ರೀಮಂತ್ರದಲ್ಲಿ ಮೂರು ಪಾದಗಳಿರುತ್ತವೆ. ಇವುಗಳನ್ನು ಕ್ರಮವಾಗಿ ಋಗ್ವೇದವೇ ಮುಂತಾದ ಮೂರು ವೇದಗಳಿಂದ ಹಿಂಡಿ ತೆಗೆದಿರುತ್ತದೆ ಎಂದು ಮನುಸ್ಮೃತಿಯಲ್ಲಿ ಹೇಳಿರುತ್ತದೆ. ಆದ್ದರಿಂದ ಅಧಿಕಾರಿಯಾದವನು ಗುರೂಪದಿಷ್ಟವಾದ ಮಾರ್ಗದಿಂದ ನಿಯಮಪೂರ್ವಕವಾಗಿ ಶ್ರದ್ಧೆಯಿಂದ ಅರ್ಥವನ್ನು ಸ್ಮರಿಸಿಕೊಳ್ಳುತ್ತಾ ಈ ಮಂತ್ರವನ್ನು ಜಪಿಸಿದರೆ ಮೂರು ವೇದಗಳನ್ನೂ ಅಧ್ಯಯನಮಾಡಿದ ಫಲವು ದೊರೆಯುವದರಲ್ಲಿ ಆಶ್ಚರ್ಯವೇನು?

ಈ ಮಂತ್ರದಲ್ಲಿ ಮೊದಲು ಓಂಕಾರವೂ ಆಮೇಲೆ ಮೂರು ವ್ಯಾಹೃತಿಗಳೂ ಇರುತ್ತವೆ. ಓಂಕಾರವಾಚ್ಯನಾದ ಪರಮಾತ್ಮನೇ ಭೂರಾದಿಲೋಕತ್ರಯಸ್ವರೂಪನೆಂದು ಇದರಿಂದ ಸೂಚಿಸಿದಂತಾಯಿತು. 'ಸರ್ವವೂ ಬ್ರಹ್ಮವೇ' ಎಂಬ ಉಪನಿಷತ್ಸಾರವು ಈ ಮಂತ್ರಭಾಗದಲ್ಲಿ ಅಡಕವಾಗಿರುತ್ತದೆ.

ಮುಂದಿನ ಭಾಗಕ್ಕೆ ಅಕ್ಷರಾರ್ಥವು ಹೇಗಾಗುವದೆಂದರೆ "ಆ ಪ್ರಸಿದ್ಧದೇವನಾದ ಸವಿತೃವಿನ ಎಲ್ಲರೂ ಬಯಸುವ ತೇಜಸ್ಸನ್ನು ಧ್ಯಾನಮಾಡೋಣ; ಆತನು ನಮ್ಮಗಳ ಬುದ್ಧಿವೃತ್ತಿಗಳನ್ನು ಪ್ರೇರಣೆಮಾಡಲಿ." ಸವಿತೃವೆಂದರೆ ಸೂರ್ಯನೆಂದು ಅರ್ಥವಾಗುತ್ತದೆ. ಗಾಯತ್ರಿಯ ಜಪವಾದ ಮೇಲೆ ಮಾಡುವ ಉಪಸ್ಥಾನದಲ್ಲಿಯೂ ಮಿತ್ರ, ಸೂರ್ಯ-ಎಂಬ ಹೆಸರುಗಳಿರುವ ಮಂತ್ರಗಳಿರುತ್ತವೆ. ಸೂರ್ಯನನ್ನೇ ಪ್ರಸಿದ್ಧದೇವತೆಯೆಂದು ಇಲ್ಲಿ ಕರೆದಿದೆಯೆಂದು ಭಾವಿಸುವದಕ್ಕೆ ಅಡ್ಡಿಯೂ ಕಾಣುವದಿಲ್ಲ; ಏಕೆಂದರೆ ಸೂರ್ಯನನ್ನು ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಶಾಸ್ತ್ರದಲ್ಲಿ ಅನೇಕ ಕಡೆಗಳಲ್ಲಿ ಹೇಳಿಯೂ ಇರುತ್ತದೆ. ಸೂರ್ಯನು ದನಕಾಯುವವರಿಗೂ ನೀರುತರುವ ಸ್ತ್ರೀಯರಿಗೂ ಸಹ ಪ್ರಸಿದ್ಧನಾಗಿರುವ ದೇವನು-ಎಂದು ತೈತ್ತಿರೀಯಸಂಹಿತೆಯಲ್ಲಿಯೂ ಇದೆ.

ಆದರೆ ಮೇಲೆ ಹೇಳಿರುವಂತೆ ಸೂರ್ಯನಿಗೆ ಅರ್ಘ್ಯವನ್ನು ಕೊಡುವಾಗಲೂ ಗಾಯತ್ರೀಮಂತ್ರವನ್ನು ಉಪಯೋಗಿಸುತ್ತೇವಷ್ಟೆ; ಇಲ್ಲಿ ಅರ್ಘ್ಯವಾದ ಬಳಿಕ 'ಈ ಆದಿತ್ಯನು ಬ್ರಹ್ಮವು' (ಅಸಾವಾದಿತ್ಯೋ ಬ್ರಹ್ಮ) ಎಂಬ ಮಂತ್ರವೊಂದನ್ನು ಪಠಿಸುವ ವಾಡಿಕೆ ಇದೆ. ಈ ಸಂಪ್ರದಾಯದ ಕಡೆಗೆ ತಿರುಗಿ ನೋಡಿದರೆ ಸೂರ್ಯಾಂತರ್ಗತನಾದ ಪರಮಾತ್ಮನನ್ನೇ ಇಲ್ಲಿ ಸವಿತೃಶಬ್ದದಿಂದ ಹೇಳಿರುತ್ತದೆ ಎನ್ನಬೇಕಾಗುವದು. ಆಗ ಓಂಕಾರವಾಚ್ಯವಾದ ಬ್ರಹ್ಮವು ಲೋಕತ್ರಯಾತ್ಮಕವಾಗಿರುವದು ಎಂಬ ಮಂತ್ರದ ಮೊದಲನೆಯ ಭಾಗಕ್ಕೂ ಈ ಅಭಿಪ್ರಾಯಕ್ಕೂ ಹೊಂದಿಕೆಯೂ ಆದಂತೆ ಆಗುತ್ತದೆ.

ಸವಿತೃವೆಂದರೆ ಜಗತ್ಕಾರಣನಾದ ಪರಮಾತ್ಮನೇ ಎಂದು ಅರ್ಥಮಾಡುವದಕ್ಕೆ ಮತ್ತೂ ಒಂದು ಕಾರಣವಿದೆ. ಅದೇನೆಂದರೆ ಇಲ್ಲಿ 'ನಮ್ಮಗಳ ಬುದ್ಧಿವೃತ್ತಿಗಳನ್ನು ಆತನು ಪ್ರೇರಿಸಲಿ' ಎಂಬ ಪ್ರಾರ್ಥನೆಯಿದೆ. 'ಪರಮಾತ್ಮನು ಜಗತ್ತನ್ನೆಲ್ಲ ಸೃಷ್ಟಿಮಾಡಿ ಜಗತ್ತಿನೊಳಗೆ ಪ್ರವೇಶಮಾಡಿರುವನು; ಆತನೇ ನಾವೆಂದು ತಿಳಿಯಬೇಕು' ಎಂಬ ಉಪನಿಷತ್ತಿನ ಉಪದೇಶವು ಇಲ್ಲಿ ಸೂಚಿತವಾಗಿದೆ ಎಂದು ತಿಳಿದರೆ 'ಸರ್ವವೂ ಪರಮಾತ್ಮನೇ' ಎಂಬರ್ಥದ ಮಂತ್ರಭಾಗಕ್ಕೆ ಸಾಫಲ್ಯವು ಬಂದಂತಾಗುತ್ತದೆ. "ಸಕಲವನ್ನೂ ಸೃಷ್ಟಿಸಿ ನಮ್ಮ ಅಂತಃಕರಣಕ್ಕೆ ಸಾಕ್ಷಿಯಾಗಿ ನಮ್ಮಗಳೆಲ್ಲರ ಆತ್ಮನೇ ಆಗಿ ಅಂತಃಕರಣದೊಳಗೆ ತೋರಿಕೊಳ್ಳುತ್ತಿರುವ ಪರಮಾತ್ಮನ ಅನುಗ್ರಹದಿಂದ ನಮಗೆ ಸರಿಯಾದ ಸಾತ್ತ್ವಿಕವೃತ್ತಿಗಳು ಉಂಟಾಗಲಿ ! ನಮ್ಮ ಅವಿದ್ಯೆಯೆಲ್ಲ ನೀಗಿಹೋಗುವಂತೆ ಆತನ ಅನುಗ್ರಹವಾಗಲಿ ! ಇದಕ್ಕೆ ಶಾಸ್ತ್ರಪ್ರಸಿದ್ಧನಾಗಿರುವ ಆ ಪರಮಾತ್ಮನ ಚಿತ್ಪ್ರಕಾಶವನ್ನು ನಾವು ಧ್ಯಾನಮಾಡುವೆವು" ಎಂಬುದು ಮಂತ್ರದ ಭಾವಾರ್ಥವಾಗುತ್ತದೆ.

ಹಾಗಾದರೆ ಸೂರ್ಯನಿಗೆ ಅರ್ಘ್ಯವನ್ನು ಕೊಡುವದು. ಸೂರ್ಯನ ಕಡೆಗೆ ತಿರುಗಿ ಸೂರ್ಯವಾಚಕವಾದ ಶಬ್ದಗಳುಳ್ಳ ಮಂತ್ರಗಳನ್ನು ಜಪಿಸುವದು-ಇದಕ್ಕೆಲ್ಲ ಏನು

ಉದ್ದೇಶವೆಂದು ಯಾರಾದರೂ ಕೇಳಬಹುದು. ಭೌತಿಕಪ್ರಪಂಚದಲ್ಲಿ ಸೂರ್ಯಮಂಡಲವು ನಮಗೆ ತಿಳಿದಿರುವ ಅತ್ಯಂತ ಉತ್ಕೃಷ್ಟವಾದ ಪರಮಾತ್ಮವಿಭೂತಿಯಾಗಿರುವದು; ಆದಿತ್ಯನೊಳಗೆ ಪರಮಾತ್ಮನೇ ಇರುವನೆಂದು ಶ್ರುತಿಸ್ಮೃತಿಗಳು ಸಾರುತ್ತಿರುವವು. ಆ ಪರಮಾತ್ಮನೂ ನಮ್ಮಗಳ ಅಂತಃಕರಣಸಾಕ್ಷಿಯೂ ಒಬ್ಬನೇ- (ಸ ಯಶ್ಚಾಯಂ ಪುರುಷೇ। ಯಶ್ಚಾಸಾವಾದಿತ್ಯೇ । ಸ ಏಕಃ ।) ಎಂಬ ಉತ್ತಮಸಿದ್ಧಾಂತವನ್ನು ತಿಳಿಸುವದೇ ಇದರ ಉದ್ದೇಶವು. ಆದ್ದರಿಂದಲೇ ಸಂಧ್ಯಾವಂದನೆಗೆ ಅಧಿಕಾರವಿಲ್ಲದ ಹಿಂದುಗಳು ಕೂಡ ಬೆಳಗ್ಗೆ ಎದ್ದು ಶುಚಿಯಾಗಿ ತಿಲಕವನಿಟ್ಟುಕೊಂಡು 'ದೇವರು ಮೂಡಿದನು' ಎಂದು ಸೂರ್ಯನಿಗೆ ನಮಸ್ಕರಿಸುವ ಅಥವಾ ಕೈಮುಗಿಯುವ, ಸಂಪ್ರದಾಯವು ಬಂದಿರುತ್ತದೆ.

ಸಂ-5, 452

## ದೇಹವೆಂಬುದೊಂದು ದೇವಾಲಯ

ಶ್ರೀಶಂಕರಾಚಾರ್ಯರ ಬೋಧನೆಗೆ ಒಳಪಟ್ಟಿರುವವರೆಲ್ಲರೂ ತಮ್ಮ ಮನೆಗಳಲ್ಲಿ ದೇವರಪೂಜೆಯನ್ನು ಮಾಡುವಾಗ ಆವಾಹನೆಯ ಕಾಲಕ್ಕೆ ಈ ಶ್ಲೋಕವನ್ನು ತಪ್ಪದೆ ಹೇಳಿಕೊಳ್ಳುವರು : "ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸನಾತನಃ। ತ್ಯಜೇದಜ್ಞಾನನಿರ್ಮಾಲ್ಯಂ ಸೋಽಹಂಭಾವೇನ ಪೂಜಯೇತ್ ॥" ದೇಹವೇ ದೇವಾಲಯವು, ಜೀವನೇ ಸನಾತನನಾದ ದೇವನು : ಅಜ್ಞಾನವೆಂಬ ನಿರ್ಮಾಲ್ಯವನ್ನು ತೆಗೆದುಹಾಕಬೇಕು, ಆತನೇ ನಾನೆಂಬ ಭಾವದಿಂದ ಪೂಜೆಮಾಡಬೇಕು-ಎಂಬುದು ಇದರ ಅಕ್ಷರಾರ್ಥವು. ಈ ಶ್ಲೋಕವು ಯಾವ ಪುರಾಣದಲ್ಲಿದೆಯೋ ತಿಳಿಯದು; ಆದರೆ ಇದರ ವ್ಯಾಪಕತೆಯು ಮಾತ್ರ ದಕ್ಷಿಣದಲ್ಲಿ ಸೇತುವಿನಿಂದ ಹಿಡಿದು ಉತ್ತರದಲ್ಲಿ ಹಿಮಾಚಲದವರೆಗೂ ಇದೆ.

ಮೊಟ್ಟಮೊದಲನೆಯ ಪಾದವು ದೇಹವೇ ದೇವಾಲಯವೆಂದು ಹೇಳುತ್ತದೆ. ಇದರ ಅಭಿಪ್ರಾಯವನ್ನು ಚೆನ್ನಾಗಿ ಮನಸ್ಸಿನಲ್ಲಿ ತಂದುಕೊಂಡವನು ತನ್ನ ಆಚರಣೆಯನ್ನು ಹೇಗೆ ಇಟ್ಟುಕೊಳ್ಳಬೇಕಾಗುವದೆಂಬುದನ್ನು ನೋಡೋಣ. ದೇವಾಲಯಗಳಲ್ಲಿ ಹೀಗೆ ಹೀಗೆ ನಡೆದುಕೊಳ್ಳಬೇಕೆಂಬ ನಿಯಮವಿರುವದು. ಎಲ್ಲಕ್ಕೂ ಮೊದಲಾಗಿ ದೇವಾಲಯವು ಪವಿತ್ರವೆಂಬ ಭಾವನೆ ಬರುವಂತೆ ಅದನ್ನು ಚೊಕ್ಕಟವಾಗಿಟ್ಟುಕೊಳ್ಳಬೇಕು. ಅದರ ಹೊರಗೂ ಒಳಗೂ ದಿನದಿನವೂ ಗುಡಿಸಿ, ಸಾರಿಸಿ, ರಂಗೋಲೆಹಾಕಿಡಬೇಕು; ಅದರ ಒಳಕ್ಕೆ ಧಾರಾಳವಾಗಿ ಗಾಳಿಯೂ ಬೆಳಕೂ ಬರುವಂತೆ ನೋಡಿಕೊಳ್ಳಬೇಕು; ಗೋಡೆಗೆ ಆಗಾಗ ಸುಣ್ಣವನ್ನು ಬಳಿಯಿಸಬೇಕು; ಪರಮೇಶ್ವರನ ದಿವ್ಯಗುಣಕರ್ಮಗಳನ್ನು ನೆನಪಿಗೆ ತರುವ ಸುಂದರವಾದ ಚಿತ್ರಗಳನ್ನು ಅಲ್ಲಲ್ಲಿ ಗೋಡೆಗಳಿಗೆ ತಗಲಿಸಿರಬೇಕು.

ಇದರಂತೆಯೇ ದೇಹವನ್ನು ದೇವಾಲಯವೆಂದು ತಿಳಿಯುವಾತನು ಅದು ಒಳಗೂ ಹೊರಗೂ ಪವಿತ್ರವಾಗಿರುವಂತೆ ಅಂತಃಶುದ್ಧಿಬಹಿಃಶುದ್ಧಿಗಳಿಗೆ ಬೇಕಾದ ಸ್ನಾನ, ಜಪ, ತಪ–ಮುಂತಾದವುಗಳನ್ನು ತಪ್ಪದೆ ಆಚರಿಸಬೇಕು. ಅದು ಆರೋಗ್ಯವಾಗಿರುವಂತೆಯೂ ಪುಷ್ಟಿಯಿಂದ ಕೂಡಿರುವಂತೆಯೂ ತನ್ನ ಆಹಾರವಿಹಾರಗಳಲ್ಲಿ ಮನಮುಟ್ಟಿ ನೋಡಿಕೊಳ್ಳಬೇಕು; ಶುದ್ಧವಾದ ಗಾಳಿಯೂ ಚೆನ್ನಾಗಿ ಬೆಳಕೂ ಇರುವ ಕಡೆಯಲ್ಲಿ ವಾಸಮಾಡಬೇಕು; ಸಾತ್ತ್ವಿಕವಾದ ಆಹಾರಗಳು, ವಿಚಾರಗಳು–ಇವುಗಳಿಂದ ಅದಕ್ಕೆ ಹೊಳಪುಬರುವಂತೆ ನೋಡಿಕೊಳ್ಳಬೇಕು; ತನ್ನನ್ನು ನೋಡಿದವರಿಗೆ ಕೂಡ ಪರಮೇಶ್ವರನ ನೆನಪುಬರುವಂತೆ ಪರಮಾತ್ಮನಿಗೆ ಅರ್ಪಿಸಿ ಪ್ರಸಾದವಾಗಿ ತೆಗೆದುಕೊಂಡು ಗಂಧಾದಿಗಳಿಂದಲೂ ಭಗವನ್ನಾಮಸ್ಮರಣೆಯಿಂದಲೂ ದಿನದಿನವೂ ಒಗೆದು ಮಡಿಮಾಡಿ ಶುಭ್ರವಾಗಿಟ್ಟು ಕೊಂಡಿರುವ ವಸ್ತ್ರಗಳಿಂದಲೂ ತನ್ನ ಹೊರಗನ್ನು ದೇವಮಯವಾಗಿ ಮಾಡಿಟ್ಟುಕೊಳ್ಳಬೇಕು.

ದೇಹವು ದೇವಾಲಯವೆಂಬ ಮಾತಿನಲ್ಲಿ ತನ್ನ ದೇಹವು ಮಾತ್ರ ದೇವಾಲಯವೆಂಬ ಅಭಿಪ್ರಾಯವಿರುವದಿಲ್ಲ. ಮಿಕ್ಕವರ ದೇಹವೂ ದೇವಾಲಯವೇ. ಆದ್ದರಿಂದ ದೇಹವನ್ನು ದೇವಾಲಯದಂತೆ ಭಾವಿಸಬೇಕೆಂಬಾತನು, ತನ್ನ ಮಕ್ಕಳು ಮರಿಗಳ, ತನ್ನ ಕುಟುಂಬ ದವರ, ತನ್ನ ನೆರೆಯವರ, ಮತ್ತು ತನ್ನ ಊರಿನವರ ಎಲ್ಲರ ದೇಹಗಳನ್ನೂ ದೇವಾಲಯ ಗಳೆಂದೇ ಭಾವಿಸಬೇಕು. ದೇವಾಲಯವನ್ನು ನೋಡಿದ ಮಾತ್ರದಿಂದ ದೇವರ ನೆನಪು ಬಂದು ಆಸ್ತಿಕನಾದವನು ಕೈಮುಗಿಯುತ್ತಾನೆ; ಅದರ ಸುತ್ತಲೂ ಕಸ ಮುಂತಾದವು ಗಳೇನಾದರೂ ಬಿದ್ದಿದ್ದರೆ ತೆಗೆದುಹಾಕುತ್ತಾನೆ; ಗುಡಿಯು ಹಳೆಯದಾಗಿ ಕೆಲವು ಭಾಗ ಪಾಳಾಗಿದ್ದರೆ ಅದನ್ನು ಜೀರ್ಣೋದ್ಧಾರಮಾಡುವದಕ್ಕೆ ತನ್ನ ಕೈಯಲ್ಲಾದ ಧನಸಹಾಯ ವನ್ನೋ ಸೇವೆಯ ಸಹಾಯವನ್ನೋ ಮಾಡುತ್ತಾನೆ; ಅದರಲ್ಲಿ ಆಗಾಗ್ಗೆ ಹಣ್ಣುಕಾಯಿ ಗಳನ್ನರ್ಪಿಸಿ ಮಂಗಳಾರತಿ ಮುಂತಾದವುಗಳನ್ನು ನಡೆಯಿಸುತ್ತಾನೆ, ಕೈಯಲ್ಲಾದರೆ ನಿತ್ಯಪೂಜೆಯನ್ನೂ ಮಾಡುತ್ತಾನೆ. ಇದರಂತೆ ನಮ್ಮ ಸುತ್ತುಮುತ್ತಲೂ ಕಾಣಬರುವವರ ದೇಹಗಳೆಲ್ಲವೂ ದೇವಾಲಯಗಳೆಂದು ಭಾವಿಸುವದಾದರೆ, ಅವರೆಲ್ಲರನ್ನೂ ನಾವು ಗೌರವಿಸಬೇಕು. ಅವರ ಮನೆಗಳ ಮುಂದೆ ಕಸವನ್ನು ಹಾಕಬಾರದು; ಅವರಿಗೆ ಅನಾರೋಗ್ಯವಾಗಬಹುದಾದ ಅಶುಚಿಕಾರ್ಯಗಳನ್ನು ಮಾಡುವದಕ್ಕೆ ನಮ್ಮ ಮಕ್ಕಳನ್ನು ಬಿಡಬಾರದು; ಅವರೆಲ್ಲರೂ ಅರೋಗದೃಢಕಾಯರಾಗಿ, ನಿರ್ಮಲರಾಗಿ, ಒಬ್ಬೊಬ್ಬರೂ ದೇವರಗುಡಿಗಳಾಗಿ ಬಾಳುವದಕ್ಕೆ ತಕ್ಕ ಸಹಾಯವನ್ನು ನಮ್ಮ ಕೈಯಲ್ಲಾದ ಮಟ್ಟಿಗೆ ಮಾಡಬೇಕು. ಬಡವರಿಗೆ ಅನ್ನಬಟ್ಟೆಗಳನ್ನು ಕೊಡುವದು, ಧನಸಹಾಯಮಾಡುವದು, ವಿದ್ಯಾದಿಗಳನ್ನು ಹೇಳಿಕೊಡುವದು–ಮುಂತಾದ ರೀತಿಗಳಿಂದ ಮಾಡುವ ಉಪಕಾರವೆಲ್ಲ

ಪರಮೇಶ್ವರನ ಗುಡಿಗಳನ್ನು ಜೀರ್ಣೋದ್ಧಾರಮಾಡಿದಂತೆ–ಎಂದು ಭಾವಿಸಬೇಕು. ಹಣವಂತನಾದವನು ತನ್ನ ನೆರೆಯವರ ಮತ್ತು ಊರವರ ಉಪಯೋಗಕ್ಕೆಂದು ಸ್ನಾನ ಪಾನಗಳಿಗೆ ಕೆರೆಕಟ್ಟೆಗಳನ್ನು ಕಟ್ಟಿಸುವದೂ, ತಿಳಿವಳಿಕೆಯ ಪ್ರಸಾರಕ್ಕೆಂದು ವಿದ್ಯಾಶಾಲೆ ಗಳನ್ನೂ ಪುಸ್ತಕಭಂಡಾರಗಳನ್ನೂ ಏರ್ಪಡಿಸುವದೂ, ಈ ದೃಷ್ಟಿಯಲ್ಲಿ ದೇವರ ಪೂಜೆಯೇ ಆಗಿರುವದು.

ದೇಹವೆಂದರೆ ಬರಿಯ ಮನುಷ್ಯನ ದೇಹವೆಂದು ಕುಗ್ಗಿಸಿ ಅರ್ಥಮಾಡುವದಕ್ಕೇನೂ ಕಾರಣವಿಲ್ಲ. ಪ್ರಾಣಿಗಳಿಗೂ ದೇಹವುಂಟು. ಆ ದೇಹಗಳನ್ನೂ ದೇವಾಲಯವೆಂದು ಭಾವಿಸುವಾತನಿಗೆ 'ಪ್ರಾಣಿಹಿಂಸೆ ಮಾಡಬಾರದು' ಎಂಬ ನೀತಿವಾಕ್ಯವು ಅನವಶ್ಯ ವಾಗಿರುವದು. ಪ್ರಾಣಿಗಳಲ್ಲೂ ನಮ್ಮಲ್ಲಿರುವ ಪರಮೇಶ್ವರನೇ ವಾಸವಾಗಿರುವನೆಂದು ಅವನು ದೃಢವಾಗಿ ನಂಬಿರುವದರಿಂದ ಅವುಗಳನ್ನು ಹಿಂಸೆಮಾಡುವದು ಹೇಗೆ ಸರಿಯಾದೀತು? ಅವುಗಳ ಪೋಷಣೆಯೂ ಪರಮೇಶ್ವರನ ಪೂಜೆಯೇ ಎಂದು ಅವನು ಎಣಿಸುವನು.

ಹೀಗೆ ದಾನ, ಧರ್ಮ, ಪರೋಪಕಾರ, ಸರ್ವಭೂತಪ್ರೇಮ–ಇಷ್ಟನ್ನೂ 'ದೇಹವೇ ದೇವಾಲಯ'ವೆಂಬ ಶ್ಲೋಕಪಾದವು ಒಳಗೊಂಡಿರುವದು. **ಸಂ–5, 260**

## ಜೀವನೇ ದೇವನು

"ದೇಹವೇ ದೇವಾಲಯ" ವೆಂಬ ಭಾವನೆಯ ಫಲವನ್ನು ಆಚರಣೆಯಲ್ಲಿ ಹೇಗೆ ತೋರಿಸಬೇಕೆಂಬುದನ್ನು ಹಿಂದೆ ತಿಳಿಸಿದ್ದೇನೆ. ಈಗ "ಜೀವನೇ ಸನಾತನದೇವನು" ಎಂಬ ಭಾವನೆಯನ್ನು ಮನಸ್ಸಿನಲ್ಲಿ ಹುರಿಗೂಡಿಸಿಕೊಂಡಾತನು ತನ್ನ ಆಚರಣೆಯನ್ನು ಹೇಗಿಟ್ಟುಕೊಳ್ಳಬೇಕೆಂಬುದನ್ನು ಪ್ರಸ್ತಾಪಿಸುವೆನು.

'ನಾನು ಜೀವನು' ಎಂಬ ಭಾವನೆಯಲ್ಲಿ ಏನೇನು ಅಡಕವಾಗಿರುವದು? ಜೀವನೆಂದರೆ ಪ್ರಾಣಧಾರಣೆಮಾಡಿರುವವನು. ಮನುಷ್ಯನು ತಂದೆತಾಯಿಗಳ ಹೊಟ್ಟೆಯಲ್ಲಿ ಹುಟ್ಟಿ, ಬೆಳೆದು, ಕೆಲವು ದಿನ ಬದುಕಿದ್ದು, ಕೊನೆಗೆ ತನ್ನ ಬಾಳುವೆಯನ್ನು ಪೂರ್ತಿಗೊಳಿಸುತ್ತಾನೆ. ಹೀಗೆ ಕೆಲವು ದಿನ ಬದುಕಿದ್ದು ಆಯಾ ಕರ್ಮಗಳನ್ನು ಮಾಡಿ ಆಯಾ ಫಲಗಳನ್ನುಂಡು ಕೊನೆಗೆ ಕಾಲವಶನಾಗುವವನೇ ಜೀವನು–ಎಂದು ನಾವೆಲ್ಲರೂ ನಂಬಿರುತ್ತೇವೆ. ಇದರ ಜೊತೆಗೆ ಶಾಸ್ತ್ರದಲ್ಲಿ ನಂಬಿಕೆಯಿರುವವರು, ಸತ್ತಮೇಲೆ ತಾವು ಪುಣ್ಯದಿಂದ ಸ್ವರ್ಗವನ್ನೂ ಪಾಪದಿಂದ ನರಕವನ್ನೂ ಹೊಕ್ಕು ಸುಖದುಃಖಗಳನ್ನು ಅನುಭವಿಸಿದ ಮೇಲೆ ತಮ್ಮ ಕರ್ಮದ ಫಲದ ವಾಸನೆಗೆ ತಕ್ಕಂತೆ ಒಳ್ಳೆಯ ಅಥವಾ

ಕೆಟ್ಟಜನ್ಮದಲ್ಲಿ ಮತ್ತೆ ಬೀಳುವೆವೆಂದೂ ನಂಬಿರುತ್ತಾರೆ. ಅಂತೂ ಜೀವನೆಂದರೆ ಕರ್ಮದ ಫಲಕ್ಕೆ ಕಟ್ಟುಬಿದ್ದು ಜನನಮರಣಗಳನ್ನು ಪಡೆಯುವ, ಮತ್ತು ಸುಖದುಃಖಗಳನ್ನು ಹೊಂದುತ್ತಿರುವ, ಪ್ರಾಣಿಯೆಂದರ್ಥವಾಯಿತು.

ಆದರೆ ಚೆನ್ನಾಗಿ ವಿಚಾರಮಾಡಿದ ಮೇಲೆ ಜೀವನೇ ದೇವನಾಗಿರುವನೆಂದು ಕಂಡುಬರುವದು. ಶಾಸ್ತ್ರವು ಇದು ಹೇಗೆಂಬುದನ್ನು ಮನಗಾಣಿಸಿಕೊಡುವದು. ಜೀವನು ದೇವನಾಗಿರುವದು ಹೇಗೆ?-ಎಂಬ ಶಂಕೆಯನ್ನು ತೆಗೆದು ಅದಕ್ಕೆ ಯುಕ್ತಿಯುಕ್ತವಾಗಿಯೂ ಶಾಸ್ತ್ರಸಮ್ಮತವಾಗಿಯೂ ಇರುವ ಉತ್ತರವನ್ನು ಹೇಳುವದಕ್ಕೆ ನಾನು ಇಲ್ಲಿ ಹೊರಟಿರುವದಿಲ್ಲ. 'ನಾನು ಜೀವನಲ್ಲ' ಎಂಬುದಿಷ್ಟೇ ಇಲ್ಲಿ ಪ್ರಕೃತವಾಗಿರುವದು. ಯಾವನು ತಾನು ಜೀವನಲ್ಲವೆನ್ನುವನೋ ಅವನಿಗೆ ಮೂರುಗಳಿಗೆಯ ಬಾಳಿನ ಈ ದೇಹದಲ್ಲಿ ನಾನು ನನ್ನದೆಂಬ ಬುದ್ಧಿಯು ತಪ್ಪಿಹೋಗುವದು. ದೇವರಿಗೆ ಎಷ್ಟೋ ಜನ ಭಕ್ತರು ಗುಡಿಗಳನ್ನು ಕಟ್ಟಿಸುತ್ತಾರೆ. ಆ ಗುಡಿಗಳ ಅಂದದ ಮೇಲೂ ಭದ್ರತೆಯ ಮೇಲೂ ದೇವರಿಗೆ ಅಭಿಮಾನವಿದ್ದೀತೇನು? ಅವು ನಾಶವಾದರೆ ದೇವರೇ ನಾಶವಾಗುವನೇ ಎಂದಿಗೂ ಇಲ್ಲ. ಇದರಂತೆ ಇವನಿಗೂ ತನ್ನ ದೇಹವು ತಾನಿರುವ ಒಂದು ದೇವಾಲಯದಂತೆ ಇರುವದು. ಅಲ್ಲಿ ತೋರಿಕೊಳ್ಳುವ ತಾನು ಅಸಂಗನಾಗಿ ಜನನ ಮರಣರಹಿತನಾಗಿರುವ ದೇವನು-ಎಂಬ ಭಾವನೆಯು ಬೇರೂರಿರುವದು.

ಜೀವನು ದೇವನೆಂದರೆ ತಾನೊಬ್ಬನೇ ದೇವರು, ಮಿಕ್ಕವರೆಲ್ಲ ತನ್ನ ಭಕ್ತರು ಎಂದರ್ಥವಲ್ಲ; ಇಂಥ ಬುದ್ಧಿಯು ಯಾವನಿಗಾದರೂ ಬಂದಿತೆಂದರೆ ಅವನು ದೇವನಾಗುವ ಬದಲು ಅಸುರನಾಗುವನು. 'ಲೋಕದಲ್ಲಿ ದೇವರೇ ಇಲ್ಲ, ನಾನೇ ಜಗತ್ತಿಗೆಲ್ಲ ಒಡೆಯನು' ಎಂಬ ಅಹಂಕಾರವೇ ಪ್ರಪಂಚದಲ್ಲಿರುವ ದುಃಖಕ್ಕೆಲ್ಲ ತಾಯಿಬೇರು; ಆದ್ದರಿಂದ ಆ ಹೆಮ್ಮೆಯನ್ನು ಮೊದಲು ಕಡಿದುಹಾಕಬೇಕು. ನಾನು, ನೀನು-ಎಂಬ ಭೇದಬುದ್ಧಿಯನ್ನೇ ಕಡಿದುಹಾಕುವ ಬುದ್ಧಿಯ ವಿಚಾರವನ್ನು ಈಗ ನಾವು ಪ್ರಾರಂಭಿಸಿರುವದು. ನಾನೂ ದೇವನು, ನೀನೂ ದೇವನು, ಎಲ್ಲರೂ ದೇವರೇ; ನಾನು, ನೀನು, ಅವರು, ಇವರು-ಎಂಬ ಭೇದಕ್ಕೆಲ್ಲ ಆಧಾರವಾಗಿರುವವನೇ ದೇವನು-ಎಂಬುದೇ ಜೀವನು ದೇವನೆಂಬ ಮಾತಿಗೆ ಅರ್ಥವು.

ಜೀವನು ದೇವರೆಂಬ ಮಾತಿನಲ್ಲಿ ಮನುಷ್ಯರನ್ನು ಮಾತ್ರ ಸೇರಿಸಿರುವದಿಲ್ಲ. ಸ್ಥಾವರಜಂಗಮಪ್ರಾಣಿಗಳನ್ನೆಲ್ಲ ಸೇರಿಸಿರುತ್ತದೆ. ಪರಮಾತ್ಮನು ಜಗತ್ತನ್ನು ಸೃಷ್ಟಿಮಾಡಿ ಜೀವಕಲೆಯಿಂದ ಅದರೊಳಕ್ಕೆ ಪ್ರವೇಶಿಸಿರುವನು-ಎಂದು ಶ್ರುತಿಸ್ಮೃತಿಗಳಲ್ಲಿ ಡಂಗುರವನ್ನು ಹೊಡೆದಿರುತ್ತದೆ. ಈ ಭಾವನೆಯಲ್ಲಿ ಮೇಲುಕೀಳುಗಳಿಲ್ಲ; ಜೀವರುಗಳೆಲ್ಲರೂ ದೇವರೇ, ದೇವರಿಗಿಂತ ಬೇರೆಯಾಗಿ ಜೀವರುಗಳು ಇರುವದೇ ಇಲ್ಲ.

ಹೀಗಿರುವದರಿಂದ ಜೀವನೇ ದೇವರೆಂಬ ಭಾವನೆಯು ಯಾರ ಮನಸ್ಸಿನಲ್ಲಿ ಊಡಿಕೊಂಡಿರುವದೋ ಅವನಿಗೆ ಜಗತ್ತೇ ದೇವಮಯವಾಗಿರುವದು. ಆದ್ದರಿಂದ ಅವನು ತನ್ನ ನೆರೆಹೊರೆಯ, ಊರಿನ, ದೇಶದ ಜನರನ್ನೇ ಅಲ್ಲದೆ ಕೀಳುಪ್ರಾಣಿಗಳನ್ನು ಕೂಡ ದೇವಭಾವನೆಯಿಂದಲೇ ಕಾಣುತ್ತಿರುವನು.

ಇಲ್ಲಿ ಒಂದು ಸಂದೇಹವುಂಟಾಗಬಹುದು; ತಾನೂ ದೇವರಾಗಿ, ಎಲ್ಲರೂ ದೇವರಾದರೆ ದೇವರು ದೇವರನ್ನೇ ಪೂಜಿಸುವನೆ? ಮೇಲುಕೀಳೆಂಬ ಭಾವನೆಯೇ ಇಲ್ಲದಿದ್ದರೆ, ನಾನುನೀನೆಂಬ ಭೇದವೂ ಇಲ್ಲದಿದ್ದರೆ, ದಾನಧರ್ಮಪರೋಪಕಾರಾದಿಗಳಿಗೆ ಸ್ಥಳವೆಲ್ಲಿ? ಸರ್ವಭೂತಪ್ರೇಮವೆಂಬ ಮಾತಿಗಾದರೂ ಅರ್ಥವೇನು? ಈ ಪ್ರಶ್ನೆಯನ್ನು ತರ್ಕದೃಷ್ಟಿಯಿಂದ ಹಾಕಿರುವದಲ್ಲ; ಜೀವನೇ ದೇವನೆಂಬ ಭಾವನೆಯಲ್ಲಿ ಪೂಜ್ಯಪೂಜಕಭಾವವು ಹೇಗಿರುವದೆಂಬುದನ್ನು ತಿಳಿಯಬೇಕೆಂಬುದೇ ಈ ಪ್ರಶ್ನೆಯ ಉದ್ದೇಶವು. **ಸಂ–6, 102**

## ಸೋಽಹಂಭಾವದ ಪೂಜೆ

ಆ ದೇವನೇ ನಾನೆಂಬ ಭಾವನೆಯಿಂದ ಮಾಡುವ ಪೂಜೆಯ ಮೊಟ್ಟಮೊದಲು ನೆನಪಿನಲ್ಲಿಡಬೇಕಾದ ವಿಷಯವೊಂದಿದೆ. ಚೆನ್ನಾಗಿ ವಿಚಾರಮಾಡದೆ ಇರುವಾಗ ಹೊರಗೆ ಕಾಣಿಸುವದೆಲ್ಲವೂ ದೇವರೇ ಎಂಬ ತಿಳಿವಳಿಕೆಗೂ ಪೂಜ್ಯಪೂಜಕಭಾವದ ಬುದ್ಧಿಗೂ ವಿರೋಧವಿರುವಂತೆ ತೋರುತ್ತದೆ. ಏಕೆಂದರೆ ತನ್ನನ್ನು ತಾನೇ ಪೂಜಿಸುವದೆಂಬ ಮಾತಿಗೆ ಅರ್ಥವೇ ಇಲ್ಲವೆಂದೂ ಪೂಜ್ಯವಾದ ವಸ್ತುವು ನಮಗಿಂತ ಉತ್ಕೃಷ್ಟವಾಗಿಯೇ ಇರಬೇಕೆಂದೂ ನಾವುಗಳು ಎಣಿಸಿರುತ್ತೇವೆ. ಒಂದು ಬಗೆಯಲ್ಲಿ ನೋಡಿದರೆ ಇದು ನಿಜವೇ ಆದರೂ ಮತ್ತೊಂದು ಬಗೆಯಲ್ಲಿ ನೋಡುವಾಗ ಎಲ್ಲವೂ ದೇವರಾದರೆ ನಿಜವಾದ ಪೂಜೆಯು ಹೊಂದುವದೆಂದು ನಾವು ಮನಗಾಣಬಹುದಾಗಿರುವದು. ಆದ್ದರಿಂದಲೇ ಮೊದಲನೆಯ ಬರಹದಲ್ಲಿ ನಾನು ವಿವರಿಸುವದಕ್ಕೆಂದು ತೆಗೆದುಕೊಂಡ ಶ್ಲೋಕದಲ್ಲಿ "ತ್ಯಜೇದಜ್ಞಾನನಿರ್ಮಾಲ್ಯಂ ಸೋಽಹಂಭಾವೇನ ಪೂಜಯೇತ್" ಎಂದಿರುತ್ತದೆ. ಅಜ್ಞಾನವನ್ನು ಮೊದಲು ತೆಗೆದುಹಾಕಿದ ಮೇಲೆ ಈ ಸೋಽಹಂಭಾವದ ಪೂಜೆಯ ಅರ್ಥವು ನಮಗೆ ಮನದಟ್ಟುವದೆಂಬುದು ಶ್ಲೋಕದ ಭಾವಾರ್ಥವು.

ಪೂಜಿಸುವದೆಂದರೇನು ? ಗೌರವದಿಂದ ಕಾಣುವದು, ದೊಡ್ಡದೆಂಬ ಭಾವನೆಯಿಂದ ಆದರಸತ್ಕಾರಗಳನ್ನು ಮಾಡುವದು. ಇಂಥ ಪೂಜೆಗೆ ಮೂಲವೇನೆಂದು ನೋಡಿದರೆ ಪ್ರೇಮವೇ ಎಂಬುದು ಸ್ಪಷ್ಟವಾಗಿದೆ. ಯಾವ ವಸ್ತುವಿನ ಹೆಚ್ಚುಗಾರಿಕೆಯನ್ನು ನಾವು ಅರಿತಿಲ್ಲವೋ ಅದರ ವಿಷಯದಲ್ಲಿ ನಮಗೆ ಗೌರವಬುದ್ಧಿಯುಂಟಾಗುವ ಸಂಭವವಿರುವದಿಲ್ಲ; ಯಾವದು ನಮ್ಮ ಆತ್ಮನಿಗಿಂತ ಬೇರೆಯಾಗಿರುವದೋ ಅದರ

ವಿಷಯದಲ್ಲಿ ಮಿಗಿಲಿಲ್ಲದ ಪ್ರೇಮವುಂಟಾಗುವ ಸಂಭವವಿರುವದಿಲ್ಲ. ಹೀಗಿರುವಲ್ಲಿ ಪರಮೇಶ್ವರನು ಎಲ್ಲರಿಗಿಂತಲೂ ಹೆಚ್ಚು ಶಕ್ತಿಯುಳ್ಳವನು, ಹೆಚ್ಚು ಜ್ಞಾನವುಳ್ಳವನು– ಎಂದು ತಿಳಿದ ಮಾತ್ರದಿಂದ ನಮಗೆ ಆತನಲ್ಲಿ ಗೌರವದ ಜೊತೆಗೆ ಭಕ್ತಿಯೂ ಆಗುವದಕ್ಕೇನು ಕಾರಣ? ಆತನು ನಮ್ಮಗಳ ಆತ್ಮನಾಗಿರುವದರಿಂದಲೇ, ಪರಮೇಶ್ವರನು ನಮ್ಮ ಆತ್ಮನಲ್ಲದೆ ಹೋದರೆ ಆತನ ಸರ್ವಜ್ಞತ್ವಸರ್ವಶಕ್ತಿತ್ವಗಳ ಜ್ಞಾನವು ನಮ್ಮಲ್ಲಿ ಒಂದು ಬಗೆಯ ಭಯಭಕ್ತಿಯನ್ನು–ಎಂದರೆ ಭಯದಿಂದ ಭಕ್ತಿಯನ್ನು–ನಟಿಸುವಂತೆ ಮಾಡೀತೇ ಹೊರತು ನೈಜವಾದ ಭಕ್ತಿಯನ್ನುಂಟುಮಾಡಲಾರದು. ಆತನು ದಯಾಳುವು, ಕರುಣಾಳುವು, ತನ್ನ ಆರಾಧಕರ ಅಭೀಷ್ಟವನ್ನು ಸಲ್ಲಿಸುವಾತನು–ಎಂದು ತಿಳಿದರೆ ಆತನಲ್ಲಿ ಗೌರವವೂ ಆತನ ಸೇವೆಯಲ್ಲಿ ಆದರವೂ ಆಗಬಹುದು; ಆದರೆ ಆತನನ್ನು ನಮ್ಮಂತೆ ಪ್ರೀತಿಸುವದೆಂಬುದು ಮಾತ್ರ ಎಂದೆಂದಿಗೂ ಆಗಲಾರದು. ಈ ದೃಷ್ಟಿಯಿಂದ ನೋಡಿದರೆ ಪರಮೇಶ್ವರನು ನಮ್ಮ ಆತ್ಮನೆಂಬ ಜ್ಞಾನವು, ಪರಮೇಶ್ವರನಲ್ಲಿರುವ ಸರ್ವಜ್ಞತ್ವವೂ ಸರ್ವಶಕ್ತಿತ್ವವೂ ಮಿಕ್ಕ ಸಕಲ ಕಲ್ಯಾಣಗುಣಗಳ ಸಮುದಾಯವೂ ನಿಜವಾಗಿ ನಮ್ಮಲ್ಲಿಯೇ ಅವ್ಯಕ್ತವಾಗಿ ಅಡಗಿರುವವೆಂಬುದನ್ನೂ ಆತನನ್ನು ಭಕ್ತಿಯಿಂದ ಕಾಣುವದು ನಮ್ಮ ಅತ್ಯಂತಪುರುಷಾರ್ಥಕ್ಕೆ ಕಾರಣವಾಗಿರುವದೆಂಬುದನ್ನೂ ಸ್ಪಷ್ಟಗೊಳಿಸುವದು. ಇದರಿಂದ ನಮಗೆ ಆತನಲ್ಲಿ ನಿಶ್ಚಲವಾದ ಭಕ್ತಿಯುಂಟಾಗಿ ನಾವು ಆತನ ಆರಾಧನೆಯಲ್ಲಿ ತೊಡಗುವೆವೆಂಬುದು ಸಹಜವಾಗಿ ಏರ್ಪಡುತ್ತದೆ.

ಪರಮೇಶ್ವರನ ಪೂರ್ಣವಾದ ಆರಾಧನೆಗೆ ಆತನೇ ನಾನೆಂಬ ನಂಬಿಕೆಯೊಂದೇ ಸಾಲದು; ಆತನು ಸರ್ವಾತ್ಮನು, ನನ್ನಂತೆ ಸಕಲ ಪ್ರಾಣಿಗಳಿಗೂ ಆತ್ಮನಾಗಿರುವನು, ಅವುಗಳಲ್ಲಿರುವ ಆತ್ಮನಿಗೂ ನನ್ನಲ್ಲಿರುವ ಆತ್ಮನಿಗೂ ಯಾವ ಹೆಚ್ಚು ಕಡಿಮೆಯೂ ಇರುವದಿಲ್ಲ–ಎಂಬ ತಿಳಿವಳಿಕೆಯೂ ಬೇಕು. ಈ ತಿಳಿವಳಿಕೆಯು ಯಾರ ಅಂತಃಕರಣದಲ್ಲಿ ಮೊಳಕೆಯಾಗಿರುವದೊ, ಅವರು ಅಜ್ಞಾನದ ನಿರ್ಮಾಲ್ಯವನ್ನು ಕಳೆದಂತಾಗುವದು. ಅವರು ಅಹಂಭಾವವನ್ನು ನೀಗಿ ಸೋಽಹಂಭಾವದ ಪೂಜೆಯನ್ನು ಕೈಕೊಳ್ಳುವದಕ್ಕೆ ಅರ್ಹರಾಗಿರುವರು. ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಗಳವರೆಗೂ ಎಲ್ಲೆಲ್ಲಿಯೂ ಪರಮಾತ್ಮನೇ ತುಂಬಿರುವನೆಂಬ ಬುದ್ಧಿಯು ಬಂದಿರುವಾತನಿಗೆ ಬ್ರಹ್ಮಾದಿಗಳಿಗಿಂತ ನಾನು ಕಡಿಮೆಯವನೆಂಬ ಕಾರಣದಿಂದ ಅವರಲ್ಲಿ ಭಿಕ್ಷೆಬೇಡುವ ಪೂಜೆಯನ್ನು ಕೈಕೊಳ್ಳಬೇಕಾದದ್ದಿರುವದಿಲ್ಲ; ಮಿಕ್ಕ ಪ್ರಾಣಿಗಳಿಗಿಂತ ತಾನು ಹೆಚ್ಚಿನವನೆಂಬ ಕಾರಣದಿಂದ ಅವರನ್ನು ಕಡೆಗಣಿಸಿ ಹೆಮ್ಮೆಯಿಂದ ಮೆರೆಯಬೇಕಾದದ್ದಿರುವದಿಲ್ಲ. ಪ್ರಪಂಚದಲ್ಲಿರುವ ಸಾತ್ತ್ವಿಕರಾಜಸತಾಮಸಪ್ರಾಣಿಗಳೆಲ್ಲವೂ ನಿಜವಾಗಿ ಆ ಪರಬ್ರಹ್ಮದ ಅಂಶವೇ, ಪರಮಾರ್ಥದೃಷ್ಟಿಯಿಂದ ಪರಬ್ರಹ್ಮವೇ, ತಾನು ತನ್ನ ಸ್ವರೂಪದಿಂದ ಅವುಗಳಿಗಿಂತ ಎಳ್ಳಷ್ಟೂ ಭಿನ್ನನಲ್ಲ–ಎಂಬ ತತ್ತ್ವದ ಅನುಸಂಧಾನವೇ ಪೂಜೆಯ ರಹಸ್ಯವು. ಈ

ಪೂಜೆಯಿಂದ ಅಮಂಗಲಕರವಾದ ಅಹಂಭಾವವು ಹಿಮ್ಮೆಟ್ಟುವದು, ಸರ್ವಮಂಗಲಕರವಾದ ಬ್ರಹ್ಮಭಾವವು ಎದ್ದು ತಾಂಡವವಾಡುವದು.

ಎಲ್ಲವೂ ಬ್ರಹ್ಮವೇ, ಎಲ್ಲವೂ ಪರಮೇಶ್ವರನೇ–ಎಂದಾದರೆ ಪರಮೇಶ್ವರನು ತಾನು ತನ್ನನ್ನೇ ಪೂಜಿಸುವನೆ?– ಎಂದು ಕೆಲವರು ತರ್ಕಮಾಡುವರು. ಈ ಶುಷ್ಕತರ್ಕದವರ ಮನಸ್ಸಿನಲ್ಲಿ ಅಡಗಿರುವ ಶಂಕೆಯೇನೆಂದರೆ ಪರಮೇಶ್ವರನೆಂದರೆ ಕೃತಕೃತ್ಯನು, ಅವನಿಗೆ ಮಾಡಬೇಕಾದ ಕೃತ್ಯವೇನೂ ಇರುವದಿಲ್ಲ; ಹೀಗಿರುವಲ್ಲಿ ಅವನು ಯಾರನ್ನು ಏಕೆ ಪೂಜೆಮಾಡಬೇಕು? ಈ ಶಂಕೆಯು– ಪರಮೇಶ್ವರನೆಂದರೆ ಒಬ್ಬ ದೊಡ್ಡ ದುರಭಿಮಾನದ ಮುದ್ದೆಯೆಂಬ–ಅಡಿಗಲ್ಲಿನ ಮೇಲೆ ನಿಂತಿರುವದು. ಸಾಕ್ಷಾತ್ಪರಮೇಶ್ವರನೇ ನರನಾರಾಯಣ ರೂಪದಿಂದ ಬದರಿಕಾಶ್ರಮದಲ್ಲಿ ತಪಸ್ಸುಮಾಡುತ್ತಿದ್ದನೆಂತಲೂ ಅವರು ಆಹ್ನಿಕ ಮಾಡುತ್ತಿರುವಾಗ ನಾರದಋಷಿಗಳು ಅವರ ಸಮೀಪಕ್ಕೆ ಹೋಗಿ "ದೇವನೆ, ಸರ್ವರಿಗೂ ಪೂಜ್ಯನೂ ಮಾನ್ಯನೂ ಆಗಿರುವಾಗ ನೀನು ಯಾರನ್ನು ಪೂಜಿಸುತ್ತಿರುವೆ?" ಎಂದು ಕೇಳಲು ನಾರಾಯಣನು "ಎಲೈ ನಾರದನೆ, ಸರ್ವರಿಗೂ ಅಂತರಾತ್ಮನಾಗಿರುವ ಪರಮಸೂಕ್ಷ್ಮತತ್ತ್ವವೊಂದುಂಟು; ಆತನೇ ನಮ್ಮಗಳೆಲ್ಲರ ಆತ್ಮನು. ಆದ್ದರಿಂದಲೇ ನಾವು ಆತನನ್ನು ಪೂಜಿಸುತ್ತೇವೆ" ಎಂದು ಅಪ್ಪಣೆಮಾಡಿರುವನೆಂದು ಮೋಕ್ಷಧರ್ಮದಲ್ಲಿ ಹೇಳಿರುತ್ತದೆ. ಇದರಂತೆಯೇ ಶ್ರೀಮಹಾವಿಷ್ಣುವಿನ ಅವತಾರವೆಂದು ಪ್ರಸಿದ್ಧನಾದ ಶ್ರೀಕೃಷ್ಣನು ಪ್ರತಿದಿನವೂ ಬ್ರಾಹ್ಮಮುಹೂರ್ತದಲ್ಲಿ ಎದ್ದು ಪರಬ್ರಹ್ಮಧ್ಯಾನವನ್ನು ಮಾಡುತ್ತಿದ್ದನೆಂದು ಭಾಗವತದಲ್ಲಿ ಹೇಳಿರುತ್ತದೆ. ಈ ಇತಿಹಾಸಪುರಾಣಗಳ ವಾಕ್ಯಗಳ ಮರ್ಮವನ್ನು ತಿಳಿದವರು ಪರಮಾತ್ಮನು ತಾನೇ ತನ್ನನ್ನು ಪೂಜೆಮಾಡುವದು ಹೇಗೆ?– ಎಂಬ ಶಂಕೆಯನ್ನು ತೆಗೆಯುವದಕ್ಕೆ ಆದೀತೆ? ಎಂದಿಗೂ ಆಗಲಾರದು. ಪರಮೇಶ್ವರನು ತನ್ನ ಸ್ವರೂಪವನ್ನು ತಾನು ಅನುಸಂಧಾನಮಾಡುವದು ಆತನಿಗೆ ಉನ್ನತಿಕೀರ್ತಿಗಳನ್ನು ತರುವದೇ ಹೊರತು ಎಂದಿಗೂ ಕುಂದನ್ನುಂಟುಮಾಡಲಾರದು. ಪರಮಾತ್ಮಸ್ವರೂಪರೇ ತಾವೆಂಬ ಜ್ಞಾನಿಗಳ ವಿಚಾರವೂ ಹಾಗೆಯೇ. ಅವರು ಮಾಡುವ ಸೋಽಹಂಭಾವದ ಪೂಜೆಯೂ ಅವರ ಪೂಜ್ಯತೆಯನ್ನು ಹೆಚ್ಚಿಸುವದೇ ಹೊರತು ಎಂದಿಗೂ ಅದಕ್ಕೆ ಕಲಂಕವನ್ನು ತರುವದಿಲ್ಲವೆಂದು ತಿಳಿಯಬೇಕು.

ದೊಡ್ಡವರು ಮಾಡುತ್ತಿರುವ ಈ ಸೋಽಹಂಭಾವದ ಆರಾಧನೆಯ ಮರ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವ ಮುಂಚೆ ಭೇದಬುದ್ಧಿಯಿಂದ ಕಲುಷಿತವಾದ ಅಂತಃಕರಣವುಳ್ಳ ನಾವುಗಳು ಮಾಡುವ ಪೂಜೆಯು ಹೇಗಿರಬೇಕೆಂಬುದನ್ನು ಈಗ ನಾವು ಮನಗಾಣಬಹುದಾಗಿರುತ್ತದೆ. ಯಾವ ಬುದ್ಧಿಯು ರಾಗ, ದ್ವೇಷ, ಮೋಹ, ಮದ, ಮಾತ್ಸರ್ಯ–ಮುಂತಾದ ಚಿತ್ತಕ್ಲೇಶವನ್ನು ಹೆಚ್ಚಿಸುವದೋ ಅದು ಭೇದಭಾವವು ಮತ್ತಷ್ಟು ಚಿಗುರಿಕೊಳ್ಳುವಂತೆ ಅದಕ್ಕೆ ಗೊಬ್ಬರವನ್ನೂ ನೀರನ್ನೂ ಹಾಕುತ್ತಿರುವದು; ಯಾವ ಬುದ್ಧಿಯು

ಪ್ರೇಮದಯಾದಾಕ್ಷಿಣ್ಯಾದಿಗಳನ್ನು ಹೆಚ್ಚಿಸುವದೋ ಅದು ಭೇದಭಾವವನ್ನು ಕಡಿಮೆ ಮಾಡುತ್ತಿರುವದು. ಆದ್ದರಿಂದ ನಾವು ಸಕಲ ಜೀವರಲ್ಲಿಯೂ ಒಂದೇ ಸಮನಾಗಿ ಇರುವ ಆ ಪರಮಾತ್ಮನೇ ನಮ್ಮ ಪರಮಾರ್ಥವಾದ ಆತ್ಮನೆಂಬ ಭಾವನೆಯನ್ನು ಆದಷ್ಟು ಹೆಚ್ಚಿಸಿಕೊಳ್ಳಬೇಕು. ಆ ಭಾವನೆಯಿಂದ ತುಂಬಿತುಳುಕುತ್ತಿರುವ ಅಂತಃಕರಣವುಳ್ಳ ಸತ್ಪುರುಷರ ಸೇವೆಯನ್ನು ಮಾಡಬೇಕು. ಆ ಸತ್ಪುರುಷರ ನಡೆನುಡಿಗಳನ್ನು ಅನುಸರಿಸಿ ನಮ್ಮ ಸುತ್ತಲೂ ಇರುವ ಜನರಲ್ಲಿಯೂ ಪ್ರಾಣಿಗಳಲ್ಲಿಯೂ ಪ್ರೇಮವನ್ನು ಬೆಳೆಯಿಸುತ್ತಿರಬೇಕು. ಇದೇ ಅಜ್ಞಾನಿಗಳಾದ ನಮಗೆ ಸಲ್ಲುವ ಸೋಽಹಂಭಾವದ ಪೂಜೆ. ಈಗ ನಾವು ನಮ್ಮ ಆತ್ಮನೆಂದು ಭಾವಿಸಿರುವ ನಮ್ಮ ದೇಹೇಂದ್ರಿಯಗಳಲ್ಲಿಯೂ ನಮ್ಮ ಭೋಗದ ಉಪಕರಣಗಳೆಂದು ಭಾವಿಸಿರುವ ಹೆಂಡಿರುಮಕ್ಕಳು, ಹೊಲಮನೆ, ಹಣಕಾಸು –ಇವುಗಳಲ್ಲಿಯೂ ಮಿತಿಮೀರಿದ ಅಭಿಮಾನವು ಹೋಗುವದಕ್ಕೆ ಈ ಸರ್ವಾತ್ಮಭಾವದ ಪೂಜೆಯೊಂದಲ್ಲದೆ ಮತ್ತೆ ಯಾವದೂ ಸರಿಯಾದ ಚಿಕಿತ್ಸೆಯಲ್ಲ. **ಸಂ–6, 360**

## ದೇವಾಲಯ

(ಶ್ರೀ ತಾರಾಚಂದ್ರ ಪಾಂಡಿಯವರ ಲೇಖನ) ಲೌಕಿಕರು ನಿನ್ನ ಆಲಯವೆನ್ನುತ್ತಾರಲ್ಲ, ಆ ಕಟ್ಟಡದೊಳಕ್ಕೆ ಹೋದೆನು. ಅಲ್ಲಿ ನಿನ್ನ ಮಹಿಮೆಯು ಕಂಡುಬರಲಿಲ್ಲ. ಚಿನ್ನದ ಮಹಿಮೆಯು ಎದ್ದು ಕಾಣುತ್ತಿತ್ತು. ನಿನ್ನ ಪ್ರತಿಮೆಯೆನ್ನಿಸಿಕೊಂಡಿದ್ದ ಚಿನ್ನದ ಪ್ರತಿಮೆಯು ರತ್ನಖಚಿತವಾದ ಆಭರಣಗಳಿಂದ ಥಳಥಳಿಸುತ್ತಿತ್ತು. ಅದನ್ನು ಒಂದು ಎತ್ತರವಾದ ಚಿನ್ನದ ಸಿಂಹಾಸನದ ಮೇಲೆ ಕುಳ್ಳಿರಿಸಿದ್ದರು; ನಿನ್ನ ಕಲ್ಪನೆಯು ಚಿನ್ನವನ್ನು ಬಿಟ್ಟರೆ ಜನರಿಗೆ ಆಗುವ ಹಾಗೇ ಇಲ್ಲವೇನೋ ಎಂಬಂತಿತ್ತು. ಪೀಠದ ಬಳಿಯಲ್ಲಿ ಚಿನ್ನದ ಪುಷ್ಪಾಂಜಲಿಯ, ಮತ್ತು ಚಿನ್ನದಿಂದ ಕೊಂಡ ವಸ್ತುಗಳ, ರಾಶಿಯೊಂದು ಎತ್ತರವಾಗಿ ಬಿದ್ದಿತ್ತು; ನಿನಗೆ ಸಮರ್ಪಿಸುವದಕ್ಕೆ ಅತ್ಯಂತಯೋಗ್ಯವಾದ ವಸ್ತುವೆಂದರೆ ಜನರಿಗೆ ಚಿನ್ನವೊಂದೆಯೋ, ಎಂಬಂತಿತ್ತು. ಎಷ್ಟೋ ಜನ ಭಕ್ತರು ನಿನ್ನ ಆಲಯವನ್ನಲಂಕರಿಸುವ ಬಗ್ಗೆ ಚಿನ್ನವನ್ನು ಸಂಪಾದಿಸುವದಕ್ಕೆಂದು ತಮ್ಮ ಜೀವನವನ್ನು ಒತ್ತೆಯಿಡುವೆವೆಂದು ಪ್ರತಿಜ್ಞೆಮಾಡುತ್ತಿದ್ದರು; ಅದನ್ನು ನೋಡಿದರೆ ನಿನಗೆ ಅರ್ಪಣೆಮಾಡುವದಕ್ಕೆ ಜೀವನವೆಂಬುದು ಚಿನ್ನದಷ್ಟು ಮಹಮೆಯಿಲ್ಲದ್ದೆಂದು ಅವರು ಭಾವಿಸಿರುವರೆಂಬಂತೆ ತೋರುತ್ತಿತ್ತು.

ಗಂಟೆಗಳನ್ನು ಬಾಜಿಸುತ್ತಿದ್ದರು, ಸ್ವಸ್ತಿಗಳನ್ನು ಹೇಳುತ್ತಿದ್ದರು, ಎಲ್ಲರೂ ನಿನ್ನನ್ನು ಪ್ರಾರ್ಥನೆಮಾಡಿಕೊಂಡು ದೀರ್ಘದಂಡನಮಸ್ಕಾರವನ್ನು ಮಾಡುತ್ತಿದ್ದರು. ಆದರೆ ಅವರು ಕೇಳಿಕೊಳ್ಳುತ್ತಿದ್ದದ್ದು ಲೌಕಿಕಸಂಪತ್ತು, ಆಟೋಪ; ಪಾಪ ! ಬರಿಯ ನಿನ್ನ ಭಕ್ತಿಯು ಏತಕ್ಕೂ ಬೇಡದ ವಸ್ತುವೆಂದು ಅವರು ಭಾವಿಸಿರಬಹುದು !

ಅಗೋ, ಈ ಸುವರ್ಣಾಲಯದ ಹೊರಗೆ ಹಸಿದವರು, ಬೇನೆಬಿದ್ದವರು, ನಿರ್ಬಲರು, ಗೋಳಿಡುವವರು-ಇವರೆಲ್ಲ ಇದ್ದರು. ದೇವಾಲಯದ ಒಳಕ್ಕೆ ಬಂದು ಹೊರಕ್ಕೆ ಹೋಗುತ್ತಿರುವ ಭಕ್ತರು ಅವರನ್ನು, ಓ ದಯಾಘನನೆ, ಕಾಲಲ್ಲಿ ತುಳಿದುಕೊಂಡು ಹೋಗುತ್ತಿದ್ದರು !

ಎಲೈ ಪರಮೇಶ್ವರನೆ, ನಾವು ಧನಲಕ್ಷ್ಮಿಯ ಭಕ್ತರಾಗಿ ನಿನ್ನ ಭಕ್ತರಲ್ಲದಿರುವಾಗ ನಿನ್ನನ್ನು ನಾವು ಕಾಣಲಾರದೆ ಇರುವೆವೆಂಬುದೇನೂ ಆಶ್ಚರ್ಯವಲ್ಲ. ಎಲೈ ಜೀವನ ಸರ್ವಸ್ವವೆ, ನಾವು ನಿರ್ಜೀವವಾದ ನಿನ್ನ ಪ್ರತಿಮೆಗಳನ್ನು ಪೂಜಿಸಿ ಸಜೀವರಾದ ನಿನ್ನ ರೂಪಗಳನ್ನು ಎಡಗಾಲಿಂದೊದೆಯುತ್ತಿರುವಾಗ ನಿನ್ನನ್ನು ಕಾಣಲಾರದೆ ಇರುವೆವೆಂಬು ದೇನೂ ಆಶ್ಚರ್ಯವಲ್ಲ. ಎಲೈ ಜಗತ್ಪಿತನೆ, ನಾವು ನಿನ್ನ ಪ್ರಿಯಪುತ್ರರನ್ನು ತಿರಸ್ಕರಿಸಿ ಸಂಕಟಗೊಳಿಸುತ್ತಿರುವಾಗ ನಿನ್ನ ಅನುಗ್ರಹವಾಗದಿರುವದೇನೂ ಆಶ್ಚರ್ಯವಲ್ಲ.

ಸಂ-6, 270

## ಈಶ್ವರನನ್ನು ಎಲ್ಲಿ ಕಾಣಬಹುದು

ಪರಮೇಶ್ವರನನ್ನು ಎಲ್ಲಿ ಹುಡುಕಿ ಕಂಡುಕೊಳ್ಳಬೇಕು? ಎಂದು ಜನರು ಆಗಾಗ್ಗೆ ಕೇಳುತ್ತಿರುವರು. 'ಹುಡುಕುವವರಿಗೆ ಅವನು ಸಿಕ್ಕುವದಿಲ್ಲ' ಎಂಬುದೇ ಈ ಪ್ರಶ್ನೆಗೆ ಉತ್ತರ.

ಪರಮೇಶ್ವರನು ಈ ಜಗತ್ತೆಲ್ಲವನ್ನೂ ಸೃಷ್ಟಿಸಿ ಅದರೊಳಗೆ ಜೀವರೂಪದಿಂದ ಹೊಕ್ಕಿರುತ್ತಾನೆ-ಎಂದು ಉಪನಿಷತ್ತುಗಳು ಸಾರುತ್ತಿವೆ. ಇದರ ಅರ್ಥವೇನೆಂದರೆ : ಪ್ರತಿಯೊಬ್ಬ ಜೀವನ ಒಳಗೂ ಆ ಪರಮೇಶ್ವರನು ಇದ್ದುಕೊಂಡಿರುತ್ತಾನೆ; ಆದ್ದರಿಂದ ಯಾರು ಬೇಕಾದರೂ ತಮ್ಮತಮ್ಮೊಳಗೇ ಆತನನ್ನು ಕಂಡುಕೊಳ್ಳಬಹುದು. ಇಲ್ಲದಿದ್ದರೆ ಪರಮೇಶ್ವರನು ನಮಗೆ ಎಂದಿಗೂ ಎಲ್ಲಿಯೂ ಸಿಕ್ಕವದಿಲ್ಲ.

ಜೀವರುಗಳಲ್ಲೆಲ್ಲ ಪರಮೇಶ್ವರನು ಇದ್ದುಕೊಂಡಿರುತ್ತಾನೆ. ಆದ್ದರಿಂದ ಎಲ್ಲಾ ಜೀವರನ್ನೂ ಆ ದೇವನಿರುವ ದೇವಾಲಯವೆಂದು ಕಾಣಿರಿ. ಎಲ್ಲರೊಡನೆಯೂ ಗೌರವದಿಂದಲೂ ಪ್ರೇಮದಿಂದಲೂ ವರ್ತಿಸಿರಿ. ಎಲ್ಲರಿಗೂ ಸಂತೋಷವನ್ನುಂಟು ಮಾಡುವದಕ್ಕೆ ಪ್ರಯತ್ನಿಸಿರಿ. ಅದೇ ಈಶ್ವರನ ಪೂಜೆಯಾಗುವದು-ಎಂದು ಬಲ್ಲವರು ಉಪದೇಶಿಸಿರುತ್ತಾರೆ.

ಎಲ್ಲಾ ಜೀವರುಗಳಲ್ಲಿಯೂ ಭಗವಂತನಿರುತ್ತಾನಾದರೂ ಭಕ್ತರೊಳಗೆ ವಿಶೇಷರೂಪ ದಿಂದ ಇರುತ್ತಾನೆ. 'ನನ್ನ ಭಕ್ತರು ಎಲ್ಲಿ ನನ್ನನ್ನು ಕೊಂಡಾಡುತ್ತಿರುವರೋ ಅಲ್ಲಿ ನಾನಿರುವೆನು' ಎಂದು ಭಗವಂತನೇ ಹೇಳಿರುತ್ತಾನೆ. ಆದ್ದರಿಂದ ಭಗವದ್ಭಕ್ತರ ಸಂಗವನ್ನು

ಮೊದಲು ಬಯಸಿರಿ. ಅಲ್ಲಿ ಆತನನ್ನು ಕಂಡುಕೊಂಡ ಮೇಲೆ ಮಿಕ್ಕ ಎಲ್ಲಾ ಜೀವರುಗಳಲ್ಲಿಯೂ ಆತನ ಭಾವನೆಯನ್ನು ಮಾಡುವದು ಸುಲಭವಾಗುವದು. ಇದಿಷ್ಟೂ ಆದಬಳಿಕ ಭಗವಂತನು ನಿಮ್ಮ ಹೃದಯದೊಳಗೇ ಇರುತ್ತಾನೆಂಬುದನ್ನು ಕಂಡುಕೊಳ್ಳುವಿರಿ. ಆ ಬಳಿಕ ಭಗವಂತನನ್ನು ಎಲ್ಲಿಯೂ ಹುಡುಕಬೇಕಾದದ್ದಿರುವದಿಲ್ಲ. **ಸಂ-36, 228**

# ನಿಜವಾದ ಪೂಜೆ

(ಶ್ರೀ ವಿವೇಕಾನಂದಸ್ವಾಮಿಗಳು ರಾಮೇಶ್ವರದಲ್ಲಿ ಮಾಡಿದ ಉಪನ್ಯಾಸ) ಪ್ರೇಮದಲ್ಲಿ ಧರ್ಮವಿರುವದೇ ಹೊರತು ಬರಿಯ ಕರ್ಮದಲ್ಲಿರುವದಿಲ್ಲ; ನಮ್ಮ ಹೃದಯದಲ್ಲಿ ಶುದ್ಧವಾದ ನಿಷ್ಕಪಟವಾದ ಪ್ರೇಮವಿರಬೇಕು, (ಅದೇ ಧರ್ಮವು). ಶರೀರಶುದ್ಧಿಯೂ ಮನಃಶುದ್ಧಿಯೂ ಇಲ್ಲದೆ ಇದ್ದರೆ ಅಂಥವನು ಶಿವಾಲಯಕ್ಕೆ ಬರುವದೂ ಶಿವಾರ್ಚನೆಯನ್ನು ಮಾಡುವದೂ ನಿಷ್ಪ್ರಯೋಜನ. ಯಾರು ಮನಸ್ಸಿನಲ್ಲಿಯೂ ದೇಹದಲ್ಲಿಯೂ ಪರಿಶುದ್ಧರಾಗಿರುವರೋ ಅಂಥವರ ಪ್ರಾರ್ಥನೆಗೇ ಶಿವನು ಕಿವಿಗೊಡುವನು. ಯಾರು ಮನಃಶುದ್ಧಿಯಿಲ್ಲದೆ ಇತರರಿಗೆ ಧರ್ಮೋಪದೇಶವನ್ನು ಮಾಡುವದಕ್ಕೆ ಹೋಗುವರೋ ಅವರ ಪ್ರಯತ್ನವು ಕೊನೆಗೆ ವ್ಯರ್ಥವಾಗಿ ಹೋಗುವದು. ಬಾಹ್ಯಾರ್ಚನೆಯು ಅಂತರರ್ಚನೆಗೆ ಚಿಹ್ನೆಯೇ ಸರಿ; ಮಾನಸ ಪೂಜೆಯೂ ಮನಃಶುದ್ಧಿಯೂ ತಾತ್ತ್ವಿಕವಾದವುಗಳು.

ಆದ್ದರಿಂದ ನಾವೆಲ್ಲರೂ ಅವಶ್ಯವಾಗಿ ಇದನ್ನು ನೆನಪಿನಲ್ಲಿಡಬೇಕು. ಈ ಕಲಿಯುಗದಲ್ಲಿ ಜನರು ಎಂಥ ಹೀನಸ್ಥಿತಿಗೆ ಇಳಿದಿರುವರೆಂದರೆ, ತಾವು ಏನುಬೇಕಾದರೂ ಮಾಡುತ್ತಿರಲಿ, ಯಾವದಾದರೊಂದು ಕ್ಷೇತ್ರಕ್ಕೆ ಹೋದರೆ ಸಾಕು, ತಮ್ಮ ಪಾಪಗಳೆಲ್ಲ ಪರಿಹಾರವಾಗಿಬಿಡುವದೆಂದು ಅವರು ಯೋಚಿಸುವರು. ಒಬ್ಬ ಮನುಷ್ಯನು ಕೆಟ್ಟ ಮನಸ್ಸಿನಿಂದ ಕೂಡಿ ಒಂದು ದೇವಸ್ಥಾನವನ್ನು ಪ್ರವೇಶಿಸಿದನೆಂದರೆ ಅವನು ತನ್ನಲ್ಲಿದ್ದ ಪಾಪಗಳ ಜತೆಗೆ ಇನ್ನೂ ಕೆಲವನ್ನು ಸೇರಿಸಿಕೊಂಡು ತಾನು ಮನೆಯಿಂದ ಹೊರಟಾಗ್ಗೆ ಇದ್ದದ್ದಕ್ಕಿಂತ ಕೆಟ್ಟಸ್ಥಿತಿಯಲ್ಲಿಯೇ ಹಿಂತಿರುಗುವನೆಂಬುದರಲ್ಲಿ ಸಂಶಯವಿಲ್ಲ. ತೀರ್ಥವೆಂದರೆ ಪವಿತ್ರ ವಸ್ತುಗಳೂ ಪವಿತ್ರಜನರೂ ತುಂಬಿರುವ ಸ್ಥಳವೆಂದರ್ಥ. ಒಂದಾನೊಂದು ಸ್ಥಳದಲ್ಲಿ ಪವಿತ್ರರಾದ ಜನಗಳು ಇದ್ದು ದೇವಾಲಯವು ಯಾವದೂ ಅಲ್ಲಿ ಇಲ್ಲದಿದ್ದರೂ ಆ ಸ್ಥಳವನ್ನು ತೀರ್ಥವೆಂದೇ ಭಾವಿಸಬೇಕು. ಒಂದು ಸ್ಥಳದಲ್ಲಿ ನೂರಾರು ದೇವಾಲಯಗಳಿದ್ದರೂ ಅಪವಿತ್ರರಾದ ಜನರೇ ಅಲ್ಲಿ ವಾಸಮಾಡುತ್ತಿದ್ದರೆ ಅಲ್ಲಿ ತೀರ್ಥವು ಮಾಯವಾಗುವದು. ತೀರ್ಥದಲ್ಲಿ ವಾಸಮಾಡುವದೆಂಬುದು ಮಹಾಕಷ್ಟತರವಾದದ್ದು. ಏಕೆಂದರೆ ಸಾಮಾನ್ಯ ಸ್ಥಳಗಳಲ್ಲಿ ಮಾಡಿದ ಪಾಪವನ್ನು ಹೇಗಾದರೂ ಪರಿಹಾರಮಾಡಿ

ಕೊಳ್ಳಬಹುದು, ಆದರೆ ತೀರ್ಥದಲ್ಲಿ ಮಾಡಿದ ಪಾಪವನ್ನು ಪರಿಹಾರಮಾಡಿಕೊಳ್ಳುವದಕ್ಕೆ ಆಗುವದೇ ಇಲ್ಲ.

ಪೂಜೆಯೊಳಗೆಲ್ಲ ಇದೇ ಸಾರವು, ಪರಿಶುದ್ಧರಾಗಿರಬೇಕು, ಪರೋಪಕಾರರತ ರಾಗಿರಬೇಕು. ಬಡವರಲ್ಲಿಯೂ ದುರ್ಬಲರಲ್ಲಿಯೂ ರೋಗಿಗಳಲ್ಲಿಯೂ ಶಿವನನ್ನು ಕಾಣುವಾತನೇ ನಿಜವಾಗಿ ಶಿವಾರ್ಚನೆ ಮಾಡುವಾತನು; ಲಿಂಗದಲ್ಲಿ ಮಾತ್ರವೇ ಶಿವನನ್ನು ಕಂಡರೆ, ಅಂಥವನ ಪೂಜೆಯು ಇನ್ನೂ ಪ್ರಾರಂಭಸ್ಥಿತಿಯಲ್ಲಿದೆಯೆಂದು ಭಾವಿಸಬೇಕು. ದೇವಾಲಯಗಳಲ್ಲಿ ಮಾತ್ರವೇ ಶಿವನನ್ನು ಕಾಣುವವನ ವಿಷಯದಲ್ಲಿ ಪ್ರಸನ್ನನಾಗುವದಕ್ಕಿಂತಲೂ ಒಬ್ಬನೇ ಒಬ್ಬ ಬಡವನಿಗೆ ಜಾತಿ, ಮತ, ಕುಲ ಮುಂತಾದವುಗಳನ್ನು ವಿಚಾರಿಸದೆ ಶಿವಬುದ್ಧಿಯಿಂದ ಸಹಾಯಮಾಡುವಾತನ ವಿಷಯದಲ್ಲಿಯೇ ಪರಮಶಿವನು ಬೇಗ ಪ್ರಸನ್ನನಾಗುವನು.

ಒಬ್ಬ ಧನಿಕನಿಗೆ ಒಂದು ತೋಟವಿತ್ತು; ಅವನು ಅದಕ್ಕೆ ಇಬ್ಬರು ತೋಟಗಾರರನ್ನಿಟ್ಟಿದ್ದನು. ಇವರಲ್ಲಿ ಒಬ್ಬ ತೋಟಗಾರನು ಬಲು ಸೋಮಾರಿಯಾದ್ದರಿಂದ ಕೆಲಸಮಾಡುತ್ತಲೇ ಇರಲಿಲ್ಲ. ಯಜಮಾನನು ತೋಟಕ್ಕೆ ಬಂದಾಗ ಮಾತ್ರ ಆ ಸೋಮಾರಿಯು ಎದ್ದುನಿಂತು ಕೈಕಟ್ಟಿಕೊಂಡು "ಆಹಾ ! ನಮ್ಮ ಧಣಿಯು ಎಂಥ ಸುಂದರನು ಎಂದು ಅವನ ಮುಂದೆ ತಕತಕ ಕುಣಿಯುತ್ತಿದ್ದನು. ಇನ್ನೊಬ್ಬ ತೋಟಗಾರನು ಹೆಚ್ಚು ಮಾತಿನವನಲ್ಲ. ಅವನು ಮೈಬೆವರ ದುಡಿದು ಬೇಕುಬೇಕಾದ ಹಣ್ಣುಹಂಪಲುಗಳನ್ನೂ ಕಾಯಿಪಲ್ಯಗಳನ್ನೂ ಬೆಳೆದು ತಲೆಯ ಮೇಲೆ ಹೊತ್ತುಕೊಂಡು ಹೋಗಿ ದೂರದಲ್ಲಿದ್ದ ಧಣಿಯ ಮನೆಗೆ ತಲುಪಿಸುತ್ತಿದ್ದನು. ಈ ಇಬ್ಬರು ತೋಟಗಾರರಲ್ಲಿ ಯಜಮಾನನಿಗೆ ಯಾರಲ್ಲಿ ಹೆಚ್ಚು ಪ್ರೇಮವಿರಬೇಕು?

ಶಿವನೇ ಈ ಯಜಮಾನನು. ಈ ಪ್ರಪಂಚವೇ ಆತನ ಉದ್ಯಾನವು. ಇಲ್ಲಿ ಎರಡು ಬಗೆಯ ತೋಟಗಾರರಿರುವರು. ಸೋಮಾರಿಗಳಾಗಿಯೂ ಕಪಟಿಗಳಾಗಿಯೂ ಇದ್ದು ಶಿವನ ಸುಂದರವಾದ ಕಣ್ಣುಗಳನ್ನೂ ಮೂಗನ್ನೂ ಮಿಕ್ಕ ಅವಯವಗಳನ್ನೂ ಬಣ್ಣಿಸುತ್ತಾ ಇರುವರು. ಒಂದು ಪಂಗಡ; ಶಿವನ ಮಕ್ಕಳಾಗಿರುವ ಬಡವರನ್ನೂ ಬಲಹೀನರನ್ನೂ ಮೂಗುಜಂತುಗಳನ್ನೂ ಮಿಕ್ಕ ಆತನ ಸೃಷ್ಟಿಯನ್ನೂ ಪ್ರೀತಿಯಿಂದ ನೋಡಿಕೊಳ್ಳುತ್ತಿರುವರು ಮತ್ತೊಂದು ಪಂಗಡ. ಇವರಿಬ್ಬರಲ್ಲಿ ಶಿವನಿಗೆ ಯಾರು ಮೆಚ್ಚಿನವರು? ಆತನ ಮಕ್ಕಳ ಸೇವೆಯನ್ನು ಯಾರು ಮಾಡುವರೋ ಅವರಲ್ಲಿಯೇ ಶಿವನ ಮೆಚ್ಚುಗೆಯೆಂಬುದರಲ್ಲಿ ಸಂದೇಹವೇ ಇಲ್ಲ.

ತಂದೆಯ ಸೇವೆಯನ್ನು ಮಾಡಬೇಕೆಂಬುವನು ಮೊದಲು ಮಕ್ಕಳ ಸೇವೆಯನ್ನು ಮಾಡಬೇಕು. ಶಿವನ ಸೇವೆಯನ್ನು ಮಾಡಬೇಕೆಂದಿರುವನು ಆತನ ಮಕ್ಕಳ ಸೇವೆಯನ್ನು

ಮಾಡಬೇಕು. ಈ ಪ್ರಪಂಚದಲ್ಲಿರುವ ಸಕಲಪ್ರಾಣಿಗಳ ಸೇವೆಯನ್ನೂ ಮೊಟ್ಟಮೊದಲು ಮಾಡಬೇಕು. ಈಶ್ವರನ ಸೇವಕರನ್ನು ಯಾರು ಸೇವಿಸುವರೋ ಅವರೇ ಪರಮೇಶ್ವರನಿಗೆ ಪರಮಸೇವಕರೆಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆದ್ದರಿಂದ ಇದನ್ನು ನೆನಪಿನಲ್ಲಿಡಬೇಕು. ಪರಿಶುದ್ಧರಾಗಿರಬೇಕು. ನಿಮ್ಮ ಹತ್ತಿರಕ್ಕೆ ಯಾರು ಬಂದರೂ ಸರಿಯೆ, ನಿಮ್ಮ ಕೈಯಲ್ಲಾದ ಸಹಾಯವನ್ನು ಮಾಡಬೇಕು ಎಂಬುದನ್ನು ಮತ್ತೊಂದು ಸಲವೂ ಹೇಳಬೇಕಾಗಿದೆ. ಇದೇ ಪುಣ್ಯ ಕರ್ಮವು. ಇದರ ಶಕ್ತಿಯಿಂದ ಚಿತ್ತಶುದ್ಧಿಯಾಗುವದು. ಆಗ ಎಲ್ಲರ ಹೃದಯದಲ್ಲಿಯೂ ಇರುವ ಶಿವನು ಅಭಿವ್ಯಕ್ತವಾಗುವನು. ನಿಜವಾಗಿ ಆತನು ಪ್ರತಿಯೊಬ್ಬನ ಹೃದಯದಲ್ಲಿಯೂ ಯಾವಾಗಲೂ ಇದ್ದುಕೊಂಡೇ ಇರುವನು. ಆದರೆ ಒಂದು ಕನ್ನಡಿಯಮೇಲೆ ಕೊಳೆಯೂ ಧೂಳು ಕೂತಿದ್ದರೆ ಅದರಲ್ಲಿ ನಮ್ಮ ಮುಖವು ನಮಗೆ ಕಾಣಿಸುವದಿಲ್ಲವಷ್ಟೆ; ಅದರಂತೆ ನಮ್ಮ ಹೃದಯಗಳೆಂಬ ಕನ್ನಡಿಗಳ ಮೇಲೆ ಅಜ್ಞಾನ, ದುಷ್ಟತನ ಎಂಬ ಕೊಳೆಯೂ ಧೂಳೂ ಕೂತಿರುವವು, (ಆದ್ದರಿಂದ ಆತನನ್ನು ನಾವು ಕಾಣಲರಿಯೆವು).

ಸ್ವಾರ್ಥಬುದ್ಧಿಯೇ, ಎಲ್ಲರಿಗಿಂತ ಮೊದಲು ತನ್ನ ವಿಕಾರವನ್ನು ನೋಡಿಕೊಳ್ಳುತ್ತಿರುವ ದೆಂಬುದೇ ಮುಖ್ಯವಾದ ಪಾಪವು. 'ನಾನು ಮೊದಲು ಊಟಮಾಡಬೇಕು, ನನ್ನಲ್ಲಿ ಮಿಕ್ಕವರಿಗಿಂತ ಹೆಚ್ಚು ಹಣವಿರಬೇಕು, ನನಗೇ ಎಲ್ಲವೂ ಆಗಬೇಕು'-ಎಂದು ಯೋಚಿಸುವವನೂ 'ಮಿಕ್ಕವರಿಗಿಂತ ಮೊದಲು ನನಗೆ ಮುಕ್ತಿಯಾಗಬೇಕು'-ಎಂದು ಯೋಚಿಸುವವನೂ ಸ್ವಾರ್ಥಪರರೆಂದು ತಿಳಿಯಬೇಕು. 'ನಾನೇ ಕೊನೆಯತನಕ ತಡೆಯುವೆನು, ಸ್ವರ್ಗವೇನೂ ನನಗೆ ಬೇಡ, ನಾನು ನರಕಕ್ಕೆ ಹೋಗುವದರಿಂದ ಮಿಕ್ಕ ಜನಗಳಿಗೆ ಉಪಕಾರವಾಗುವದಾದರೆ ಅವಶ್ಯವಾಗಿ ಅಲ್ಲಿಗೇ ಹೋಗುವೆನು' ಎಂದು ಯಾವಾತನು ಯೋಚಿಸುವನೋ ಆತನೇ ಅಸ್ವಾರ್ಥಪರನು. ಧರ್ಮಕ್ಕೆ ಈ ಅಸ್ವಾರ್ಥಪರತೆಯೆಂಬುದೇ ಒರೆಗಲ್ಲು. ಯಾವಾತನಲ್ಲಿ ಈ ಅಸ್ವಾರ್ಥಪರತೆಯು ಹೆಚ್ಚಾಗಿರುವದೋ ಆತನೇ ಹೆಚ್ಚು ಧರ್ಮಿಷ್ಠನು, ಆತನೇ ಶಿವನಿಗೆ ಹೆಚ್ಚು ಸಮೀಪದಲ್ಲಿರುವನು. ವಿದ್ವಾಂಸನಾಗಿರಲಿ, ಅಕ್ಷರಶೂನ್ಯನಾಗಿರಲಿ, ಆತನೇ ಮಿಕ್ಕವರಿಗಿಂತ ಶಿವನಿಗೆ ಹೆಚ್ಚು ಸಮೀಪವಾಗಿರುವನು. ಈ ವಿಷಯವು ಅವನಿಗೆ ಗೊತ್ತಿರಲಿ, ಗೊತ್ತಿಲ್ಲದಿರಲಿ, (ಇದಂತು ನಿಜ). ಸ್ವಾರ್ಥಪರನಾಗಿರುವವನು ಸಕಲ ದೇವಾಲಯ ಗಳನ್ನೂ ಪ್ರವೇಶಮಾಡಿರಬಹುದಾದರೂ ಸಕಲ ಕ್ಷೇತ್ರಗಳನ್ನೂ ದರ್ಶನಮಾಡಿಕೊಂಡಿರ ಬಹುದಾದರೂ ಸಕಲ ಕ್ಷೇತ್ರಗಳನ್ನೂ ದರ್ಶನಮಾಡಿಕೊಂಡಿರಬಹುದಾದರೂ ಚಿರತೆ ಯಂತೆ ಮೈಗೆಲ್ಲ ತ್ರಿಪುಂಡ್ರಾದಿಗಳನ್ನು ಹಾಕಿಕೊಂಡಿದ್ದರೂ ಅವನು ಖಂಡಿತವಾಗಿಯೂ ಶಿವನಿಗೆ ಅತ್ಯಂತ ದೂರದಲ್ಲಿರುವನು. ಸಂ-20, 102

# ಜೈನರ ದೇವರಪೂಜೆ

ದೇವರಪೂಜೆ, ಗುರುಸೇವೆ, ಸ್ವಾಧ್ಯಾಯ (ಶಾಸ್ತ್ರಾಧ್ಯಯನ), ಸಂಯಮ (ಇಂದ್ರಿಯನಿಗ್ರಹ ಮತ್ತು ಪ್ರಾಣಿರಕ್ಷಣ), ತಪಸ್ಸು (ಸಾಮಯಿಕಾದಿ), ದಾನ–ಇವು ಆರು ಜೈನರ ದೈನಿಕ ಷಟ್‌ಕರ್ಮಗಳು. ಇವು ಆವಶ್ಯಕಕ್ರಿಯೆಗಳೆಂದೂ ಕರೆಯಲ್ಪಡುವುವು. ಪ್ರತಿಯೊಬ್ಬ ಜೈನಗೃಹಸ್ಥನು ಒಂದೊಂದು ದಿನವೂ ಈ ಆರು ಧಾರ್ಮಿಕಕರ್ಮಗಳನ್ನು ಆಚರಿಸಲೇಬೇಕೆಂದು ಜೈನಾಗಮದ ಕಟ್ಟಪ್ಪಣೆ. ಈ ಷಟ್‌ಕರ್ಮಗಳಲ್ಲಿ ದೇವಪೂಜೆಗೆ ಅಗ್ರಸ್ಥಾನವು ದೊರೆತಿರುವುದು ಸ್ವಾಭಾವಿಕ.

ಜೈನರು "ಇದು ರಾಗದ್ವೇಷಮದಮಾತ್ಸರ್ಯಾದಿದೋಷರಹಿತನೂ ದುಷ್ಟರಲ್ಲಿಯೂ ಶಿಷ್ಟರಲ್ಲಿಯೂ ಸಮಭಾವವುಳ್ಳವನೂ ಶತ್ರುಮಿತ್ರಭಾವವಿಲ್ಲದಿರುವವನೂ ಅಸ್ತ್ರ ಶಸ್ತ್ರಾದಿಗಳನ್ನು ಧರಿಸದಿರುವವನೂ ಅಲಂಕಾರಾರ್ಥವಾಗಿ ಆಭರಣಗಳನ್ನು ಧರಿಸದಿರು ವವನೂ ಅನಂತವಾದ ಜ್ಞಾನದರ್ಶನಸ್ವರೂಪನೂ ಪತ್ನೀಪುತ್ರಾದಿವ್ಯಾಮೋಹರಹಿತನೂ ನಾಶರಹಿತನೂ ಆನಂದಮಯನೂ, ಲೋಕವ್ಯವಹಾರದ ಜಂಜಾಟದಲ್ಲಿ ಬೀಳದಿರು ವವನೂ ವಿಕಾರರಹಿತನೂ ಆದ ಪರಿಶುದ್ಧ ಪರಮಾತ್ಮನ (ದೇವರ) ಪ್ರತಿಕೃತಿಯು" ಎಂದು ಭಾವಿಸಿ ಭಕ್ತಿಯಿಂದ ಉತ್ತಮವಾದ ಜಲ, ಚಂದನ–ಮೊದಲಾದ ಎಂಟು ವಸ್ತುಗಳಿಂದ ಭಗವಂತನನ್ನು ಪೂಜಿಸುತ್ತಾರೆ.

ಜೈನಸಿದ್ಧಾಂತಾನುಸಾರವಾಗಿ ಸಂಪೂರ್ಣಮುಕ್ತಾತ್ಮರೂ ಪ್ರತಿಯೊಂದು ಕಾಲದಲ್ಲಿ ಧರ್ಮೋದ್ಧಾರಕ್ಕಾಗಿಯೇ ಅವತರಿಸುವ ಇಪ್ಪತ್ತನಾಲ್ಕು ತೀರ್ಥಂಕರರೂ ದೇವರೆಂದು ಕರೆಯಲ್ಪಡುವರು. ಜೈನದೇವಸ್ಥಾನಗಳಲ್ಲಿ ಮುಖ್ಯವಾಗಿ ತೀರ್ಥಂಕರರ ಮೂರ್ತಿಗಳೇ ಪ್ರತಿಷ್ಠಿಸಲ್ಪಡುವವು. ಮನುಷ್ಯರೂಪದಲ್ಲಿ ಪೃಥ್ವಿಯಲ್ಲಿ ಅವತರಿಸಿ ತಪಸ್ಸೇ ಮೊದಲಾದವು ಗಳ ಪ್ರಭಾವದಿಂದ ಕರ್ಮಬಂಧನವನ್ನು ನಷ್ಟಮಾಡಿ ಮುಕ್ತಿಯನ್ನು ಪಡೆದ ಪವಿತ್ರಾತ್ಮರೇ ತೀರ್ಥಂಕರರು. ಸರ್ವಜ್ಞತ್ವಾದಿವಿಶಿಷ್ಟಗುಣಗಳನ್ನೂ ಪಡೆದು ಪ್ರಾಣಿಮಾತ್ರಕ್ಕೆ ಮೋಕ್ಷಮಾರ್ಗದ ಉಪಾಯವನ್ನು ಬೋಧಿಸಿದುದರಿಂದಲೇ ಇವರು ತೀರ್ಥಂಕರರೆಂದು ಕರೆಯಲ್ಪಟ್ಟರು. ಮೇಲೆ ಹೇಳಿದ ಕಾರಣದಿಂದ ಪ್ರತ್ಯೇಕ ಜೈನಶ್ರಾವಕ ಅಥವಾ ಗೃಹಸ್ಥನಿಗೆ ತೀರ್ಥಂಕರರು ಆದರ್ಶರೂಪರು. ಅವರ ಮಾರ್ಗವನ್ನನುಸರಿಸಿ ಅವರ ಆಚರಣೆಯನ್ನು ಮುಂದಿಟ್ಟುಕೊಂಡು ಅವರಂತೆ ಮುಕ್ತಿಪ್ರಾಪ್ತಿಗೋಸ್ಕರ ಪ್ರಯತ್ನಿಸುವದು, ಪ್ರತ್ಯೇಕ ಜೈನಮತಾನುಯಾಯಿಯ ಲಕ್ಷ್ಯವಾಗಿದೆ. ಜೈನಗೃಹಸ್ಥನ ಜೀವನದ ಲಕ್ಷ್ಯವು ಮುಕ್ತಿಯನ್ನು ಬಿಟ್ಟು ಬೇರೊಂದಿಲ್ಲ. ಮುಕ್ತಿಪ್ರಾಪ್ತಿಯೇ ಈ ಜಿನ(ದೇವ)ಪೂಜೆಯ ಪ್ರಧಾನ ಮತ್ತು ಏಕಮಾತ್ರ ಉದ್ದೇಶವಾಗಿದೆ.

ಪೂಜೆಯ ಸಮಯದಲ್ಲಿ ಜೈನರು ಪುತ್ರಪೌತ್ರ ಧನಧಾನ್ಯ ಸ್ವರ್ಗವೈಭವ ಮೊದಲಾದ ನಶ್ವರವಸ್ತುಗಳ ಕಾಮನವನ್ನು ಮಾಡುವುದಿಲ್ಲ, ಮುಕ್ತಿಪ್ರಾಪ್ತಿಯೇ ಪ್ರತ್ಯೇಕ ಜೈನಿಯ ಮುಖ್ಯಲಕ್ಷ್ಯವಾಗಿರುವದರಿಂದ ಈ ನಿತ್ಯಪೂಜೆಯ ಸಮಯದಲ್ಲಿಯೂ ಅವನು ಮುಕ್ತಿಪ್ರಾಪ್ತಿಗೆ ಅನುಕೂಲವಾದ ವಿಷಯಗಳನ್ನೇ ಇಚ್ಛಿಸುತ್ತಾನೆ. ಈ ಅಭಿಪ್ರಾಯವು ಈ ಕೆಳಗೆ ಕೊಟ್ಟಿರುವ ಮಂತ್ರಗಳಿಂದ ಸ್ವಯಂವ್ಯಕ್ತವಾಗುವುದು :

(1) ಜನ್ಮಮೃತ್ಯುವಿನಾಶಾಯ ಜಲಂ ನಿರ್ವಪಾಮಿ ಸ್ವಾಹಾ (2) ಸಂಸಾರತಾಪ ವಿನಾಶನಾಯ ಚಂದನಂ ನಿರ್ವಪಾಮಿ ಸ್ವಾಹಾ (3) ಅಕ್ಷಯಪದಪ್ರಾಪ್ತಯೇ ಅಕ್ಷತಾನ್ ನಿರ್ವಪಾಮಿ ಸ್ವಾಹಾ (4) ಕಾಮಬಾಣವಿಧ್ವಂಸನಾಯ ಪುಷ್ಪಂ ನಿರ್ವಪಾಮಿ ಸ್ವಾಹಾ (5) ಕ್ಷುಧಾರೋಗವಿನಾಶನಾಯ ನೈವೇದ್ಯಂ ನಿರ್ವಪಾಮಿ ಸ್ವಾಹಾ (6) ಮೋಹಾಂಧ ಕಾರ ವಿನಾಶನಾಯ ದೀಪಂ ನಿರ್ವಪಾಮಿ ಸ್ವಾಮಿ (7) ಅಷ್ಟಕರ್ಮದಹನಾಯ ಧೂಪಂ ನಿರ್ವಪಾಮಿ ಸ್ವಾಹಾ (8) ಅನರ್ಘ್ಯಪದಪ್ರಾಪ್ತಯೇ ಅರ್ಘ್ಯಂ ನಿರ್ವಪಾಮಿ ಸ್ವಾಹಾ.

ಪ್ರಾರಂಭದಿಂದಲೇ ಸ್ವಜೀವನವನ್ನು ತನ್ನ ಚರಮಲಕ್ಷ್ಯದ ಕಡೆಗೆ ದೃಷ್ಟಿಯನ್ನಿಟ್ಟು ಕಳೆಯುವುದು ಉತ್ತಮವೆಂದು ಯಾವನು ತಾನೆ ಒಪ್ಪಲಾರನು; ಜೈನರ ಪ್ರತಿಯೊಂದು ಧರ್ಮಾನುಷ್ಠಾನದಲ್ಲಿಯೂ ಕೊನೆಯ ಲಕ್ಷ್ಯದ ಸ್ಮೃತಿಯು ಇದ್ದೇ ಇರಬೇಕು. ಇಂತಹ ಆದರ್ಶವನ್ನು ನಾವು ಎಲ್ಲರ ಮುಂದಿಡುವುದರಿಂದ ಅವರ ಚರಮಲಕ್ಷ್ಯವು ಸದಾ ಜಾಗರೂಕವಾಗಿರುವುದು.

ಒಂದು ಮಾತು. ದೇವಪೂಜೆಗೆ ದೇವಮೂರ್ತಿಯು ಮುಂದುಗಡೆ ಇರಲೇಬೇಕೆಂಬ ನಿಯಮವಿಲ್ಲ. ಅಂದರೆ ದೇವಮೂರ್ತಿಯ ಅನುಪಸ್ಥಿತಿಯಲ್ಲಿಯೂ ಸಹ ದೇವಪೂಜೆ ಯನ್ನು ಮಾಡಬಹುದು. ದೇವಪೂಜೆಯ ಕೊನೆಯಲ್ಲಿ ಮಾಡಲ್ಪಡುವ ಶಾಂತಿಪಾಠವೂ ಜೈನಪೂಜೆಯ ಉದಾರತೆಯನ್ನು ಪ್ರಕಟಮಾಡುವುದು. ಪಾಠಕರ ಅವಲೋಕನಾರ್ಥವಾಗಿ:

**"ಕ್ಷೇಮಂ ಸರ್ವಪ್ರಜಾನಾಂ ಪ್ರಭವತು ಬಲವಾನ್ ಧಾರ್ಮಿಕೋ ಭೂಮಿಪಾಲಃ । ಕಾಲೇ ಕಾಲೇ ಚ ಸಮ್ಯಗ್ ವರ್ಷತು ಮಘವಾ ವ್ಯಾಧಯೋ ಯಾನ್ತು ನಾಶಮ್ ॥ ದುರ್ಭಿಕ್ಷಂ ಚೌರಮಾರೀ ಕ್ಷಣಮಪಿ ಜಗತಾಂ ಮಾ ಸ್ಮ ಭೂಜ್ಜೀವಲೋಕೇ । ಜೈನೇನ್ದ್ರಂ ಧರ್ಮಚಕ್ರಂ ಪ್ರಭವತು ಸತತಂ ಸರ್ವಸೌಖ್ಯಪ್ರದಾಯಿ ॥"**

(ಭಾವಾರ್ಥ : ಸರ್ವಪ್ರಜೆಗಳಿಗೂ ಕ್ಷೇಮವಾಗಲಿ; ಅರಸನು ಬಲಿಷ್ಠನೂ ಧಾರ್ಮಿಕನೂ ಆಗಿರಲಿ; ಮಘವಂತನು ಕಾಲಕಾಲಕ್ಕೆ ಮಳೆಗರೆಯಲಿ; ರೋಗಗಳು ನಾಶವಾಗಲಿ; ಕ್ಷಾಮ, ಕಳ್ಳರು, ಮಾರಿಕಾ-ಇವುಗಳು ಜೀವರಿಗೆ ಕ್ಷಣವೂ ಆಗದಿರಲಿ; ಜೈನೇಂದ್ರ ಧರ್ಮಚಕ್ರವು ಸರ್ವರಿಗೂ ಸೌಖ್ಯವನ್ನು ಕೊಡುವದಾಗಲಿ). **ಸಂ-6, 272**

## ಅಧ್ಯಾತ್ಮದ ಮೊದಲ ಸೋಪಾನ

# ಬಾಹ್ಯ ಶೌಚ

ಅಧ್ಯಾತ್ಮಜಿಜ್ಞಾಸುಗಳಿಗೆ ತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳುವ ಮುಂಚೆ ಕೆಲವು ಸಾಧನಗಳು ಅತ್ಯವಶ್ಯವಾಗಿರುತ್ತವೆ. ಅವುಗಳಲ್ಲಿ ಶುಚಿತ್ವವೆಂಬುದೊಂದು.

ಮನುಷ್ಯಮಾತ್ರಕ್ಕೇ ಶುಚಿಯಾಗಿರುವದು ಅವಶ್ಯವಾಗಿರುತ್ತದೆ. ಏಕೆಂದರೆ ಶರೀರವು ದಿನದಿನವೂ ಅನೇಕ ಪ್ರಕಾರಗಳಿಂದ ಕೊಳೆಯಾಗುತ್ತಿರುತ್ತದೆ. ಅದನ್ನು ಸ್ವಚ್ಛಗೊಳಿಸಿ ಕೊಳ್ಳದೆ ಇದ್ದರೆ ಶರೀರಾರೋಗ್ಯವು ತಪ್ಪಿ ಜೀವನದಲ್ಲಿ ಐಹಿಕ ಸುಖವನ್ನು ಕಂಡು ಕೊಳ್ಳುವದುಕೂಡ ಕಷ್ಟವಾಗುತ್ತದೆ. ಆದರೆ ಅಧ್ಯಾತ್ಮವಿದ್ಯಾರ್ಥಿಗಳಿಗೆ ದೇಹದ ಶುಚಿತ್ವವು ಅಂತಃಕರಣದ ನೈರ್ಮಲ್ಯಕ್ಕಾಗಿಯೂ ಬೇಕಾಗಿರುತ್ತದೆ; ಏಕೆಂದರೆ ಅಂತಃಕರಣವು ನಿರ್ಮಲವಾಗಿದ್ದ ಹೊರತು ಅದರಲ್ಲಿ ಸೂಕ್ಷ್ಮವಾದ ಅಧ್ಯಾತ್ಮತತ್ತ್ವವು ಅಭಿವ್ಯಕ್ತ ವಾಗುವದೇ ಇಲ್ಲ.

ಶರೀರಕ್ಕೆ ಹೊರಗಿನ ಅಶುಚಿಯಾದ ಗಾಳಿ, ನೀರು, ಆಹಾರ, ಅಶುಚಿ ಪದಾರ್ಥಗಳ ಸ್ಪರ್ಶ, ಅಶುಚಿಯಾದ ಜನರ ಸಂಪರ್ಕ–ಮುಂತಾದ ಕಾರಣಗಳಿಂದ ಕೊಳೆಯು ಬಂದು ಸೇರಿಕೊಳ್ಳುತ್ತಿರುತ್ತದೆ. ಆದರೆ ನಾವು ಸ್ವತಃ ಶರೀರದಲ್ಲಿ ಶುಚಿಯಾಗಿರುತ್ತೇವೆಂದೂ ಹೊರಗಿನ ಪದಾರ್ಥಗಳ, ಪ್ರಾಣಿಗಳ, ಅಥವಾ ಮನುಷ್ಯರ ಸಂಪರ್ಕದಿಂದ ಮಾತ್ರವೇ ನಮಗೆ ಕೊಳೆಯು ಅಂಟುವದೆಂದೂ ತಿಳಿಯಬಾರದು. ನಮ್ಮ ಶರೀರದಲ್ಲಿ ಬೆವರು ಬರುತ್ತಲೇ ಇರುತ್ತದೆ; ಕಣ್ಣು, ಕಿವಿ, ಮೂಗು, ಬಾಯಿ, ಮಲಮೂತ್ರದ್ವಾರಗಳು–ಇವುಗಳಮೂಲಕ ಶರೀರದೊಳಗಿನಿಂದ ಸತತವಾಗಿ ಮಲವು ಒಸರುತ್ತಲೇ ಇರುವದು.

ಹೀಗೆ ಈ ಶರೀರವು ಅಶುಚಿಯಾಗಿಯೇ ಇರುವದೆಂದೂ ನಮ್ಮ ಸುತ್ತಲೂ ಇರುವ ಪದಾರ್ಥಗಳೂ ಇದರ ಅಶುಚಿತ್ವಕ್ಕೆ ನೇರವಾಗಿ ಅಥವಾ ಪರಂಪರೆಯಿಂದ ಸಹಾಯವನ್ನು ಮಾಡುತ್ತಿರುವವೆಂದೂ ನೆನಪಿಟ್ಟುಕೊಂಡೇ ಇರಬೇಕು. ಇದಕ್ಕಾಗಿ ಶುದ್ಧವಾದ ನೀರಿನಿಂದ ಸ್ನಾನ, ಶುಭ್ರವಾದ ಬಟ್ಟೆಗಳ ಧಾರಣೆ, ಹೊರಗೆ ಓಡಾಡಿ ಮನೆಗೆ ಬಂದಾಗಲೆಲ್ಲ ಕೈಕಾಲುತೊಳೆದುಕೊಳ್ಳುವದು, ಬಾಯಿಮುಕ್ಕಳಿಸುವದು, ಆಚಮನ ಮಾಡುವದು, ಅಶುದ್ಧವಾದ ವಸ್ತುಗಳನ್ನೂ ಪ್ರಾಣಿಗಳನ್ನೂ ಆದಮಟ್ಟಿಗೂ ಸೋಂಕದೆ ಇರುವದು, ಶುದ್ಧವಾದ ಆಹಾರವನ್ನೇ ಕ್ರಮವರಿತು ಸೇವಿಸುವದು, ಅಶುದ್ಧವಾದ ವಸ್ತ್ರಾದಿಗಳನ್ನು ಆಗಾಗ್ಗೆ ಬದಲಾಯಿಸುತ್ತಲೂ ಅವುಗಳನ್ನು ಒಗೆದು ಶುದ್ಧಗೊಳಿಸಿ ಕೊಳ್ಳುತ್ತಲೂ ಇರುವದು, ಮನೆಯಲ್ಲಿಯೂ ಮನೆಯ ಸುತ್ತಲೂ ಅಶುಚಿಯಾದ ಪದಾರ್ಥಗಳಿಲ್ಲದಂತೆ ನೋಡಿಕೊಳ್ಳುವದು–ಇಂಥ ಆಚಾರವನ್ನು ಇಟ್ಟುಕೊಂಡಿರುವದು ಸಾಧಕರಿಗೆ ಬಹಳ ಅವಶ್ಯವಾಗಿರುತ್ತದೆ. ಈ ಸಾಧನವನ್ನು **ನಿಯಮ**ವೆಂದು ಕರೆಯುತ್ತಾರೆ. ಕನ್ನಡನುಡಿಯಲ್ಲಿ ಇದಕ್ಕೆ **'ಮಡಿ ಮೈಲಿಗೆಗಳ ತಿಳಿವಳಿಕೆ'** ಎಂಬ ಹೆಸರಿದೆ.

ಮಡಿ, ಮೈಲಿಗೆ–ಎಂಬ ಮಾತುಗಳನ್ನು ರೂಢಿಯಲ್ಲಿ ಜನರು ತಪ್ಪರ್ಥದಲ್ಲಿ ಉಪಯೋಗಿಸುತ್ತಿರುತ್ತಾರೆ. ಒಂದು ಸಲ ಸ್ನಾನವನ್ನು ಮಾಡಿ, ಒಗೆದ ಬಟ್ಟೆಯನ್ನು ಅಥವಾ ಮಗುಟವನ್ನು ಉಟ್ಟುಕೊಂಡರೆ ಮಡಿಯಾಯಿತು. ಹಾಗಿಲ್ಲದ ಮಿಕ್ಕವರೆಲ್ಲರೂ ಮೈಲಿಗೆ–ಎಂದು ತಿಳಿಯುವದು ಅಜ್ಞಾನ. ನಮ್ಮ ಶರೀರವು ಸತತವಾಗಿ ಮೈಲಿಗೆ ಯಾಗುತ್ತಲೇ ಇರುವದರಿಂದ ಅದನ್ನು ಆದಷ್ಟುಮಟ್ಟಿಗೆ ಮತ್ತೆಮತ್ತೆ ಶುದ್ಧಿಮಾಡಿಕೊಳ್ಳುತ್ತಾ 'ಈ ಅಶುಚಿಯಾದ ದೇಹವು ನಾನಲ್ಲ; ಇದಕ್ಕಿಂತ ಬೇರೆಯಾದ ಆತ್ಮನೊಬ್ಬನು ಇದಾನೆ, ಅವನೇ ನಾನು' ಎಂಬುದನ್ನು ಮನಸ್ಸಿನಲ್ಲಿ ನಿಲ್ಲಿಸಿಕೊಂಡಿರುವದೇ ಮಡಿಯ ಭಾವನೆ.

ಹೊರಗಿನ ಪದಾರ್ಥಗಳು ಸ್ವಭಾವದಿಂದ ಶುದ್ಧವಾಗಿಯೇ ಇರುತ್ತಿದ್ದರೂ ಪ್ರಾಣಿಗಳ ಮತ್ತು ಮನುಷ್ಯರ ಅಶುಚಿಯಾದ ವರ್ತನೆಯಿಂದ ಮೈಲಿಗೆಯಾಗುತ್ತಿರುವವು. ಶುದ್ಧವಾದ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ–ಈ ಪಂಚಮಹಾಭೂತಗಳು ಪರಮಾತ್ಮನ ಹೊದಿಕೆಯಾಗಿರುತ್ತವೆ. ಅವುಗಳನ್ನು ಮೈಲಿಗೆಮಾಡುವದು ಭಗವಂತನಿಗೆ ಮಾಡುವ ಅಪಚಾರವು ಎಂಬುದನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿರುವದೊಂದು ಮಡಿಯ ಭಾವನೆ. ಹೀಗೆಯೇ ಹೊರಗಿನ ಜನರು ತಪ್ಪುತಿಳಿವಳಿಕೆಯಿಂದ ತಮ್ಮ ಶರೀರವನ್ನು ಮೈಲಿಗೆಮಾಡಿಕೊಳ್ಳುತ್ತಿದ್ದರೂ ಅವರ ಶರೀರಗಳೂ ಈ ಪಂಚಭೂತಗಳಿಂದಲೇ ಆಗಿರುವದರಿಂದ ಅವೂ ಪರಮಾತ್ಮನಿರುವ ಗೂಡುಗಳಾಗಿರುತ್ತವೆ–ಎಂಬ ಭಾವನೆಯಿಂದ ಎಲ್ಲರನ್ನೂ ಗೌರವಿಸುತ್ತಿರಬೇಕು.

ಸ್ನಾನಮಾಡುವಾಗ, ಬಟ್ಟೆಯನ್ನುಡುವಾಗ, ಊಟಮಾಡುವಾಗ, ಓಡಾಡುವಾಗ, ಮಲಗುವಾಗ–ಈ ಬಗೆಯ ಎಲ್ಲಾ ವ್ಯವಹಾರಗಳಲ್ಲಿ ತೊಡಗಿರುವಾಗಲೂ ಮಡಿಯ ಭಾವನೆ ನಮಗೆ ಬರುವಂತೆ ಮಾಡಿಕೊಳ್ಳುವದಕ್ಕೆ ನಮ್ಮ ಸ್ನಾನದ ನೀರು, ಉಡುವ ಬಟ್ಟೆ, ಉಣ್ಣುವ ಆಹಾರ, ಓಡಾಡುವ ದಾರಿ, ಮಲಗುವ ಸ್ಥಳ, ಹಾಸಿಗೆ–ಇವುಗಳೆಲ್ಲವೂ ಚೊಕ್ಕಟವಾಗಿರುವಂತೆ ನೋಡಿಕೊಳ್ಳುವದು ಒಂದು ದೊಡ್ಡ ಸಾಧನ. ಅವುಗಳು ಯಾವವೂ ನಮ್ಮ ಕೆಟ್ಟ ನಡೆವಳಿಕೆಯಿಂದ ಅಶುಚಿಯಾಗದಂತೆ ನೋಡಿಕೊಳ್ಳುವದೊಂದು ಅವಶ್ಯಕರ್ತವ್ಯವೂ ಅಧ್ಯಾತ್ಮಸಾಧನವೂ ಆಗಿರುತ್ತದೆ.

ಈ ಬಾಹ್ಯಶೌಚವು ಕಷ್ಟಸಾಧ್ಯವಾಗಿರುತ್ತದೆ. ಇದನ್ನು ನಮ್ಮ ಕೈಯಲ್ಲಾದಷ್ಟುಮಟ್ಟಿಗೆ ಸಾಧಿಸಿಕೊಳ್ಳಬೇಕು. ಇವುಗಳಿಗೆ ಪರಮಾತ್ಮನ ಸಂಬಂಧವನ್ನು ಮಾಡಿಕೊಳ್ಳುವದರಿಂದ ಶುಚಿತ್ವದ ಭಾವನೆಗೆ ಹೆಚ್ಚಿನ ಬೆಂಬಲವು ದೊರಕುತ್ತದೆ. ಸ್ನಾನವನ್ನು ಮಾಡುವ ನೀರು ತೀರ್ಥಜಲವೆಂಬ ಭಾವನೆ; ಉಡುವ ಬಟ್ಟೆಯು ಪರಮೇಶ್ವರನ ಅರ್ಚನೆಗೆ ಅಣಿಯಾಗುವದಕ್ಕೆ ಸಿದ್ಧಪಡಿಸಿಕೊಂಡ ಸಾಧನವೆಂಬ ಭಾವನೆ; ಉಣ್ಣುವ ಅನ್ನವು

ಪರಮೇಶ್ವರನಿಗೆ ನಿವೇದಿತವಾಗಿ ಬಂದಿರುವ ಪ್ರಸಾದವೆಂಬ ಭಾವನೆ; ನಾವಿರುವ, ಅಥವಾ ಓಡಾಡುವ ಸ್ಥಳವು ಭಗವಂತನ ಅನುಗ್ರಹವೆಂಬ ಭಾವನೆ–ಇಂಥ ಭಾವನೆಗಳಿಂದ ಯಾವಾಗಲೂ ಮಡಿಯ ಭಾವನೆಯೇ ಮೈಗೂಡಿಕೊಳ್ಳುವದು. **ಸಂ–30, 122**

## ವರಾಹಭಗವಂತನು ಪಿತೃಪೂಜೆಯ ಕ್ರಮವನ್ನು ಸ್ಥಾಪಿಸಿದ್ದು

ಧರ್ಮನ ಜ್ಯೇಷ್ಠಪುತ್ರನಾದ ಪ್ರಭುವಾದ ನರನು ನಾರದನನ್ನು ಇಂತೆಂದು ಕೇಳಿದನು: 'ಎಲೈ ದ್ವಿಜಶ್ರೇಷ್ಠನೆ, ದೈವಕರ್ಮದಲ್ಲಿಯೂ ಪಿತ್ರ್ಯಕರ್ಮದಲ್ಲಿಯೂ ನೀನು ಯಾರನ್ನು ಪೂಜಿಸುತ್ತಿರುವೆ? ಎಲೈ ಮತಿವಂತರಲ್ಲಿ ಶ್ರೇಷ್ಠನಾದವನೆ, ಇದನ್ನು ನಮಗೆ ಆಗಮಾನುಸಾರವಾಗಿ ತಿಳಿಸಿಕೊಡುವನಾಗು. ನೀನು ಮಾಡುವ ಈ ಕರ್ಮವು ಯಾವದು? ಇದರ ಫಲವಾದರೂ ಏನು?'

ಆಗ ನಾರದನಿಂತೆಂದನು : ದೈವಕರ್ಮವನ್ನು ಮಾಡಬೇಕೆಂದೂ ಅದೇ ಪರಮಯಜ್ಞವೆಂದೂ ಸನಾತನನಾದ ಪರಮಾತ್ಮನೇ ಯಜ್ಞಸ್ವರೂಪನೆಂದೂ ನೀನೇ ಪೂರ್ವದಲ್ಲಿ ಹೇಳಿರುತ್ತೀಯೆ. ಅದರಿಂದಲೇ ಪ್ರಭಾವಿತನಾಗಿ ನಾನು ನಿತ್ಯವೂ ಅವ್ಯಯನಾದ ವೈಕುಂಠ ಭಗವಂತನನ್ನು ಪೂಜಿಸುತ್ತಿರುವೆನು. ಆತನಿಂದಲೇ ಪೂರ್ವದಲ್ಲಿ ಲೋಕಪಿತಾಮಹನಾದ ಬ್ರಹ್ಮನು ಹುಟ್ಟಿರುತ್ತಾನೆ. ನನ್ನ ತಂದೆಯಾದ ಪರಮೇಷ್ಠಿಯನ್ನು ಆತನು ಸೃಷ್ಟಿಸಿದನು; ನಾನು ಆತನ ಸಂಕಲ್ಪದಿಂದ ಪ್ರಥಮಪುತ್ರನಾಗಿ ಕಲ್ಪಿತನಾಗಿರುತ್ತೇನೆ. ಎಲೈ ಸಾಧುವೆ, ನಾರಾಯಣನ ಆರಾಧನೆಯನ್ನು ಮಾಡಿದ ಬಳಿಕ ಪಿತೃಗಳನ್ನು ಪೂಜಿಸುತ್ತಿರುವೆನು. ಈ ರೀತಿಯಲ್ಲಿ ಆ ಭಗವಂತನೇ ಪಿತೃವೂ ಮಾತೃವೂ ಪಿತಾಮಹನೂ ಆಗಿರುತ್ತಾನೆ. 'ಪುತ್ರರನ್ನೇ ಪಿತೃಗಳು ಪೂಜಿಸಿದರು' ಎಂದು ಒಂದು ಶ್ರುತಿಯೂ ಇದೆ. ವೇದಜ್ಞಾನವು ಪ್ರಣಷ್ಟವಾಗಲು, ಮಕ್ಕಳಿಂದ ಮತ್ತೆ ಅಧ್ಯಾಪನಮಾಡಿಸಿಕೊಂಡು ದೇವತೆಗಳು ಅದನ್ನು ಪಡೆದುಕೊಂಡರು. ಆದ್ದರಿಂದ ಮಂತ್ರದಾನವನ್ನು ಮಾಡಿದ ಪುತ್ರರು ಪಿತೃತ್ವವನ್ನು ಹೊಂದಿದರು.* (* ಒಮ್ಮೆ ದೇವತೆಗಳು ದೀರ್ಘಕಾಲದವರೆಗೆ ಅಸುರರೊಡನೆ ಯುದ್ಧ ಮಾಡುವದರಲ್ಲಿ ತೊಡಗಿದ್ದದ್ದರಿಂದ ವೇದವನ್ನು ಮರೆತುಬಿಟ್ಟರು. ಮತ್ತೆ ಅವರು ಪುತ್ರರಾದ ಅಗ್ನಿಷ್ವಾತ್ತಾದಿಗಳಿಂದಲೇ ಅದನ್ನು ಕಲಿತುಕೊಂಡು ಅವರನ್ನು ಪಿತೃಸ್ಥಾನದಲ್ಲಿ ಪ್ರತಿಷ್ಠೆಮಾಡಿದರು.) ಭಾವಿತಾತ್ಮರಾದ ನಿಮಗೂ ಮೊದಲೇ ಇದು ಗೊತ್ತಿತ್ತು; ಪುತ್ರರೂ ಪಿತೃಗಳೂ ಒಬ್ಬರನ್ನೊಬ್ಬರು ಪೂಜಿಸುತ್ತಿದ್ದರು. ದೇವತೆಗಳು ಪೃಥಿವಿಯ ಮೇಲೆ ಮೂರು ಪಿಂಡಗಳನ್ನು ಕುಶಗಳಮೇಲೆ ಇಟ್ಟು ಅವುಗಳನ್ನು ಪೂಜಿಸಿದರು.

ನರನಾರಾಯಣರಿಂತೆಂದರು: ಸಾಗರಪರಿವೃತವಾದ ಈ ಭೂಮಿಯು ನಷ್ಟವಾಗಲು ಭಗವಂತನಾದ ಗೋವಿಂದನು ವರಾಹರೂಪವನ್ನು ತಾಳಿ ಶೀಘ್ರವಾಗಿ ಅದನ್ನು

ಮೇಲಕ್ಕೆತ್ತಿದನು. ಪುರುಷೋತ್ತಮನಾದ ಆ ಪ್ರಭುವು ಭೂಮಿಯನ್ನು ಸ್ವಸ್ಥಾನದಲ್ಲಿ ನಿಲ್ಲಿಸಿ ನೀರಿನಿಂದಲೂ ಕೆಸರಿನಿಂದಲೂ ಮೈಯೆಲ್ಲ ಬಳಿದುಕೊಂಡಿರಲು ಲೋಕಹಿತದ ಕಾರ್ಯದಲ್ಲಿ ಉದ್ಯುಕ್ತನಾದನು. ಆಹ್ನಿಕಕಾಲವು ಪ್ರಾಪ್ತವಾಗಿ ಸೂರ್ಯನು ನಡುನೆತ್ತಿಯಮೇಲೆ ಇರುತ್ತಿರಲು ಕೋರದಾಡೆಗಳಮೇಲೆ ಮೂರು ಪಿಂಡಗಳನ್ನು ಇಟ್ಟುಕೊಂಡು ಪೃಥ್ವಿಯಮೇಲೆ ಕುಶಾಸ್ತರಣವನ್ನು ಮಾಡಿ ಅವುಗಳನ್ನಿಟ್ಟನು. ಆತನು ಅವುಗಳಲ್ಲಿ ತನ್ನನ್ನೇ ಉದ್ದೇಶಿಸಿ ಪಿತ್ರ್ಯಕರ್ಮವನ್ನು ಮಾಡಿದನು. ತನ್ನ ವಿಧಾನದಿಂದಲೇ ಆ ಪ್ರಭುವು ಆ ಮೂರು ಪಿಂಡಗಳನ್ನು ಸಂಕಲ್ಪಿಸಿದನು. ತನ್ನ ಶರೀರದ ಉಷ್ಣದಿಂದ ಉಂಟಾದ, ಜಿಡ್ಡಿನಿಂದ ಕೂಡಿದ್ದ ತಿಲಗಳಿಂದಲೂ ಅಪಸವ್ಯವಾಗಿ ಪಿಂಡಗಳನ್ನು ಪ್ರೋಕ್ಷಿಸಿ ಪ್ರಾಙ್ಮುಖವಾಗಿ ತಾನೇ ಪೂಜಿಸಿದನು. ಬಳಿಕ ದೇವೇಶ್ವರನಾದ ಶ್ರೀಹರಿಯು ಧರ್ಮಮರ್ಯಾದೆಯ ಸ್ಥಾಪನೆಯನ್ನು ಮಾಡುವದಕ್ಕಾಗಿ ಇಂತೆಂದನು :

ಭಗವಂತನಾದ ವೃಷಾಕಪಿಯು ಹೇಳಿದ್ದೇನೆಂದರೆ : 'ಲೋಕಸ್ರಷ್ಟೃವಾದ ನಾನೇ ಪಿತೃಗಳನ್ನು ಸೃಷ್ಟಿಮಾಡುವದಕ್ಕೆ ಉದ್ಯುಕ್ತನಾಗಿರುತ್ತೇನೆ. ಪಿತೃಕಾರ್ಯವಿಧಾನಗಳನ್ನು ಆಲೋಚಿಸುತ್ತಿರಲು ಈ ಮೂರು ಪಿಂಡಗಳು ನನ್ನ ದಾಡೆಗಳಿಂದ ದಕ್ಷಿಣದಿಕ್ಕಿಗೆ ಭೂಮಿಯಮೇಲೆ ಜಗುಳಿಬಿದ್ದಿರುತ್ತವೆ. ಆದ್ದರಿಂದ ಇವು ಪಿತೃಗಳೇ ಆಗಿರುತ್ತವೆ. ಮೂರ್ತಿ ಹೀನವಾದ ಈ ಮೂರು ಪಿಂಡಾಕಾರವಾಗಿರುತ್ತವೆ. ಇವೇ ಲೋಕದಲ್ಲಿ ಸನಾತನ ಪಿತೃಗಳೆಂದಾಗಿರಲಿ ! ಇಲ್ಲಿ ಈ ಮೂರು ಪಿಂಡಗಳಲ್ಲಿರುವ ಪಿತೃವೂ ಪಿತಾಮಹನೂ ಪ್ರಪಿತಾಮಹನೂ ನಾನೇ ಆಗಿರುತ್ತೇನೆಂದು ತಿಳಿಯಬೇಕು. ನನಗಿಂತ ಅಧಿಕನಾದವನು ಯಾವನೂ ಇರುವದಿಲ್ಲ; ನನಗೆ ಅರ್ಚ್ಯವಾಗಿ ಮತ್ತೆ ಯಾವನಿದ್ದಾನು? ನನಗೆ ತಂದೆ ಯಾದರೂ ಯಾವನು ! ನಾನೇ ಪಿತಾಮಹನು, ಪಿತಾಮಹನಿಗೆ ಪಿತೃವಾದವನೂ ನಾನೇ. ನಾನೇ ಕಾರಣನು' ಇಂತೆಂದು ಹೇಳಿ ದೇವದೇವನಾದ ವೃಷಾಕಪಿಯು, ವರಾಹಪರ್ವತದಲ್ಲಿ ಪಿಂಡದಾನವನ್ನು ಮಾಡಿ ತನ್ನನ್ನೇ ಪೂಜಿಸಿಕೊಂಡು ಅಲ್ಲಿಯೇ ಅಂತರ್ಹಿತನಾದನು.. ಎಲೈ ವಿಪ್ರನೆ, ಇದೇ ಭಗವಂತನು ಏರ್ಪಡಿಸಿದ ಧರ್ಮ ಮರ್ಯಾದೆಯು. ಪಿಂಡಗಳಿಗೆ 'ಪಿತೃ' ನಾಮವು ಹೀಗೆ ಬಂದಿತು; ಆ ವೃಷಾಕಪಿಯ ವಚನದಂತೆ ಅವುಗಳು ಪೂಜೆಯನ್ನು ಪಡೆಯುತ್ತಲಿವೆ. ಯಾರು ಪಿತೃಗಳನ್ನೂ ದೇವತೆ ಗಳನ್ನೂ ಗುರುಗಳನ್ನೂ ಅತಿಥಿಗಳನ್ನೂ ಗೋಗಳನ್ನೂ ದ್ವಿಜಶ್ರೇಷ್ಠರನ್ನೂ ಭೂಮಾತೆ ಯನ್ನೂ ಮನೋವಾಕ್ಕಾಯಕರ್ಮಗಳಿಂದ ಪೂಜಿಸುವರೋ ಅವರು ವಿಷ್ಣುವನ್ನೇ ಪೂಜಿಸುವರು. ಆ ಭಗವಂತನು ಸರ್ವಪ್ರಾಣಿಗಳ ಶರೀರದಲ್ಲಿಯೂ ಅಂತರ್ಗತ ನಾಗಿರುತ್ತಾನೆ. ಸುಖದುಃಖಗಳಿಗೆ ಸ್ವಾಮಿಯಾದ ಶ್ರೀಹರಿಯು ಸರ್ವಭೂತಗಳಲ್ಲಿಯೂ ಸಮನಾಗಿರುತ್ತಾನೆ. ಆ ನಾರಾಯಣನು ಮಹಾಂತನು, ಮಹಾತ್ಮನು, ಸರ್ವಾತ್ಮನು– ಎಂದು ಶ್ರುತಿಯು ಸಾರುತ್ತಿದೆ. **ಸಂ–38, 157**

# ಪಿತೃಪಕ್ಷ

ಭಾದ್ರಪದ ಕೃಷ್ಣಪಕ್ಷವನ್ನು ಪಿತೃಪಕ್ಷವೆಂದು ಕರೆಯುತ್ತಾರೆ. ಈ ಪಕ್ಷದಲ್ಲಿ ಶ್ರಾದ್ಧವನ್ನು ಮಾಡುವದೂ ಪಿತೃತರ್ಪಣವನ್ನು ಅನುಷ್ಠಿಸುವದೂ ಪಿತೃಗಳಿಗೆ ತೃಪ್ತಿಯನ್ನುಂಟು ಮಾಡುತ್ತದೆ ಎಂದು ಹಿಂದುಗಳ ನಂಬಿಕೆ.

ವೇದಗಳಲ್ಲಿ ದೇವಯಾನ, ಪಿತೃಯಾನ–ಎಂಬ ಎರಡು ಕರ್ಮಗತಿಗಳನ್ನು ವರ್ಣಿಸಿರುತ್ತದೆ. ಉಪಾಸಕರಾದವರು ದೇವಲೋಕಗಳಿಗೆ ಹೋಗಿ ಅಲ್ಲಿ ದೇವತೆಗಳ ಸಾಮೀಪ್ಯ, ಸಾಲೋಕ್ಯ, ಸಾಯುಜ್ಯ–ಎಂಬ ಫಲಗಳನ್ನು ಅನುಭವಿಸುತ್ತಾರೆ. ಕರ್ಮಿಗಳಾದವರು ಪಿತೃಲೋಕಕ್ಕೆ ಹೋಗಿ ಅಲ್ಲಿ ತಮ್ಮತಮ್ಮ ಕರ್ಮಕ್ಕೆ ಅನುಗುಣವಾಗಿ ಫಲವನ್ನು ಅನುಭವಿಸುತ್ತಾರೆ–ಹೀಗೆಂಬುದು ಶಾಸ್ತ್ರಕಾರರ ಹೇಳಿಕೆ.

ಪಿತೃಗಳಿಗೆ ತೃಪ್ತಿಯಾಗಲೆಂದು ಶ್ರದ್ಧೆಯಿಂದ ಮಾಡುವ ನಿಯತಕಾಲಿಕ ಕರ್ಮವನ್ನು ಶ್ರಾದ್ಧವೆಂದು ಕರೆಯುತ್ತಾರೆ; ಎಳ್ಳುನೀರುಗಳನ್ನು ಪಿತೃತೃಪ್ತ್ಯರ್ಥವಾಗಿ ಬಿಡುವ ಕರ್ಮವನ್ನು ತರ್ಪಣವೆನ್ನುತ್ತಾರೆ. ಶಕ್ತನಾದವನು ಪಿತೃಪಕ್ಷದಲ್ಲಿ ಪ್ರತಿದಿನವೂ ಶ್ರಾದ್ಧವನ್ನು ಮಾಡಿ ತರ್ಪಣವನ್ನು ಕೊಡಬೇಕು; ಅಶಕ್ತರಾದವರು ಗೊತ್ತಾದ ಒಂದು ದಿನವಾದರೂ ಈ ಕರ್ಮವನ್ನು ಮಾಡಬೇಕು. ಈ ಶ್ರಾದ್ಧಕ್ಕೆ ಮಹಾಲಯವೆಂಬ ಹೆಸರು ಬಂದಿರುತ್ತದೆ. ಈ ಪಕ್ಷವನ್ನು ಮಹಾಲಯಪಕ್ಷವೆಂದು ಕರೆಯುವ ವಾಡಿಕೆಯೂ ಇದೆ.

ಪಿತೃಗಳಿಗೆಂದು ಶ್ರಾದ್ಧವನ್ನು ಮಾಡಿದರೆ, ತರ್ಪಣವನ್ನು ಕೊಟ್ಟರೆ ಅವರಿಗೆ ಅದು ತೃಪ್ತಿಯನ್ನು ಹೇಗೆ ಮಾಡುತ್ತದೆ? ಶ್ರಾದ್ಧಕರ್ಮಗಳಲ್ಲಿ ಮಾಡುವ ಹೋಮ, ಬ್ರಾಹ್ಮಣಭೋಜನ, ಪಿಂಡಪ್ರದಾನ, ತರ್ಪಣ–ಇವುಗಳು ಈ ಲೋಕದಲ್ಲಿ ಆಗುವದರಿಂದ ಅವುಗಳ ಫಲವು ಪಿತೃಗಳು ಎಲ್ಲಿದ್ದರೂ ಅವರಿಗೆ ಮುಟ್ಟುವದೆಂದು ನಂಬುವದು ಹೇಗೆ? ಆ ಪಿತೃಗಳು ಬೇರೊಂದು ಜನ್ಮವನ್ನು ಪಡೆದಿದ್ದರೆ ಶ್ರಾದ್ಧಕ್ಕೆ ಯಾವ ಪ್ರಯೋಜನ ವಾಗುವದು?–ಎಂದು ಕೆಲವರು ಯುಕ್ತಿಪ್ರಧಾನವಾದ ಪ್ರಶ್ನೆಗಳನ್ನು ಮಾಡುತ್ತಿರುತ್ತಾರೆ. ಈ ಪ್ರಶ್ನೆಗಳಿಗೆ ಪ್ರತ್ಯಕ್ಷಾದಿಪ್ರಮಾಣಗಳಿಂದ ಸಮಾಧನಕರವಾದ ಉತ್ತರವನ್ನು ಹೇಳುವದು ಕಷ್ಟ. ಏಕೆಂದರೆ ಕರ್ಮಗಳಿಗೆ ಇಲ್ಲಿಯೇ ಅನುಭವಾರೂಢವಾದಫಲವಾಗುತ್ತದೆ ಎಂದು ಶಾಸ್ತ್ರದಲ್ಲಿ ಹೇಳಿರುವದಿಲ್ಲ. ಆದ್ದರಿಂದ ಇಲ್ಲಿ ಪ್ರಶ್ನೆಗಳೇ ಅಸಂಬದ್ಧ ಎಂದು ಹೇಳ ಬೇಕಾಗುತ್ತದೆ. ಆದರೆ ಕರ್ಮಗಳಿಗೆ ಅದೃಷ್ಟವಾದ ಫಲವೂ ಆಗಬಹುದೆಂಬುದನ್ನು ನಂಬುವದಕ್ಕೆ ತಕ್ಕಷ್ಟು ಕಾರಣವು ಇದ್ದೇ ಇದೆ. ಗಿಡಗಳಿಗೆ ಗೊಬ್ಬರ, ನೀರು– ಮುಂತಾದವನ್ನು ಹಾಕಿದರೆ ಅವುಗಳು ಪುಷ್ಟಿಯಾಗಿ ರುಚಿಯಾದ ಹಣ್ಣುಗಳನ್ನೂ ಸುಗಂಧಯುತವಾದ ಹೂಗಳನ್ನೂ ಬಿಡುವದು ನಮಗೆಲ್ಲ ತಿಳಿದಿದೆ; ಆದರೆ

ಗೊಬ್ಬರನೀರುಗಳಲ್ಲಿ ಈ ಸುಫಲಗಳನ್ನೂ ಸುಗಂಧಗಳನ್ನೂ ಕೊಡುವ ಶಕ್ತಿ ಹೇಗೆ ಬಂದಿತು?-ಎಂಬ ಪ್ರಶ್ನೆಗೆ ಉತ್ತರವನ್ನು ಯಾರುತಾನೆ ಹೇಳಬಲ್ಲರು? ಮನುಷ್ಯನು ತನಗೆ ಬೇಕಾದ ಆಹಾರವನ್ನು ತಿನ್ನುತ್ತಾನೆ; ಅವನ ಶರೀರವು ರಕ್ತಮಾಂಸಾದಿಗಳಿಂದ ಕೂಡಿಕೊಂಡು ಬುದ್ಧಿಶಕ್ತಿಯ ಬೆಳವಣಿಗೆಗೂ ಆ ಆಹಾರವು ಹೇಗೆ ಕಾರಣವಾಗುವ ದೆಂಬುದನ್ನು ಯಾರುತಾನೆ ಹೇಳಲಾಪರು? ಪರಮೇಶ್ವರನ ಸೃಷ್ಟಿಯಲ್ಲಿ ಅತ್ಯಂತ ವಿಲಕ್ಷಣವಾದ ಕಾರಣಗಳಿಂದ ಅತ್ಯಂತ ವಿಲಕ್ಷಣಕಾರ್ಯಗಳು ಆಗುತ್ತಿರುವದು ನಮ್ಮೆಲ್ಲರ ಅನುಭವದಲ್ಲಿಯೂ ಇದೆ. ನಾವು ಕೊಟ್ಟ ಪಿಂಡವನ್ನೂ ಶ್ರಾದ್ಧಾನ್ನವನ್ನೂ ಹೋಮಾದಿ ಗಳನ್ನೂ ತರ್ಪಣಗಳನ್ನೂ ನಮ್ಮ ಪೂರ್ವಜರಾದ ಪಿತೃಗಳಿಗೆ ಹೀಗೆಯೇ ಒಂದಾ ನೊಂದು ಅದೃಷ್ಟಕ್ರಮದಿಂದ ತಲುಪಿಸುವ ಏರ್ಪಾಡನ್ನು ಕೆಲವರು ಪಿತೃದೇವತೆಗಳು ಮಾಡುತ್ತಾರೆಂದು ಸ್ಮೃತಿಗಳಲ್ಲಿ ಹೇಳಿರುತ್ತದೆ.

ಶ್ರಾದ್ಧದಲ್ಲಿ ನಾವು ಮಾಡುವ ಅನ್ನದಾನತಿಲತರ್ಪಣಾದಿಗಳಿಂದ ನಮಗೂ ಫಲ ವುಂಟು. ತಿಲವು ಭಗವಂತನ ಮನಸ್ಸಿನಿಂದಲೂ ಕುಶವು ಆತನ ಪ್ರಾಣದಿಂದಲೂ ಉಂಟಾಗಿರುವವೆಂದು ಪುರಾಣವಚನವಿದೆ. ಕರ್ಮಗಳಲ್ಲಿ ಅವುಗಳ ಪ್ರಯೋಗದಿಂದ ನಮ್ಮ ಮನಃಪ್ರಾಣಗಳಿಗೆ ಒಂದಾನೊಂದು ಸಂಸ್ಕಾರವಾಗುವದೆಂದು ಇದರಿಂದ ಸೂಚಿತ ವಾಗುತ್ತದೆ. ಪಿತೃಪಿತಾಮಹಾದಿಗಳಿಗೇ ಅಲ್ಲದೆ 'ನಾನು ಕೊಡುವ ತರ್ಪಣದಿಂದ ಜಲಚರ, ಭೂಚರ, ವಾಯುಚರಜಂತುಗಳಿಗೆಲ್ಲ ತೃಪ್ತಿಯಾಗಲಿ !" ಎಂಬ ಭಾವನೆ ಯಿಂದ ತರ್ಪಣವನ್ನು ಕೊಡುವ ಮನೋಭಾವನೆಯಲ್ಲಿ ಎಂಥ ಸರ್ವಭೂತಪ್ರೇಮವು ಅಡಗಿರುತ್ತದೆ ! ಶ್ರಾದ್ಧಾಂತದಲ್ಲಿ ನಾವು ಮಾಡುವ ಪ್ರಾರ್ಥನೆಯನ್ನು ಮನದಂದರೆ ಆಗ ಕರ್ಮಿಗಳ ಮನೋಭಾವವು ಪ್ರಸನ್ನವಾಗಲಿ! ನಮ್ಮ ಗೋತ್ರವು ಬೆಳೆಯಲಿ! ನಮ್ಮ ದಾತೃಗಳು ಅಭಿವೃದ್ಧಿಯನ್ನೈದಲಿ! ವೇದಗಳೂ ಸಂತತಿಯೂ ಮುನ್ನಡೆಯಲಿ! ನಮ್ಮ ಶ್ರದ್ಧೆಯು ಎಂದಿಗೂ ಸಡಿಲವಾಗದಿರಲಿ! ನಮ್ಮಲ್ಲಿ ದಾನದ್ರವ್ಯವು ಹೆಚ್ಚುತ್ತಿರಲಿ! ನಮ್ಮಲ್ಲಿ ಅನ್ನವು ಹೆಚ್ಚುತ್ತಿರಲಿ! ಅತಿಥಿಗಳು ನಮಗೆ ದೊರಕುತ್ತಿರಲಿ! ನಮ್ಮಲ್ಲಿ ಯಾಚನೆಗೆ ಬರುವವರು ಇರಲಿ, ನಾವು ಯಾರಲ್ಲಿಯೂ ಯಾಚನೆಮಾಡದಿರುವಂತಾಗಲಿ.

ನಮ್ಮ ಹಿರಿಯರಲ್ಲಿ ಶ್ರದ್ಧಾಭಕ್ತಿಗಳನ್ನೂ ಸಂಸ್ಕೃತಿಯಲ್ಲಿ ಹೆಮ್ಮೆಯನ್ನೂ ಅಭ್ಯುದಯದಲ್ಲಿ ಆಶಾಪ್ರತೀಕ್ಷೆಗಳನ್ನೂ ಹೆಚ್ಚಿಸುವ ಶ್ರಾದ್ಧಕರ್ಮವನ್ನು ನೆನಪಿಗೆ ತರುವ ಪಿತೃಪಕ್ಷಕ್ಕೆ ಜಯಕಾರವಿರಲಿ ! ಸಂ-26, 60

*****

# 3. ಅಧ್ಯಾತ್ಮಸಾಧನಗಳು

## ಅಧ್ಯಾತ್ಮಸಾಧನೆಗೆ ಒಂಬತ್ತು ನಿಯಮಗಳು

**1. ಬ್ರಾಹ್ಮಮುಹೂರ್ತದಲ್ಲಿ ಏಳುವದು:** ಬೆಳಗಿನ ಜಾವ ನಾಲ್ಕು ಘಂಟೆಯಿಂದ ಸೂರ್ಯೋದಯವಾಗುವದರೊಳಗೆ ಧ್ಯಾನಕ್ಕೆ ಕುಳಿತರೆ ಮನಸ್ಸು ಬಹಳ ಪ್ರಸನ್ನವಾಗಿರುತ್ತದೆ.

**2. ಸ್ನಾನ :** ತಣ್ಣೀರಿನಲ್ಲಿ, ಅದಾಗದಿದ್ದರೆ ಬಿಸಿನೀರಿನಲ್ಲಿ, ಸ್ನಾನಮಾಡಿ ಶುಚಿಯಾದ ಬಟ್ಟೆಯನ್ನು ಧರಿಸಬೇಕು. ಪ್ರಾತಃಸ್ನಾನಕ್ಕೆ ಅನುಕೂಲವಾಗದಿದ್ದರೆ ಮುಖವನ್ನೂ ಕೈಕಾಲು ಗಳನ್ನೂ ತೊಳೆದುಕೊಂಡು ಈಶ್ವರನ ಸ್ಮರಣೆಯಿಂದ ಚಿತ್ತಶುದ್ಧಿಯನ್ನು ಮಾಡಿಕೊಳ್ಳಬೇಕು.

**3. ಧ್ಯಾನ :** ಸರ್ವರಿಗೂ ಆತ್ಮನಾಗಿರುವ ಪರಮೇಶ್ವರನ ಧ್ಯಾನವನ್ನು ದಿನಕ್ಕೆ ಅರ್ಧ ಘಂಟೆಯಾದರೂ ಮಾಡಬೇಕು. ಪೂಜೆ, ಜಪ-ಮುಂತಾದವುಗಳಿಂದ ಧ್ಯಾನಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು.

**4. ಪಾರಾಯಣ :** ಉಪನಿಷತ್ತುಗಳು, ಭಗವದ್ಗೀತೆ, ರಾಮಾಯಣ, ಭಾಗವತ-ಮುಂತಾದ ಸದ್ಗ್ರಂಥಗಳ ಭಾಗವನ್ನು ತಪ್ಪದೆ ಪ್ರತಿದಿನವೂ ಅರ್ಥವನ್ನು ಸ್ಮರಣೆಮಾಡುತ್ತಾ ಓದಬೇಕು.

**5. ಸದ್ವ್ಯವಹಾರ :** ವಿಷಯಭೋಗಕ್ಕಾಗಿ ಜೀವಿಸಬಾರದು, ಪರಮಾರ್ಥದ ಆನಂದಕ್ಕಾಗಿ ಜೀವಿಸಬೇಕು. ಯಾವ ವ್ಯವಹಾರದಲ್ಲಿಯೇ ಆಗಲಿ, ದೃಷ್ಟಿಗೆ ಜೀವನದ ಹೆಗ್ಗುರಿಯು ದೂರವಾಗಿರಬಾರದು.

**6. ತ್ರಿಕರಣಸಂಯಮ :** ಹಿತಮಿತವಾದ ಸಾತ್ತ್ವಿಕಾಹಾರಯುಕ್ತವಾದ ವ್ಯಾಯಾಮ, ಇಂದ್ರಿಯನಿಗ್ರಹ-ಇವುಗಳಿಂದ ಶರೀರವನ್ನೂ ಸತ್ಯಪ್ರಿಯವಚನ, ಭಗವನ್ನಾಮೋಚ್ಚಾರಣ, ಮೌನ-ಮುಂತಾದವುಗಳಿಂದ ವಾಕ್ಕನ್ನೂ ತತ್ತ್ವವಿಚಾರ, ಸರ್ವಾತ್ಮಭಾವನೆ, ಆತ್ಮಶೋಧನೆ-ಮುಂತಾದವುಗಳಿಂದ ಮನಸ್ಸನ್ನೂ ಹಿಡಿತದಲ್ಲಿಟ್ಟುಕೊಳ್ಳಬೇಕು.

**7. ಭಜನ :** ಪ್ರತಿದಿನವೂ ಸ್ತೋತ್ರಗಳಿಂದಲೂ ಕೀರ್ತನಗಳಿಂದಲೂ ಸಾಯಂಕಾಲ ಭಗವಂತನನ್ನು ಭಜಿಸಬೇಕು.

**8. ಆತ್ಮನಿವೇದನ :** ಸಕಲಕಾರ್ಯಗಳನ್ನೂ ಭಗವಂತನ ಪ್ರೇರಣೆಯಿಂದಲೇ ತಾನು ನಿಮಿತ್ತಮಾತ್ರನಾಗಿ ಮಾಡುತ್ತಿರುವೆನೆಂದು ತಿಳಿದು ತನ್ನ ಸರ್ವಸ್ವವನ್ನೂ ತನ್ನನ್ನೂ ಆತನಿಗೆ ಒಪ್ಪಿಸಿಬಿಡಬೇಕು.

**9. ಸತ್ಸಂಗ :** ಅಧ್ಯಾತ್ಮಸಾಧನೆಯನ್ನು ಹೇಗೆ ಮಾಡಬೇಕೆಂಬುದನ್ನು ಸತ್ಪುರುಷರೇ ತಿಳಿಸಬಲ್ಲವರು. ಆದ್ದರಿಂದ ಶ್ರದ್ಧೆಯಿಂದ ಸತ್ಸಂಗವನ್ನು ಸಂಪಾದಿಸಿಕೊಳ್ಳಬೇಕು.

**ಸಂ-8, 16**

# ಅಧ್ಯಾತ್ಮವಿದ್ಯಾರ್ಥಿಗಳಿಗೆ ಸೂಚನೆಗಳು

1. ದೇಹವೆಂಬುದು ದೇವಾಧಿದೇವನಾದ ಭಗವಂತನಿರುವ ಆಲಯ. ಇದನ್ನು ಎಲ್ಲಾ ಬಗೆಯಿಂದಲೂ ಪರಿಶುದ್ಧವಾಗಿಟ್ಟುಕೊಳ್ಳಬೇಕು. ಇದನ್ನು ಅನಾಚಾರದುರಾಚಾರಗಳಿಂದ ಅಪವಿತ್ರಗೊಳಿಸಬಾರದು; ಅನಾರ್ಯರ ಅನುಕರಣೆಯಿಂದ ಇದನ್ನು ಸಿಂಗರಿಸಿಕೊಂಡು ಸೊಗಸುಗಾರಿಕೆಯ ಜೀವನವೇ ಪರಮಪುರುಷಾರ್ಥವೆಂಬ ದುರ್ಭಾವನೆಯನ್ನು ತಂದುಕೊಳ್ಳಬಾರದು. ದೇಹವೆಂದರೆ ಭೋಗಾಶ್ರಯಮಾತ್ರವೆಂಬ ಕುಕಲ್ಪನೆಯಿಂದ ದೂರರಾಗಬೇಕು. ನಮಗೆ ಕರ್ಮಾನುಸಾರವಾಗಿ ಬಂದಿರುವ ದೇಹದಲ್ಲಿರುವ ಕುಂದುಕೊರತೆಗಳನ್ನು ಸರಿಪಡಿಸಿಕೊಂಡು ಸಾಧ್ಯವಾದಮಟ್ಟಿಗೂ ಆರೋಗ್ಯ, ಬಲ, ಕಾರ್ಯದಕ್ಷತೆ-ಇವುಗಳಿಂದೊಡಗೂಡಿದ ದೀರ್ಘಾಯುಸ್ಸುಳ್ಳದ್ದಾಗುವದಕ್ಕೆ ತಕ್ಕ ಉಪಕರಣವಾಗುವಂತೆ ಅದನ್ನು ಸಜ್ಜುಗೊಳಿಸಿಕೊಳ್ಳಬೇಕು.

2. ಇಂದ್ರಿಯಗಳು ನಮ್ಮನ್ನು ಪ್ರಕೃತಿಮಾತೆಗೆ ಸಂಬಂಧಿಸುವ ದ್ವಾರಗಳಾಗಿರುತ್ತವೆ. ಹೊರಗಿನ ವಸ್ತುಗಳೂ ಪ್ರಾಣಿಗಳೂ ಜನರೂ ನಮ್ಮ ಉಪಯೋಗಕ್ಕಾಗಿ ಸೃಷ್ಟಿಯಾಗಿರುವರೆಂಬ ದುರ್ಭಾವನೆಗೆ ಅವು ಅವಕಾಶವನ್ನು ಕೊಡದಿರಲಿ; ಹೊರಗಿನ ಪ್ರಪಂಚದ ದರ್ಶನದಿಂದ ನಮಗೆ ದುರಾಶೆಗಳೂ ದುರ್ವೇದನೆಗಳೂ ದುಃಸಂಕಲ್ಪಗಳೂ ದುಷ್ಪ್ರವೃತ್ತಿಗಳೂ ಉಂಟಾಗದಿರಲಿ. ಪ್ರಪಂಚವೆಲ್ಲವೂ ಭಗವಂತನ ವಿಭೂತಿಯೆಂಬ ಸುಂದರಭಾವನೆಯು ಬೆಳೆದುಕೊಳ್ಳುವದಕ್ಕೆ ತಕ್ಕಂತೆ ನಮ್ಮ ಜ್ಞಾನೇಂದ್ರಿಯಗಳನ್ನೂ ಕರ್ಮೇಂದ್ರಿಯಗಳನ್ನೂ ಉಪಯೋಗಿಸೋಣ. ನಮ್ಮನಮ್ಮ ಕರ್ಮದಿಂದ ವಿಶ್ವರೂಪನಾದ ಭಗವಂತನ ಅರ್ಚನೆಯನ್ನು ಮಾಡೋಣ.

3. ಮನೋಬುದ್ಧಿಗಳು ಲೌಕಿಕವಿಚಾರಗಳನ್ನು ಅಳೆದು ಒಳಕ್ಕೆ ಸುರಿದುಕೊಳ್ಳುವ ಬಳ್ಳಗಳಾಗದಿರಲಿ. ತಿಳಿವಳಿಕೆಯಿಂದ ಸಂಸ್ಕಾರವನ್ನುಂಟುಮಾಡಿಕೊಂಡು ನಮ್ಮೊಳಗೆ ನಾವೇ ನೋಡಿ ಅಲ್ಲಿ ನಮ್ಮ ನಿಜವಾದ ಆತ್ಮಸ್ವರೂಪವನ್ನು ಕಂಡುಕೊಳ್ಳುವದಕ್ಕೆ ತಕ್ಕ ಸಾಧನಗಳಾಗುವಂತೆ ಅವಕ್ಕೆ ಭಗವದ್ಭಕ್ತರಲ್ಲಿ ಪೂಜ್ಯಭಾವ, ಭಗವಂತನ ನಾಮಸ್ಮರಣೆ, ಭಗವಂತನ ಗುಣಕರ್ಮಲೀಲೆಗಳ ಪರಿಭಾವನೆ, ಭಗವಂತನ ಧ್ಯಾನ-ಮುಂತಾದವು ಅಳವಡುವ ಉಪಾಯವನ್ನು ಹುಡುಕುತ್ತಿರೋಣ. ನಮ್ಮೊಳಗೆ ಇರುವ ಆತ್ಮನೇ ಎಲ್ಲಾ ಮನುಷ್ಯರಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಇರುವನೆಂಬ ಸದ್ಭಾವನೆಯು ಅವುಗಳಲ್ಲಿ ಮೂಡಿಕೊಳ್ಳಲಿ. ಬೇರೆಬೇರೆಯ ಜಾತಿ, ಕುಲ, ವರ್ಣ, ಲಿಂಗ, ಮತ, ಜನಾಂಗ-ಮುಂತಾದ ಉಪಾಧಿಗಳು ಯಾವವೂ ಅಡ್ಡಿಯಾಗದೆ 'ಜಗತ್ತೆಲ್ಲವೂ ಆ ಪರಮಾತ್ಮನ ಮೂರ್ತಿಯೇ, ಎಲ್ಲವೂ ಅವನಿಂದ ಹುಟ್ಟಿ, ಅವನಲ್ಲಿಯೇ ಇದ್ದುಕೊಂಡು, ಕೊನೆಗೆ ಅವನಲ್ಲಿಯೇ ಸೇರಲಿರುವದು' ಎಂಬ ಸದ್ಭಾವನೆಯು ಸಂತತವಾಗಿ ನಮ್ಮ ಅಂತರಂಗದಲ್ಲಿ ಹರಿಯುತ್ತಿರಲಿ.

4. 'ನಾನು' ಎಂಬ ನಮ್ಮ ಅಲ್ಪಾತ್ಮವು ನಮ್ಮ ಅಭಿವೃದ್ಧಿಗೆ ತಡೆಯಾಗದಿರಲಿ. ದೇಶಕಾಲವಸ್ತು ಪರಿಚ್ಛೇದವಿಲ್ಲದ ಪರತತ್ತ್ವವೆಂಬ ಸಚ್ಚಿದಾನಂದಸಾಗರದ ಅಲೆಗಳು ನಾವು; ನಾವು ಆ ಸಾಗರಕ್ಕಿಂತ ಬೇರೆಯಾಗಿ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರುವದಿಲ್ಲ–ಎಂಬ ಉತ್ತಮಭಾವಸಮಾಧಿಯನ್ನು ಅನುಗ್ರಹಿಸೆಂದು ಕರುಣಾನಿಧಿಯಾದ ಭಗವಂತನನ್ನು ನಿತ್ಯವೂ ಪ್ರಾರ್ಥಿಸೋಣ. **ಸಂ–5, 31**

## ಸಾಧಕರಿಗೆ ಸೂಚನೆಗಳು

1. ಎಂಥ ಪಾಪಿಗೂ ಉದ್ಧಾರವಾಗುವದಕ್ಕೆ ಮಾರ್ಗವಿದೆ. ವಾಲ್ಮೀಕಿಯಂಥ ಋಷಿಯೂ ಒಂದು ಕಾಲದಲ್ಲಿ ಪರಮಪಾತಕಿಯಾಗಿದ್ದನು. ಆದ್ದರಿಂದ ನೀವು ಮಾಡಿರಬಹುದಾದ ಪಾಪಗಳ ನಿಮಿತ್ತದಿಂದ ನಿರಾಶರಾಗಬೇಡಿರಿ. ಆದರೆ ಇನ್ನು ಮುಂದೆ ಪಾಪವನ್ನು ಮಾಡುವದಿಲ್ಲವೆಂದು ಮನಃಪೂರ್ವಕವಾಗಿ ಸಂಕಲ್ಪಮಾಡಿರಿ; ಸಾಧುಮಾರ್ಗಕ್ಕೆ ಕೊಂಡೊಯ್ಯಬೇಕೆಂದು ಭಗವಂತನಲ್ಲಿ ಮೊರೆಯಿಡಿರಿ. ಆಮೇಲೆ ಯಾವ ಅಂಜಿಕೆಯೂ ಇರುವದಿಲ್ಲ.

2. ಹೆರರ ಕುಂದುಕೊರತೆಗಳನ್ನು ಎಂದಿಗೂ ಎತ್ತೆಣಿಸಬಾರದು. ಮತ್ತೊಬ್ಬರಲ್ಲಿ ಕಾಣಬಹುದಾದ ದೋಷಗಳಿಗೆ ಕುರುಡರಾಗಿರಬೇಕು. ಮತ್ತೊಬ್ಬರ ತಪ್ಪನ್ನು ಬಣ್ಣಿಸುವ ಚಾಡಿಯ ಮಾತಿಗೆ ಕಿವುಡರಾಗಿರಬೇಕು. ಮತ್ತೊಬ್ಬರ ಹುಳುಕನ್ನು ಕುರಿತ ಮಾತಿಗೆ ಮೂಕನಾಗಿರಬೇಕು. ಮತ್ತೊಬ್ಬರ ಕಲಂಕವನ್ನು ಕುರಿತ ಯೋಚನೆಗೆ ಮಂಕರಾಗಿರಬೇಕು. ನಿಮ್ಮ ಮನೆಯು ಕುಸಿದುಬೀಳುತ್ತಿರುವಲ್ಲಿ ಮತ್ತೊಬ್ಬರ ಮನೆಯನ್ನು ಸರಿಪಡಿಸುವ ಗುತ್ತಿಗೆಹಿಡಿಯುವದು ಎಂದಿಗೂ ತರವಲ್ಲ.

3. ಒಬ್ಬರ ಬಡತನದ ಮುಂದೆ ತನ್ನ ಸಿರಿತನವನ್ನು ಮೆರೆಯಿಸಬಾರದು; ಬಡವರಿಗೆ ಬಂಧುವಾಗಬೇಕು. ಒಬ್ಬರು ಸಂಕಟದಲ್ಲಿರುವಾಗ ಸುಖಜೀವನದ ಸೊಂಪನ್ನು ತೋರಿಸಿಕೊಳ್ಳಬಾರದು; ಅವರ ಸಂಕಟದಲ್ಲಿ ಅನುತಾಪವಿರಬೇಕು. ತಿಟ್ಟಿನ ನೀರು ತಗ್ಗಿಗೆ ಹರಿಯುವದು ಸಹಜವಲ್ಲವೆ? ಮತ್ತೊಬ್ಬರ ಗುಣಗಳನ್ನು ಕಂಡು ಕರುಬಬಾರದು. ಅನುಕರಿಸಬೇಕು. ಮತ್ತೊಬ್ಬರ ಏಳಿಗೆಯನ್ನು ಕಂಡು ಹೊಟ್ಟೆಯನ್ನು ಕಿವಿಚಿಕೊಳ್ಳಬಾರದು; ಹಿಗ್ಗಬೇಕು. ಪಕ್ಕದಲ್ಲಿಯೇ ಅಮೃತದ ಝರಿಯಿರುವಾಗ ಬರಿಯ ಗಡಿಗೆಯನ್ನು ಕಂಕುಳಲ್ಲಿ ಅವಿಚಿಕೊಂಡಿರುವದೆ?

4. ನಡೆದಷ್ಟೂ ದಾರಿ ಸಾಗುವದು; ಆದ್ದರಿಂದ ಸುಮ್ಮನೆ ಕೂರಬಾರದು. ಸೋಮಾರಿತನವೇ ಪಾಪಕ್ಕೆ ತವರುಮನೆ. ನಿಮಗೂ ಅನ್ಯರಿಗೂ ಉಪಯೋಗವಾಗುವ ಎಷ್ಟೋ ಕೆಲಸಗಳಿವೆ. ನಿಮ್ಮ ಮನಸ್ಸಿಗೆ ಒಗ್ಗುವ ಯಾವದಾದರೊಂದು ಕೆಲಸವನ್ನು ಕೂಡಲೆ ಕೈಕೊಳ್ಳಿರಿ. ಅದು

ಸಲೀಸಾಗಿ ಸಾಗುವಂತೆಯೂ ಸಫಲವಾಗುವಂತೆಯೂ ಅನುಗ್ರಹಿಸೆಂದು ಭಗವಂತನನ್ನು ಬೇಡಿಕೊಳ್ಳಿರಿ.

5. ಮೊದಮೊದಲು ಸಾಧುಸಂತರ ನುಡಿಗಳೇ ನಿಮಗೆ ಮಾದರಿಯಾಗಿರಲಿ. ಅವರ ಸೇವೆಯನ್ನು ಭಕ್ತಿಯಿಂದ ಮಾಡುತ್ತಿದ್ದರೆ, ಅವರ ಉಪದೇಶವನ್ನು ಆದರದಿಂದ ಕೇಳುತ್ತಿದ್ದರೆ, ಕಾಲಕ್ರಮದಲ್ಲಿ ನಿಮ್ಮ ಸ್ವಂತಮಾರ್ಗವು ಯಾವದೆಂಬುದನ್ನು ಪರಮೇಶ್ವರನು ನಿಮಗೆ ತೋರಿಸಿಕೊಡುವನು.

6. ಪರಮಾತ್ಮನು ಸರ್ವಭೂತಗಳಿಗೂ ಆತ್ಮನು; ಆದ್ದರಿಂದ ಆತನು ನಿಮಗೂ ಆತ್ಮನಾಗಿರುತ್ತಾನೆಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ. ಪರಮಾತ್ಮನ ಧರ್ಮಗಳೆಲ್ಲವೂ ನಿಮ್ಮಲ್ಲಿ ಈಗಲೂ ಇವೆ. ಅವು ಅವ್ಯಕ್ತವಾಗಿರಬಹುದು; ಆದರೆ ತಕ್ಕ ಸಾಧನಗಳಿಂದ ಅವನ್ನು ಹೊರತೋರುವಂತೆ ಮಾಡಿಕೊಳ್ಳುವದು ಅಸಾಧ್ಯವಲ್ಲ. ಕೊಳೆತ ಚಂದನದ ಚಕ್ಕೆಯಾದರೇನು? ಸಾಣೆಯಕಲ್ಲಿನ ಮೇಲೆ ಅರೆದರೆ ಸುಗಂಧವನ್ನು ಬೀರದೆ ಇರುವದೆ?

7. ಧರ್ಮಬಾಹಿರನೆಂದು, ಅಥವಾ ಪರಧರ್ಮದವನೆಂದು ಯಾರನ್ನೂ ಕಡೆಗಣಿಸ ಬೇಡಿ, ದೂರಬೇಡಿ, ವಾದದಲ್ಲಿ ಸೋಲಿಸುವದಕ್ಕೆ ಯತ್ನಿಸಬೇಡಿ. ಮನನೋಯಿಸು ವದಕ್ಕಂತೂ ಹೋಗಲೇಬೇಡಿ. ದೇವರಿಗೆ ಎಲ್ಲರೂ ಮಕ್ಕಳೇ; ಅವನಿಗೆ ಯಾವ ಮಕ್ಕಳ ಮೇಲೆ ತಾನೆ ಪ್ರೀತಿಯಿಲ್ಲ? ಯಾರನ್ನು ಕಂಡರೂ ಸಂತೋಷವನ್ನುಂಟುಮಾಡುವದಕ್ಕೆ ಹವಣಿಸಿರಿ; ಅದೇ ಈಶ್ವರಪೂಜೆಯು.

8. ಹರಿಯುವ ನೀರು ಪಾಚಿಗಟ್ಟುವದಿಲ್ಲ; ಸುತ್ತುಮುತ್ತಲಿನ ಜನರನ್ನು ಪ್ರೀತಿಸುತ್ತಿದ್ದರೆ ಅಂತಃಕರಣವು ಅಶುದ್ಧವಾಗುವದಿಲ್ಲ. ಎಲ್ಲರಲ್ಲಿಯೂ ಇರುವ ಪರಮಾತ್ಮನ ಪ್ರೇಮಕ್ಕೆ ಬೇಲಿಹಾಕಿಕೊಂಡು ನನ್ನ ಹೃದಯದ ಹೊಲದಲ್ಲಿಯೇ ಅದನ್ನು ಬೆಳೆಯಿಸಿಕೊಳ್ಳು ವೆನೆನ್ನುವದು ಎಂಥ ತಿಳಿಗೇಡಿತನ.

9. ಯಾವಾಗಲೂ ಉಲ್ಲಾಸದಿಂದಿರಬೇಕು; ಎಂದಿಗೂ ಮುಖವನ್ನು ಜೋಲು ಹಾಕಿಕೊಳ್ಳಬಾರದು, ಸಿಂಡ್ರಿಸಿಕೊಳ್ಳಬಾರದು. ನಿಮ್ಮ ಮುಖದಲ್ಲಿ ಸೂಸುವ ಸುಮ್ಮಾನವೇ ಹತ್ತಿರಕ್ಕೆ ಬಂದವರಿಗೆಲ್ಲ ಸನ್ಮಾನವಾಗುವದು. ಮಲ್ಲಿಗೆಯು ಅರಳುವದಕ್ಕೆ ಮೊದಲಾದರೆ ಎತ್ತಕಡೆಗೆ ತಾನೆ ಅದರ ತನಿಗಂಪು ತಾಕದೆ ಇರುತ್ತದೆ?

10. ನೆಟ್ಟಗೆ ಹರಿಯಲಿ, ಡೊಂಕಾಗಿ ಹರಿಯಲಿ, ಪೂರ್ವಕ್ಕೆ, ಪಶ್ಚಿಮಕ್ಕೆ, ದಕ್ಷಿಣಕ್ಕೆ, ಉತ್ತರಕ್ಕೆ-ಯಾವ ದಿಕ್ಕಿಗೆ ಹರಿದರೂ ಎಲ್ಲಾ ನದಿಗಳೂ ಒಂದಲ್ಲದಿದ್ದರೆ ಒಂದು ದಿನ ಸಮುದ್ರವನ್ನೇ ಸೇರುವವು. ಭಗವಂತನನ್ನು ಸೇರುವದಕ್ಕೆ ಈ ಮಾರ್ಗವನ್ನೇ ಅನುಸರಿಸ ಬೇಕೆಂದು ಯಾರೊಬ್ಬರನ್ನೂ ಬಲಾತ್ಕರಿಸುವದಕ್ಕೆ ಹೋಗಬೇಡಿರಿ. ನಿಮ್ಮ ಮಾರ್ಗದಲ್ಲಿ ನಿಮ್ಮ ಭಕ್ತಿಯು ಹರಿಯುತ್ತಿರಲಿ; ಅಷ್ಟರಿಂದಲೇ ಮಿಕ್ಕವರಿಗೂ ದಾರಿಯನ್ನು ತೋರಿಸಿದಂತೆ ಆಗುತ್ತದೆ.

11. ಅಧ್ಯಾತ್ಮಸಾಧನವು ಹೃದಯಕ್ಕೆ ಸಂಬಂಧಪಟ್ಟದ್ದು. ಹೃದಯವನ್ನು ಹರಿಗೊಪ್ಪಿಸುವದೇ ಸಾಧನದ ಮರ್ಮವು. ನೀವು ಮಾಡುವ ಕರ್ಮ, ಆಡುವ ಮಾತು, ಮನದಂದುಕೊಳ್ಳುವ ಭಾವನೆ-ಎಲ್ಲವೂ ಹೃತ್ಪೂರ್ವಕವಾಗಿ ಭಗವಂತನಿಗೆ ಅರ್ಪಿತವಾಗಿದ್ದರೆ, ನಿಮ್ಮ ಹೃದಯದಲ್ಲಿ ಭಗವಂತನಿಗೆ ಹೊರತು ಮತ್ತೆ ಏತಕ್ಕೂ ಎಡೆಯಿಲ್ಲದೆ ಇದ್ದರೆ, ನಿಮ್ಮ ಸಾಧನವು ಪೂರ್ಣವಾಯಿತು; ನೀವು ಸಿದ್ಧರಾದಿರಿ. ಸಂ-18,

# ಶಾಸ್ತ್ರೀಯವಿಚಾರಕ್ರಮ

ಪಶ್ಚಿಮದೇಶಗಳಲ್ಲಿ ಭೌತಿಕವಿಜ್ಞಾನಕ್ಕೆ ಇರುವ ಬೆಲೆಯು ಮತ್ತೆ ಯಾವ ತಿಳಿವಳಿಕೆಗೂ ಇಲ್ಲವೆಂದು ಹೇಳಬಹುದಾಗಿರುತ್ತದೆ. ಭೌತಿಕಶಾಸ್ತ್ರಗಳು ಜನರಿಗೆ ಬೇಕಾಗುವ ಐಹಿಕಸುಖ ಸಾಮಗ್ರಿಗಳನ್ನು ಒದಗಿಸಿದ್ದಲ್ಲದೆ ಜ್ಞಾನವನ್ನು ಸಂಪಾದಿಸುವದಕ್ಕೆ ಉಪಯೋಗಿಸ ಬೇಕಾಗುವ ವಿಚಾರಪದ್ಧತಿಯನ್ನೂ ಒದಗಿಸಿಕೊಟ್ಟಿರುತ್ತವೆ. ಭೌತಿಕಶಾಸ್ತ್ರಗಳು ಉಪಯೋಗಿಸುವ ವಿಚಾರರೀತಿಯು ಭೌತಿಕವಿಷಯ ಪರೀಕ್ಷೆಗೇ ಅಲ್ಲದೆ ಮತ್ತೆ ಯಾವ ವಿಷಯದಲ್ಲಿಯೇ ಆಗಲಿ ತತ್ತ್ವವನ್ನು ಕಂಡುಹಿಡಿಯುವದಕ್ಕೆ ಉಪಯೋಗಿಸ ಬಹುದಾದ್ದಾಗಿದೆ ಎಂಬುದನ್ನು ಪಾಶ್ಚಾತ್ಯರು ಈಗ ಒತ್ತಿ ಹೇಳುತ್ತಿದ್ದಾರೆ. ವಿಚಾರ ಸಾಮಾನ್ಯಕ್ಕೆ, ತತ್ತ್ವಶಾಸ್ತ್ರ ಮತ್ತು ಮತಪ್ರಚಾರದ ನಿರ್ಣಯಕ್ಕೆ ಕೂಡ, ಅನ್ವಯಿಸುವಂಥ ಕೆಲವು ಸಾಮಾನ್ಯ ಧರ್ಮಗಳು ಭೌತಿಕವಿಜ್ಞಾನದ ವಿಚಾರಕ್ರಮದಲ್ಲಿವೆಯೆಂಬುದನ್ನು ತಿಳಿಸುವದಕ್ಕಾಗಿ ಆ ಕ್ರಮಕ್ಕೆ "Scientific Method" (ಶಾಸ್ತ್ರೀಯವಿಚಾರಕ್ರಮ) ಎಂಬ ಹೆಸರನ್ನು ಕೊಟ್ಟಿರುತ್ತಾರೆ.

ಈ ಕ್ರಮದ ಸ್ವರೂಪವೇನು?- ಎಂಬುದನ್ನು ತತ್ತ್ವವಿಷಯವಾಗಿ ಚರ್ಚೆ ಮಾಡುವವರೆಲ್ಲರೂ ತಿಳಿದಿರುವದು ಅವಶ್ಯವಾಗಿರುತ್ತದೆ. ಅಮೆರಿಕಖಂಡದಲ್ಲಿ ಕಲಿಸುವ ಶಿಕ್ಷಣ ಪದ್ಧತಿಯ "ಶಾಸ್ತ್ರೀಯವಿಚಾರಕ್ರಮ"ದ ಸಾಮಾನ್ಯಪಾಠ ವಿಷಯಸೂಚಿಕೆ (Syllabus) ಯೊಂದನ್ನು ಸಂಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ರಿಟೈರ್ಡ್ ರಿಜಿಸ್ಟ್ರಾರರಾದ ಶ್ರೀಯುತ ವಿ. ಸುಬ್ರಹ್ಮಣ್ಯಅಯ್ಯರವರು ಇತ್ತೀಚೆಗೆ ಒಂದು ಇಂಗ್ಲಿಷುಭಾಷೆಯ ಕರನ ಪತ್ರವನ್ನು ಜಿಜ್ಞಾಸುಜನರಲ್ಲಿ ಹಂಚಿರುತ್ತಾರೆ. ಅದನ್ನು ವೇದಾಂತಜಿಜ್ಞಾಸುಗಳು ತಿಳಿದಿರುವದು ಒಳ್ಳೆಯದೆಂದು ಭಾವಿಸಿ ಅದನ್ನು ಭಾಗಭಾಗವಾಗಿ ಕನ್ನಡಿಸಿ ಕೊಡುತ್ತೇವೆ.

# ಜಿಜ್ಞಾಸುವಿನ ಲಕ್ಷಣಗಳು

**(The Charactaristics of the Scientist)**

1. ತತ್ತ್ವದಲ್ಲಿ ನಿಜವಾದ ಆದರವಿರುವಿಕೆ, ಹೊಸ ಅಭಿಪ್ರಾಯಗಳು ಬಂದರೆ ಅವುಗಳನ್ನು ವಿಚಾರಿಸುವದಕ್ಕೆ ಸಿದ್ಧನಾಗಿರುವಿಕೆ; ಸ್ವಾರ್ಥಕ್ಕಾಗಿ ತತ್ತ್ವದ ಹಾದಿಯನ್ನು ಬಿಡದಿರುವಿಕೆ.

2. ಎಚ್ಚರಿಕೆಯಿಂದಿದ್ದು ತತ್ತ್ವವನ್ನು ಅನುಸರಿಸುವದಕ್ಕೆ ಸಜ್ಜಾಗಿರುವಿಕೆ; ನನಗೆ ತಿಳಿದಷ್ಟೇ ಸಾಕೆಂಬ ಅತಿತೃಪ್ತಿಯಿಲ್ಲದಿರುವಿಕೆ.

3. ಸಮಾಹಿತಚಿತ್ತನಾಗಿರುವಿಕೆ; ಭಾವಗಳಲ್ಲಿ ಏರುಪೇರುಗಳಿಲ್ಲದಿರುವಿಕೆ, ಹರ್ಷಾಮರ್ಷಗಳಿಲ್ಲದವನಾಗಿರುವಿಕೆ.

4. ವಿವೇಚನಾಶಕ್ತಿಯುಳ್ಳವನಾಗಿ ಒಳಹೊಕ್ಕು ನೋಡುವವನಾಗಿರುವಿಕೆ; ಮೇಲೆಮೇಲೆ ನೋಡಿ ತೃಪ್ತನಾಗದಿರುವಿಕೆ.

5. ಇದ್ದದ್ದು ಇದ್ದಂತೆ ಕರಾರುವಾಕ್ಕಾಗಿ ತಿಳಿಯುವ ಶಕ್ತಿಯುಳ್ಳವನಾಗಿರುವಿಕೆ; ಅನಿರ್ಧಾರಣ ಸ್ವಭಾವದವನಾಗದಿರುವಿಕೆ.

6. ಊಹಾಪೋಹವಿಚಕ್ಷಣತೆ, ನವವಿಧಾನತತ್ಪರತೆ; ಪ್ರತಿಭೆಯಿಲ್ಲದೆ ಕೂತಲ್ಲಿ ಕೂಡುವವನಾಗದಿರುವಿಕೆ.

7. ಸ್ವತಂತ್ರಪ್ರಜ್ಞತೆ; ಮತ್ತೊಬ್ಬರ ಮನೋಭಾವವನ್ನೇ ಅನುಸರಿಸುವವನಾಗದಿರುವಿಕೆ.

8. ವಿಚಾರಶೀಲತೆ, ಸ್ಥಿರಪ್ರಯತ್ನವುಳ್ಳವನಾಗಿರುವಿಕೆ; ತತ್ಕಾಲಕ್ಕೆ ತಟ್ಟನೆ ಕೈಹಾಕಿ ಆಮೇಲೆ ಬಿಟ್ಟುಬಿಡುವ ಸ್ವಭಾವವಿಲ್ಲದಿರುವಿಕೆ.

9. ಉದ್ಯೋಗಶೀಲತೆ, ಉತ್ಸಾಹಶೀಲತೆ, ಸೋಮಾರಿಯಾಗಿ ದೀರ್ಘಸೂತ್ರನಾಗದಿರುವಿಕೆ.

10. ಪೌರುಷವನ್ನಾಶ್ರಯಿಸುವಿಕೆ; ದೈವಶರಣನಾಗದಿರುವಿಕೆ.

11. ಪರಮಾರ್ಥತತ್ಪರನಾಗಿರುವಿಕೆ; ತನಗೆ ಬೇಕಾದದ್ದು ಬೇಡವಾದದ್ದು ಇವುಗಳ-ನ್ನವಲಂಬಿಸದಿರುವಿಕೆ.

12. ಆತ್ಮವಿಶ್ವಾಸ; ಭೀರುತ್ವವಿಲ್ಲದಿರುವಿಕೆ. **ಸಂ-12, 10**

# ಸಂಕಲ್ಪಗಳು

(ಮೂಲ: ಶ್ರೀ ಸ್ವಾಮಿ ಶಿವಾನಂದ ಸರಸ್ವತಿಗಳು) ಅಧ್ಯಾತ್ಮಮಾರ್ಗದಲ್ಲಿ ಬಹಳ ಮುಳ್ಳುಗಳಿರುತ್ತವೆ, ಅದು ಬಹು ಕಡಿದಾಗಿರುತ್ತದೆ, ಅದರಲ್ಲಿ ತಗ್ಗುತಿಟ್ಟುಗಳೂ ಇರುತ್ತವೆ. ಬಯಲಾಸೆಗಳು ನಿಮ್ಮ ಮೇಲೆ ಬಂದು ಬೀಳುತ್ತಿರುತ್ತವೆ. ಕೆಲವು ವೇಳೆ ನಿಮಗೆ ಶಕ್ತಿ

ಕುಂದುವದು. ಹಲವು ವೇಳೆಗಳಲ್ಲಿ ಕೆಳಕ್ಕೆ ಬೀಳುವದೂ ಉಗ್ರವಾದ ಅಸುರಭಾವಗಳ ಪ್ರತೀಕಾರದಿಂದ ಹಿಂದಕ್ಕೆ ಜಗ್ಗುವಿಕೆಯೂ ಕಾಣಿಸಿಕೊಳ್ಳುವದುಂಟು. ಇಚ್ಛಾಶಕ್ತಿಯನ್ನು ಬಲಗೊಳಿಸಿ ಇಂಥ ಪ್ರತಿಕೂಲಪ್ರವಾಹಗಳನ್ನು ತಡೆಗಟ್ಟಬೇಕಾದರೆ ಮತ್ತೆ ಮತ್ತೆ ನೀವು ಹೊಸ ಹೊಸ ಸಂಕಲ್ಪಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಹತ್ತುವದಕ್ಕೆ ಸಹಾಯ ವಾಗುತ್ತದೆ. ಇಗೋ, ಇಲ್ಲಿ ಕೆಲವು ಸಂಕಲ್ಪಗಳನ್ನು ತಿಳಿಸಿರುತ್ತದೆ. ಇವುಗಳನ್ನು ಬಿಡದೆ ತಕ್ಕೈಸಿಕೊಳ್ಳಿರಿ. ಚಿತ್ತದ ಕಾರ್ಯವನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಿ, ಪ್ರತಿದಿನವೂ ಅಧ್ಯಾತ್ಮಸಾಧನಗಳ ವಿಷಯಕ್ಕೆ ದಿನಚರಿಯನ್ನು ಬರೆದಿಡಿರಿ.

1. ಈ ದಿನ ನಾನು ಧ್ಯಾನಕ್ಕೆ 4 ಘಂಟೆಗೇ ಏಳಬೇಕು. ಇದಕ್ಕಾಗಿ ಅಲಾರಂ ಗಡಿಯಾರ (ಘಂಟೆ ಬಾರಿಸುವ ಗಡಿಯಾರ) ವೊಂದನ್ನಿಟ್ಟುಕೊಳ್ಳುವೆನು.
2. ಒಂದು ತಿಂಗಳವರೆಗೆ ತಪ್ಪದೆ ಬ್ರಹ್ಮಚರ್ಯೆಯನ್ನು ಖಂಡಿತ ಅವಲಂಬಿಸುವೆನು.
3. ಈ ಹೊತ್ತು ನಾನು ಬಿರುಸಾದ ಅಥವಾ ಅವಾಚ್ಯವಾದ ಮಾತುಗಳನ್ನು ಆಡದೆ ಇರುವೆನು.
4. ಏನೇ ಆಗಲಿ, ಈ ದಿನ ನಿಜವನ್ನೇ ಹೇಳುವೆನು.
5. ಈ ಭಾನುವಾರ 21600 (200 ಮಾಲೆ) ಜಪವನ್ನು ಮಾಡುವೆನು.
6. ಈ ಭಾನುವಾರ ಸಂಪೂರ್ಣಮೌನವನ್ನಾಚರಿಸುವೆನು.
7. ಈ ಏಕಾದಶಿಯಲ್ಲಿ ಹಾಲುಹಣ್ಣುಗಳನ್ನು ಮಾತ್ರ ತೆಗೆದುಕೊಳ್ಳುವೆನು.
8. ಈ ಆದಿತ್ಯವಾರ ಗೀತೆಯನ್ನೆಲ್ಲ ಅಧ್ಯಯನಮಾಡಿ ಮುಗಿಸುವೆನು; ಗುರುಮಂತ್ರವನ್ನು ಅಥವಾ ಇಷ್ಟಮಂತ್ರವನ್ನು ಎರಡು ಘಂಟೆಗಳವರೆಗೆ ಬರೆಯುತ್ತಿರುವೆನು.
9. ಈ ತಿಂಗಳು ನನ್ನ ಆದಾಯದ ಹತ್ತನೆಯಂಶವನ್ನು ಧರ್ಮಕ್ಕಾಗಿ ವೆಚ್ಚಮಾಡುವೆನು.
10. ಈ ಹೊತ್ತು ಜೋಡನ್ನಾಗಲಿ ಹಾಸಿಗೆಯನ್ನಾಗಲಿ ಉಪಯೋಗಿಸದೆ ಇರುವೆನು.
11. ಇಂದು–ರೊಟ್ಟಿ, ತೊವ್ವೆ, ರಾತ್ರೆಗೆ ಹಾಲು–ಈ ಮೂರನ್ನೇ ಉಪಯೋಗಿಸುವೆನು.
12. ಈ ದಿನ ನಾನು ಸಿಟ್ಟಾಗುವದಿಲ್ಲ.
13. ಈ ವ್ರತಗಳಲ್ಲಿ ಯಾವದನ್ನಾದರೂ ತಪ್ಪಿ ನಡೆದರೆ ರಾತ್ರೆಯ ಊಟವನ್ನು ಬಿಟ್ಟು 10 ಮಾಲೆ ಜಪವನ್ನು ಮಾಡುವೆನು.

ಮೇಲೆ ಕಂಡಂತೆ ಸಂಕಲ್ಪಗಳನ್ನು ಮಾಡುವಾಗ ಭಗವಂತನ ಚಿತ್ರಪಟದ ಮುಂದೆ ಕೈಮುಗಿದುಕೊಂಡು ನಿಂತು ಆತನ ಅನುಗ್ರಹವೂ ಕರುಣವೂ ದೊರಕಲೆಂದು

ಪ್ರಾರ್ಥಿಸಿಕೊಳ್ಳಿರಿ. ಆತನ ಪರಮಾನುಗ್ರಹದಿಂದ ಈ ಸಂಕಲ್ಪಗಳನ್ನು ನೆರವೇರಿಸುವ ಮಹಾಬಲವು ದೊರಕುವದು.

ಈ ಪ್ರಯತ್ನದಲ್ಲಿ ಜಯವು ದೊರಕದಿದ್ದರೂ ಉತ್ಸಾಹಶೂನ್ಯರಾಗಬೇಡಿರಿ. ನೀವು ಎಷ್ಟು ಸಲ ಸೋತರೂ ಅದು ಮುಂದೆ ಗೆಲವಿಗೆ ಒಂದು ಮೆಟ್ಟಿಲೇ ಆಗಿರುತ್ತದೆ. ಇನ್ನೂ ದೃಢಚಿತ್ತದಿಂದ ಉತ್ಸಾಹಭರಿತವಾಗಿ ಮತ್ತೊಂದು ಸಲವೂ ಸಂಕಲ್ಪವನ್ನು ಮಾಡಿಕೊಳ್ಳಿರಿ. ಖಂಡಿತವಾಗಿ ನಿಮಗೆ ಗೆಲವು ದೊರಕುವದು. ಒಂದು ದೋಷವನ್ನು ಕಳೆದುಕೊಂಡರೆ ಮತ್ತೊಂದನ್ನು ಗೆಲ್ಲುವ ಶಕ್ತಿಯೂ ಬಲವೂ ಬರುತ್ತದೆ. ಮಗುವು ಓಡಾಡುವದನ್ನು ಕಲಿತುಕೊಳ್ಳುವದಕ್ಕೆಂದು ಏಳುತ್ತದೆ, ಬೀಳುತ್ತದೆ. ಮತ್ತೂ ಒಂದು ಪ್ರಯತ್ನವನ್ನು ಮಾಡುತ್ತದೆ. ಕೊನೆಗೆ ಅದು ಬೀಳದೆ ಓಡಾಡುವದಕ್ಕೆ ಮೊದಲುಮಾಡುತ್ತದೆ. ಇದರಂತೆಯೇ ಅಧ್ಯಾತ್ಮಮಾರ್ಗದಲ್ಲಿ ನಡೆಯುವಾಗಲೂ ನೀವು ಎಷ್ಟೋ ಸಲ ಬಿದ್ದು ಬಿದ್ದು ಏಳಬೇಕಾಗುತ್ತದೆ. ಕಟ್ಟಕಡೆಗೆ ಯೋಗಪರ್ವತದ ಕೋಡುಗಲ್ಲನ್ನು ಏರುವಿರಿ, ನಿರ್ವಿಕಲ್ಪಸಮಾಧಿಯ ಶಿಖರವನ್ನು ಮುಟ್ಟುವಿರಿ. ಸಂ–12, 191

## ಶ್ರೀರಾಮಕೃಷ್ಣಪರಮಹಂಸರವರ ಸೂಕ್ತಿಗಳು

1. ಅಹಂಕಾರವನ್ನು ತೊಲಗಿಸುವದು ಬಲು ಕಷ್ಟ. ಬೆಳ್ಳುಳ್ಳಿಯ ಅಥವಾ ನೀರುಳ್ಳಿಯ ರಸವನ್ನಿಟ್ಟಿರುವ ಬಟ್ಟಲನ್ನು ಎಷ್ಟು ಸಲ ಉಜ್ಜಿ ತೊಳೆದರೂ ಅದರ ದುರ್ವಾಸನೆ ಹೋಗುವದಿಲ್ಲ.

2. ಮನುಷ್ಯನಿಗೆ ಪರಮಾತ್ಮನ ಪವಿತ್ರವಾದ ನಾಮದ ಮಹಿಮೆಯಲ್ಲಿ ಶ್ರದ್ಧೆಯುಂಟಾದರೆ ಸಾಕು; ಆಮೇಲೆ ವಿಚಾರವೂ ಬೇಡ, ಮತ್ತೆ ಯಾವ ಸಾಧನವೂ ಬೇಡ. ಅವನ ಸಕಲ ಸಂಶಯಗಳೂ ತೊಲಗುವವು. ಚಿತ್ತವು ಶುದ್ಧಿಯಾಗುವದು, ನಾಮಶಕ್ತಿಯಿಂದಲೇ ಪರಮೇಶ್ವರನ ಸಾಕ್ಷಾತ್ಕಾರವೂ ಆಗುವದು.

3. ಒಂದು ಸಲ ಕಡಲಿನಲ್ಲಿ ಮುಳುಗಿ ನೋಡುವಲ್ಲಿ ಮುತ್ತು ಸಿಕ್ಕದೆ ಇದ್ದರೆ ಸಮುದ್ರದಲ್ಲಿಯೇ ಮುತ್ತುಗಳಿಲ್ಲವೆನ್ನುವದಕ್ಕೆ ಬರುವದಿಲ್ಲ. ಸ್ವಲ್ಪ ಸಾಧನವನ್ನು ಮಾಡಿದ ಮೇಲೂ ಈಶ್ವರನನ್ನು ಕಾಣದೆ ಹೋದಮಾತ್ರದಿಂದ ಸಾಧನದಿಂದ ಸಾಕ್ಷಾತ್ಕಾರವೇ ಆಗಲಾರದೆಂದು ಹೇಳಬಾರದು.

ಸಂ–11, 109

4. ರಾತ್ರೆಯ ವೇಳೆಯಲ್ಲಿ ಆಕಾಶದಲ್ಲಿ ಎಷ್ಟೋ ನಕ್ಷತ್ರಗಳು ಕಾಣಿಸುತ್ತಿರುವವು, ಆದರೆ ಸೂರ್ಯೋದಯವಾದಮೇಲೆ ಕಾಣಿಸುವದಿಲ್ಲ. ಆದ್ದರಿಂದ ಹಗಲು ಹೊತ್ತಿನಲ್ಲಿ ನಕ್ಷತ್ರಗಳು ಆಕಾಶದಲ್ಲಿರುವದಿಲ್ಲವೆನ್ನಬಹುದೇನು? ಅಯ್ಯ ಮಾನವ, ಅಜ್ಞಾನವಿರುವ ಕಾಲದಲ್ಲಿ ಈಶ್ವರನನ್ನು ಕಾಣುವದಾಗದಿದ್ದರೆ, ದೇವರಿಲ್ಲವೆನ್ನಬೇಡ.

5. ಮೊದಲು ಪರಮಾತ್ಮಲಾಭವನ್ನು ಮಾಡಿಕೊಂಡು ಆಮೇಲೆ ಸಿರಿಸಂಪತ್ತನ್ನು ಒದಗಿಸಿಕೊ; ಇದಕ್ಕೆ ವಿಪರೀತವಾಗಿ ಮಾಡುವದಕ್ಕೆ ಹೋಗದಿರು. ಅಧ್ಯಾತ್ಮವನ್ನು ಸಂಪಾದಿಸಿಕೊಂಡ ಬಳಿಕ ಪ್ರಪಂಚದಲ್ಲಿದ್ದರೂ, ಮನಃಶಾಂತಿಯು ಹೋಗುವದಿಲ್ಲ.

6. ಎಲ್ಲರಿಗೂ ಈಶ್ವರನ ಸಾಕ್ಷಾತ್ಕಾರವಾಗುವದೆ? (ಉತ್ತರ :)–ಯಾವನೊಬ್ಬನೂ ದಿವಸವೆಲ್ಲ ಉಪವಾಸವಿರಬೇಕಾಗುವದಿಲ್ಲ. ಕೆಲವರಿಗೆ ಬೆಳಗ್ಗೆ ಒಂಬತ್ತು ಗಂಟೆಗೆ ಊಟ, ಕೆಲವರಿಗೆ ಮಧ್ಯಾಹ್ನಕ್ಕೆ, ಮತ್ತೆ ಕೆಲವರಿಗೆ ಎರಡು ಘಂಟೆಗೆ, ಇನ್ನು ಕೆಲವರಿಗೆ ಸಂಜೆಗೆ, ಅಥವಾ ಸೂರ್ಯಾಸ್ತಕಾಲಕ್ಕೆ. ಹೀಗೆಯೇ ಎಂದಾದರೊಂದು ದಿನ, ಈ ಜನ್ಮದಲ್ಲಿಯೊ, ಅಥವಾ ಇನ್ನೂ ಅನೇಕಜನ್ಮಗಳಾದಮೇಲೆಯೊ ಎಲ್ಲರಿಗೂ ಈಶ್ವರನ ಸಾಕ್ಷಾತ್ಕಾರವಾಗುವದು; ಎಲ್ಲರೂ ಈಶ್ವರನನ್ನೇ ಕಂಡೇ ತೀರಬೇಕು.

7. ಭಗವಂತನೇ ಮಾನವರೂಪದಿಂದ ಲೀಲೆಯನ್ನು ಮಾಡುತ್ತಿರುವನು. ಅವನು ಮಹಾಮಾಯಾವಿ, ಈ ಜೀವಜಗತ್ತುಗಳ ದೃಶ್ಯವೆಲ್ಲವೂ ಆತನ ಮಾಯೆ. ಮಾಯಾವಿಯೊಬ್ಬನೇ ಸತ್ಯ, ಮಾಯೆ ಮಿಥ್ಯೆ.

8. ಮರಣಕಾಲದಲ್ಲಿಯೂ ಬದ್ಧಜೀವರುಗಳು ಪ್ರಪಂಚದ ಮಾತುಗಳನ್ನೇ ಆಡುತ್ತಿರುವರು. ತೀರ್ಥಕ್ಷೇತ್ರಗಳ ದರ್ಶನವಾಗಲಿ, ಗಂಗಾಸ್ನಾನವಾಗಲಿ, ಅಕ್ಷಮಾಲೆಯನ್ನು ತಿರುಗಿಸುತ್ತಿರುವದಾಗಲಿ ಯಾವ ಕೆಲಸಕ್ಕೂ ಬರುವದಿಲ್ಲ. ಹೃದಯದಲ್ಲಿ ವಿಷಯಸಂಗವಿದ್ದರೆ ಸಾಯುವ ಕಾಲದಲ್ಲಿಯೂ ಅವು ಎದ್ದುಕೊಂಡೇ ತೀರುವವು; ಆದ್ದರಿಂದ ಬದ್ಧಜೀವರು ಆ ಕಾಲದಲ್ಲಿಯೂ ಬೀಳುಮಾತುಗಳನ್ನೇ ಆಡುತ್ತಿರುವರು. ಸಾಮಾನ್ಯವಾಗಿ ರಾಧಾಕೃಷ್ಣನ ನಾಮ ಸ್ಮರಣೆಯನ್ನು ಮಾಡುತ್ತಿರುವ ಗಿಳಿಯಮೇಲೆ ಬೆಕ್ಕು ಎರಗಿದರೆ ಅದರ ಪದ್ಧತಿಯಂತೆ 'ಕಾಂವ್', 'ಕಾಂವ್' ಎಂಬ ಕೂಗನ್ನೇ ಎಬ್ಬಿಸುತ್ತದೆ.

9. ಮಾಯೆಗೂ ಬ್ರಹ್ಮಕ್ಕೂ ಇರುವ ಸಂಬಂಧವೇನೆಂದರೆ: ಹರಿದಾಡುತ್ತಿರುವ ಹಾವಿಗೂ ಸುಮ್ಮನೆ ಮಲಗಿರುವ ಹಾವಿಗೂ ಇರುವ ಸಂಬಂಧ. ಹರಿದಾಡುವ ಶಕ್ತಿಯೇ ಮಾಯೆ, ಶಾಂತವಾಗಿರುವ ಶಕ್ತಿಯೇ ಬ್ರಹ್ಮ.

10. ಮಾಯೆಯ ತತ್ತ್ವವನ್ನು ಕಂಡುಹಿಡಿದರೆ, ಅದು ನಿಮ್ಮನ್ನು ಬಿಟ್ಟೋಡುವದು; ಕಳ್ಳನನ್ನು ನೀವು ಕಂಡರೆ ಅವನು ಓಡಿಹೋಗುವದಿಲ್ಲವೆ? ಹಾಗೆ.

11. ಕಾಮಿನೀಕಾಂಚನಗಳ ಸಂಗವನ್ನು ಅಳಿಸಿಹಾಕಿದರೆ ಉಳಿಯುವದೇನು? ಬ್ರಹ್ಮಾನಂದವೇ.

12. ಸೂರ್ಯನು ಲೋಕಕ್ಕೆಲ್ಲ ಶಾಖವನ್ನೂ ಬೆಳಕನ್ನೂ ಕೊಡಬಲ್ಲವನಾಗಿರುತ್ತಾನೆ. ಆದರೆ ಮೋಡಗಳು ಮುಸುಕಿಕೊಂಡರೆ ಅವನಿಗೆ ಆ ಶಕ್ತಿಯಿರುವದಿಲ್ಲ. ಹಾಗೆಯೇ ಅಹಂಕಾರವು ಹೃದಯವನ್ನು ಮುಸುಕಿಕೊಂಡಿರುವಾಗ ಅದರಲ್ಲಿ ಭಗವಂತನ ಬೆಳಕು ಬೀಳಲಾರದು.

13. ಶಂಕರಾಚಾರ್ಯರ ಒಬ್ಬ ಶಿಷ್ಯನು ದೀರ್ಘಕಾಲದಿಂದ ಶುಶ್ರೂಷೆ ಮಾಡಿಕೊಂಡಿದ್ದರೂ ಅವನಿಗೆ ಆಚಾರ್ಯರು ಯಾವ ಉಪದೇಶವನ್ನೂ ಮಾಡಿರಲಿಲ್ಲವಂತೆ. ಒಮ್ಮೆ ಅವರು ಏಕಾಂತದಲ್ಲಿ ಕುಳಿತಿದ್ದಾಗ ಯಾರೋ ಹಿಂದೆ ಬರುತ್ತಿರುವಂತೆ ಹೆಜ್ಜೆಯ ಸದ್ದಾಯಿತು. 'ಯಾರದು?' ಎಂದು ಅವರು ಅಂದಾಗ, ಶಿಷ್ಯನು 'ನಾನು !' ಎಂದನು. ಆಗ ಆಚಾರ್ಯರು "ಈ 'ನಾನು' ನಿನಗೆ ಅಷ್ಟೊಂದು ಪ್ರಿಯವಾಗಿದ್ದರೆ ಅದನ್ನು ಅನಂತವಾಗುವಂತೆ ಹಿಗ್ಗಿಸಿಕೊ, ಇಲ್ಲದಿದ್ದರೆ ಅದನ್ನು ಬಿಟ್ಟುಬಿಡು !" ಎಂದರಂತೆ.

14. ಚಿತ್ತವನ್ನೂ ಹೃದಯವನ್ನೂ ಶುದ್ಧಿಗೊಳಿಸಬಲ್ಲ ಜ್ಞಾನವೇ ಜ್ಞಾನ; ಮಿಕ್ಕದ್ದೆಲ್ಲ ಅಜ್ಞಾನ.

15. ಭಗವಂತನ ಅನುಗ್ರಹವಾದಕೂಡಲೆ ನಮ್ಮ ತಪ್ಪು ನಮಗೆ ಗೊತ್ತಾಗಿಬಿಡುತ್ತದೆ. ಹೀಗಿರುವದರಿಂದ ವಾದಕ್ಕೆ ಇಳಿಯಬೇಡಿರಿ.

16. ಮೊದಲು ಈಶ್ವರನನ್ನು ಹೃದಯಮಂದಿರದಲ್ಲಿ ಪ್ರತಿಷ್ಠೆಮಾಡಿಕೊಳ್ಳಿ; ಮೊದಲು ಅವನನ್ನು ಸಾಕ್ಷಾತ್ಕಾರಮಾಡಿಕೊಳ್ಳಿ. ಭಾಷಣಗಳು, ಉಪದೇಶಗಳು-ಮುಂತಾದವನ್ನು ದೇವರನ್ನು ಕಂಡಬಳಿಕ ಆರಂಭಿಸಬಹುದು, ಮೊದಲು ಅದರ ಗೊಡವೆ ಬೇಡ. 'ಈಶ್ವರ', 'ಬ್ರಹ್ಮ'- ಎಂದು ಮಾತಾಡುತ್ತಿರುವಾಗಲೆ ಜನರು ವಿಷಯಾಸಕ್ತರಾಗಿರುತ್ತಾರೆ. ಇದೆಲ್ಲದರ ಅರ್ಥವೇನು? ದೇವರಿಲ್ಲದ ಗುಡಿಯಲ್ಲಿ ಶಂಖವೂದುವದೇ.

17. ಚಿನ್ನವನ್ನೂ ಹಿತ್ತಾಳೆಯನ್ನೂ ಒರೆಗಲ್ಲಿನಿಂದ ಪರೀಕ್ಷಿಸುವ ಹಾಗೆ ನಿಜವಾದ ಸಾಧುಗಳನ್ನೂ ಕಪಟಸಾಧುಗಳನ್ನೂ ಗೋಳಾಡಿಸುವದರಿಂದಲೂ ನಿಂದಿಸುವದರಿಂದಲೂ ಪರೀಕ್ಷಿಸಬಹುದು.

18. ಅಧ್ಯಾತ್ಮಜ್ಞಾನಿಗಳೆಲ್ಲ ಒಂದೇ ಜಾತಿ; ಅವರಲ್ಲಿ ಕುಲಗೋತ್ರಾದಿ ಭೇದಗಳಿಲ್ಲ.

19. ಕ್ಷಾಂತಿಯೇ ಸಂನ್ಯಾಸಿಗೆ ಸ್ವಭಾವವು.

20. ನರಿಗಳದೆಲ್ಲ ಒಂದೇ ಧ್ವನಿ; ಜ್ಞಾನಿಗಳ ಉಪದೇಶವೆಲ್ಲ ಒಂದೇ ಬಗೆ.

21. ಒಂದು ಕೊಳದಲ್ಲಿ ಹಲವು ಘಟ್ಟಗಳಿರುತ್ತವೆ. ಒಂದರಲ್ಲಿ ಇಳಿದವರು ನೀರನ್ನು ಜಲವೆನ್ನುತ್ತಾರೆ, ಮತ್ತೊಂದರಲ್ಲಿ ಇಳಿದವರು ಅದನ್ನೇ ಪಾನಿಯೆನ್ನುತ್ತಾರೆ, ಇನ್ನೊಂದು ಘಟ್ಟದವರು ಅದನ್ನೇ ವಾಟರ್ ಎಂದು ಕರೆಯುತ್ತಾರೆ. ಆದರೆ ನೀರೆಂಬ ಪದಾರ್ಥವೇನೋ ಒಂದೇ. ಇದರಂತೆ ದೇವರು ಒಬ್ಬನೇ, ಇಬ್ಬರಲ್ಲ. ಆತನನ್ನು ಒಬ್ಬೊಬ್ಬರು ಒಂದೊಂದು ಹೆಸರಿನಿಂದ ಆರಾಧಿಸುತ್ತಾರೆ. ಕೆಲವರು ಆತನನ್ನು ಗಾಡ್ ಎನ್ನುತ್ತಾರೆ, ಮತ್ತೆ ಕೆಲವರು ಅಲ್ಲಾಹನೆನ್ನುತ್ತಾರೆ, ಇನ್ನೂ ಕೆಲವರು ಆತನನ್ನೇ ಕೃಷ್ಣನೆಂದೂ ಬ್ರಹ್ಮನೆಂದೂ ಶಿವನೆಂದೂ ಕರೆಯುತ್ತಾರೆ.

22. ಎಂದೂ ಕಾಣದ ಹೊಸ ಸೀಮೆಗೆ ಹೋದಾಗ, ಸರಿಯಾಗಿ ದಾರಿಯನ್ನು ಬಲ್ಲವನೊಬ್ಬನು ಹೇಳಿದಂತೆ ಕೇಳಬೇಕು; ಕಂಡಕಂಡವರು ಹೇಳುವ ಮಾತನ್ನೆಲ್ಲ ಕೇಳಿದರೆ ದಿಗ್ಭ್ರಮೆಯಾಗುವದು.

ಇದರಂತೆ ದೇವರನ್ನು ಸೇರಬೇಕಾದರೆ ದೇವರ ದಾರಿಯನ್ನು ಬಲ್ಲ ಒಬ್ಬ ಗುರುವನ್ನೇ ನಂಬಿ ನಡೆದುಕೊಳ್ಳಬೇಕು.

23. ಬೆಂಕಿಯೂ ಬಿಸಿಯೂ ಒಂದೇ ಆಗಿರುವವು, ಸುಡುವ ಶಕ್ತಿಯನ್ನು ಬಿಟ್ಟು ಬೆಂಕಿಯೊಂದನ್ನೇ ಬೇರೆಯಾಗಿ ಕಾಣುವದು ಆಗಲಾರದು; ಹಾಲೂ ಅದರ ಬಿಳುಪೂ ಒಂದೇ, ಬಿಳುಪನ್ನು ಬಿಟ್ಟು ಬರಿಯ ಹಾಲನ್ನು ಕಾಣುವದು ಆಗಲಾರದು; ರತ್ನವೂ ಅದರ ಕಾಂತಿಯೂ ಒಂದೇ. ಕಾಂತಿಯನ್ನು ಬಿಟ್ಟು ಬರಿಯ ರತ್ನವನ್ನೇ ಕಾಣುವದು ಆಗಲಾರದು; ನಾಗರಹಾವೂ ಅದರ ವಕ್ರಗತಿಯೂ ಒಂದೇ, ವಕ್ರಗತಿಯನ್ನು ಬಿಟ್ಟು ಬರಿಯ ಹಾವನ್ನೇ ಅರಿಯುವದು ಆಗಲಾರದು. ಇದರಂತೆ ಸಗುಣನಿರ್ಗುಣಗಳೆರಡೂ ಒಂದೇ, ಅವಕ್ಕೆ ಭೇದವಿಲ್ಲ.

24. ಅಪ್ಪ, ಈ ಪ್ರಪಂಚದ ವಿಷಯಗಳ ಥಳುಕಿಗೆ ಮರುಳಾಗಿ ಅವುಗಳಲ್ಲಿಯೇ ಮಗ್ನನಾಗಿ ನಿಮ್ಮ ದೇವಮಾತೆಯನ್ನು ಮರೆತುಬಿಟ್ಟಿದ್ದೀಯೆ. ಈ ಆಟದ ಸಾಮಾನುಗಳನ್ನು ಅತ್ತೊಗೆದು ಆಕೆಯನ್ನೇ ಗಟ್ಟಿಯಾಗಿ ಕೂಗಿ ಕರೆದು ಗೋಳಿಟ್ಟರೆ ಆ ಜಗದಂಬೆಯು ಕೂಡಲೆ ಓಡಿಬಂದು ನಿನ್ನನ್ನು ಎತ್ತಿಕೊಳ್ಳುವಳು.

25. ಶಾಸ್ತ್ರವನ್ನು ಅತಿಯಾಗಿ ಓದುವದರಿಂದ ಕೇಡುಂಟು. ಶಾಸ್ತ್ರದ ತಿರುಳನ್ನು ಮಾತ್ರ ತೆಗೆದುಕೊಳ್ಳಬೇಕು, ಆಮೇಲೆ ಶಾಸ್ತ್ರದ ಗೊಡವೆ ಬೇಕಿರುವದಿಲ್ಲ. 'ಗೀತಾ', 'ಗೀತಾ'- ಎಂದು ಹೇಳುತ್ತಿದ್ದರೆ 'ತ್ಯಾಗಿ', 'ತ್ಯಾಗಿ'-ಎಂದು ಆಗುತ್ತದೆ. ಇದೇ ಗೀತೆಯ ಸಾರವೆಂದು ನಮ್ಮ ಮಾತೆಯು ನನಗೆ ಹೇಳಿಕೊಟ್ಟಿರುತ್ತಾಳೆ.

26. ಪ್ರತಿಮೆಯನ್ನು ಪೂಜಿಸುವದರಲ್ಲಿ ದೋಷವೇನು? ಅಸ್ತಿ, ಭಾತಿ, ಪ್ರಿಯಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲ ಭಗವಂತನ ವಿಭೂತಿಯಿರುವದೆಂದು ವೇದಾಂತದಲ್ಲಿ ಹೇಳಿದೆ. ನಿಜವಾಗಿ ದೇವರಿಲ್ಲದ ವಸ್ತುವಿಲ್ಲವೇ ಇಲ್ಲ.

ಚಿಕ್ಕ ಹುಡುಗಿಯರು ಮದುವೆಯಾಗುವ ತನಕ ಗೊಂಬೆಗಳನ್ನಿಟ್ಟುಕೊಂಡು ಆಡುತ್ತಿರುತ್ತಾರೆ; ಆದರೆ ಮದುವೆಯಾಗಿ ಗಂಡನನ್ನು ಸೇರುತ್ತಲೂ ಅವನ್ನು ಪೆಟ್ಟಿಗೆಯಲ್ಲಿ ಹಾಕಿಬಿಡುತ್ತಾರೆ. ಇದರಂತೆ ಈಶ್ವರನ ಲಾಭವಾದ ಮೇಲೆ ಪ್ರತಿಮೆಯಾದರೂ ಏತಕ್ಕೆ?

27. ಕಾಮಿನೀಕಾಂಚನಗಳೆರಡೂ ಸಾಧಕನಿಗೆ ಅಡ್ಡಿಗಳು. ಸ್ತ್ರೀಸಕ್ತನಾದರೆ ಪುರುಷರು ದೇವರ ಹಾದಿಯನ್ನು ಬಿಟ್ಟುಹೋಗುವರು; ಆಗ ತಾವು ಕೊರಕಲಿಗೆ ಬೀಳುತ್ತಿದ್ದೇವೆಂಬುದು ಅವರಿಗೆ ತಿಳಿಯುವದೇ ಇಲ್ಲ.

ಸಂಸಾರದಲ್ಲಿ ಕಾಮದ ಭೀತಿಯೊಂದೇ ಅಲ್ಲ, ಕ್ರೋಧದ ಭೀತಿಯೂ ಇರುತ್ತದೆ; ಕಾಮಕ್ಕೆ ಅಡ್ಡಲಾಗಿ ಒಂದು ಮುಳ್ಳುಕಡ್ಡಿ ಬಿದ್ದಿದ್ದರೆ ಸಾಕು, ಕ್ರೋಧವುಂಟಾಗಿಬಿಡುತ್ತದೆ.

28. ಮೊದಲು ವಿವೇಕವನ್ನು ಸಂಪಾದಿಸಿಕೊಳ್ಳಬೇಕು. ಆಮೇಲೆ ಸಂಸಾರದ ಭಯವಿರುವದಿಲ್ಲ. ಕೈಗೆ ಎಣ್ಣೆಯನ್ನು ಸವರಿಕೊಂಡು ಹಲಸಿನಹಣ್ಣನ್ನು ಸುಲಿಯುವವರಿಗೆ ಅದರ ಮೇಣವು ಅಂಟಿಕೊಳ್ಳಲಾರದು.

29. ಉತ್ತರಮುಖಿಯು ಯಾವಾಗಲೂ ಉತ್ತರದಿಕ್ಕನ್ನೇ ತೋರಿಸುತ್ತಿರುವದರಿಂದ ನಾವಿಕನ ಹಡಗು ದಾರಿತಪ್ಪುವದಿಲ್ಲ; ಇದರಂತೆ ಮನುಷ್ಯನ ಹೃದಯವು ದೇವರ ಕಡೆಗೇ ತಿರುಗಿರುವವರೆಗೆ ಅವನು ಸಂಸಾರಸಾಗರದಲ್ಲಿ ಹೊಲಬುದಪ್ಪುವ ಸಂಭವವಿರುವದಿಲ್ಲ.

30. ಯಾವನಿಗೆ ಜೀವ, ಜಗತ್ತು, ಚತುರ್ವಿಂಶತಿತತ್ತ್ವಗಳು-ಎಲ್ಲವೂ ಭಗವಂತನೇ ಎಂಬ ಅರಿವು ಉಂಟಾಗಿರುವದೋ ಅವನೇ ಉತ್ತಮಭಕ್ತನು. ಮೊದಲು 'ಇದಲ್ಲ', 'ಇದಲ್ಲ'-ಎಂದು ವಿಚಾರಮಾಡುತ್ತಾ ಮಹಡಿಯನ್ನು ಸೇರಬೇಕಾಗುತ್ತದೆ; ಮಹಡಿಯು ಇಟ್ಟಿಗೆಗಾರೆಗಳಿಂದಾಗಿರುವಂತೆ ಅದರ ಮೆಟ್ಟಿಲುಗಳೂ ಇಟ್ಟಿಗೆಗಾರೆಗಳಿಂದಲೇ ಆಗಿರುವ ವೆಂಬುದು ಆಮೇಲೆ ತಿಳಿಯಬರುವದು.

31. ದೇವರನ್ನು ಕಾಣುವದಕ್ಕೆ ಅನೇಕ ಸಾಧನಗಳಿವೆ. ಆಗಿಂದಾಗ್ಗೆ ಏಕಾಂತವಾಸ ಮಾಡುವದು, ಪರಮೇಶ್ವರನ ನಾಮಕೀರ್ತನೆಮಾಡುವದು, ಗುಣಗಾನವನ್ನು ಮಾಡುವದು; ವಿಚಾರಮಾಡುವದು, ಪರಮೇಶ್ವರನಲ್ಲಿಯೇ ಇರುವ ಅನನ್ಯಭಕ್ತಿಯಿಂದ ಹೃತ್ಪೂರ್ವಕವಾಗಿ ಪ್ರಾರ್ಥನೆಮಾಡುವದು-ಇಂಥ ಸಾಧನಗಳನ್ನು ಅವಲಂಬಿಸಬೇಕು.

32. ಬುದ್ಧಿಶಕ್ತಿಯಿದೆಯೆಂದು ಗರ್ವಿತನಾಗಿರುವಾತನು ಸೃಷ್ಟಿಯು ಏತಕ್ಕೆ ಏತರಿಂದ ಹೇಗೆ ಆಯಿತು? ಎಂಬುದನ್ನು ಕಂಡುಹಿಡಿಯುವದರಲ್ಲಿಯೇ ಮಗ್ನನಾಗಿ ವ್ಯರ್ಥವಾಗಿ ಕಾಲ ಹಾಕುತ್ತಿರುವನು; ನಿರಭಿಮಾನಿಯಾದ ವಿವೇಕಿಯು ಸೃಷ್ಟಿಕರ್ತನ ಪರಿಚಯವನ್ನು ಮಾಡಿಕೊಂಡು ಆತನು ಈ ಲೋಕದಲ್ಲಿ ಅನುಗ್ರಹಿಸಿರುವ ಪರಮಾನಂದವನ್ನು ಅನುಭವಿಸುತ್ತಿರುತ್ತಾನೆ. **ಸಂ-5, 216**

## ವಿವೇಕಾನಂದರ ಕೆಲವು ಸೂಕ್ತಿಗಳು

ವಿವೇಕದ ಆನಂದವು ಬೇಕೆನ್ನುವವರು ಈ ವಾಕ್ಯಗಳನ್ನು ಮನನಮಾಡುವದು ಒಳ್ಳೆಯದು:

1. ನೀವು ಪರಮಾರ್ಥವಾಗಿಯೂ ಶಿವಭಕ್ತರಾಗಿರುವದಾದರೆ ಆ ಶಿವನನ್ನು ನೀವು ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಕಾಣುತ್ತಿರಬೇಕು.

2. ಬರಿಯ ಮಾತೇನೂ ಧರ್ಮವಲ್ಲ. ಗಿಳಿಗಳೂ ಮಾತನಾಡುತ್ತವೆ, ಈಗಿನ ಕಾಲದಲ್ಲಿ ಯಂತ್ರಗಳೂ ಮಾತನಾಡುವವು. ವೈರಾಗ್ಯ, ಅಧ್ಯಾತ್ಮನಿತ್ಯತ್ವ, ತಿತಿಕ್ಷೆ, ಅಪರಿಮಿತಪ್ರೇಮ-ಇವುಗಳಿಂದೊಡಗೂಡಿದ ಜೀವನವು ನಮಗೆ ಬೇಕು. ಈ ಬಗೆಯ ಜೀವನವೇ ಸಾಧಕನ ಜೀವನವು.

3. ತೃಷ್ಣೆಯನ್ನು ಜಯಿಸಿದ ಹೊರತು ಮುಕ್ತಿಯಿಲ್ಲವೆಂಬುದನ್ನು ಎಲ್ಲರೂ ತಿಳಿದುಕೊಳ್ಳತಕ್ಕದ್ದು ಅವಶ್ಯ. ಯಾವನು ವಿಷಯಕ್ಕೆ ಕಟ್ಟುಬಿದ್ದಿರುವನೋ ಅವನು ಎಂದಿಗೂ ಮುಕ್ತನಲ್ಲ. ಈ ಮಹಾತತ್ತ್ವವನ್ನು ಜನಾಂಗಗಳೆಲ್ಲವೂ ಮೆಲ್ಲಮೆಲ್ಲಗೆ ಅರಿತುಕೊಳ್ಳುತ್ತಿವೆ.

4. ಯಾವನೇ ಆಗಲಿ ಸ್ವಾರ್ಥಪರನಾಗಿದ್ದರೆ, ಅವನು ಎಷ್ಟೇ ದೇವಾಲಯಗಳನ್ನು ದರ್ಶನಮಾಡಿರಲಿ, ಎಲ್ಲಾ ಯಾತ್ರಾಸ್ಥಳಗಳನ್ನೂ ಕಂಡುಬಂದಿರಲಿ, ಚಿರತೆಯಂತೆ ಮೈಗೆಲ್ಲ ನಾಮವನ್ನು ಬಳಿದುಕೊಂಡಿರಲಿ, ಅವನು ಇನ್ನೂ ಪರಮೇಶ್ವರನಿಗೆ ಅತಿದೂರವಾಗಿರುತ್ತಾನೆ.

5. ದಾನವೊಂದೇ ಕಲಿಯುಗದಲ್ಲಿ ಮುಖ್ಯಸಾಧನವೆಂದು ವ್ಯಾಸರು ಹೇಳಿರುತ್ತಾರೆ. ದಾನಗಳಲ್ಲೆಲ್ಲ ಬ್ರಹ್ಮಜ್ಞಾನದಾನವು ಅತ್ಯಂತ ಶ್ರೇಷ್ಠವಾದದ್ದು; ಲೌಕಿಕವಿದ್ಯೆಯ ದಾನವು ಅದಕ್ಕೆ ಎರಡನೆಯದು; ಪ್ರಾಣದಾನವು ಮೂರನೆಯದು; ಅನ್ನದಾನವು ನಾಲ್ಕನೆಯದು.

6. ಪ್ರತಿಯೊಬ್ಬ ಸ್ತ್ರೀಯನ್ನೂ ಪ್ರತಿಯೊಬ್ಬ ಪುರುಷನನ್ನೂ ಈಶ್ವರ ಬುದ್ಧಿಯಿಂದ ಕಾಣಿರಿ. ನೀವು ಯಾರೊಬ್ಬರಿಗೂ ಸಹಾಯಮಾಡಲಾರಿರಿ; ಇಷ್ಟವಿದ್ದರೆ ಸೇವೆಮಾಡಬಹುದು, ಅಷ್ಟೆ. ಆ ಭಗವಂತನ ಮಕ್ಕಳನ್ನು ಸೇವಿಸಿರಿ, ಆ ಭಗವಂತನ ಸೇವೆಯನ್ನು ಮಾಡಿರಿ, ಅಂಥ ಅವಕಾಶವು ನಿಮಗೆ ದೊರೆತರೆ ನೀವೇ ಧನ್ಯರು. ಸಂ–20, 112

## ಸಭ್ಯಗೃಹಸ್ಥನ ಲೌಕಿಕ, ಧಾರ್ಮಿಕ ಕರ್ತವ್ಯ ಕರ್ಮಗಳು

1. ಸತ್ಯವಂತನಾಗಿರು

2. ನ್ಯಾಯಶೀಲನಾಗಿರು

3. ವಚನವನ್ನು ಪಾಲಿಸು

5. ಸತ್ಕಾರ್ಯದಲ್ಲಿ ಸಹಾಯಕನಾಗಿರು.

6. ಆಪ್ತರು, ಇಷ್ಟರು, ಮಿತ್ರರು, ನೆರೆಹೊರೆಯವರು, ಸೇವಕರು, ಪ್ರಯಾಣಸ್ಥರು, ಇವರೆಲ್ಲರೊಡನೆ ಪರೋಪಕಾರಬುದ್ಧಿಯಿಂದ ವರ್ತಿಸು.

7. ನಿಮ್ಮ ಪತ್ನಿಯರನ್ನು ಪೀಡಿಸಬೇಡಿರಿ.

8. ಸ್ತ್ರೀಯರೊಡನೆ ಸದಾಚರಣೆಯಿಂದ ವರ್ತಿಸು.

9. ಪತಿಪತ್ನಿಯರೀರ್ವರಲ್ಲಿ ಮನಸ್ತಾಪವುಂಟಾದರೆ ವಿಚಾರಣೆಗಾಗಿ ಪತಿಯ ಕಡೆಯಿಂದ ಒಬ್ಬ ಸಭ್ಯಗೃಹಸ್ಥನನ್ನೂ ಪತ್ನಿಯ ಪಕ್ಷವಾಗಿ ಒಬ್ಬ ಸಂಪನ್ನ ಹೆಣ್ಣು ಮಗಳನ್ನೂ ನೇಮಿಸು.

10. ಅಂತಃಕಲಹಗಳಿಂದ ಶಕ್ತಿಯು ಸಡಿಲಾಗುವದು.

11. ಮಹತ್ತ್ವದ ಕಾರ್ಯಗಳಲ್ಲಿ ಒಬ್ಬರಲ್ಲೊಬ್ಬರು ವಿಚಾರವಿನಿಮಯ ಮಾಡುತ್ತಿರಬೇಕು.

12. ತೂಕ ಅಳತೆಗಳಲ್ಲಿ ತಗಲು ಮಾಡಬೇಡ.

13. ಯಾವನೊಬ್ಬ ವ್ಯಾಪಾರಸ್ಥನಿಗೆ ಹಾನಿಯುಂಟಾದರೆ ಅವನ ಸ್ಥಿತಿಯು ಸುಧಾರಿಸುವವರೆಗೆ ಅವನಿಂದ ಬರತಕ್ಕ ಹಣವನ್ನು ವಸೂಲುಮಾಡಬೇಡಿರಿ. ಇಂಥ ಪ್ರಸಂಗದಲ್ಲಿ ಅವನಿಂದ ಬರತಕ್ಕ ಹಣವನ್ನು ಬಿಟ್ಟುಬಿಡುವದು ಹಿತಕರ.

14. ಎಲೈ ಸದ್ಭಕ್ತರೇ ! ಸಿರಿಸಂಪತ್ತುಗಳು ಪರಮಾತ್ಮನ ನಾಮಸ್ಮರಣೆಯನ್ನು ಮರೆಯಿಸದಂತೆ ಜಾಗರೂಕರಾಗಿರಿ.

15. ಪರರ ದೇವಸ್ಥಾನಗಳನ್ನು ನಾಶಪಡಿಸಬೇಡಿರಿ.

16. ಜನರಿಗೆ ಸಾಮೋಪಾಯದಿಂದ ಧರ್ಮವನ್ನು ಬೋಧಿಸಬೇಕು.

17. ಸತ್ಯವನ್ನು ನುಡಿಯುವಾಗ್ಗೆ ಆಪ್ತ-ಇಷ್ಟರ ಪಕ್ಷಪಾತವನ್ನು ಹಿಡಿಯಬೇಡಿರಿ.

## ಶ್ರೀಮಹಾವೀರಸ್ವಾಮಿಯ ಆದೇಶ

ಪ್ರಪಂಚದಲ್ಲಿ ಪ್ರತ್ಯೇಕ ಪ್ರಾಣಿಯೂ ಸುಖ ಹಾಗೂ ಶಾಂತಿ-ಇವುಗಳನ್ನು ಬಯಸುತ್ತದೆ. ಇವು ತನ್ನ ಆತ್ಮದಲ್ಲಿಯೇ ಇವೆ. ಆತ್ಮದ ಸತ್ಸ್ವರೂಪದಲ್ಲಿ ನಂಬಿಕೆಯನ್ನಿಟ್ಟು ಅದನ್ನು ಧ್ಯಾನಿಸುವದರಿಂದ ಉಕ್ತ ಆ ಸುಖಶಾಂತಿಗಳು ಸ್ವಯಂಪ್ರಾಪ್ತವಾಗುತ್ತವೆ.

ಚೈತನ್ಯವೇ ಆತ್ಮದ ಲಕ್ಷಣ. ಇದು ಜಡಪದಾರ್ಥಗಳಿಂದ ಭಿನ್ನವಾಗಿದೆ. ಯಥಾರ್ಥವಾಗಿ ಆತ್ಮದ ಸತ್ಸ್ವರೂಪವು ಶುದ್ಧವೂ ಆನಂದಮಯವೂ, ನಿತ್ಯವೂ, ಕ್ರೋಧ, ಮಾನ, ಮಾಯೆಯೇ ಮೊದಲಾದ ವಿಕಾರಗಳಿಂದ ರಹಿತವೂ ಆಗಿದೆ. ಆತ್ಮವು ದೇಹಪ್ರಮಾಣವಾಗಿರುವದು. ಪ್ರತ್ಯೇಕ ಆತ್ಮದ ಅಸ್ತಿತ್ವವು ಸದಾ ಭಿನ್ನವಾಗಿದ್ದು ನಿತ್ಯವಾಗಿದೆ. ಆತ್ಮದಲ್ಲಿ ಸದಾ ಹೊಸ ಹೊಸ ಪರಿಣಾಮಗಳು ಹುಟ್ಟುತ್ತಿರುವದರಿಂದ ಅದು ಕಥಂಚಿತ್ ಅನಿತ್ಯವೂ ಆಗಿದೆ.

ಯದ್ಯಪಿ ಸಾಂಸಾರಿಕ ಆತ್ಮಗಳು ಅಶುದ್ಧವಾಗಿವೆ. ಆದರೂ ಆತ್ಮದ ಶುದ್ಧ ಸ್ವರೂಪವನ್ನು ಗೊತ್ತುಮಾಡಿಕೊಂಡು ಏಕಾಂತದಲ್ಲಿ ಮಾತ್ರ ಪ್ರತಿದಿವಸ ಸ್ವಲ್ಪ ಹೊತ್ತು ಅದರ ಸ್ತವನ, ಮನನ, ಪೂಜನ, ಧ್ಯಾನ-ಮುಂತಾದುವುಗಳನ್ನು ಅವಶ್ಯ ಮಾಡಬೇಕು.

ಪ್ರತ್ಯೇಕ ಆತ್ಮಗಳು ತಮಗೆ ಯಾರೂ ಯಾವ ಪ್ರಕಾರವಾದ ದುಃಖವನ್ನೂ ಕೊಡಬಾರದೆಂದು ಬಯಸುವದು ಸರಿಯಷ್ಟೆ. ಆದುದರಿಂದ ಯಾರೂ ಯಾವ ಪ್ರಾಣಿಗಳಿಗೂ ಯಾವ ಪ್ರಕಾರವಾದ ಶಾರೀರಕಮಾನಸಿಕಾದಿ ದುಃಖಗಳನ್ನೂ ಕೊಡಬಾರದು. ಪ್ರಾಣಿಮಾತ್ರದಲ್ಲಿ ಪ್ರೇಮಭಾವವನ್ನಿಟ್ಟು ಯಾವಾಗಲೂ ಪರಹಿತವನ್ನು ಚಿಂತಿಸಬೇಕು.

ಸಮಸ್ತ ಮನುಷ್ಯರೂ ಸುಶಿಕ್ಷಿತರೂ ಸ್ವಾಸ್ಥ್ಯಸಂಪನ್ನರೂ ನ್ಯಾಯಮಾರ್ಗಿಗಳೂ ಆತ್ಮಜ್ಞಾನಿಗಳೂ ಆಗುವಂತೆ ಪ್ರಯತ್ನಿಸಬೇಕು. ಭೋಜನ, ಪಾನ, ಔಷಧಿ, ಪೂಜೆ, ಭಕ್ತಿ, ಕ್ರೀಡೆಯೇ ಮೊದಲಾದವುಗಳಿಗೋಸ್ಕರ ಪಶುಹತ್ಯವನ್ನು ಮಾಡಬಾರದು. ಎತ್ತು, ಕೋಣ, ಕುದುರೆ ಮೊದಲಾದ ಪಶುಗಳಿಂದ ತಮ್ಮ ಕಾರ್ಯವನ್ನು ಮಾಡಿಸುತ್ತಿದ್ದೂ ಅವುಗಳಿಗೆ ಕಷ್ಟವನ್ನು ಕೊಡಬಾರದು. ವೃಕ್ಷಗಳ ಸಂಬಂಧದಲ್ಲಿಯೂ ದಯೆಯನ್ನು ತೋರಿಸಬೇಕು. ಅವುಗಳನ್ನು ವ್ಯರ್ಥವಾಗಿ ಪೀಡಿಸಬಾರದು.

ಶುದ್ಧ ಅನ್ನ, ಶಾಕ, ಫಲ, ಹಾಲು, ತುಪ್ಪ–ಮುಂತಾದುವುಗಳನ್ನು ಸೇವಿಸಬೇಕು. ಯಾವಾಗಲೂ ನೀರನ್ನು ಶೋಧಿಸಿ ಕುಡಿಯಬೇಕು. ಕೊಲೆ, ಹುಸಿ, ಕಳವು–ಮೊದಲಾದ ಪಂಚಮಹಾಪಾಪಗಳನ್ನು ತ್ಯಾಗಮಾಡಿ ಮದ್ಯಪಾನ, ದ್ಯೂತ, ಬೇಟೆಯೇ ಮೊದಲಾದ ಸಪ್ತಮಹಾವ್ಯಸನಗಳನ್ನು ತೊರೆದುಬಿಡಬೇಕು.

ನಿಜವಾದ ವೈರಾಗ್ಯವು ಹುಟ್ಟಿದರೆ ಗೃಹತ್ಯಾಗವನ್ನು ಮಾಡಿ ಆತ್ಮಕಲ್ಯಾಣವನ್ನು ಮಾಡುತ್ತಾ ಪರೋಪಕಾರದಲ್ಲಿ ಜೀವನವನ್ನು ಕಳೆಯಬೇಕು. ಶತ್ರುವಿನಲ್ಲಿಯೂ ಕೆಟ್ಟ ಭಾವನೆಗೆ ಎಡೆಗೊಡದೆ ಪ್ರಾಣಿಮಾತ್ರದ ದುಃಖಕ್ಲೇಶವನ್ನು ದೂರಮಾಡುವದಕ್ಕೋಸ್ಕರ ಯತ್ನಿಸಬೇಕು.

ಪಾಪದಲ್ಲಿ ಘೃಣೆಯನ್ನು ಮಾಡಬೇಕೇ ಹೊರತು ಪಾಪಿಯಲ್ಲಿ ಮಾಡಬಾರದು. ಏಕಾಂತ, ಕದಾಗ್ರಹ, ದುರ್ಗುಣ–ಇವುಗಳನ್ನು ತ್ಯಾಗಮಾಡಿ ಉದಾರಿ, ನಿರಾಗ್ರಹಿ ಹಾಗೂ ಗುಣಿಯಾಗಿ ಪ್ರಸನ್ನಚಿತ್ತದಿಂದ ತತ್ತ್ವವನ್ನು ಮನನಮಾಡಬೇಕು.

ರಾಗ, ದ್ವೇಷ, ಮೋಹ, ಮದ, ಮಾತ್ಸರ್ಯ, ಲೋಭ–ಮುಂತಾದುವುಗಳನ್ನು ಜಯಿಸಿ ಸುಖದುಃಖಗಳಲ್ಲಿ ಸಮಭಾವವನ್ನಿಡಬೇಕು. ಆತ್ಮಾವನಿಗೆ ಹೇತುವಾದ ಅಹಂಕಾರ ಮಮಕಾರಾದಿಗಳಿಗೆ ಹೃದಯದಲ್ಲಿ ಸ್ಥಾನವನ್ನು ಕೊಡದೆ ಸದಾ ತಪ, ಸಂಯಮ, ತ್ಯಾಗ, ಮಾರ್ದವ, ಆರ್ಜವ–ಮುಂತಾದುವುಗಳಿಗೆ ಹೃದಯದಲ್ಲಿ ಸ್ಥಾನವನ್ನು ಕೊಡಬೇಕು.

ಮಿಥ್ಯಾಭಿನಿವೇಶವನ್ನು ತ್ಯಾಗಮಾಡಿ ಸರ್ವದಾ ಸತ್ಯಮಾರ್ಗವನ್ನು ಅವಲಂಬಿಸಬೇಕು. ವಿಪತ್ತುಗಳಿಂದ ಧೈರ್ಯಗೆಟ್ಟು ಸಂಕ್ಲೇಶಭಾವಗಳಿಗೆ ಅವಕಾಶವನ್ನು ಕೊಡಬಾರದು.

ಪ್ರಮಾದಕ್ಕೆ ಎಡೆಕೊಡದೆ ಲೋಕಹಿತವನ್ನು ಚಿಂತಿಸುತ್ತಾ ಯಾವಾಗಲೂ ಲೋಕ ಹಿತದಲ್ಲಿ ದತ್ತಚಿತ್ತರಾಗಬೇಕು. ಇವುಗಳಿಂದಲೇ ಪೂರ್ವೋಕ್ತ ಆ ನಿತ್ಯವೂ ಆತ್ಮವಿಕಾಸ ರೂಪವೂ ಸರ್ವಜನಲಭ್ಯವೂ ಆದ ನೈಜಸುಖವು ಪ್ರಾಪ್ತವಾಗುವುದು. ಸಂ–5, 14

# ಬೋಧಾಮೃತ

*(ಮೂಲ : ಶ್ರೀ ಸ್ವಾಮಿ ಶಿವಾನಂದ ಸರಸ್ವತಿಗಳು)* : 1. ಪರಮೇಶ್ವರನು ನಿಮ್ಮಲ್ಲಿರುತ್ತಾನೆ, ನೀವೂ ಪರಮೇಶ್ವರನಲ್ಲಿರುತ್ತೀರಿ. ಆತನ ಸನ್ನಿಧಿಯನ್ನು ಅನುಸಂಧಾನ ಮಾಡಿಕೊಳ್ಳಿರಿ.

2. ಮನಸ್ಸಿನಿಂದಾಗಿರುವ ಭ್ರಾಂತಿಯಿಂದ ದುಃಖವನ್ನೇ ಸುಖವೆಂದು ಬಗೆಯುತ್ತಿರುವಿರಿ.

3. ವಿಷಯಸುಖಗಳಿರುವೆಡೆಯಲ್ಲಿ ಆತ್ಮಾನಂದವು ಇರಲಾರದು.

4. ಮನಸ್ಸಿಗೆ ಯಾವಾಗಲೂ ಕೆಲಸವನ್ನು ಹಚ್ಚಿರುವದೇ ಬ್ರಹ್ಮಚರ್ಯಕ್ಕೆ ಉತ್ತಮವಾದ ಉಪಾಯವು.

5. ಆಹಾರಶುದ್ಧಿಯಿಂದ ಚಿತ್ತಶುದ್ಧಿಯಾಗುತ್ತದೆ.

6. ನಿಮ್ಮಲ್ಲಿ ಸಂಪೂರ್ಣವಾದ ಅಮಾನಿತ್ವವು ತೋರಿಕೊಂಡರೆ ಮಾತ್ರ ಈಶ್ವರನು ನಿಮಗೆ ಸಹಾಯಮಾಡುತ್ತಾನೆ.

7. ಪ್ರೇಮ, ಅಮಾನಿತ್ವ, ಪರೋಪಕಾರ- ಇವುಗಳಿಂದ ಪ್ರಪಂಚವನ್ನೇ ಗೆಲ್ಲಬಹುದು.

8. ಯೋಗಕ್ಕೆ ಅಡ್ಡಿಗಳು ಹೊರಗಿನಿಂದ ಬರುವದಿಲ್ಲ. ಒಳಗಿನಿಂದಲೇ ಬರುತ್ತವೆ.

9. ಮನಸ್ಸು ಅರಿತೋ ಅರಿಯದೆಯೋ ಯಾವಾಗಲೂ ಮಾರ್ಪಡುತ್ತಲೇ ಇರುತ್ತದೆ.

10. ಸುಖದುಃಖಗಳು ವಿಷಯದಲ್ಲಿರುವದಿಲ್ಲ, ಮನಸ್ಸಿನಲ್ಲಿರುತ್ತವೆ.

11. ಸ್ನೇಹಿತರು ವ್ಯರ್ಥವಾದ ಹರಟೆಗಳಿಂದ ನಿಮ್ಮ ಕಾಲವನ್ನು ವೆಚ್ಚಮಾಡಿಸುತ್ತಾರೆ; ಆದ್ದರಿಂದ ಅವರು ನಿಮ್ಮ ಶತ್ರುಗಳು.

12. ಅಂತಃಕರಣವು ಅಣುಪರಿಮಾಣವಾಗಿಯೂ ಇದೆ, ಸರ್ವವ್ಯಾಪಕವಾಗಿಯೂ ಇದೆ.

13. ಪಂಚಜ್ಞಾನೇಂದ್ರಿಯಗಳೂ ಪಂಚಬುದ್ಧೀಂದ್ರಿಯಗಳೂ ಸಂಕಲ್ಪದ ಅಪ್ಪಣೆಯಂತೆ ನಡೆಯುತ್ತಾ ಅದರ ಅಡಿಯಾಳುಗಳಾಗಿರುತ್ತವೆ.

14. ಮುಕ್ತಿಗೆ ಪ್ರಯತ್ನವನ್ನು ಮಾಡುವದಾದರೆ ಇಡಿಯ ಅಧ್ಯಾತ್ಮಪ್ರಪಂಚವೇ ನಿಮಗೆ ಒತ್ತಾಸೆಯನ್ನು ಕೊಡುತ್ತದೆ.

15. ಸಂಕಲ್ಪಶಕ್ತಿಯನ್ನು ಬೆಳೆಯಿಸಿಕೊಳ್ಳುವದಕ್ಕೆ ನಿಮಗೆನೀವೇ ಉತ್ತಮ ಸೂಚನೆಗಳನ್ನು ಮತ್ತೆಮತ್ತೆ ಕೊಟ್ಟುಕೊಳ್ಳುತ್ತಿರುವದೊಂದು ಉತ್ತಮಮಾರ್ಗವು.

16. ಪ್ರಾಪಂಚಿಕನ ದಾರಿಯೇ ಬೇರೆ, ಸಾಧಕನ ದಾರಿಯೇ ಬೇರೆ; ಅವರಿಬ್ಬರ ಮಾರ್ಗವು ಉತ್ತರಧ್ರುವದಕ್ಷಿಣಧ್ರುವಗಳಂತೆ ದೂರವಾಗಿರುತ್ತವೆ. **ಸಂ-13, 146**

# ಶಿವರಾತ್ರೆ

ರಾತ್ರೆಯು ನಿದ್ರೆಯ ಕಾಲ. ರಾತ್ರೆಯಲ್ಲಿ ನಿದ್ರೆಯೂ ಹಗಲಲ್ಲಿ ಎಚ್ಚರವೂ ಪ್ರಾಣಿಗಳಿಗೆ ಸ್ವಾಭಾವಿಕವು. ಆದ್ದರಿಂದ ರಾತ್ರೆಯು ಪರಮಾರ್ಥವನ್ನು ಅರಿಯದೆ ಇರುವದೆಂಬ, ಪರಮಾರ್ಥವನ್ನು ತಪ್ಪಾಗಿ ತಿಳಿದುಕೊಳ್ಳುವದೆಂಬ, ಅವಿದ್ಯೆಯು, ಕಗ್ಗತ್ತಲೆಯ ಚಿಹ್ನೆಯು.

ಆದರೆ ಶಿವರಾತ್ರೆಯು ಪ್ರಾಪ್ತವಾದಾಗ ಪರಮೇಶ್ವರನ ಭಕ್ತರು ಜಾಗರಣೆಮಾಡುತ್ತಾರೆ. ಮಿಕ್ಕವರೆಲ್ಲರೂ ನಿದ್ರೆಮಾಡುತ್ತಿರುವಲ್ಲಿ ಸಂಯಮಿಗಳಾದವರು ಎಚ್ಚರದಿಂದಿರುತ್ತಾರೆ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಪರಮಾರ್ಥವನ್ನು ತಿಳಿಯದೆ ಇರುವ ಜೀವರೇ, ಅದನ್ನು ತಪ್ಪಾಗಿ ತಿಳಿದುಕೊಂಡು ಅವಿದ್ಯಾನಿದ್ರೆಯಲ್ಲಿ ಗೊರಕೆಯಿಡುತ್ತಿರುವವರೇ, ಬಹಳ ಮಂದಿ. ಈ ಸಂಸಾರವೆಂಬುದು ಒಂದು ಅನಾದಿನಿದ್ರೆಯ ರಾತ್ರೆ. ಈ ನಿದ್ರೆಯಲ್ಲಿ ಜೀವರು ಬಗೆಬಗೆಯ ಸ್ವಪ್ನಗಳನ್ನು ಕಾಣುತ್ತಿರುವರು. ಹುಟ್ಟಿದೆ, ಬೆಳೆದೆನು; ಇವನು ನನ್ನ ತಂದೆ, ಇವನು ನನ್ನ ಮಗನು; ಇವನು ಶತ್ರು, ಇವನು ಮಿತ್ರನು; ಇವು ನನ್ನ ಮನೆ, ಹೊಲ, ಹಣ ಮುಂತಾದವು; ಬದುಕಿದೆನು, ಕೆಟ್ಟೆನು–ಎಂದು ಸುಖದುಃಖಪ್ರದ ಗಳಾದ ಸ್ವಪ್ನಗಳನ್ನು ಕಾಣುತ್ತಾ ನಿದ್ರಿಸುತ್ತಿರುವದೇ ಸಂಸಾರರೂಪವಾದ ರಾತ್ರೆಯು.

ಆದರೆ ಯಾವಾಗ ಪರಮಕಾರುಣಿಕರಾದ ಆಚಾರ್ಯರಿಂದ ಉಪದಿಷ್ಟನಾಗಿ ಜೀವನು ಎಚ್ಚರುವನೋ ಅವನಿಗೆ ಹುಟ್ಟುಸಾವುಗಳಿಲ್ಲದ, ನಿದ್ರಾಸ್ವಪ್ನಗಳಿಲ್ಲದ, ಪ್ರಪಂಚೋಪಶಮನಾದ ಅದ್ವಿತೀಯನಾದ ಶಿವನೇ ನಾನು–ಎಂಬ ಜ್ಞಾನವು ಉಂಟಾಗುವದು. ಶಿವಸ್ವರೂಪದ ಅನುಸಂಧಾನದಿಂದ ಎಚ್ಚತ್ತಿರುವ ರಾತ್ರೆಯೇ ಶಿವರಾತ್ರೆಯು.

ಶಿವರಾತ್ರೆಯು ಈ ಜಾಗರಣದ ಸಂಕೇತವು ಎಂದು ಪುರಾಣಗಳಲ್ಲಿ ಉಪದೇಶಿಸಿದೆ. ಅದು ವರ್ಷಕ್ಕೊಂದು ಸಲ ಬರುವ ದಿನವಲ್ಲ. ಎಷ್ಟೋ ಜನ್ಮಗಳು ಕಳೆದಮೇಲೆ ಪಾಪಗಳು ಸವೆದು ಪುಣ್ಯದ ಫಲವು ಕೂಡಿಬರುವದರಿಂದ ಅದ್ವಿತೀಯನಾದ ಶಿವನೇ ಪರಮಾರ್ಥವು ಎಂಬ ಜಾಗರಣವು ಲಭಿಸುವದು. ಶಿವರಾತ್ರೆಯ ದಿನ ನಾಲ್ಕು ಯಾಮ ಶಿವನ ಪೂಜೆ, ಶಿವಕಥಾಸ್ಮರಣ, ಶಿವಭಜನೆ–ಇವುಗಳಿಂದ ಈ ಜಾಗರಣವನ್ನು ಸಂಪಾದಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. **ಸಂ–20, 166**

# ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು?

***(ಆಧಾರ : ತಿರುಮಲ ತಿರುಪತಿ ದೇವಸ್ಥಾನ ಮಾಸಪತ್ರಿಕೆ)*** : 1. ದೇವಸ್ಥಾನವು ಪವಿತ್ರಸ್ಥಾನವೆಂಬುದನ್ನು ಮನಸ್ಸಿನಲ್ಲಿಟ್ಟಿರಬೇಕು. ಸ್ಥಲಮಾಹಾತ್ಮ್ಯ, ಕ್ಷೇತ್ರದ ಜಾಗರೂಕತೆ, ಇವುಗಳೇ ಅಲ್ಲದೆ ಅರ್ಚಕರುಗಳ ತಪೋಬಲವೂ ಅದರ ಪಾವಿತ್ರ್ಯಕ್ಕೆ ಕಾರಣ ವಾಗಿರುತ್ತದೆ.

2. ದೇವಸ್ಥಾನಗಳಲ್ಲಿರುವಾಗ ಪೂರ್ವಾಚಾರಗಳನ್ನೂ ಸ್ಥಲಸಂಪ್ರದಾಯಗಳನ್ನೂ ಗೌರವಿಸಬೇಕು. ಅಲ್ಲಿಗೆ ಹೋಗುವ ಮುಂಚೆ ಮಿಂದು ಮಡಿಯುಟ್ಟುಕೊಂಡು ಹೋಗಬೇಕು. ಊಟಮಾಡಿಕೊಂಡು, ಮೈಲಿಗೆಯ ಬಟ್ಟೆಗಳನ್ನುಟ್ಟುಕೊಂಡು, ಅಥವಾ ಪಾದರಕ್ಷೆಗಳನ್ನು ಮೆಟ್ಟಿಕೊಂಡು ಹೋಗಬಾರದು. ಮಾಂಸಮದ್ಯಾದಿಗಳನ್ನು ಉಪಯೋಗಿಸಿರುವಾಗ ದೇವಸ್ಥಾನಪ್ರವೇಶವನ್ನು ಮಾಡಬಾರದು. ದೇವಸ್ಥಾನದ ಬಳಿಯಲ್ಲಿ ಉಗುಳಬಾರದು, ಹೊಗೆಬತ್ತಿಯನ್ನು ಸೇದಬಾರದು.

3. ಮನೋವಾಕ್ಕಾಯಗಳನ್ನು ಬಿಗಿಯಲ್ಲಿಟ್ಟುಕೊಂಡಿರಬೇಕು. ಮನಸ್ಸಿನಲ್ಲಿ ಭಗವಂತನ ಸ್ಮರಣೆಯಿರಬೇಕು, ನಾಲಗೆಯಲ್ಲಿ ಭಗವಂತನ ನಾಮಜಪವಿರಬೇಕು. ಶರೀರದಲ್ಲಿ ವೃಥಾಚಾಪಲ್ಯವಿಲ್ಲದಿರಬೇಕು. ಕೆಟ್ಟವಿಚಾರಗಳಿಂದ ತುಂಬಿರುವ ಮನಸ್ಸು, ಗದ್ದಲವಾಗಿ ಬಿಡಿನುಡಿಗಳನ್ನು ಅಥವಾ ಬಿರುನುಡಿಗಳನ್ನು ಆಡುವ ವಾಕ್ಕು, ಜನರನ್ನು ಲಕ್ಷ್ಯಮಾಡದೆ ಎಲ್ಲೆಂದರೆ ಅಲ್ಲಿ ನುಗ್ಗುವ ಕಾಯ–ಈ ತ್ರಿಕರಣಗಳ ದೋಷಗಳು ದೇವಸ್ಥಾನದ ಸತ್ಫಲವನ್ನು ದೂರವಾಗಿ ತೊಲಗಿಸುವವು.

4. ಈಶ್ವರನಿಗೆ ಹಣ್ಣು, ಹೂ, ಕಾಯಿ, ಧೂಪ, ದೀಪ, ನೈವೇದ್ಯಾದಿಗಳನ್ನು ಸಮರ್ಪಿಸುವಾಗ ಸ್ಥಳದ ಪದ್ಧತಿಯನ್ನು ತಿಳಿದುಕೊಂಡು ಅಲ್ಲಿರುವ ವ್ಯವಸ್ಥಾಪಕರ ಅಥವಾ ಅರ್ಚಕರ ಮೂಲಕವೇ ಅರ್ಪಣೆಮಾಡಬೇಕು. ಕೊಡುವ ಕಾಣಿಕೆಯ ಲೆಕ್ಕಾಚಾರ ವಿರುವ ಸ್ಥಲಗಳಲ್ಲಿ ತಕ್ಕ ರಸೀದಿಯನ್ನು ಪಡೆಯುವದರಿಂದ ಅದು ಸದ್ವಿನಿಯೋಗವಾಗು ವದೆಂಬ ಭರವಸೆಯುಂಟಾಗುವದು.

5. ದೇವಸ್ಥಾನವು ನಿಜವಾಗಿ ದೇವಸ್ಥಾನವೇ ಆಗಬೇಕಾದರೆ ಅಲ್ಲಿ ಲೌಕಿಕವ್ಯವಹಾರಗಳ ಕಲಂಕವು ತಟ್ಟದಂತೆಯೂ ಭಗವದ್ಭಾವನೆಯು ಬೆಳೆಯುವಂತೆಯೂ ನೋಡಿಕೊಳ್ಳುವದು ಅತ್ಯವಶ್ಯ.

## ಬೆಳಗಿನ ಮುಂಜಾವದಲ್ಲಿ ಎಚ್ಚರುವದು

"ಸಕಲಪ್ರಾಣಿಗಳೂ ನಿದ್ರಿಸುತ್ತಿರುವಾಗ ಪರಮಾರ್ಥವನ್ನರಿತವನು ಎಚ್ಚರವಾಗಿರುವನು" ಎಂದು ಭಗವಂತನು ನುಡಿದಿರುವನು. ಪರಮಾರ್ಥವನ್ನು ಸಾಧನೆಮಾಡಬೇಕೆನ್ನುವವರು ಇದನ್ನು ನೆನಪಿನಲ್ಲಿಡಬೇಕು.

ಪರಮಾರ್ಥವಿಚಾರವೆಂದರೆ ಲೋಕದ ಬಹುಮಂದಿಗೆ ಆಕಳಿಕೆಬರುವದು ತೂಕಡಿಕೆ ಬರುವದು, ನಿದ್ರೆಹತ್ತುವದು. ಪರಮಾರ್ಥದ ವಿಷಯದಲ್ಲಿ ಅವರು ಯಾವಾಗಲೂ ಗೊರಕೆಯಿಡುತ್ತಲೇ ನಿದ್ರಿಸುತ್ತಿರುವರು. ಅವರಿಗೆ ಎಚ್ಚರಿಕೆಯಾಗುವದು ಅಪೂರ್ವ.

ಆದರೆ ತತ್ತ್ವವನ್ನು ತಿಳಿದುಕೊಳ್ಳಬೇಕೆಂದು ತವಕಿಸುವವರು ಹೇಗಾದರೂ ಮಾಡಿ ಈ ನಿದ್ರೆಯಿಂದ ತಪ್ಪಿಸಿಕೊಂಡು ಏಳಬೇಕೆಂದು ಯತ್ನಿಸಬೇಕು.

ಸಾಧಕನು ಎಲ್ಲಕ್ಕೂ ಮೊದಲು ವ್ಯವಹಾರದ ನಿದ್ರೆಯಿಂದ ಪಾರಾಗಬೇಕು. ಬೆಳಕು ಹರಿದಮೇಲೂ ಹಾಸಿಗೆಯಲ್ಲಿ ಹೊರಳಾಡುತ್ತಾ ನಿದ್ರಿಸುವ ಕೆಟ್ಟ ಚಟವನ್ನು ತಪ್ಪಿಸಿಕೊಳ್ಳಬೇಕು. ಬೆಳಗಿನ ಜಾವದಲ್ಲಿ ಸರಿಯಾದ ನಿದ್ರೆಬರುವದಿಲ್ಲ; ಆಗ ಕನಸಾಗುವದೇ ಬಹಳ. ಆ ನಿದ್ರೆಯಿಂದ ದೇಹಕ್ಕೆ ಆರೋಗ್ಯವಿಲ್ಲ, ಮನಸ್ಸಿಗೆ ಲವಲವಿಕೆಯೂ ಇಲ್ಲವಾಗುವದು.

ಬೆಳಗಿನ ಮುಂಜಾವದಲ್ಲಿ, ಎಂದರೆ ರಾತ್ರಿಯ ಕೊನೆಯ ಜಾವದಲ್ಲಿ, ತಂಗಾಳಿ ಬೀಸುತ್ತದೆ, ದಿಕ್ಕುಗಳು ಪ್ರಶಾಂತವಾಗಿರುತ್ತವೆ. ಆಗ ಎಚ್ಚತ್ತವನಿಗೆ ಶಾಂತಿಯೆಂದರೇನೆಂಬುದರ ನಿಜವಾದ ಕಲ್ಪನೆಯು ಉಂಟಾಗುತ್ತದೆ. ಆಗ ತನ್ನೊಳಗೆ ತಾನು ಪ್ರವೇಶಿಸಬಹುದು, ತನ್ನಲ್ಲಿರುವ ಆನಂದಾಮೃತದ ಬುಗ್ಗೆಯನ್ನು ಕಂಡುಕೊಳ್ಳಲೂಬಹುದು.

ಬೆಳಗಿನ ಜಾವದಲ್ಲಿ ಯಾರು ಎದ್ದಿರುವರೋ, ಯಾರು ಆ ಕಾಲದಲ್ಲಿ ಪರಮಾತ್ಮನ ಧ್ಯಾನವನ್ನು ಮಾಡಿ ಆನಂದಿಸುವರೋ, ಅವರ ಮನಸ್ಸು ಅತ್ಯಂತ ನಿರ್ಮಲವಾಗಿರುವದು; ಅವರ ಮುಖದ ಮೇಲೆ ಆನಂದದ ಕಳೆಯು ಉಕ್ಕುತ್ತಿರುವದು. ಅವರ ಆನಂದದ ಕಿರಣಗಳು ಅವರ ನಗೆಮುಖದಿಂದ ಸುತ್ತಲೂ ಚಿಮುಕುತ್ತಿರುವವು. ಬೆಳಗಿನ ಹೊತ್ತು ಒಬ್ಬರನ್ನೊಬ್ಬರು ಕಂಡರೆ 'ಎದ್ದಿರಾ?' ಎಂದು ಕೇಳುವದುಂಟಷ್ಟೆ; 'ಮುಂಜಾವದ ಶುಭಮುಹೂರ್ತದಲ್ಲಿ ಎದ್ದಿರಾ?'–ಎಂದು ಇದಕ್ಕೆ ಅರ್ಥ.

ರಾತ್ರೆ ಒಂಬತ್ತು ಅಥವಾ ಒಂಬತ್ತೂವರೆಯ ಹೊತ್ತಿಗೇ ಮಲಗಿ ನಿದ್ರೆಹೋಗಿರಿ. ಮಲಗುವಾಗಲೇ 'ನಾಳೆ ಮುಂಜಾವದಲ್ಲಿಯೇ ಏಳುವೆನು' ಎಂದು ಸಂಕಲ್ಪವನ್ನು ಮಾಡಿಕೊಳ್ಳಿರಿ. ಈ ಸಂಕಲ್ಪವು ನಿಮ್ಮ ಮನಸ್ಸಿನ ಅವ್ಯಕ್ತಭಾಗದಲ್ಲಿ ಇಳಿದುಕೊಳ್ಳುವದು; ಆಗ ಬೆಳಗ್ಗೆ ನಿಮಗೆ ಬೇಕಾದಷ್ಟು ಮುಂಚಿತವಾಗಿಯೇ ಏಳಬಹುದು. ಮುಂಚಿತವಾಗಿ ಮಲಗಿ ಮುಂಚಿತವಾಗಿ ಏಳುವದು ಆರೋಗ್ಯಕರ, ಸಂಪತ್ಕರ, ಶ್ರೇಯಸ್ಕರ.

ರಾತ್ರೆ ಮಲಗುವಾಗಲೊಮ್ಮೆ, ಬೆಳಗ್ಗೆ ಎದ್ದಕೂಡಲೆ ಒಮ್ಮೆ–ಹೀಗೆ ಸರ್ವೇಶ್ವರನೂ ಸರ್ವಾತ್ಮನೂ ಆದ ಭಗವಂತನ ಸ್ಮರಣೆಯು ಯಾರಿಗೆ ಬರುವದೋ ಅವರು ಧನ್ಯರು. ಬೆಳಗಿನ ಜಾವವನ್ನು ಭಗವಂತನ ಧ್ಯಾನಕ್ಕೇ ಯಾರು ಉಪಯೋಗಿಸುವರೋ ಅವರು ಧನ್ಯರು. ಅಂಥವರ ವ್ಯವಹಾರವು ಸಲೀಸಾಗಿ ಸಾಗುವದು, ಅವರಿಗೆ ಹತ್ತು ದಿಕ್ಕುಗಳೂ ಸುಖಮಯವಾಗಿ ಕಾಣುತ್ತಿರುವವು. **ಸಂ–8, 104**

# ಪ್ರಜ್ಞಾಲೋಕ

ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಧ್ಯಾನಮಾಡುವದು ಸಾಧಕನಿಗೆ ಶ್ರೇಯಸ್ಕರವಾದದ್ದು. ಅದರಲ್ಲಿಯೂ ಬ್ರಹ್ಮಚಾರಿಗಳಿಗೂ ಸಂನ್ಯಾಸಿಗಳಿಗೂ ಅದೊಂದು ಉತ್ತಮಸಾಧನವೆಂದು ಬಲ್ಲವರು ಹೇಳುತ್ತಾರೆ.

ಒಂದು ದಿನ ಬೆಳಗಿನ ಜಾವದಲ್ಲಿ ದೇಹಾಲಸ್ಯದಿಂದ ಸ್ವಲ್ಪ ತಡವಾಗಿ ಏಳಬೇಕಾಗಿ ಬಂದಿತು. ಅದರ ಫಲವಾಗಿ ಒಂದು ಕನಸನ್ನು ಕಂಡೆನು. ಈಶ್ವರಾನುಗ್ರಹದಿಂದ ಅದೊಂದು ಸಾತ್ತ್ವಿಕವಿಚಾರದ ಕನಸಾಗಿತ್ತು. ನಾನೊಬ್ಬನೇ ಒಂದು ಬೆಟ್ಟದ ತಪ್ಪಲಲ್ಲಿದ್ದೆನು. ಮೇಲೆ ಯಾರೋ ಇಬ್ಬರು ಮಾತಾಡುತ್ತಿರುವ ಧ್ವನಿ ಕೇಳಿದ್ದರಿಂದ ಕುತೂಹಲದಿಂದ ಬೆಟ್ಟವನ್ನೇರಿದೆನು. ಅಷ್ಟುಹೊತ್ತಿಗೆ ಮಧ್ಯಾಹ್ನ ಹನ್ನೆರಡು ಘಂಟೆಯಾಗಿತ್ತು. ಎಲ್ಲೆಲ್ಲಿಯೂ ಪ್ರಚಂಡಸೂರ್ಯನ ಬಿಸಿಲೂ ಪ್ರಕಾಶವೂ ಹಬ್ಬಿತ್ತು. ಗುರುಶಿಷ್ಯರಂತೆ ಕಾಣುತ್ತಿದ್ದ ಇಬ್ಬರು ಮಾತನಾಡುತ್ತಿದ್ದರು. ಗುರುವು ಶಿಷ್ಯನೊಡನೆ ಮಾತನಾಡುವದಕ್ಕೆ ಪ್ರಾರಂಭಿಸಿದ್ದನು.

**ಗುರು :** "ಏನಯ್ಯ, ನೀನು ಹೇಳಿದ ಚಂದ್ರಸೂರ್ಯರ ಬೆಳಕು ಹೀಗೆ ಇದ್ದಿತೆ?"

**ಶಿಷ್ಯ :** "ಗುರುವರ್ಯ, ಇದು ಎಲ್ಲರೂ ಕಂಡಿರುವ ಸೂರ್ಯನ ಬೆಳಕು. ನಾನು ಕಂಡ ಸೂರ್ಯನು ಯೋಗಾಭ್ಯಾಸದಿಂದ ಒಳಗೆ ಕಾಣಿಸಿಕೊಂಡಿದ್ದನು. ಸಮಾಧಿಯ ಪ್ರಜ್ಞಾಲೋಕವು ಬೀಳುವದಕ್ಕೆ ಮುಂಗುರುಹಾಗಿರುವ ಆ ಸೂರ್ಯನೆಲ್ಲಿ, ಎಲ್ಲರೂ ಕಂಡಿರುವ ಈ ಬಾಹ್ಯಸೂರ್ಯನೆಲ್ಲಿ !"

**ಗುರು :** "ಆ ಸೂರ್ಯನ ಬೆಳಕು ಹೀಗೆ ಎಲ್ಲೆಲ್ಲಿಯೂ ಪ್ರಸರಿಸಿತ್ತೇನು?"

**ಶಿಷ್ಯ :** "ಗುರುದೇವ, ಹಾಗಲ್ಲ. ಅದರ ಪ್ರಕಾಶವು ಸ್ವಲ್ಪ ಕಡಿಮೆಯಾಗಿಯೇ ಇತ್ತು. ಆದರೇನು? ಅದು ತಮ್ಮಲ್ಲಿಗೆ ನಾನು ಶಿಷ್ಯವೃತ್ತಿಗೆ ಬರುವ ಮುಂಚೆ ಒಬ್ಬ ಬೈರಾಗಿಯಿಂದ ಕಲಿತುಕೊಂಡಿದ್ದ ಸಾಧನದ ಫಲ. ನಮ್ಮೊಳಗೆ ಎಂಥೆಂಥ ಅದ್ಭುತದೃಶ್ಯಗಳು ಇರುವವೆಂಬುದಕ್ಕೆ ಅದೊಂದು ಉದಾಹರಣೆಯಲ್ಲವೆ? ತಾವು ಮೊನ್ನೆ ಉಪದೇಶಿಸಿದ ಆತ್ಮನ ಜ್ಞಾನಾಲೋಕವನ್ನು ಅರಿತುಕೊಳ್ಳುವುದಕ್ಕೆ ಇದೊಂದು ಮುಂದಿಟ್ಟ ಹೆಜ್ಜೆ ಎಂದು ನಾನು ಭಾವಿಸುತ್ತೇನೆ."

**ಗುರು :** "ಹಾಗೆನ್ನದಿರು. ಏಕೆಂದರೆ, ಕೃತಕವಾದ ಸಾಧನದಿಂದ ಕಂಡ ಸೂರ್ಯನ ಬೆಳಕೇ ಸುಪ್ರಸಿದ್ಧನಾಗಿ ತನ್ನ ಮಹಿಮೆಯಿಂದ ತಾನು ಬೆಳಗುತ್ತಿರುವ ಈ ಸೂರ್ಯನ ಬೆಳಕಿಗಿಂತ ಹೆಚ್ಚಿನದೆಂದು ನೀನು ಭಾವಿಸಿದಂತೆ ಆಗಿದೆ. ನೀನು ಕಂಡ ಸೂರ್ಯನು ಒಂದು ಅವಸ್ಥೆಯಲ್ಲಿ ನಿನಗೆ ಮಾತ್ರ ಕಾಣಿಸಿಕೊಂಡವನು; ಈ ಸೂರ್ಯನೊ, ಎಂದರೆ

ಎಂದೆಂದಿಗೂ ಸೂರ್ಯನೇ, ಎಲ್ಲರಿಗೂ ಸೂರ್ಯನೇ, ಹೀಗಿರುವಲ್ಲಿ ಸ್ವತಂತ್ರಪ್ರಕಾಶ. ನಾದ ಈ ಸೂರ್ಯನ ಪ್ರಕಾಶಕ್ಕೆ ಆ ಕೃತಕ ಸೂರ್ಯನನ್ನು ಹೋಲಿಸುವದು ಹೇಗೆತಾನೆ ಸರಿಯಾದೀತು! ಸ್ವಯಂಪ್ರಕಾಶನಾದ ಆತ್ಮನಿಗೆ ಒಂದು ವೇಳೆ ಈ ಸೂರ್ಯನನ್ನು ಉಪಮಾನವಾಗಿ ಉದಾಹರಿಸಿದರೂ ಆದೀತು. ಆದರೆ ಆ ನಿನ್ನ ಮನಃಕಲ್ಪಿತನಾದ ಸೂರ್ಯನಿಗೂ ಆತ್ಮನಿಗೂ ಎಲ್ಲಿಂದೆಲ್ಲಿಗೆ?"

**ಶಿಷ್ಯ :** "ಶ್ರೀ ಗುರುವೆ, ತಮ್ಮ ಮಾತಿನಂತೆ ನೋಡಿದರೆ, ಬಾಹ್ಯಸೂರ್ಯನನ್ನು ಆರಾಧಿಸುವ ಭಕ್ತರೇ ಅಂತರಸೂರ್ಯನನ್ನು ಸಾಧನದಿಂದ ಕಾಣುವ ಯೋಗಿಗಳಿಗಿಂತಲೂ ಹೆಚ್ಚಿನ ಸ್ಥಿತಿಯವರೆನ್ನಬೇಕಾಗುತ್ತದೆ. ಹಾಗಾದರೆ ಅಂತರ್ದೃಷ್ಟಿಯು ಕಡಿಮೆಯದೆಂದೇ ತಮ್ಮ ಮತವೆ?"

**ಗುರು :** "ಹಾಗೇನೂ ಇಲ್ಲವಯ್ಯ. ಆದರೆ ನೀನು ಹೇಳುವ ಸೂರ್ಯದರ್ಶನವು ಅಂತರ್ದೃಷ್ಟಿಯ ಫಲವೆಂದು ಹೇಗೆ ತಿಳಿಯೋಣ? ಅಲ್ಲಿಯೂ ನೀನು ನಿನ್ನ ಹೊರಗೇ ಒಂದು ಸೂರ್ಯಮಂಡಲದಂಥ ದೃಶ್ಯವನ್ನು ಕಂಡೆಯಲ್ಲವೆ? ಅಂತರ್ದೃಷ್ಟಿ ಎಂದರೆ ಆತ್ಮದೃಷ್ಟಿ. ದೇಹ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ–ಇವುಗಳಲ್ಲಿ ಒಂದೊಂದೂ ಇನ್ನೊಂದಕ್ಕಿಂತ ಸೂಕ್ಷ್ಮವೂ, ಒಳಗಿರುವದೂ, ಆತ್ಮಬುದ್ಧಿಗೆ ತಕ್ಕದ್ದೂ ಆಗಿರುತ್ತದೆ. ಆದ್ದರಿಂದ ಈ ದೃಷ್ಟಿಯನ್ನು ಅವಲಂಬಿಸಿ ಒಳ ಒಳಕ್ಕೆ ಸರಿದು ನಿಜವಾದ ಪರಮಾತ್ಮನನ್ನು ಕಂಡುಕೊ. ಆಗ 'ಅಧ್ಯಾತ್ಮಯೋಗ'ವನ್ನು ಅವಲಂಬಿಸಿದಂತೆ ಆಗುತ್ತದೆ."

**ಶಿಷ್ಯ :** "ಸದ್ಗುರುವೆ, ಇದೊಂದು ಹೊಸ ದಾರಿಯೇ ಆಗಿ ನನಗೆ ತೋರುತ್ತಿದೆ. ಆದರೆ ನನ್ನೊಳಗೆ ನೋಡಿಕೊಂಡರೆ ಎಲ್ಲೆಲ್ಲಿಯೂ ಇರುವ ಪರಮಾತ್ಮನನ್ನು ಕಾಣುವದು ಹೇಗೆ ಆದೀತು? ಈ ನನ್ನ ಸಂಶಯವನ್ನು ಕೃಪೆಯಿಂದ ಪರಿಹರಿಸಿಕೊಡಬೇಕು."

**ಗುರು :** "ಪರಮಾತ್ಮನು ಅಂತರ್ದೃಷ್ಟಿಯಿಂದ ನಮ್ಮೊಳಗೇ ಕಾಣಬರುವನೆಂಬುದು ನಿಜ. ಆದರೆ ಅವನು ಪೆಟ್ಟಿಗೆಯೊಳಗೆ ರತ್ನವಿರುವಂತೆ ನಿಜವಾಗಿ ಯಾವದೊಂದು ಶರೀರದ ಒಳಗೆ ಇರುವದಿಲ್ಲ. ಅವನು ಹೊರಗಿನ ಸೂರ್ಯನಂತೆ ತನಗೆತಾನೇ ಪ್ರಕಾಶಿಸುತ್ತಿರುತ್ತಾನೆ; ಎಲ್ಲರಿಗೂ ಆತ್ಮನಾಗಿರುತ್ತಾನೆ. ಆತನ ಬೆಳಕಿನಿಂದಲೇ ನಮ್ಮ ದೇಹಕರಣಗಳೂ ತೋರುತ್ತಿವೆ, ಆಧಿದೈವಿಕವಾದ ಸೂರ್ಯಚಂದ್ರರೂ ಬೆಳಗುತ್ತಿರುತ್ತಾರೆ. ಹೀಗೆಂದು ಅಂತರ್ದೃಷ್ಟಿಯಿಂದ ನೋಡಿದಾಗಲೇ ಅಧ್ಯಾತ್ಮಸಮಾಧಿಯ ಪ್ರಜ್ಞಾಲೋಕವು ಎಲ್ಲೆಲ್ಲಿಯೂ ಚಿಮ್ಮುವದು. ತಿಳಿಯಿತೆ?"

ಗುರುಗಳ ಉಚ್ಚಸ್ವರದಿಂದ ನನಗೆ ಥಟ್ಟನೆ ಎಚ್ಚರವಾಯಿತು. ಆಗಲೆ ಅರುಣೋದಯವು ಕಳೆದುಹೋಗಿತ್ತು. ಸಂ– 24, 277

# ಆರೋಗ್ಯಭಾಗ್ಯ

ಪೂರ್ಣಾರೋಗ್ಯವು ನಮಗೆ ದೊರಕಬೇಕಾದರೆ ಮೊಟ್ಟಮೊದಲು ರೋಗದ ವಿಚಾರವು ನಮ್ಮ ಮನಸ್ಸಿಗೆ ಹತ್ತದಂತೆ ಮಾಡಿಕೊಳ್ಳಬೇಕು; ಉಲ್ಲಾಸವೂ ಉತ್ಸಾಹವೂ ಉಕ್ಕುವಂತೆ ಮಾಡುವ ವಿಚಾರಗಳೇ ಮನಸ್ಸಿನಲ್ಲಿ ನೆಲಸುವಂತೆ ಮಾಡಿಕೊಳ್ಳಬೇಕು.

ನಮ್ಮ ಮನಸ್ಸಿಗೆ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ-ಇವುಗಳ ಮೂಲಕ ಬಗೆಬಗೆಯ ಅನುಭವಗಳು ಉಂಟಾಗುತ್ತಿರುವವು; ಇವುಗಳಲ್ಲಿ ಕೆಲವು ಪ್ರಿಯವಾಗಿರುವವು., ಮತ್ತೆ ಕೆಲವು ಅಪ್ರಿಯವಾಗಿರುವವು. ಪ್ರಿಯವಾದ ಅನುಭವಗಳು ಸುಖವನ್ನೂ ಅಪ್ರಿಯವಾದ ಅನುಭವಗಳು ದುಃಖವನ್ನೂ ಉಂಟುಮಾಡುತ್ತಿರುವವು. ಈ ಸುಖದುಃಖಗಳು ಆಗಿಹೋದಮೇಲೂ ಅವುಗಳ ಕಲೆಯು ಮನಸ್ಸಿನ ಕೆಳಗಡೆ ನಿಂತುಕೊಳ್ಳುವದು. ಈ ಕಲೆಗೆ ವಾಸನೆಯೆಂದು ಹೆಸರು. ವಾಸನೆಗಳು ಮನಸ್ಸಿನ ತಳದಲ್ಲಿ ಅವ್ಯಕ್ತವಾಗಿ ಅವಿತುಕೊಂಡಿರುತ್ತವೆ; ಈ ತಳಕ್ಕೆ ಆಶಯ ಎಂದು ಹೆಸರು. ಮನಸ್ಸಿನ ಮೇಲುಗಡೆಯಲ್ಲಿ ಎಂಥ ವಿಚಾರಗಳು ಬರುವವೋ ಅಂಥ ವಾಸನೆಯು ಆಶಯದಿಂದ ಮೇಲಕ್ಕೇಳುವದು, ಅಂಥ ಕಾರ್ಯವನ್ನು ನಾವು ಮಾಡುವೆವು, ಅಂಥ ಫಲವನ್ನು ಪಡೆಯುವೆವು. ಆದ್ದರಿಂದ ನಮಗೆ ಯಾವಾಗಲೂ ಆರೋಗ್ಯವೇ ಇರಬೇಕಾದರೆ ಆರೋಗ್ಯಕರವಾದ ವಿಚಾರವು ನಮ್ಮ ಮನಸ್ಸಿನಲ್ಲಿರಬೇಕು. ಆಗ ಆರೋಗ್ಯದ ವಾಸನೆಗಳು ಎದ್ದುಕೊಳ್ಳುವವು, ಆರೋಗ್ಯಕರವಾದ ಕೆಲಸವನ್ನು ನಮ್ಮಿಂದ ಮಾಡಿಸುವವು, ಆರೋಗ್ಯವೆಂಬ ಫಲವನ್ನೇ ಕೊಡುವವು.

ಮನಸ್ಸಿನಲ್ಲಿ ಆರೋಗ್ಯಕರವಾದ ವಾಸನೆಗಳು ನೆಲಸುವಂತೆ ಮಾಡುವದು ಹೇಗೆ? ರೋಗಗಳ ಪಟ್ಟಿಯನ್ನು ಓದುವದು, ಔಷಧಿಯ ಪಟ್ಟಿಯನ್ನು ಹತ್ತಿರವಿಟ್ಟುಕೊಳ್ಳುವದು-ಇದೇನೂ ಈ ಫಲವನ್ನು ಕೊಡುವದಿಲ್ಲ. ರೋಗದ ವಿಚಾರವನ್ನು ನಾವು ಮಾಡಿದಂತೆಲ್ಲ ಅದರ ವಾಸನೆಗಳೇ ನಮ್ಮಲ್ಲಿ ಹೆಚ್ಚುವವು; ಕೊನೆಗೆ ರೋಗವೂ ಕಾಣಿಸಿಕೊಂಡೇ ಬಿಡುವದು. ಆರೋಗ್ಯದ ನಿಯಮಗಳನ್ನು ತಿಳಿದುಕೊಂಡು ಅದರಂತೆ ನಡೆಯಬೇಕು, ಆರೋಗ್ಯವಿಚಾರವನ್ನೇ ಮಾಡುತ್ತಿರಬೇಕು, "ನಾನು ಅರೋಗನಾಗುತ್ತಿದ್ದೇನೆ. ನನಗೆ ಯಾವ ರೋಗವೂ ಬಂದಿಲ್ಲ"-ಎಂದು ಮಲಗುವಾಗ ಎರಡು ಮೂರು ಸಲ ಮನಸ್ಸಿನಲ್ಲಿ ಜಪಿಸಿ ನಿದ್ರೆಮಾಡಬೇಕು. ಹೀಗಾದರೆ ಆರೋಗ್ಯದ ವಾಸನೆಗಳು ಹೆಚ್ಚುವವು-ಎಂದು ಈಗಿನ ಮನಶ್ಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಇದರಲ್ಲಿಯೂ ನಿಜದಂಶವಿದೆ. ಏಕೆಂದರೆ ನಮ್ಮ ಮನಸ್ಸಿನ ವಾಸನಾಶಯವು ಹೊರಗಿನ ಕಾರ್ಯಗಳಿಗೂ ಆಲೋಚನೆಗಳಿಗೂ ಅನುಗುಣವಾಗಿಯೇ ಕೆಲಸಮಾಡುವದೆಂಬುದೊಂದು ಅದರ ನಿಯಮವಾಗಿದೆ.

ಆದ್ದರಿಂದ ಆರೋಗ್ಯದ ವಿಚಾರವು ಆರೋಗ್ಯದ ವಾಸನೆಯನ್ನು ಎಚ್ಚರಗೊಳಿಸಿ ಆರೋಗ್ಯಕರವಾದ ಕೆಲಸಕ್ಕೆ ಕೈಹಾಕಿಸುವದೆಂಬುದೇನೂ ಆಶ್ಚರ್ಯವಲ್ಲ.

ಆದರೆ ಮೇಲೆ ಹೇಳಿದಂತೆ ನಡೆಯುವದಕ್ಕೆ ಅನೇಕರಿಗೆ ಆಗುವದಿಲ್ಲ. ಆರೋಗ್ಯದ ವಿಚಾರವನ್ನು ಮನಸ್ಸಿಗೆ ತಂದುಕೊಂಡ ಒಡನೆಯೇ ಸಾಹಚರ್ಯನಿಯಮದಿಂದ 'ಈಗ ನಮಗೆ ಆರೋಗ್ಯವಿಲ್ಲವಲ್ಲ !' ಎಂಬ ಅರಿವು ಉಂಟಾಗುವದು. ಶೀತ ಉಷ್ಣ, ಬೆಳಕು ಕತ್ತಲೆ-ಮುಂತಾದ ದ್ವಂದ್ವಗಳಲ್ಲಿ ಒಂದನ್ನು ನೆನಸಿಕೊಂಡರೆ ಅದಕ್ಕೆ ವಿರುದ್ಧವಾದ ಮತ್ತೊಂದರ ನೆನಪು ಹೇಗೆ ತಟ್ಟನೆ ಬಂದುಬಿಡುವದೋ ಅದರಂತೆ ಆರೋಗ್ಯವೆಂಬ ಯೋಚನೆಯನ್ನು ತಂದುಕೊಂಡ ಒಡನೆಯೇ ಅದಕ್ಕೆ ವಿರುದ್ಧವಾದ ರೋಗದ ನೆನಪು ಬಂದುಬಿಡುತ್ತದೆ. ಆದ್ದರಿಂದ ಈ ದೃಷ್ಟಿಯಲ್ಲಿ ಆರೋಗ್ಯದ ವಿಚಾರವೆಂದರೂ ರೋಗದ ವಿಚಾರವೆಂದರೂ ಒಂದೇ ಆಗುವದು; ಆರೋಗ್ಯದ ಚಿಂತೆಯಿಂದಲೂ ರೋಗದ ಚಿಂತೆಯೇ ಬಂದು ಮನಸ್ಸಿಗೆ ಹತ್ತಿಕೊಳ್ಳುವದು. ಬಲವಾದ ರೋಗದಿಂದ ನರಳುತ್ತಿರುವವರಿಗಂತೂ "ನಾನು ಅರೋಗನಾಗಿದೇನೆ" ಎಂದು ಚಿಂತನೆಮಾಡುವದು ಅಸಾಧ್ಯವೇ ಆಗಿರುವದು.

ಹಾಗಾದರೆ ಈ ರೋಗವಾಸನೆಯಿಂದ ಪಾರಾಗುವದಕ್ಕೆ ಉಪಾಯವೇನು? ಎಂದರೆ ರೋಗ, ಆರೋಗ್ಯ-ಎಂಬ ದ್ವಂದ್ವವನ್ನೇ ದಾಟಿರುವ ಶುಭವಾಸನೆಯನ್ನು ಏರ್ಪಡಿಸಿ ಕೊಳ್ಳುವದು. ರೋಗವೂ ಆರೋಗ್ಯವೂ ದೇಹದ ಧರ್ಮಗಳು. ದೇಹದ ವಾಸನೆಯಿರು ವವರೆಗೆ ರೋಗಾರೋಗವಾಸನೆಯನ್ನು ತಪ್ಪಿಸಿಕೊಳ್ಳುವದು ಆಗುವಹಾಗಿಲ್ಲ; ನಮ್ಮ ದೇಹದೊಳಗೆ ಇರುವ ಅಶರೀರನಾದ ಪರಮಾತ್ಮನ ಚಿಂತೆಯನ್ನು ಹತ್ತಿಸಿಕೊಳ್ಳಬೇಕು, ಆ ಚಿಂತೆಯಿಂದ ಇಂಥ ಶುಭವಾಸನೆಯು ಬರುವದು. ಪರಮಾತ್ಮನ ಚಿಂತೆಯೆಂದರೆ ಗುಡಿಗೋಪುರಗಳಿಗೆ ಹೋಗಿ ಹರಕೆಯನ್ನು ಹೊರುವದಲ್ಲ; "ಪರಮೇಶ್ವರನೆ, ನನಗೆ ಆರೋಗ್ಯವನ್ನು ಕೊಡು !"-ಎಂದು ಅಂಗಲಾಚಿ ಬೇಡಿಕೊಳ್ಳುವದೂ ಅಲ್ಲ. ಗುಡಿ ಗೋಪುರಗಳಲ್ಲಿ ಪೂಜೆಪುರಸ್ಕಾರಗಳನ್ನು ಮಾಡುವದು ಒಳ್ಳೆಯದೇ, ಪರಮೇಶ್ವರನನ್ನು ಬೇಡಿಕೊಳ್ಳುವದೂ ತಪ್ಪಲ್ಲ. ಆದರೆ ಆರೋಗ್ಯಕ್ಕಾಗಿ ಪರಮೇಶ್ವರನನ್ನು ಬೇಡಿಕೊಂಡರೆ ನಮಗೆ ಆಗಲೂ ರೋಗಾರೋಗಗಳ ದ್ವಂದ್ವದ ಚಿಂತೆಯೇ ನಿಜವಾಗಿ ಹತ್ತಿಕೊಂಡಿರು ವದಾದ್ದರಿಂದ ಅದು ಪೂರ್ಣವಾಗಿ ಪರಮಾತ್ಮನ ಚಿಂತೆಯೆನಿಸಲಾರದು. ಅದರಿಂದ ನಮಗೆ ಬೇಕಾದ ಪೂರ್ಣಫಲವೂ ದೊರೆಯಲಾರದು.

ಪರಮೇಶ್ವರನು ನಮ್ಮೆಲ್ಲರ ಹೃದಯದಲ್ಲಿಯೂ ಇರುವನು. ನಮಗೂ ಆತನಿಗೂ ಅತ್ಯಂತ ನಿಕಟವಾದ ಸಂಬಂಧವಿರುತ್ತದೆ. ಆತನೇ ನಮಗೆ ದೇಹೇಂದ್ರಿಯಗಳನ್ನೂ

ಬುದ್ಧಿಯನ್ನೂ ಕೊಟ್ಟಿರುವಾತನು, ಆರೋಗ್ಯವನ್ನೂ ಉತ್ಸಾಹವನ್ನೂ ಉಲ್ಲಾಸವನ್ನೂ ಉತ್ತಮವಾದ ಬುದ್ಧಿಯನ್ನೂ ಕೊಡುವಾತನು, ಸುಖದುಃಖಗಳೆಂಬ ದ್ವಂದ್ವಗಳನ್ನು ದಾಟಿಸಿ ಆನಂದಸಾಗರದಲ್ಲಿ ಹಾಯಾಗಿ ತೇಲಿಸುವಾತನು. ಇದನ್ನು ನಾವು ಲಕ್ಷ್ಯದಲ್ಲಿಡಬೇಕು. ದೇಹೇಂದ್ರಿಯಗಳ ವಿಚಾರವನ್ನು ತೊರೆದು ಅವುಗಳಲ್ಲಿರುವ ಭಾವನೆಗಳಿಗೂ ಸತ್ತ್ವಕ್ಕೂ ವ್ಯಾಪಾರಗಳಿಗೂ ಪರಮಮೂಲವಾಗಿರುವ ಆ ಪರಮಾತ್ಮನ ಕಡೆಗೆ ನಮ್ಮ ಮನಸ್ಸನ್ನು ತಿರುಗಿಸಿಕೊಳ್ಳಬೇಕು. ಆಗ ಆತನ ಕರುಣಾದೃಷ್ಟಿಯ ಬೆಳದಿಂಗಳು ನಮ್ಮ ಮೇಲೆ ಬೀಳುವದು, ಆ ಅಮೃತಕಿರಣಗಳು ನಮಗೆ ಸಂಜೀವನವಾಗುವವು.

ಔಷಧಿಯೂ ಪಥ್ಯವೂ ಹೊರಗಿನ ಸನ್ನಿವೇಶವನ್ನು ಸರಿಪಡಿಸುವದಕ್ಕೂ ಆರೋಗ್ಯ ವನ್ನು ಕಾಪಾಡಿಕೊಳ್ಳುವದಕ್ಕೂ ಸಹಾಯವಾಗುವವು. ಆದರೆ ಈ ಸಹಾಯವು ನಮಗೆ ನಿಜವಾಗಿ ಲಾಭಕರವಾಗುವದಕ್ಕೆ ಒಳಗಿನಿಂದ ಪರಮಾತ್ಮನ ಸಹಾಯವು ಬೇಕಾಗಿರುವದು. ಏಕೆಂದರೆ ದೇಹದೊಳಗೆ ರಕ್ತಪುಷ್ಟಿಯಾಗುವದು, ರಕ್ತಚಲನೆಯಾಗುವದು, ಮೆದುಳು ಕೆಲಸಮಾಡುವದು-ಮುಂತಾದ ವ್ಯಾಪಾರಗಳನ್ನು ಹೊರಗಿನ ವೈದ್ಯನು ಮಾಡಿಸಲಾರನು. ಅವನು ತನ್ನ ಅಲ್ಪವಾದ ತಿಳಿವಳಿಕೆಯಿಂದ ಗೊತ್ತುಪಡಿಸಿರುವ ಚಿಕಿತ್ಸಾಕ್ರಿಯೆಯನ್ನು ಮಾಡುತ್ತಾನೆ; ಅದನ್ನು ಪರಿಪೂರ್ತಿಗೊಳಿಸಿ ನಮಗೆ ಪೂರ್ಣಾರೋಗ್ಯವನ್ನು ಕೊಡುವದು ಭವರೋಗ ವೈದ್ಯನಾದ ಪರಮೇಶ್ವರನ ವ್ಯಾಪಾರವಾಗಿರುತ್ತದೆ. ಆದ್ದರಿಂದ ನಾವು ಆತನಲ್ಲಿ ಪೂರ್ಣವಾದ ವಿಶ್ವಾಸವಿಟ್ಟು ಮನಸ್ಸನ್ನು ಆತನಿಗೆ ಸಂಬಂಧಪಡಿಸಿಕೊಳ್ಳಬೇಕು. ಆಗ ಆತನ ಬೆಂಬಲವು ದೊರೆತು ಮನಸ್ಸಿಗೂ ದೇಹಕ್ಕೂ ತುಷ್ಟಿಯೂ ಪುಷ್ಟಿಯೂ ಪ್ರಾಪ್ತವಾಗುವವು. ಆಗಲೇ ನಮ್ಮ ನಿಜವಾದ ಆರೋಗ್ಯಭಾಗ್ಯವು ಲಭಿಸುವದು. **ಸಂ-8, 68**

## ಸ್ನಾನ

ಸ್ನಾನವೆಂಬ ಮಾತಿಗೆ ಶುಚಿಯಾಗುವದು ಎಂದು ಅಕ್ಷರಾರ್ಥವಾಗುವದು. ಮೈಯಲ್ಲೂ ಮನಸ್ಸಿನಲ್ಲೂ ಬಗೆಬಗೆಯ ಕೊಳೆಗಳನ್ನು ಹತ್ತಿಸಿಕೊಂಡು ಮಿಕ್ಕವರಿಗೇ ಅಲ್ಲದೆ ತನಗೆ ತಾನೇ ಅಸಹ್ಯವಾಗುವಂತೆ ಮಾಡಿಕೊಂಡಿರುವ ನಮ್ಮಗಳಿಗೆಲ್ಲ ಸ್ನಾನವು ಅತ್ಯವಶ್ಯವಾಗಿರುವದು.

ಲೋಕದಲ್ಲಿ ಅತ್ಯಂತಶುಚಿಯಾಗಿರುವ ವಸ್ತುವೆಂದರೆ ಪರಮಾತ್ಮನು; ಅವನು ನಿತ್ಯವೂ ಯಾರ ಯಾರ ಹೃದಯದಲ್ಲಿರುವನೋ ಅವರೂ ಶುಚಿಯಾಗಿರುವರು. ಮಿಕ್ಕವರು ಆಗಾಗ್ಗೆ ಪರಮಾತ್ಮನ ಸ್ಮರಣೆಯನ್ನು ಮಾಡಿ ತಮ್ಮ ಮನಸ್ಸಿನ ಮಾಲಿನ್ಯವನ್ನು ಕಳೆದುಕೊಂಡು ಶುಚಿಯಾಗುತ್ತಿರಬೇಕು. ಈ ಸ್ಮರಣೆಗೆ ಅಂಗವಾಗಿ ಧ್ಯಾನಸ್ನಾನ,

ವಿಚಾರಸ್ನಾನ, ಯೋಗಸ್ನಾನ, ತಪಃಸ್ನಾನ, ವಿರಕ್ತಿಸ್ನಾನ–ಎಂಬ ಸ್ನಾನಪಂಚಕವನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ಇದಿಷ್ಟೂ ಒಳಗಿನ ಸ್ನಾನವು.

ಒಳಗಿನ ಸ್ನಾನಕ್ಕಿಂತಲೂ ಮೊದಲು ಸಾಧಕನು ಹೊರಗಿನ ಸ್ನಾನವನ್ನು ಆಚರಿಸಿ ಮೈಯ ಕೊಳೆಯನ್ನು ಕಳೆದುಕೊಂಡು ಭಗವಂತನ ಸ್ಮರಣೆಗೆ ಯೋಗ್ಯತೆಯನ್ನು ಪಡೆದುಕೊಳ್ಳಬೇಕು. ಯಾವನು ನಾನು ಆಂತರಸ್ನಾನವನ್ನು ಮಾಡುವೆನೆಂದೂ ಮಹಾಜ್ಞಾನಿಯೆಂದೂ ಯೋಗಿಯೆಂದೂ ಹೇಳಿಕೊಳ್ಳುತ್ತಾ ಹೊರಗೆ ಶರೀರವನ್ನೂ ಬಟ್ಟೆಗಳನ್ನೂ ಅತ್ಯಂತಮಲಿನವಾಗಿಟ್ಟುಕೊಂಡಿರುವನೋ ಅಂಥ ದಾಂಭಿಕನಿಗೆ ಇಹಸೌಖ್ಯವೇ ದಕ್ಕುವದಿಲ್ಲ. ಇನ್ನು ಪರಸೌಖ್ಯವೆಲ್ಲಿ ಸಿಕ್ಕಬೇಕು?

ಯಾರು ಬೆಳಗಿನಹೊತ್ತು ಎದ್ದು ಮಲಮೂತ್ರವಿಸರ್ಜನೆಯನ್ನು ಮಾಡಿದ ಬಳಿಕ, ಕೈಕಾಲುಗಳನ್ನು ಚೊಕ್ಕಟವಾಗಿ ತೊಳೆದುಕೊಂಡು, ಹಲ್ಲುಜ್ಜಿ, ಭಗವಂತನ ಸ್ಮರಣೆಯನ್ನು ಮಾಡುತ್ತಾ ಶುಚಿಯಾದ ನದ್ಯಾದಿಗಳಲ್ಲಿ ಮುಳುಗಿ ಮಿಂದಿರುವರೋ ಅವರಿಗೆ ಹೊರಗಿನ ಸ್ನಾನದ ಫಲವು ಮನದಟ್ಟಾಗಿರುತ್ತದೆ. ಶರೀರದ ಪ್ರತಿಯೊಂದು ಸಂದಿನಿಂದಲೂ ಎಡೆಬಿಡದೆ ಒಸರುತ್ತಿರುವ ಕಲ್ಮಷವನ್ನು ಸಂಪೂರ್ಣವಾಗಿ ದಿನಕ್ಕೊಂದು ಸಲವಾದರೂ ಸ್ವಚ್ಛವಾಗಿ ತೊಳೆದುಕೊಂಡು ಸುಶೀತಳವಾದ ನೀರಿನಲ್ಲಿ ಮುಳುಗಿ ಮೈಯೊರಸಿಕೊಂಡು ಮಡಿಬಟ್ಟೆಯನ್ನುಟ್ಟುಕೊಂಡವನ ಮೈಯಲ್ಲಿ ರಕ್ತವು ವೇಗವಾಗಿ ಹರಿಯುವದು, ಮನಸ್ಸಿಗೆ ಹರ್ಷವುಂಟಾಗುವದು, ಮುಖದಲ್ಲಿ ಕಾಂತಿಯು ಚಿಮ್ಮುತ್ತಿರುವದು.

ಆರೋಗ್ಯದಿಂದಿರುವವರು ನದಿಯ ನೀರು ಸಿಕ್ಕುವಲ್ಲಿ ಮತ್ತೆ ಯಾವ ನೀರಿನಲ್ಲಿಯೂ ಸ್ನಾನಮಾಡಬಾರದು. ಬೆಳಗ್ಗೆ ಎದ್ದು ಗಂಗಾದಿ ಮುಖ್ಯನದಿಗಳನ್ನೂ ಪುಣ್ಯಕ್ಷೇತ್ರಗಳನ್ನೂ ಸ್ಮರಿಸಿಕೊಂಡು ಬಳಿಕ ನದಿಯಲ್ಲಿ ಸ್ನಾನಮಾಡಬೇಕು. ನದಿಯೆಂದರೆ ಪರಮಪವಿತ್ರ ಸ್ಥಾನವೆಂಬ ಭಾವನೆಯಿರಬೇಕು. ಬೆಳಗ್ಗೆ ನದಿಯ ಬಳಿಗೆ ಹೋದಕೂಡಲೆ ಅಂಥ ಶುಚಿಸ್ಥಾನವನ್ನು ನಿರ್ಮಿಸಿದ ಭಗವಂತನಿಗೆ ಕೃತಜ್ಞತೆಯನ್ನು ತೋರುವದಕ್ಕಾಗಿ ನಮಸ್ಕಾರಮಾಡಬೇಕು. ನದಿಯ ಬಳಿಯಲ್ಲಿ ಸ್ವಲ್ಪವೂ ಕಶ್ಮಲವನ್ನು ಹಾಕಬಾರದು. ನದಿಯ ಜಲವನ್ನು ಪವಿತ್ರಭಾವನೆಯಿಂದ ತಲೆಯ ಮೇಲೆ ಚಿಮುಕಿಸಿಕೊಂಡು ಯಥಾವಿಧಿಯಾಗಿ ಸ್ನಾನಮಾಡಬೇಕು. ಇದಕ್ಕೆ ವಾರುಣಸ್ನಾನವೆಂದು ಹೆಸರು. ಬಾಹ್ಯಸ್ನಾನಗಳಲ್ಲಿ ಇದೇ ಮುಖ್ಯವಾದದ್ದು.

ವಾರುಣಸ್ನಾನವನ್ನು ಮಾಡಿದಮೇಲೆ ಕೆಲವರು ಭಸ್ಮತ್ರಿಪುಂಡ್ರ, ತಿಲಕ–ಇವುಗಳನ್ನಿಟ್ಟುಕೊಳ್ಳುವದು, ದೊಡ್ಡವರ ಪಾದೋದಕವನ್ನು ತಲೆಯಮೇಲೆ ಪ್ರೋಕ್ಷಣೆ ಮಾಡಿ

ಕೊಳ್ಳುವದು-ಮುಂತಾದ ಬಗೆಗಳಿಂದಲೂ ಶರೀರದ ಶುಚಿತ್ವದ ಭಾವನೆಯನ್ನು ಹೆಚ್ಚಿಸಿಕೊಳ್ಳುವದುಂಟು. ಈ ಸ್ನಾನವನ್ನು ಮಾಡುವದಕ್ಕೆ ಆನುಕೂಲ್ಯವಿಲ್ಲದಿದ್ದಾಗ-ಅಥವಾ ಅನಾರೋಗ್ಯಾದಿಗಳ ಕಾರಣದಿಂದ ಬಿಸಿನೀರಿನಲ್ಲಿ ಕೂಡ ಸ್ನಾನಮಾಡುವದಕ್ಕೆ ಆಗದಿದ್ದಾಗ-ಒದ್ದೆಯಬಟ್ಟೆಯಿಂದ ಶರೀರವನ್ನು ಚೆನ್ನಾಗಿ ಒರಸಿಕೊಳ್ಳುವದು, ಬಿಸಿಲಿನಲ್ಲಿ ನಿಂತಿದ್ದು ಮೈಯನ್ನು ಚೆನ್ನಾಗಿ ಒರಸಿಕೊಳ್ಳುವದು-ಮುಂತಾದ ರೀತಿಯಲ್ಲಿ ಶುಚಿತ್ವದ ಭಾವನೆಯನ್ನು ತಂದುಕೊಳ್ಳುವದುಂಟು. ಆದರೆ ಈ ಅನುಕಲ್ಪದ ಸ್ನಾನಗಳೇ ಮುಖ್ಯವೆಂದು ಭಾವಿಸಿ ನಿಜವಾದ ಸ್ನಾನವನ್ನು ಕೈಬಿಡುವ ಮೂಢನು ಕೈಯಲ್ಲಿರುವ ತುತ್ತನ್ನು ಕೆಳಕ್ಕೆ ಹಾಕಿ ಅಂಗೈಯನ್ನು ನೆಕ್ಕುವವನಾಗುತ್ತಾನೆ.

ನಮ್ಮಲ್ಲಿ ಹಳೆಯ ಸಂಪ್ರದಾಯದ ಕೆಲವರು ಮಡಿ, ಮೈಲಿಗೆ-ಎಂಬ ಶಬ್ದಗಳನ್ನು ಮಾತ್ರ ಇಟ್ಟುಕೊಂಡು ಹಾರಾಡುತ್ತಾ ಸ್ನಾನಭಾವನೆಯ ಒಳತಿರುಳನ್ನು ಅರಿಯದೆ ಮೋಸಹೋಗಿರುವರು; ಈಚಿನ ಕೆಲವರು ಅಗಸರ ಮಡಿಯೇ ಮಡಿಯೆಂಬ ಹೊಸ ಸಂಪ್ರದಾಯವನ್ನು ಆಚರಣೆಗೆ ತಂದುಕೊಂಡು ಸ್ನಾನವೆಂದರೆ ಬೆವರನ್ನು ಕಳೆದು ಕೊಳ್ಳುವದಕ್ಕೆ ಯಾವಾಗಲಾದರೊಂದು ಸಲ ಮಾಡಬಹುದಾದ ಕೃತ್ಯವೆಂದು ಎಣಿಸುವದಕ್ಕೆ ಮೊದಲುಮಾಡಿರುತ್ತಾರೆ. ನಿಜವಾದ ಸ್ನಾನದ ಒಳಗುಟ್ಟು ಇವರಿಬ್ಬರಿಗೂ ತಿಳಿಯದು. ಕಲ್ಮಷದ ಸೋಂಕೇ ಇಲ್ಲದ ಮನಸ್ಸನ್ನು ಸಂಪಾದಿಸಿಕೊಳ್ಳುವದು, ಈ ಸಂಪಾದನೆಗೆ ತಕ್ಕಂತೆ ಮೈಯನ್ನು ಯಾವಾಗಲೂ ನಿರ್ಮಲಗೊಳಿಸುತ್ತಿರುವದು-ಇವೆರಡೂ ನಿಜವಾದ ಸ್ನಾನದ ಪರಮೋದ್ದೇಶವೆಂಬುದನ್ನು ಸಾಧಕರಾದವರು ಮರೆಯದೆ ಇರಬೇಕು.

## ಧ್ಯಾನ

ಬೆಳಗಿನ ಹೊತ್ತು ಮುಂಚಿತವಾಗಿ ಏಳುವದರಿಂದಲೇ ಶರೀರಕ್ಕೆ ಲವಲವಿಕೆ ಯುಂಟಾಗುತ್ತದೆ; ಸ್ನಾನದಿಂದ ಮೈ ಚೊಕ್ಕಟವಾಗುತ್ತದೆ. ಇವೆರಡೂ ಸ್ವಲ್ಪಮಟ್ಟಿಗೆ ಚಿತ್ತವನ್ನು ಹರ್ಷದಿಂದ ಕೂಡಿರುವಂತೆ ಮಾಡುವದಕ್ಕೆ ಸಾಧನಗಳಾಗಿರುತ್ತವೆ. ಆದರೆ ಮನುಷ್ಯನಿಗೆ ಬೇಕಾಗಿರುವ ಆನಂದಸಾಧನಗಳಲ್ಲಿ ಧ್ಯಾನವೆಂಬುದು ಇವೆರಡಕ್ಕಿಂತಲೂ ಹೆಚ್ಚಿನದಾಗಿರುತ್ತದೆ.

ಧ್ಯಾನವೆಂದರೆ ಚಿಂತಿಸುವದು. ವ್ಯವಹಾರದಲ್ಲಿ ಮನುಷ್ಯನು ಏನನ್ನಾದರೂ ಚಿಂತಿಸು ತ್ತಲೇ ಇರುವನಾದರೂ ಎಲ್ಲಾ ಚಿಂತೆಗಳಿಂದಲೂ ಅವನ ಚಿತ್ತಕ್ಕೆ ನೈರ್ಮಲ್ಯವಾಗಲಿ ಶಾಂತಿಯಾಗಲಿ ಉಂಟಾಗುವದಿಲ್ಲ. ಯಾವ ಪರಮಾರ್ಥದ ಧ್ಯಾನದಿಂದ ನಮ್ಮಲ್ಲಿ ಆನಂದದ ಬುಗ್ಗೆಯು ಉಕ್ಕೇರುವದೋ, ಯಾವದರ ಫಲವಾಗಿ ನಮಗೆ ವ್ಯವಹಾರದಲ್ಲೆಲ್ಲ

ಚಿತ್ತದ ಉಲ್ಲಾಸವು ಹಿಂಬಾಲಿಸುವದೋ ಆ ಚಿಂತನವನ್ನೇ ಇಲ್ಲಿ ಧ್ಯಾನವೆಂದು ಕರೆದಿರುತ್ತದೆ.

ವಿವೇಕಿಯಾದವನು ಪ್ರಶಾಂತವಾಗಿರುವ ಬೆಳಗಿನ ಜಾವದಲ್ಲಿಯೂ ಸಂಜೆಯ ಹೊತ್ತಿನಲ್ಲಿಯೂ ತಪ್ಪದೆ ಧ್ಯಾನಮಾಡಬೇಕು. ಅವಕಾಶವು ಸಿಕ್ಕರೆ ಮಧ್ಯಾಹ್ನವೂ ಮಾಡಬೇಕು. ಪ್ರಾತಃಕಾಲ, ಸಂಗವಕಾಲ, ಮಧ್ಯಾಹ್ನಕಾಲ, ಅಪರಾಹ್ಣಕಾಲ, ಸಾಯಂಕಾಲ–ಎಂಬ ಐದು ಕಾಲಗಳಲ್ಲಿಯೂ ಧ್ಯಾನಮಾಡುವವರು ಇನ್ನೂ ಹೆಚ್ಚಿನ ಅಂತಸ್ತಿನವರು. ಮಹಾತ್ಮರಾದವರು ಪರಮಾತ್ಮನ ಚಿಂತನವನ್ನು ಒಂದು ಮುಹೂರ್ತವೂ ಬಿಡದೆ ನಡೆಸಿಕೊಂಡುಬರುತ್ತಾರೆ; ಏಕೆಂದರೆ ಪರಮೇಶ್ವರನ ಚಿಂತೆಯಿಲ್ಲದೆ ಕಳೆದ ಒಂದುಕ್ಷಣವು ಕೂಡ ಮಹಾ ಅನರ್ಥಕ್ಕೆ ದ್ವಾರವಾಗಿರುತ್ತದೆಯೆಂದು ಅವರ ಭಾವನೆ. ಆದ್ದರಿಂದಲೇ ಭಗವದ್ಧ್ಯಾನವನ್ನು ತಪ್ಪದೆ ಮಾಡುತ್ತಿರಬೇಕೆಂದು ಎಲ್ಲಾ ಧರ್ಮಗಳಲ್ಲಿಯೂ ಉಪದೇಶಿಸಿರುತ್ತದೆ.

ಪರಮೇಶ್ವರನನ್ನು ಯಾವ ರೂಪದಿಂದ ಧ್ಯಾನಿಸಬೇಕು? ಹೇಗೆ ಧ್ಯಾನಿಸಬೇಕು?– ಎಂಬ ಪ್ರಶ್ನೆಗಳಿಗೆ ಎಲ್ಲರಿಗೂ ಅನ್ವಯಿಸುವಂಥ ಒಂದೇ ಉತ್ತರವನ್ನು ಕೊಡುವದಕ್ಕೆ ಆಗುವಹಾಗಿಲ್ಲ. ಅವರವರು ತಮ್ಮ ತಮ್ಮ ಚಿತ್ತದ ಅಂತಸ್ತಿಗೆ ತಕ್ಕಂತೆ ಧ್ಯಾನಿಸಬೇಕು. ನಿಷ್ಕಲ್ಮಷರಾದ ಮಹಾತ್ಮರು ನಿರ್ಗುಣನೂ ನಿಷ್ಕ್ರಿಯನೂ ನಿರಾಕಾರನೂ ಕೂಟಸ್ಥ ಸಚ್ಚಿದಾನಂದಸ್ವರೂಪನೂ ಆಗಿರುವ ಪರಮಾತ್ಮನ ಸ್ವರೂಪವನ್ನು ಅನನ್ಯಭಕ್ತಿಯಿಂದ ಧ್ಯಾನಮಾಡುತ್ತಾರೆ. ಅದಕ್ಕೆ ಶಕ್ತಿಯಿಲ್ಲದವರು ಅನೇಕ ಕಲ್ಯಾಣಗುಣಗಳಿಂದ ಕೂಡಿದ ಅದೇ ಪರಮೇಶ್ವರನ ಸಾಕಾರಸ್ವರೂಪವನ್ನು ಧ್ಯಾನಿಸುತ್ತಾರೆ. ಪರಮೇಶ್ವರನು ಸರ್ವಜ್ಞನೂ ಸರ್ವಶಕ್ತನೂ ಪರಮದಯಾಘನನೂ ಆಗಿರುವುದರಿಂದ ತನ್ನ ಉಪಾಸಕರ ಅನುಗ್ರಹಾರ್ಥವಾಗಿ ಅನೇಕವೇಳೆ ಬೇರೆಬೇರೆ ಆಕಾರಗಳನ್ನು ಸ್ವೀಕರಿಸಿ ಅವರವರ ಇಷ್ಟಾರ್ಥಗಳನ್ನು ಈಡೇರಿಸಿಕೊಟ್ಟಿರುತ್ತಾನೆ. ಇಂಥ ಆಕಾರಗಳಲ್ಲಿ ಕೆಲವನ್ನು ಶ್ರುತಿಸ್ಮೃತಿ ಪುರಾಣಗಳಲ್ಲಿ ವರ್ಣಿಸಿ ಆಯಾ ಅವತಾರದಲ್ಲಿ ಪರಮೇಶ್ವರನು ಪ್ರಕಟಗೊಳಿಸಿದ ಗುಣಗಳನ್ನೂ ಲೀಲೆಗಳನ್ನೂ ಹೃದಯಂಗಮವಾಗಿ ವಿವರಿಸಿರುತ್ತದೆ. ಎಲ್ಲಾ ಆಕಾರಗಳೂ ಆತನವೇ ಆಗಿರುವದರಿಂದ ಸಾಧಕನಾದವನು ತನಗೆ ಇಷ್ಟವಾದ ಒಂದು ಆಕಾರದ ಸುಂದರಮೂರ್ತಿಯನ್ನು ಆರಿಸಿಕೊಂಡು ಒಂದೇ ನಿಷ್ಠೆಯಿಂದ ಆ ಮೂರ್ತಿಯನ್ನೇ ಧ್ಯಾನಮಾಡಬೇಕು.

ಧ್ಯಾನಮಾಡುವದಕ್ಕೆ ಅನುಕೂಲಿಸುವಂತೆ ಬಾಹ್ಯಮೂರ್ತಿಯಲ್ಲಿ ತನ್ನ ಇಷ್ಟದೇವತೆಯನ್ನು ಅರ್ಚನೆಮಾಡುತ್ತಿರಬೇಕು. ಬಾಹ್ಯಮೂರ್ತಿಯಾಗಲಿ, ಆಂತರಮೂರ್ತಿಯಾಗಲಿ ಭಾವದಿಂದ ಅರ್ಚನಧ್ಯಾನಗಳನ್ನು ಮಾಡಿದರೇ ಫಲದಾಯಕವಾಗುವದೇ ಹೊರತು ಸುಮ್ಮನೆ ಡಂಬಕ್ಕಾಗಿಯೋ ಅರ್ಥಾನುಷ್ಠಾನವಿಲ್ಲದೆಯೊ ಮಾಡುವ ಅನುಷ್ಠಾನದಿಂದ ಫಲವನ್ನು ಕೊಡಲಾರದೆಂಬುದನ್ನು ಮರೆಯದೆ ಇರಬೇಕು. ಇಡಿಯ ಜಗತ್ತೇ

ಪರಮೇಶ್ವರನ ಮೂರ್ತಿಯಾಗಿರುವದಾದರೂ ವಿಷಯವಾಸನೆಯಿಂದ ಕಲುಷವಾಗಿರುವ ನಮ್ಮ ಚಿತ್ತಕ್ಕೆ ಅದು ಆತನಿಗಿಂತ ಬೇರೆಯಾದ ಜಡವಸ್ತುವಾಗಿ ತೋರುವದು. ಭಾವವಾಸಿತವಾದ ಶುದ್ಧಚಿತ್ತದಿಂದ ಅರ್ಚನೆಮಾಡಿದರೆ ಪ್ರಪಂಚದ ಯಾವದೊಂದು ಭಾಗವೇ ಆದರೂ ಭಗವತ್ಸ್ವರೂಪವಾಗಿ ಮಾರ್ಪಡುವದು.

ಎಲ್ಲವೂ ಪರಮಾತ್ಮನ ಅಭಿವ್ಯಕ್ತರೂಪವೇ ಆದರೂ ರಾಮಕೃಷ್ಣಶಿವಾದಿ ವಿಶೇಷ ರೂಪಗಳಲ್ಲಿ ನಮ್ಮ ಚಿತ್ತವನ್ನು ಬೇಗನೆ ಸಾತ್ತ್ವಿಕಭೂಮಿಗೆ ಏರಿಸುವ ಶಕ್ತಿಯಿರುವದರಿಂದ ಅಂಥ ರೂಪಗಳ ಚಿತ್ರಗಳನ್ನು ಇಟ್ಟುಕೊಂಡು ಭಾವನೆ ಮಾಡುತ್ತಿರಬೇಕು; ಅರ್ಚನೆಗೂ ಧ್ಯಾನಕ್ಕೂ ಒಂದೇ ರೂಪವನ್ನೇ ಇಟ್ಟುಕೊಳ್ಳಬೇಕು. ಪರಮೇಶ್ವರನು ಪರಮಾರ್ಥವಾಗಿ ನಮ್ಮ ಆತ್ಮನೇ ಆಗಿದ್ದು ರೂಪಾಂತರಗಳನ್ನು ಪಡೆದುಕೊಂಡಂತೆ ನಮ್ಮ ಅಂತಃಕರಣಕ್ಕೆ ತೋರಿಕೊಳ್ಳುವದರಿಂದ ಹೊರಗಿನ ಅರ್ಚನೆಗಿಂತ ನಮ್ಮ ಹೃದಯದಲ್ಲಿ ಮಾಡುವ ಆರಾಧನೆಗೇ ಬೆಲೆ ಹೆಚ್ಚು.

## ಧ್ಯಾನ

(ಕೆ. ಭುಜಬಲಿಶಾಸ್ತ್ರಿಗಳ ಲೇಖನ-ಜೈನ ಸಿದ್ಧಾಂತದಂತೆ) : ಯಾವುದಾದರೊಂದರ ಚದರಿಹೋಗಿರುವ ಶಕ್ತಿಗಳನ್ನು ಒಟ್ಟುಮಾಡುವದಕ್ಕೆ **"ಯೋಗ"**ವೆಂದು ಹೆಸರು.

ಚದರಿರುವ ಶಕ್ತಿಗಳು ಪ್ರತ್ಯೇಕಾಗಿ ಯಾವುದಾದರೊಂದು ಕಾರ್ಯವನ್ನು ಸುಚಾರು ರೂಪದಲ್ಲಿ ಸಂಪನ್ನಮಾಡಲಾರವು. ಈ ಅಟಲನಿಯಮಾನುಸಾರವಾಗಿ ಮನುಷ್ಯನ ಚದರಿ ಹೋಗಿರುವ ಶಕ್ತಿಗಳೂ ಯಾವುದಾದರೊಂದು ಕೆಲಸವನ್ನು ಸುಸಂಪನ್ನ ಮಾಡಲಾರವು. ಆದರೆ ಆ ಶಕ್ತಿಗಳನ್ನು ಏಕತ್ರಮಾಡಿ ತನ್ಮೂಲಕ ನಾವು ಯಾವುದಾದ ರೊಂದು ಮಹತ್ತ್ವಪೂರ್ಣವಾದ ಕಾರ್ಯವನ್ನು ಮಾಡಬಲ್ಲೆವು.

ಜೈನಶಾಸ್ತ್ರದಲ್ಲಿ ಧ್ಯಾನವೇ ಯೋಗಶಬ್ದದ ಸ್ಥಾನಾಪನ್ನಶಬ್ದವಾಗಿರುತ್ತದೆ. ಯೋಗದ ಮೂಲಕ ಪ್ರಾಪ್ತವಾಗುವ ಸಂಪೂರ್ಣವಿಭೂತಿಗಳು ಧ್ಯಾನದ ಮೂಲಕವಾಗಿ ಪ್ರಾಪ್ತವಾಗುವುದೆಂದು ಜೈನಶಾಸ್ತ್ರವು ಹೇಳುವುದು. ಆದುದರಿಂದ ಜೈನಾಗಮದ ಪ್ರಕಾರ ಧ್ಯಾನವು ಯೋಗದ ಪರ್ಯಾಯವಾಚಿಶಬ್ದವೆಂದು ಸಿದ್ಧವಾಯಿತು.

ಜ್ಞಾನವು ಆತ್ಮನ ಸ್ವಾಭಾವಿಕಗುಣವಾಗಿದೆ. ಆದರೆ ಅದು ಮನವಚನಕಾಯಗಳ ಪ್ರವೃತ್ತಿಯಿಂದ ಭಿನ್ನಭಿನ್ನವಾಗಿ ಹೋಗುವುದುಂಟು. ಧ್ಯಾನವು ಆ ಪ್ರವೃತ್ತಿಗಳನ್ನು ಏಕತ್ರ ಮಾಡುತ್ತದೆ. ಇದರ ಪ್ರಭಾವವು ಬಹಳ ವಿಚಿತ್ರವಾಗಿದೆ. ನಿಶ್ಚಿಂತ ಅವಸ್ಥೆಯಲ್ಲಿ ಮೆದುಳಿನಲ್ಲಿ ಮೊಳೆಯುವ ಅಪೂರ್ವಶಕ್ತಿಗೂ ಇದೇ ತಾಯಿಬೇರು. ಮನವಚನ ಕಾಯಗಳ ಪ್ರವೃತ್ತಿಯಿಂದ ಮೆದುಳು ಸ್ಥಿರವಾಗಿರುವದಿಲ್ಲ. ಅದರ ಸ್ಥಿರ ಹಾಗೂ ನಿರಾತುಲ

ಅವಸ್ಥೆಯು ಕೇವಲ ಧ್ಯಾನದಿಂದಲೇ ಪ್ರಾಪ್ತವಾಗುವುದು. ಧ್ಯಾನದಿಂದ ಆತ್ಮನಲ್ಲಿ ಅನ್ಯ ಅನೇಕ ವಿಭೂತಿಗಳೂ ಪ್ರಾಪ್ತವಾಗುವವು. ಆದರೆ ಅವು ಇದರೊಂದು ಸಾಮಾನ್ಯಫಲ; ಅದರಿಂದಾಗುವ ಮುಖ್ಯಫಲವೇನೆಂದರೆ ಆತ್ಮನು ಕರ್ಮಬಂಧನದಿಂದ ಮುಕ್ತನಾಗಿ ಅನಂತ-ಅಕ್ಷಯಸುಖಕ್ಕೆ ಸ್ವಾಮಿಯಾಗುವನು.

ಧ್ಯೇಯರೂಪಪದಾರ್ಥಗಳ ಭೇದದಿಂದ ಧ್ಯಾನವು ಅನೇಕ ಪ್ರಕಾರವಾಗಿರುವುದಾದರೂ ಜೈನಶಾಸ್ತ್ರದಲ್ಲಿ ಆರ್ತ, ರೌದ್ರ, ಧರ್ಮ, ಶುಕ್ಲ ಅಥವಾ ಪಿಂಡಸ್ಥ, ಪದಸ್ಥ, ರೂಪಸ್ಥ, ರೂಪಾತೀತ-ಎಂಬ ಹೆಸರುಗಳಿಂದ ಅದರ ಭೇದಗಳು ವಿಶದವಾಗಿ ವರ್ಣಿಸಲ್ಪಟ್ಟಿರುವುವು. ಈ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕೆಂದಿದ್ದವರು ಜೈನರ **"ಜ್ಞಾನಾರ್ಣವ", "ಯೋಗವಿಂಶತಿಕಾ"**-ಮೊದಲಾದ ಗ್ರಂಥಗಳನ್ನು ನೋಡಬೇಕು.

ಮೇಲೆ ಹೇಳಿದ ಧ್ಯಾನದ ಭೇದಗಳಲ್ಲಿ ಆರ್ತ ಮತ್ತು ರೌದ್ರಭೇದಗಳು ಅಶುಭಗಳಾಗಿರುವುದರಿಂದ ಯೋಗ ಅಥವಾ ಧ್ಯಾನದಿಂದ ಪ್ರಾಪ್ತವಾಗತಕ್ಕ ಅಪೂರ್ವಶಕ್ತಿಯು ಇವುಗಳಿಂದ ಪ್ರಾಪ್ತವಾಗಲಾರದು.

ಧ್ಯಾನವೆಂಬುದು ಒಂದು ಕ್ರಿಯೆಯ ಹೆಸರು. ಆ ಕ್ರಿಯೆಯ ಕರ್ಮಕ್ಕೆ **"ಧ್ಯೇಯ"**ವೆಂದೂ ಕರ್ತನಿಗೆ **"ಧ್ಯಾತೃ"**ವೆಂದೂ ಸಂಕೇತ. ಈ ಮೂರು ಭೇದಗಳು ಕೇವಲ ಪರರಿಗೆ ತಿಳಿಸುವುದಕ್ಕೋಸ್ಕರವಷ್ಟೇ ಹೊರತು ಯಥಾರ್ಥವಾಗಿ ಧ್ಯಾನಾವಸ್ಥೆಯಲ್ಲಿ ಈ ವಿಕಲ್ಪಗಳು ಕಂಡುಬರುವದಿಲ್ಲ; ನಿರ್ವಿಕಲ್ಪ ಈ ಅವಸ್ಥೆಯನ್ನೇ ಯೋಗ ಶಾಸ್ತ್ರದಲ್ಲಿ **"ನಿರ್ವಿಕಲ್ಪಸಮಾಧಿ"**ಯೆಂದು ಕರೆದಿರುವರು.

ಮಾನಸಿಕ ಮತ್ತು ಶಾರೀರಕಸ್ವಾಸ್ಥ್ಯವನ್ನು ಸರಿಯಾಗಿ ಕಾಪಾಡಿಕೊಳ್ಳುವುದಕ್ಕೋಸ್ಕರವೂ ಧ್ಯಾನವು ಒಂದು ಉಪಯೋಗಿಸಾಧನವಾಗಿದೆ. ಆದುದರಿಂದಲೇ ಬಲ್ಲವರು ಇದನ್ನೊಂದು ಬಹುಮೂಲ್ಯವಸ್ತುವನ್ನಾಗಿ ಹೇಳುತ್ತಾರೆ. ಯೋಗಶಬ್ದಕ್ಕೆ ಸಂಬಂಧವೆಂದೂ ಅರ್ಥವಾಗುವದು. ಇದು ಮೋಕ್ಷದೊಡನೆ ಆತ್ಮನ ಸಂಬಂಧವನ್ನು ಮಾಡಿಸುವುದರಿಂದ ಇದರ ಅರ್ಥವೂ ಅನ್ವರ್ಥವಾಗಿದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿ-ಇವು ಎಂಟು ಯೋಗದ ಅಂಗಗಳು.

**ಸಂ-9, 104**

# ಧ್ಯೇಯ

ಮಾನವಜನ್ಮದ ಧ್ಯೇಯವೇನೆಂದರೆ-ವಿಶ್ವನಾಯಕನೂ ಸರ್ವವ್ಯಾಪಿಯೂ ನಮ್ಮೆಲ್ಲರ ಹೃದಯಸ್ಥನೂ ಆದ ಭಗವಂತನ ಸಾಕ್ಷಾತ್ಕಾರವು. ಇಂಥ ದಿವ್ಯಪದವು ಸಾಧ್ಯವಾಗ ಬೇಕಾಗಿದ್ದರೆ ನಮ್ಮ ಮಾನಸಿಕ ಮತ್ತು ಶಾರೀರಕ ಶಕ್ತಿಗಳೆಲ್ಲ ಈ ಮಹಾ ಪ್ರಭುವಿನ

ಸೇವೆಗಾಗಿ ಸಮರ್ಪಣೆಯಾಗಬೇಕು. ಪ್ರೇಮವು ನಮ್ಮ ಎಲ್ಲಾ ಕಾರ್ಯ ಗಳಲ್ಲಿಯೂ ಪ್ರವೇಶಿಸಬೇಕು. ಕ್ಷಮೆ, ದಯೆ ಮತ್ತು ಶಾಂತಿ-ಇವು ನಮ್ಮ ಜೀವನದ ಭೂಷಣಗಳಾಗಿರಬೇಕು. ಅಭಿಮಾನವು ಸಂಪೂರ್ಣ ನಷ್ಟವಾಗಬೇಕು. ಭಗವಂತನ ದಿವ್ಯಶಕ್ತಿಯಿಂದಲೇ ಇಡೀ ಬ್ರಹ್ಮಾಂಡವು ಚಲಿಸುತ್ತದೆಂತ ತಿಳಿದು ಅದರಲ್ಲಿ ನಾವೂ ಆ ಶಕ್ತಿದೇವಿಯ ಬಾಲಕರಾಗಿ ಇದ್ದು ಆಕೆಯ ಪ್ರೇರಣೆಯಿಂದಲೇ ಆಕೆಯ ಬಲದಿಂದಲೇ ಯಂತ್ರರೂಪವಾಗಿ ವ್ಯಾಪಾರಮಾಡುತ್ತಿರುವೆವೆಂಬ ಭಾವನೆಯು ನಮ್ಮಲ್ಲಿ ನೆಲೆಗೊಳ್ಳಬೇಕು.

ಭಗವಂತನ ಪವಿತ್ರನಾಮವನ್ನು ಸರ್ವಕಾಲವೂ ಉಚ್ಚರಿಸುತ್ತಿದ್ದು ಮನಸ್ಸು ಆತನ ತೇಜಸ್ಸಿನಲ್ಲಿಯೂ ಪ್ರೇಮದಲ್ಲಿಯೂ ಆನಂದದಲ್ಲಿಯೂ ಸಮರಸವಾಗಿ ಬೆರೆತು ಹೋಗಬೇಕು. ಆತನ ಪ್ರಾಪ್ತಿಗೆ ನಾಮಸ್ಮರಣೆಯೂ ಸತ್ಸಂಗವೂ ಸುಲಭಸಾಧನೆಗಳು; ಸ್ವಾರ್ಥತ್ಯಾಗ ಮತ್ತು ಪರೋಪಕಾರದ ಕರ್ಮ-ಇವುಗಳೇ ನಿಜಭಕ್ತನ ಲಕ್ಷಣಗಳು.

ಭಗವಂತನ ದರ್ಶನವೆಂದರೆ, ಎಲ್ಲಾ ಚರಾಚರಪ್ರಾಣಿಗಳಲ್ಲಿಯೂ ವಸ್ತುಗಳಲ್ಲಿಯೂ ಆತನನ್ನು ನೋಡುವದು. ಆತನಿಗೆ ಶರಣುಹೋಗಿ ಆತನ ಅನನ್ಯ ಆಶ್ರಯವನ್ನು ಪಡೆದು ನಿತ್ಯಶಾಂತಿ ಮತ್ತು ಆನಂದದಲ್ಲಿರುವದೇ ನರಜನ್ಮದ ಧ್ಯೇಯದ ಅಂತಿಮದ ಪದವು. (ಮಂಗಳೂರಿನ "ಶ್ರೀರಾಮದಾಸಸೇವಾಶ್ರಮ"ದ ಪ್ರವೇಶೋತ್ಸವದ ದಿವಸ ಓದಿ ಹೇಳಿದ ಶ್ರೀಸ್ವಾಮಿರಾಮದಾಸರವರ ಸಂದೇಶವು.) ಸಂ-9, 6

## ಸಗುಣಧ್ಯಾನ

ಅರ್ಚನೆಯ ಕಾಲದಲ್ಲಿ ಪರಮೇಶ್ವರನ ಗುಣಗಳ ಧ್ಯಾನವು ಅವಶ್ಯವಾಗಿರಬೇಕು. ಆಗಲೇ ಅರ್ಚನೆಯ ಸವಿಯು ಸಾಧಕನಿಗೆ ಹತ್ತುವದು, ಆಗಲೇ ಮನಸ್ಸು ವಿಷಯದ ಕೆಳಮಟ್ಟವನ್ನು ಬಿಟ್ಟು ಆನಂದದ ಮೇಲುಮಟ್ಟಕ್ಕೆ ಏರಲು ಅನುವಾಗುವದು. ಅರ್ಚನೆಯು ವೈದಿಕವಾಗಿರಲಿ, ಆಗಮಿಕವಾಗಿರಲಿ, ಭಾವಭರಿತವಾಗಬೇಕಾದರೆ ಪರಮೇಶ್ವರನ ಮಹಿಮೆಯು ಮನದಲ್ಲಿ ಮೂಡಿರಬೇಕು. ಆತನ ಸಗುಣಗಳು ಅಡಿಗಡಿಗೆ ಮನಸ್ಸಿನಲ್ಲಿ ಬಿಂಬಿಸುತ್ತಿರಬೇಕು. ಅಂಥ ಭಾವದಿಂದ ಪೂಜೆಮಾಡುವವನು ಯಾವ ಕುಲದವನು, ಯಾವ ಜಾತಿಯವನು, ಸ್ನಾನಮಾಡಿರುವನೊ ಇಲ್ಲವೊ-ಎಂಬುದೇ ಮುಂತಾದ ವಿಂಗಡವೇನೂ ಬೇಕಿರುವದಿಲ್ಲ. ಅವನು ಪರಮೇಶ್ವರನಲ್ಲಿ ತನ್ನ ಮನಸ್ಸನ್ನು ಎರಕವಾಡಿರುವನೆಂಬುದಿಷ್ಟೇ ಸಾಕು, ಅವನನ್ನೂ ಸುತ್ತಮುತ್ತಲಿನವರನ್ನೂ ಪವಿತ್ರಗೊಳಿಸುವದಕ್ಕೆ.

ಭಾವದಿಂದ ಪೂಜಿಸುವಾತನ ಸ್ಥಿತಿಯು ಹೇಗಿರುವದೆಂಬುದನ್ನು ಹರಿಹರದೇವನು ವರ್ಣಿಸಿರುವ ಬಗೆಯನ್ನು ನೋಡಿ:

**"ಅಡಿಗಡಿಗೆ ನೋಡಿ ಮಾತಾಡಿ ಮೈವೆರ್ಚುತುಂ ।**
**ಹಾಡಿ ತಣಿವುತೆ ಮತ್ತೆಮತ್ತೆ ಮಿಗೆ ಕೂರ್ಬುತುಂ ।**
**ಪುಳಕಿಸುತೆ ಪುಟವೇರಿ ತವಕಿಸುತೆ ಮದವೇರಿ ।**
**ಎಳಸುತುಂ ದಳವೇರಿ ಬಳಸುತುಂ ಬಲ್ವೇರಿ ।**
**ನಡೆಯುತುಂ ಗದುಗದುಸಿ ಬೆದುರುತುಂ ಸಡಗರಿಸಿ ।**
**ನಡೆವುತುಂ ಡೆಂಡಣೆಸಿ ಬೀಳುತುಂ ತರಹರಿಸಿ ।**
**ಮೆಲ್ಲನೆಚ್ಚತ್ತು ಶಿವಲಿಂಗಮಂ ನಡೆನೋಡಿ ।**
**ಲಲ್ಲೆಗರೆವುತ್ತೆ ಪರಮಸ್ನೇಹಮಂ ಮಾಡಿ ॥"**

–(ಚನ್ನಯ್ಯಗಳ ಮಾಹಾತ್ಮ್ಯೆ, ಶಿವಾನುಭವಪತ್ರಿಕೆಯಲ್ಲಿ ಉದಾಹರಿಸಿರುವದು)

ಮೇಲೆ ಬಣ್ಣಿಸಿರುವಂಥ ಪರಿಣಾಮವಾಗುವದಕ್ಕೆ ಪರಮೇಶ್ವರನ ಗುಣಗಳ ಧ್ಯಾನವೇ ಮೂಲಕಾರಣವು. ಆದ್ದರಿಂದಲೇ ಸಾಕಾರಪೂಜೆಯಿಲ್ಲದೆ ಇದ್ದರೂ ಸಗುಣಧ್ಯಾನ ದಿಂದಲೇ ಅವೈದಿಕಮತಗಳಲ್ಲಿ ಎಷ್ಟೋ ಭಕ್ತರು ಕೃತಕೃತ್ಯರಾಗಿ ಲೋಕಪಾವನರೆನಿಸಿರುವರು.

ಪರಮಾತ್ಮನ ಯಾವ ಗುಣಗಳನ್ನು ನಾವು ಧ್ಯಾನಕ್ಕೆ ಇಟ್ಟುಕೊಳ್ಳಬೇಕು? ಎಂಬು ದೊಂದು ಪ್ರಶ್ನೆಯು ಸಹಜವಾಗಿ ಇಲ್ಲಿ ಹುಟ್ಟುತ್ತದೆ; ಏಕೆಂದರೆ ಆತನ ಗುಣಗಳು ಅನಂತವಾಗಿವೆ, ಅವುಗಳೆಲ್ಲವನ್ನೂ ಎಣಿಸಿ ಮುಗಿಸುವದು ಆದಿಶೇಷನಿಗೂ ಅಳವಲ್ಲ. ಯಾವ ಗುಣವನ್ನು ನೆನಸಿಕೊಂಡಮಾತ್ರದಿಂದ ನಮ್ಮ ಮನದಳಲು ಮಾಯವಾಗು ವದೋ, ಅಜ್ಞಾನವು ಅಳಿಯುವದೋ, ಸಂಕಟವು ಸರಿಯುವದೋ, ಕಷ್ಟವು ಕರಗು ವದೋ, ಅಂಜಿಕೆಯು ಅಡಗುವದೋ, ಬಡತನವು ಹುಡಿಯಾಗುವದೋ, ಧೈರ್ಯವು ಉಕ್ಕುವದೋ, ಆನಂದವು ಹೊರಸೂಸುವದೋ, ಚಿತ್ತಕ್ಕೆ ತೃಪ್ತಿಯುಂಟಾಗುವದೋ– ಅಂಥ ಗುಣಗಳನ್ನು ಅವಶ್ಯವಾಗಿ ಮನಸ್ಸಿನಲ್ಲಿ ತಂದುಕೊಂಡು ಎಡೆಬಿಡದೆ ಚಿಂತಿಸಬೇಕು.

ಪರಮೇಶ್ವರನಿಗಿಂತ ಮಿಗಿಲು ಸತ್ಯವಾದ ವಸ್ತುವಿಲ್ಲ; ಆತನೇ ಸಕಲಜಗತ್ತಿಗೂ ತಿರುಳಾಗಿರುವವನು; ಆತನೇ ಸರ್ವಜಗತ್ಕಾರಣನು, ಸರ್ವಜ್ಞನು, ಸರ್ವಶಕ್ತನು; ಆತನು ಸತ್ಯಕಾಮನು, ಸತ್ಯಸಂಕಲ್ಪನು; ಆತನು ಸರ್ವವ್ಯಾಪಕನು, ನಮ್ಮ ಹೃದಯದಲ್ಲಿರುವ ಅಂತರ್ಯಾಮಿಯು; ಆತನು ನಿತ್ಯತೃಪ್ತನು, ದಯಾಮಯನು, ಸರ್ವಕರ್ಮಫಲದಾತನು, ಸರ್ವಬಂಧವಿಮೋಚಕನು, ಅಭಯದಾತೃವು, ನಿತ್ಯಾನಂದದಾಯಕನು; ಇಂಥ ಪರಮಾತ್ಮನು ನಮ್ಮಗಳೆಲ್ಲರ ಹೃದಯದಲ್ಲಿ ಯಾವಾಗಲೂ ನೆಲೆಸಿರುತ್ತಾನೆ. ಆತನೇ ಆಪದ್ಬಂಧುವು, ಅನಾಥನಾಥನು, ದೀನರಕ್ಷಕನು, ಭುಕ್ತಿಮುಕ್ತಿಪ್ರದನು–ಎಂದು ಶ್ರುತಿಸ್ಮೃತಿ ಪುರಾಣಗಳು ಹೊಗಳುತ್ತವೆ, ಅವೈದಿಕಧರ್ಮಗಳೂ ಅದನ್ನು ಅನುಮೋದಿಸುತ್ತಿವೆ. ಅನುಭವಿಗಳಾದ ಭಕ್ತರೆಲ್ಲರೂ ಇದನ್ನೇ ಸಾರಿಸಾರಿಹೇಳಿರುತ್ತಾರೆ.

ಈ ಮೇಲೆ ಹೇಳಿದ ಗುಣಗಳನ್ನು ಪಟ್ಟಿಮಾಡಿಕೊಂಡು ಗಟ್ಟಿಮಾಡಬೇಕೆಂದು ತಿಳಿಯಬಾರದು. ಈ ಗುಣಗಳು ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುವಂಥ ಭಗವಂತನ ಲೀಲೆಗಳನ್ನು ತಿಳಿಸುವ ಕಥೆಗಳನ್ನು ಶ್ರವಣಮಾಡುತ್ತಿರಬೇಕು, ಆ ಗುಣಗಳ ಸವಿಯನ್ನು ಕಂಡುಕೊಂಡಿರುವ ಭಗವದ್ಭಕ್ತರ ಸಂಭಾಷಣೆಗಳನ್ನು ಕೇಳಿ ಮನಸ್ಸನ್ನು ತೋಯಿಸಿಕೊಳ್ಳಬೇಕು. ಹಾಗಾದರೆ ಮನಸ್ಸನ್ನು ಅವುಗಳ ಧ್ಯಾನಕ್ಕೆ ತಿರುಗಿಸುವದಕ್ಕೆ ಆಗುತ್ತದೆ, ಧ್ಯಾನದಲ್ಲಿ ಗುಣಗಳ ಸಾರವು ಮನಸ್ಸಿನಲ್ಲಿ ಹರಿದಾಡುವದಕ್ಕೆ ಶಕ್ಯವಾಗುತ್ತದೆ, ಮನಸ್ಸು ಕೆಳಗಿನ ನೆಲಗಟ್ಟನ್ನು ಬಿಟ್ಟು ಮೇಲಿನ ಅಂತಸ್ತಿಗೆ ಏರುವದಕ್ಕೆ ಕಲಿತುಕೊಳ್ಳುತ್ತದೆ.

**ಸಂ-9, 55**

ಪರಮೇಶ್ವರನನ್ನು ಧ್ಯಾನಿಸುವದು ಹೇಗೆ? ಅದರಿಂದಾಗುವ ಪ್ರಯೋಜನವೇನು?- ಈ ಎರಡು ಪ್ರಶ್ನೆಗಳೂ ಸಾಧಕರಿಗೆ ಬಹುಮುಖ್ಯವಾಗಿರುತ್ತವೆ.

ಮನುಷ್ಯನ ಮನಸ್ಸು ಯಾವದನ್ನು ಮೆಚ್ಚುವದೋ ಅದನ್ನು ಸತತವಾಗಿ ಧ್ಯಾನಿಸುತ್ತಿರುವದು. ಲೋಕದಲ್ಲಿ ಒಬ್ಬೊಬ್ಬನಿಗೆ ಒಂದೊಂದು ಧ್ಯೇಯವು ಏರ್ಪಟ್ಟಿರುವದು ಹೀಗೆಯೇ, ಆಯಾ ಧ್ಯೇಯವನ್ನು ಅವರು ಬೇಡವೆಂದರೂ ಅವರ ಮನಸ್ಸು ಚಿಂತಿಸದೆ ಇರುವದಕ್ಕಾಗುವಂತಿಲ್ಲ. ಆದ್ದರಿಂದ ಪರಮೇಶ್ವರನ ಧ್ಯಾನವು ಅಳವಡಬೇಕಾದರೆ ಆತನಲ್ಲಿ ಸರ್ವಾತಿಶಯವಾದ ಗುಣಗಳು ಇರುವವೆಂದು ನಮಗೆ ಮನದಟ್ಟಾಗಬೇಕು. ಇದು ಅತ್ಯಂತ ಅವಶ್ಯವು.

ಪರಮೇಶ್ವರನು ಸರ್ವಜ್ಞನೆಂದೂ ಸರ್ವಶಕ್ತನೆಂದೂ ಸರ್ವವ್ಯಾಪಕನೆಂದೂ ನಮ್ಮ ಹೃದಯದಲ್ಲಿಯೇ ಇದ್ದುಕೊಂಡು ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವನೆಂದೂ ಪ್ರೇಮಮೂರ್ತಿಯಾದ ಆತನನ್ನು ನೆನಸಿಕೊಂಡಮಾತ್ರದಿಂದ ಆನಂದವಾಗುವದೆಂದೂ ನಮ್ಮ ಮನಸ್ಸಿಗೆ ಚೆನ್ನಾಗಿ ಹತ್ತಿದರೆ ಆಗ ಆತನ ಧ್ಯಾನವಿಲ್ಲದಿರುವದೇ ನಮ್ಮ ದುಃಖಕ್ಕೆಲ್ಲ ಪರಮಮೂಲವೆಂಬುದು ತಾನೇ ಸ್ಫುಟವಾಗುವದು. ಕೂಡಲೆ ನಮ್ಮ ಮನಸ್ಸು, ಸರಿಯಾಗಿ ಶ್ರುತಿಮಾಡಿದ ವೀಣೆಯಂತೆ ಇಂಪಾದ ಒಳಗಿನ ಗಾನದ ಸುಖವನ್ನು ಅನುಕರಿಸುವದಕ್ಕೆ ಅಣಿಮಾಡಿಕೊಳ್ಳುವದು. ಇದೇ ಧ್ಯಾನಕ್ಕೆ ಮೊದಲನೆಯ ಮೆಟ್ಟಿಲು.

ಅರ್ಚನೆಯಿಂದಲೂ ಜಪದಿಂದಲೂ ಗುಣಲೀಲೆಗಳ ಶ್ರವಣದಿಂದಲೂ ಕೀರ್ತನದಿಂದಲೂ ಮನಸ್ಸು ಈ ಮೊದಲನೆಯ ಮೆಟ್ಟಲನ್ನು ಹತ್ತುವದು. ಅರ್ಚನೆಯನ್ನು ಶ್ರದ್ಧೆಯಿಂದ ಮಾಡುವವರು ಕೊನೆಯಲ್ಲಿ ತಮ್ಮ ಅಭೀಷ್ಟವಾದ ಪ್ರಾರ್ಥನೆಯನ್ನು ಮಾಡಿಕೊಳ್ಳುವ ವಾಡಿಕೆಯಿದೆಯಷ್ಟೆ ಈ ಪ್ರಾರ್ಥನೆಯು ಸಾತ್ತ್ವಿಕವಾಗಿ ಬೆಳೆದಹಾಗೆಲ್ಲ ಮನಸ್ಸು ಮೇಲುಮೇಲಿನ ಸ್ಥಿತಿಗೆ ಬರುತ್ತಿರುವದು. "ಪರಮೇಶ್ವರನೆ, ನನಗೆ ಇಂಥ ವಿಷಯವನ್ನು

ಕೊಡು, ಕಷ್ಟವನ್ನು ಪರಿಹರಿಸು, ನನ್ನ ಇಷ್ಟಮಿತ್ರರಾದ ಇಂಥವರನ್ನು ರಕ್ಷಿಸು, ನನ್ನ ಶತ್ರುಗಳಾದ ಇಂಥವನನ್ನು ದಂಡಿಸು" ಎಂದು ಕೇಳಿಕೊಳ್ಳುವ ಕೀಳುತರದ ಪ್ರಾರ್ಥನೆಯು ಬರುಬರುತ್ತಾ ಮಾಯವಾಗಿ "ಪರಮೇಶ್ವರನೆ, ನಿನ್ನ ದಯೆಯೊಂದಿರಲಿ, ಆಮೇಲೆ, ನನಗೆ ಯಾವ ಕಷ್ಟವು ಬಂದರೂ ಚಿಂತೆಯಿಲ್ಲ. ನಿನ್ನ ಸಂಕಲ್ಪಕ್ಕನುಗುಣವಾಗಿ ನಡೆಯುವಂತೆ ಬುದ್ಧಿಯನ್ನು ನನಗೆ ಅನುಗ್ರಹಿಸು" ಎಂದು ಬೇಡಿಕೊಳ್ಳುವ ಉತ್ಕೃಷ್ಟ ಪ್ರಾರ್ಥನೆಯು ಬಲಿತುಕೊಳ್ಳುವ ಹೊತ್ತಿಗೆ ಪರಮೇಶ್ವರನ ಧ್ಯಾನಕ್ಕೆ ಮನಸ್ಸು ತಕ್ಕದ್ದಾಗಿರುತ್ತದೆ.

"ಪರಮೇಶ್ವರನು ನನ್ನ ಹೃದಯದಲ್ಲಿಯೇ ಇರುತ್ತಾನೆ"-ಎಂಬ ನೆನಪು ಬಂದಮಾತ್ರದಿಂದಲೇ ಮನಸ್ಸಿನಲ್ಲಿ ಒಂದು ದೊಡ್ಡ ಮಾರ್ಪಾಡು ಆಗುತ್ತದೆ. ನಾವು ಹೊರಗೆ ಸಾಕಾರವಾಗಿ ಅರ್ಚನೆಯನ್ನು ಮಾಡಲಿ, ಮಾಡದಿರಲಿ, ಪರಮಾತ್ಮನು ನಮ್ಮ ಹೃದಯದಲ್ಲಿ ಎಂದೆಂದಿಗೂ ಇದ್ದುಕೊಂಡುಬಿಟ್ಟಿರುತ್ತಾನೆ; ಇದನ್ನು ನಾವು ಮನಸ್ಸಿಗೆ ತಂದುಕೊಳ್ಳುವದೇ ಆತನ ಆವಾಹನೆಯು, ಅದನ್ನು ಮರೆಯುವದೇ ವಿಸರ್ಜನೆಯು. ವಾಚಕವೃಂದ, ಇದನ್ನು ಸ್ವಲ್ಪ ಯೋಚಿಸಿಕೊಳ್ಳಿರಿ: ಅರಸನ ಹೃದಯದಲ್ಲಿರುವಂತೆ ಆಳಿನ ಹೃದಯದಲ್ಲಿಯೂ ಅಷ್ಟುಮಟ್ಟಿಗೇ ಆ ಪ್ರೇಮದ ಗಟ್ಟಿಯಾದ ಭಗವಂತನು ನೆಲಸಿರುತ್ತಾನೆ; ಕುಲೀನನ ಹೃದಯದಲ್ಲಿರುವಂತೆ ಅತ್ಯಂತ ನೀಚಕುಲದವನೆನಿಸಿಕೊಂಡಿರುವವನ ಹೃದಯುದಲ್ಲಿಯೂ ಅಷ್ಟೇ ಪಾವಿತ್ರ್ಯದಿಂದ ಇರುತ್ತಾನೆ. ಹಣವಂತನಲ್ಲಿರುವಂತೆ ಬಡವರಲ್ಲಿಯೂ, ವಯಸ್ಸಾದವರಲ್ಲಿರುವಂತೆ ಮಕ್ಕಳಲ್ಲಿಯೂ ಗಂಡಸರಲ್ಲಿರುವಂತೆ ಹೆಂಗಸರಲ್ಲಿಯೂ, ರೂಪವಂತರಲ್ಲಿರುವಂತೆ ಕುರೂಪಿಗಳಲ್ಲಿಯೂ ಪಂಡಿತರಲ್ಲಿರುವಂತೆ ಪಾಮರರಲ್ಲಿಯೂ–ಎಲ್ಲರಲ್ಲಿಯೂ, ನಮ್ಮೆಲ್ಲರಲ್ಲಿಯೂ, ಅದೇ ಪರಮೇಶ್ವರನು ನಮ್ಮ ಜೀವನದ ತಿರುಳಾಗಿ, ನಮಗೆ ವ್ಯವಹಾರದಲ್ಲಿ ಬೇಕಾದ ಅಕ್ಷಯ ನಿಧಿಯಾಗಿ, ನಮ್ಮ ಆಪತ್ತಿಗೆ ಬೇಕಾಗುವ ಬಾಂಧವನಾಗಿ, ನಮ್ಮ ಅಜ್ಞಾನವನ್ನು ನೀಗುವ ಗುರುವಾಗಿ, ನಮ್ಮ ಅಂಜಿಕೆಯನ್ನು ತೊಲಗಿಸುವ ಅಭಯಹಸ್ತನಾಗಿ ಕುಳಿತಿರುತ್ತಾನೆ!

"ನಾನು ಪರಮೇಶ್ವರನನ್ನು ಕಾಣೆನಲ್ಲ ! ಆತನನ್ನು ನಾನು ಹೇಗೆ ಧ್ಯಾನಿಸಲಿ?" ಎಂಬ ಚಿಂತೆಯನ್ನು ಹಚ್ಚಿಕೊಳ್ಳಬೇಡಿ. ಪರಮೇಶ್ವರನು ನಿಮ್ಮ ಆತ್ಮನ ಸ್ವರೂಪವೇ ಆಗಿರುತ್ತಾನೆ: **"ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ॥"** (ಅರ್ಜುನನೇ, ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ಇರುವ ಆತ್ಮನೇ ನಾನು) ಎಂಬ ಗೀತೋಕ್ತಿಯನ್ನು ಸ್ಮರಿಸಿಕೊಳ್ಳಿರಿ. ಹೊರಗಿನ ವಿಷಯಗಳಲ್ಲಿ ಹರಿದಾಡುವ ಮನಸ್ಸನ್ನು ಹರಿಯಬಿಟ್ಟು ವ್ಯರ್ಥವಾಗಿ ಜೀವನವನ್ನು ಪೋಲು ಮಾಡಿಕೊಳ್ಳಬೇಡಿ. ನಿಮ್ಮೊಳಗೇ ಇರುವ ಆತ್ಮನೇ ಆ ಭಗವಂತನೆಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ. **ಸಂ-9, 77**

ಸಗುಣಧ್ಯಾನವು ಮಾಗಿ ಹಣ್ಣಾಗಿ ಅದರ ಸವಿಯನ್ನು ಸಾಧಕನು ಕಂಡುಕೊಂಡು ಚಪ್ಪರಿಸುವಂತೆ ಆಗಬೇಕಾದರೆ ಅದರಲ್ಲಿ ಆದರವು ಬೇಕು, ಎಡೆಬಿಡದ ಪ್ರಯತ್ನವು ಬೇಕು. ಈಶ್ವರಗುಣಗಳ ಶ್ರವಣವಾಗಿರಬೇಕು, ಆ ಗುಣಗಳ ಅನುಸಂಧಾನವಾಗಿರಬೇಕು, ಆ ಗುಣಗಳಿಗೆ ಮನಸೋತು ಹೊರಗಿನ ಯೋಚನೆಗಳನ್ನೆಲ್ಲ ಕಡೆಗಾಣಿಸಿ ಬದಿಗೊತ್ತಿ ಮೆಲ್ಲಮೆಲ್ಲನೆ ಒಳಕ್ಕೆ ಸರಿದು ಭಗವಂತನ ಅಂಶವಾಗಿರುವ ತನ್ನ ಆತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವ ಸಾಧನೆಯು ಒಂದೇ ಸಮನೆ ಬಹುಕಾಲದವರೆಗೆ ನಡೆದಿರಬೇಕು. ಇಷ್ಟೆಲ್ಲ ಆದಮೇಲೆ ಆ ದಯಾನಿಧಿಯಾದ ಪರಮೇಶ್ವರನ ಅನುಗ್ರಹದಿಂದ ಈ ಸಾಧನವು ಸಫಲವಾಗುವದೇ ಹೊರತು ಯಾವಾಗಲೆಂದರೆ ಆಗ, ಯಾರಿಗೆಂದರೆ ಅವರಿಗೆ, ಎಲ್ಲಿಯೆಂದರೆ ಅಲ್ಲಿ, ನೆನಸಿಕೊಂಡ ಮಾತ್ರದಿಂದ ಮನಸ್ಸಿನಲ್ಲಿ ಈ ಧ್ಯಾನವು ತಾನೇ ಬಂದು ಕೂತುಕೊಳ್ಳಲಾರದು.

ಧ್ಯಾನಕ್ಕೆ ಧ್ಯೇಯವೇ ಮುಖ್ಯವಷ್ಟೆ ಆದ್ದರಿಂದ ಭಗವಂತನ ಗುಣಗಳ ಸ್ವರೂಪವನ್ನು ಬಲ್ಲವರಿಂದಲೂ ಸದ್ಗ್ರಂಥಗಳಿಂದಲೂ ಕಿವಿಯಾರೆ ಕೇಳಿ ಮನಸಾರೆ ಅವುಗಳ ತಿರುಳನ್ನು ಅನುಸಂಧಾನಮಾಡಿಕೊಳ್ಳುವ ಪದ್ಧತಿಯನ್ನು ತಪ್ಪದೆ ದಿನದಿನವೂ ಆಚರಿಸುತ್ತಿರಬೇಕು. ನೆಲವನ್ನು ಆಳವಾಗಿ ಉತ್ತು ಸಾರವಾದ ಗೊಬ್ಬರವನ್ನು ಬೆರೆಸಿಕೊಂಡಿರುವಾಗ ಅದರಲ್ಲಿ ಬೀಜವನ್ನು ಬಿತ್ತಿದರೆ ಕ್ಷಿಪ್ರವಾಗಿ ಅಂಕುರಿಸಿ ಹುಲುಸಾಗಿ ಪೈರಾಗುವಂತೆ ಗುಣಶ್ರವಣಾನುಸಂಧಾನದಿಂದಲೇ ಮನಸ್ಸು ಒಳಮುಖವಾಗಿ ತಿರುಗುವದಕ್ಕೂ ಧ್ಯಾನಸುಖವನ್ನು ಅನುಭವಿಸುವದಕ್ಕೂ ತಕ್ಕದ್ದಾಗುವದು. ಪರಮಾತ್ಮನೇ ನಮ್ಮ ತಂದೆಯು, ತಾಯಿಯು, ತಂದೆತಾಯಿಗಳಿಗೂ ತಂದೆತಾಯಿಯು; ನಮ್ಮ ಹಿತವನ್ನೇ ಕೋರುತ್ತಾ ನಮಗೆ ಸರಿಯಾದ ಉಪದೇಶವನ್ನು ಮಾಡಿ ಸರಿಯಾದ ಹಾದಿಯಲ್ಲಿ ನಡೆಯುವಂತೆ ನೋಡಿಕೊಳ್ಳುವದಲ್ಲದೆ ಸಚ್ಛಾಸ್ತ್ರವೂ ಸದ್ಗುರುವೂ ಆಗಿ ನಮ್ಮ ಹೊರಗೂ ಇದ್ದುಕೊಂಡಿರುವನು. ನಾವು ಮುಟ್ಟಬೇಕಾದ ಗತಿಯು ಆತನೇ; ನಮ್ಮನ್ನು ಪೋಷಣೆಮಾಡುತ್ತಿರುವವನು ಆತನೇ; ನಮ್ಮ ಕರ್ಮಗಳ ಯುಕ್ತಾಯುಕ್ತತೆಯನ್ನು ಮೇಲುವಿಚಾರಣೆಯಿಂದ ನೋಡುತ್ತಿರುವಾತನು ಆತನೇ, ಅವುಗಳಿಗೆ ಫಲವನ್ನು ಕೊಡುವಾತನು ಆತನೇ; ಕಷ್ಟಕಾಲದಲ್ಲಿ ನಮ್ಮನ್ನು ರಕ್ಷಿಸುವವನು ಆತನೇ. ನಮಗೆ ಇರುವದಕ್ಕೆ ಮನೆಯನ್ನೂ ಉಣ್ಣುವದಕ್ಕೆ ಆಹಾರವನ್ನೂ ಉಡುವದಕ್ಕೆ ಬಟ್ಟೆಯನ್ನೂ ಮನಸ್ಸಿಗೆ ಬುದ್ಧಿಯನ್ನೂ ಶಾಂತಿಯನ್ನೂ ಸುಖವನ್ನೂ ಕೊಡುವಾತನು ಆತನೇ. ಹೆಚ್ಚೇನು? ನಾವೆಲ್ಲರೂ ಹುಟ್ಟುವದಕ್ಕೆ ಕಾರಣನೂ ಇರುವದಕ್ಕೆ ಆಶ್ರಯನೂ, ಮರಣಾನಂತರದಲ್ಲಿ ನಮಗೆ ಆಸರೆಯನ್ನು ಕೊಟ್ಟು ತನ್ನ ಆನಂದಧಾಮದಲ್ಲಿ ಸೇರಿಸಿಕೊಳ್ಳುವವನೂ ಆತನೇ. ಆತನು ನಮ್ಮ ಅಕ್ಷಯವಾದ ನಿಧಿಯು, ನಮಗೆ ಬೇಕಾದ ಫಲಕ್ಕೆಲ್ಲ ಮೂಲವಾಗಿರುವ ಅವ್ಯಯವಾದ ಬೀಜವು.

ಗೀತಾದಿಗಳಲ್ಲಿ ಉಕ್ತವಾಗಿರುವ ಈ ಬಗೆಯ ಗುಣಗಳನ್ನು ಮನಸ್ಸಿನಲ್ಲಿ ನೆನೆನೆನೆದು ಮೈನವಿರು ನಿಮಿರೆ, ಆನಂದದ ಕಣ್ಣೀರು ಸುರಿಯೆ, ಗುಣಗಾನವನ್ನು ಉಚ್ಚಸ್ವರದಿಂದ ಮಾಡುತ್ತಾ ಕುಣಿಕುಣಿದು ನಲಿದಾಡಿ ಸಕಲ ಪ್ರಪಂಚವೂ ತಾನೂ ಭಗವನ್ಮಯ ವೆಂಬುದನ್ನು ಕೆಲಕಾಲವಾದರೂ ಅನುಭವಿಸಿದವನಿಗೆ ಮನಸ್ಸು ಮತ್ತೆ ಕೆಳಗಿನ ಮೆಟ್ಟಿಲಿಗೆ ಇಳಿದೀತೆಂಬ ಭಯವುಂಟೆ? ಆಗ ಅದು ಸಹಜವಾಗಿ ಹೊರಗನ್ನೆಲ್ಲ ಮರೆತು ಒಳಮುಖವಾಗಿ ಭಗವಂತನಲ್ಲಿಯೇ ನಿಂತುಕೊಂಡುಬಿಡುತ್ತದೆ.

ಪಾಠಕಮಹಾಶಯರಲ್ಲಿ ಕೆಲವರು "ನಿಜ, ಹೀಗೆ ಧ್ಯಾನಮಾಡುವದು ಒಳ್ಳೆಯದೇ ಸರಿ, ಇದು ಕೆಲವರಿಗೆ ಸಾಧ್ಯವೂ ಆಗುತ್ತದೆ; ಆದರೆ ನಮ್ಮ ಸ್ಥಿತಿಯು ಇದಕ್ಕೆ ತಕ್ಕಂತಿಲ್ಲ! ಹೊಟ್ಟೆಗೆ ಬಟ್ಟೆಗೆ ನೇರವಾಗಿರುವದಕ್ಕೇ ಕಷ್ಟವಾಗಿ ಅದಕ್ಕಾಗಿ ದುಡಿಯುವದಕ್ಕೇ ಕಾಲವು ಸಿಕ್ಕದೆ ಇರುವಾಗ ಸಂಸಾರದ ತಾಪತ್ರಯದಲ್ಲಿ ಸಿಕ್ಕಿಕೊಂಡಿರುವ ನಾವೂ ಹೀಗೆ ಧ್ಯಾನಮಾಡಿ ನಲಿದಾಡುವದು ಸಾಧ್ಯವೆ?" ಎಂದು ಕೇಳಬಹುದು. ಇದಕ್ಕೆ ಉತ್ತರವನ್ನು ಹೇಳಬೇಕಾದರೆ ಒಂದು ದೊಡ್ಡ ಲೇಖನವನ್ನೇ ಬರೆಯಬೇಕಾಗುವದು. ಆದರೂ ಈ ಪ್ರಶ್ನೆಯನ್ನು ಕೇಳುವವರು ನಿಜವಾಗಿಯೂ ಧ್ಯಾನದ ಸುಖದಲ್ಲಿ ಆಶೆಯುಳ್ಳವ ರಾಗಿದ್ದರೆ ಅವರಿಗೆ ಸ್ವಲ್ಪದರಲ್ಲಿಯೇ ಒಂದು ಉತ್ತರವನ್ನು ಕೊಡಬಹುದು. "ಅಣ್ಣಗಳಿರ, ನಿಮ್ಮ ದುಡಿತದಿಂದಲೇ ನಿಜವಾಗಿ ನಿಮ್ಮ ಹೊಟ್ಟೆಬಟ್ಟೆಗಳು ಸಾಗುತ್ತಿರುವದಿಲ್ಲ; ನಾವು ಹೇಳುವ ಭಗವಂತನೇ ಅವನ್ನು ನಿಮಗೆ ಒದಗಿಸುತ್ತಿದ್ದಾನೆ. ಧ್ಯಾನಕ್ಕೆ ಒಂದಿಷ್ಟು ಹೊತ್ತನ್ನು ನೀವು ಇಟ್ಟುಕೊಂಡರೆ ಉಳಿದ ಕಾಲದಲ್ಲಿ ನೀವು ಮಾಡುವ ಕೆಲಸಕ್ಕೆ ಮತ್ತಷ್ಟು ಹೊಳಪು ಬಂದು, ಅದರಿಂದಲೇ ನಿಮ್ಮ ಜೀವನವು ಮತ್ತೂ ಸಲೀಸಾಗಿ ಸಾಗುತ್ತದೆ. ನಿಮ್ಮ ಸ್ಥಿತಿಯು ಕೆಟ್ಟಿದೆಯೆಂದು ಮರುಗಬೇಡಿರಿ; ಭಗವಂತನ ನಿಷ್ಠೆಯಿಲ್ಲದಿರುವದೇ ನಿಮ್ಮ ಕಷ್ಟಕ್ಕೆ ಕಾರಣವೆಂದು ನಿಶ್ಚಯಿಸಿ, ಧ್ಯಾನಕ್ಕೆ ಮೊದಲುಮಾಡಿರಿ, ಆಗ ನಿಮ್ಮ ಸ್ಥಿತಿಯೂ ಉತ್ತಮ ವಾಗುವದು. ನಿಮ್ಮ ಸುತ್ತಮುತ್ತಲಿನ ಸನ್ನಿವೇಶಗಳು ಸರಿಯಾಗಿಲ್ಲವೆಂಬುದಾಗಲಿ, ನಿಮ್ಮ ಸ್ಥಾನವು ಉತ್ತಮಸಾಧನಕ್ಕೆ ತಕ್ಕದ್ದಾಗಿಲ್ಲವೆಂಬುದಾಗಲಿ, ಇರುವ ಸನ್ನಿವೇಶವೇ ಬೇಕಾದಷ್ಟಾಯಿ ತೆಂಬ ಉದಾರಬುದ್ಧಿಯನ್ನು ಕೈಕೊಳ್ಳಿರಿ; ನಿಮ್ಮ ಸ್ಥಾನವೇ ನಿಮ್ಮ ವಿಕಾಸಕ್ಕೆ ತಕ್ಕದ್ದೆಂದು ನಂಬಿ ಅದನ್ನು ಆದರದಿಂದ ಕಾಣುವ ಪದ್ಧತಿಯನ್ನು ಮಾಡಿಕೊಳ್ಳಿರಿ. ಮಾರ್ಪಾಡಾಗ ಬೇಕಾಗಿರುವದು ನಿಮ್ಮ ಮನಸ್ಸಿನ ಭಾವದಲ್ಲಿಯೇ ಹೊರತು ನಿಮ್ಮ ಸ್ಥಾನದಲ್ಲಲ್ಲ. ಸನ್ನಿವೇಶದಲ್ಲೂ ಅಲ್ಲ. ಇರುವ ಸ್ಥಾನಮಾನಗಳನ್ನು ಗೌರವದಿಂದ ಕಾಣುತ್ತಾ ಸಾಧನಕ್ಕೆ ನೀವು ಮನಸ್ಸು ಹಾಕಿದರೆ ಸರಿ, ನಿಮ್ಮ ಧ್ಯಾನವು ಸಲೀಸಾಗಿ ಸಾಗುವದು, ಉತ್ಕೃಷ್ಟಸ್ಥಿತಿಗೆ ಏರುವದು; ನಿಮ್ಮ ಸನ್ನಿವೇಶಗಳೂ ಸ್ಥಾನಮಾನಗಳೂ ನಿಮ್ಮ ಹೊಸ ಭಾವಕ್ಕೆ ತಕ್ಕಂತೆ ತಾವೇ ರೂಪಿಸಿಕೊಳ್ಳುವವು. ಇದೇ ಭಗವಂತನ ನಿಯಮವು." **ಸಂ–9, 89**

# ನಿರ್ಗುಣ ಧ್ಯಾನ

ಮೊಗ್ಗು ಅರಳಿ ಹೂವಾಗುವಂತೆಯೂ ನೀರು ಆವಿಯಾಗುವಂತೆಯೂ ಭರಣಿಯಲ್ಲಿಟ್ಟಿದ್ದ ಕಸ್ತೂರಿಯ ತೀರ ಸಣ್ಣ ಚೂರು ತನ್ನ ಸ್ಥೂಲರೂಪವನ್ನು ಬಿಟ್ಟು ಪರಿಮಳದ ರೂಪದಿಂದ ಭರಣಿಯನ್ನೆಲ್ಲ ವ್ಯಾಪಿಸಿಕೊಳ್ಳುವಂತೆಯೂ ಸಗುಣಧ್ಯಾನವು ಬಲಿತು ಕಾಲಕ್ರಮದಲ್ಲಿ ನಿರ್ಗುಣಧ್ಯಾನವಾಗುವದು. ಆ ಧ್ಯಾನವನ್ನಾಗಲಿ ಅದರಿಂದಾಗುವ ಸುಖವನ್ನಾಗಲಿ ಅನುಭವಿಸಿ ತಿಳಿಯಬೇಕೇ ಹೊರತು ಮಾತಿನಿಂದ ವರ್ಣಿಸುವದಕ್ಕೆ ಎಂದಿಗೂ ಆಗಲಾರದು.

ನಿರ್ಗುಣವೆಂದರೆ ಯಾವ ಗುಣವೂ ಇಲ್ಲವಾದ್ದರಿಂದ ಅದು ಸಗುಣಕ್ಕಿಂತ ಸಪ್ಪೆಯಾಗಿರಬೇಕೆಂದು ಎಂದಿಗೂ ಭಾವಿಸಬಾರದು. ಏಕೆಂದರೆ ನಿರ್ಗುಣವೆಂದರೆ ಯಾವ ಗುಣವೂ ಇಲ್ಲದ್ದೆಂದು ಅರ್ಥವಲ್ಲ; ಗುಣ, ಗುಣಿ-ಎಂಬ ಭೇದವಿಲ್ಲದೆ ಗುಣಗಳ ತಿರುಳೇ ಆಗಿರುವ ಅತೀಂದ್ರಿಯತತ್ತ್ವವೆಂದು ಅರ್ಥ. ಯಾವ ಯಾವ ಗುಣಗಳು ನಮಗೆ ಪ್ರಕೃತಿಯಲ್ಲಿ ಗೋಚರವಾಗುತ್ತಿರುವವೋ, ಅವಕ್ಕೆಲ್ಲ ಪರಮೇಶ್ವರನೇ ಮೂಲಸ್ಥಾನವು; ಸೂರ್ಯನಿಂದ ಕಿರಣಗಳು ಎಲ್ಲಾ ಕಡೆಗೂ ಪಸರಿಸುತ್ತಿರುವಂತೆ ಪರಮೇಶ್ವರನಿಂದಲೇ ಆ ಗುಣಗಳು ಹೊರಚಿಮ್ಮಿ ತೋರಿಕೊಳ್ಳುತ್ತಿರುವವು. ಆದರೆ ಮತ್ತಷ್ಟು ಮುಂದಕ್ಕೆ ಹೋಗಿ ವಿಚಾರಿಸಿದರೆ ಕಿರಣಗಳು ಸೂರ್ಯನಿಗಿಂತ ಬೇರೆಯಿಲ್ಲ; ಸೂರ್ಯನೆಂದರೆ ಪ್ರಕಾಶಮಯವಾದ ಒಂದು ಗೋಳವು, ಪ್ರಕಾಶವನ್ನು ಬಿಟ್ಟು ಸೂರ್ಯನೇ ಇಲ್ಲ. ಇದರಂತೆ ಸಕಲಗುಣಗಳೂ ಪರಮಾತ್ಮನ ಹೊರತೋರಿಕೆಗಳೇ; ಅವು ಪರಮೇಶ್ವರನಿಗಿಂತ ಬೇರೆಯಿಲ್ಲ, ಆ ಗುಣಗಳ ತಿರುಳೇ ಪರಮೇಶ್ವರನಾಗಿರುವದರಿಂದ ಆ ತಿರುಳಿಗಿಂತ ಬೇರೆಯಾಗಿ ಪರಮೇಶ್ವರನೂ ಇರುವದಿಲ್ಲ.

ಧ್ಯಾನವನ್ನು ಮಾಡುವಾತನು ತನ್ನ ಧ್ಯೇಯವಾದ ಪರಮೇಶ್ವರನ ಸ್ವರೂಪದಲ್ಲಿ ಬೆರೆತುಹೋಗಿರುವಾಗ, ಅವನ ಕಣ್ಣಿಂದ ನೋಡಿದರೆ 'ನಾನು', 'ಪರಮೇಶ್ವರ', 'ಪ್ರಪಂಚ'- ಎಂಬ ಭೇದವು ಇರುವದೇ ಇಲ್ಲ. ಧ್ಯಾನವನ್ನು ಮಾಡುವಾಗ ಮಾತ್ರವೇ ಅವನು ಈ ಭೇದವನ್ನು ಮರೆತಿರುವನೆಂದು ತಿಳಿಯಬಾರದು; ನಿಜವಾಗಿ ಪರಮಾರ್ಥ ದೃಷ್ಟಿಯಲ್ಲಿ ಈ ಭೇದವು ಇರುವದೂ ಇಲ್ಲ. ಈ ದೃಷ್ಟಿಯಲ್ಲಿ ಧ್ಯಾನ, ಧ್ಯಾತೃ, ಧ್ಯೇಯ- ಎಂಬ ತಾರತಮ್ಯವು ಕೂಡ ಇರುವದಿಲ್ಲ; ತಾನೇ ತಾನಾಗಿ ಬೆಳಗುತ್ತಿರುವ, ಕಾಲ ದೇಶನಿಮಿತ್ತಗಳ ನೆಳಲು ಕೂಡ ಸೋಂಕದ ಯಾವದೊಂದು ಮಾರ್ಪಾಡೂ ಇಲ್ಲದೆ ತನಗೆರಡನೆಯದೇ ಇಲ್ಲದ ಸಚ್ಚಿದಾನಂದದ ಗಟ್ಟಿಯೊಂದೇ ನಿಜವಾಗಿ ಇರುವದು. ಆದರೂ ಈಗಿನ ನಮ್ಮ ವ್ಯವಹಾರದೃಷ್ಟಿಯಿಂದ ನಾವು ಅಂಥ ತತ್ತ್ವವನ್ನು ಮನಸ್ಸಿಗೆ ಹಚ್ಚಿಕೊಳ್ಳುವಾಗ ಈ ಅನುಸಂಧಾನವನ್ನೇ ನಿರ್ಗುಣಧ್ಯಾನವೆಂದು ಕರೆಯಬಹುದು.

ನಿರ್ಗುಣಧ್ಯಾನವನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಯಾರೊಬ್ಬರೂ ಹೇಳಿ ಕೊಡಲಾರರು. ಯಾರಾದರೂ ಅದರ ಕ್ರಮವನ್ನು ವರ್ಣಿಸುವದಕ್ಕೆ ತೊಡಗಿದರೆ ಸುಮ್ಮನೆ ಶಾಸ್ತ್ರದ ಶಬ್ದಗಳ ಗಡಿಬಿಡಿಯನ್ನು ಎಬ್ಬಿಸಿದಂತೆ ಆಗುವದೇ ಹೊರತು ಸಾಧಕರಿಗೆ ಅದರಿಂದ ಯಾವ ಸಹಾಯವೂ ದೊರೆತಂತೆ ಆಗುವದಿಲ್ಲ. ಪರಮಾತ್ಮನ ನಿರ್ಗುಣತತ್ತ್ವವು ಇಂಥದ್ದೆಂದು ಶಬ್ದದಿಂದ ಹೇಳುವದಕ್ಕೆ ಬರುವದಿಲ್ಲ. ಯಾವದೊಂದು ಪ್ರತ್ಯಯದಿಂದಲೂ ಹಿಡಿದುಕೊಳ್ಳುವದಕ್ಕೆ ಆಗುವದಿಲ್ಲ. ಆದರೂ ಯಾರು ಇಂದ್ರಿಯ ನಿಗ್ರಹವನ್ನು ಮಾಡಿಕೊಂಡು ಯಾವದೊಂದು ಇಷ್ಟವು ಅಥವಾ ಅನಿಷ್ಟವು ಬಂದೊದ ಗಿದರೂ ಮನಸ್ಸಿನಲ್ಲಿ ಏರಿಳಿತಗಳಿಲ್ಲದೆ ಸಕಲಜೀವರಿಗೂ ಹಿತವನ್ನೇ ಕೋರುತ್ತಿ ರುವರೋ ಅಂಥವರಿಗೆ ಮನಸ್ಸು ತನಗೆ ತಾನೇ ಒಳಸರಿದುಕೊಳ್ಳುವದು; ಉಪ್ಪಿನ ಹರಳನ್ನು ನೀರಿನಲ್ಲಿ ಅದ್ದಿದರೆ ಅದರಲ್ಲಿಯೇ ಕರಗಿಹೋಗುವಂತೆ ಪರಮಾತ್ಮನ ಅಮೃತ ಸನ್ನಿಧಿಯಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಆತನಲ್ಲಿಯೇ ಬೆರೆತುಕೊಂಡು ಮಿಗಿಲಿಲ್ಲದ ಆನಂದವನ್ನು ಕೊಡುವದು.

ಆದರೆ ದೇಹಾಭಿಮಾನವುಳ್ಳ ನಮ್ಮಂಥವರಿಗೆ ಈ ನಿರ್ಗುಣೋಪಾಸನೆಯು ದಕ್ಕುವದು ಕಷ್ಟ; ಸುಮ್ಮನೆ ಒಣಮಾತುಗಳಿಂದ ಕಾಲಹಾಕುವವರಿಗೆ ಅದು ದೊರಕಲೂ ಆರದು. ಯಾರು ಶ್ರದ್ಧಾಭಕ್ತಿಗಳಿಂದ ಪರಮೇಶ್ವರನ ಸಗುಣರೂಪವನ್ನು ಉಪಾಸನೆ ಮಾಡುತ್ತಿರು ವರೋ ಅವರಿಗೆ ಆ ದಯಾನಿಧಿಯ ಅನುಗ್ರಹದಿಂದ ಮನಸ್ಸು ಮೇಲಿನ ಅಂತಸ್ತನ್ನು ಏರುವದು. ಆಮೇಲೆ ಅವರಿಗೆ ನಾನು, ನೀನು, ಜಗತ್ತು–ಎಂಬ ಭೇದವೇ ಕಾಣದೆ ಎಲ್ಲೆಲ್ಲಿಯೂ ತುಂಬಿ ತುಳುಕಾಡುತ್ತಿರುವ ಪರಮಾತ್ಮನ ಅಮೃತಾನಂದಸಾಗರವೇ ತಾವೆಂಬ ಉನ್ನತವಾದ ಅನುಭವವೊಂದು ಕಾಣಿಸಿಕೊಳ್ಳುವದು.

ನಿರ್ಗುಣಧ್ಯಾನವೆಂಬುದು ಪರಿಪಕ್ವವಾದ ಒಂದು ಹಣ್ಣೆಂದು ಕಲ್ಪಿಸಿದರೆ ಆ ಹಣ್ಣಿನ ರಸವು ಮರದ ಬೇರಿನ ಮೂಲಕವೇ ಬಂದು ಮಾರ್ಪಾಡನ್ನು ಹೊಂದಿ ಕಾಣಿಸಿ ಕೊಂಡಿರುವದನ್ನು ನೆನಪಿನಲ್ಲಿಡಬೇಕು. ಸಗುಣಧ್ಯಾನವೇ ಇಲ್ಲಿ ಬೇರಿನ ಸ್ಥಾನದಲ್ಲಿರುವದು. ಹಣ್ಣು ಕೊಂಬೆಗಳಲ್ಲಿ ಬಿಡುವದಾದ್ದರಿಂದ ಅದಕ್ಕೆ ನೆಲದ ಕೆಳಕ್ಕಿಳಿಯುವ ಬೇರಿನಿಂದ ಯಾವ ಪ್ರಯೋಜನವೂ ಆಗಲಾರದೆಂದು ಭಾವಿಸಿ ಬೇರಿಗೆ ಕೊಡಲಿಯನ್ನು ಹಾಕಿ ಕೊಂಬೆಗೆ ನೀರೆರೆಯುವ ಮೂರ್ಖರಂತೆ ನಾವು ಸಗುಣಧ್ಯಾನವನ್ನು ತಿರಸ್ಕರಿಸಿ ನಿರ್ಗುಣದ ಒಣಮಾತುಗಳಿಂದ ಉಭಯಭ್ರಷ್ಟರಾಗಬಾರದು–ಎಂಬ ಎಚ್ಚರಿಕೆಯು ಮನ ದಲ್ಲಿದ್ದರೆ ಸಾಧಕನು ಒಂದಲ್ಲದಿದ್ದರೆ ಒಂದು ದಿನ ಧನ್ಯನಾಗುವನು. **ಸಂ–9, 55, 9, 135**

# ವೇದಾಂತವಿಹಿತಜ್ಞಾನ

ಉಪಾಸನಾತ್ಮಕವಾದ ಜ್ಞಾನವೇ ವೇದಾಂತದಲ್ಲಿ ವಿಹಿತವಾಗಿರುವದೆಂದು ಅನೇಕ ಆಚಾರ್ಯರುಗಳು ಅಭಿಪ್ರಾಯಪಟ್ಟಿರುವರು. ಶ್ರೀಭಾಷ್ಯದಲ್ಲಿ ರಾಮಾನುಜಾಚಾರ್ಯರವರು ಈ ವಿಷಯದಲ್ಲಿ ಬರೆದಿರುವದನ್ನು ಇಲ್ಲಿ ವಾಚಕರ ಅವಲೋಕನಕ್ಕೆ ತರುತ್ತೇವೆ.

"ಅವಿದ್ಯಾನಿವೃತ್ತಿಗಾಗಿ ವೇದಾಂತವಾಕ್ಯಗಳಲ್ಲಿ ವಿಧಿಸಲು ಹೊರಟಿರುವ ಜ್ಞಾನದ ಸ್ವರೂಪವೇನೆಂಬುದನ್ನು ಬಿಡಿಸಿ ತಿಳಿಯಬೇಕಾಗಿರುವದು. ಇದು ವಾಕ್ಯದಿಂದಾಗುವ ಬರಿಯ ವಾಕ್ಯಾರ್ಥದ ತಿಳಿವೋ ಅಥವಾ ಇದರ ಆಧಾರದ ಮೇಲೆ ಹುಟ್ಟುವ ಉಪಾಸನಾರೂಪವಾದ ಜ್ಞಾನವೋ? ವಾಕ್ಯದಿಂದ ಹುಟ್ಟುವ ಜ್ಞಾನವೇ ಇದೆನ್ನುವದಕ್ಕಿಲ್ಲ; ಏಕೆಂದರೆ ಇದು ವಿಧಿಸದೆ ಇದ್ದರೂ ವಾಕ್ಯದಿಂದಲೇ ಹುಟ್ಟಿಬಿಡುವದು. ಇದಲ್ಲದೆ ಇಷ್ಟು ಮಾತ್ರದಿಂದಲೇ ಅವಿದ್ಯೆಯು ಹೋದದ್ದು ಎಲ್ಲಿಯೂ ಕಂಡುಬರುವದಿಲ್ಲ.

'ಭೇದವಾಸನೆಯನ್ನು ಕಳೆಯದಿದ್ದರೆ ವಾಕ್ಯದಿಂದ ಅವಿದ್ಯೆಯನ್ನು ನೀಗುವ ಅರಿವು ಹುಟ್ಟುವದಿಲ್ಲ. ಇದಲ್ಲದೆ ಜ್ಞಾನವು ಹುಟ್ಟಿದರೂ ಎಲ್ಲರಿಗೂ ಕೂಡಲೆ ಭೇದಜ್ಞಾನವು ಹೋಗದಿದ್ದರೂ ದೋಷವಿಲ್ಲ; ಹೇಗೆಂದರೆ ಚಂದ್ರನು ಒಬ್ಬನೆಂದು ತಿಳಿದಮೇಲೂ (ಕಣ್ಣಿನ ದೋಷವಿರುವವನಿಗೆ) ಇಬ್ಬರು ಚಂದ್ರರ ಅರಿವು ಹೋಗಿರುವದಿಲ್ಲ. ಭೇದಜ್ಞಾನವು ಸಂಪೂರ್ಣವಾಗಿ ಹೋಗದಿದ್ದರೂ ಬೇರುಕಡಿದು ಹೋಗಿರುವದರಿಂದ ಇದರಿಂದ ಬಂಧವಾಗುವದಿಲ್ಲ' ಎಂದು ಹೇಳಲಾಗುವದಿಲ್ಲ; ಏಕೆಂದರೆ ಸಾಮಗ್ರಿ ಇದ್ದರೂ ಜ್ಞಾನವು ಹುಟ್ಟುವದಿಲ್ಲವೆನ್ನುವದು ಆಗುವದಿಲ್ಲ; ಏಕೆಂದರೆ ವಿರುದ್ಧವಾದ ಜ್ಞಾನದ ವಾಸನೆ ಇರುತ್ತಿದ್ದರೂ ತಿಳಿದವರು ಹೇಳುವ ವಾಕ್ಯ, ವಸ್ತುವಿನ ಹೆಗ್ಗುರುತು, ಮುಂತಾದವುಗಳಿಂದ ಅಜ್ಞಾನವನ್ನು ಹೋಗಲಾಡಿಸುವ ಜ್ಞಾನವು ಹುಟ್ಟುವದನ್ನು ಕಂಡಿದ್ದೇವೆ. ವಾಕ್ಯಾರ್ಥದ ಜ್ಞಾನವು ಉಂಟಾದರೂ ಅನಾದಿಯಾದ ತಪ್ಪುತಿಳಿವಿನ ವಾಸನೆಯಿಂದ ಸ್ವಲ್ಪಮಟ್ಟಿಗೆ (ಈ ಮಾತು ಜ್ಞಾನಿಗಳಿಗೂ ಅವಿದ್ಯಾಲೇಶವುಂಟೆಂಬ ಅದ್ವೈತವಾದಿಗಳನ್ನು ಕುರಿತು ಹೇಳಿದ್ದು) ಭೇದಜ್ಞಾನವು ಅನುಸರಿಸಿಕೊಂಡೇ ಇರುವದೆಂದು ನೀವು ಹೇಳುವದಕ್ಕಾಗಲಾರದು; ಏಕೆಂದರೆ ಭೇದಜ್ಞಾನಸಾಮಗ್ರಿಯಾದ ವಾಸನೆಯೆಂಬುದು ಮಿಥ್ಯೆಯಾದ್ದರಿಂದ ಜ್ಞಾನವು ಹುಟ್ಟುತ್ತಲೂ ಹೋಗಿಬಿಡುವದು. ಹಾಗೆ ಮಿಥ್ಯಾರೂಪವಾದದ್ದು ಜ್ಞಾನವಾದ ಮೇಲೂ ಹೋಗದೆ ಇದ್ದರೆ, ಅದನ್ನು ಹೋಗಲಾಡಿಸಲು ಮತ್ತೊಂದು ಯಾವದೂ ಇರುವದಿಲ್ಲವಾಗಿ ಈ ವಾಸನೆಯು ಎಂದಿಗೂ ಹೋಗದೆ ಇರಬೇಕಾಗಿರುವದು. ವಾಸನೆಯಿಂದಾದ ಭೇದಜ್ಞಾನವು ಬೇರುಕಡಿದು ಹೋಯಿತು, ಆದರೂ ಅನುಸರಿಸಿ ಬಂದಿರುವದು ಎಂಬುದು ಹುಡುಗಾಟಿಕೆಯ ಮಾತು. ಎರಡು ಚಂದ್ರವೆಂಬ ಜ್ಞಾನವೇ ಮುಂತಾದೆಡೆಯಲ್ಲಿಯಾದರೆ,

ಬಾಧಕವಾದ ಜ್ಞಾನವು ಇರುತ್ತಿದ್ದರೂ ತಪ್ಪು ತಿಳಿವಿಗೆ ಕಾರಣವಾಗಿರುವ ಕಣ್ಣಿನ ತಿಮಿರರೋಗವೇ ಮೊದಲಾದ ದೋಷವು ನಿಜವಾಗಿರುವದಾಗಿದ್ದು ಜ್ಞಾನದಿಂದ ಹೋಗತಕ್ಕದ್ದಲ್ಲವಾದ್ದರಿಂದ ಅದು ನಾಶವಾಗದೆ ಇರುವದು. ಆದ್ದರಿಂದ ಮಿಥ್ಯಾಜ್ಞಾನವು ಮತ್ತೂ ಇರುವದೇನೂ ವಿರೋಧವಲ್ಲ. (ರಜ್ಜುಸರ್ಪದೃಷ್ಟಾಂತದಲ್ಲಿ ರಜ್ಜು ಜ್ಞಾನವಾಗಲು) ಫಲಪ್ರಮಾಣದಿಂದ ಭಯಾದಿಕಾರ್ಯವು ಬಾಧಿತವಾಗುತ್ತದೆಯಾದ್ದರಿಂದ ಅದು ಇರುವದಿಲ್ಲ. ಇದೂ ಅಲ್ಲದೆ ಭೇದವಾಸನೆಯನ್ನು ಕಳೆದೇ ಜ್ಞಾನವುಂಟಾಗುವದೆಂದು ಅಂಗೀಕರಿಸುವರ ಮತದಲ್ಲಿ ಜ್ಞಾನವು ಹುಟ್ಟುವದೆಂಬುದೇ ಎಂದಿಗೂ ಆಗಲಾರದು; ಏಕೆಂದರೆ ಭೇದ ವಾಸನೆಯು ಅನಾದಿಕಾಲದಿಂದ ಕೂಡಿಹಾಕಿದ್ದಾದ್ದರಿಂದ ಅಪರಿಮಿತವಾಗಿರುವದು. ಇದಕ್ಕೆ ವಿರೋಧವಾದ ಭಾವನೆಯು ಬಹಳ ಸ್ವಲ್ಪವಾಗಿರುವದರಿಂದ ಇದನ್ನು ಕಳೆಯಲಾರದು.

ಆದ್ದರಿಂದ ವಾಕ್ಯಾರ್ಥಜ್ಞಾನಕ್ಕಿಂತ ಬೇರೆಯಾಗಿ 'ಧ್ಯಾನ, ಉಪಾಸನೆ', ಮುಂತಾದ ಶಬ್ದಗಳಿಂದ ಹೇಳಲ್ಪಡುವ ಜ್ಞಾನವೇ ವೇದಾಂತವಾಕ್ಯಗಳು ವಿಧಿಸಬೇಕೆಂಬುದು. ಆದ್ದರಿಂದಲೇ "ತಿಳಿದು ಪ್ರಜ್ಞೆಯನ್ನು ಮಾಡಬೇಕು" (ಬೃ) "ತಿಳಿದು ಜ್ಞಾನವನ್ನು ಮಾಡುತ್ತಾನೆ" (ಛಾಂ), "ಓಂ ಎಂದೇ ಆತ್ಮನನ್ನು ಧ್ಯಾನಿಸಿರಿ" (ಮುಂ), "ಆತನನ್ನು ಉಪಾಸನೆ ಮಾಡಿದರೆ ಮೃತ್ಯುವಿನ ಬಾಯಿಯಿಂದ ಬಿಡುಗಡೆ ಹೊಂದುವನು" (ಕ), "ಆತ್ಮನೆಂಬ ಲೋಕವನ್ನೇ ಉಪಾಸನೆ ಮಾಡಬೇಕು" (ಬೃ), "ಎಲೆ ಮೈತ್ರೇಯಿ, ಆತ್ಮನನ್ನೇ ಕಾಣಬೇಕು; ಕೇಳಬೇಕು, ತಿಳಿಯಬೇಕು, ಚೆನ್ನಾಗಿ ಧ್ಯಾನಿಸಬೇಕು." (ಬೃ)– ಇವೇ ಮುಂತಾದ ಶ್ರುತಿಗಳು ಈ ಅಭಿಪ್ರಾಯವನ್ನು ಹೇಳುತ್ತಿವೆ.

ಇಲ್ಲಿ "ಚೆನ್ನಾಗಿ ಉಪಾಸನೆ ಮಾಡಬೇಕು" ಮೊದಲಾದ ಶ್ರುತಿಯ ಅರ್ಥದಲ್ಲಿಯೇ "ತಿಳಿದು ವಿಜ್ಞಾನವನ್ನು ಮಾಡುತ್ತಾನೆ", "ತಿಳಿದು ಪ್ರಜ್ಞೆಯನ್ನು ಮಾಡಬೇಕು" ಮುಂತಾದ ವಾಕ್ಯಗಳಲ್ಲಿ ವಾಕ್ಯಾರ್ಥಜ್ಞಾನವು ಧ್ಯಾನಕ್ಕೆ ಬೇಕಾದದ್ದರಿಂದ "ತಿಳಿದು" ಎಂದು ಅನುವಾದ ಮಾಡಿ ಪ್ರಜ್ಞೆಯನ್ನು ಮಾಡಬೇಕು", "ವಿಜ್ಞಾನವನ್ನು ಮಾಡುತ್ತಾನೆ"– ಎಂದು ಧ್ಯಾನವನ್ನು ವಿಧಿಸಿರುತ್ತದೆ. "ಶ್ರವಣಮಾಡಬೇಕು" ಎಂಬುದು ಅನುವಾದವು; ಅಧ್ಯಯನವೆಂಬುದು ಅರ್ಥಕ್ಕಾಗಿರುವದರಿಂದ ವೇದವನ್ನು ಅಧ್ಯಯನಮಾಡಿದ ಪುರುಷನು ಪ್ರಯೋಜನ ವನ್ನುಂಟುಮಾಡುವ ಅರ್ಥವನ್ನು ಇದು ಹೇಳುವದೆಂದು ಕಂಡು, ಅದನ್ನು ನಿರ್ಣಯಿಸುವದಕ್ಕೆ ತಾನೇ ಹೊರಡುತ್ತಾನೆ. ಆದ್ದರಿಂದ ಶ್ರವಣವು ಪ್ರಾಪ್ತವೇ ಆಗಿರುವದು, ಶ್ರವಣ ಮಾಡಿದ್ದು ನಿಲ್ಲುವದಕ್ಕೇ ಮನನವಾದ್ದರಿಂದ "ಮನನ ಮಾಡಬೇಕು" ಎಂಬುದೂ ಅನುವಾದವೇ. ಆದ್ದರಿಂದ ಧ್ಯಾನವೊಂದನ್ನೇ ಇಲ್ಲಿ ವಿಧಿಸಿರುತ್ತದೆ. ಮುಂದೆ ಸೂತ್ರಕಾರರೂ "ಧ್ಯಾನವನ್ನು ಮತ್ತೆ ಮತ್ತೆ ಆವೃತ್ತಿ ಮಾಡಬೇಕು, ಏಕೆಂದರೆ ಹೀಗೆಂದು ಶ್ರುತಿಯಲ್ಲಿ ಉಪದೇಶವಿರುತ್ತದೆ" ಎಂದು ಹೇಳಿರುತ್ತಾರೆ.

ಹೀಗೆ ಮೋಕ್ಷಕ್ಕಾಗಿ ವಿಹಿತವಾಗಿರುವ ಜ್ಞಾನವೆಂಬುದು ಉಪಾಸನೆಯೇ ಎಂಬುದನ್ನು "ವಿದ್", "ಉಪಾಸ್"-ಎಂಬ ಧಾತುಗಳನ್ನು ಮಿಶ್ರಮಾಡಿ ಉಪಕ್ರಮೋಪಸಂಹಾರಗಳಲ್ಲಿ ಉಪಯೋಗಿಸಿರುವದರಿಂದ ನಿಶ್ಚಯಮಾಡಬಹುದು. ಹೇಗೆಂದರೆ "ಮನೋ ಬ್ರಹ್ಮೇತ್ಯುಪಾಸೀತ" (ಮನಸ್ಸನ್ನೇ ಬ್ರಹ್ಮವೆಂದು ಉಪಾಸನೆ ಮಾಡಬೇಕು) ಎಂಬಲ್ಲಿ "ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ" ("ಯಾವನು ಹೀಗೆಂದು ತಿಳಿಯುವನೋ ಅವನು ಕೀರ್ತಿ, ಯಶಸ್ಸು, ಬ್ರಹ್ಮವರ್ಚಸ್ಸು- ಇವುಗಳಿಂದ ಹೊಳೆಯುತ್ತಲೂ ತಪಿಸುತ್ತಲೂ ಇರುವನು") ಎಂದೂ "ಅವನಿಗೆ ತಿಳಿಯದು, ಏಕೆಂದರೆ ಅವನು ಪೂರ್ಣನಲ್ಲ-ಆತ್ಮನೆಂದೇ ಉಪಾಸನೆ ಮಾಡಬೇಕು" ಎಂದೂ, "ಯಾರು ಅದನ್ನು ತಿಳಿಯುವನೋ ಆತನೇ ಬಲ್ಲವನು, ಆತನೇ ಬಲ್ಲವನು, ಅವನನ್ನೇ ನಾನು ಈಗ ಹೇಳಿದ್ದು" ಎಂಬಲ್ಲಿ "ಸ್ವಾಮಿ, ತಾವು ಯಾವ ದೇವತೆಯನ್ನು ಉಪಾಸನೆ ಮಾಡುತ್ತೀರೋ ನನಗೆ ಅಪ್ಪಣೆಯಾಗಬೇಕು" ಎಂದೂ (ತಿಳಿಯುವದು ಉಪಾಸನೆ ಮಾಡುವದು-ಎರಡನ್ನೂ ಮಿಶ್ರಮಾಡಿ ಹೇಳಿರುತ್ತದೆ).

ಇದುವರೆಗೆ ಬರೆದಿರುವ ಭಾಷ್ಯದ ಮುಖ್ಯ ಆಶಯವೇನೆಂದರೆ, ವೇದಾಂತದಲ್ಲಿ ಜ್ಞಾನವನ್ನು ವಿಧಿಸಿರುವದು, ಅದು ವಾಕ್ಯಾರ್ಥಮಾತ್ರವಲ್ಲ. ಏಕೆಂದರೆ ವಾಕ್ಯದ ಅರ್ಥವು ತಾನೇ ಆಗುತ್ತದೆ. ಜ್ಞಾನಮಾತ್ರದಿಂದ ಯಾರಿಗೂ ಬಂಧನಾಶವಾಗುವದೂ ಇಲ್ಲ. ವಾಕ್ಯಾರ್ಥವೇ ಭೇದಜ್ಞಾನರೂಪವಾದ ಬಂಧವನ್ನು ಕಳೆಯುವದು ಎಂದು ಕೆಲವರು ಹೇಳುವರು. ಆದರೆ ವಾಕ್ಯಾರ್ಥವನ್ನು ಕೇಳಿದಮೇಲೂ ಭೇದಜ್ಞಾನವಿರುವದೆಂದು ಅವರೇ ಒಪ್ಪಿರುವದರಿಂದ ಅವರ ಮತವು ಆದರಣೀಯವಲ್ಲ. ಆದ್ದರಿಂದ ಉಪನಿಷತ್ತುಗಳಲ್ಲಿ ಧ್ಯಾನರೂಪವಾದ ಜ್ಞಾನವನ್ನೇ ವಿಧಿಸಿರುತ್ತದೆ. ಈ ಜ್ಞಾನವು ಧ್ಯಾನ ಅಥವಾ ಉಪಾಸನಾರೂಪವಾದದ್ದೆಂಬುದಕ್ಕೆ ಮತ್ತೊಂದು ಸಾಕ್ಷಿಯುಂಟು : ಜ್ಞಾನವಿಧಿ ಇರುವ ಅನೇಕ ಕಡೆಗಳಲ್ಲಿ ತಿಳಿವು (ವೇದನ) ಧ್ಯಾನ (ಉಪಾಸನಾ)-ಇವುಗಳನ್ನು ಹೇಳುವ ಮಾತುಗಳನ್ನು ಬೆರೆಸಿ ಉಪಕ್ರಮೋಪಸಂಹಾರಗಳಲ್ಲಿ ಹೇಳಿರುತ್ತದೆ. ಈ ಎಲ್ಲಾ ಕಾರಣಗಳಿಂದ ಧ್ಯಾನವೇ ಉಪನಿಷತ್ತುಗಳಲ್ಲಿ ವಿಹಿತವಾಗಿರುವ ಜ್ಞಾನವೆಂಬುದು ಸಿದ್ಧವಾಗುತ್ತದೆ. **ಸಂ-1, 189**

# ಮಾನಸಪೂಜೆ

ಮಾನಸಪೂಜೆಯನ್ನು ಮಾಡುವ ಬಗೆಯನ್ನು ವಿಷ್ಣುಪುರಾಣ, ಭಾಗವತ, ಸೂತ ಸಂಹಿತೆ-ಮುಂತಾದವುಗಳಲ್ಲಿ ವಿಸ್ತಾರವಾಗಿ ತಿಳಿಸಿರುತ್ತದೆ. ತನ್ನ ಶರೀರದೊಳಗಿನ ಹೃದಯಕಮಲವು ಮೇಲಕ್ಕೆದ್ದು ಅರಳಿರುವಂತೆ ಭಾವಿಸಿಕೊಂಡು ಅದರ ನಡುವೆ

ತನ್ನ ಇಷ್ಟಮೂರ್ತಿಯನ್ನು ಭಾವಿಸಿಕೊಳ್ಳಬೇಕು. ಆಯಾ ಮೂರ್ತಿಗೆ ಪುರಾಣಗಳಲ್ಲಿ ವರ್ಣಿತವಾಗಿರುವಂತೆ ಅವಯವಲಕ್ಷಣಗಳನ್ನೂ ಭೂಷಣಗಳನ್ನೂ ಕಲ್ಪಿಸಿಕೊಳ್ಳಬೇಕು. ಬಾಹ್ಯಾರ್ಚನೆಗೆ ಇಟ್ಟುಕೊಂಡ ಶ್ರೀಮೂರ್ತಿಯೂ ಚಿತ್ರವೂ ತನ್ನ ಮನಸ್ಸಿನ ಮೇಲೆ ಪರಿಣಾಮಕಾರಕವಾಗಿದ್ದರೆ ಬೇಗಬೇಗನೆ ಮಾನಸಮೂರ್ತಿಯ ಕಲ್ಪನೆಯೂ ವಶಕ್ಕೆ ಬರುತ್ತದೆ.

ಪರಮೇಶ್ವರನ ಮೂರ್ತಿಯನ್ನು ಮನಸ್ಸಿಗೆ ತಂದುಕೊಳ್ಳುವಾಗ ಪಾದಾದಿಯಾಗಿ ತಲೆಯವರೆಗೂ ಕಲ್ಪಿಸಿಕೊಳ್ಳುತ್ತಾ ಹೋಗಬೇಕೆಂದೂ ಒಂದೊಂದು ಅವಯವವೂ ಸ್ಥಿರವಾಗಿ ಚಿತ್ತದಲ್ಲಿ ನಿಂತಮೇಲೆಯೇ ಮೇಲುಮೇಲಿನ ಅವಯವವನ್ನು ಚಿಂತಿಸುತ್ತಾ ಹೋಗಬೇಕೆಂದೂ ಪುರಾಣಗಳಲ್ಲಿ ವರ್ಣಿಸಿರುತ್ತದೆ. ಹೀಗೆ ಮೂರ್ತಿಯು ಬೆಳೆಯುತ್ತಾ ಹೋದಂತೆಲ್ಲ, ಬೆಳೆಯುತ್ತಿರುವ ಕಟ್ಟಡವು ಅಥವಾ ಪೂರ್ಣವಾಗುತ್ತಿರುವ ಚಿತ್ರವು ಮನಸ್ಸಿಗೆ ಉಲ್ಲಾಸವನ್ನು ಕೊಡುವಂತೆ, ಮೂರ್ತಿಯು ಮನಸ್ಸನ್ನು ಸತ್ತ್ವಮಯವಾಗಿ ಮಾಡುತ್ತಾ ಹೋಗುತ್ತದೆ.

ಹೊರಗಿನ ವಿಗ್ರಹಾದಿಗಳಲ್ಲಿ ಮಾಡುವ ಪೂಜೆಗೂ, ಹೃದಯದಲ್ಲಿ ಮಾಡುವ ಮಾನಸಾರ್ಚನೆಗೂ ಒಂದು ಮುಖ್ಯವಾದ ತಾರತಮ್ಯವೇನೆಂದರೆ: ಹೊರಗಿನ ವಿಗ್ರಹಾದಿಗಳು ಶಿಲ್ಪ್ಯಾದಿಗಳಿಂದ ಏರ್ಪಟ್ಟವೆಂಬ ಭಾವನೆಯು ನಮಗೆ ಇದ್ದರೂ ಮಂತ್ರಾದಿಗಳಿಂದ ಸಂಸ್ಕೃತವಾದಮೇಲೆ ಇದು ಈಶ್ವರನ ಪ್ರತೀಕವೆಂಬ ಭಾವನೆಯೊಂದು ಮೊಳಕೆಯಾಗಿರುತ್ತದೆ. ಒಳಗಿನ ಮೂರ್ತಿಯು ಹಾಗಲ್ಲ, ಪರಮೇಶ್ವರನೇ ನಮ್ಮ ಮೇಲಿನ ಅನುಗ್ರಹದಿಂದ ನಮ್ಮ ಕಲ್ಪನೆಗೆ ತಕ್ಕಂತೆ ರೂಪವನ್ನು ಧರಿಸಿಕೊಂಡಿರುತ್ತಾನೆಂಬ ಭಾವನೆಯಿರುತ್ತದೆ. ನಮ್ಮ ಮನೆಗೆ ಯಾರಾದರೂ ಪೂಜ್ಯರಾದ ಮಹನೀಯರು ಬಂದರೆ ಅವರಲ್ಲಿ ಹೇಗೆ ಗೌರವಬುದ್ಧಿಯಿಂದ ನಡೆದುಕೊಳ್ಳುವೆವೋ ಮತ್ತು ಅವರಿಗೆ ಬೇಕಾದ ಉಪಚಾರಗಳನ್ನು ಆದರದಿಂದ ಸಲ್ಲಿಸುವೆವೋ ಅದರಂತೆಯೇ ಇಲ್ಲಿಯೂ ನಡೆಯಬೇಕು. ನೀರು ಗಟ್ಟಿಯಾಗಿ ಮಂಜಿನಗಡ್ಡೆಯಾಗುವಂತೆ ಪರಮೇಶ್ವರನು ತನ್ನ ಅವ್ಯಕ್ತಚಿತ್ಸ್ವ ರೂಪವನ್ನೇ ನಮಗಾಗಿ ಈ ದಿವ್ಯಸುಂದರರೂಪವಾಗಿ ಮಾರ್ಪಡಿಸಿಕೊಂಡು ನಮ್ಮನ್ನು ಅನುಗ್ರಹಿಸುತ್ತಿರುವನೆಂದು ಭಾವಿಸಿಕೊಂಡು ಆತನಲ್ಲಿ ಭಯಭಕ್ತಿಗಳಿಂದ ನಡೆದು ಕೊಳ್ಳಬೇಕು. ಆತನನ್ನು ಉತ್ತಮವಾದ ಆಸನದಲ್ಲಿ ಕುಳ್ಳಿರಿಸುವದು, ಪರಿಮಳಯುಕ್ತವಾದ ಎಣ್ಣೆಯನ್ನು ಒತ್ತಿ ಅಭ್ಯಂಗವನ್ನು ಮಾಡಿಸುವದು, ದಿವ್ಯಾಂಬರವನ್ನು ತೊಡಿಸುವದು, ಉತ್ತಮವಾದ ಪಾತ್ರೆಯಲ್ಲಿ ಮೃಷ್ಟಾನ್ನವನ್ನೂ, ಭಕ್ಷ್ಯಭೋಜ್ಯಗಳನ್ನೂ ಉಣಬಡಿಸುವದು, ಕೈಯನ್ನು ಸುಗಂಧಯುಕ್ತವಾದ ನೀರಿನಿಂದ ತೊಳೆದು, ತಾಂಬೂಲಪುಷ್ಪಾದಿಗಳನ್ನು ಸಮರ್ಪಿಸುವದು, ಅನರ್ಘವಾದ ಮಂಚದಮೇಲೆ ಮೃದುತರವಾದ ಶಯ್ಯೆಯಲ್ಲಿ

ಮಲಗಿಸಿ ಕಾಲುಗಳನ್ನು ಒತ್ತುವದು, ಬೀಸಣಿಗೆಯಿಂದ ಸೆಕೆಬೀಸುವದು–ಮುಂತಾದ ಉಪಚಾರಗಳನ್ನೆಲ್ಲ ಪ್ರೇಮದಿಂದ ಮಾಡಬೇಕು. ಕೊನೆಯಲ್ಲಿ ತನ್ನ ಹೃದಯದಲ್ಲಿರುವ ಅತ್ಯಂತ ರಹಸ್ಯವಾದ ಅಭಿಪ್ರಾಯಗಳನ್ನೆಲ್ಲ ಆತನ ಬಳಿಯಲ್ಲಿ ಬಿಚ್ಚಿ ಹೇಳಿಕೊಂಡು ಆತನು ಅನುಗ್ರಹಿಸಿ "ಇನ್ನು ಮುಂದೆ ನಿನ್ನ ಯೋಗಕ್ಷೇಮವನ್ನು ನಾನು ನೋಡಿ ಕೊಳ್ಳುವೆನು, ಅಂಜದಿರು" ಎಂದು ವಾಗ್ದಾನಮಾಡಿದಂತೆ ಭಾವಿಸಬೇಕು. ಬಳಿಕ ತನ್ನ ಹೃದಯದಲ್ಲಿಯೇ ಆತನು ತನ್ನ ಅವ್ಯಕ್ತರೂಪದಿಂದ ನೆಲಸಿದಂತೆ ಭಾವಿಸಿ ಈ ಆರಾಧನೆಯನ್ನು ಪರಿಸಮಾಪ್ತಿಗೊಳಿಸಬೇಕು.

ಸಗುಣಸಾಕಾರದ ಅರ್ಚನೆಯ ಸವಿಯನ್ನು ಕಾಣದವರಿಗೆ ಈ ಪೂಜೆಯು ಮೊದಮೊದಲು ಒಗ್ಗುವದಿಲ್ಲ. "ಸರ್ವಗತವಾದ ಪರಮೇಶ್ವರನಿಗೆ ಒಂದು ಆಕಾರದಲ್ಲಿ ಅಭಿಮಾನವು ಹೇಗೆ ಬಂದೀತು?" ಎಂದು ಅವರಲ್ಲಿ ಕೆಲವರು ಕೇಳುತ್ತಾರೆ. "ಆತನೇ ಸೃಷ್ಟಿಸಿರುವ ಗಂಧಪುಷ್ಪಾದಿಗಳನ್ನು ಆತನಿಗೆ ಅರ್ಪಿಸುವದು ಎಂಥ ಪೂಜೆ?" ಎಂದು ಮತ್ತೆ ಕೆಲವರು ಆಕ್ಷೇಪಿಸುತ್ತಾರೆ. "ಮನಸ್ಸಿನಲ್ಲಿ ಕಲ್ಪಿಸಿದ ಮೂರ್ತಿಗೆ ಮನಸ್ಸಿನಲ್ಲಿ ಕಲ್ಪಿಸಿದ ಪದಾರ್ಥಗಳನ್ನು ಅರ್ಪಿಸಿದರೆ ಈಶ್ವರನಿಗೇನಾಯಿತು?" ಎಂದು ಇನ್ನೂ ಕೆಲವರು ಹಾಸ್ಯಮಾಡುವರು. **ಸಂ–9, 2**

ನಿತ್ಯನಿರಾಕಾರನಾದ ಪರಮೇಶ್ವರನಿಗೆ ನಾವು ಪೂಜೆಗಾಗಿ ಕಲ್ಪಿಸಿಕೊಳ್ಳುವ ಆಕಾರದಲ್ಲಿ ಅಭಿಮಾನವು ಬಂದೀತೆ?–ಎಂಬ ಶಂಕೆಯು ಕೆಲವರಿಗೆ ಬರುವದುಂಟು. ನಿಜವಾಗಿ ಈಶ್ವರನಿಗೆ ಮನುಷ್ಯರಾದ ನಮಗಿರುವಂಥ ಅಭಿಮಾನವು ಏತರಲ್ಲಿಯೂ ಉಂಟಾಗುವಹಾಗಿಲ್ಲ. ಸಂಕಲ್ಪಮಾತ್ರದಿಂದ ಎಂಥ ದಿವ್ಯಸುಂದರ ವಿಗ್ರಹವನ್ನಾದರೂ ಕಲ್ಪಿಸಿಕೊಳ್ಳಬಲ್ಲ ಆ ಮಹಾಮಹಿಮನಿಗೆ ಇಂಥದ್ದೊಂದು ಆಕಾರವೇ ತನ್ನದು ಎಂಬ ಅಭಿಮಾನವು ಹೇಗೆತಾನೆ ಬಂದೀತು?

ಆದರೆ ಒಂದು ವಿಷಯವು ಮಾತ್ರ ನಿಶ್ಚಯ. ಆತನ ಸ್ವರೂಪವನ್ನು ಬಿಟ್ಟು ಯಾವ ಆಕಾರವೂ ಸ್ವತಂತ್ರವಾಗಿರಲಾರದು; ಆತನೇ ಸ್ವೇಚ್ಛೆಯಿಂದ ನಿರ್ಮಿಸಿಕೊಳ್ಳಲಿ, ಆತನು ಅನುಗ್ರಹಿಸಿರುವ ಮನಸ್ಸಿನ ಬಲದಿಂದ ನಾವೇ ಕಲ್ಪಿಸಿಕೊಳ್ಳಲಿ, ಯಾವ ಆಕಾರವಾದರೂ ಆತನಿಂದ ಹೊರಗಾಗಲಾರದು; ಆಕಾರಕ್ಕೆಲ್ಲ ತಿರುಳು ಕೊಡುವವನು ಆತನೇ. ಈ ದೃಷ್ಟಿಯಿಂದ ಸಕಲ ಚರಾಚರವಸ್ತುಗಳ ಆಕಾರವೂ ಆತನದೇ. ಆದ್ದರಿಂದ ದಯಾಮಯನಾದ ಮಹೇಶ್ವರನ ಭಕ್ತಿಯ ತಂಗಾಳಿಯು ಬೀಸಿತೆಂದರೆ ಆತನು ಅದಕ್ಕೆ ಅಧೀನನಾದಂತಾಗಿ ಭಕ್ತರು ಕಲ್ಪಿಸಿಕೊಳ್ಳುವ ಆಕಾರದಲ್ಲಿಯೇ ಸನ್ನಿಹಿತನಾಗುತ್ತಾನೆ. ಆದ್ದರಿಂದಲೇ ಮಹಾತ್ಮರಿಗೆ ಇಂಥಿಂಥ ಆಕಾರದಿಂದ ಆತನು ಪ್ರಸನ್ನನಾಗಿ ಸಂಭಾಷಣಾದಿಸೌಭಾಗ್ಯಗಳನ್ನು ಕೊಟ್ಟನೆಂದು ಶ್ರುತಿಸ್ಮೃತಿಪುರಾಣಗಳು ಹೇಳುತ್ತವೆ.

ಮೇಲೆ ಹೇಳಿದ ರೀತಿಯಿಂದ ಸಕಲವಸ್ತುಗಳ ಮೂಲಕಾರಣನೂ ಭಗವಂತನೇ ಆದರೆ ಆತನ ಪೂಜೆಗೆಂದು ನಾವು ಉಪಯೋಗಿಸುವ ಗಂಧಪುಷ್ಪಾದಿಗಳೂ ಆತನ ಸೃಷ್ಟಿಯೇ ಅಲ್ಲವೆ? ಹಾಗಾದರೆ ಆತನು ಸೃಷ್ಟಿಸಿರುವ ವಸ್ತುಗಳನ್ನೇ ಆತನಿಗೆ ಅರ್ಪಿಸುವದು ಎಂಥ ಪೂಜೆ?–ಎಂದು ಕೆಲವರು ಶಂಕಿಸಬಹುದು. ಆದರೆ ಭಗವಂತನು ಸೃಷ್ಟಿಸದೆ ಇರುವ ಯಾವ ಪದಾರ್ಥವನ್ನು ತಾನೆ ನಾವು ಆತನಿಗೆ ಅರ್ಪಿಸಬಲ್ಲೆವು? ಈ ಪ್ರಪಂಚದಲ್ಲಿ ನಮ್ಮದಾಗಿರುವದು ಯಾವದು ತಾನೆ ಇದೆ? ಯಾವದೊಂದೂ ಇಲ್ಲ. ಆದರೂ 'ನಾನು, ನನ್ನದು'–ಎಂಬ ಅಭಿಮಾನವು ನಮ್ಮನ್ನು ಬಾಧಿಸುತ್ತಿರುವದಷ್ಟೆ; ಇದನ್ನು ಕಳೆಯುವದಕ್ಕಾಗಿಯೇ, ಎಲ್ಲವೂ ಆ ಪರಮೇಶ್ವರನದೇ ಎಂದು ಮನಗಾಣುವದಕ್ಕಾಗಿಯೇ, ಅರ್ಚನಾಪದ್ಧತಿಯನ್ನು ದೊಡ್ಡವರು ಏರ್ಪಡಿಸಿರುತ್ತಾರೆ.

ಈ ಭೂಮಿಯಲ್ಲಿ ಎಂಥ ಚಕ್ರಾಧಿಪತಿಯೇ ಇದ್ದರೂ ಆತನು ಕೂಡ ಆ ಪರಮೇಶ್ವರನ ಅನುಗ್ರಹದಿಂದಲೇ ಐಶ್ವರ್ಯವನ್ನನುಭವಿಸುತ್ತಿರುತ್ತಾನೆ. ಹೀಗಿದ್ದರೂ ಅವನು ಇಹಸುಖಗಳ ಭೋಗದಿಂದ ಮತ್ತನಾಗಿ ಆ ಭಗವಂತನನ್ನು ಮರೆತು ದುಃಖಕ್ಕೆ ಈಡಾಗುವ ಸಂಭವವೇ ಹೆಚ್ಚಾಗಿರುತ್ತದೆ. ಆದ್ದರಿಂದ ಅವನು ಕೂಡ ತನ್ನ ವಶದಲ್ಲಿರುವ ಅತ್ಯಂತ ಅನರ್ಘವಾದ ಪದಾರ್ಥಗಳನ್ನೆಲ್ಲ ಭಗವಂತನಿಗೆ ಅರ್ಪಿಸಿ ಆತನ ಪ್ರಸಾದ ವಾಗಿಯೇ ಅಂದಂದಿನ ಸುಖವನ್ನು ಅನುಭವಿಸುತ್ತಾಬರಬೇಕು. ಹೀಗಿರುವಲ್ಲಿ ಕ್ಷುದ್ರ ಭೋಗಗಳನ್ನು ಅನುಭವಿಸುತ್ತಿರುವ ಸಾಮಾನ್ಯರ ವಿಷಯದಲ್ಲಿ ಹೇಳಬೇಕಾದದ್ದೇನು? ಮನುಷ್ಯಮಾತ್ರನಾದವನು ತನ್ನ ಸರ್ವಸ್ವವೂ ನಿಜವಾಗಿ ಆ ಪರಮೇಶ್ವರನದೇ ಎಂಬುದನ್ನು ಅನವರತವೂ ಚಿಂತಿಸುವದೇ ಶ್ರೇಯಸ್ಕರವು; ವ್ಯವಹಾರದಲ್ಲಿ ಇದು ಯಾವಾಗಲೂ ದಕ್ಕಲಾರದಾದ್ದರಿಂದ ಕ್ಲಿಪ್ತಕಾಲಗಳಲ್ಲಾದರೂ ಇಂಥ ಚಿಂತನೆಯನ್ನು ಮಾಡುವದು ಅತ್ಯವಶ್ಯವಾಗಿರುತ್ತದೆ. ಹೀಗೆ ನೋಡಿದರೆ ನಾನುನನ್ನದೆಂಬ ಬುದ್ಧಿಯನ್ನು ಮಟ್ಟುಮಾಡಿಕೊಳ್ಳುವದಕ್ಕೆ ಈ ಅರ್ಚನೆಯೇ ಮೊದಲನೆಯ ಮೆಟ್ಟಲಾಗಿರುವದೆಂಬುದು ಸ್ಪಷ್ಟವಾಗುತ್ತದೆ.

ಸಾಧಕನಾದವನು ಈ ಒಣಚರ್ಚೆಯಲ್ಲಿ ಸಿಕ್ಕಿಕೊಳ್ಳುವದಕ್ಕಿಂತ ತನಗೆ ಇಷ್ಟವಾದ ಯಾವದಾದರೊಂದು ಆಕಾರವನ್ನು ಆರಿಸಿಕೊಂಡು ಅದಕ್ಕೆ ಸಂಬಂಧವಾದ ಭಗವಂತನ ದಿವ್ಯಕರ್ಮಗಳನ್ನೂ ಲೀಲೆಗಳನ್ನೂ ಮನಸ್ಸಿಗೆ ತಂದುಕೊಳ್ಳುತ್ತಾ ಅದನ್ನು ಹೊರಗೂ ತನ್ನ ಹೃದಯದಲ್ಲಿಯೂ ಪೂಜಿಸುತ್ತಾಬರಬೇಕು. ಪೂಜೆಗೆ ಭಾವವೇ ಮುಖ್ಯವು; ಆದ್ದರಿಂದ ಇಷ್ಟದೇವತೆಗೂ ತನಗೂ ಬೇಕು. ಪೂಜೆಗೆ ಭಾವವೇ ಮುಖ್ಯವು; ಆದ್ದರಿಂದ ಇಷ್ಟದೇವತೆಗೂ ತನಗೂ ಸಂಬಂಧವನ್ನುಂಟುಮಾಡುವ ಭಾವವನ್ನು ಯಾವಾಗಲೂ ಇಟ್ಟುಕೊಳ್ಳಬೇಕು. ಸರ್ವವ್ಯಾಪಿಯಾದ ಪರಮೇಶ್ವರನು ತನ್ನ ಅತ್ಯಂತಮಹಿಮೆಯಿಂದಲೂ

ಅಪಾರ ಕರುಣೆಯಿಂದಲೂ ಈ ರೂಪಿಯಿಂದ ನಿಜವಾಗಿಯೇ ಸನ್ನಿಹಿತನಾಗಿರುವನೆಂಬ ಮನೋಭಾವವನ್ನು ದಿನದಿನಕ್ಕೆ ಹೆಚ್ಚಿಸಿಕೊಳ್ಳಬೇಕು. ತನ್ನ ರಹಸ್ಯವಾದ ಕಷ್ಟಸೌಖ್ಯಗಳನ್ನು ಕುರಿತು ಆತನ ಸನ್ನಿಧಿಯಲ್ಲಿ ಹೇಳಿಕೊಳ್ಳುವದನ್ನು ಅಭ್ಯಾಸಮಾಡಬೇಕು. ಆಗ ಅರ್ಚನೆಯ ಸವಿಯು ಗೊತ್ತಾಗುವದಕ್ಕೆ ಮೊದಲಾಗುತ್ತದೆ, ಆಗ ಧ್ಯಾನದ ಮೆಟ್ಟಲಿಗೇರುವ ಯೋಗ್ಯತೆಯು ಬರುತ್ತದೆ.

ಸಾಧಕಗಣ, ಪರಮೇಶ್ವರನ ಆಕಾರದಲ್ಲಿ ಭೌತಿಕತ್ವಬುದ್ಧಿ, ಕಲ್ಪಿತತ್ವ ಬುದ್ಧಿ-ಮುಂತಾದವುಗಳು ಉಂಟಾಗುವದಕ್ಕೆ ಮಹಾತ್ಮವಾದವೂ ನಾಸ್ತಿಕ್ಯವೂ ಕಾರಣವಾಗಿರುತ್ತವೆ. ಶ್ರದ್ಧೆಯಿಂದ ಬಾಹ್ಯಾರ್ಚನೆಯನ್ನು ಮಾಡಿರಿ, ಆಮೇಲೆ ಅಂತರಪೂಜೆಗೂ ಅಧಿಕಾರವನ್ನು ಸಂಪಾದಿಸಿಕೊಳ್ಳಿರಿ, ಚಿತ್ತಶುದ್ಧಿಯನ್ನು ಪಡೆದು ತಚ್ಚಿತ್ತರಾಗಿ ಆ ಪರಮೇಶ್ವರನ ಪಾದಾರವಿಂದಗಳ ಮೇಲೆ ಬಿದ್ದು ಹೊರಳಾಡುವ ಆನಂದದ ಪ್ರೇಮವಿಕಾರದ ಸುಖವನ್ನು ಅನುಭವಿಸಿರಿ ! **ಸಂ-9, 43**

## ಭಜನ

ಭಜನವೆಂಬುದು ಅಧ್ಯಾತ್ಮಸಾಧನಗಳಲ್ಲಿ ಬಹುಮುಖ್ಯವಾದದ್ದು. ಭಜನೆ ಎಂದರೆ ಸೇವಿಸುವದೆಂದರ್ಥ. ಆದ್ದರಿಂದ ಭಗವಂತನಲ್ಲಿಯೇ ಪ್ರೇಮದಿಂದ ಮನಸ್ಸು ನಿಲ್ಲುವಂತೆ ಮಾಡುವ ಸಾಧನವೆಲ್ಲ ಒಂದರ್ಥದಲ್ಲಿ ಭಜನೆಯೇ ಆಗಿರುತ್ತದೆ. ಭಜನೆಯ ಸಂಪರ್ಕವಿಲ್ಲದ ಸಾಧನವು ಅಧ್ಯಾತ್ಮಸಾಧನವೇ ಆಗಲಾರದು.

ಆದರೆ ಭಗವಂತನು ಸರ್ವವ್ಯಾಪಿಯು, ಸರ್ವಶಕ್ತಿನು, ಸರ್ವಜ್ಞನು, ದಯಾಘನನು, ಭಕ್ತರನ್ನು ಉದ್ಧರಿಸುವದೇ ಆತನ ಬಿರಿದು-ಎಂದು ನೆರೆನಂಬಿ ಭಗಬಂತನಲ್ಲಿ ತನ್ನ ಸ್ಥಿತಿಯನ್ನು ಅರಿಕೆಮಾಡುವದು, ತನ್ನ ತಪ್ಪುಗಳಿಗೆ ಆತನ ಕ್ಷಮೆಯನ್ನೂ ತನ್ನ ಸತ್ಪ್ರಯತ್ನಗಳಿಗೆ ಆತನ ನೆರವನ್ನು ಬೇಡುವದು, ಆತನು ಇಲ್ಲಿಯೇ ಈಗಲೇ ಸನ್ನಿಹಿತನಾಗಿ ತನ್ನ ಮೊರೆಯನ್ನು ಕೇಳಿ ತನ್ನನ್ನು ರಕ್ಷಿಸುವನೆಂದು ದೃಢವಾದ ವಿಶ್ವಾಸವಿಟ್ಟಿರುವದು-ಇವೆಲ್ಲ ವಿಶೇಷವಾದ ಅರ್ಥದಲ್ಲಿ ಭಜನೆಯೆನ್ನಿಸುವವು.

ಪ್ರತಿದಿನವೂ ಭಗವಂತನನ್ನು ಭಾವಭಕ್ತಿಯಿಂದ ಭಜಿಸಿರಿ. ಎಲ್ಲೆಲ್ಲಿಯೂ ಕಾಣುತ್ತಿರುವ ಜೀವರುಗಳು ಈಶ್ವರನ ಕಲೆಯೆಂದೇ ನಂಬಿ ಅವರನ್ನು ಸಂತೋಷಗೊಳಿಸುವದು ಈಶ್ವರನ ಭಜನೆಯೆಂದೇ ತಿಳಿದು ವ್ಯವಹರಿಸಿರಿ. ಸಾಯಂಕಾಲ ವಿಶೇಷರೀತಿಯಿಂದ ಭಗವಂತನನ್ನು ಮನಸ್ಸಿಗೆ ತಂದುಕೊಂಡು ಭಜಿಸಿರಿ. ಈ ಭಜನೆಯಿಂದ ಸರ್ವದಿಕ್ಕುಗಳೂ ಸುಖಮಯವಾಗುವವು.

ಭಗವಂತನಲ್ಲಿ ಏನನ್ನು ಬೇಡಬೇಕು? ಆತನನ್ನು ಹೇಗೆ ಸ್ತೋತ್ರಮಾಡಬೇಕು? ಆತನ ಉಪಕಾರವನ್ನು ಹೇಗೆ ನೆನೆಯಬೇಕು?– ಎಂಬ ಪ್ರಶ್ನೆಗಳು ನಿಮ್ಮನ್ನು ಪೀಡಿಸುತ್ತಿರಬಹುದು. ಭಕ್ತರಾದವರು ಆಗಲೆ ಮಾಡಿರುವ ಸ್ತೋತ್ರಗಳನ್ನು ಮೊದಲು ಕಂಠಪಾಠ ಮಾಡಿಕೊಳ್ಳಿರಿ; ಸಾಧುಗಳು ಹಾಡಿರುವ ಕೀರ್ತನೆಗಳನ್ನೂ ಅಭಂಗಗಳನ್ನೂ ಸುಳಾದಿಗಳನ್ನೂ ಅರ್ಥಸಹಿತವಾಗಿ ಅನುಸಂಧಾನಮಾಡಿರಿ. ಈ ಸ್ತೋತ್ರಗಳು, ಹಾಡುಗಳು, ಕೀರ್ತನೆಗಳು, ಅಭಂಗಗಳು, ಪದಗಳು ಪದ್ಯಗಳು–ಇವುಗಳನ್ನು ನಿಮ್ಮವೆಂದೇ ಭಾವಿಸಿಕೊಂಡು ಭಗವಂತನನ್ನು ಪ್ರತಿದಿನವೂ ಸಾಯಂಕಾಲದಲ್ಲಿ ಕೊಂಡಾಡಿರಿ. ನಿಮ್ಮ ಹೃದಯದಲ್ಲಿ ಪ್ರೇಮರಸವು ಉಕ್ಕುವದು. ಪರಮೇಶ್ವರನ ಕರುಣದಿಂದ ಆತನನ್ನು ಹೊಗಳಿ ಸುಖಿಸುವ ಮಾರ್ಗವು ಮನಸ್ಸಿಗೆ ಗೋಚರವಾಗುವದು. ಭಜನೆಯ ಆನಂದವು ದಕ್ಕುವದು. ಸಂ–13, 275

# ಸಮಾಧಿ

ಸಮಾಧಿಯೆಂಬ ಮಾತಿಗೆ 'ಚೆನ್ನಾಗಿ ಇಟ್ಟುಕೊಳ್ಳುವದು' ಎಂದು ಅಕ್ಷರಾರ್ಥವಾಗುತ್ತದೆ. ಮನಸ್ಸು ಎಲ್ಲಿದ್ದರೆ ಅದನ್ನು ಸರಿಯಾಗಿ ಅಲುಗಾಡದಂತೆ, ಇಟ್ಟುಕೊಂಡಂತೆ ಆದೀತು?– ಎಂದು ಸಾಧಕರು ಕೇಳುವದು ಒಂದು ಹೆಚ್ಚಿನ ಪ್ರಶ್ನೆಯಾಗಿದೆ. ಮನಸ್ಸನ್ನು ಹೇಗೆ ಹಿಡಿದು ನಿಲ್ಲಿಸಬೇಕು?–ಎಂಬ ಪ್ರಶ್ನೆಗಿಂತಲೂ ಇದು ಮೇಲ್ತರದ್ದಾಗಿರುತ್ತದೆ. ಏಕೆಂದರೆ ಮನಸ್ಸೆಂಬುದು ಹಿಡಿತಕ್ಕೆ ಸಿಕ್ಕುವ ವಸ್ತುವಲ್ಲ; ಗಾಳಿಯನ್ನು ಮೂಟೆಕಟ್ಟಬಹುದು, ಆದರೆ ಮನಸ್ಸನ್ನು ಹಿಡಿದು ನಿಲ್ಲಿಸುವದೆಂಬುದು ಆಗದಮಾತು. ಮನಸ್ಸೆಂದರೇ ಯಾವಾಗಲೂ ಮನನಮಾಡುತ್ತಿರುವದು, ಬಗೆಬಗೆಯ ವಿಕಲ್ಪಗಳನ್ನು ಮಾಡುತ್ತಿರುವದು; ಹಾಗೆ ಮಾಡದೆ ಇದ್ದರೆ ಅದು ಮನಸ್ಸೇ ಅಲ್ಲ.

ಆದರೆ ತತ್ತ್ವವನ್ನು ವಿಚಾರಮಾಡುವದಕ್ಕೆ ಹೊರಟವರು ಶಾಸ್ತ್ರವನ್ನೂ ಗುರುಬೋಧೆಯನ್ನೂ ಅನುಸರಿಸಿ ಇಂಥ ಸ್ವಭಾವದ ಮನಸ್ಸನ್ನು ಕೂಡ ಅಮನಸ್ಸಾಗಿ ಮಾಡಿಕೊಳ್ಳುವದಕ್ಕೆ ಬರುತ್ತದೆ. ಶಾಸ್ತ್ರದಲ್ಲಿ ಆತ್ಮತತ್ತ್ವವೊಂದೇ ಪರಮಾರ್ಥಸತ್ಯವೆಂಬುದು ಹೇಗೆಂಬುದನ್ನು ತಿಳಿಸಿಕೊಟ್ಟಿರುತ್ತದೆ; ಅನುಭವಿಗಳಾದ ಆಚಾರ್ಯರೂ ಇದು ಹೇಗೆಂಬುದನ್ನು ಅರಿತು ಉಪದೇಶಮಾಡುತ್ತಿರುವರು. ಈ ಶಾಸ್ತ್ರಾಚಾರ್ಯರುಗಳ ಬೋಧೆಯನ್ನು ಅನುಸರಿಸಿ ಮನಸ್ಸನ್ನು ಆತ್ಮತತ್ತ್ವದ ಪರಿಶೀಲನೆಯಲ್ಲಿ ತೊಡಗಿಸಿದರೆ ಪರಮೇಶ್ವರನ ಅನುಗ್ರಹದಿಂದ ಅದು ಆತ್ಮತತ್ತ್ವದಲ್ಲಿಯೇ ಒಂದಾಗಿಬಿಡುತ್ತದೆ. ಅಂದಿನಿಂದ ಸಾಧಕನ ಮನಸ್ಸು 'ಸಮಾಹಿತ'ವಾಯಿತು ಎನ್ನಬಹುದು.

ಕೂಟಸ್ಥನಿತ್ಯನಾದ ಪರಮಾತ್ಮನಲ್ಲಿ ಹೀಗೆ ಒಂದಾದ ಮನಸ್ಸು ಮತ್ತೂ ವ್ಯವಹಾರ ದೃಷ್ಟಿಯಿಂದ ಬೇರೆಯಾಗಿ ತೋರುತ್ತಿರಬಹುದು. ಹಗ್ಗದಲ್ಲಿ ಭ್ರಾಂತಿಯಿಂದ ತೋರುತ್ತಿದ್ದ

ಹಾವು ಹಗ್ಗದಲ್ಲಿಯೇ ಒಂದಾಗಿಬಿಟ್ಟಮೇಲೂ ಹಗ್ಗವು ಹಾವೆಂದು ಅಕಸ್ಮಾತ್ತಾಗಿ ತೋರಬಹುದು; ಆದರೆ ಅದು ಹಗ್ಗವೆಂಬ ನಿಶ್ಚಯವು ಆಗಿಬಿಟ್ಟರುವವನಿಗೆ ಆ ಹಾವಿನ ಪ್ರತೀತಿಯೇನೂ ಅನರ್ಥವನ್ನುಂಟುಮಾಡಲಾರದಲ್ಲವೆ? ಹಾಗೆಯೇ ಯಾವನಿಗೆ ಮನಸ್ಸು ಅಮನಸ್ಸಾಗಿ ಆತ್ಮನಲ್ಲಿ ಒಂದಾಗಿಬಿಟ್ಟಿರುವದೋ ಅವನ ಮನಸ್ಸು ಇನ್ನುಮುಂದೆ ಎಂದೆಂದಿಗೂ ಸಮಾಧಿಯಲ್ಲಿರುವದು; ಎಂದರೆ ಅದು ಮುನ್ನಿನಂತೆ ವಿಷಯವಿಕಲ್ಪವನ್ನು ಮಾಡಲಾರದು. ಕಟ್ಟಿಗೆಯನ್ನು ಸುಟ್ಟ ಬೆಂಕಿಯಂತೆ ಅದು ಆತ್ಮನಲ್ಲಿಯೇ ಶಾಂತವಾಗಿ ನಿಂತಿರುತ್ತದೆ. ಇಂಥ ಸ್ಥಿತಿಯು ನಿತ್ಯಸಿದ್ಧವಾದ ಸಹಜಸಮಾಧಿಯೆನಿಸುವದು. ಆತ್ಮನಲ್ಲಿ ನೆಲೆನಿಂತಾಗ ಮಾತ್ರ ಈ ಸಮಾಧಿಯುಂಟಾಗುವದು ಎಂದು ತಿಳಿಸುವದಕ್ಕೆ ಆತ್ಮನನ್ನೂ 'ಸಮಾಧಿ' ಎಂಬ ಹೆಸರಿನಿಂದಲೇ ಬಲ್ಲವರು ಕರೆಯುವರು.

## ನಿಜವಾದ ಸಮಾಧಿಯೆಂದರೆ ಯಾವದು?

(ಮೂಲ : ಶ್ರೀ ಸ್ವಾಮಿ ಶಿವಾನಂದ ಸರಸ್ವತಿಗಳವರು) : ಸಮಾಧಿಯಲ್ಲಿ 'ಜಡ ಸಮಾಧಿ', 'ಚೈತನ್ಯ ಸಮಾಧಿ'-ಎಂದು ಎರಡು ಬಗೆಯುಂಟು. ಸಮಾಧಿಯೆಂದರೆ ಕೌಪೀನವನ್ನು ಧರಿಸಿ, ಪದ್ಮಾಸನದಲ್ಲಿ ಕುಳಿತು, ಉಸಿರನ್ನು ಪೂರ್ತಿಯಾಗಿ ಬಿಗಿಹಿಡಿದು, ಬಾಹ್ಯಭಾನವು ಸಂಪೂರ್ಣವಾಗಿ ಹೋಗಿರುವ ಸ್ಥಿತಿಯನ್ನು ಪಡೆಯುವುದು-ಎಂಬುದೇ ವಾಡಿಕೆಯಾಗಿರುವ ನಂಬಿಕೆ. ಸಾಮಾನ್ಯ ಜನರ ತಿಳಿವಳಿಕೆ ಹೇಗಿರುವದೆಂದರೆ, ಸಮಾಧಿಯನ್ನು ಪಡೆದಾತನಿಗೆ ಹೊರಗಿನ ಅರಿವು ಇರಲೇಬಾರದು, ಅವನ ಮೈಯನ್ನು ಚಾಕುವಿನಿಂದ ತಿವಿದರೂ ಅವನಿಗೆ ಅದರ ಅರಿವಾಗಬಾರದು. ಇಂಥ ಸಮಾಧಿಗಳೂ ನಿಜವಾಗಿಯೂ ಉಂಟು; ಆದರೆ ಅವುಗಳೆಲ್ಲ ಖೇಚರಿ ಮುದ್ರೆ, ಕುಂಭಕ ಪ್ರಾಣಾಯಾಮ-ಮುಂತಾದ ಹಠಯೋಗಕ್ರಿಯೆಗಳಿಂದ ದೊರಕುವ ಜಡಸಮಾಧಿಗಳು.

ಇಂಥ ಸಮಾಧಿಗಳಲ್ಲಿ ಪ್ರಾಣವನ್ನು ಒಂದಾನೊಂದು ಚಕ್ರದಲ್ಲಿ ನಿಲ್ಲಿಸಿಕೊಂಡಿರುತ್ತಾರೆ. ತತ್ಕಾಲಕ್ಕೆ ಸಾಧಕನು ಸತ್ತಂತಯೇ ಇರುತ್ತಾನೆ, ಅದೊಂದು ಬಗೆಯ ದೀರ್ಘನಿದ್ರೆ ಯಾಗಿರುತ್ತದೆ. ಈ ಸಮಾಧಿಗಳಿಂದ ಯಾವ ಪ್ರಯೋಜನವೂ ಇರುವದಿಲ್ಲ. ಏಕೆಂದರೆ ಇವುಗಳಲ್ಲಿ ಸಂಸ್ಕಾರಗಳಾಗಲಿ, ವಾಸನೆಗಳಾಗಲಿ ಆತ್ಯಂತಿಕವಾಗಿ ದಗ್ಧವಾಗುವದೇ ಇಲ್ಲ. ಈ ಬಗೆಯ ಸಮಾಧಿಯಲ್ಲಿ ಪೂರ್ಣಪ್ರಜ್ಞೆಯೂ ಇರುವದಿಲ್ಲ. ಸಮಾಧಿಯಿಂದ ಇಳಿದುಬಂದರೆ ಆ ಹಳೆಯ ಸಂಸ್ಕಾರಗಳೇ, ವಾಸನೆಗಳೇ, ಇದ್ದುಕೊಂಡಿರುತ್ತವೆ; ಅತೀಂದ್ರಿಯವಾದ ಅರಿವೇನೂ ಉಂಟಾಗಿರುವದಿಲ್ಲ. ಇದೊಂದು ಬಗೆಯ ಪೈಲವಾನರ ಆಟ, ಒಂದು ಬಗೆಯ ಆಧ್ಯಾತ್ಮಿಕ ಕಸರತ್ತು. ಇಂಥ ಸಮಾಧಿಗಳಿಂದ ಮುಕ್ತಿಯು ದೊರಕಲೇ ಆರದು. ಪ್ರಾಪಂಚಿಕರು ಇಂಥ ಚಮತ್ಕಾರಗಳನ್ನು ಕಂಡು ಮರುಳಾಗುತ್ತಾರೆ.

ನಿಜವಾದ ಸಮಾಧಿ ಎಂಬುದು ಇದಕ್ಕಿಂತ ಅತ್ಯಂತ ಭಿನ್ನವಾಗಿರುತ್ತದೆ. ಇದರಲ್ಲಿ ಹೊಸದಾದ ಅತೀಂದ್ರಿಯಾನುಭವವುಂಟಾಗಿರುತ್ತದೆ. ಎಲ್ಲಾ ಬಗೆಯ ಸಂಶಯಗಳೂ, ಭ್ರಾಂತಿಯೂ, ಅವಿದ್ಯೆ, ಕಾಮ, ಕರ್ಮ–ಎಂಬ ಗ್ರಂಥಿತ್ರಯವೂ ಜ್ಞಾನಾಗ್ನಿಯಿಂದ ನಾಶವಾಗಿಹೋಗುತ್ತವೆ. ಸರ್ವವಾಸನೆಗಳೂ, ಸಂಸ್ಕಾರಗಳೂ ಆತ್ಯಂತಿಕವಾಗಿ ಹುರಿದ ಬೀಜವಾಗಿಬಿಡುತ್ತವೆ. ಅದರಿಂದ ಪೂರ್ಣವಾದ ಅಭಯವೂ, ಮನಸ್ಸಮಾಧಾನವೂ ದೊರಕುತ್ತವೆ, ಈ (ಸ್ಥಿತಪ್ರಜ್ಞ) ಸ್ಥಿತಿಯನ್ನು ಭಾಗವತದಲ್ಲಿಯೂ, ಗೀತೆಯ ಎರಡನೆಯ ಅಧ್ಯಾಯದಲ್ಲಿಯೂ ವರ್ಣಿಸಿರುತ್ತದೆ.

ಈ ಸಮಾಧಿಸ್ಥಿತಿಯನ್ನು ವ್ಯವಹಾರದಲ್ಲಿಯೂ ಇಟ್ಟುಕೊಂಡಿರಬಹುದು. ಆಗ ಮನಸ್ಸೂ, ಶರೀರವೂ ಸರ್ವರ ಹೃದಯದಲ್ಲಿ ಕುಳಿತಿರುವ ಪರಮಾತ್ಮನ ಸೇವೆಗೆ ವಿನಿಯೋಗವಾಗುತ್ತವೆ. ಶ್ರೀ ಶಂಕರಭಗವತ್ಪಾದರು, ಶ್ರೀಕೃಷ್ಣಭಗವಂತ, ಶ್ರೀರಾಮಚಂದ್ರ– ಇವರು ವ್ಯವಹಾರದಲ್ಲಿರುವಾಗಲೂ ಬ್ರಹ್ಮಸ್ಥಿತಿಯನ್ನು ಬಿಟ್ಟು ಒಂದಿಷ್ಟೂ ಕದಲಲಿಲ್ಲ, ಜನಕ ಚಕ್ರವರ್ತಿಯು ರಾಜ್ಯಭಾರವನ್ನು ಮಾಡುವಾಗಲೂ ನಿಜವಾದ ಸಮಾಧಿಯನ್ನು ಅನುಭವಿಸುತ್ತಿದ್ದನು; ಅವನಿಗೆ ಒಂದು ಕ್ಷಣವೂ ಬ್ರಹ್ಮದೃಷ್ಟಿಯು ತಪ್ಪುತ್ತಿರಲಿಲ್ಲ. ಒಂದಾನೊಂದು ಪರೀಕ್ಷಾಕಾಲದಲ್ಲಿ ಅವನು "ಇಡಿಯ ಮಿಥಿಲಾನಗರವೇ ಸುಟ್ಟು ಬೂದಿಯಾದರೂ ನನ್ನದೇನೂ ಹೋಗಲಾರದು, ನನಗೆ ಅನಂತವೂ, ಅವ್ಯಯವೂ ಆದ ಆತ್ಮವಿತ್ತವಿರುವದು." ಎಂದನಂತೆ! ಯಾವಾತನು ಹೀಗೆ ಸಮಾಧಿನಿಷ್ಠ ನಾಗಿರುವನೋ ಅವನು ಮನಸ್ಸನ್ನೂ, ಶರೀರವನ್ನೂ ಸಮತೆಯಲ್ಲಿಟ್ಟುಕೊಂಡು ಅವುಗಳನ್ನು ಆತ್ಮಭಾವದಿಂದ ಜನತೆಯ ಸೇವೆಯನ್ನು ಮಾಡುವದಕ್ಕೇ ವಿನಿಯೋಗಿಸು ತ್ತಿರುತ್ತಾನೆ. ಅವನು ಯಾವಾಗಲೂ ಬ್ರಹ್ಮನಿಷ್ಠನಾಗಿಯೇ ಇರುತ್ತಾನೆ. ಅವನು ಯಾವಾಗಲೂ ಸಮಾಧಿಯಲ್ಲಿಯೇ ಇರುತ್ತಾನೆ. ತನಗಿರುವ ಆತ್ಮಜ್ಞಾನಬಲದಿಂದ ಅವನು ವಜ್ರದಂತೆ ದುರ್ಭೇದ್ಯನಾಗಿರುತ್ತಾನೆ.

ನಿಜವಾದ ಸಮಾಧಿಯನ್ನು ಧ್ಯಾನದಲ್ಲಿರುವಾಗ ಹೇಗೋ ಹಾಗೆಯೇ ವ್ಯವಹಾರದಲ್ಲಿಯೂ ಇಟ್ಟುಕೊಂಡಿರಬಹುದಾಗಿದೆ. ತನ್ನ ಆಧ್ಯಾತ್ಮಿಕಬಲವನ್ನೂ, ಆಧ್ಯಾತ್ಮಿಕಾನುಭವವನ್ನೂ ನೋಡಿ ತಿಳಿದುಕೊಳ್ಳುವದಕ್ಕೆ ಇದೇ ನಿಜವಾದ ಒರೆಗಲ್ಲಾಗಿರುತ್ತದೆ. ಇದೇ ನಿಜವಾದ **ಚೈತನ್ಯಸಮಾಧಿಯು**. ಗಿರಿಗುಹೆಗಳಲ್ಲಿಯೂ, ಅರಣ್ಯಗಳಲ್ಲಿಯೂ ಕಣ್ಣುಮುಚ್ಚಿದಾಗ ಮಾತ್ರ ಬರುವ, ವ್ಯವಹಾರಕ್ಕೆ ಇಳಿದ ಕೂಡಲೇ ಹಾರಿಹೋಗುವ ಸಮಾಧಿಯು ಸಮಾಧಿಯೇ ಅಲ್ಲ. **ಪುಟ–66 (Vision)**

"ಎಲ್ಲಾ ಕರ್ಮಗಳನ್ನೂ ಯಾವಾಗಲೂ ಮಾಡುತ್ತಿರಲಿ, ನನ್ನಲ್ಲಿ ಸರ್ವಾತ್ಮಭಾವವನ್ನಿಟ್ಟು ಕೊಂಡಿದ್ದರೆ ಸಾಕು, ಅಂಥವನು ನನ್ನ ಅನುಗ್ರಹದಿಂದ ಶಾಶ್ವತವಾದ ಅವ್ಯಯಪದವಿಯನ್ನು

ಪಡೆಯುವನು. ಚಿತ್ತದಿಂದ ಸರ್ವಕರ್ಮಗಳನ್ನೂ ನನ್ನಲ್ಲಿ ಅರ್ಪಣೆಮಾಡಿ, ಬುದ್ಧಿಯೋಗವನ್ನಾಶ್ರಯಿಸಿ ಯಾವಾಗಲೂ ನನ್ನಲ್ಲಿಯೇ ಚಿತ್ತವನ್ನಿಟ್ಟುಕೋ, ಅದರಿಂದ ನೀನು ಸರ್ವದುರ್ಗಗಳನ್ನೂ ದಾಟಬಹುದು"- ಭಗವದ್ಗೀತೆ.

## ಜಪ

ಉಪಾಸನೆಯೆಂದರೆ ಎಡೆಬಿಡದೆ ಉಪಾಸ್ಯದ ಚಿಂತನೆಯೇ ನಡೆಯುತ್ತಿರುವದು, ಅದಕ್ಕಿಂತ ಬೇರೆಯಾದ ಮತ್ತೊಂದರ ಪ್ರತ್ಯಯವು ಮನಸ್ಸಿನಲ್ಲಿ ಅಡ್ಡ ಸುಳಿಯದಿರುವದು. ಶರೀರಪ್ರಧಾನವಾದ ಕರ್ಮಗಳಿಂದ ಪರಮಾತ್ಮನ ಚಿಂತೆಯನ್ನು ಹತ್ತಿಸಿಕೊಂಡು ಲೌಕಿಕವಿಷಯಗಳ ಕೋಟಲೆಯಿಂದ ದೂರವಾಗುವದಕ್ಕೆ 'ಅರ್ಚನ' ಕ್ರಮವು ಸಹಾಯಕವಾಗಿರುತ್ತದೆ. ವಾಕ್ಪ್ರಧಾನವಾದ ಸಾಧನದಿಂದ ಈ ಮಾರ್ಗದಲ್ಲಿಯೇ ಮುಂದುವರಿಯುವದಕ್ಕೆ 'ಸ್ತೋತ್ರ'ಗಳ ಅಭ್ಯಾಸವು ಪ್ರಯೋಜನಕಾರಿಯಾಗುತ್ತದೆ. ವಾಕ್ಕಿನಿಂದ ಮೊದಲಾಗಿ ಮನಸ್ಸಿನವರೆಗೂ ತಲುಪುವದಕ್ಕೆ ಸಹಾಯಕವಾಗುವ ಪದ್ಧತಿಯೇ **ಜಪ**. ಈ ಜಪದ ಅನುಷ್ಠಾನವು ಬಹುಪುರಾತನಕಾಲದಿಂದ ನಮ್ಮ ಕಾಲದವರೆಗೂ ನಡೆದುಕೊಂಡುಬಂದಿದೆ. ಇದರ ಅನುಷ್ಠಾನದಿಂದ ಆಗುವ ಲಾಭವನ್ನು ಅನುಭವಕ್ಕೆ ತೆಗೆದುಕೊಂಡಿರುವ ಮಹಾತ್ಮರು ನಮ್ಮ ಅದೃಷ್ಟಕ್ಕೆ ಈಗಲೂ ಸಿಕ್ಕುತ್ತಿದ್ದಾರೆ. ಈ ಕಾಲಕ್ಕೆ ಇದು ಸುಲಭಸಾಧ್ಯವಾದ ಸಾಧನವೂ ಆಗಿದೆ.

ಶರೀರಪ್ರಧಾನವಾದ ಮತ್ತು ವಾಕ್ಪ್ರಧಾನವಾದ ಸಾಧನಗಳು ಫಲಕಾರಿಯಾಗುವದಕ್ಕೆ ಒಂದು ಪ್ರಬಲವಾದ ಅಡ್ಡಿ ಎಂದರೆ ಪರಮಾತ್ಮನ ಸಂನಿಧಿಯ ಅರಿವು ನಮಗೆ ಇಲ್ಲದಿರುವದೇ. ಇದಕ್ಕೆ ಕಾರಣವೇನೆಂದರೆ ಪ್ರತಿಯೊಂದನ್ನೂ ನಾನು ಎಂಬ ಕೇಂದ್ರಕ್ಕೆ ಸಂಬಂಧಿಸಿಕೊಂಡೇ ನೋಡುವ ಸಂಸ್ಕಾರವು ನಮ್ಮ ಮನಸ್ಸಿಗೆ ಇದ್ದುಬಿಟ್ಟಿದೆ. 'ನಾನು' ಎಂಬ ಕೇಂದ್ರಕ್ಕೆ ಸಂಬಂಧಿಸದಿದ್ದರೆ ಅದಕ್ಕೆ ಬೆಲೆಯನ್ನು ಕೊಡುವ ಯೋಗ್ಯತೆ ನಮಗೆ ಇಲ್ಲ. ನನಗೆ ಬೇಕಾದದ್ದು ಒಳ್ಳೆಯದು, ನನಗೆ ಬೇಡವಾದದ್ದು ಕೆಟ್ಟದ್ದು-ಹೀಗೆ "ನನಗೆ" ಸಂಬಂಧಿಸಿಕೊಂಡೇ ವಸ್ತುಗಳನ್ನು ನೋಡಬೇಕಾಗಿರುವದರಿಂದ ವಸ್ತುಗಳಲ್ಲಿರುವ ಗುಣಗಳನ್ನು ನಾವು ನೋಡಿ ನಲಿಯಲಾರದವರಾಗಿದ್ದೇವೆ. ನಿಜವಾಗಿ ಪರಮಾತ್ಮನೇ ಎಲ್ಲಕ್ಕೂ ಕೇಂದ್ರವು; ಅವನಿಗೆ ಸಂಬಂಧಿಸಿಯೇ ಯಾವದಕ್ಕಾದರೂ ಬೆಲೆಯಿದೆ, ಇಲ್ಲದಿದ್ದರೆ ಅದರ ಬೆಲೆ ಸೊನ್ನೆ; ಈ ತಿಳಿವಳಿಕೆಯು ಮೊದಲು ನಮಗೆ ಬರಬೇಕು. ಇದಕ್ಕೆ ಈಶ್ವರನ ಸರ್ವವ್ಯಾಪಕತ್ವ, ಸರ್ವಶಕ್ತಿತ್ವ, ಸರ್ವಜ್ಞತ್ವ-ಮುಂತಾದ ಘನತೆಯು ನಮ್ಮ ಅರಿವಿಗೆ ಹತ್ತಬೇಕು, ನಾನು ಎಂಬುದರ ಅಲ್ಪತ್ವವೂ ಮನಗಾಣಬೇಕು. ನನ್ನ ಶರೀರಕ್ಕೂ ವಾಕ್ಕಿಗೂ ಮಿಕ್ಕ ಇಂದ್ರಿಯಗಳಿಗೂ ಮನಸ್ಸಿಗೂ ಒಂದಾನೊಂದು

ಮೂಲದಿಂದ ಶಕ್ತಿಯು ಹರಿದುಬರುತ್ತಿದೆ, ಅದರ ಬಲದಿಂದಲೇ ಈ ನನ್ನ ಕಾರ್ಯಕರಣಸಂಘಾತವು ತನ್ನ ವ್ಯಾಪಾರವನ್ನು ಮಾಡುತ್ತಿದೆ ಎಂಬ ಅರಿವು ಮನಸ್ಸಿನಲ್ಲಿ ಎದ್ದುಕೊಳ್ಳಬೇಕು. ಸಾಧುಸತ್ಪುರುಷರ ಸಂಗವಾಗಿ ಅವರ ಅನುಗ್ರಹವಾದರೆ ಈ ಅರಿವು ಮೆಲ್ಲಮೆಲ್ಲಗೆ ನಮ್ಮ ಮನದಲ್ಲಿ ಮೂಡುವದು. ಆಗ ನಮ್ಮ ಅಹಂ ಕಡಿಮೆಯಾಗುವದು. ಆಗಲೇ ನಿಜವಾಗಿ ನಾವು ಮಾಡುವ ಅರ್ಚನೆ, ಸ್ತೋತ್ರ-ಮುಂತಾದ ಸಾಧನಗಳು ವೀರ್ಯವತ್ತಾಗಿ ಕಳೆಗೂಡಿಕೊಳ್ಳುವವು.

ಆದ್ದರಿಂದ ಹೊರಗಿನ ಸಾಧನಕ್ಕಾದರೂ ಮನಸ್ಸಿನ ಸಹಾಯದಿಂದಲೇ ಬೆಲೆ ಬರಬೇಕಾಗಿರುತ್ತದೆ. ಶರೀರದಿಂದ ಮಾಡಿದ್ದು ಮಾಡಿದ್ದೇ ಅಲ್ಲ, ಮನಸ್ಸಿನಿಂದ ಮಾಡಿದ್ದೇ ಮಾಡಿದ್ದು. ಭಗವಂತನ ಸೇವೆಗೆಂದೇ ಸೇರಿದವರಲ್ಲೆಲ್ಲ ಒಬ್ಬ ಭಗವಂತನ ಮಹಿಮೆಯೇ ಹೊರಸೂಸುತ್ತಿದೆ. ಇದೆಲ್ಲ ಆ ಪರಮೇಶ್ವರನ ಮಹಿಮೆಯೇ, ಆತನ ವೈಭವವೇ- ಎಂಬ ಅರಿವು ನಮ್ಮ ಮನಸ್ಸಿನಲ್ಲಿ ಮೂಡಿದರೆ ನಾವು ಧನ್ಯನಾಗುವೆವು. ಆದರೆ ಅಂಥ ಭಾವನೆಯು ಬಯಸಿಕೊಂಡಮಾತ್ರದಿಂದ ದೊರೆಯಲಾರದು. ಅದಕ್ಕೆ ಅಭ್ಯಾಸವು ಬೇಕು. ವಾಙ್ಮಯವಾದ ಇಂಥ ಅಭ್ಯಾಸವು ಜಪವೆನಿಸುವದು.

ವಾಙ್ಮಯಸಾಧನಕ್ಕೂ ಮನಸ್ಸಿನ ಒತ್ತಾಸೆ ಇದ್ದೇ ಇರಬೇಕೆಂದು ಆಗಲೆ ಹೇಳಿರುತ್ತೇನೆ, ಈಗ್ಗೆ ಕೆಲವರು ಗಿಳಿಯಂತೆ ನಾಮವನ್ನು ಮತ್ತೆಮತ್ತೆ ಉಚ್ಚರಿಸುವದೂ ಜಪವಾಗುವ ದೆಂದು ಅಭಿಪ್ರಾಯಪಡುತ್ತಿದ್ದಾರೆ. ಪರಮಾತ್ಮನ ಪವಿತ್ರ ನಾಮೋಚ್ಚಾರಣೆಯು ಹೆಚ್ಚು ಹೆಚ್ಚು ನಡೆದಷ್ಟೂ ಹೆಚ್ಚು ಹೆಚ್ಚಿನ ಫಲವಾದೀತೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಆದರೆ ಬರಿಯ ಉಚ್ಚಾರಣೆಯು "ಜಪ" ಎಂಬ ಅಭಿಧಾನಕ್ಕೆ ಅರ್ಹವಾಗಲಾರದು. ಆದ್ದರಿಂದಲೇ ಪಾತಂಜಲ ಯೋಗಸೂತ್ರದಲ್ಲಿ **'ತಜ್ಜಪಃದರ್ಥಭಾವನಂ'** ಎಂದು ಹೇಳಿರುತ್ತದೆ. ಭಾವನೆಯು ಮನಸ್ಸಿನ ಕ್ರಿಯೆ ಎಂದು ಹೇಳಬೇಕಾದದ್ದೇ ಇಲ್ಲವಷ್ಟೆ?

ಈ ಜಪವು ಉಚ್ಚೈರುಪಾಂಶು ಮಾನಸಗಳೆಂಬ ಮೂರು ಪ್ರಕಾರದ್ದಾಗಿರುತ್ತದೆ. ಗಟ್ಟಿಯಾಗಿ ಉಚ್ಚರಿಸುವದು ಉಚ್ಚೈರ್ಜಪವು. ಈ ಜಪವು ವಿಕ್ಷೇಪಕ್ಕೆ ಅವಕಾಶವನ್ನು ಕೊಡುವದರಿಂದ ತೀರ ಕೀಳುತರದ್ದಾಗಿರುತ್ತದೆ. ಉಪಾಂಶು ಜಪದಲ್ಲಿ ತುಟಿಗಳನ್ನು ಅಲುಗಾಡಿಸುತ್ತಾ ತನಗೆ ಮಾತ್ರ ಕೇಳಿಸುವಷ್ಟು ಪಿಸುಮಾತಿನಿಂದ ಹೇಳಿಕೊಳ್ಳುವುದು. ಈ ಎರಡರಲ್ಲಿಯೂ ಜಪಕ್ಕೆ ಭಾವನೆಯ ನೆರವು ಬೇಕೇಬೇಕು; ಆದರೆ ಉಪಾಂಶು ಜಪಕ್ಕೆ ಹೆಚ್ಚಿನ ಅವಧಾನವು ಬೇಕಾಗುತ್ತದೆ. ಜಪದ ಸಾಧನವು ಬಲಿತುಕೊಂಡಂತೆಲ್ಲಾ ಅದು ತನ್ನ ಮುದ್ರೆಯನ್ನು ಮನಸ್ಸಿನ ಮೇಲೆ ಒತ್ತುವುದು. ದೀರ್ಘಕಾಲದವರೆಗೆ ಅಭ್ಯಾಸ ಮಾಡಿದವರಿಗೆ ಉಚ್ಚಾರಣೆಯ ಹಂಗಿಲ್ಲದೆಯೇ ಮನಸ್ಸಿನಲ್ಲಿ ಮತ್ತೆಮತ್ತೆ ವೃತ್ತಿಗಳು ಎದ್ದುಕೊಳ್ಳುವವು. ಈ ವೃತ್ತಿಗಳು ಎದ್ದುಕೊಂಡಂತೆಲ್ಲಾ ಪರಮಾತ್ಮನ ಭಾವನೆಯೂ

ಸಂಗಡಲೇ ಆಗುತ್ತಿರುವದರಿಂದ ಮನಸ್ಸಿನಲ್ಲಿ ಹೆಚ್ಚಿನ ಸಂಸ್ಕಾರವು ಉಂಟಾಗುತ್ತಿರುವದು. ಆದ್ದರಿಂದ ಈ ಮಾನಸಜಪವು ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದೆಂದು ಬಲ್ಲವರು ಹೇಳುತ್ತಾರೆ.

ಜಪವು ಬಲಿತುಕೊಂಡರೆ ಭಾವನೆಯೇ ಮುಖ್ಯವಾಗುವದು. ಆಗ ಭಗವಂತನು ಭಕ್ತನ ಹೃದಯದಲ್ಲಿ ನೆಲಸುವನು. ಆತನ ಸಂನಿಧಿಯಿಂದ ಅಂತಃಕರಣವು ಪವಿತ್ರವಾಗುವದು, ಆತನ ಅಭಿವ್ಯಕ್ತಿಯು ಅಂತಃಕರಣದಲ್ಲಿ ಆದಂತೆ ಅದರ ಫಲವು ಹೊರಗಿನ ವಾಕ್ಕಿನಮೇಲೂ, ಶರೀರದಮೇಲೂ ತೋರಿಕೊಳ್ಳುವದಕ್ಕೆ ಮೊದಲಾಗುವದು. ರುಚಿಯಾದ ಭಕ್ಷ್ಯಭೋಜ್ಯಾದಿಗಳನ್ನು ತಿಂದವರು ಬಾಯಿ ಚಪ್ಪರಿಸಿಕೊಳ್ಳುತ್ತಾ ಆ ರುಚಿಯನ್ನು ಮತ್ತೆಮತ್ತೆ ನೆನೆನೆನೆದು ನಲಿಯುತ್ತಿರುವಂತೆ ಭಾವನೆಯ ಆನಂದದಿಂದ ಭಕ್ತರು ನಲಿಯುತ್ತಿರುವರು. 'ಖೇಲತಿ ಮಮ ಹೃದಯೇ ರಾಮಃ' ಎಂದು ಪರಮಹಂಸ ಶ್ರೀ ಸದಾಶಿವೇಂದ್ರರು ಹಾಡಿರುವಂತೆ ಭಾವನಾಪರವಶನಾದ ಭಕ್ತನ ಹೃದಯದಲ್ಲಿ ಭಗವಂತನು ಆಟವಾಡುತ್ತಿರುವನು. ಈ ಆಟವನ್ನು ತನ್ನ ಹೃದಯದಲ್ಲಿ ಕಂಡುಕೊಂಡು ಭಕ್ತನು ಮೆಲ್ಲಮೆಲ್ಲಗೆ ಎಲ್ಲರ ಹೃದಯದಲ್ಲಿಯೂ ಅದೇ ಭಗವಂತನನ್ನು ಕಾಣುವದಕ್ಕೆ ಮೊದಲುಮಾಡುವನು. ಅವನ ಪ್ರಭಾವದಿಂದ ಅವನ ಸುತ್ತಲಿರುವವರಿಗೂ ದುಃಸಂಕಲ್ಪಗಳು ಹಿಮ್ಮೆಟ್ಟುವವು.

ಭಗವಂತನ ನಾಮಜಪವು ಹೇಗೆ ಮಾಡಿದರೂ ಪ್ರಭಾವಶಾಲಿಯಾಗಿರುತ್ತದೆ ಯಾದರೂ ಅದನ್ನು ಪುರಶ್ಚರಣಮಾಡಿ ಸಿದ್ಧರಾಗಿರುವ ಭಕ್ತಾಗ್ರೇಸರರ ಉಪದೇಶವನ್ನು ಸ್ವೀಕರಿಸುವದರಿಂದ ಅದಕ್ಕೊಂದು ವೀರ್ಯವು ಬರುವದು. ನಾಮಜಪದಿಂದ ಸಿದ್ಧ ರಾಗಿರುವ ಮಹಾತ್ಮರು ನಾಮವನ್ನೂ, ನಾಮಿಯಾದ ಭಗವಂತನನ್ನೂ ಬೇರ್ಪಡಿಸದೆ ಚಿದಾನಂದಘನನಾದ ಪರಮಾತ್ಮನೇ ನಾಮರೂಪದಿಂದ ತಮ್ಮ ನಾಲಗೆಯ ಮೇಲೆ ನಲಿದಾಡುತ್ತಿರುವನೆಂದು ತಿಳಿದಿರುವರು. ಅಂಥ ಮಹಾತ್ಮರ ಪವಿತ್ರೋಪದೇಶವು ಕಿವಿಗೆ ಬಿದ್ದರೆ ಆ ದ್ವಾರದಿಂದ ಶಿಷ್ಯನ ಹೃದಯದಲ್ಲಿಯೂ ಆ ಭಗವಂತನ ಸಂನಿಧಿಯು ಅಭಿವ್ಯಕ್ತವಾಗಿ ನಾಮೋಚ್ಚಾರಣೆಗೆ ಒಂದು ಕಳೆಯು ದೊರಕುವದು. ನಿಜವಾಗಿ ನೋಡಿದರೆ ಪ್ರಪಂಚದಲ್ಲಿರುವ ವಸ್ತುಗಳೆಲ್ಲಕ್ಕೂ ಭಗವಂತನೇ ಮೂಲವು ಆಗಿರುವಂತೆ ಅವುಗಳ ಹೆಸರುಗಳೆಲ್ಲಕ್ಕೂ ಭಗವಂತನ ನಾಮವೇ ಮೂಲವಾಗಿರುತ್ತದೆ. ಆದರೆ ವಸ್ತುಗಳ ದರ್ಶನಸ್ಪರ್ಶನಾದಿಗಳೂ, ಅವುಗಳ ಹೆಸರುಗಳ ವ್ಯವಹಾರವೂ ನಮ್ಮನ್ನು ಹುಸಿ ತೋರಿಕೆಯ ಜಗತ್ತಿಗೇ ಕಟ್ಟಿಹಾಕಿ ಸಂಸಾರದಲ್ಲಿ ತೊಳಲಿಸುವವು. ಭಗವಂತನ ರೂಪದ ಅರ್ಚನಧ್ಯಾನಾದಿಗಳೂ, ಆತನ ಗುಣಕರ್ಮಗಳನ್ನು ನೆನಪಿಗೆ ತರುವ ನಾಮದ ಜಪವೂ ಇಡಿಯ ಪ್ರಪಂಚದ ಸಾರವಾದ ಅಮೃತತತ್ತ್ವಕ್ಕೆ ನಮ್ಮನ್ನು ಒಯ್ದು ಮುಟ್ಟಿಸುವವು. ಈ ಮರ್ಮವನ್ನು ತಿಳಿದು ಜಪದ ಆನಂದವನ್ನು ಅನುಭವಿಸುತ್ತಿರುವ ಮಹಾತ್ಮರೇ

ಜಪಸಿದ್ಧರು. ಇಂಥ ಜಪಸಿದ್ಧರೇ ಈ ಲೋಕದಲ್ಲಿ ಸಂಚರಿಸುವ ಭಗವಂತನ ಮೂರ್ತಿಗಳೆಂದು ತಿಳಿಯಬೇಕು. **ಸಂ–24, 227**

## ವ್ಯಾಯಾಮ

ಅಧ್ಯಾತ್ಮಸಾಧಕರಿಗೆ ಪರಮಾತ್ಮನಲ್ಲಿಯೇ ದೃಷ್ಟಿಯಿರಬೇಕಾದದ್ದು ಯುಕ್ತವಾದದ್ದು. ಆದರೆ ಈ ಕಾರಣದಿಂದ ಶರೀರದ ಆರೋಗ್ಯವನ್ನಾಗಲಿ ಬಲವನ್ನಾಗಲಿ ಅಸಡ್ಡೆಯಿಂದ ಕಾಣುವದು ಎಂದಿಗೂ ಒಳ್ಳೆಯದಲ್ಲ. ಕೆಲವರು ತಾವು ಮುಮುಕ್ಷುಗಳೆಂದೂ ಆದ್ದರಿಂದ ಶರೀರವನ್ನು ದಂಡಿಸುವದೇ ತಮ್ಮ ಕರ್ತವ್ಯವೆಂದೂ ಬಗೆದು ಉಪವಾಸವನವಾಸಗಳಿಂದ ದೇಹವನ್ನು ಬಳಲಿಸುತ್ತಾರೆ; ಮತ್ತೆ ಕೆಲವರು ತಾವು ಧ್ಯಾನಮಾಡುವವರಾದ್ದರಿಂದ ಶರೀರವನ್ನು ನೋಡಬೇಕಾದದ್ದಿಲ್ಲವೆನ್ನುತ್ತಾ ಕೂತಕಡೆಯಲ್ಲಿಯೇ ಕೂತಿರುತ್ತಾರೆ. ಇವರಿಬ್ಬರಿಗೂ ಶರೀರಸಂಯಮದ ರಹಸ್ಯವು ತಿಳಿಯದು. ಭಗವದ್ಗೀತೆಯ ಈ ಶ್ಲೋಕವನ್ನು ನೆನಪಿಟ್ಟರೆ ಇಂಥ ತಪ್ಪುದಾರಿಯನ್ನು ತುಳಿಯುವದು ನಿಂತುಹೋಗುತ್ತದೆ.

**ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।**
**ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥**

ಮಿತವಾದ ಆಹಾರವಿಹಾರಗಳು, ಕರ್ಮಗಳಲ್ಲಿ ಮಿತವಾದ ಪ್ರವೃತ್ತಿ, ಮಿತವಾದ ಎಚ್ಚರನಿದ್ರೆಗಳು–ಹೀಗೆ ತನ್ನ ನಡೆವಳಿಯಲ್ಲಿ ಮಿತವಾಗಿರುವವನಿಗೇ ಸಾಧನದಿಂದ ಎಲ್ಲಾ ದುಃಖವೂ ತೊಲಗುವದು. ಆದ್ದರಿಂದ ಶರೀರವನ್ನು ಬೀದಿಬೀದಿಯ ನಾಯಿಯಂತೆ ಅಲೆಯುವದಕ್ಕೂ ಬಿಡಬಾರದು; ಅಥವಾ ಕಲ್ಲಿನಂತೆ ಬಿದ್ದಲ್ಲಿ ಬಿದ್ದಿರುವದಕ್ಕೂ ಎಡೆಗೊಡಬಾರದು. ಕಂಡಕಂಡ ಕೆಲಸಗಳಿಗೆ ಕೈಹಾಕುತ್ತಾ ದೇಹವನ್ನು ದಣಿಸಲೂಬಾರದು, ಅಥವಾ ಯಾವ ಕೆಲಸವೂ ಇಲ್ಲದೆ ಸೋಮಾರಿಯಾಗಿ ಕೂರಿಸಲೂಬಾರದು. ತಾಮಸಾಹಾರಾದಿಗಳ ಸೇವನೆಯಿಂದ ಯಾವಾಗಲೂ ಗೊರಕೆ ಹೊಡೆಯುತ್ತಿರುವಂತೆಯೂ ಮಾಡಬಾರದು, ಅಥವಾ ಕಾಫಿಯೇ ಮುಂತಾದವುಗಳನ್ನು ಸೇವಿಸಿ ರಾತ್ರಿಯಲ್ಲಿಯೂ ಅನವಶ್ಯವಾದ ಜಾಗರಣವನ್ನೂ ಮಾಡಬಾರದು. ಹೀಗೆ ದೇಹದ ವ್ಯಾಪಾರದಲ್ಲಿ ಹಾಳತ(ಪಕ್ವತೆ)ವಿರುವವನೇ ಅದನ್ನು ಸ್ವಾಧೀನದಲ್ಲಿಟ್ಟುಕೊಂಡು ಮನಃಪ್ರಾಣಗಳನ್ನು ವಶಗೊಳಿಸುವದಕ್ಕೆ ತಕ್ಕ ಯೋಗ್ಯತೆಯನ್ನು ಪಡೆಯುತ್ತಾನೆ.

ಶರೀರವನ್ನು, ಆರೋಗ್ಯವಾಗಿರುವದಕ್ಕೆ ತಕ್ಕಂತೆ ಆಹಾರವಿಹಾರಗಳಿಂದ ಹಿಡಿತ ದಲ್ಲಿಟ್ಟು ಕೊಂಡೇ ತೀರಬೇಕೆಂದು ಇದರಿಂದ ಸಿದ್ಧವಾಗುವದಷ್ಟೆ. ಆದರೆ ಶರೀರಕ್ಕೆ ಆರೋಗ್ಯವೂ ಬಲವೂ ಇಲ್ಲದಿದ್ದರೆ ಯಾವ ಧರ್ಮಸಾಧನೆಯನ್ನೂ ಮಾಡುವದಕ್ಕಾಗು ವದಿಲ್ಲವೆಂಬ ಸುಭಾಷಿತವನ್ನು ಕುಂಟನೆಪವಾಗಿ ಹೇಳಿಕೊಳ್ಳುತ್ತ ಶರೀರಕ್ಕೆ ಸವಿಸವಿಯಾದ

ಆಹಾರವನ್ನು ಒದಗಿಸಿಕೊಳ್ಳುವದಕ್ಕಾಗಲಿ ಅಥವಾ ಗರಡಿಯ ಮನೆಗೆ ಹೋಗಿ ವ್ಯಾಯಾಮಶಿಕ್ಷಣವನ್ನು ಪಡೆದು ಮೈ ದುಂಡಗೆ ಮಾಡಿಕೊಳ್ಳುವದಕ್ಕಾಗಲಿ ಹವಣಿಸುತ್ತಿರಬೇಕೆಂದೇನೂ ಇದರ ಅಭಿಪ್ರಾಯವಲ್ಲ. ಮನುಷ್ಯನಿಗೆ ಆರೋಗ್ಯವೂ ಬಲವೂ ಬರುವದಕ್ಕೆ ಅತ್ಯಂತಪುಷ್ಟಿಕರ ವಾದ ಆಹಾರವು ದೊರೆತು ಜಗಜಟ್ಟಿಯೆನಿಸಿ ಕೊಳ್ಳಬೇಕೆಂಬ ಕಟ್ಟುನಿಯಮವೇನೂ ಇಲ್ಲ; ಅಧ್ಯಾತ್ಮಸಾಧಕರಿಗೆ ಅದರ ಆವಶ್ಯಕತೆಯೂ ಇಲ್ಲ. ಲೌಕಿಕವ್ಯವಹಾರದಲ್ಲಿ ಮಾಡಬೇಕಾದ ತನ್ನ ದಿನದಿನದ ಕೆಲಸಗಳನ್ನು ತಾನೇ ಮಾಡಿಕೊಳ್ಳುತ್ತಾ ಶುದ್ಧವಾದ ಆಹಾರ, ಗಾಳಿ, ಬೆಳಕು-ಇವುಗಳ ಸೇವನೆಯನ್ನು ಮಾಡುತ್ತಿದ್ದರೆ ಸಾಕಾಗಿದೆ.

ಆದರೆ ಇದಕ್ಕಿಂತಲೂ ಹೆಚ್ಚಾಗಿ ತಾನು ಮಾಡಬೇಕಾಗಿರುವ ಕೆಲಸಗಳನ್ನು ಕೂಡ ಇಹಕ್ಕೂ ಪರಕ್ಕೂ ಅನುಕೂಲವಾಗುವಂತೆಯೇ ಸಾಧಕನು ಏರ್ಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸುವದು ಅತ್ಯಂತ ಅವಶ್ಯವಾಗಿರುತ್ತದೆ. ವ್ಯಾಯಾಮಕ್ಕಾಗಿ ವ್ಯಾಯಾಮವನ್ನು ಮಾಡದೆ ಪರಮಾರ್ಥಸಾಧನೆಯಲ್ಲಿಯೇ ಲಕ್ಷ್ಯವಿಟ್ಟಿರುವವನಿಗೂ ದೇಹಾರೋಗ್ಯವು ತಾನೇ ದೊರೆತು ಎಲ್ಲಾ ವ್ಯವಹಾರವೂ ಸುಲಭವಾಗಿ ಸಾಗುವಂತೆ ಮಾಡಿಕೊಳ್ಳುವದಕ್ಕೆ ಅವಕಾಶವಿದ್ದೇ ಇದೆ. **ಸಂ-11, 96**

ಶರೀರವನ್ನು ಆರೋಗ್ಯವಾಗಿಟ್ಟುಕೊಂಡಿರುವದಕ್ಕೆ ವ್ಯಾಯಾಮವು ಅತ್ಯವಶ್ಯವಾದರೂ ಎಲ್ಲರಿಗೂ ವ್ಯಾಯಾಮಕ್ಕೆಂದು ಒಂದು ಕಾಲವನ್ನು ಗೊತ್ತುಮಾಡಿಕೊಳ್ಳುವದಕ್ಕೆ ಆನುಕೂಲ್ಯವಿರುವದಿಲ್ಲ. ಬಹು ಜನರಿಗೆ ತಮ್ಮ ನಿತ್ಯಜೀವನವು ಸಾಗುವದಕ್ಕೆ ಬೇಕಾದ ಹವಣಿಕೆಯನ್ನು ಮಾಡುವದರಲ್ಲಿಯೇ ಬಹಳ ಕಾಲವನ್ನು ಕಳೆಯಬೇಕಾದದ್ದು ಅವಶ್ಯವಾಗಿರುತ್ತದೆ. ಆದ್ದರಿಂದ ಜಾಣನಾದವನು ತಾನು ಮಾಡಿಕೊಳ್ಳಬೇಕಾದ ನಿತ್ಯ ಜೀವನದ ಕೆಲಸವನ್ನೇ ವ್ಯಾಯಾಮಕ್ಕೂ ಅನುಕೂಲಿಸುವಂತೆ ಹೊಂದಿಸಿಕೊಳ್ಳುವನು. ಜೀವನದ ನಿತ್ಯಸ್ಥಿತಿಯು ಅಷ್ಟು ಮೇಲ್ತರದ್ದಾಗಿಲ್ಲದವರಿಗೆ ನೀರುಸೇದುವದು, ಬಟ್ಟೆ ಒಗೆಯುವದು, ತೋಟತುಡಿಕೆಯ ಕೆಲಸವನ್ನು ನೋಡಿಕೊಳ್ಳುವದು-ಮುಂತಾದ ಕೆಲಸಗಳಲ್ಲಿಯೂ ಅಷ್ಟಷ್ಟು ವ್ಯಾಯಾಮವು ದೊರೆಯುತ್ತಿರುತ್ತದೆ.

ಸಾಧಕನಾದವನು ಅಧ್ಯಾತ್ಮಸಾಧನಗಳಲ್ಲಿಯೂ ಆರೋಗ್ಯಕ್ಕೆ ಬೇಕಾದಷ್ಟು ವ್ಯಾಯಾಮಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕು. ಉದಾಹರಣೆಗೆ ಬೆಳಗಿನ ಜಾವದಲ್ಲಿ ಎದ್ದು ಊರಿನಿಂದ ದೂರವಾಗಿ ಬಹಿರ್ಭೂಮಿಗೆ ಹೋಗಿ ತಣ್ಣೀರಿನಲ್ಲಿ ಮಿಂದು ಮಡಿಯುಟ್ಟು ಬರುವದು, ಮನೆಯಲ್ಲಿ ಪರಮೇಶ್ವರನ ಬಾಹ್ಯಾರ್ಚನನಮಸ್ಕಾರವೇ ಮುಂತಾದವುಗಳನ್ನು ಆಚರಿಸುವದು, ಮನೆಗೆ ಬಂದ ಅತಿಥಿಅಭ್ಯಾಗತರಿಗೆ ಸೇವೆಯನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡುವದು-ಮುಂತಾದವುಗಳಲ್ಲಿ ಇಂಥ ಅವಕಾಶವು

ದೊರೆಯುವದು. ಗುರುಗಳು ಸಿಕ್ಕಿದರೆ ಅವರ ಉಪದೇಶದಿಂದ ಪ್ರಾಣಾಯಾಮವೇ ಮುಂತಾದ ಹಠಯೋಗದ ಪ್ರಥಮಸಾಧನಗಳನ್ನೂ ಸ್ವಲ್ಪಮಟ್ಟಿಗೆ ಅನುಸರಿಸಬಹುದು. ಈ ಎಲ್ಲಾ ಬಗೆಯ ಸಾಧನಗಳಲ್ಲಿಯೂ ಈಶ್ವರನನ್ನು ಲಕ್ಷ್ಯದಲ್ಲಿಟ್ಟು ನಡೆಯುತ್ತಿದ್ದರೆ ಆರೋಗ್ಯವೇ ಅಲ್ಲದೆ ಅಧ್ಯಾತ್ಮವಿಚಾರಕ್ಕೆ ಬೇಕಾದ ಚಟುವಟಿಕೆಯೂ ದೊರೆಯುತ್ತದೆ.

ಶರೀರವು ಧರ್ಮಕ್ಕೆ ಮೊದಲನೆಯ ಸಾಧನವು. ಶರೀರವನ್ನು ಶಾಸ್ತ್ರೋಕ್ತವಾದ ಸಂಸ್ಕಾರಗಳಿಂದ ಪವಿತ್ರವಾಗಿಟ್ಟುಕೊಡು ಮಿತವಾದ ನಡೆನುಡಿಗಳಿಂದ ಅದನ್ನು ಹದ್ದುಮೀರಿ ನಡೆಯದಂತೆ ನೋಡಿಕೊಳ್ಳುತ್ತಾ ತನ್ನ ಶರೀರವು ಈಶ್ವರನ ಸೇವೆಗೆ ಮೀಸಲೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಇಂದ್ರಿಯಗಳನ್ನು ಬಿಗಿಹಿಡಿದುಕೊಂಡಿರು ವಾತನಿಗೆ ಧರ್ಮಾರ್ಥಕಾಮಗಳಲ್ಲದೆ ಮೋಕ್ಷವೂ ಮುಡುಪಾಗಿರುತ್ತದೆ. **ಸಂ-11, 131**

## ಇಂದ್ರಿಯನಿಗ್ರಹ

ಶರೀರವನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕೆನ್ನುವಾತನು ಇಂದ್ರಿಯ ಗಳನ್ನು ಮೊದಲು ಹಿಡಿತದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಇಂದ್ರಿಯಗಳು ಹಿಡಿತದಲ್ಲಿರು ವವನಿಗೆ ಶರೀರಕ್ಕೆ ಬೇಕಾದ ಆರೋಗ್ಯ, ಬಲ-ಮುಂತಾದವುಗಳ ಸಾಮಗ್ರಿಯು ಅವುಗಳ ಮೂಲಕವೇ ಸೇರಿಹೋಗಿರುತ್ತದೆ.

ಶರೀರದಲ್ಲಿ ಇಂದ್ರಿಯಸ್ಥಾನಗಳೆಂಬಿವು ಬಲವಾದ ದುರ್ಗದ ಮರ್ಮಸ್ಥಾನಗಳಂತೆ ಇರುತ್ತವೆ. ಕೋಟೆಯ ಮರ್ಮಸ್ಥಳಗಳಲ್ಲಿಯೇ ಶತ್ರುಗಳು ನುಗ್ಗುವಂತೆ ಶರೀರವನ್ನು ವಶಪಡಿಸಿಕೊಳ್ಳುವದಕ್ಕೆಂದು ಹೊರಗಿನ ವಿಷಯಗಳು ಇಂದ್ರಿಯಗಳ ಮೂಲಕವೇ ಒಳನುಗ್ಗುವವು. ಸೇನಾಪತಿಯು ಎಚ್ಚರಿಕೆಯಿಂದ ಕಾಪಾಡಿಕೊಳ್ಳದೆ ಇರುವ ವೀರರುಕೂಡ ಶತ್ರುಗಳ ಭೇದೋಪಾಯಕ್ಕೆ ವಶವಾಗುವಂತೆ ಹೊರಕ್ಕೆ ಹಾರಿಹೋಗುತ್ತವೆ. ಇಂದ್ರಿಯಗಳಿಗೆ ವಿಷಯಗಳನ್ನು ಕಂಡಾಗ ಸುಮ್ಮನೆ ಇರುವದಕ್ಕೆ ಆಗುವದಿಲ್ಲ. ವಿಷಯಗಳಲ್ಲಿ ಸಂಚರಿಸುವ ಇಂದ್ರಿಯಗಳನ್ನು ಕಂಡು ಮನಸ್ಸಿಗೆ ಸುಮ್ಮನೆ ಇರುವದಕ್ಕೆ ಆಗುವದಿಲ್ಲ. ಆದ್ದರಿಂದ ಮನುಷ್ಯನು ಅಧ್ಯಾತ್ಮ ಸಾಧನೆಯಲ್ಲಿ ಸೋಲುವದಕ್ಕೂ ಗೆಲ್ಲುವದಕ್ಕೂ ಇಂದ್ರಿಯಗಳೇ ಮೂಲಕಾರಣವೆನ್ನಬಹುದಾಗಿದೆ.

ಇಂದ್ರಿಯಗಳಲ್ಲಿ ಕರ್ಮೇಂದ್ರಿಯಗಳೆಂದೂ ಜ್ಞಾನೇಂದ್ರಿಯಗಳೆಂದೂ ಎರಡು ಬಗೆ. ಜ್ಞಾನೇಂದ್ರಿಯಗಳು ಮನುಷ್ಯನಿಗೆ ಹೊರಗಿನ ವಿಷಯಗಳ ಪರಿಚಯವನ್ನು ಮಾಡಿ ಕೊಡುತ್ತವೆ; ಕರ್ಮೇಂದ್ರಿಯಗಳು ಬೇರೆಬೇರೆಯ ಕೆಲಸಗಳನ್ನು ಮಾಡುವದಕ್ಕೆ ಸಹಾಯ ವಾಗಿರುತ್ತವೆ. ಹೊರಗಿನ ವಸ್ತುಗಳ ಶಬ್ದ, ಸ್ಪರ್ಶ, ರೂಪ, ರಸ, ಗಂಧ-ಇವುಗಳನ್ನು ಅರಿಯುವದು ಜ್ಞಾನೇಂದ್ರಿಯಗಳ ಕೆಲಸ; ಹಿಡಿಯುವದು, ದೂಡುವದು, ನಡೆಯುವದು

-ಮುಂತಾದ ಕೆಲಸಗಳನ್ನು ನೆರವೇರಿಸುವದು ಕರ್ಮೇಂದ್ರಿಯಗಳ ಕೆಲಸ. ಈ ಎರಡು ಬಗೆಯ ಇಂದ್ರಿಯಗಳಲ್ಲಿ ಕರ್ಮೇಂದ್ರಿಯಗಳನ್ನು ಬಿಗಿಹಿಡಿಯುವದು ಹೆಚ್ಚು ಸುಲಭ ವಾಗುತ್ತದೆ; ಸಾಮಾನ್ಯರು ಆಗಲೂ ಜ್ಞಾನೇಂದ್ರಿಯಗಳಿಂದ ಬಂದ ತಿಳಿವಳಿಕೆಯನ್ನು ಮನಸ್ಸಿನಲ್ಲಿ ಹೊರಳಿಸುತ್ತಲೇ ಇರುವರು. ಆದರೆ ಅದು ಮಿಥ್ಯಾಚಾರವು, ಬರಿಯ ತೋರಿಕೆಯ ಇಂದ್ರಿಯನಿಗ್ರಹವು. ನಿಜವಾದ ಇಂದ್ರಿಯನಿಗ್ರಹವು ಅಳವಡಬೇಕಾದರೆ ಈ ಎರಡು ಬಗೆಯ ಇಂದ್ರಿಯಗಳನ್ನೂ ವಶಪಡಿಸಿಕೊಂಡಿರಬೇಕು. **ಸಂ-11, 148**

ಮನುಷ್ಯನು ಇಂದ್ರಿಯಗಳಿಂದ ಕೆಳಗೆ ಬೀಳುವಷ್ಟು ಮತ್ತೆ ಯಾವದರಿಂದಲೂ ಬೀಳುವದಿಲ್ಲ. ಮೊದಮೊದಲು ನೋಡುವದಕ್ಕೆ ಜ್ಞಾನೇಂದ್ರಿಯಗಳೆಂಬಿವು ಬರಿಯ ಸ್ವಚ್ಛವಾದ ಕನ್ನಡಿಯಂತೆ ತೋರುತ್ತವೆ; ಆದರೆ ಅವು ವಿಷಯಗಳ ಎದುರಿಗೆ ಇರುವಾಗ ಬೆಂಕಿಯ ಮುಂದಿರುವ ಬೆಣ್ಣೆಯಂತೆ ತಾವೂ ಕರಗಿ ಮನುಷ್ಯನ ಮನಸ್ಸನ್ನು ಕರಗಿಸಿಬಿಡುತ್ತವೆ. ಆದ್ದರಿಂದ ಜಾಣನಾದವನು ಇಂದ್ರಿಯಗಳ ವಿಷಯಕ್ಕೆ ಬಲು ಎಚ್ಚರಿಕೆಯಿಂದಿರಬೇಕು.

ಇಂದ್ರಿಯಗಳಿಂದ ನಮಗೆ ತೋರಿಬರುವ ಸುಂದರವಾದ ರೂಪ, ಇಂಪಾದ ಧ್ವನಿ, ಮೆತ್ತನೆಯ ಸ್ಪರ್ಶ, ಸರಿಯಾದ ರಸ, ಪರಿಮಳದ ವಾಸನೆ-ಇವು ನಮ್ಮನ್ನು ಮೈ ಮರೆವಂತೆ ಮಾಡಿ ಗಾಳಿಯು ತೆಪ್ಪವನ್ನು ಹೊಡೆದುಕೊಂಡು ಹೋಗುವಂತೆ ತಮ್ಮ ಕಡೆಗೆ ಸೆಳೆದುಕೊಂಡುಬಿಡುತ್ತವೆ. ಮೊದಲನೆಯ ಸಲಕ್ಕೇ ಇಂದ್ರಿಯ ಗೋಚರವಾಗುವ ವಿಷಯವು ಇಷ್ಟು ಬಲವಾಗಿರುವದರಿಂದ, ಮತ್ತೆ ಮತ್ತೆ ಅದನ್ನು ಸೇವನೆಮಾಡುತ್ತಿದ್ದರೆ ಹೇಳಬೇಕಾದದ್ದೇ ಇಲ್ಲ. ಇಂದ್ರಿಯಗಳು ವಿಷಯಸೇವನೆ ಮಾಡಿದಂತೆಲ್ಲ ನಾಜೂಕಾಗುತ್ತವೆ, ಅವಕ್ಕೆ ಬರಬರುತ್ತಾ ಹೆಚ್ಚು ಹೆಚ್ಚು ಸುಂದರವಾದ ನೋಟವನ್ನು ನೋಡಬೇಕೆಂಬ, ಹೆಚ್ಚುಹೆಚ್ಚು ಇಂಪಾದ ರಾಗವನ್ನು ಕೇಳಬೇಕೆಂಬ, ಹೆಚ್ಚುಹೆಚ್ಚಿನ ಪರಿಮಳಗಂಧವನ್ನು ಮೂಸಬೇಕೆಂಬ ತಹತಹ ಉಂಟಾಗುತ್ತದೆ. ಹೂ ಗಂಧವೇ ಮುಂತಾದವುಗಳನ್ನು ಭೋಗಿಸುವ ಲಾಲಸೆ, ಸಿನಿಮಾ, ನಾಟಕ-ಮುಂತಾದವು ಗಳಿಗೆ ಹೋಗಬೇಕೆಂಬ ಚಟ, ಟೀಕಾಫಿಯೇ ಮುಂತಾದವುಗಳನ್ನು ಕುಡಿಯಬೇಕೆಂದು ಹಾತುವರಿಯುವದು, ಪ್ರಿಯಳಾದವಳ ಅಥವಾ ಪ್ರಿಯನಾದವನ ಕೂಟಕ್ಕೆಂದು ಸಮಯವನ್ನು ಕಾಯುವ ಕುತೂಹಲ-ಇವೆಲ್ಲ ಹೀಗೆಯೇ ದಿನದಿನಕ್ಕೆ ಬೆಳೆಯುತ್ತಿರುತ್ತವೆ.

ಯಾವ ವೀರನು ಇಂದ್ರಿಯಗಳನ್ನು ಇಂದ್ರಿಯಾರ್ಥಗಳಿಂದ ಹಿಂತಿರುಗಿಸಬಲ್ಲನೋ, ಯಾವನಿಗೆ ಇಂದ್ರಿಯಗಳು ವಿಷಯವನ್ನು ಸೇವಿಸಿದರೂ ಅವುಗಳಲ್ಲಿ ರಾಗದ್ವೇಷ ಗಳುಂಟಾಗದೆ ಇರುವವೋ, ಅವನ ಮನಸ್ಸು ಸ್ಥಿಮಿತವಾಗಿರುತ್ತದೆ. ಅಂಥವನು ಮಾತ್ರ

ಮನುಷ್ಯತ್ವವನ್ನು ಮೀರಿ ದೇವತ್ವವನ್ನು ಏರಬಲ್ಲ ಹಾದಿಯನ್ನು ತುಳಿಯಲು ಅರ್ಹನಾಗಿರುತ್ತಾನೆ. ಸಂ–11, 163

## ಇಂದ್ರಿಯಗಳ ಸ್ವಭಾವ

ಮನಸ್ಸನ್ನು ತಿದ್ದಿಕೊಳ್ಳುವದಕ್ಕೆ ಇಂದ್ರಿಯಗಳಿಂದಲೇ ಮೊದಲುಮಾಡಬೇಕಷ್ಟೆ. ಆದರೆ ಇಂದ್ರಿಯಗಳನ್ನು ವಶಗೊಳಿಸಿಕೊಳ್ಳುವದು ಹೇಗೆ? ಇಂದ್ರಿಯಗಳು ಕೆಲವು ವೇಳೆ ಮಾಡಬಾರದ್ದನ್ನು ಮಾಡುವಂತೆ ನಮ್ಮನ್ನು ಎಳೆದುಕೊಂಡು ಹೋಗಿಬಿಡುತ್ತವೆ; ಮಾಡಬೇಕಾದದ್ದನ್ನು ಮಾಡದಂತೆ ಅಡ್ಡಿಹಾಕುತ್ತವೆ. ಒಂದೊಂದು ಇಂದ್ರಿಯಕ್ಕೂ ತನ್ನತನ್ನ ವಿಷಯಗಳಲ್ಲಿ ರಾಗವಾಗಲಿ ದ್ವೇಷವಾಗಲಿ ಆಗಿಯೇತೀರುವವು. ಆಗ ನಾವು ಅವುಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವದಕ್ಕೆ ಆದೀತೆ? ಚೆನ್ನಾಗಿ ಪಳಗದೆ ಇರುವ ತುಂಟ ಕುದುರೆಗಳನ್ನು ಗಾಡಿಗೆ ಕಟ್ಟಿದರೆ ಅವು ಅದನ್ನು ಕಂಡಕಂಡಕಡೆಗೆ ಎಳೆದುಕೊಂಡು ಹೋಗಿ ಕೊರಕಲಿಗೆ ಎಳೆಯದೆ ಇದ್ದಾವೆ? ಎಂಬ ಶಂಕೆಯೊಂದು ನಮ್ಮಲ್ಲಿ ತೋರಿಕೊಳ್ಳುವದು ಸಹಜವಾಗಿದೆ.

ಆದರೆ ಇಂದ್ರಿಯಗಳ ಸ್ವಭಾವವೇನು? ಅವು ಸ್ವಭಾವದಿಂದಲೇ ಕೆಟ್ಟವುಗಳೆ? ಅವುಗಳಲ್ಲಿ ವಿಷಯಗಳ ಕಾಮವೆಂಬುದು ಸ್ವಾಭಾವಿಕವಾಗಿರುವದೊ, ಕಾರಣಾಂತರದಿಂದ ಅವುಗಳಲ್ಲಿ ಅಂಟಿಕೊಳ್ಳುವದೊ?–ಇದನ್ನು ನಾವು ವಿಚಾರಮಾಡಬೇಕು. ಸ್ವಭಾವ ಎಂಬ ಮಾತಿಗೆ ಸ್ವರೂಪವೆಂದೂ ಸ್ವಧರ್ಮವೆಂದೂ ಅರ್ಥವಾಗುತ್ತದೆ. ಇಂದ್ರಿಯಗಳ ಸ್ವರೂಪವೇ ಕಾಮದಿಂದೊಡಗೂಡಿರುವದಾದರೆ ಅವುಗಳನ್ನು ನಾವು ಎಂದಿಗೂ ಗೆಲ್ಲುವದಕ್ಕೆ ಆಗಲಾರದು. ಕಲ್ಲಿನ ಸ್ವರೂಪವೇ ಗಟ್ಟಿಯಾಗಿರುತ್ತದೆ; ಗಟ್ಟಿಯಾದ ಕಲ್ಲಿನ ಸ್ವರೂಪವನ್ನು ಮೆದುವಾದ ಮೇಣದ ಸ್ವರೂಪವಾಗಿಸುವದಕ್ಕೆ ಎಂದಿಗೂ ಆಗಲಾರದು. ಸ್ವರೂಪವು ಹೋದರೆ ವಸ್ತುವಿನ ನಾಶವೇ ಆಗಿಬಿಡುತ್ತದೆ.

ಇಂದ್ರಿಯಗಳನ್ನು ನಿಗ್ರಹಿಸುವದು ಕಷ್ಟವೆಂಬುದನ್ನು ಎಲ್ಲರೂ ಒಪ್ಪಬೇಕು. ಕಾಡು ಮೇಡಿನಲ್ಲಿ ಅಲೆಯುತ್ತಾ ನೀರು, ಗಾಳಿ, ತರಗೆಲೆ–ಮುಂತಾದವುಗಳನ್ನು ಮಾತ್ರ ಆಹಾರಕ್ಕೆ ಉಪಯೋಗಿಸುತ್ತಾ ಕಾಷ್ಠತಪಸ್ಸುಮಾಡುತ್ತಿದ್ದ ಮುನಿಗಳು ಕೂಡ ಮನಸ್ಸನ್ನೆಳೆಯುವ ವಿಷಯವು ಕಾಣಿಸಿಕೊಂಡಕೂಡಲೆ ಕಾಮಪರವಶರಾದರೆಂದು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಆದರೆ ಅದೇ ಪುರಾಣಗಳಲ್ಲಿ ಅವರು ಕೊನೆಗೂ ಇಂದ್ರಿಯಗ್ರಾಮವನ್ನು ಉಪಾಯದಿಂದ ಗೆದ್ದುಕೊಂಡರೆಂದೇ ಹೇಳಿರುತ್ತದೆಯಲ್ಲವೆ? ಮನುಷ್ಯನಿಗಾಗಿಯೇ ಶಾಸ್ತ್ರವನ್ನು ಹೇಳಿರುತ್ತಾರೆಯೇ ಹೊರತು ಪಶುಗಳಿಗಾಗಲಿ ಮೃಗಪಕ್ಷಿಗಳಿಗಾಗಲಿ ಅಲ್ಲ. ಮನುಷ್ಯನು ಇಂದ್ರಿಯಗಳನ್ನು ಕಡೆಗೂ ತನ್ನ ಹಿಡಿತಕ್ಕೆ ತಂದುಕೊಳ್ಳಲೇ ಆರನೆಂದರೆ

ಆಗ ನಿಷೇಧಶಾಸ್ತ್ರಗಳಿಗೆ ಬೆಲೆ ಇಲ್ಲದೆ ಹೋಗುತ್ತದೆ. ಮನುಷ್ಯನಿಗೆ ಇಂದ್ರಿಯಗಳ ತೃಪ್ತಿಯನ್ನು ಮಾಡಿಕೊಳ್ಳುವದೇ ಸರಿಯೆಂದಾಗುತ್ತದೆ. ಸ್ವೇಚ್ಛಾವಿಹಾರವೇ ಯುಕ್ತವಾದದ್ದೆಂಬುದನ್ನು ಬಲ್ಲವರು ಯಾರೂ ಒಪ್ಪುವದಿಲ್ಲ. ಆದ್ದರಿಂದ ಇಂದ್ರಿಯಗಳಿಗೆ ರಾಗದ್ವೇಷಗಳಿಂದೊಡಗೂಡಿರುವದೇ ಸ್ವಭಾವ ಎನ್ನುವದು ಸರಿಯಾಗಲಾರದು.

ಇಂದ್ರಿಯಗಳು ಸಹಜಸ್ಥಿತಿಯಲ್ಲಿ ಹೇಗಿರುತ್ತವೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾದರೆ ಮಕ್ಕಳನ್ನೂ ನಾಗರಿಕತೆಯಿಲ್ಲದ ಸಾಮಾನ್ಯಜನರನ್ನೂ ನೋಡಬೇಕು. ಆಗ ಅವರ ಇಂದ್ರಿಯಗಳು ಅಷ್ಟು ಉಲ್ಬಣವಾಗಿರುವದಿಲ್ಲ. ಅವು ವಿಷಯಗಳಿಲ್ಲದಿದ್ದರೂ ಎದ್ದೆದ್ದು ಕುಣಿಯುತ್ತಿರುವದಿಲ್ಲ. ಪ್ರಾಣಿಗಳಿಗೆ ಹೇಗೆ ಸ್ವಾಭಾವಿಕವಾದ ಹಸಿವು ನೀರಡಿಕೆ ಮುಂತಾದ ಭಾವಗಳುಂಟಾಗುತ್ತಿರುವವೋ ಹಾಗೆಯೇ ಸಹಜಸ್ಥಿತಿಯಲ್ಲಿರುವ ಮನುಷ್ಯನಿಗೂ ಇಂದ್ರಿಯಗಳ ವ್ಯಾಪಾರವು ಮಿತವಾಗಿ ಕ್ಲಿಪ್ತ ಕಾಲದಲ್ಲಿ ತಮ್ಮ ತಮ್ಮ ವಿಷಯಗಳನ್ನು ಸ್ವೀಕರಿಸುವಷ್ಟು ಮಾತ್ರ ಇರುತ್ತದೆ. "ಪ್ರತ್ಯಕ್ಷಜ್ಞಾನ"ವೆಂದರೆ ತಮ್ಮ ತಮ್ಮ ವಿಷಯಗಳು ಎದುರಿಗೆ ಬಂದಾಗ ಅದಕ್ಕನುಗುಣವಾಗಿ ಇಂದ್ರಿಯಗಳಲ್ಲಿ ಆಗುವ "ಸ್ಪಂದವಿಶೇಷ"ವು ಎಂದು ಒಬ್ಬ ಪಾಶ್ಚಾತ್ಯ ತತ್ತ್ವವಿಚಾರಕನು ಹೇಳಿರುತ್ತಾನೆ. ಇದರಲ್ಲಿ ಒಂದು ಹೆಚ್ಚಿನ ನಿಜಾಂಶವಿದೆ. ನಮ್ಮ ಇಂದ್ರಿಯಗಳು ಹೊರಗಿನ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ-ಎಂಬ ಐದು ಭೂತಗಳಿಂದ ಆಗಿರುವ ಪ್ರಪಂಚವನ್ನು ಗ್ರಹಿಸುವದಕ್ಕಾಗಿ ನಮ್ಮಲ್ಲಿ ಏರ್ಪಟ್ಟಿರುತ್ತವೆ. ಇವುಗಳೂ ಪೃಥಿವಿಯೇ ಮುಂತಾದ ಭೂತಗಳ ಸೂಕ್ಷ್ಮಾಂಶದಿಂದಲೇ ಆಗಿರುತ್ತವೆ. ಆದ್ದರಿಂದ ತಮ್ಮ ಸಜಾತಿಯವಾದ ವಿಷಯವು ಹೊರಗೆ ಇರುವಾಗ ವಸ್ತುವಿನ ಪಡಿನೆಳಲನ್ನು ಕೊಡುವ ಕನ್ನಡಿಯತೆ ಇವು ವರ್ತಿಸುತ್ತವೆ. ಕನ್ನಡಿಯ ದೃಷ್ಟಾಂತದಲ್ಲಿ ಕನ್ನಡಿಯು ತಾನು ಇದ್ದಂತೆಯೇ ಇದ್ದು ಪ್ರತಿಬಿಂಬವನ್ನು ಹೊಳೆಯಿಸುತ್ತದೆ; ಆದರೆ ಇಂದ್ರಿಯಗಳು ಜೀವಂತಕನ್ನಡಿಯಂತೆ ಇರುತ್ತವೆ. ವಿಷಯಗಳು ತಮ್ಮೆದುರಿಗೆ ಬರುತ್ತಲೂ ಅವುಗಳ ಒಳರಚನೆಯಲ್ಲಿರುವ ಜೀವಾಣುಗಳೆಲ್ಲವೂ ಸ್ಪಂದವಾಗಿಬಿಡುತ್ತವೆ !-ಇದೇ ಅವುಗಳ ಸಹಜವಾದ ಸ್ಥಿತಿ. ಅಗ್ನಿಯೇ ಮುಂತಾದ ದೇವತೆಗಳು ವಾಗಿಂದ್ರಿಯವೇ ಮುಂತಾದವುಗಳಾಗಿ ಮನುಷ್ಯನಲ್ಲಿ ಒಳಹೊಕ್ಕಿರುವರೆಂದು ಉಪನಿಷತ್ತಿನಲ್ಲಿ ಹೇಳಿರುವದಕ್ಕೆ ಇದೇ ಅಭಿಪ್ರಾಯ.

ಇಂದ್ರಿಯಗಳಿಗೆ ಹಸಿವಾದಾಗ ಅವುಗಳಿಗೆ ವಿಷಯವನ್ನು ಆಹಾರವಾಗಿ ಕೊಡುವದು ಸರಿಯೇ ಆಗಿರುತ್ತದೆ. ಆದರೆ ಮಕ್ಕಳಿಗೆ ತುಷ್ಟಿಯೂ ಪುಷ್ಟಿಯೂ ಆಗುವ ಆಹಾರವನ್ನು ಕೊಡುವದನ್ನು ಬಿಟ್ಟು ಸದ್ಯಕ್ಕೆ ಸರಿಯಾಗಿ ತೋರುವ ಮಿಠಾಯಿಯೇ ಮುಂತಾದವನ್ನು ಕೊಟ್ಟು ಅವುಗಳ ಆರೋಗ್ಯವನ್ನು ಕೆಡಿಸುವ ಹೆಡ್ಡತಾಯಿಯರಂತೆ ನಾವೂ ಇಂದ್ರಿಯಗಳಿಗೆ ಉತ್ತಮವಾದ ವಿಷಯಗಳನ್ನು ಕಾಲಕಾಲಕ್ಕೆ ಕೊಡುವದನ್ನು ಬಿಟ್ಟು

ಹಿತವಿಲ್ಲದ ಮಿತವಿಲ್ಲದ ಭೋಗ್ಯವಸ್ತುಗಳನ್ನು ಅವುಗಳಿಗೆ ಕೊಟ್ಟು ಕೆಡಿಸುತ್ತಿರುವೆವು. ಮಕ್ಕಳಿಗೆ ನಿದ್ರೆಬರುತ್ತಿದ್ದರೂ ತಟ್ಟಿ ಎಬ್ಬಿಸಿ ಅನಾರೋಗ್ಯವಾದ ಭಕ್ಷ್ಯವನ್ನು ಕೊಡುವ ಅವಿವೇಕಿ ತಾಯಿಯಂತೆ, ನಾವು ನಮ್ಮ ಇಂದ್ರಿಯಗಳಿಗೆ ವಿಶ್ರಾಂತಿ ಬೇಕಾಗಿರುವಾಗಲೂ ಅವು ಸವಿಯಬಾರದ ವಿಷಯಗಳನ್ನು ಅವಕ್ಕೆ ಕೊಟ್ಟು, ಅವುಗಳ ಸಹಜಸ್ಥಿತಿಯನ್ನು ಮಾರ್ಪಡಿಸುವೆವು. ಇದರಿಂದಲೇ ಅವುಗಳು ತಮ್ಮ ಸ್ವಾಭಾವಿಕವಾದ ಸ್ಥಿತಿಯಿಂದ ಜಾರಿ ಕಾಮಕ್ರೋಧಾದಿಗಳಿಗೆಡೆಯನ್ನುಂಟುಮಾಡುವ ವಿಷಯಗಳ ಕಡೆಗೇ ಜೋಲು ಬೀಳುವ ಚಟವನ್ನು ಕಲಿತುಕೊಂಡುಬಿಡುವವು.

ಇಂದ್ರಿಯಗಳನ್ನು ನಮಗೆ ಪರಮೇಶ್ವರನು ನಮ್ಮ ಶ್ರೇಯಸ್ಸಿಗೆಂದೇ ಕೊಟ್ಟಿರುತ್ತಾನೆ. ರಾಗದ್ವೇಷಗಳನ್ನು ಹೆಚ್ಚಿಸದೆ ವಿಷಯಗಳನ್ನು ಸೇವಿಸುವಂತೆಯೂ ಅವುಗಳನ್ನು ಮಾಡುವದಕ್ಕೆ ಉಪಾಯವುಂಟು. ಆ ಮಾರ್ಗವನ್ನು ಶಾಸ್ತ್ರವು ಹೇಳಿಯೂ ಇರುತ್ತದೆ. ಸರಿಯಾಗಿ ಕರ್ಮವನ್ನು ಮಾಡಿದವನಿಗೆ ಅವರ ಕರ್ಮಗಳು ಅದೃಷ್ಟರೂಪದಿಂದ ಅವರನ್ನು "ಬನ್ನಿರಿ, ಬನ್ನಿರಿ !" ಎಂದು ಆದರದಿಂದ ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತವೆ–ಎಂದು ಶಾಸ್ತ್ರದಲ್ಲಿದೆ. ಸರಿಯಾಗಿ ನಡೆಯಿಸಿಕೊಂಡ ಇಂದ್ರಿಯಗಳೂ ಹಾಗೆಯೇ. ಅವು ನಮ್ಮ ಜೀವನಪಥವನ್ನು ಅತ್ಯಂತಸುಖವಾಗಿ ಮಾಡಿ ಇಹದಲ್ಲಿ ಸುಖವನ್ನೂ ಪರದಲ್ಲಿ ಗತಿಯನ್ನೂ ಕೊಡುತ್ತವೆ. ಆದರೆ ಅವುಗಳನ್ನು ಅಸ್ವಾಭಾವಿಕ ರೀತಿಯಿಂದ ಸಾಕಿದರೆ ಕುಲಕ್ಕೆ ಮೃತ್ಯುವಾಗುವ ಕೊಡಲಿಯ ಕಾವಿನಂತೆ ನಮ್ಮನ್ನು ಇಹಪರಗಳೆರಡರಿಂದಲೂ ವಂಚಿಸಿ ಮೃತ್ಯುವಿಗೆ ಸೆರೆಕೊಟ್ಟುಬಿಡುವವು. **ಸಂ–16,**

## ನಿಮ್ಮೊಳಗೇ ಕಿವಿಗೊಟ್ಟು ಆಲೈಸಿರಿ

ವೇದದಲ್ಲಿ ಈಶ್ವರನು ಅಪ್ಪಣೆಮಾಡಿರುವಂತೆ ನಡೆದುಕೊಳ್ಳಬೇಕೆಂದು ವೈದಿಕಮತದವರು ಹೇಳುವಂತೆಯೇ ಮಿಕ್ಕ ಮತದವರೂ ತಮ್ಮತಮ್ಮ ಮತಗ್ರಂಥಗಳಲ್ಲಿ ಈಶ್ವರನ ಅಪ್ಪಣೆಯ ಸಾರವಿದೆಯೆಂದೂ ಅದರಂತೆ ನಡೆದುಕೊಂಡರೆ ಮಾತ್ರ ಸದ್ಗತಿಯಾಗುವದೆಂದೂ ಹೇಳುತ್ತಿದ್ದಾರೆ. ಆದರೆ ಈಗಿನ ಕಾಲದಲ್ಲಿ ಅನೇಕರಿಗೆ ಧರ್ಮಗ್ರಂಥಗಳನ್ನು ಓದುವದಕ್ಕೆ ತಕ್ಕ ಶಕ್ತಿಯಿಲ್ಲ. ಏಕೆಂದರೆ ಬಹುಮಟ್ಟಿಗೆ ಧರ್ಮಗ್ರಂಥಗಳ ಭಾಷೆಯು ರೂಢಿಯಲ್ಲಿಲ್ಲದ ಸಂಸ್ಕೃತ, ಹೀಬ್ರೂ, ಅರಬ್ಬಿ–ಮುಂತಾದ ಪ್ರಾಚೀನಭಾಷೆಯಾಗಿರುತ್ತದೆ. ಆ ಭಾಷೆಯನ್ನು ಬಲ್ಲವರ ಬಳಿಗೆ ಹೋಗಿ ಅವರಿಂದ ಧರ್ಮಶ್ರವಣವನ್ನು ಮಾಡುವದಕ್ಕೂ ಬಹುಜನರಿಗೆ ಬಿಡುವು ಇರುವದಿಲ್ಲ. ಇಷ್ಟೇ ಅಲ್ಲ, ಅದಕ್ಕೆ ತಕ್ಕಷ್ಟು ಬಿಡುವು ಇರುವವರಿಗೆ ಕೂಡ, "ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಧರ್ಮಸ್ವರೂಪವನ್ನು ನಿರೂಪಣಮಾಡುತ್ತಿದ್ದಾರಲ್ಲ, ಇದರಲ್ಲಿ ಯಾವದು ಸರಿ?" ಎಂಬ ಸಂದೇಹವು ಪೀಡಿಸುತ್ತಿರುವದು.

ಈ ಕಷ್ಟಕ್ಕೆ ಪರಿಹಾರವಿಲ್ಲದೆ ಇಲ್ಲ. ಏಕೆಂದರೆ ದೇವರು ಎಲ್ಲಾ ಕಾಲಕ್ಕೂ ಎಲ್ಲಾ ಜನರಿಗೂ ದೇವರಾಗಿರುತ್ತಾನೆಂದೂ ಯಾರಲ್ಲಿಯೂ ಅವನಿಗೆ ಪಕ್ಷಪಾತವಿಲ್ಲವೆಂದೂ ಎಲ್ಲಾ ಧರ್ಮಗ್ರಂಥಗಳೂ ಹೇಳುತ್ತವೆ, ಎಲ್ಲಾ ಧರ್ಮದವರೂ ಇದನ್ನು ಒಪ್ಪಿರುತ್ತಾರೆ. ಆಯಾ ಧರ್ಮಗ್ರಂಥಗಳು ಯಾವ ಋಷಿಗಳ ಮೂಲಕ ಮತ್ತು ಯಾವ ಮಹಾ ಮಹಿಮರ ಮೂಲಕ, ಬಂದವೋ ಅವರಿಗೆ ಆ ದೇವರೇ ಆಯಾ ವಿಚಾರಗಳನ್ನು ಹೇಳಿದನೆಂದೂ ಎಲ್ಲರೂ ಒಪ್ಪಿರುತ್ತಾರೆ. ಆದ್ದರಿಂದ ಈಗಲೂ ನಮ್ಮೊಳಗೂ ಅದೇ ದೇವರು ಇದ್ದುಕೊಂಡು ಹಾಗೆಯೇ ತತ್ತ್ವವನ್ನು ತಿಳಿಸುತ್ತಿದ್ದಾನೆ-ಎಂದಾಯಿತು. ಆದರೆ ನಾವು ಮಾತ್ರ ನಮ್ಮೊಳಗೆ ಕಿವಿಗೊಟ್ಟು ಆಲೈಸುತ್ತಿಲ್ಲ; ಆದ್ದರಿಂದಲೇ ನಮಗೆ ಆತನ ವಚನವು ಕೇಳಿಬರುತ್ತಲಿಲ್ಲ. ವೇದವೂ ಬೈಬಲ್ಲೂ ಕುರಾನೂ ನಮ್ಮ ನಮ್ಮ ಹೃದಯದಲ್ಲಿ ನಿತ್ಯವೂ ನಮಗೆ ತಿಳಿಯುವಂಥ ಭಾಷೆಯಲ್ಲಿಯೇ ಗಾನವಾಗುತ್ತಿವೆ; ಹಿಂದಿನ ಋಷಿಗಳಂತೆಯೂ ರಬ್ಬಿಗಳಂತೆಯೂ ಪೈಗಂಬರಂತೆಯೂ ನಮಗೂ ಆ ಗಾನವನ್ನು ಕೇಳುವ ಶಕ್ತಿಯಿದೆ. ಆದರೆ ಆ ಶಕ್ತಿಯನ್ನು ನಾವು ಹೆಚ್ಚಾಗಿ ಬೆಳಸಿಕೊಳ್ಳಬೇಕು, ಅಷ್ಟೆ

ಭರತಖಂಡದ ಅಧ್ಯಾತ್ಮಗ್ರಂಥಗಳಲ್ಲೆಲ್ಲ ಪರಮಶ್ರೇಷ್ಠವೆನಿಸಿಕೊಂಡಿರುವ ಉಪನಿಷತ್ತು ಗಳಲ್ಲಿಯೂ ಅವುಗಳ ಸಾರವನ್ನು ಹಿಂಡಿಟ್ಟಿರುವ ಭಗವದ್ಗೀತೆಯಲ್ಲಿಯೂ ಮತ್ತೆ ಮತ್ತೆ ಸಾರಿರುವ ಒಂದು ಘನತತ್ತ್ವವು ಯಾವದೆಂದರೆ ಒಬ್ಬನೇ ಈಶ್ವರನು ಎಲ್ಲಾ ಮನುಷ್ಯರ ಹೃದಯದಲ್ಲಿಯೂ ಇರುತ್ತಾನೆ, ಸರ್ವಪ್ರಾಣಿಗಳ ಹೃದಯದಲ್ಲಿಯೂ ಇರುತ್ತಾನೆ. ನಮ್ಮ ಜಾತಿ, ಕುಲ, ಗೋತ್ರ, ರೂಪ, ಧನ, ವಿದ್ಯೆ-ಮುಂತಾದವುಗಳಲ್ಲಿ ಎಷ್ಟೇ ಹೆಚ್ಚು ಕಡಿಮೆಯಿರಲಿ, ದೇವರು ನಮ್ಮೆಲ್ಲರ ಹೃದಯದಲ್ಲಿಯೂ ಇರುತ್ತಾನೆ. ಕಿವಿಗೊಟ್ಟು ಆಲೈಸಿದರೆ ಆತನ ಅಪ್ಪಣೆಯು ಋಷಿಗಳ ಮತ್ತು ದೇವತೆಗಳ ಹೃದಯದಲ್ಲಿ ಕೇಳಬರುತ್ತಿದ್ದಂತೆಯೇ ಅತ್ಯಂತ ನಿಕೃಷ್ಟವಾದ ಮನುಷ್ಯನ ಹೃದಯದಲ್ಲಿಯೂ ಈಗಲೂ ಕೇಳಬರುತ್ತಿರುವದು. ಈ ವಿಷಯದಲ್ಲಿ ಯಾರೊಬ್ಬರಿಗೂ ಯಾವದೊಂದು ಹೆಚ್ಚುಕಡಿಮೆಯೂ ಇರುವದೇ ಇಲ್ಲ.

ನಮ್ಮ ಹೃದಯದಲ್ಲಿರುವ ಪರಮೇಶ್ವರನು ಅಪ್ಪಣೆಮಾಡುತ್ತಿರುವದನ್ನು ಕಿವಿಕೊಟ್ಟು ಆಲೈಸುವದು, ಅದರಂತೆ ವ್ಯವಹಾರದಲ್ಲಿ ನಡೆಯುವದು-ಇಷ್ಟೇ ಧರ್ಮದ ಒಳಗುಟ್ಟು, ಆದ್ದರಿಂದ ನಾವು ಈ ಈಶ್ವರವಾಕ್ಯವನ್ನು ಆಲೈಸಿ ಕೇಳುವದನ್ನು ಅಭ್ಯಾಸಮಾಡಬೇಕು, ಧರ್ಮಾಚರಣೆಯ ಗುರುತಾಗಿ ಯಾವ ವೇಷವನ್ನಾಗಲಿ ಭಾಷೆಯನ್ನಾಗಲಿ ನಾವು ಇಟ್ಟುಕೊಂಡಿದ್ದರೂ ಇಲ್ಲದಿದ್ದರೂ ಹೀಗೆ ಆಲೈಸುವದನ್ನು ಕಲಿತುಕೊಂಡ ಹೊರತು ನಮಗೆ ನಿಜವಾದ ಮನುಷ್ಯತ್ವವು ದಕ್ಕುವದಿಲ್ಲ, ನಮ್ಮ ಜೀವನದಲ್ಲಿ ಶಾಂತಿಸುಖಗಳು ತಲೆದೋರುವದಿಲ್ಲ.

ಈಶ್ವರನ ವಾಕ್ಯವು ನಮ್ಮ ಕಿವಿಗೆ ಬೀಳಬೇಕಾದರೆ ನಾವು ವ್ಯವಹಾರದ ಗದ್ದಲವನ್ನು ಕಡಿಮೆಮಾಡಿಕೊಳ್ಳಬೇಕು. ನಮಗೆ ದಿನದಿನವೂ ಒದಗುತ್ತಿರುವ ಸುಖದುಃಖಗಳ ಯೋಚನೆಯನ್ನು ಒಂದಿಷ್ಟು ಬದಿಗಿಟ್ಟು ಚಿತ್ತವಿಟ್ಟು ನಮ್ಮೊಳಗೆ ಕೇಳುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ನಮ್ಮ ಮನಸ್ಸಿನ ಹರಿದಾಟವನ್ನು ಒಂದಿಷ್ಟುಹೊತ್ತಾದರೂ ನಿಲ್ಲಿಸಿಕೊಳ್ಳುವ ಅಭ್ಯಾಸವನ್ನು ಮಾಡಬೇಕು. "ನನಗೆ ಉತ್ತಮವಾದ ಜೀವನವು ಬೇಕು; ಊಟ, ತಿಂಡಿ, ಆಟ, ಜಗಳ, ನಿದ್ರೆ-ಮುಂತಾದ ವ್ಯವಹಾರದ ಕೆಸರಿನಲ್ಲಿಯೇ ಯಾವಾಗಲೂ ಬಿದ್ದಿರುವದು ಬೇಡ" ಎಂಬ ನಿಶ್ಚಯವು ಮನಸ್ಸಿನಲ್ಲಿ ಉಂಟಾದವರಿಗೇ ಈ ಅಭ್ಯಾಸವು ದಕ್ಕುತ್ತದೆ. ಅಂಥವರಿಗೇ ಈಶ್ವರನ ವಾಕ್ಯವು ಮೊದಲು ಮೆತ್ತಗೆ, ಆಮೇಲೆ ಇನ್ನೂ ಸ್ಪಷ್ಟವಾಗಿ, ಕೇಳಿಬರುತ್ತದೆ.

ಈಶ್ವರನ ವಾಕ್ಯವೆಂದರೆ ಒಂದು ಬಗೆಯ ಧ್ವನಿಯಲ್ಲ, ಯಾವದೋ ತಪಸ್ಸನ್ನು ಮಾಡಿದರೆ ಆ ಬಗೆಯ ಆಕಾಶವಾಣಿಯು ಕೇಳಬರುತ್ತದೆಯೆಂದೇನೂ ನನ್ನ ಅಭಿಪ್ರಾಯವಲ್ಲ. ಬಹು ದೂರದಲ್ಲಿ ಮಾತಾಡಿದವರ ಧ್ವನಿಯನ್ನು ಭೌತಿಕ ಶಾಸ್ತ್ರಜ್ಞರು ತಂತಿಯಿಲ್ಲದ ಯಂತ್ರವಿಶೇಷದಿಂದ ಗ್ರಹಿಸುವ ಹಾಗೆ, ನಮ್ಮಲ್ಲಿರುವ ಮನಸಾಕ್ಷಿಯೆಂಬ ಯಂತ್ರವನ್ನು ಉಪಯೋಗಿಸಿಕೊಂಡು ಕೇಳಿದರೆ ನಮಗೆ ಆಗುವ ಪ್ರೇರಣೆಯೇ ಈಶ್ವರವಾಕ್ಯವೆಂಬುದೇ ನನ್ನ ಅಭಿಪ್ರಾಯ.

ಸಾಮಾನ್ಯವಾಗಿ ನಮಗೆ "ಇದು ಬೇಕು, ಇದು ಬೇಡ; ಬೇಕಾದದ್ದನ್ನು ಮಾಡು, ಬೇಡವಾದದ್ದನ್ನು ಮಾಡದಿರು" ಎಂಬ ರೀತಿಯಲ್ಲಿ ಮನಃಪ್ರೇರಣೆಯಾಗುತ್ತಿರುವದು. ಈ ಪ್ರೇರಣೆಯನ್ನು ಬೆಳೆಸಿಕೊಂಡೇ ನಾವು ರಾಗದ್ವೇಷಗಳ ಬಲೆಯಲ್ಲಿ ಸಿಕ್ಕಿ ನರಳುತ್ತಿರುವೆವು. ಇದಕ್ಕೆ **"ಆಸುರಸಂಪತ್ತಿನ ವಾಣಿ"**ಯೆಂದು ಹೆಸರಿಡಬಹುದು; ಏಕೆಂದರೆ ಪುರಾಣಗಳಲ್ಲಿ ವರ್ಣಿಸಿರುವ ಅಸುರರೆಲ್ಲರೂ ಈ ಸ್ವಾರ್ಥದ ವಾಣಿಯನ್ನೇ ನಂಬಿ ವರ್ತಿಸುತ್ತಿದ್ದರು. ಆದರೆ ಸತ್ಸಂಗದಿಂದ ಈ ವಾಣಿಯನ್ನು ತಡೆದುಕೊಂಡು ಹೊರಗಿನ ರಾಗದ್ವೇಷಗಳ ಸದ್ದುಗಳನ್ನೆಲ್ಲ ಅಡಗಿಸಿಕೊಂಡು ಮನಸ್ಸನ್ನು ಅತ್ತ ಹರಿಯಬಿಡದೆ ಒಳಗೇ ಮನಸಾಕ್ಷಿಯ ಮೂಲಕ ಆಲೈಸಿದರೆ ಆಗ ಪ್ರಕೃತದಲ್ಲಿ ನಾನು ಹೇಳುತ್ತಿರುವ **ದೈವವಾಣಿ**ಯು ಕೇಳಬರುವದು, ಎಂದರೆ ಆಗ ನಮಗೆ ಪರಿಶುದ್ಧವಾದ ಉತ್ತಮವಾದ ಜೀವನದಲ್ಲಿ ಪ್ರಬಲವಾದ ಇಚ್ಛೆಯುಂಟಾಗುವದು.

ನಮ್ಮಗಳ ಮನಸ್ಸು ಯಾವದಾದರೊಂದು ಕಡೆಗೆ ಒಲಿಯುತ್ತಲೇ ಇರುವದು. ನಾವು ಆಸುರಸಂಪತ್ತಿನ ವಾಣಿಗಾದರೂ ಕಿವಿಗೊಡಬೇಕು. ದೈವಸಂಪತ್ತಿನ ವಾಣಿಗಾದರೂ ಕಿವಿಗೊಡಬೇಕು. ಎರಡು ಬಗೆಯ ವಾಣಿಗಳೂ ನಮ್ಮಲ್ಲಿ ಕೇಳಬರುತ್ತಿರುವವು. ಆಸುರ

ಸಂಪತ್ತಿನ ವಾಣಿಯು, "ಪ್ರಿಯವಾದದ್ದನ್ನು ಮಾಡು ಎನ್ನುತ್ತಿರುವದು; ದೈವ ಸಂಪತ್ತಿನ ವಾಣಿಯು "ಹಿತವಾದದ್ದನ್ನು ಮಾಡು; ಸತ್ಯವನ್ನು ಹಿಂಬಾಲಿಸು" ಎನ್ನುತ್ತಿರುವದು. ಯಾವನು ಆಸುರವಾಣಿಯನ್ನು ಹಿಮ್ಮೆಟ್ಟಿ ದೈವವಾಣಿಯನ್ನು ಆಲೈಸುತ್ತಾ ಅದರ ಹಿತೋಪದೇಶವನ್ನು ಆಚರಣೆಗೆ ತರುವದಕ್ಕೆ ಪ್ರಯತ್ನಿಸುವನೋ ಅವನು ಈಶ್ವರನ ಪ್ರೇಮರಾಜ್ಯಕ್ಕೆ ಸೇರಿಕೊಂಡವನಾದನು. ಅವನನ್ನು ಸರಿಯಾದ ಹಾದಿಯಲ್ಲಿ ನಡೆಯಿಸುವದಕ್ಕೂ ಆ ಹಾದಿಯಲ್ಲಿ ಅವನ ಯೋಗಕ್ಷೇಮಗಳನ್ನು ನೋಡಿಕೊಳ್ಳುವದಕ್ಕೂ ಕೊನೆಗೆ ಆನಂದದ ದಿವ್ಯಭವನವನ್ನು ಮುಟ್ಟಿಸುವದಕ್ಕೂ ಈಶ್ವರನು ಸಿದ್ಧನಾಗಿರುತ್ತಾನೆ; ಅದಕ್ಕಾಗಿಯೇ ಆತನು ನಮ್ಮೆಲ್ಲರ ಹೃದಯದಲ್ಲಿಯೂ ನೆಲಸಿರುತ್ತಾನೆ.

"ಪರಮೇಶ್ವರನೆ, ನಿನ್ನ ವಾಣಿಯು ನನ್ನ ಕಿವಿಗೆ ಬೀಳಲಿ, ನಿನ್ನ ಮಾರ್ಗದಲ್ಲಿ ನಾನು ನಡೆಯುವಂತಾಗಲಿ ! ನಾನು ನಿಮಿತ್ತಮಾತ್ರನಾಗಿದ್ದುಕೊಂಡು ನಿನ್ನ ಸಂಕಲ್ಪವು ನನ್ನ ಮೂಲಕ ನೆರವೇರುವಂಥ ಸುಯೋಗವನ್ನು ಅನುಗ್ರಹಿಸು" ಎಂದು ಪ್ರತಿದಿನವೂ ಆ ಭಗವಂತನನ್ನು ಪ್ರಾರ್ಥಿಸಿರಿ. **ಸಂ-9, 22**

## ಪಾರಾಯಣ

ಧ್ಯಾನವೇ ಧರ್ಮದ ತಿರುಳು, ಧ್ಯಾನವೇ ಭಗವಂತನ ತಂಪಾದ ನೆರಳು. ಧ್ಯಾನವಿಲ್ಲದಿದ್ದರೆ ಉಳಿದದ್ದೆಲ್ಲ ಬರಿಯ ಮಾತು, ಅದರಿಂದ ಯಾವ ಪ್ರಯೋಜನವೂ ಆಗಲಾರದು. ಆದ್ದರಿಂದಲೇ "ಆ ಪರಮಾತ್ಮನೊಬ್ಬನನ್ನೇ ಧ್ಯಾನಿಸಿರಿ; ಮಿಕ್ಕ ಮಾತುಗಳನ್ನು ಬಿಡಿರಿ. ಅವುಗಳಿಂದ ವಾಗಿಂದ್ರಿಯಕ್ಕೆ ಆಯಾಸವೇ ಹೊರತು ಮತ್ತೆ ಬೇರೆ ಇಲ್ಲ" ಎಂದು ಶ್ರುತಿಯು ಸಾರುತ್ತಿರುವದು.

ಆದರೆ ಪರಮಾತ್ಮನ ಸನ್ನಿಧಿಯಲ್ಲಿಯೇ ಮನಸ್ಸನ್ನಿಟ್ಟುಕೊಂಡಿರುವದು ನಮ್ಮೆಲ್ಲರಿಗೂ ಸಾಧ್ಯವಿಲ್ಲ. ಮನಸ್ಸು ಹೊರಮುಖವಾಗಿ ವಿಷಯಗಳ ಚಿಂತೆಯನ್ನು ಮಾಡುತ್ತಿರುವದಕ್ಕೆ ಹವಣಿಸುವದೇ ಹೊರತು ಒಳಕ್ಕೆ ಹೋಗುವದಕ್ಕೆ ಒಲ್ಲದು. ತನ್ನೊಳಗೆ ತಾನು ಹೊಕ್ಕು ಧ್ಯಾನಿಸಿದಲ್ಲದೆ, ತನ್ನೊಳಗೆ ಆ ಪರಮೇಶ್ವರನನ್ನು ಕಂಡುಕೊಂಡಲ್ಲದೆ, ಹೊರಗೆ ಎಲ್ಲೆಲ್ಲಿಯೂ ಆತನನ್ನು ಕಾಣುವದಕ್ಕೆ ಆಗಲಾರದು. ಆದ್ದರಿಂದ ಬಹುಜನರಿಗೆ ಪರಮೇಶ್ವರನ ನೆನಪು ದೊರೆಯುವದು ಕಷ್ಟವಾಗಿರುತ್ತದೆ. ಅಂಥವರಿಗೆಲ್ಲ ಆ ಅಂತಸ್ತಿಗೆ ಮನಸ್ಸನ್ನು ಏರಿಸಿಕೊಳ್ಳುವದಕ್ಕೆ ಹೊರಗಿನ ಸಾಧನಗಳು ಬೇಕಾಗಿರುತ್ತವೆ. ಇಂಥ ಸಾಧನಗಳಲ್ಲಿ ಒಂದು ಮುಖ್ಯವಾದ ಸಾಧನವು ಪಾರಾಯಣವು.

## ಪಾರಾಯಣವೆಂದರೇನು?

ಯಾವದಾದರೊಂದು ಧರ್ಮಗ್ರಂಥವನ್ನು ಮಡಿಯಲ್ಲಿದ್ದು ಕೊಂಡು ಓದುತ್ತಿರುವದಕ್ಕೆ **'ಪಾರಾಯಣ'**ವೆಂಬ ಹೆಸರು ರೂಢಿಯಲ್ಲಿದೆ. ಈ ಶಬ್ದದ ವ್ಯುತ್ಪತ್ತಿಯನ್ನು ನೋಡಿದರೆ ಪಾರಾಯಣವನ್ನು ಹೇಗೆ ಮಾಡಬೇಕೆಂಬುದೂ ಅದರಿಂದ ಏನು ಪ್ರಯೋಜನ ವೆಂಬುದೂ ಸ್ಪಷ್ಟವಾಗುತ್ತದೆ. **'ಪರಾಯಣ'**ವೆಂದರೆ ಅತ್ಯಂತ ಉತ್ತಮವಾದ ಗತಿಯು, ಇದೇ ನಮಗೆ ಹೆಚ್ಚಿನ ಸದ್ಗತಿಯನ್ನು ನೀಡುವದು ಎಂಬ ಶ್ರದ್ಧೆಯಿಂದ, ಯಾವದಾದ ರೊಂದು ಅನುಭವಪ್ರದವಾದ ಸದ್ಗ್ರಂಥವನ್ನು ಅದರ ಅರ್ಥಾನುಸಂಧಾನವನ್ನು ಮಾಡಿ ಕೊಳ್ಳುತ್ತಾ ಓದುವದು **'ಪಾರಾಯಣ'**ವೆನಿಸುತ್ತದೆ. ಶ್ರದ್ಧೆ, ತಾತ್ಪರ್ಯ, ಬ್ರಹ್ಮಚರ್ಯೆ- ಇವು ಮೂರೂ ಪಾರಾಯಣಕ್ಕೆ ಬೇಕಾದ ಸಾಧನಗಳು. ಅವುಗಳಿಂದಲೇ ಪಾರಾಯಣವು ಪೂರ್ತಿಯಾಗುವದು, ಅವುಗಳಿಂದಲೇ ಪರಮಾರ್ಥವಾದ ಪರಗತಿಯಾದ ಆತ್ಮನ ಧ್ಯಾನವು ನಮಗೆ ಅಳವಡುವಂಥ ಮನಸ್ಸಿನ ಮಟ್ಟವು ಪಾರಾಯಣದಿಂದ ನಮಗೆ ದೊರಕುವದು.

"ಒಂದು ಗ್ರಂಥವನ್ನು ಒಂದು ಸಲ ಓದಬಹುದು, ಅದು ಚೆನ್ನಾಗಿದೆಯೆಂದು ತೋರಿದರೆ ಮತ್ತೂ ಒಂದು ಸಲ ಓದಬಹುದು. ಆದರೆ ಅದೇ ಪುಸ್ತಕವನ್ನು ಪ್ರತಿದಿನವೂ ಬದುಕಿರುವವರೆಗೂ ಓದುತ್ತಲೇ ಇರುವದೆಂದರೆ ಹುಚ್ಚುತನವಲ್ಲವೆ?" ಎಂದು ಕೆಲವರು ಕೇಳಬಹುದು. ಸಾಮಾನ್ಯ ಪುಸ್ತಕಗಳ ವಿಷಯದಲ್ಲಿ ಈ ಆಕ್ಷೇಪವು ಸರಿಯಾದದ್ದೇ. ಏಕೆಂದರೆ ಒಂದೇ ಪುಸ್ತಕವನ್ನು ಮತ್ತೆಮತ್ತೆ ಓದುತ್ತಿದ್ದರೆ ಬೇಸರವಾಗುವದು, ಅದು ಮೊದಲಿಗಿಂತಲೂ ಎರಡನೆಯ ಸಲ ಸಪ್ಪೆಯಾಗಿಯೇ ತೋರುವದು. ದಿನದಿನಕ್ಕೂ ಹೊಸದೊಂದನ್ನು ಹುಡುಕುತ್ತಿರುವ ಚಿತ್ತಕ್ಕೆ ಒಂದೇ ಹಳೆಯ ಗ್ರಂಥವು ಯಾವಾಗ್ಯೂ ಹೇಗೆ ಸೊಗಸೀತು? ಆದರೆ ಉಪನಿಷತ್ತುಗಳು, ಭಗವದ್ಗೀತೆ, ರಾಮಾಯಣ, ಭಾಗವತ- ಇಂಥ ಅಮೂಲ್ಯವಾದ ಧರ್ಮಗ್ರಂಥಗಳಿಗೆ ಇದೇ ಆಕ್ಷೇಪಣೆಯು ಹೊಂದುವದಿಲ್ಲ. ಏಕೆಂದರೆ ಈ ಗ್ರಂಥಗಳಲ್ಲಿ ಒಬ್ಬೊಬ್ಬ ಅಧಿಕಾರಿಗೂ ಬೇರೆಬೇರೆ ದೇಶ, ಕಾಲ, ನಿಮಿತ್ತ ಗಳಿಂದ ಬೇರೆಬೇರೆಯ ಪರಿಣಾಮವನ್ನು ಮನಸ್ಸಿನ ಮೇಲೆ ಮೂಡಿಸುವ ಶಕ್ತಿಯಿರುತ್ತದೆ.

ಭಗವದ್ಗೀತೆಯಂಥ ಧರ್ಮಗ್ರಂಥದಲ್ಲಿ ಅನುಭವಾಮೃತವನ್ನು ಎಲ್ಲೆಲ್ಲಿಯೂ ತುಂಬಿರು ತ್ತದೆ. ಆದರೆ ಒಬ್ಬೊಬ್ಬ ಅಧಿಕಾರಿಯು ಒಂದೊಂದು ಶ್ಲೋಕದಲ್ಲಿ ಆ ಅಮೃತದ ಸವಿಯನ್ನು ಕಂಡುಕೊಳ್ಳಬೇಕಾಗಿರುತ್ತದೆ. ಅದರಲ್ಲಿಯೂ ಅದೇ ಅಧಿಕಾರಿಗೆ ಒಂದಾ ನೊಂದು ದೇಶದಲ್ಲಿ ಒಂದಾನೊಂದು ಕಾಲದಲ್ಲಿ ಒಂದಾನೊಂದು ನಿಮಿತ್ತದಿಂದ ಆಯಾ ಶ್ಲೋಕದಲ್ಲಿ ಆಯಾ ಸ್ವಾರಸ್ಯವು ತೋರಿಬರುತ್ತದೆಯೇ ಹೊರತು ಯಾವಾಗಲೂ ತೋರಲಾರದು. ಇದಕ್ಕೆ ಕಾರಣವೇನೆಂದರೆ ಆಯಾ ಸ್ವಾರಸ್ಯವನ್ನು ಅನುಭವಿಸುವದಕ್ಕೆ

ಚಿತ್ತಕ್ಕೆ ಒಂದಾನೊಂದು ಸಂಸ್ಕಾರವನ್ನು ಹೊಂದಬೇಕಾಗುತ್ತದೆ. ಆ ಸಂಸ್ಕಾರವು ಹಲವು ಬಾರಿ ಗ್ರಂಥವನ್ನು ಸರಿಯಾದ ಕ್ರಮದಲ್ಲಿ ಪಾರಾಯಣಮಾಡಿದವರಿಗೆ ಮಾತ್ರ ಸಾಧ್ಯವಾಗಿರುತ್ತದೆ.

ಪಾರಾಯಣದಲ್ಲಿ ಶ್ರದ್ಧೆಯಿರಬೇಕೆಂದೂ ತಾತ್ಪರ್ಯವಿರಬೇಕೆಂದೂ ಮೇಲೆ ಬಿನ್ನವಿಸಿ ಕೊಂಡಿರುತ್ತೇನಷ್ಟೆ. ಈ ಶ್ರದ್ಧೆಯು ನಮ್ಮನಮ್ಮ ಆಯಾ ಕಾಲದ ಮನಃಸ್ಥಿತಿಯನ್ನವಲಂಬಿಸಿ ರುತ್ತದೆ; ಗ್ರಂಥವು ತಿಳಿಸುವ ವಿಷಯದಲ್ಲಿ ತತ್ಪರತೆಯೂ ಕೂಡ ಆ ಮನಃಸ್ಥಿತಿಯನ್ನೇ ಅವಲಂಬಿಸಿರುತ್ತದೆ. ನಮ್ಮ ಮನಸ್ಸು ಬಾಲ್ಯದಲ್ಲಿ ಒಂದು ಬಗೆ, ಯೌವನದಲ್ಲಿ ಒಂದು ಬಗೆ-ಹೀಗೆ ಬೇರೆಬೇರೆಯ ವಯಸ್ಸಿನಲ್ಲಿ ಬೇರೆಬೇರೆಯ ಬಗೆಯ ಮಟ್ಟದಲ್ಲಿರುತ್ತದೆ. ಆಯಾ ವಯಸ್ಸಿನಲ್ಲಿಯೂ ತಮ್ಮ ಸುತ್ತಲಿನ ಸನ್ನಿವೇಶಗಳು, ನಮಗೆ ಆಗಿರುವ ವಿದ್ಯಾಸಂಸ್ಕಾರ, ನಾವು ಮಾಡುವ ಸ್ಥಿರಪ್ರಯತ್ನ-ಇವುಗಳಿಗೆಲ್ಲ ಅನುಸಾರವಾಗಿ ಈ ಶ್ರದ್ಧಾತಾತ್ಪರ್ಯಗಳು ಉಂಟಾಗುತ್ತವೆ. ಇವೆರಡರ ಜೊತೆಗೆ ಇಂದ್ರಿಯಸಂಯಮವೂ ಸೇರಿದ್ದರೆ ಏಕಾಗ್ರತೆಯಿಂದ ಗ್ರಂಥಪಾರಾಯಣವನ್ನು ನಾವು ಮಾಡಬಹುದು.

## ಪಾರಾಯಣಕ್ರಮ

ಪಾರಾಯಣಕ್ಕೆ ಕ್ರಮವೇನಾದರೂ ಅವಶ್ಯವೆ?-ಯಾವ ಕೆಲಸಕ್ಕಾದರೂ ಒಂದು ಕ್ರಮವಿಶೇಷವಿದ್ದರೇ ಅದು ಪೂರ್ಣ ಫಲವನ್ನು ಕೊಡುವದೆಂಬುದು ಸ್ಪಷ್ಟವೇ ಆಗಿರುತ್ತದೆ. ಆದ್ದರಿಂದ ಪಾರಾಯಣಕ್ಕೂ ಒಂದು ಕ್ರಮವು ಅವಶ್ಯವಾಗಿರುತ್ತದೆ. ಎಷ್ಟೋ ಜನರು ಪಾರಾಯಣಗ್ರಂಥಗಳನ್ನು ಗಿಳಿಯಂತೆ ಹೇಗೋ ಓದಿಮುಗಿಸುತ್ತಾರೆ. 'ಇಷ್ಟು ಸಲ ರಾಮಾಯಣವನ್ನು ಮುಗಿಸಿ ಮಂಗಳವನ್ನು ಮಾಡಿರುತ್ತೇನೆ' ಎಂದು ಹೇಳಿಕೊಳ್ಳುವವರು ಅಲ್ಲಲ್ಲಿ ಕಂಡುಬರುತ್ತಾರೆ; ಆದರೆ 'ಪಾರಾಯಣದಲ್ಲಿ ಇಂಥಿಂಥ ಸತ್ಫಲವು ನನಗೆ ಲಭಿಸಿತು, ನಾನು ಇಂಥ ಕ್ರಮವನ್ನು ಅನುಸರಿಸಿದೆನು' ಎಂದು ತಿಳಿಸುವವರು ವಿರಳವಾಗಿರುತ್ತಾರೆ.

ಪಾರಾಯಣದ ಕ್ರಮವೆಂದರೆ ಮಡಿಯಲ್ಲಿ ಮೌನವಾಗಿ ಕುಳಿತು ಪೂಜಾದಿಗಳನ್ನು ಮಾಡಿ ನ್ಯಾಸಜಪಾದಿಗಳ ಅನಂತರ ಓದುವದೆಂದು ನಿಯಮವೆಂದು ನನ್ನ ಅಭಿಪ್ರಾಯವಲ್ಲ. ಆ ನಿಯಮದಿಂದಲೂ ಅಲ್ಪಸ್ವಲ್ಪ ಪ್ರಯೋಜನವಿದೆ; ಆದರೆ ಪೂರ್ಣ ಪ್ರಯೋಜನವಾಗಬೇಕಾದರೆ ಪಾರಾಯಣಮಾಡುವವರ ಮನಃಸ್ಥಿತಿಯು ಒಂದಾನೊಂದು ವಿಶೇಷಕ್ರಮವನ್ನು ಅಂಗೀಕರಿಸುವದು ಅತ್ಯವಶ್ಯವಾಗಿರುತ್ತದೆ.

ಗೀತೆಗಳಂಥ ಗ್ರಂಥವನ್ನು ಆದಷ್ಟುಮಟ್ಟಿಗೆ ಮೂಲದಲ್ಲಿ ಓದಬೇಕು. ಅವುಗಳ ವಿಷಯವಾಗಿ ಬರೆದಿರುವ ವ್ಯಾಖ್ಯಾನಗಳನ್ನೂ ಉಪನ್ಯಾಸಗಳನ್ನೂ ಪಾರಾಯಣಕ್ಕೆ

ಇಟ್ಟುಕೊಳ್ಳದೆ ಇರುವದೇ ಮೇಲು. ಏಕೆಂದರೆ ಮೂಲಗ್ರಂಥಗಳಲ್ಲಿ ಒಂದು ವಿಧವಾದ ದೈವಿಕಪ್ರಸಾದವಿರುತ್ತದೆ; ಮನಸ್ಸನ್ನು ಉತ್ಕೃಷ್ಟಸ್ಥಿತಿಗೆ ಏರಿಸಿ ಭಗವಂತನ ಸನ್ನಿಧಿಗೆ ಬಿಡುವ ಪರಿಣಾಮವನ್ನು ಮಾಡುವಂಥ ಶಕ್ತಿಯಿರುತ್ತದೆ. ಆ ಗ್ರಂಥಗಳನ್ನು ಮೊದಲು ಲೋಕಕ್ಕೆ ಕೊಟ್ಟವರು ತಾವು ತತ್ತ್ವವನ್ನು ಮನಗಂಡ ಸ್ಥಿತಿಯಲ್ಲಿಯೇ ಮನಸ್ಸಿಟ್ಟುಕೊಂಡು ಅವುಗಳನ್ನು ಅನುಗ್ರಹಿಸಿದರು. ಆದ್ದರಿಂದ ಅವುಗಳಿಂದ ನಮಗೆ ಬರಬಹುದಾದ ಅಧ್ಯಾತ್ಮಶಕ್ತಿಯನ್ನು ಮಿಕ್ಕ ವಾಕ್ಯಗಳ ವಿಚಾರದಿಂದ ಚದರಿಸಿಕೊಳ್ಳಬಾರದು.

ಪಾರಾಯಣಮಾಡುವಾಗ ಆಯಾ ಸನ್ನಿವೇಶವು ಈಗಲೆ ನಮ್ಮೆದುರಿಗೇ ಇರುವಂತೆ ಕಲ್ಪಿಸಿಕೊಳ್ಳುವ ಅಭ್ಯಾಸವನ್ನು ಮಾಡಬೇಕು. ಉದಾಹರಣೆಗೆ ಶ್ರೀಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶಗಳನ್ನು ಈಗ ನಮ್ಮೆದುರಿಗೆ ಆತನು ಮಾಡುತ್ತಿರುವಂತೆ ಕಲ್ಪಿಸಿಕೊಳ್ಳಬೇಕು. ಉಪನಿಷತ್ತುಗಳಲ್ಲಿ ಹೇಳುವ ಆತ್ಮತತ್ತ್ವವು ನಮ್ಮ ಆತ್ಮನೇ ಆಗಿರುವ ದೆಂಬುದನ್ನು ಲಕ್ಷ್ಯದಲ್ಲಿಡಬೇಕು, ರಾಮಾಯಣದಲ್ಲಿ ರಾಮನು ಪಿತೃವಾಕ್ಯಪರಿಪಾಲನೆಗೆ ಕೊಡುವ ಬೆಲೆಯನ್ನು ಈಗ ನಮ್ಮೆದುರಿಗೆ ಆತನು ತೋರಿಸುತ್ತಿರುವಂತೆ ಕಲ್ಪಿಸಬೇಕು, ಭಾಗವತದಲ್ಲಿ ಶುಕರು ಪರೀಕ್ಷಿತನಿಗೆ ಮಾಡುತ್ತಿರುವ ಉಪದೇಶವು ನಮಗಾಗಿ ಈಗಲೇ ಆಗುತ್ತಿರುವಂತೆ ಭಾವಿಸಬೇಕು–ಇತ್ಯಾದಿ. ಈ ಅಭ್ಯಾಸವು ಬಲಿತಂತೆ ಪಾರಾಯಣ ಕಾಲದಲ್ಲಿ ನಮ್ಮ ಮನಸ್ಸು ತನ್ನದೇ ಒಂದು ಶುದ್ಧಪ್ರಪಂಚವನ್ನು ಏರ್ಪಡಿಸಿಕೊಂಡು ಬಿಡುತ್ತದೆ. ಮನಸ್ಸೇ ಬಂಧಮೋಕ್ಷಗಳಿಗೆ ಕಾರಣವಾಗಿರುವದರಿಂದ ತತ್ಕಾಲದಲ್ಲಿ ನಮಗೆ ಮೋಕ್ಷಸಾಮ್ರಾಜ್ಯವೇ ದೊರೆತಂತೆ ಆಗಿಬಿಡುತ್ತದೆ.

ಓದುವ ಗ್ರಂಥಭಾಗದಲ್ಲಿ ಏನಾದರೂ ಸಂದೇಹವು ಬಂದರೆ ವಿಚಾರಮಾಡುತ್ತಾ ಕೂರಬಾರದು. ಅದೇ ಗ್ರಂಥದಲ್ಲಿ ಹಿಂದಿನ ಭಾಗದಲ್ಲಿ ಹೇಳಿರುವ ಅಥವಾ ಮುಂದೆ ಹೇಳುವ ಉಪದೇಶಗಳಿಂದ ನಮ್ಮ ಸಂದೇಹವು ಖಂಡಿತವಾಗಿ ಪರಿಹಾರವಾಗುವದೆಂಬ ಭರವಸೆಯನ್ನು ಇಟ್ಟುಕೊಳ್ಳಬೇಕು. ಹಾಗೆಯೇ ಆಗಿಯೂ ತೀರುತ್ತದೆ.

ಪಾರಾಯಣಗ್ರಂಥವೆಂದರೆ ಪರಮೇಶ್ವರನೊಡನೆ ನಾವು ಸಂಭಾಷಿಸುವದಕ್ಕೆ ಮಾಡಿಕೊಳ್ಳುವ ದ್ವಾರವು. ಗ್ರಂಥದಲ್ಲಿ ಅತ್ಯಂತ ಪೂಜ್ಯಬುದ್ಧಿಯಿರಬೇಕು. ಅದರಲ್ಲಿ ಪರಮೇಶ್ವರನ ಸನ್ನಿಧಿಯನ್ನು ಭಾವಿಸಬೇಕು, ಅದರಲ್ಲಿರುವ ಉಪದೇಶಗಳನ್ನೂ ವಾಗ್ದಾನ ಗಳನ್ನೂ ಕುಹಕಬುದ್ಧಿಯಿಂದ ಕಾಣದೆ ದೃಢವಿಶ್ವಾಸದಿಂದ ಅವುಗಳನ್ನು ಆಧಾರ ವಾಗಿಟ್ಟುಕೊಂಡು ನಡೆಯಬೇಕು. ಹೀಗಾದರೆ ಅಲ್ಲಿಗಲ್ಲಿಗೆ ವ್ಯಾಖ್ಯಾನಕಾರರು ಬಿಡಿಸ ಲಾರದೆ ಇದ್ದ ಕ್ಲಿಷ್ಟಭಾಗಗಳು ತಮಗೆ ತಾವೇ ಬಿಡಿಸಿಕೊಳ್ಳುವವು. ಪಾರಾಯಣಗ್ರಂಥವು ಕೆಲವು ನಿಮಿಷಗಳವರೆಗೆ ಓದಿಡುವ ಬಾಹ್ಯಾಚಾರದ ಕಾಟದ ಪುಸ್ತಕವಾಗಿರದೆ, ನಮ್ಮ ಜೀವನಪಥದಲ್ಲಿ ಬೆಳಕನ್ನು ಬೀರುತ್ತಿರುವ ದಿವ್ಯಜ್ಯೋತಿ ಎಂಬ ಭಾವವು ಬಲವಾದಂತೆಲ್ಲ

ಪಾರಾಯಣದ ಪ್ರಯೋಜನವು ಹೆಚ್ಚು ಹೆಚ್ಚಾಗಿ ಅನುಭವಕ್ಕೆ ಬರುವದು. ರಾಮಾಯಣ ದಲ್ಲಿರುವ ಧರ್ಮ, ಭಾಗವತದಲ್ಲಿರುವ ಭಕ್ತಿ, ಉಪನಿಷತ್ತುಗಳಲ್ಲಿರುವ ಪರಮಾರ್ಥ, ಗೀತೆಯಲ್ಲಿರುವ ಯೋಗಗಳು. ಇವು ಸಜೀವವಾಗಿ ನಮ್ಮ ಹೃದಯದಲ್ಲಿ ನೆಲಸುವವು.

# ಸದ್ವ್ಯವಹಾರ

ವ್ಯವಹಾರವೆಂದರೆ ಏನು? ನಾವೆಲ್ಲರೂ ಏನನ್ನಾದರೂ ಅರಿಯ ಬೇಕೆಂದು ಅಥವಾ ಏನನ್ನಾದರೂ ಪಡೆದುಕೊಳ್ಳಬೇಕೆಂದು ಕೆಲಸದಲ್ಲಿ ತೊಡಗುತ್ತಿರುವೆವು. ಇದಕ್ಕೆ 'ವ್ಯವಹಾರ' ವೆಂದು ಹೆಸರು. ಕೋರ್ಟುಕಚೇರಿಗಳಲ್ಲಿ ಜನರು ತಮ್ಮ ಜಗಳವನ್ನು ವ್ಯವಸ್ಥೆಮಾಡಿ ಕೊಳ್ಳುವದಕ್ಕೆಂದು ನಡೆಯಿಸುವ ಕಾರ್ಯಕ್ರಮವನ್ನೇ ವ್ಯವಹಾರವೆಂದು ಕರೆಯುವದು ರೂಢಿಯಲ್ಲಿದೆ. ಅಲ್ಲಿಯೂ ಒಂದಾನೊಂದು ಪ್ರಯೋಜನಕ್ಕಾಗಿ ಕೆಲಸವನ್ನು ಮಾಡುವದರಿಂದ ಅದನ್ನು ವ್ಯವಹಾರವೆಂದು ಕರೆಯಲು ಅಡ್ಡಿಯಿಲ್ಲ. ಆದರೆ ಅದೇ ವ್ಯವಹಾರವಲ್ಲ, ಅದೂ ಒಂದು ವ್ಯವಹಾರ-ಅಷ್ಟೆ. ಇದರಂತೆ ವಿನೋದಕ್ಕಾಗಿ ಆಡುವ ಆಟಗಳು ಕೂಡ ವ್ಯವಹಾರಗಳೆನಿಸುವವು.

ವ್ಯವಹಾರವನ್ನು ಸದ್ವ್ಯವಹಾರವೆಂದೂ ಅಸದ್ವ್ಯವಹಾರವೆಂದೂ ಎರಡು ಬಗೆಯಾಗಿ ವಿಂಗಡಿಸಬಹುದು. ಸದ್ವ್ಯವಹಾರವೆಂದರೆ ವ್ಯವಹಾರದ ಪರಮಪ್ರಯೋಜನವನ್ನು ಗುರಿಯಲ್ಲಿಟ್ಟುಕೊಂಡು ಮಾಡುವ ವ್ಯವಹಾರವು; ಅಸದ್ವ್ಯವಹಾರವೆಂದರೆ ಕೊನೆಯ ಪ್ರಯೋಜನವನ್ನು ಲೆಕ್ಕಿಸದೆ ಸದ್ಯಕ್ಕೆ ನಮಗೆ ಪ್ರಿಯವೆಂದು ತೋರುವ ಯಾವದಾದರೊಂದು ಕೆಲಸದಲ್ಲಿ ತೊಡಗುವದು. ಅಸದ್ವ್ಯವಹಾರದಿಂದ ನಮಗೇ ಅಲ್ಲದೆ ಮಿಕ್ಕವರಿಗೂ ಕೆಟ್ಟದ್ದಾಗಬಹುದು, ಸದ್ವ್ಯವಹಾರದಿಂದ ಮಾತ್ರ ಎಲ್ಲರಿಗೂ ಒಳ್ಳೆಯದೇ ಆಗುವದು.

ವ್ಯವಹಾರದ ಗುರಿಯಾವದು? ಯಾವ ಪ್ರಯೋಜನಕ್ಕಾಗಿ ನಾವುಗಳು ದುಡಿಯುತ್ತಿದ್ದರೆ ಅದನ್ನು ಸದ್ವ್ಯವಹಾರವೆಂದು ಕರೆಯಬಹುದು?- ಎಂಬ ಪ್ರಶ್ನೆಯನ್ನು ಬಹುಜನರು ತಮ್ಮ ಮುಂದಕ್ಕೆ ಬರಗೊಡಿಸುವದಿಲ್ಲ. ನಮ್ಮಲ್ಲಿ ಬಹುಮಂದಿ ನಮಗೆ ಸದ್ಯಕ್ಕೆ ಪ್ರಿಯವಾದದ್ದನ್ನು ಮಾಡುತ್ತೇವೆ, ಅಥವಾ ಸದ್ಯಕ್ಕೆ ಅವಶ್ಯವೆಂದು ಕಾಣುವದನ್ನು ಮಾಡುತ್ತೇವೆ. ಉಳಿದ ಜನರು ಹೇಗೆ ಮಾಡುತ್ತಿರುವರೋ ಹಾಗೆ ಮಾಡಿದರೆ ವ್ಯವಹಾರವಾಯಿತೆಂದೇ ಎಷ್ಟೋ ಜನರು ಭಾವಿಸಿರುವಂತೆ ತೋರುತ್ತದೆ.

"ನೀನೇತಕ್ಕೆ ಇಷ್ಟೊಂದು ಕಷ್ಟಬಡುತ್ತೀಯೆ?" ಎಂದು ನಿಮ್ಮ ಗುರುತಿನವರನ್ನು ಕೇಳಿದರೆ ಸಾಧಾರಣವಾಗಿ ಬರುವ ಉತ್ತರವು ನಿಮಗೆ ತಿಳಿದೇ ಇದೆ. "ಕಷ್ಟಪಡುವದೆ? ಮತ್ತೇತಕ್ಕೆ? ಹೊಟ್ಟೆಗೆ ಬಟ್ಟೆಗೆ- ಇವೆರಡು ನೇರವಾದರೆ ಯಾರು ದುಡಿಯುತ್ತಾರೆ?"

ಇದೇ ಆ ಉತ್ತರ. ಪಾಪ ! ಈ ನಮ್ಮ ಬಡದೇಶದಲ್ಲಿ ಮುಕ್ಕಾಲುವಾಸಿ ಜನರಿಗೆ ಅಷ್ಟೂ ದೊರೆಯುವಹಾಗಿಲ್ಲ.

ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿರುವವರು "ನಮಗೆ ಜೀವನಸೌಕರ್ಯಬೇಕು. ಉಣ್ಣುವದಕ್ಕೆ ಉಡುವದಕ್ಕೇ ಅಲ್ಲದೆ, ನಮಗೆ ಯಾವಾಗಲೂ ಸಂತೋಷದಿಂದ ಇರುವದಕ್ಕೇ ಬೇಕಾದ ಸಾಮಗ್ರಿಗಳೂ ಬೇಕು. ಮನೆಮಠ, ಹೊಲ ಕಣ, ಹಣ ಕಾಸು, ಹೆಂಡಿರು ಮಕ್ಕಳು, ನೆಂಟರು ಇಷ್ಟರು, ವಿದ್ಯಾಬುದ್ಧಿಗಳು–ಎಲ್ಲವೂ ಬೇಕು" ಎಂದು ಬಯಸುತ್ತಿರುವರು. ಇದು ತಿಳಿವಳಿಕೆಯುಳ್ಳವರಲ್ಲಿ ಬಹುಜನರ ಗುರಿಯು. ಇದನ್ನು 'ಭೋಗದ ಆಶೆ' ಎಂದು ಕರೆಯಬಹುದು.

ಭೋಗಸಾಮಗ್ರಿಯನ್ನು ಬಯಸುವದರಲ್ಲಿ ತಪ್ಪೇನೂ ಇಲ್ಲ. ಮನುಷ್ಯನಿಗೆ ಭೋಗದಿಂದ ಸುಖವು ತೋರುವದುಂಟೆಂಬುದು ಅನುಭವದಲ್ಲಿಯೂ ಇದೆ. ಆದರೆ ಭೋಗಸಾಮಗ್ರಿಯನ್ನು ರಾಶಿಹಾಕಿಕೊಳ್ಳುವದೇ ವ್ಯವಹಾರದ ಗುರಿ–ಎಂದು ಇಟ್ಟುಕೊಳ್ಳುವದರಲ್ಲಿ ಒಂದು ಅಪಾಯವಿದೆ. ಅದೇನೆಂದರೆ ಬಹುಜನರಿಗೆ ಈ ರಾಶಿಯು ಕನಸಿನ ಗಂಟೇ ಆಗಿರುತ್ತದೆ; ಯಾರಿಗೆ ಅದು ನಿಜವಾಗಿ ದೊರೆಯುತ್ತದೆಯೋ ಅವರಿಗೆ ನಿರಾತಂಕವಾಗಿ ಆ ವಿಷಯಗಳನ್ನು ಭೋಗಿಸುವ ಸಾಮರ್ಥ್ಯವು ಆನುಕೂಲ್ಯವೂ ಇದ್ದೇ ಇರುತ್ತದೆಯೆಂಬ ನಿಯಮವೇನೂ ಇರುವದಿಲ್ಲ; ಅವರ ಭೋಗವಿಲಾಸದ ರಾಶಿಯನ್ನು ಕಂಡ ಇತರರಿಗೆ ಅದರಮೇಲೆ ಕಣ್ಣುಬಿದ್ದು ಒಬ್ಬೊಬ್ಬರಿಗೆ ವೈಮನಸ್ಯವುಂಟಾಗುವ ಸಂದರ್ಭಗಳೂ ಬಹಳವಾಗಿರುತ್ತವೆ. ಈ ನಿಯಮವು ವ್ಯಕ್ತಿಗಳಿಗೇ ಅಲ್ಲದೆ ಜನಾಂಗಗಳಿಗೂ ಹೊಂದುತ್ತದೆ. ಈಗಿನ ಕಾಲದಲ್ಲಿ ಜನಾಂಗಗಳು ಪರಸ್ಪರವಾಗಿ ಕಲಹವಾಡುತ್ತ ಭೂಲೋಕವನ್ನು ನರಬಲಿಯ ಮಾರಿಗುಡಿಯನ್ನಾಗಿ ಮಾಡುತ್ತಿರುವದಕ್ಕೆ ಸ್ವಾರ್ಥದ ಭೋಗೇಚ್ಛೆಯಲ್ಲದೆ ಮತ್ತೇನು ಕಾರಣ?

ಅರಿಯದ ಅವಿವೇಕಿಗಳಂತೆ ಹೊಟ್ಟೆಬಟ್ಟೆಗಳಿಗೆ ದುಡಿಯುವದೂ ವ್ಯವಹಾರದ ಗುರಿಯಲ್ಲ, ಅರಿತ ಮೂಢರಂತೆ ವಿಲಾಸಕ್ಕೆ ಮರುಳಾಗಿ ಭೋಗಸಾಮಗ್ರಿಗಳ ಬೇಟೆಗೆ ಹರಿಯುವದೂ ವ್ಯವಹಾರದ ಗುರಿಯಲ್ಲ. ದೇವರು ಹೇಗೆ ಹುಟ್ಟಿಸಿದನೋ ಹಾಗೆಯೇ ಓಡಾಡುತ್ತ ಪಶುಗಳಂತೆ ಇರುವ ಕಾಡುಜನರ ವರ್ತನೆಯಾಗಲಿ, ಬುದ್ಧಿಯನ್ನು ಪಯೋಗಿಸಿ ಯಂತ್ರಾದಿಗಳನ್ನು ನಿರ್ಮಿಸಿಕೊಂಡು ಸಾಮಾನ್ಯರಿಗೆಲ್ಲ ಜೀತದ ಸಂಕೋಲೆಗಳನ್ನು ತೊಡಿಸಿ ಅವರಿದ ತಮ್ಮ ಭೋಗಕ್ಕಾಗಿ ದುಡಿಸಿಕೊಳ್ಳುವ 'ನಾಗರಿಕತನ'ವಾಗಲಿ ವ್ಯವಹಾರದ ಹೆಗ್ಗುರಿಯಲ್ಲ. ಪರಮಾರ್ಥವಾದ ಆನಂದವನ್ನು ಕಂಡುಕೊಂಡು ತಾನೂ ಆನಂದಿಸುತ್ತಾ ತನ್ನಸುತ್ತಲೂ ಇರುವವರನ್ನು ಆನಂದದಲ್ಲಿ ಮುಳುಗಿಸುವದೇ ವ್ಯವಹಾರದ

ಗುರಿಯು. ಆ ಗುರಿಯನ್ನು ಯಾವಾಗಲೂ ಇಟ್ಟುಕೊಂಡಿರುವ ವ್ಯವಹಾರವೇ ಸದ್ವ್ಯವಹಾರವು. **ಸಂ-10, 99**

ಪರಮಾರ್ಥವಾದ ಆನಂದವನ್ನು ಕಂಡುಕೊಂಡು ತಾನೂ ಆನಂದಿಸುತ್ತಾ ತನ್ನ ಸುತ್ತಲೂ ಇರುವವರನ್ನೂ ಆನಂದದಲ್ಲಿ ಮುಳುಗಿಸುವದೇ ವ್ಯವಹಾರದ ಗುರಿಯು, ಆ ಗುರಿಯನ್ನು ಯಾವಾಗಲೂ ಇಟ್ಟುಕೊಂಡಿರುವ ವ್ಯವಹಾರವೇ ಸದ್ವ್ಯವಹಾರವು ಎಂದು ಹಿಂದೆ ತಿಳಿಸಿರುತ್ತೇನೆ. ಸದ್ವ್ಯವಹಾರವನ್ನೇ ಅನುಸರಿಸಬೇಕೆನ್ನುವವರು 'ನಾನು ಪರಮಾರ್ಥವಾದ ಆನಂದವನ್ನು ಹುಡುಕುತ್ತಿದ್ದೇನೆಯೇ, ಇಲ್ಲವೆ?' ಎಂಬ ಪ್ರಶ್ನೆಯನ್ನು ಬಾರಿಬಾರಿಗೂ ತಮಗೆ ತಾವು ಹಾಕಿಕೊಳ್ಳುತ್ತಿರಬೇಕೆಂದು ಇದರಿಂದಲೇ ಸಿದ್ಧವಾಗುತ್ತದೆ.

ನಿಜವಾದ ಆನಂದವು ಪರಮೇಶ್ವರನ ಸ್ವರೂಪವಾಗಿರುತ್ತದೆ; ಅದು ಎಲ್ಲೆಲ್ಲಿಯೂ ತುಂಬಿತುಳುಕಾಡುತ್ತಿದೆ-ಎಂದು ಶಾಸ್ತ್ರಗಳು ಮೊಳಗುತ್ತಿರುವವು. ತಿಳಿದವರು ಸಾರಿಸಾರಿ ಹೇಳುತ್ತಿರುವರು. ಆದ್ದರಿಂದ ನಮಗೆ ಯಾವ ವ್ಯವಹಾರದಿಂದಲಾದರೂ ದುಃಖವಾದರೆ ನಾವು ಅಜ್ಞಾನದಿಂದ ಆನಂದವನ್ನು ಕಳೆದುಕೊಂಡು ಆ ರೀತಿ ವ್ಯವಹರಿಸುತ್ತಿದೇವೆ ಎಂಬುದನ್ನು ಅದು ಸೂಚಿಸುತ್ತದೆ. ಅಷ್ಟೇ ಅಲ್ಲ, ನಾವು ಯಾವದಾದರೂ ವ್ಯವಹಾರವನ್ನು ಮಾಡುವಾಗ ಅದರಿಂದ ಮತ್ತೊಬ್ಬರಿಗೆ ದುಃಖವುಂಟಾಗುವಂತಿದ್ದರೂ ಅದು ಸದ್ವ್ಯವಹಾರವಾಗಲಾರದು. ಏಕೆಂದರೆ ಸದ್ವ್ಯವಹಾರವು ತಿಳಿದವರ ವ್ಯವಹಾರವು; ಆ ವ್ಯವಹಾರದಲ್ಲಿ ತನಗಾಗಲಿ ಮತ್ತೊಬ್ಬರಿಗಾಗಲಿ ದುಃಖವಾಗುವದಕ್ಕೆ ಕಾರಣವಿಲ್ಲ.

ಆನಂದವು ಎಲ್ಲೆಲ್ಲಿಯೂ ಇರುತ್ತಿದ್ದರೆ ನಮಗೇಕೆ ಅದು ಕಾಣಬರುವದಿಲ್ಲ? ಅಡಿಗಡಿಗೂ ನಮಗೇಕೆ ದುಃಖವು ಕಾಣಿಸಿಕೊಳ್ಳುತ್ತಿರುವದು? ಒಂದೊಂದು ವೇಳೆ ಸುಖವು ತೋರಿದರೂ ಅದೆಲ್ಲಿ ಹಾರುವದೋ ಎಂಬ ಅಂಜಿಕೆಯೂ ಅದು ದುಃಖದಲ್ಲಿ ಕೊನೆಗಾಣಬಹುದೆಂಬ ಅಳುಕೂ ನಮ್ಮನ್ನೇಕೆ ಬೆನ್ನಂಟಿರುವದು?-ಎಂದು ಕೇಳಬಹುದು. ಏಕೆಂದರೆ ಆನಂದಕ್ಕೆ ಕವಿದುಕೊಂಡಿರುವ ಅಜ್ಞಾನದ ಕಾವಳವನ್ನು ನಾವು ತೊಲಗಿಸಿ ಕೊಂಡಿರುವದಿಲ್ಲ; ಕೆರೆಯಲ್ಲಿ ಎಲ್ಲೆಲ್ಲಿಯೂ ನೀರು ಇರುತ್ತಿದ್ದರೂ ಅದನ್ನು ಹಾವಸೆಯು ಮುಚ್ಚಿಕೊಂಡಿದ್ದರೆ ಅದು ಕಾಣದೆ ಇರುವಂತೆ ನಮ್ಮಲ್ಲಿಯೂ ನಮ್ಮ ಸುತ್ತುಮುತ್ತಲೂ ಇರುವ ಆನಂದರಸವು ಕಾಣದಂತೆ ಅದರಮೇಲೆ ಅಜ್ಞಾನದ ಹಾವಸೆಯು ಕಟ್ಟಿಕೊಂಡಿರುತ್ತದೆ. ಈ ಅಜ್ಞಾನವನ್ನು ತೊಲಗಿಸುವ ಪ್ರಯತ್ನವೇ ಸದ್ವ್ಯವಹಾರವು.

ಸ್ವಾರ್ಥದಿಂದ ನಾವು ಮಾಡುವ ಪ್ರತಿಯೊಂದು ಪ್ರಯತ್ನದಿಂದಲೂ ಈ ಹಾವಸೆಯು ಬೆಳೆದುಕೊಂಡು ದಟ್ಟವಾಗುತ್ತಿರುವದು. ಅಸ್ವಾರ್ಥತೆಯ ಪ್ರಯತ್ನದಿಂದ ಅದು ತೆಳುವಾಗುತ್ತಾ ಹೋಗುತ್ತಿರುವದು. ಆದ್ದರಿಂದ ಜಾಣನಾದವನು ಅಸ್ವಾರ್ಥದ

ಕಾರ್ಯಗಳಿಗೇ ತನ್ನ ದೇಹವನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ವಿನಿಯೋಗಿಸಬೇಕು. ಅದರಿಂದಲೇ ಅಜ್ಞಾನದ ಮುಸುಕು ಕಳೆದು ನಿತ್ಯಾನಂದವು ಕಾಣಿಸಿಕೊಳ್ಳುತ್ತದೆ. ಆದಕಾರಣ ಅಸ್ವಾರ್ಥತೆಯಿಂದ ನಡೆಯುವದೇ ಸದ್ವ್ಯವಹಾರವು.

ನಿತ್ಯಾನಂದಸ್ವರೂಪನಾದ ಭಗವಂತನನ್ನು ನಮ್ಮಲ್ಲಿಯೂ ಪರರಲ್ಲಿಯೂ ಕಂಡುಕೊಳ್ಳುವದೇ ಜೀವನದ ಹೆಗ್ಗುರಿಯು-ಎಂಬುದನ್ನು ಮರೆಯದಿದ್ದರೆ ಸದ್ವ್ಯವಹಾರಕ್ಕೆ ಒಂದು ಮುಖ್ಯಸೂತ್ರವು ದೊರೆತಂತಾಗುವದು. ನಾವುಗಳು ಉಪಾಧ್ಯಾಯ, ವೈದ್ಯ, ವಕೀಲ, ವ್ಯಾಪಾರಿ, ಬೇಸಾಯಗಾರ, ಸಂಗೀತಗಾರ, ಚಿತ್ರಗಾರ, ಅಕ್ಕಸಾಲೆ, ಬಡಗಿ-ಮುಂತಾದ ಯಾವ ವೃತ್ತಿಯನ್ನವಲಂಬಿಸಿರಲಿ, ನಮ್ಮೆಲ್ಲರಿಗೂ ಜೀವನದ ಹೆಗ್ಗುರಿಯು ಒಂದೇ; ನಮ್ಮಲ್ಲಿ ಯಾರೊಬ್ಬರಿಗೂ ದುಃಖವು ಬೇಡ, ಆನಂದವು ಎಲ್ಲರಿಗೂ ಬೇಕಾಗಿದೆ. ಆದ್ದರಿಂದ ನಮ್ಮ ನಮ್ಮ ವೃತ್ತಿಯನ್ನು ಮುಖ್ಯವಾಗಿ ನಿತ್ಯಾನಂದರೂಪನಾದ ಭಗವಂತನ ಸಾಕ್ಷಾತ್ಕಾರಕ್ಕೆ ತಕ್ಕಂತೆ ಉಪಯೋಗಿಸುವದೇ ನಮ್ಮ ಪ್ರಯತ್ನವಾಗಿರಬೇಕು. ಆಗ ವ್ಯಾವಹಾರಿಕಪ್ರಯತ್ನವೆಲ್ಲವೂ ಆಧ್ಯಾತ್ಮಿಕಸಾಧನವಾಗುವದು. ನಮ್ಮ ವ್ಯವಹಾರವೆಲ್ಲವೂ ಸದ್ವ್ಯವಹಾರವಾಗುವದು.

ವಾಚಕವೃಂದ, ನಾವೆಲ್ಲರೂ ನಿತ್ಯಾನಂದರೂಪವಾದ ತತ್ತ್ವದಿಂದಲೇ ಬಂದಿರಬೇಕೆಂದು ನೀವೆಲ್ಲರೂ ಒಪ್ಪುತ್ತೀರಿ; ಹಾಗಿಲ್ಲದಿದ್ದರೆ ನಾವು ಎಂದಿಗೂ ಕಾಣದೆ ಇದ್ದ ನಿತ್ಯಾನಂದಕ್ಕಾಗಿ ನಾವುಗಳು ಹಾತುವರಿಯುತ್ತಿದ್ದೆವೆ? ನಾವು ಈ ಲೋಕದ ವ್ಯವಹಾರದಲ್ಲಿ ಬಹುಕಾಲ ನಿಲ್ಲಲಾರೆವು; ನಾವು ಇಲ್ಲಿಗೆ ವಿನೋದಕ್ಕೇ ಬಂದಿರಲಿ, ವ್ಯಾಪಾರಕ್ಕೇ ಬಂದಿರಲಿ, ಅಂತು ಆ ನಮ್ಮ ನಿತ್ಯಾನಂದಧಾಮಕ್ಕೆ ಹಿಂತಿರುಗಲೇಬೇಕು. ನಮ್ಮಲ್ಲಿ ಕೆಲವರು ಗಾಡಿಯಮೇಲೆ, ಕೆಲವರು ರೈಲಿನ ಮೇಲೆ, ಮತ್ತೆ ಕೆಲವರು ಹಡಗಿನಮೇಲೆ, ಇನ್ನೂ ಕೆಲವರು ವಿಮಾನದಮೇಲೆ ಬಂದಿರುತ್ತೇವೆ; ನಾವು ತಂದಿರುವ ಸಾಧನಸಂಪತ್ತಿಗಳೂ ನಾವು ಇಲ್ಲಿ ಮಾಡುವ ವ್ಯವಹಾರವೂ ಬಗೆಬಗೆಯಾಗಿರುತ್ತವೆ. ಆದರೆ ಈ ಪಯಣದಲ್ಲಿ ಅಲ್ಲಲ್ಲಿ ತಂಗಿ ಕೊಡುವದನ್ನು ಕೊಟ್ಟು, ಕೊಳ್ಳುವದನ್ನು ಕೊಂಡು, ಕೊನೆಗೆ ನಾವೆಲ್ಲರೂ ಒಂದೇ ಕಡೆಗೆ ಹಿಂತೆರಳಬೇಕಾಗುವದು. ಅದೇ ನಿತ್ಯಾನಂದಪದವಿ- ಜೀವನದ ಈ ಹೆಗ್ಗುರಿಯನ್ನು ಹೇಗೆ ಮರೆಯಲಾದೀತು?

ಆದ್ದರಿಂದ ನಮ್ಮ ಮನೋವಾಕ್ಕಾಯಗಳನ್ನು ನಮ್ಮ ಆನಂದನಗರಿಯ ಕಡೆಗೆ ತಿರುಗುವಂತೆ ಒಲಿಸಿಕೊಳ್ಳೋಣ, ಆ ಆನಂದನಗರಿಯ ಮರಹು ಎಂದಿಗೂ ನಮ್ಮನ್ನು ಮುಸುಕದಂತೆ ಎಚ್ಚರದಿಂದಿರೋಣ, ಅದರ ನೆನಹಿನಿಂದಲೇ ವ್ಯವಹಾರಮಾಡುತ್ತಿರುವವರ ಗೆಳೆತನವನ್ನು ಸಂಪಾದಿಸಿಕೊಂಡೇ ಬಾಳೋಣ. ಅದೇ ಸದ್ವ್ಯವಹಾರವು. **ಸಂ-10, 99,117**

# ತ್ರಿಕರಣಸಂಯಮ

**ಶರೀರ, ವಾಕ್ಕು, ಮನಸ್ಸು–** ಇವು ಮೂರನ್ನೂ ಹಿಡಿತದಲ್ಲಿಟ್ಟು ಕೊಳ್ಳುವ ಸಾಧನಕ್ಕೆ ತ್ರಿಕರಣಸಂಯಮವೆಂದು ಹೆಸರು. ಕರಣಗಳು ನಮ್ಮ ಸ್ವಾಧೀನದಲ್ಲಿರದೆ ಕಂಡಕಡೆಗೆ ಹರಿಯುವದೇಕೆ?–ಎಂದರೆ ತಕ್ಕ ಸಾಧನವಿಲ್ಲದ್ದರಿಂದ. ನಾವು ಶರೀರಕ್ಕೆ ತಕ್ಕ ಆಹಾರವನ್ನು ಕೊಡುವದಿಲ್ಲ; ಅದನ್ನು ಸರಿಯಾಗಿ ಕೆಲಸಮಾಡಿಸುವದಿಲ್ಲ; ಇಂದ್ರಿಯಗಳನ್ನು ಬಿಗಿಯಲ್ಲಿಟ್ಟುಕೊಳ್ಳುವದಕ್ಕೆ ಪ್ರಯತ್ನಿಸುವದೂ ಇಲ್ಲ. ಆದ್ದರಿಂದ ಶರೀರವು ನಮ್ಮ ಮಾತನ್ನು ಕೇಳುವದಿಲ್ಲ. ಕುದುರೆಗೆ ಉತ್ತಮವಾದ ಆಹಾರವನ್ನು ಹಾಕಿ ಲಾಯದಲ್ಲಿ ಕಟ್ಟಿ ಮೇಯಿಸಬೇಕಲ್ಲದೆ ಆಗಿಂದಾಗ್ಗೆ ಅದಕ್ಕೆ ಮೈ ಬೆವರುವಂತೆ ಸವಾರಿಯನ್ನೂ ಒದಗಿಸುತ್ತಿರಬೇಕು; ಹಾಗಾದರೆ ಮಾತ್ರ ಆ ಪ್ರಾಣಿಯು ನಮಗೆ ಪ್ರಯೋಜನಕಾರಿಯಾಗುತ್ತದೆ. ಹಾಗಿಲ್ಲದಿದ್ದರೆ ಆಹಾರವೂ ಕೆಲಸವೂ ಇಲ್ಲದೆ ಸೋಮಾರಿಯಾಗಿಯೋ ಕೃಶವಾಗಿಯೋ ಸಾಯುತ್ತದೆ, ಅಥವಾ ತಿಂಡಿ ಹೆಚ್ಚಾಗಿ ಕೊಬ್ಬಿ ತುಂಟುಕುದುರೆಯಾಗುತ್ತದೆ. ಅಲ್ಲವೆ? ಇದರಂತೆಯೇ ನಮ್ಮ ಶರೀರದ ವಿಷಯವನ್ನು ತಿಳಿಯಬೇಕು.

ಇದರಂತೆ ವಾಗಿಂದ್ರಿಯದ ಸಂಯಮವನ್ನು ಮಾಡಿಕೊಳ್ಳಬೇಕಾಗುತ್ತದೆ. ನಾಲಗೆಯಿದೆಯೆಂದು ಕಂಡಕಂಡಂತೆ ಮಾತನಾಡುವದಕ್ಕೆ ಹೊರಟರೆ ಸುಳ್ಳೋ ಬಿರುನುಡಿಯೋ ಅದರಿಂದ ಹೊರಟುಬಿಡುತ್ತದೆ. ಇಷ್ಟೇ ಅಲ್ಲ. ಸತ್ಯವನ್ನೂ ಪ್ರಿಯವಾದ ಇಂಪಾದ ನುಡಿಗಳನ್ನೂ ಒಂದುವೇಳೆ ಆಡಿದರೂ ನಾಲಗೆಯಿದ್ದದ್ದಕ್ಕೆ ಸಾಧಿಸಬೇಕಾದ ಶಾಸ್ತ್ರಪಾಠ ಭಗವನ್ನಾಮೋಚ್ಚಾರಣವೇ ಮುಂತಾದ ಸತ್ಕಾರ್ಯಕ್ಕೂ ಪ್ರಾಕೃತದ ನಾಲಗೆಯು ಒಲಿಯುವದಿಲ್ಲ. ಯಾವಾಗ ಮಾತನಾಡಬೇಕೋ, ಯಾವಾಗ ಸುಮ್ಮನಿರಬೇಕೋ–ಎಂಬ ವಿವೇಕವಿಲ್ಲದವನಿಗೆ ತನಗೆ ತಿಳಿದದ್ದನ್ನೂ ತಿಳಿಯದ್ದನ್ನೂ ಎಲ್ಲೆಂದರೆ ಅಲ್ಲಿ ಗಳಹಬೇಕೆಂಬ ಲವಲವಿಕೆಯೇ ಹೆಚ್ಚಾಗಿರುತ್ತದೆ. ಆದ್ದರಿಂದ ವಾಗಿಂದ್ರಿಯಕ್ಕೆ ತಕ್ಕ ವಿಷಯವನ್ನೊದಗಿಸಿ ಅದನ್ನು ಮಿತವಾಗಿ ಉಪಯೋಗಿಸುತ್ತಾ ತನಗೂ ಮಿಕ್ಕವರಿಗೂ ಹಿತವಾಗುವ ವ್ಯಾಪಾರದಲ್ಲಿಯೇ ಅದನ್ನು ತೊಡಗಿಸಿದಹೊರತು ಎಂದಿಗೂ ಅದು ನಮ್ಮ ಹಿಡಿತದಲ್ಲಿರಲಾರದು.

ಶರೀರವಾಕ್ಕುಗಳೆರಡಕ್ಕೂ ಬೇರಿನಂತಿರುವದು ಮನಸ್ಸು. ಬೇರಿಗೆ ನೀರು ಹಾಕಿ ಕಾಪಾಡಿಕೊಂಡಲ್ಲದೆ ಮರವು ಹೇಗೆ ಸುಖವಾಗಿ ಬೆಳೆಯಲಾರದೆ ಇರುವದೋ ಹಾಗೆಯೇ ಮನಸ್ಸನ್ನು ಹಿಡಿದಿಟ್ಟುಕೊಳ್ಳಲಾಗದೆ ಇರುವವರೆಗೂ ಶರೀರ ವಾಕ್ಕುಗಳು ಸ್ವಾಧೀನಕ್ಕೆ ಬರುವಹಾಗೆಯೇ ಇಲ್ಲ. ಒಂದು ಸಲ ಹರಿಯಬಿಟ್ಟ ಮನಸ್ಸು, ಎಷ್ಟೋ ದೀರ್ಘಕಾಲದವರೆಗೂ ನಮ್ಮನ್ನು ಗಾಡಿಯನ್ನೆಳೆದೊಯ್ಯುವ ತುಂಟಕುದುರೆಯಂತೆ

ಎಳೆದೊಯ್ದು ಕೆಟ್ಟ ಮಾರ್ಗದಲ್ಲಿ ತೊಡಗಿಸುತ್ತಿರುವದು. ಆದ್ದರಿಂದ ತನ್ನೊಳಗೆ ತಾನು ತನ್ನನ್ನು ಪರೀಕ್ಷಿಸುವ ಅಭ್ಯಾಸವನ್ನು ಮಾಡಿಕೊಳ್ಳಬೇಕು; ತತ್ತ್ವವಿಚಾರವನ್ನು ಮಾಡುವ ಹಾದಿಗೆ ಮನಸ್ಸನ್ನು ಬಿಡಬೇಕು; ಎಲ್ಲಕ್ಕೂ ಮೇಲಾಗಿ ಸದ್ಭಾವನೆಗಳನ್ನು ಅಡಿಗಡಿಗೆ ತಂದುಕೊಳ್ಳುತ್ತಿರಬೇಕು. ಈ ಕ್ರಮದಿಂದ ಮನಸ್ಸಿಗೆ ಉತ್ತಮವಾದ ಆಹಾರವನ್ನು ಒದಗಿಸಿ ಸರಿಯಾದ ಕೆಲಸವನ್ನು ಕೊಟ್ಟರೆ ಅದು ನಮ್ಮ ವಶವಾಗುತ್ತದೆ. ಯಾವನಿಗೆ ಮನಸ್ಸು ವಶವಾಗಿರುವದೋ ಅವನಿಗೆ ವಾಕ್ಕು ವಶವಾಗಿರುವದು, ಶರೀರವೂ ವಶವಾಗಿರುವದು. ಈ ತ್ರಿಕರಣದ ಸಂಯಮವನ್ನು ಮಾಡಿಕೊಂಡಿರುವ ಮಹಾಪುರುಷರೇ ಈ ಲೋಕದಲ್ಲಿ ಸುಖಸಾಮ್ರಾಜ್ಯವನ್ನು ಸೂರೆಗೊಳ್ಳುವರು. **ಸಂ–10, 175**

## ಸಾತ್ತ್ವಿಕಾಹಾರ

ಶರೀರವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದು ಅಧ್ಯಾತ್ಮಸಾಧನಕ್ಕೆಲ್ಲ ಮೊದಲನೆಯ ಮೆಟ್ಟಲಾಗಿರುತ್ತದೆ. ಅದರಲ್ಲಿಯೂ ಸಾತ್ತ್ವಿಕಾಹಾರವನ್ನು ಸೇವಿಸುವದು ಶರೀರವನ್ನು ವಶದಲ್ಲಿಟ್ಟುಕೊಳ್ಳುವದಕ್ಕೆ ಮೊದಲನೆಯ ಮೆಟ್ಟಲಾಗಿರುತ್ತದೆ.

ಸಾತ್ತ್ವಿಕಾಹಾರವೆಂದರೆ ನಮ್ಮಲ್ಲಿ ಸತ್ತ್ವಗುಣವುಂಟಾಗುವದಕ್ಕೆ ತಕ್ಕ ಆಹಾರವು. ಯಾವ ಆಹಾರವನ್ನು ತೆಗೆದುಕೊಂಡರೂ ಚಿಂತೆಯಿಲ್ಲ, ಹಸಿವಡಗಿ ಬಲ ಬಂದರೆ ಸಾಕು–ಎಂದು ನಾವು ಯೋಚಿಸುವ ಸಂಭವವುಂಟು. ಆದರೆ ಹಸಿವಡಗುವದು, ಆರೋಗ್ಯದಿಂದಿರುವದು, ಬಲವನ್ನು ಸಂಪಾದಿಸಿಕೊಳ್ಳುವದು–ಇಷ್ಟೇ ಜೀವನದ ಉದ್ದೇಶವಲ್ಲ. ಜೀವನದಲ್ಲಿ ನಮಗೆ ಶರೀರವು ಮುಖ್ಯವಾಗಿ ಬೇಕಾದದ್ದಾದರೂ ಅದರಿಂದ ನಮಗೂ ನಮ್ಮ ಸುತ್ತುಮುತ್ತಿನವರಿಗೂ ಸುಖಶಾಂತಿಗಳುಂಟಾಗುವಂತಿರಬೇಕು. ಅದಾಗಬೇಕಾದರೆ ನಮ್ಮ ಮನಸ್ಸಿನಲ್ಲಿ ಸತ್ತ್ವಗುಣವುಂಟಾಗಿ ಆ ಮನಸ್ಸಿನ ಆಳ್ವಿಕೆಗೆ ಶರೀರವು ಒಳಪಟ್ಟಿರಬೇಕು. ಹಾಗಾದರೆಮಾತ್ರ ಶರೀರವು ನಮಗೆ ಒಂದು ನಿಜವಾದ ಸಾಧನವಾಗುತ್ತದೆ; ಇಲ್ಲದಿದ್ದರೆ ಅದೇ ಒಂದು ದೊಡ್ಡ ಹೊರೆಯಾಗಿ ತೋರುತ್ತದೆ. ಜೀವನದ ಪರಮೋದ್ದೇಶವು ನೆರವೇರುವದಕ್ಕೆ ಸಾತ್ತ್ವಿಕಾಹಾರವು ಬೇಕೆಂಬುದು ಇದರಿಂದಲೇ ವ್ಯಕ್ತವಾಗುತ್ತದೆ.

ನಾವು ತಿಂದ ಆಹಾರವೂ ಕುಡಿದ ಪಾನವೂ ಮೂರು ಬಗೆಯಾಗಿ ಪರಿಣಮಿಸುವದೆಂದು ಶ್ರುತಿಯಲ್ಲಿ ಹೇಳಿರುತ್ತದೆ; ಅದರಲ್ಲಿ ಸ್ಥೂಲವಾದ ಭಾಗವು ಪುರೀಷಾದಿಗಳಾಗಿ ಹೊರಕ್ಕೆ ಬರುತ್ತದೆ, ಮಧ್ಯಮಭಾಗವು ಮಾಂಸಾದಿಗಳಾಗುತ್ತದೆ, ಸೂಕ್ಷ್ಮವಾದ ಭಾಗವು ನಮ್ಮ ವಾಙ್ಮನಃಪ್ರಾಣಗಳಿಗೆ ಪುಷ್ಟಿಯನ್ನು ಕೊಡುತ್ತದೆ ಎಂಬುದು ಶ್ರುತಿಸಿದ್ಧಾಂತವು. ಇದು ನಿಜವಾದರೆ ನಮ್ಮ ನಡೆನುಡಿಗಳೂ ವಿಚಾರಗಳೂ ಸಾತ್ತ್ವಿಕವಾಗಿರಬೇಕಾದರೆ

ನಾವು ತಿನ್ನುವ ಆಹಾರವೂ ಸಾತ್ತ್ವಿಕವಾಗಿರಬೇಕೆನ್ನುವದು ಯುಕ್ತವೇ ಆಗುತ್ತದೆ. ಆದ್ದರಿಂದಲೇ "ಆಹಾರವು ಶುದ್ಧವಾದರೆ ಸತ್ತ್ವವು ಶುದ್ಧಿಯಾಗುತ್ತದೆ; ಸತ್ತ್ವಶುದ್ಧಿಯಾದರೆ ಅಧ್ಯಾತ್ಮತತ್ತ್ವದ ನೆನಪು ಬಂದೇ ತೀರುತ್ತದೆ" ಎಂದು ಶ್ರುತಿಯು ಸಾರುತ್ತಿದೆ.

ಸತ್ತ್ವಗುಣಕ್ಕೆ ತಕ್ಕಂತೆ ಆಹಾರವು ಹೇಗಿರಬೇಕು?-ಎಂಬುದನ್ನು ವಿಚಾರಿಸುವ ಮೊದಲು ಆಹಾರವು ಹೇಗಿರಬೇಕು?-ಎಂಬುದನ್ನು ತಿಳಿದುಕೊಳ್ಳುವದು ಮೇಲು. ಏಕೆಂದರೆ ಸತ್ತ್ವಗುಣಕ್ಕೆ ಅಡ್ಡಿಯಾಗಿರುವದನ್ನು ಕಡಿಮೆಮಾಡಿಕೊಂಡರೂ ನಾವು ಸಾತ್ತ್ವಿಕತನಕ್ಕೆ ಎಷ್ಟೋ ಹತ್ತಿರವಾದಂತಾಯಿತು. ಗೀತೆಯಲ್ಲಿ ಕೊಟ್ಟಿರುವ ಸೂಚನೆಗಳು ಈ ವಿಷಯದಲ್ಲಿ ಬಹಳ ಸಹಾಯಕವಾಗಿರುತ್ತವೆ.

ಯಾವದು ತಂಗಳಾಗಿರುವದೋ, ಯಾವದು ಒಣಕಲಾಗಿ ನೀರಸವಾಗಿರುವದೋ, ಯಾವದು ಹಳಸಿ ಕೆಟ್ಟ ವಾಸನೆಯೂ ಬರುವಂತಿರುವದೋ, ಯಾವದು ಎಂಜಲು, ಮೈಲಿಗೆ-ಇವುಗಳ ಸೋಂಕಿರತಕ್ಕದ್ದೋ, ಅಂಥ ಪದಾರ್ಥಗಳನ್ನು ತೀರ ಕಡಿಮೆ ಯಂತಸ್ತಿನ ಮನಸ್ಸಿನ ಜನರು ಮೋಹಿಸುವರು. ನೋಡುವಾಗಲೆ ಮನಸ್ಸಿನಲ್ಲಿ ಕರೆಕರೆ ಯನ್ನುಂಟುಮಾಡುವದಾಗಿ ಆಮೇಲೆ ಶರೀರಸ್ವಾಸ್ಥ್ಯವನ್ನೇ ಕೆಡಿಸುವಂಥ ಪದಾರ್ಥ ಗಳನ್ನು ಯಾರುತಾನೆ ಬಯಸಿಯಾರು? ಯಾರಾದರೂ ಅವುಗಳನ್ನು ತಿಂದು ಅರಗಿಸಿ ಕೊಂಡರೂ ಅವರ ಮನಸ್ಸೂ ನಡೆನುಡಿಗಳೂ ಅವರು ತಿಂದರಗಿಸಿಕೊಂಡ ಆಹಾರಕ್ಕನುಗುಣವಾಗಿ ತಾಮಸವಾಗಿಯೇ ಇರುತ್ತದೆಯೆಂಬುದನ್ನು ಹೇಳಬೇಕಾಗಿಲ್ಲ; ನಿದ್ರೆ, ಸೋಮಾರಿತನ, ಮನಸ್ಸಿನಲ್ಲಿ ಚಟುವಟಿಕೆಯಿಲ್ಲದಿರುವದು, ತನಗೆ ತೋಚಿದ ಮಾತು ಗಳನ್ನು ಔಚಿತ್ಯವಿಲ್ಲದೆ ಆಡುವದು-ಇಂಥ ನಡೆವಳಿಕೆಯೇ ಆ ಆಹಾರದ ಫಲವು. ಅಂಥ ಜೀವನವು ಸಾಗಿದರೆಷ್ಟು, ಸಾಗದಿದ್ದರೆಷ್ಟು?

ಈ ತೀರಕೆಳಗಿನ ಮೆಟ್ಟಿಲನ್ನು ಬಿಟ್ಟರೂ ಬಹುಜನರು ತಿನ್ನುವ ಆಹಾರವು ಸಾತ್ತ್ವಿಕ ವೆನಿಸುವದಕ್ಕೆ ಯೋಗ್ಯವಾಗಿರುವದಿಲ್ಲ. ಆದ್ದರಿಂದ ಯಾವದು ತಿನ್ನತಕ್ಕದ್ದು, ಯಾವದು ತಿನ್ನತಕ್ಕದ್ದಲ್ಲ-ಎಂಬುದನ್ನು ಮಾತ್ರವೇ ಅಲ್ಲದೆ, ಯಾವದು ಪರಿಣಾಮದಲ್ಲಿ ನಮಗೆ ಹಿತಕಾರಿಯಾದದ್ದು ಎಂಬುದನ್ನೂ ಇಲ್ಲಿ ವಿಚಾರಮಾಡತಕ್ಕದ್ದು ಅವಶ್ಯವಾಗಿರುತ್ತದೆ. "ಊಟವೂ ನಿದ್ರೆಯೂ ಪಾಟಿಸಿದ ಹಾಗೆ"-ಎಂಬ ಗಾದೆಯೊಂದುಂಟು. ಅದಕ್ಕನುಗುಣ ವಾಗಿಯೇ ಕೆಲವರು ಕಹಿಯಾದ ಆಹಾರದಲ್ಲಿ ಪ್ರೀತಿಯುಳ್ಳವರಾಗಿರುತ್ತಾರೆ; ಕೆಲವರಿಗೆ ಹುಳಿಯೇ ಆಗಬೇಕು; ಕೆಲವರಿಗೆ ಉಪ್ಪಿನಲ್ಲಿ ಹೆಚ್ಚು ಪ್ರೀತಿ; ಮತ್ತೆ ಕೆಲವರಿಗೆ ಬಿಸಿಬಿಸಿಯ ಊಟವಾಗಬೇಕು; ಇನ್ನು ಕೆಲವರಿಗೆ ಖಾರವಾಗಿರುವ ಆಹಾರದಲ್ಲಿ ಅಕ್ಕರೆ; ಮತ್ತೆ ಕೆಲವರಿಗೆ ನಾಲಗೆಯುರಿಯುವಂಥ ಬರಗಾರ-ಮುಂತಾದವುಗಳೇ ಆಗಬೇಕು; ಮತ್ತೆ

ಕೆಲವರಿಗೆ ನಾಲಗೆಯುರಿಯುವಂಥ ಸಾಸಿವೆಯೇ ಮುಂತಾದವುಗಳಾಗ ಬೇಕು. ಇಂತಿಷ್ಟೇ ಕಹಿ, ಇಂತಿಷ್ಟೇ ಖಾರ-ಎಂಬ ಪರಿಮಾಣವಿಲ್ಲದೆ ಇವುಗಳನ್ನು ದಿನದಿನಕ್ಕೂ ಹೆಚ್ಚಿಸಿಕೊಳ್ಳುತ್ತಾ ನಾಲಗೆಯು ಒರಟಾಗಿ ರುಚಿಯನ್ನೇ ಅರಿತುಕೊಳ್ಳದಂತೆ ಮಾಡಿಕೊಂಡು, ತಿಂದಾಗ ದುಃಖವಾದರೂ ಅದನ್ನೇ ಸಂತೋಷವೆಂದುಕೊಂಡು ಆಮೇಲೆ ಶೋಕಕ್ಕೂ ರೋಗಕ್ಕೂ ತುತ್ತಾಗುವವರೂ ಕೆಲವರು ಇರುತ್ತಾರೆ. ಇವೆಲ್ಲ ರಾಜಸಾಹಾರಗಳು. ಇವುಗಳಿಂದ ಕಾಮಕ್ರೋಧಾದಿರಜೋಗುಣಗಳು ಬೆಳೆದಾವೇ ಹೊರತು ಎಂದಿಗೂ ಸತ್ತ್ವವೃದ್ಧಿಯಾಗಲಾರದು. ಸಂ-11, 44

ಇನ್ನು ನೇರಾಗಿ ಸತ್ತ್ವಗುಣವನ್ನೇ ಕೊಡುವ ಆಹಾರದಲ್ಲಿ ಯಾವ ಗುಣಗಳಿರುವದು ಅವಶ್ಯವೆಂಬುದನ್ನು ಇಲ್ಲಿ ತಿಳಿಸುತ್ತೇನೆ. ಭಗವದ್ಗೀತೆಯಲ್ಲಿ ಹೇಳಿರುವ ಒಂದು ಶ್ಲೋಕವನ್ನು ಇಲ್ಲಿ ನೆನಪಿಡುವದು ಸಹಕಾರಿಯಾಗುತ್ತದೆ.

**ಆಯುಃಸತ್ತ್ವಬಲಾರೋಗ್ಯಸುಖಪ್ರೀತಿವಿವರ್ಧನಾಃ ।**
**ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕಪ್ರಿಯಾಃ ॥**

ಆಹಾರವು ಆಯುಸ್ಸು, ಬುದ್ಧಿ, ಬಲ, ಆರೋಗ್ಯ, ಸುಖ, ಸಂತೋಷ-ಇವುಗಳನ್ನು ಹೆಚ್ಚಿಸುವಂತೆ ಇರಬೇಕು-ಎಂಬುದು ಶ್ಲೋಕದ ಭಾವಾರ್ಥವು. ಇಲ್ಲಿ ವಿಶೇಷಣವನ್ನು ಅರ್ಥಮಾಡಿಕೊಳ್ಳುವದರಲ್ಲಿ ಎಚ್ಚರಿಕೆಯಿರಬೇಕು. ಏಕೆಂದರೆ ಯಾವದು ನಮಗೆ ದಿನದಿನವೂ ತಿನ್ನುವ ಆಹಾರವಾಗಿರುತ್ತದೆಯೋ ಅದನ್ನು ಕಂಡರೆ ನಮಗೆ ಸಂತೋಷ ವಾಗುತ್ತದೆ. ಅದನ್ನು ತಿಂದರೆ ಸುಖವೂ ಆಗುತ್ತದೆ; ಆದರೆ ಈ ಸುಖಸಂತೋಷ ಗಳೇನೂ ಆಹಾರವು ಒಳ್ಳೆಯದೆಂಬುದಕ್ಕೆ ಹೆಗ್ಗುರುತಲ್ಲ. ಯಾವ ಆಹಾರವೇ ಆಗಲಿ ಅಭ್ಯಾಸದಿಂದ ಪ್ರಿಯವಾಗುವದು ಸ್ವಾಭಾವಿಕವಾಗಿದೆ. ಆದ್ದರಿಂದ ಆಹಾರದಿಂದಾಗುವ ಸುಖ ಸಂತೋಷಗಳಿಂದಲೇ ತೃಪ್ತರಾಗದೆ ಇದು ಆರೋಗ್ಯಕ್ಕೆ ಕಾರಣವಾದದ್ದೆ, ಇದನ್ನು ತಿನ್ನುವದರಿಂದ ಆರೋಗ್ಯವುಂಟಾಗುವದೆಂದು ಬಲ್ಲ ವೈದ್ಯರು ಹೇಳುತ್ತಾರೆಯೆ?- ಎಂಬುದನ್ನೂ ನೋಡಬೇಕು.

ಆದರೆ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಆರೋಗ್ಯಕ್ಕೂ ಬಲಕ್ಕೂ ಸಾಧಕವಾಗಿರುವ ಆಹಾರಗಳಲ್ಲಿಯೂ ಎರಡು ಬಗೆಯಿರುತ್ತದೆ; ಕೆಲವಕ್ಕೆ ಬಲವನ್ನು ಕೊಡುವ ಯೋಗ್ಯತೆ ಯಿದ್ದರೂ ಅವು ಬುದ್ಧಿಯನ್ನು ಹೆಚ್ಚಿಸುವವಾಗಿರುವದಿಲ್ಲ. ಸುಮ್ಮನೆ ಆಹಾರವನ್ನು ತಿಂದು ಮೈಕೊಬ್ಬಿಸಿಕೊಳ್ಳುವದೇನೂ ಮನುಷ್ಯನ ಜನ್ಮದ ಉದ್ದೇಶವಲ್ಲವಾದ್ದರಿಂದ ವಿವೇಕಿಯಾದವನು ಅಂಥ ಆಹಾರಗಳನ್ನು ಕೈಬಿಟ್ಟು ಆರೋಗ್ಯವನ್ನೂ ಬಲವನ್ನೂ ಜೊತೆಗೆ ಬುದ್ಧಿಯನ್ನೂ ಹೆಚ್ಚಿಸುವಂಥ ಆಹಾರಗಳನ್ನು ಆರಿಸಿಕೊಳ್ಳಬೇಕು. ಬುದ್ಧಿಬಲಾ

ರೋಗ್ಯದಿಂದ ಕೂಡಿರುವ ಆಹಾರವನ್ನು ಕ್ರಮವರಿತು ಉಪಯೋಗಿಸುವದು ಆಯುರ್ವೃದ್ಧಿಗೂ ಧರ್ಮವೃದ್ಧಿಗೂ ಒಂದು ಉತ್ತಮಸಹಕಾರಿಯಾಗುವದೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಮೇಲೆ ಹೇಳಿದ ಸ್ವಭಾವವು ಇಂಥ ಆಹಾರಕ್ಕಿರುವದೆಂದು ಹೇಗೆ ತಿಳಿಯಬೇಕು?- ಎಂದರೆ, ಆ ಬಗೆಯ ಆಹಾರವು ರಸವತ್ತಾಗಿರುತ್ತದೆ, ಒಣಕಲಾಗಿರುವದಿಲ್ಲ; ಜಿಡ್ಡಾಗಿ ರುತ್ತದೆ, ಪಿಸುಕಲಾಗಿರುವದಿಲ್ಲ; ಗಟ್ಟಿಯಾಗಿರುತ್ತದೆ, ಜಳ್ಳಾಗಿರುವದಿಲ್ಲ; ಹೃದ್ಯವಾಗಿರುತ್ತದೆ, ಎಂದರೆ ನೋಡುವಾಗಲೂ ತಿನ್ನುವಾಗಲೂ ತಿಂದಮೇಲೂ ಮನಸ್ಸಿಗೆ ಇಂಪನ್ನುಂಟು ಮಾಡುತ್ತದೆ, ಅಸಹ್ಯಕರವಾಗಿರುವದಿಲ್ಲ. ಈ ಗುಣಗಳೆಲ್ಲ ಒಂದು ಆಹಾರದಲ್ಲಿದ್ದರೆ ಸಾಧಾರಣವಾಗಿ ಅದು ಯೋಗ್ಯವಾದದ್ದೆಂದು ನಂಬಬಹುದು.

ಆಹಾರವು ಸರಿಯಾದದ್ದೋ ಅಲ್ಲವೋ ಎಂಬುದನ್ನು ನಾವೇ ಪರೀಕ್ಷಿಸಿ ನೋಡಿ ತಿಳಿದುಕೊಳ್ಳುವದು ಕಷ್ಟ. ಆದ್ದರಿಂದ ಶಾಸ್ತ್ರದಲ್ಲಿ ಭಕ್ಷ್ಯಾಭಕ್ಷ್ಯಗಳನ್ನು ವಿಂಗಡಿಸಿ ಹೇಳಿರುತ್ತದೆ. ಜಾತಿದೋಷ, ಆಶ್ರಯದೋಷ, ನಿಮಿತ್ತದೋಷ-ಎಂಬ ಮೂರು ದೋಷಗಳೂ ಇಲ್ಲದೆ ಇರುವದೇ ಶುದ್ಧವಾದ ಆಹಾರವಾದ್ದರಿಂದ ಶಾಸ್ತ್ರದೃಷ್ಟಿ ಯಿಂದಲೂ ಶುದ್ಧವಾದ ಆಹಾರವನ್ನೇ ಸಾಧಕನು ಸೇವಿಸಬೇಕಾಗುತ್ತದೆ. ಆಹಾರವು ಹುಟ್ಟುವಾಗಲೇ ದುಷ್ಟವಾಗಿದ್ದರಂತೂ ಅದನ್ನು ದೂರಪಡಿಸತಕ್ಕದ್ದು ಅತ್ಯವಶ್ಯವಾಗುತ್ತದೆ. ಯಾರಿಂದ ಆಹಾರವು ಬರುವದೋ ಆ ಆಶ್ರಯವನ್ನು ಪರೀಕ್ಷೆ ಮಾಡತಕ್ಕದ್ದು ಅವಶ್ಯವೆಂದೂ ಆಹಾರವು ಯಾವ ನಿಮಿತ್ತದಿಂದ ಮಾರ್ಪಟ್ಟಿರುವದೋ ಅದನ್ನೂ ವಿಚಾರಮಾಡಿ ದೋಷವಿಲ್ಲದಿದ್ದರೇ ಅದನ್ನು ತೆಗೆದುಕೊಳ್ಳಬಹುದೆಂದೂ ಬಲ್ಲವರು ಹೇಳುವರು. ಆದರೆ ಇಷ್ಟೆಲ್ಲ ಪರೀಕ್ಷೆಯನ್ನು ಮಾಡಿದರೂ ಉತ್ತಮವಾದ ಆಹಾರವೆಂಬುದು ಯಾವದು ಎಂಬುದು ನಮಗೆ ಗೊತ್ತಾಗುವದೆಂದು ಭರವಸೆಯಿಂದ ಹೇಳುವದಕ್ಕಾಗುವದಿಲ್ಲ. ಆದ್ದರಿಂದ ಉತ್ತಮವಾದ ಆಹಾರಕ್ಕೆ ಒಂದು ಹೆಗ್ಗುರುತು ಬೇಕಾಯಿತಷ್ಟೆ. ಅದೇ ಆಹಾರವು ಸಾತ್ತ್ವಿಕಪ್ರಿಯವಾಗಿರಬೇಕೆನ್ನುವದು. ಯಾವ ಮಹಾತ್ಮರು ಸತ್ತ್ವಪ್ರಧಾನವಾದ ಚಿತ್ತವುಳ್ಳವರಾಗಿರುವರೋ ಅವರು ನಡತೆಯಿಂದಲೂ ತಮ್ಮ ಸತ್ತ್ವಶುದ್ಧಿಯ ಹೆಚ್ಚಿಗೆಯನ್ನು ತೋರಿಸಿಕೊಳ್ಳುವರಾದ್ದರಿಂದ ಅಂಥವರು ಯಾವ ಆಹಾರವನ್ನು ಶುದ್ಧವೆಂದು ಎಣಿಸುವರೋ ಅದನ್ನು ನಾವೂ ಪರಿಶುದ್ಧವೆಂದು ಭಾವಿಸಿದರೆ ತಪ್ಪಾಗದು. ಸಾತ್ತ್ವಿಕರಾದವರು ಮೇಲೆ ಬಣ್ಣಿಸಿರುವ ಪ್ರಕಾರದ ಆಹಾರವನ್ನೇ ಮೆಚ್ಚುತ್ತಾರೆ; ಅವರಿಗೆ ರಾಜಸತಾಮಸ ಆಹಾರಗಳು ಎಂದಿಗೂ ಒಗ್ಗಲಾರವು.

ಆಹಾರದ ವಿಷಯಕ್ಕೆ ಇನ್ನೊಂದು ಮಾತನ್ನು ತಿಳಿಸಿ ಈ ಲೇಖನವನ್ನು ಮುಗಿಸುವೆನು. ಆಹಾರವು ಸಾತ್ತ್ವಿಕವಾಗಿದ್ದರೂ ಅದು ಮಿತವಾಗಿರಬೇಕು.

ಸಾತ್ತ್ವಿಕಾಹಾರವೆಂದು ಮಿತಿಮೀರಿ ತಿಂದರೆ ಅದೇ ರಾಜಸತಾಮಸಸ್ವಭಾವಗಳಿಗೆ ಉತ್ತೇಜಕವಾಗುತ್ತದೆ. **ಹಿತಮಿತಮೇಧ್ಯವಾಗಿರುವದೇ** ನಿಜವಾದ ಸಾತ್ತ್ವಿಕಾಹಾರವೆಂಬುದನ್ನು ಎಂದಿಗೂ ಮರೆಯಬಾರದು. **ಹಿತವೆಂದರೆ** ಮೇಲೆ ಹೇಳಿದಂತೆ ರಸ್ಯಸ್ನಿಗ್ಧಾದಿಗುಣಗಳಿಂದ ಕೂಡಿಕೊಂಡು ಸಾತ್ತ್ವಿಕಸ್ವಭಾವದ ಜನರ ಮೆಚ್ಚಿಗೆಯನ್ನು ಪಡೆದಿರುವ ಆಹಾರವು; **ಮಿತವೆಂದರೆ** ಹಸಿವನ್ನುಂಟು ಮಾಡದೆ ಅಜೀರ್ಣಕ್ಕೆ ಅವಕಾಶವನ್ನು ಕೊಡದೆ ಸುಖಸಂತೋಷಗಳನ್ನು ಕೊಟ್ಟು ಸಾಧನೆಗೆ ತಕ್ಕ ಆರೋಗ್ಯವನ್ನೂ ಪುಷ್ಟಿಯನ್ನೂ ಉಂಟುಮಾಡುವ ಹಾಳತವಾದ ಪರಿಮಾಣದ ಆಹಾರವು; **ಮೇಧ್ಯವೆಂದರೆ** ಜಾತಿದೋಷವೇ ಮುಂತಾದ ಯಾವದೋಷವೂ ಇಲ್ಲದೆ ಪರಿಶುದ್ಧವಾದ ಚಿತ್ತದಿಂದ ಪರಮೇಶ್ವರನ ಅರ್ಪಣೆಗೆಂದು ಸಿದ್ಧವಾಗಿ ಪ್ರಸಾದರೂಪವಾಗಿ ಬಂದಿರುವ ಆಹಾರವು. ಇಂಥ ಆಹಾರವು ಯಾರಿಗೆ ಸಿಕ್ಕುವದೋ ಅವರೇ ಧನ್ಯರು. **ಸಂ–11, 73**

## ಆಳವಾಗಿ ತೋಡಿದರೆ ಧ್ರುವಜಲ ಬರುತ್ತದೆ

ಮಳೆಗಾಲದಲ್ಲಿ ಆ ಹಳ್ಳಿಯಲ್ಲಿ ಒಂದು ಭಾವಿತೋಡುವದಕ್ಕೆ ಮೊದಲುಮಾಡಿದರು. ಒಂದೆರಡು ಮಟ್ಟ ತೋಡುವದರೊಳಗೆ ನೀರು ಮೇಲಕ್ಕೆ ಬಂದು ಕಾಣಿಸಿಕೊಂಡಿತು. 'ನೀರು ಇಷ್ಟು ಮೇಲೆಯೇ ಸಿಕ್ಕಿತಲ್ಲ !'–ಎಂದು ಹಿಗ್ಗಿದರು ಎಲ್ಲರೂ.

ಬೇಸಗೆ ಬಂತು. ಬಾವಿ ಬತ್ತಿಹೋಯಿತು. ಸುತ್ತಮುತ್ತ ಎಲ್ಲೂ ಬಹುದೂರದವರೆಗೂ ನೀರಿರಲಿಲ್ಲ. ಜನರಿಗೆ ಬಹಳ ಸಂಕಟಕ್ಕಿಟ್ಟುಕೊಂಡಿತು.

ನೆರೆವೂರಿನವರೊಬ್ಬನು ಅಲ್ಲಿಗೆ ಬಂದನು, ಅವರ ಪೇಚಾಟವನ್ನು ಕಂಡು "ಅಪ್ಪ, ಮೇಲುಮೇಲೆ ಗುದ್ದಲಿ ಆಡಿಸಿದರೆ ಆಯಿತೆ? ಆಳವಾಗಿ ತೋಡಿದರೆ ಧ್ರುವಜಲ ಬರುತ್ತದೆ" ಎಂದನು. ಆಗ ಅವರ ಕಣ್ಣಿನ ಪರೆ ತೆಗೆಯಿತು.

ನಿಮ್ಮೊಳಗೆ ದೇವರ ಪ್ರೇಮದ ಧ್ರುವಜಲವು ಬರಬೇಕೊ? ಹಾಗಾದರೆ ಆಳವಾಗಿ ತೋಡಿರಿ. ಶ್ರದ್ಧೆ, ಭಕ್ತಿ, ಧ್ಯಾನ–ಇವುಗಳನ್ನು ಬಿಡದೆ ತತ್ಪರರಾಗಿ ಮಾಡಿರಿ. ಪರಮಾತ್ಮನ ಕರುಣಾಮೃತದ ಬುಗ್ಗೆಯು ಚಿಲ್ಲನೆ ಹಾರುತ್ತದೆ, ಅದರ ಪಾನವು ನಿಮಗೂ ಆಗಿ, ನಿಮ್ಮ ಸುತ್ತಲಿರುವವರನ್ನೂ ತಣಿಸುತ್ತದೆ. **ಸಂ–11, 84**

## ಬ್ರಹ್ಮಚರ್ಯ

ವಿಷಯಗಳನ್ನು ನೋಡುವದು, ಮುಟ್ಟುವದು, ಮೂಸುವದು–ಮುಂತಾದ ರೀತಿಯಿಂದ ಮನಸ್ಸನ್ನು ಹೊಲಸುಮಾಡಿಕೊಳ್ಳದೆ ಇರುವದಕ್ಕೆ ಬ್ರಹ್ಮಚರ್ಯವೆಂದು ಹೆಸರು. ಸಾತ್ತ್ವಿಕದ್ರವ್ಯಗಳನ್ನು ಭಗವದರ್ಪಣೆಮಾಡಿ ಭಗವಂತನ ಪ್ರಸಾದವೆಂದು ಸ್ವೀಕರಿಸುತ್ತಾ

ಬಂದರೆ ಅವುಗಳಲ್ಲಿ ರಾಗದ್ವೇಷಗಳಿಲ್ಲದೆ ಮನಸ್ಸು ಸಮತೂಕದಲ್ಲಿರುವದಕ್ಕೆ ಆಗುತ್ತದೆ. ಆಗ ಇಂದ್ರಿಯಗಳ ಉಪಟಳದಿಂದ ಸುಲಭವಾಗಿ ತಪ್ಪಿಸಿಕೊಳ್ಳಬಹುದಾಗುತ್ತದೆ.

ವಿಷಯಗಳನ್ನು ಸೇವನೆಮಾಡದೆ ಇದ್ದರೂ ವಿಷಯಗಳ ಸಂಬಂಧವಿಲ್ಲದ್ದರಿಂದ ಇಂದ್ರಿಯಗಳ ಹಾವಳಿಯು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ. ಆದರೆ ಅವುಗಳನ್ನು ಹಿಂದೆ ಅನುಭವಿಸಿದ್ದರಿಂದ ಆಗಿರುವ ವಾಸನೆಯು ಮಾತ್ರ ಮನಸ್ಸಿನಲ್ಲಿ ಹತ್ತಿಕೊಂಡಿರುತ್ತದೆ. ಏಕಾದಶಿಯ ದಿನ ಉಪವಾಸಮಾಡಿದವರು ದ್ವಾದಶಿಯ ದಿನ ಪಾರಣೆಗೆ ಹಾತುವರಿಯುವಂತೆ, ಬಲಾತ್ಕಾರದಿಂದ ವಿಷಯಗಳನ್ನು ಬಿಟ್ಟವರು ಮತ್ತೆ ಸಂದರ್ಭವು ದೊರಕಿದಾಗ ಬಲು ಜೋರಾದ ಆಸಕ್ತಿಯಿಂದ ಅವುಗಳ ಸೇವನೆಗೆ ಮುಂದೆ ಬರುತ್ತಾರೆ. ಎಷ್ಟೋ ಜನರು ಕೆಟ್ಟಚಟಗಳನ್ನು ಹಠದಿಂದ ಬಿಟ್ಟು ಕೆಲವು ಕಾಲದ ಮೇಲೆ ಮತ್ತೆ ಮೊದಲಿಗಿಂತಲೂ ಜೋರಾಗಿ ಆಯಾ ಅಭ್ಯಾಸದಲ್ಲಿ ತೊಡಗುವದಕ್ಕೆ ಇದೇ ಕಾರಣ.

ಆದ್ದರಿಂದ ಇಂದ್ರಿಯಗಳನ್ನು ಗೆಲ್ಲಬೇಕೆನ್ನುವವರು ಅವುಗಳನ್ನು ಸುಮ್ಮನೆ ವಿಷಯಗಳಿಂದ ಹಿಮ್ಮೆಟ್ಟಿಸಿದರೆ ಸಾಲದು; ಅವುಗಳ ಪ್ರವೃತ್ತಿಯನ್ನು ಸಾತ್ತ್ವಿಕ ರೀತಿಗೆ ತಿರುಗಿಸಿ ಮೆಲ್ಲಮೆಲ್ಲಗೆ ಪರಮೇಶ್ವರನ ಕಡೆಗೆ ಒಲವು ಆಗುವಂತೆ ಅವುಗಳನ್ನು ಉಪಯೋಗಿಸಬೇಕು. ಪರಮೇಶ್ವರನ ಸಗುಣಮೂರ್ತಿಯನ್ನು ನೋಡುವದು, ಪರಮೇಶ್ವರನ ಗುಣಗಾನವನ್ನು ಕೇಳುವದು, ಪರಮೇಶ್ವರನ ಪಾದಸೇವನೆಯನ್ನು ಮಾಡುವದು, ಆತನನ್ನು ಸ್ನಾನಮಾಡಿಸಿದ ಪಾದತೀರ್ಥವನ್ನು ಸೇವಿಸುವದು, ಆತನ ಪ್ರಸಾದವಾದ ಹೂಗಂಧ ಮೊದಲಾದವುಗಳನ್ನು ಧರಿಸುವದು-ಇಂಥ ಉಪಾಸನೆಗಳಿಂದ ಇಂದ್ರಿಯಗಳ ಮಾಯಾವಿಲಾಸವನ್ನು ತಡೆದುಕೊಳ್ಳಬೇಕು. ಹೀಗೆ ಮಾಡುತ್ತಿದ್ದರೆ ಮೆಲ್ಲಮೆಲ್ಲಗೆ ಇಂದ್ರಿಯಗಳು ತಮ್ಮ ಹರಿದಾಟವನ್ನು ಕಡಿಮೆಮಾಡುವವು. ಪಳಗಿಸಿದ ಹೋರಿಗಳು ಗಾಡಿಯನ್ನು ಎಳೆಯುವದಕ್ಕೆ ಸಜ್ಜಾಗುವಂತೆ ಸಾಧಕನನ್ನು ಸತ್ಪಥದಲ್ಲಿ ಬಿಡುವದಕ್ಕೆ ಅನುಕೂಲವಾಗುವವು. ಹೀಗೆ ಇಂದ್ರಿಯಗಳನ್ನು ಪರಮೇಶ್ವರನ ಕಡೆಗೆ ತಿರುಗಿಸುವದೇ ಬ್ರಹ್ಮಚರ್ಯವು. **ಸಂ-11, 187**

# ಸಂಪೂರ್ಣ ಬ್ರಹ್ಮಚರ್ಯ

ಬ್ರಹ್ಮಚರ್ಯ ಎಂದರೆ ಬ್ರಹ್ಮಪ್ರಾಪ್ತಿಗಾಗಿ ಗುರುಗಳಲ್ಲಿ ನಿಯಮಗಳನ್ನು ಪಾಲಿಸಿಕೊಂಡು ಇರುವದು. ಬ್ರಹ್ಮವೆಂದರೆ ವೇದವು, ಅಥವಾ ವೇದಾರ್ಥವಾದ ಬ್ರಹ್ಮವು. ವೇದಗ್ರಹಣಕ್ಕಾಗಿ ಗುರುಗಳನ್ನು ಆಶ್ರಯಿಸಿಕೊಂಡು ಅವರ ಸೇವೆಯನ್ನು ಮಾಡುತ್ತಾ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಭಿಕ್ಷಾಚರ್ಯೆಯಿಂದ ಇದ್ದುಕೊಂಡಿರುವವರನ್ನು ಬ್ರಹ್ಮಚಾರಿಗಳೆಂದು ಕರೆಯುತ್ತಿದ್ದರು. ಈಗಲೂ ಉಪನಯನವಾದಮೇಲೆ ಮದುವೆ

ಯಾಗದೆ ಇರುವವರನ್ನು 'ಬ್ರಹ್ಮಚಾರಿ' ಎನ್ನುವ ರೂಢಿಯಿದೆ. '**ಸ್ಮರಣಂ ಕೀರ್ತನಂ ಕೇಲಿಃ ಪ್ರೇಕ್ಷಣಂ ಗುಹ್ಯಭಾಷಣಮ್ । ಸಙ್ಕಲ್ಪೋಽಧ್ಯವಸಾಯಶ್ಚ ಕ್ರಿಯಾನಿಷ್ಪತ್ತಿರೇವ ಚ ॥**' ಎಂಬ ಶ್ಲೋಕದಲ್ಲಿ ಹೇಳಿರುವಂತೆ ಸ್ತ್ರೀಯನ್ನು ಸ್ಮರಿಸಿಕೊಳ್ಳುವದು, ಸ್ತ್ರೀಯರ ಮಾತನ್ನಾಡುವದು, ಅವರೊಡನೆ ಆಡುವದು, ನೋಡುತ್ತಿರುವದು, ಗುಟ್ಟಿನಲ್ಲಿ ಮಾತಾಡುವದು, ಮನಸ್ಸಿನಲ್ಲಿ ಸಂಕಲ್ಪಿಸುವದು, ನಿಶ್ಚಯಿಸಿಕೊಳ್ಳುವದು, ಕ್ರಿಯೆಯನ್ನು ಮಾಡುವದು–ಈ ಎಂಟೂ **ಮೈಥುನವೆನಿಸುತ್ತವೆ**; ಇದಕ್ಕೆ ವಿಪರೀತವಾಗಿರುವದೇ ಬ್ರಹ್ಮಚರ್ಯವು ಎಂದು ಸುಭಾಷಿತವಿದೆ. ವಿಷಯಗಳ ಸ್ಮರಣೆಯೇ ಮುಂತಾದವು ಒಂದಿಷ್ಟೂ ಇಲ್ಲದೆ ಇರುವ ನಿಯಮವು ಬ್ರಹ್ಮಚರ್ಯೆ ಯೆನಿಸುತ್ತದೆಯಾದರೂ **ವೇದವಿದ್ಯೆಯ ಸಂಪಾದನೆಗಾಗಿ ಗುರುಗಳ ಸೇವೆಯಲ್ಲಿರುವದೇ ಮುಖ್ಯವಾದ ಬ್ರಹ್ಮಚರ್ಯೆ.**

ಗುರುಗಳಲ್ಲಿ ವೇದವನ್ನು ಕಲಿತುಕೊಂಡ ಬಳಿಕ ಮದುವೆಯಾಗಲು ಹಿಂತಿರುಗುವ ಶಿಷ್ಯನು **ಉಪಕುರ್ವಾಣ** ಬ್ರಹ್ಮಚಾರಿ ಎನಿಸುತ್ತಾನೆ. ಆಮರಣಾಂತವಾಗಿ ಗುರುಗಳ ಸೇವೆಯಲ್ಲಿಯೇ ನಿಂತಿದ್ದು ಅದರಿಂದಲೇ ದೇಹವನ್ನು ಸವೆಯಿಸುವವನು ನೈಷ್ಠಿಕ ಬ್ರಹ್ಮಚಾರಿಯೆನಿಸುತ್ತಾನೆ. ನೈಷ್ಠಿಕಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ–ಈ ಮೂರು ಆಶ್ರಮಿಗಳಿಗೂ ಪುಣ್ಯಲೋಕಪ್ರಾಪ್ತಿಯಾಗುವದು–ಎಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ.

ಬ್ರಹ್ಮಪ್ರಾಪ್ತಿಗಾಗಿ–ಎಂದರೆ ಸಗುಣಬ್ರಹ್ಮವಿದ್ಯೆಯಿಂದ ಬ್ರಹ್ಮಲೋಕದ ಪ್ರಾಪ್ತಿಗಾಗಿ, ಅಥವಾ ಜ್ಞಾನದಿಂದ ಪರಬ್ರಹ್ಮಪ್ರಾಪ್ತಿಗಾಗಿ–ಗುರುಗಳ ಬಳಿಯಲ್ಲಿ ನಿಯಮದಿಂದ ಸೇವೆಮಾಡಿಕೊಂಡಿರುವದು ಎಲ್ಲಕ್ಕೂ ಹೆಚ್ಚಿನ ಬ್ರಹ್ಮಚರ್ಯೆಯು. ಇಂದ್ರನೂ ವಿರೋಚನನೂ ಪ್ರಜಾಪತಿಯ ಬಳಿಯಲ್ಲಿ ಪರಮಾತ್ಮತತ್ತ್ವವನ್ನು ತಿಳಿದುಕೊಳ್ಳುವದಕ್ಕೆಂದು ಬ್ರಹ್ಮಚರ್ಯದಿಂದ ಇದ್ದುಕೊಂಡಿದ್ದರೆಂದೂ ಅವರಿಬ್ಬರೊಳಗೆ ಇಂದ್ರನು ನೂರೊಂದು ವರ್ಷ ಬ್ರಹ್ಮಚರ್ಯದಿಂದ ಗುರುಕುಲವಾಸವನ್ನು ಮಾಡಿ ತತ್ತ್ವಜ್ಞಾನವನ್ನು ಪಡೆದು ಕೊಂಡನೆಂದೂ ಛಾಂದೋಗ್ಯೋಪನಿಷತ್ತಿನಲ್ಲಿ ವರ್ಣಿಸಿರುತ್ತದೆ. ಅನಾತ್ಮರೂಪವಾದ ವಿಷಯಗಳ ಚಿಂತನೆಯನ್ನು ಸಂಪೂರ್ಣವಾಗಿ ತೊರೆದು ಅಂತರ್ಮುಖರಾದವರಿಗೇ ಪರಬ್ರಹ್ಮವು ಒಲಿಯುವದು. ಅವರು ತತ್ತ್ವವನ್ನು ಅರಿತುಕೊಂಡು ಪರಬ್ರಹ್ಮದಲ್ಲಿಯೇ ನೆಲೆನಿಲ್ಲುವದರಿಂದ ಅವರನ್ನು ಬ್ರಹ್ಮನಿಷ್ಠರು ಎಂದು ವೇದಾಂತದಲ್ಲಿ ಕರೆದಿರುತ್ತದೆ.

**ಸಂ–37, 23**

# ಬುದ್ಧಿಯ ಅನೀತಿ

1. ವಿಷಯನಿರೀಕ್ಷಣೆಯಲ್ಲಿರುವ ಅಜಾಗರೂಕತೆ, 'ಹರಕು ಬರಕಲು' ಕೆಲಸ.

2. ಅಂಶಗಳ ಅಂಕೆಗಳನ್ನು ಪರಿಶೋಧನೆಗಾಗಿ ಲೆಕ್ಕಾಚಾರಕ್ಕೆ ತೆಗೆದುಕೊಳ್ಳುವದರಲ್ಲಿ ತಪ್ಪು ಮಾಡುವದು.

3. ತರ್ಕದಲ್ಲಿ ಮಾಲಿನ್ಯ, ಮನಸ್ಸಿಗೆ ತೋಚಿದಂತೆ ಕಾಲ್ಪನಿಕವಾದ ವಿವರಣೆಯನ್ನು ಮಾಡುವದು.

4. ಅನುಭವವನ್ನು ಮೀರಿ ಸಾಮಾನ್ಯನಿಯಮವನ್ನು ಏರ್ಪಡಿಸುವದು.

5. ಅಭಿಪ್ರಾಯವನ್ನೇ ಜ್ಞಾನವೆಂದು ಭಾವಿಸುವದು.

6. ಪ್ರಮಾಣದಲ್ಲಾಗಲಿ ಸಂವಾದೀಕರಣದಲ್ಲಾಗಲಿ ದೌರ್ಬಲ್ಯವಿದ್ದರೂ ಶೋಧವು ಸರಿಯೆಂದು ನಂಬುವದು.

7. ಚರ್ಚೆಯಿಂದಲೇ ತೃಪ್ತನಾಗುವದು.

8. ಪರಿಶೋಧನೆಯು ಪ್ರಕ್ರಿಯೆಯಲ್ಲಿಯೂ ಕ್ರಮದಲ್ಲಿಯೂ ಸಾಕಾದಷ್ಟು ವಿಮರ್ಶೆಯಿಲ್ಲದಿರುವದು.

9. ಯಾವದಾದರೂ ವಿಲಕ್ಷಣವಾದ ಮೇಲೆಮೇಲೆ ಕಾಣುವ ಚಿಲ್ಲರೆ ವಿಷಯಗಳಿಗೆ ಬೆರಗಾಗಿ ಯಾವದೊಂದರಲ್ಲಿಯೂ ಸ್ವರಸವಾಗಿ ನಿಲ್ಲದಿರುವದು. ಅವಧಾನವು ಹಾರಾಡುತ್ತಿರುವದು.

10. ಸ್ವಪ್ರಖ್ಯಾತಿಗಾಗಿ 'ಹೊಸ' ವಾದಗಳನ್ನು ಕಂಡುಹಿಡಿಯಬೇಕೆಂಬ ಅಹಂಭಾವವು ತುಂಬಿಕೊಳ್ಳುವದಕ್ಕೆ ಎಡೆಗೊಡುವದು.

11. ಪುಸ್ತಕಗಳು, ಲೇಖನಗಳು, ಉಪನ್ಯಾಸಗಳು, ಸಂಭಾಷಣೆ-ಈ ರೂಪದಲ್ಲಿ ಮಾರಾಟ ಮಾಡುವದಕ್ಕಾಗಿ ಚಿತ್ತಾಕರ್ಷಕವಾದ ವಾದಗಳನ್ನು ಕಲ್ಪಿಸುವದು.

12. ಯಾವ ವಾದವನ್ನು ಹೊರತಂದುದಕ್ಕಾಗಿ ಜನರು ತನ್ನನ್ನು ಮೆಚ್ಚಿರುವರೋ ಅದೇ ಸರಿಯೆಂದು ಪಟ್ಟುಹಿಡಿಯುವ ಅಭಿಮಾನವನ್ನು ತಳೆಯುವದು.

13. ಅಂಶಗಳ ಆಧಾರವು ಸಾಲದಿದ್ದರೂ ಅದರ ಬಲದಿಂದ ಒಂದು ಕಲ್ಪನೆಯನ್ನು ಮಾಡಿಕೊಂಡು, ಅದಕ್ಕೆ ವಿರುದ್ಧವಾದ ಅಂಶಗಳನ್ನು ಕಡೆಗಣಿಸುವದು. **ಸಂ-12, 68**

# ವಾಕ್ಸಂಯಮ

ಮನುಷ್ಯನಲ್ಲಿರುವ ಇಂದ್ರಿಯಗಳಲ್ಲಿ ಸೋಂಕಿನ ಇಂದ್ರಿಯ, ಸವಿಯ ಇಂದ್ರಿಯ, ಮಾತಿನ ಇಂದ್ರಿಯ-ಈ ಮೂರೂ ನಾಲಿಗೆಯೊಂದರಲ್ಲಿಯೇ ಸೇರಿಕೊಂಡಿರುತ್ತವೆ. ಆದ್ದರಿಂದ ಮನುಷ್ಯನು ನಾಲಗೆಯನ್ನು ಹತೋಟಿಯಲ್ಲಿಟ್ಟುಕೊಂಡರೆ ಮೂರು ಇಂದ್ರಿಯಗಳನ್ನೂ ಹಿಡಿತದಲ್ಲಿಟ್ಟುಕೊಂಡಂತೆ ಆಗುವದೆನ್ನಬಹುದು.

ಈ ಮೂರು ಇಂದ್ರಿಯಗಳಲ್ಲಿ ಸೋಂಕು ಮೃದುಸ್ಪರ್ಶವನ್ನು ಬಯಸುತ್ತದೆ, ಸವಿಯು ಪ್ರಿಯವಾದ ಉತ್ತೇಜಕವಾದ ರುಚಿಯನ್ನು ಬಯಸುತ್ತದೆ, ಮಾತು ತನಗೆ ತಡೆ ಯಾವದೂ ಇರಬಾರದೆಂದು ಬಯಸುತ್ತದೆ. ಸ್ಪರ್ಶವೂ ರುಚಿಯೂ ಹೊರಗಿನ ವಸ್ತುವಿನ ಸಂಬಂಧದಿಂದ ಎಚ್ಚತ್ತು ಕೆಲಸಮಾಡುತ್ತವೆ; ಆದರೆ ಮಾತಿನ ಇಂದ್ರಿಯವು ಹೊರಗಿನ ವಿಷಯದ ಸಂಬಂಧವು ಇದ್ದರೂ ಇಲ್ಲದಿದ್ದರೂ ಎದ್ದು ಓಡಾಡುತ್ತದೆ. ನಾಲಗೆಯಮೇಲೆ ಒಂದು ಕಲ್ಲುಸಕ್ಕರೆಯನ್ನು ಇಟ್ಟಾಗ ಮೊದಲು ತಣ್ಣನೆಯ ಸ್ಪರ್ಶದ ವೇದನೆಯಾಗುತ್ತದೆ; ಆಮೇಲೆ ಇಷ್ಟವಾದ ಸಿಹಿ ಸವಿಯು ತೋರುತ್ತದೆ. ಆದರೆ ಕಲ್ಲುಸಕ್ಕರೆಯ ಮಾತು ಹೊರಗೆ ಕಲ್ಲುಸಕ್ಕರೆಯನ್ನು ನೋಡಿದರೂ ಅದರ ಸಂಬಂಧದ ಯಾವದಾದರೂ ಒಂದು ವಸ್ತುವನ್ನು ಕಂಡರೂ ಅಥವಾ ಹಿಂದಿನ ಅದರ ಸಂಬಂಧವಾದ ಯಾವದಾದರೊಂದು ಅನುಭವದ ನೆನಪು ಬಂದರೂ ಹೊರತೋರಿಕೊಂಡುಬಿಡುತ್ತದೆ.

ಸ್ಪರ್ಶೇಂದ್ರಿಯ, ರಸನೇಂದ್ರಿಯ, ವಾಗಿಂದ್ರಿಯ–ಇವು ಮೂರರಲ್ಲಿ ವಾಗಿಂದ್ರಿಯವು ನೋಡುವದಕ್ಕೆ ಪೂರ ನಿರಪರಾಧಿಯಂತೆ ಕಾಣುತ್ತಿರುವದು. ಆದರೆ ಅದರಿಂದಾಗುವ ಅಪಾಯಗಳು ನಿಧಾನವಾಗಿ ನಮಗೆ ತಿಳಿಯಬರುತ್ತವೆ. ವಾಗಿಂದ್ರಿಯಕ್ಕೆ ವಶನಾದ ಮನುಷ್ಯನು ಎಲ್ಲಾ ಇಂದ್ರಿಯಗಳನ್ನೂ ಒಂದೊಂದಾಗಿ ಎಚ್ಚರಗೊಳಿಸಿ ಎಬ್ಬಿಸಿ ಕುಣಿದಾಡಿಸುತ್ತಾನೆಂಬುದು ಅನೇಕರಿಗೆ ತಿಳಿಯದು. 'ಮಾತು ಮನೆಕೆಡಿಸಿತು' ಎಂಬುದು ಎಲ್ಲಾ ಬಗೆಯಿಂದಲೂ ನಿಶ್ಚಯವು. ಮನುಷ್ಯನೇ ಒಂದು ಮನೆ, ಇಂದ್ರಿಯಗಳೇ ಅದರ ನಿವಾಸಿಗಳು. ಮಾತು ಯಾವನ ವಶದಲ್ಲಿರುವದಿಲ್ಲವೋ ಅವನು ತನ್ನಲ್ಲಿರುವ ಇಂದ್ರಿಯಗಳನ್ನೆಲ್ಲಾ ದಂಗೆಯೇಳುವದಕ್ಕೆ ಅವಕಾಶಕೊಟ್ಟವನಾಗುತ್ತಾನೆ. ಆದ್ದರಿಂದ ಮಾತಿನಿಂದ ಯಾವ ಯಾವ ದೋಷಗಳು ಉಂಟಾಗುವದೆಂಬುದನ್ನು ಮೊದಲು ತಿಳಿದುಕೊಂಡು ಅವುಗಳನ್ನು ದೂರವಾಗಿಸಿರುವದಕ್ಕೆ ತಕ್ಕ ಸಾಧನಗಳನ್ನು ಅವಲಂಬಿಸಬೇಕು. ವಾಕ್ಸಂಯಮವನ್ನು ಮಾಡಿಕೊಳ್ಳದಿದ್ದರೆ ವ್ಯವಹಾರದಲ್ಲಿ ಎಂದಿಗೂ ಜಯವಿಲ್ಲ. **ಸಂ–12, 14**

## ಮಾತಿನಲ್ಲಿ ದೋಷಗಳು

ಇಂದ್ರಿಯಗಳಿಗೆಲ್ಲ ಚಾಪಲ್ಯವು ಸಹಜ. ಇದರಂತೆ ವಾಗಿಂದ್ರಿಯವೂ ಸುಮ್ಮನೆ ಕೆಲಸವನ್ನು ಮಾಡುತ್ತಲೇ ಇರಬೇಕೆನ್ನುತ್ತದೆ. ಅನವಶ್ಯವಾಗಿ ಮಾತನಾಡುವದು, ಅರ್ಥವಿಲ್ಲದೆ ಮಾತುಗಳನ್ನಾಡುವದು, ಮತ್ತೊಬ್ಬರನ್ನು ಮಾತನಾಡುವದಕ್ಕೆ ಬಿಡದಿರುವದು– ಇವೆಲ್ಲ ವಾಗಿಂದ್ರಿಯದ ಚಾಪಲ್ಯಕ್ಕೆ ಸೇರಿದವುಗಳೇ.

ಮಾತನಾಡುತ್ತಲೇ ಇರುವ ಅಭ್ಯಾಸವಾಗಿಬಿಟ್ಟರೆ ಎಲ್ಲಿ, ಯಾವಾಗ, ಹೇಗೆ, ಏನನ್ನು ನುಡಿಯಬೇಕೆಂಬ ವಿಚಾರವು ಇಲ್ಲದೆಹೋಗುತ್ತದೆ. ನಮಗೆ ಅಥವಾ ಮತ್ತೊಬ್ಬರಿಗೆ ಬೇಡವಾದ್ದದ್ದನ್ನೂ ಅಪಾಯಕರವಾದದ್ದನ್ನೂ ದೇಶವನ್ನಾಗಲಿ ಕಾಲವನ್ನಾಗಲಿ ನೋಡದೆ ಮನಸ್ಸಿಗೆ ತೋರಿದ ರೀತಿಯಲ್ಲಿ ಆಡುವ ಚಟವು ಹೆಚ್ಚಿಬಿಟ್ಟರೆ ಸತ್ಪುರುಷರ ಸಹವಾಸವು ನಮಗೆ ತಪ್ಪಿಹೋಗುತ್ತದೆ. ಸಭ್ಯರೂ ಸಾಧುಗಳೂ ಆದವರು ಹೊಣೆಗಾರಿಕೆಯಿಲ್ಲದೆ ಮಾತನಾಡುವವನ ಸ್ನೇಹವನ್ನು ಮಾಡಿಕೊಳ್ಳುವದಕ್ಕೆ ಎಂದಿಗೂ ಇಷ್ಟಪಡುವದಿಲ್ಲ.

ಯಾವಾಗಲೂ ಮಾತನಾಡುತ್ತಲೇ ಇರಬೇಕಾದವನು ವಿಷಯಗಳನ್ನು ಇದ್ದದ್ದು ಇದ್ದಂತೆ ನುಡಿಯಬೇಕೆಂಬ ಕಟ್ಟನ್ನು ಅವಶ್ಯವಾಗಿ ಮೀರುತ್ತಾನೆ. ಅಂಥವನು ತನ್ನ ಸಂತೋಷಕ್ಕಾಗಿಯೇ ಮಾತನಾಡುತ್ತಿರುವದರಿಂದ ನಿಜವನ್ನೇ ಹೇಳಬೇಕೆಂಬ ನಿಯಮವೇನೂ ಉಳಿಯುವದಿಲ್ಲ. ತನ್ನ ಹೆಚ್ಚಿಗೆಯನ್ನು ಹೇಳಿಕೊಳ್ಳುವದಕ್ಕಾಗಲಿ, ತನಗೆ ಬೇಕಾದ ಇನ್ನೊಬ್ಬರ ಹಿರಿಮೆಯನ್ನು ಹರಡುವದಕ್ಕಾಗಲಿ ವಿಷಯದ ಅಳತೆಯನ್ನು ಹಿಗ್ಗಿಸುವದೂ ತನ್ನ ಅಥವಾ ತನ್ನವರ ದೋಷವನ್ನು ಮುಚ್ಚುವದಕ್ಕೆ ಅಥವಾ ಮತ್ತೊಬ್ಬರ ಕೀಳ್ಮೆಯನ್ನು ಎತ್ತಿತೋರಿಸುವದಕ್ಕೆಂದು ವಿಷಯವನ್ನು ಹೆಚ್ಚು ಕಡಿಮೆಮಾಡುವದೂ ಸ್ವಾಭಾವಿಕವಾಗಿಬಿಡುತ್ತದೆ. ಇದರಂತೆ ಮತ್ತೊಬ್ಬರ ಮನಸ್ಸಿಗೆ ತನ್ನ ಮಾತಿನಿಂದ ಸಂತೋಷವಾಗುವದೋ ದುಃಖವಾಗುವದೋ ವಿನೋದವಾಗುವದೋ ಯಾವದನ್ನೂ ಲೆಕ್ಕಿಸದೆ ಹರಟುವದೊಂದೇ ಚಟವು ಬೇರೂರಿಕೊಂಡು ಬಿಡುತ್ತದೆ. ಹರಟೆಗಾರನಿಗೆ ಗುಟ್ಟನ್ನು ಇಟ್ಟುಕೊಳ್ಳುವದೂ ಆಗುವದಿಲ್ಲ. ಅವನು ಆಡಬಾರದ ಮಾತುಗಳನ್ನು ಗಳಹಿ ತನಗೂ ಮತ್ತೊಬ್ಬರಿಗೂ ಅಪಾಯವನ್ನು ತಂದಿಟ್ಟುಕೊಂಡುಬಿಡಬಹುದು.

ಈ ಎಲ್ಲಾ ಕಾರಣಗಳಿಂದ ಪ್ರತಿಯೊಬ್ಬನೂ ಮಾತನಾಡುವಾಗ ಎಚ್ಚರಿಕೆಯಿಂದಿರ ಬೇಕು. ನಾನು ಆಡುವ ಮಾತು ಬರಿಯ ಹರಟೆಯೆ? ಅಲ್ಲದಿದ್ದರೆ ಅದು ಕೇಳುವವರಿಗೆ ಅಪ್ರಿಯವಾಗಿ ಅಥವಾ ಅಸಹ್ಯವಾಗಿದೆಯೆ? ನಾನು ಮಾತನಾಡಬೇಕಾದ ಕಡೆಯಲ್ಲಿಯೇ, ಅವಶ್ಯವಿದ್ದಷ್ಟನ್ನು, ಎಲ್ಲರಿಗೂ ಪ್ರಿಯವಾಗಿರುವಂತೆಯೇ ಸತ್ಯವಾದದ್ದನ್ನೇ ನುಡಿದಿರು ತ್ತೇನೆಯೇ?–ಎಂಬುದನ್ನು ಮೊದಲು ವಿಚಾರಿಸಿಕೊಳ್ಳಬೇಕು. **ಸಂ–12, 30**

## ಸತ್ಯಪ್ರಿಯವಚನ

ವಾಕ್ಯವು ಸತ್ಯವಾಗಿಯೂ ಪ್ರಿಯವಾಗಿಯೂ ಇರಬೇಕೆಂಬುದೊಂದು ನಿಯಮವನ್ನು ಮನುಷ್ಯನು ಇಟ್ಟುಕೊಂಡರೆ ಲೋಕದಲ್ಲಿರುವ ಅಶಾಂತಿಯ ಅರ್ಧಭಾಗವು ಕಡಿಮೆಯಾದೀತು. 'ಮಾತುಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ' ಎಂಬ ಮಾತಿನಲ್ಲಿ ಎಷ್ಟು ಅರ್ಥಗಾಂಭೀರ್ಯವಿದೆ! ಅಳತೆ ತಪ್ಪಿ ಊಟ ಮಾಡಿದವನಿಗೆ

ರೋಗವು ನಿಶ್ಚಿತವಾಗಿರುವಂತೆ, ತಪ್ಪಿಮಾತನಾಡಿದವನಿಗೆ ಜನರ ಮನಸ್ಸಿನಲ್ಲಿ ಕಳವಳವನ್ನುಂಟುಮಾಡುವದು ಸಹಜವಾಗಿರುತ್ತದೆ. ತನ್ನ ಸುತ್ತಮುತ್ತಲಿನವರ ಮನಸ್ಸನ್ನು ನೋಯಿಸುವವನಿಗೆ ಅದರ ಅಶಾಂತಿಯ ಸೆಕೆಯು ತನಗೂ ತಟ್ಟಿಯೇ ತೀರುವದರಿಂದ ಅಸತ್ಯವಾದ ಅಪ್ರಿಯವಾದ ಕೆಟ್ಟಮಾತೆಂಬುದು ಒಂದು ಬಗೆಯ ರೋಗಾಣುವಾಗಿ ಪರಿಣಮಿಸುತ್ತದೆ. ದೇಹದ ಆರೋಗ್ಯಸ್ಥಿತಿಗೆ ಊಟವು ಶುದ್ಧವಾಗಿರುವದು ಹೇಗೆ ಅವಶ್ಯವೋ ಹಾಗೆ ಮನಸ್ಸಿನ ಆರೋಗ್ಯಸ್ಥಿತಿಗೆ ಸತ್ಯಪ್ರಿಯವಚನವು ಅತ್ಯವಶ್ಯವಾಗಿರುತ್ತದೆ.

ಆದರೆ ಸತ್ಯವನ್ನೂ ಪ್ರಿಯವನ್ನೂ ಹೇಳುವದು ಕಡುಕಷ್ಟ. ಮಾತು ಸತ್ಯವಾಗಿದ್ದರೆ ಪ್ರಿಯವಾಗಿರುವದೆಂಬ ನಿಯಮವಿಲ್ಲ, ಪ್ರಿಯವಾಗಿದ್ದರೆ ಸತ್ಯವಾಗಿರುವದೆಂಬ ನಿಯಮವಿಲ್ಲ. ಇಂಥ ಸಂದರ್ಭದಲ್ಲಿ ಹೇಗೆ ಮಾಡಬೇಕು? ಶಾಸ್ತ್ರವು ಹೀಗೆಂದು ಉಪದೇಶ ಮಾಡುತ್ತದೆ: "ಸತ್ಯವನ್ನು ಹೇಳಬೇಕು, ಪ್ರಿಯವನ್ನು ಹೇಳಬೇಕು ಅಪ್ರಿಯವಾದ ಸತ್ಯವನ್ನು ಹೇಳಬಾರದು, ಪ್ರಿಯವಾದ ಅಸತ್ಯವನ್ನು ಹೇಳಬಾರದು. ಇದು ಸನಾತನಧರ್ಮವು."

ಸತ್ಯವನ್ನೇ ನುಡಿಯುವದೆಂಬುದೊಂದು ದೊಡ್ಡ ವ್ರತವು. ಅದನ್ನು ಪೂರ್ತಿಗೊಳಿಸಬೇಕಾದರೆ ಮನುಷ್ಯನು ಬಹಳ ಎಚ್ಚರಿಕೆಯಿಂದಿರಬೇಕಾಗುವದು. ತಾನು ಕಂಡದ್ದನ್ನೂ ಕೇಳಿದ್ದನ್ನೂ ತಿಳಿದಿರುವದನ್ನೂ ಮತ್ತೊಬ್ಬರಿಗೆ ತಿಳಿಯಪಡಿಸುವಾಗ, ಅದನ್ನು ಚೆನ್ನಾಗಿ ಆಲೋಚನೆಮಾಡಿ, ಸ್ಫುಟವಾಗಿ ನಿಸ್ಸಂಶಯವಾಗಿರುವ ರೀತಿಯಿಂದ ಮಿತವಾದ ನುಡಿಗಳಿಂದ ಹೇಳಬೇಕು. ಮಾತುಗಳನ್ನು ಕೇಳುವಾಗಲೂ ಕೇಳಿದವನಿಗೆ ಸಂತೋಷವಾಗಬೇಕು. ಆಮೇಲೆ ಅದರಂತೆ ತಾನು ನಡೆದುಕೊಳ್ಳಬೇಕೆಂಬ ಉತ್ಸಾಹವುಂಟಾಗಬೇಕು; ಬಳಿಕ ಎಂದೆಂದಿಗೂ ಆ ಮಾತನ್ನು ಹೇಳಿದವರ ಉಪಕಾರವನ್ನು ಸ್ಮರಣೆ ಮಾಡುವಂತಿರಬೇಕು. ಸತ್ಯವಾಗಿ, ಪ್ರಿಯವಾಗಿ, ಮನಸ್ಸಿನಲ್ಲಿ ಯಾವ ಕಳವಳವನ್ನೂ ಉಂಟುಮಾಡದೆ ಇರುವ, ಹಿತಕಾರಿಯಾದ ಮಾತಿಗೆ ಬೆಲೆಕಟ್ಟುವದು ಯಾರಿಂದಲೂ ಆಗುವದಿಲ್ಲ. ಅದು ಪರಮೇಶ್ವರನಿಂದ ಬಂದ ವೇದವೇ ಎನ್ನಬಹುದು. **ಸಂ–12, 78**

## ಭಗವನ್ನಾಮೋಚ್ಚಾರಣ

ಆದರೆ ಸತ್ಯವಾಗಿ ಪ್ರಿಯವಾಗಿರುವ ಮಾತನ್ನೇ ಆಡಬೇಕೆಂದು ಪ್ರತಿಜ್ಞೆಮಾಡಿಕೊಂಡವರು ಕೂಡ ಮೈಮರೆತು ಅಸತ್ಯವನ್ನೂ ಅಪ್ರಿಯವನ್ನೂ ಆಡಿಬಿಡುತ್ತಾರಲ್ಲ! ಇದನ್ನು ತಪ್ಪಿಸಿಕೊಳ್ಳುವದಕ್ಕೆ ಏನಾದರೂ ಉಪಾಯವುಂಟೆ? ಇದನ್ನೀಗ ವಿಚಾರಕ್ಕೆ ತೆಗೆದುಕೊಳ್ಳೋಣ.

ನಾಲಗೆಯು ಹಿಡಿತದಲ್ಲಿರುವದಕ್ಕೆ ಆಗಾಗ್ಗೆ ಸತ್ಯಪ್ರಿಯವಚನವನ್ನು ಆಡುತ್ತಿದ್ದರೇ ಸಾಲದು; ಸತ್ಯವೂ ಪ್ರಿಯವೂ ಆದ ವಚನವು ಅದಕ್ಕೆ ಮೆಚ್ಚಾಗಿ ತೋರುವಂತೆ

ಮಾಡಿಕೊಳ್ಳುವದು ಅವಶ್ಯವಾಗಿರುತ್ತದೆ. ಇದಕ್ಕೆ ಭಗವಂತನ ನಾಮವನ್ನು ಅಡಿಗಡಿಗೆ ಉಚ್ಚಾರಣೆಮಾಡುತ್ತಿರುವದೊಂದು ಒಳ್ಳೆಯ ಸಾಧನವಾಗುತ್ತದೆ. ಏಕೆಂದರೆ ಭಗವಂತನು ನಿಜವಾಗಿ ಸತ್ಯಕ್ಕೆಲ್ಲ ಸತ್ಯಸ್ವರೂಪನಾಗಿರುತ್ತಾನೆ, ಪ್ರಿಯಕ್ಕೆಲ್ಲ ಪ್ರಿಯನಾಗಿರುತ್ತಾನೆ. ಯಾವಯಾವದನ್ನು ಸತ್ಯವೆಂದು ನಾವು ಕರೆಯುವೆವೋ ಅದೆಲ್ಲವೂ ಭಗವಂತನ ಸನ್ನಿಧಿಯಿಂದ ಸತ್ಯವಾಗಿರುತ್ತದೆ. ಆದರೆ ಭಗವಂತನು ತಾನೇ ಸತ್ಯಸ್ವರೂಪನಾಗಿರುತ್ತಾನೆ ಎಂದು ಶ್ರುತಿಯು ಸಾರುತ್ತದೆ. ಇದರಂತೆ ಲೋಕದಲ್ಲಿ ಯಾವಯಾವದು ನಮಗೆ ಪ್ರಿಯವಾಗಿರುತ್ತದೆಯೋ ಅದು ಆಗಾಗ್ಗೆ ಪ್ರಿಯವಾಗಿ ತೋರಬಹುದಾದರೂ ನಿಜವಾಗಿ ತನ್ನ ರೂಪದಿಂದಲೇ ಪ್ರಿಯವಾಗಿರುವದೆಂಬ ನಿಯಮವೇನೂ ಇಲ್ಲ. ಸಕಲಜೀವರ ಹೃದಯದಲ್ಲಿಯೂ ವಾಸವಾಗಿ ಎಲ್ಲರ ಪರಮಾತ್ಮನೆಂದೆನಿಸಿಕೊಂಡಿರುವ ಭಗವಂತನು ನಿತ್ಯವಾಗಿ ಎಲ್ಲರಿಗೂ ಎಂದೆಂದಿಗೂ ಪರಮಪ್ರಿಯನಾಗಿರುತ್ತಾನೆ. ಆತನಿಗಾಗಿ ಮಿಕ್ಕದ್ದೆಲ್ಲವೂ ಪ್ರಿಯವಾಗಿರುತ್ತದೆ. ಆದ್ದರಿಂದಲೇ ಪರಮಾತ್ಮನು ಆನಂದಸ್ವರೂಪನೆಂದು ಶ್ರುತಿಯು ಸಾರುತ್ತಿರುವದು. ಈ ಅರ್ಥವನ್ನು ಮನದಂದುಕೊಂಡು ಸಾಧಕನಾದವನು ಆಗಾಗ್ಗೆ ಭಗವಂತನ ನಾಮವನ್ನು ಆದರದಿಂದ ಉಚ್ಚರಿಸುತ್ತಿರಬೇಕು.

ಭಗವನ್ನಾಮವನ್ನು ಉಚ್ಚರಿಸುವದೆಂಬುದು ಬರಿಯ ಯಂತ್ರದ ಕೆಲಸವಾಗಬಾರದು. ಅದರಿಂದ ತನಗೆ ಆಯಾಸವೂ ದುಃಖವೂ ಪರಿಹಾರವಾಗಬೇಕು, ಉತ್ಸಾಹವುಂಟಾಗ ಬೇಕು, ಧೈರ್ಯವೂ ಬಲವೂ ಬರಬೇಕು. ನಾಮೋಚ್ಚಾರಣೆಯೆಂಬುದು ಆತನ ಸತ್ಯತ್ವದ ಮತ್ತು ಪ್ರಿಯತ್ವದ ಹೆಗ್ಗುರುತೆಂದೂ ಆತನ ಸರ್ವವ್ಯಾಪಕತೆಯ ಸ್ಮಾರಕವೆಂದೂ ಮನಸ್ಸಿನಲ್ಲಿ ಮೂಡಿರಬೇಕು. ತನಗೆ ಯಾವದೊಂದು ಸಹಾಯವು ಬೇಕಾದರೂ ಅದು ಭಗವಂತನಿಂದ ದೊರಕುವದೆಂಬ, ಯಾವದೊಂದು ಕಷ್ಟವಿದ್ದರೂ ಆತನಿಂದ ಅದು ಪರಿಹಾರವಾಗುವದೆಂಬ, ಯಾವ ತಿಳಿವಳಿಕೆಯು ಬೇಕಾದರೂ ಆತನ ಪ್ರಸಾದದಿಂದ ಅದು ಮನದಲ್ಲಿ ಮಿಂಚಿಯೇತೀರುವದೆಂಬ, ಪೂರ್ಣವಾದ ನಂಬಿಕೆಯಿಂದ ಮಾಡಿದ ನಾಮೋಚ್ಚಾರಣೆಯೇ ನಿಜವಾದ ನಾಮೋಚ್ಚಾರಣೆಯು.

ಭಗವಂತನ ನಾಮವನ್ನು ಬಿಡುವಿದ್ದಾಗಲೆಲ್ಲ ಉಚ್ಚರಿಸುತ್ತಿದ್ದರೆ, ಆ ನಾಮೋಚ್ಚಾರಣೆಯ ಹಿಂದುಗಡೆಯಲ್ಲಿ ಮೇಲೆ ಹೇಳಿದ ಗಟ್ಟಿಯಾದ ನಂಬಿಕೆಯೂ ತಡಿಕೆಯಾಗಿ ನಿಂತಿದ್ದರೆ, ಆಗ ತನ್ನೆದುರಿಗೆ ಯಾರೇ ಇರಲಿ, ಅವರಲ್ಲೆಲ್ಲ ಭಗವಂತನು ಸನ್ನಿಹಿತನಾಗಿರುವನೆಂಬ, ಆ ರೂಪದಿಂದಲೇ ಭಗವಂತನು ತನಗೆ ಕಾಣಿಸಿಕೊಂಡಿರುವನೆಂಬ, ಭಾವನೆಯು ತಟ್ಟನೆ ಹೊಳೆದುಬಿಡುತ್ತದೆ. ಸರ್ವಗತನಾದ ಭಗವಂತನ ಮುಂದೆ ಸುಳ್ಳನ್ನಾಡುವದು ಹೇಗೆ? ಅಪ್ರಿಯವಾದ ಮಾತನ್ನಾಡುವದು ಹೇಗೆ? ಅಸತ್ಯವಚನವೂ ಅಪ್ರಿಯವಚನವೂ ಸೂರ್ಯನ ಬಿಸಿಲಿಗೆ ಕರಗುವ ಕಾವಳದಂತೆ ಕೂಡಲೆ ಮಾಯವಾಗಿಬಿಡುತ್ತವೆ.

ಅವಶ್ಯವಿದ್ದರೆ ಮಾತನಾಡುವದು, ಆಗಲೂ ಹಿತವಾಗಿ ಮಿತವಾಗಿರುವ ಸತ್ಯವಚನವನ್ನೇ ಸರ್ವರಿಗೂ ಪ್ರಿಯವಾಗುವ ರೀತಿಯಲ್ಲಿ ಮಾತನಾಡುವದು, ಮಾತನಾಡುವ ಅವಶ್ಯಕತೆಯಿಲ್ಲದಿದ್ದರೆ ಆಗಾಗ್ಗೆ ಭಗವಂತನ ನಾಮವನ್ನು ಹೃದಯದಾಳದಿಂದಲೂ ಹೊರಟುಬಂದಂತೆ ಭಾವಿಸಿ ಆದರದಿಂದ ವಿಶ್ವಾಸಪೂರ್ವಕವಾಗಿ ಧೈರ್ಯಪೂರ್ವಕವಾಗಿ ಉಚ್ಚರಿಸುವದು–ಈ ಅಭ್ಯಾಸವು ಒಬ್ಬ ಸಾಧಕನಿಗೆ ಅಳವಟ್ಟರೆ ಅವನ ಸುತ್ತುವಳೆಯವು ಸುಖಮಯವಾಗಿಬಿಡುತ್ತದೆ. ಅವನು ಮಾತನಾಡುವಾಗ ಶ್ರೀಕೃಷ್ಣನ ಕೊಳಲಿಗೆ ಮುಗ್ಧವಾಗಿ ಹತ್ತಿರ ಬರುತ್ತಿದ್ದ ಗೋಗಳಂತೆ ಸತ್ಯಪ್ರಿಯವಚನದ ಪ್ರೇಮಿಗಳಾದ ಜನರೇ ಹತ್ತಿರವಿರುತ್ತಾರೆ. ಅವನ ಮೃದುಮಧುರವಾದ ವಚನಗಳು ಅವರ ಕಿವಿಗೆ ಆನಂದಾಮೃತದ ಸೋನೆಯಾಗುತ್ತವೆ. ಅಂಥ ಮಹಾತ್ಮನು ಭಗವಂತನ ಪರಮ ಭಕ್ತನಾಗುವದರಿಂದ ಅವನಿಗೆ ವಾಕ್ಸಂಯಮವಾಗುವದೆಂದು ಹೇಳುವದು ಸರಿಯಲ್ಲ, ಅವನ ವಾಕ್ಕೇ ಭಗವಂತನ ವಾಕ್ಕಾಗುತ್ತದೆ. **ಸಂ–12, 138**

## ನಾಮವೇ ದೇವರು

ಭಗವಂತನಿಗೂ ಅವನ ನಾಮಕ್ಕೂ ಭೇದವಿಲ್ಲ. ನಾಮವೇ ದೇವರು. ನಾಮವನ್ನು ಸ್ಮರಿಸಿದಕೂಡಲೆ ಆತನ ಅನಂತಕಲ್ಯಾಣಗುಣಗಳು ನಮ್ಮ ಮನಸ್ಸಿನ ಎದುರಿಗೆ ಹೊಳೆಯುವುವು. ನಾಮವನ್ನು ಉಚ್ಚರಿಸಿದ ಹಾಗೆಲ್ಲಾ ನಮ್ಮ ಹೃದಯದಲ್ಲಿ ಭಕ್ತಿಯೂ ಆನಂದವೂ ಉಕ್ಕಿಬರುವವು. ನಿಜವಾಗಿಯೂ ನಾಮವಿದ್ದೆಡೆಯಲ್ಲಿ ಭಗವಂತನಿರುತ್ತಾನೆ.

ಮಾನಸಿಕನಾಮಜಪವು ವೈಖರಿಜಪಕ್ಕಿಂತಲೂ ಉತ್ಕೃಷ್ಟವೆಂದು ಹೇಳುವದು ವಾಡಿಕೆಯಾದರೂ ನಾಮವನ್ನು ಗಟ್ಟಿಯಾಗಿ ಉಚ್ಚರಿಸಿದಾಗ ಆಗುವ ನಾಮದ ಬಲವನ್ನೂ ಸವಿಯನ್ನೂ ವರ್ಣಿಸಲು ಸಾಧ್ಯವಿಲ್ಲ. ನಾಮವೇ ಬ್ರಹ್ಮವೆಂಬುದು ಅನುಭವಿಗಳ ಮಾತು.

ಪರಮಾತ್ಮನು ವ್ಯಕ್ತಾವ್ಯಕ್ತಸ್ವರೂಪನು. ಅಖಂಡ ಅನಂತ ಸರ್ವವ್ಯಾಪಿಯಾದ ಸಚ್ಚಿದಾನಂದವೆಂದು ಕರೆಯಲ್ಪಡುವ ನಿರ್ಗುಣಪರಬ್ರಹ್ಮನು, ಅವ್ಯಕ್ತನು. ಅನೇಕನಾಮರೂಪಗಳನ್ನೊಳಗೊಂಡ ಸಮಸ್ತಲೋಕಗಳ ಸಮುದಾಯವಾದ ಬ್ರಹ್ಮಾಂಡವೆಂಬುದು ಆತನ ವ್ಯಕ್ತಸ್ವರೂಪವು. ನಾಮವು ಈ ಎರಡು ರೂಪಗಳ ಸಂಜ್ಞೆಯೂ ಆಗಿರುವದು.

ನಾಮೋಚ್ಚಾರಣೆಯು ಮೋಕ್ಷದಾಯಕವು. ನಾಮೋಚ್ಚಾರಣೆಮಾತ್ರದಿಂದ ಅನೇಕ ಸಾಧುಸತ್ಪುರುಷರು ಆಧ್ಯಾತ್ಮಿಕಜೀವನದ ಉನ್ನತೋನ್ನತದೆಶೆಯನ್ನು ಹೊಂದಿದರು. ನಾಮವು ಅಜ್ಞಾನಾಂಧಕಾರವನ್ನು ತೊಲಗಿಸಿ ಜ್ಞಾನಜ್ಯೋತಿಯನ್ನು ಬೆಳಗುವದು. ನಾಮಸ್ಮರಣೆಯಿಂದ ನಾನಾತ್ವವು ಅಡಗಿ ಅಖಂಡ ಏಕರಸಬ್ರಹ್ಮಾನಂದವು ಅನುಭವಕ್ಕೆ ಬರುವದು.

ನಾಮದಲ್ಲಿ ಒಂದು ದಿವ್ಯಶಕ್ತಿಯಿದೆ. ಸಾಧಾರಣವಾಗಿ ಜಯಿಸಲಸಾಧ್ಯವಾದ ಮನಸ್ಸು ನಾಮಸ್ಮರಣೆಯನ್ನು ಮಾಡಿದಹಾಗೆಲ್ಲಾ ನಾಮದ ಸವಿಗೆ ಸಿಕ್ಕಿಬಿದ್ದು ಶಾಂತವಾಗಿ ನಿಶ್ಚಲವಾಗುವದು. ನಿರಂತರನಾಮಸ್ಮರಣೆಯಿಂದ ಮನಸ್ಸು ಭಗವತ್ಸ್ವರೂಪವೇ ಆಗಿಬಿಡುವದು. ನಾಮದ ಬೆಂಬಲವಿದ್ದವರು ಅಘಟನಘಟನಾಸಾಮರ್ಥ್ಯವನ್ನು ಪಡೆಯುವರು. ಅವರು ಯಮನನ್ನೇ ಎದುರಿಸಬಹುದು. ನಾಮಸ್ಮರಣೆಮಾಡುವವರ ಸಹವಾಸಮಾಡುವರಲ್ಲಿಯೂ ಕೂಡ ಭಕ್ತಿಯು ಉತ್ಪನ್ನವಾಗುವದು. ಎಲ್ಲಿ ನಾಮ ಸ್ಮರಣೆಯು ನಡೆಯುತ್ತಿದೆಯೋ ಅದೇ ಕ್ಷೇತ್ರ, ಅದೇ ತೀರ್ಥ. ಅಲ್ಲಿ ಪರಿಶುದ್ಧತೆಯೂ, ಶಾಂತಿಯೂ, ಆನಂದವೂ ತುಂಬಿರುವವು. ನಾಮದ ಸವಿಯೇ ಬ್ರಹ್ಮಾನಂದ. ನಾಮಸ್ಮರಣೆಯ ಪರಮಾವಸ್ಥೆಯೇ ಸಮಾಧಿ. ಇನ್ನಾವ ಸಾಧನೆಯೂ ಇಲ್ಲದೆ, ಬರಿಯ ನಾಮಸ್ಮರಣೆಯಿಂದಲೇ ಭಗವದ್ದರ್ಶನವಾಗುವದೆಂದು ತನ್ನ ಅನುಭವದಿಂದ ಈ ಲೇಖಕನು (ರಾಮದಾಸನು) ದೃಢವಾಗಿ ನಿರ್ಧರಿಸಬಲ್ಲನು.

ಸರ್ವರಿಗೂ, ಸರ್ವಕಾಲ ಸರ್ವಾವಸ್ಥೆಯಲ್ಲೂ ಅನುಕೂಲವಾದ ಸಾಧನೆಯೆಂದರೆ ನಾಮಸ್ಮರಣೆಯೇ. "ಯಾವಜ್ಜೀವಂ ಜಪನ್ಮರ್ತ್ಯೋ ಜೀವನ್ಮುಕ್ತೋ ನ ಸಂಶಯಃ" ಎಂದರೆ ಸದಾ ನಾಮಸ್ಮರಣೆಯನ್ನು ಮಾಡುತ್ತಿರುವವರು ಜೀವನ್ಮುಕ್ತರೇ ಎಂಬುದಕ್ಕೆ ಸಂಶಯವಿಲ್ಲ.

ಆದುದರಿಂದ, ಗೆಳೆಯರೇ ! ನೀವು ಯಾವ ಮತದವರಾಗಲಿ, ಯಾವ ಜಾತಿಯವ ರಾಗಲಿ, ಯಾವ ವರ್ಣದವರಾಗಲಿ, ಸ್ತ್ರೀಯರಾಗಲಿ, ಪುರುಷರಾಗಲಿ, ವೃದ್ಧರಾಗಲಿ ಯುವಕರಾಗಲಿ, ನಾಮವನ್ನು ಸದಾ ಉಚ್ಚರಿಸಿ, ಸ್ಮರಿಸಿ ಅದರ ಅಪೂರ್ವವಾದ ಸವಿಯನ್ನು ಆಸ್ವಾದಿಸಿರಿ. ನಾಮತೀರ್ಥದಲ್ಲಿ ಮುಳುಗಿದರೆ ಜನ್ಮಾಂತರದ ಪಾಪದ ರಾಶಿಗಳೆಲ್ಲ ಕರಗಿಹೋಗುವವು, ನಿಮ್ಮ ಮುಖವು ತೇಜಃಪುಂಜವಾಗುವದು. ನಿಮ್ಮ ಕಣ್ಣುಗಳು ಅಮೃತಕಿರಣಗಳನ್ನು ಬೀರುವವು. ಅಖಂಡನಾಮಸ್ಮರಣೆಯಿಂದ ಸರ್ವಪ್ರಪಂಚಗಳೂ ಭಗವಂತನ ರೂಪಾಂತರವೇ ಎಂಬಿದು ಗೋಚರವಾಗುವದು. ನಾಮವು ನಿಮ್ಮನ್ನು ಭಗವಂತನ ಸಮೀಪಕ್ಕೆ ಕೊಂಡೊಯ್ಯುವದು. ಅಷ್ಟೇ ಅಲ್ಲ. ಮಾನವನನ್ನು ಮಾಧವನನ್ನಾಗಿಯೂ, ಜೀವನನ್ನು ಶಿವನನ್ನಾಗಿಯೂ ಮಾಡುವದು. ನಾಮವೇ ದೇವರು. ಓಂ ಶ್ರೀರಾಮ, ಜಯರಾಮ, ಜಯಜಯರಾಮ !

**ಮೂಲ: ಶ್ರೀ ರಾಮದಾಸರ ಲೇಖನ. ಸಂ-21, 128**

# ಮೌನ

ವಾಕ್ಸಂಯಮಕ್ಕೆ ಸತ್ಯಪ್ರಿಯವಚನ, ಭಗವನ್ನಾಮೋಚ್ಚಾರಣೆ–ಇವುಗಳಂತೆ ಮೌನವೂ ಒಂದು ದೊಡ್ಡ ಸಾಧನವಾಗಿರುವದು. ಹಿತವಾಗಿ ಮಿತವಾಗಿ ಮತ್ತೊಬ್ಬರಿಗೆ ಪ್ರಿಯವಾಗಿರುವಂತೆ ಮಾತನಾಡುವದಲ್ಲದೆ ವಿರಾಮಕಾಲದಲ್ಲಿ ಭಗವಂತನ ನಾಮವನ್ನು ಭಕ್ತಿಯಿಂದ ಉಚ್ಚರಿಸುತ್ತಿರುವದರಿಂದ ವಾಗಿಂದ್ರಿಯದ ಸಂಯಮವು ವೀರ್ಯವತ್ತಾಗುತ್ತದೆ. ಇದರ ಜೊತೆಗೆ ಅನವಶ್ಯವಾಗಿ ಮಾತನ್ನಾಡದೆ ಮೌನವನ್ನು ಧರಿಸುವದಕ್ಕೆ ಕಲಿಯುವದು ಈ ಸಂಯಮನಕ್ಕೆ ಮತ್ತಷ್ಟು ಕಳೆಯನ್ನು ಕೊಡುತ್ತದೆ.

'ಬಾಯುಳ್ಳವನು ಬರದಲ್ಲಿ ಬದುಕಿದ' ಎಂಬಂತೆ ಮಾತಿನಿಂದಲೇ ಜೀವಿಸುವ ಅವಶ್ಯಕತೆಯು ಬಂದಿರುವ ಈಗಿನ ಕಾಲದಲ್ಲಿ ಮೌನವಾಗಿರುವದೆಂದರೆ ಬಹಳ ಕಷ್ಟ. ಮೌನವಾಗಿದ್ದು ನೋಡಿದಹೊರತು ಅದರಿಂದಾಗುವ ಪ್ರಯೋಜನವನ್ನು ಅರಿತುಕೊಳ್ಳುವದು ಇನ್ನೂ ಕಷ್ಟ. ತನ್ನ ತಿಳುವಳಿಕೆಯನ್ನು ಪ್ರಕಟಿಸುವದಕ್ಕೂ ಮತ್ತೊಬ್ಬರನ್ನು ಹಳಿಯುವದಕ್ಕೂ ಅಥವಾ ಯಾವದಾದರೊಂದು ಹೊರಸುದ್ದಿಯನ್ನು ಮೊದಲು ಹೇಳಿದನೆಂಬ ಹೆಸರನ್ನು ಗಳಿಸಿಕೊಳ್ಳುವದಕ್ಕೂ ಮನುಷ್ಯನು ಹಾತುವರಿಯುತ್ತಿರುತ್ತಾನೆ. ಆದರೆ ಮಾತನಾಡದೆ ಸುಮ್ಮನಿರುವದರಿಂದ ಪ್ರಯೋಜನವನ್ನು ಸಂಪಾದಿಸಿಕೊಳ್ಳಬೇಕೆಂದು ಹವಣಿಸುವವರು ಬಹುವಿರಳ.

ಮೌನವೆಂಬ ಶಬ್ದಕ್ಕೆ ಮುನಿಯಾಗಿರುವಿಕೆ ಎಂದರ್ಥ. ಚಾಪಲ್ಯವನ್ನು ತೊರೆದಿರುವವನೇ ಮುನಿಯೆನಿಸುತ್ತಾನೆ. ಆದ್ದರಿಂದ ಮಾತನಾಡದಿರುವದೆಂಬ ವಾಙ್ಮೌನ, ಇಂದ್ರಿಯಗಳನ್ನು ಚಂಚಲವಾಗದಂತೆ ಹಿಡಿದುಕೊಳ್ಳುವದೆಂಬ ಅಕ್ಷಮೌನ, ಮನಸ್ಸಿನ ಚಂಚಲತೆಯನ್ನು ತೆಗೆದುಕೊಳ್ಳುವದೆಂಬ ಮನೋಮೌನ, ಯಾವವ್ಯಾಪಾರವೂ ಇಲ್ಲದ್ದೆಂಬ ಕಾಷ್ಠಮೌನ–ಇವೆಲ್ಲವೂ ಮೌನವೇ ಆಗಿರುತ್ತವೆ. ಆದರೂ ಗಾಢನಿದ್ರೆಯಲ್ಲಿರುವವನು ಹೇಗೆ ಹೊರಗಿನ ಯಾವದರಿಂದಲೂ ವಿಕಾರವನ್ನು ಹೊಂದದೆ ಇರುವನೋ ಅದರಂತೆ ಪರಮಾರ್ಥತತ್ತ್ವವನ್ನು ತಿಳಿದುಕೊಂಡು, ತತ್ತ್ವಜ್ಞಾನದ ಫಲವಾಗಿ ಶಾಂತಿಯನ್ನು ಹೊಂದಿಕೊಂಡಿರುವ ಸುಷುಪ್ತಮೌನವೇ ಈ ಎಲ್ಲಾ ಮೌನಗಳಲ್ಲಿಯೂ ಹೆಚ್ಚಿನದೆಂದು ತಿಳಿದವರು ಹೇಳುತ್ತಾರೆ.

ಪ್ರಕೃತದಲ್ಲಿ ನಾವು ವಿಚಾರಿಸುತ್ತಿರುವದು ವಾಙ್ಮೌನವೇ ಆದರೂ ಸುಮ್ಮನೆ ಮಂಕನಂತೆ ಮಾತನಾಡದೆ ಇರುವದನ್ನು ನಾವು ವಾಙ್ಮೌನವೆಂದು ಕರೆದಿಲ್ಲ. ಭಗವನ್ನಾಮೋಚ್ಚಾರಣವನ್ನು ಅನುಸರಿಸಿಕೊಂಡು ಅವಶ್ಯವಾಗಿರುವಾಗ ಮಾತ್ರ ಸತ್ಯಪ್ರಿಯವಚನವನ್ನು ಆಡುತ್ತಾ, ಮಿಕ್ಕ ಕಡೆಗಳಲ್ಲಿ ಅಧ್ಯಾತ್ಮಚಿಂತನೆಮಾಡುತ್ತಾ ಇರುವದನ್ನೇ ವಾಙ್ಮೌನವೆಂದು ತಿಳಿಯಬೇಕು.

ಒಂದು ವೇಳೆ ಅಧ್ಯಾತ್ಮಚಿಂತನೆಯು ಒದಗದಿದ್ದರೂ ಅನವಶ್ಯವಾಗಿ ಮಾತನಾಡದೆ ಶಾಂತವಾಗಿರುವದೇ ವಾಙ್ಮೌನದ ಪ್ರಧಾನಾಂಶವಾಗಿರುತ್ತದೆ. **ಸಂ-12, 154**

# ಮನಃಸಂಯಮನವಿಚಾರದ ಆವಶ್ಯಕತೆ

'ತ್ರಿಕರಣಸಂಯಮ' ದಲ್ಲಿ ಶರೀರಸಂಯಮ, ವಾಕ್ಸಂಯಮವಲ್ಲದೆ, ಮನಸ್ಸಂಯಮವನ್ನು ಕುರಿತು ವಿಚಾರ ಮಾಡಬೇಕಾಗಿದೆ. ಸರಿಯಾಗಿ ನೋಡಿದರೆ ಶರೀರದಿಂದ ಮಾಡುವ ಕರ್ಮಕ್ಕೂ ವಾಕ್ಕಿನಿಂದ ಮಾಡುವ ಕರ್ಮಕ್ಕೂ ಮನಸ್ಸು ಹಿಂದುಗಡೆಯಲ್ಲಿದ್ದೇ ಇರುವದರಿಂದ ಅಲ್ಲಿಯೂ ಮನಃಸಂಯಮವನ್ನೇ ಕುರಿತು ಮಾತನಾಡಿದಂತೆ ಆಗಿದೆ. ಆದರೂ ಮನಸ್ಸಂಯಮವನ್ನು ಕುರಿತು ಬೇರೆಯಾಗಿ ವಿಚಾರಮಾಡುವದು ಅವಶ್ಯವಾಗಿರುತ್ತದೆ. ಏಕೆಂದರೆ ಶರೀರದ ವ್ಯಾಪಾರವಾಗಲಿ ವಾಕ್ಕಿನ ವ್ಯಾಪಾರವಾಗಲಿ ಇಲ್ಲದಿರುವಾಗಲೂ ನೇರಾಗಿ ಮನಸ್ಸಿನಿಂದಲೇ ಮಾಡುವ ವ್ಯಾಪಾರಗಳೂ ಹಲವು ಇವೆ. ಆದ್ದರಿಂದ ಆ ಮನಸ್ಸನ್ನು ಹೇಗೆ ಹಿಡಿದುಕೊಂಡಿರಬೇಕೆಂಬ ಬಗ್ಗೆ ವಿಚಾರವು ಬೇಕಾಗುತ್ತದೆ.

ಮನಸ್ಸೆಂದರೆ ಮನನಮಾಡುತ್ತಿರುವದೇ; ಆದ್ದರಿಂದ ಯಾವ ರೀತಿಯ ಮನಸ್ಸು ಇರಬೇಕು? ಯಾವ ಮನನವು ಸಾಧಕರಿಗೆ ಬೇಡವಾದದ್ದು? ಅನಿಷ್ಟವಾದ ಮನನದಿಂದ ಬಿಡುಗಡೆಹೊಂದುವದು ಹೇಗೆ?- ಎಂಬುದನ್ನು ನಾವು ವಿಚಾರಿಸಬೇಕಾಗುತ್ತದೆ. ಮನಸ್ಸಿನಲ್ಲಿ ಮನನ-ಆಲೋಚನ-ರೂಪವಾದ ವ್ಯಾಪಾರವಲ್ಲದೆ ಭಾವನಾರೂಪವಾದ ವ್ಯಾಪಾರವೂ ಇರುತ್ತದೆ. ಯಾವದೊಂದು ವಿಷಯವು ಇಲ್ಲದಿದ್ದರೂ ಮನಸ್ಸು ಅದರಲ್ಲಿ ಬಗೆಬಗೆಯ ಭಾವನೆಗಳನ್ನು ಮಾಡಿಕೊಳ್ಳುತ್ತಿರುತ್ತದೆ. ಇವುಗಳಲ್ಲಿ ಯಾವ ಬಗೆಯ ಭಾವನೆಯು ಬೇಕು? ಯಾವ ಭಾವನೆಯನ್ನು ಹೇಗೆ ತಡೆದಿಡಬೇಕು? ಇದನ್ನೂ ನಾವು ವಿಚಾರಿಸಬೇಕು. ಮನಸ್ಸಿಗೆ ಗೊತ್ತಿರುವ ವಿಷಯಗಳ ವಿಚಾರವೂ ಭಾವನೆಯೂ ಅಲ್ಲದೆ ಈವರೆಗೆ ಗೊತ್ತಿಲ್ಲದ ವಿಷಯಗಳ ಶೋಧನೆಯೂ ಒಂದು ವ್ಯಾಪಾರವಾಗಿರುತ್ತದೆ. ಅದಕ್ಕೆ ಹೊಸ ತತ್ತ್ವವನ್ನು ಕಂಡುಹಿಡಿದುಕೊಳ್ಳಬೇಕೆಂಬ ಹವಣಿಕೆಯೂ ಇರುತ್ತದೆ. ಆದ್ದರಿಂದ ಈ ವಿಷಯಶೋಧನಶಕ್ತಿಯನ್ನು ನಾವು ಹೇಗೆ ಉಪಯೋಗಿಸಿಕೊಳ್ಳಬೇಕು? ಇದನ್ನೂ ಸಾಧಕನು ವಿಚಾರಮಾಡಬೇಕು.

ಮನಸ್ಸೆಂಬುದೇ ಮನುಷ್ಯನ ಸರ್ವಸ್ವವು. ಮನಸ್ಸಿನಿಂದ ಮನುಷ್ಯನು ಸದ್ಗತಿಯನ್ನಾದರೂ ಪಡೆದುಕೊಳ್ಳಬಹುದು, ದುರ್ಗತಿಗಾದರೂ ಇಳಿಯಬಹುದು. ಮಿಕ್ಕ ಎಲ್ಲಾ ಸಾಮಗ್ರಿಗಳೂ ಇದ್ದರೂ ಮನಸ್ಸಿನ ಸಂಯಮವೊಂದಿಲ್ಲದಿದ್ದರೆ ಮನುಷ್ಯನ ಬಾಳು ವ್ಯರ್ಥವಾದಂತೆ. ಆದ್ದರಿಂದ ಮನಸ್ಸಂಯಮನವನ್ನು ಮಾಡುವ ಬಗೆಯನ್ನು ಅಧ್ಯಾತ್ಮಸಾಧಕರು ಅವಶ್ಯವಾಗಿ ವಿಚಾರಮಾಡಬೇಕು. **ಸಂ-12, 224**

# ಆತ್ಮಶೋಧನೆ

ತನ್ನನ್ನು ತಾನು ಪರೀಕ್ಷೆ ಮಾಡಿಕೊಳ್ಳುತ್ತಿರುವದೆಂಬುದು ಮನಸ್ಸಂಯಮದ ಒಂದು ಮುಖ್ಯವಾದ ಸಾಧನವಾಗಿರುತ್ತದೆ. "ಮನಸ್ಸೇ ಬಂಧಕ್ಕೂ ಮೋಕ್ಷಕ್ಕೂ ಕಾರಣವು" ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಮನಸ್ಸಿಗೆ ಬಂಧಕರವಾದ ಆಲೋಚನೆಗಳಾದರೂ ಹೊಳೆಯಬಹುದು. ಮೋಕ್ಷಕ್ಕೆ ಸಾಧನವಾದ ಆಲೋಚನೆಗಳಾದರೂ ಹೊಳೆಯಬಹುದು. ಆದ್ದರಿಂದ ಯಾವ ಆಲೋಚನೆ ಬಂದರೂ ವಿಚಾರದಲ್ಲಿರುತ್ತಾರೆ. ಹೀಗಿರುವದರಿಂದ ಮನಸ್ಸನ್ನು ಸಂಯಮನಮಾಡಬೇಕೆನ್ನುವವರು ಮೊದಲು ತಮ್ಮ ಮನಸ್ಸಿನ ಕಡೆಗೆ ತಿರುಗಿ ತಮ್ಮನ್ನು ತಾವು ಶೋಧನೆಮಾಡಿಕೊಳ್ಳುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು.

ಮನುಷ್ಯನಿಗೆ ಮತ್ತೊಬ್ಬರ ವಿಚಾರವೆಂದರೆ ಬಹಳ ಅಕ್ಕರೆ. 'ಇವರು ಹೀಗಿದ್ದಾರೆ, ಅವರು ಹಾಗಿದ್ದಾರೆ; ಇವರ ನಡತೆ ಸರಿಯಾಗಿದೆ, ಅವರದು ಸರಿಯಾಗಿಲ್ಲ' ಎಂದು ಮಿಕ್ಕವರ ನಡತೆಯನ್ನು ತೂಗಿತೂಗಿ ಅದರಲ್ಲಿರುವ ಹೆಚ್ಚು ಕುಂದುಗಳನ್ನು ಗೊತ್ತುಪಡಿಸುವ ಕೆಲಸವು ಬಹುಜನರಿಗೆ ಮೆಚ್ಚಾಗಿರುತ್ತದೆ. ಆದರೆ 'ನನ್ನ ನಡೆ ಹೇಗಿದೆ? ನನ್ನ ನುಡಿ ಹೇಗಿದೆ? ನನ್ನನ್ನು ಮತ್ತೊಬ್ಬರು ಹೇಗೆ ಕಾಣುವರು? ಅವರು ಈ ವಿಷಯದಲ್ಲಿ ಹೇಗೆ ಭಾವಿಸುವರು?'–ಎಂದು ಯೋಚಿಸಿಕೊಳ್ಳುವವರು ಬಹುವಿರಳ.

ನಮ್ಮ ವ್ಯವಹಾರವು ಬಹುಮಟ್ಟಿಗೆ ಹೊರಗಿನ ವಸ್ತುಗಳಿಗೇ ಸಂಬಂಧಪಟ್ಟಿರುತ್ತದೆ. ಆದ್ದರಿಂದ ನಾವು ಹೊರಗಿನ ಪದಾರ್ಥಗಳನ್ನೂ ಹೊರಗೆ ನಮ್ಮೊಡನೆ ವ್ಯವಹರಿಸುತ್ತಿರುವ ಜನರನ್ನೂ ಮುಖ್ಯವಾಗಿ ನೋಡುತ್ತಾ ಅವರಲ್ಲಿ ಶತ್ರುಮಿತ್ರಾದಿ ಭಾವಗಳನ್ನು ಕಲ್ಪಿಸಿಕೊಳ್ಳುತ್ತಾ ಆ ಕಾರಣದಿಂದ ರಾಗದ್ವೇಷಾದಿಗಳನ್ನು ಹುಟ್ಟಿಹಾಕಿ ಕೊಂಡು ಬೆಳೆಯಿಸುತ್ತಾ ಇರುವದು ಸ್ವಾಭಾವಿಕವಾಗಿದೆ. ಆದರೆ ಹೊರಗಿನ ವಸ್ತುಗಳ ಮತ್ತು ಜನರ ವಿಷಯಕ್ಕೆ ನಾವು ಕೊಡುವ ತೀರ್ಪಿಗೆ ಆಯಾ ಬಾಹ್ಯದೃಶ್ಯಗಳೇ ಕಾರಣವೋ, ಅಥವಾ ನಮ್ಮ ಅಂತಃಕರಣದಲ್ಲಿ ಉಂಟಾಗುತ್ತಿರುವ ಭಾವನೆಗಳು ಮಾತ್ರ ಕಾರಣವೋ?–ಎಂಬುದನ್ನು ಮಾತ್ರ ನಾವು ಯೋಚಿಸುತ್ತಿರುವದಿಲ್ಲ; ನಮ್ಮ ನಮ್ಮ ವಿಷಯಕ್ಕೆ ವಿಚಾರವಿಲ್ಲದೆಯೆ ಒಳ್ಳೆಯ ಅಭಿಪ್ರಾಯವನ್ನೇ ಮಾಡಿಕೊಳ್ಳುತ್ತಿರುತ್ತೇವೆ.

ಆದ್ದರಿಂದ ಇಹದಲ್ಲಿಯೂ ಪರದಲ್ಲಿಯೂ ತನಗೆ ಒಳ್ಳೆಯದೇ ಆಗಬೇಕೆಂದು ಕೋರುವಾತನು ಮೊಟ್ಟಮೊದಲು ತನ್ನನ್ನು ತಾನು ಪರೀಕ್ಷಿಸಿಕೊಳ್ಳುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ನನ್ನ ಸ್ವಭಾವವೇನು? ಯಾವ ಯಾವ ತಪ್ಪುಗಳನ್ನು ಮಾಡುತ್ತಿರು ವೆನು?– ಎಂದು ನಮಗೆ ನಾವೇ ಪ್ರಶ್ನೆಹಾಕಿಕೊಳ್ಳುತ್ತಿರಬೇಕು. **ಸಂ–13, 14**

# ಚಿತ್ತಶುದ್ಧಿ

**ಪ್ರಶ್ನೆ** : ಚಿತ್ತಶುದ್ಧಿ ಎಂದರೇನು?

**ಉತ್ತರ** : ಚಿತ್ತಶುದ್ಧಿ ಎಂದರೆ ಹೃದಯವು ಶುದ್ಧವಾಗಿರುವದು.

**ಪ್ರ** : ನಮಗೆ ಚಿತ್ತಶುದ್ಧಿಯಾಯಿತೋ ಇಲ್ಲವೋ ಎಂಬುದನ್ನು ಗೊತ್ತುಮಾಡಿಕೊಳ್ಳುವದು ಹೇಗೆ?

**ಉ** : ಕಾಮವಿಚಾರಗಳು, ವಿಷಯಗಳ ಬಯಕೆಗಳು, ಸಿಟ್ಟು, ಹೆಮ್ಮೆ, ವಂಚನೆ, ಅಹಂಕಾರ, ಅತ್ಯಾಶೆ, ಅಸೂಯೆ-ಇವು ಯಾವವೂ ಚಿತ್ತಶುದ್ಧಿಯಾದವನಿಗೆ ಉಂಟಾಗುವದಿಲ್ಲ. ಅವನಿಗೆ ಒಂದೇಸಮನೆ ನಡೆದುಕೊಂಡುಬಂದಿರುವ ಶಾಶ್ವತವೈರಾಗ್ಯವುಂಟಾಗಿರುತ್ತದೆ. ಕನಸುಗಳಲ್ಲಿ ಕೂಡ ಅವನಿಗೆ ದುಷ್ಟಸಂಕಲ್ಪಗಳುಂಟಾಗುವಂತಿಲ್ಲ. ಕರುಣೆ, ವಿಶ್ವಪ್ರೇಮ, ಕ್ಷಮೆ, ಹೊಂದಿಕೆ, ಮನಸ್ಸಮಾಧಾನ-ಮುಂತಾದ ಸದ್ವಿಚಾರಗಳೆಲ್ಲ ಉಂಟಾಗುವವು. ಚಿತ್ತಶುದ್ಧಿಯುಂಟಾಯಿತೆಂಬುದನ್ನು ಈ ಗುರುತುಗಳು ಸೂಚಿಸುವವು.

**ಪ್ರ** : ಚಿತ್ತಶುದ್ಧಿಯನ್ನು ಪಡೆದುಕೊಳ್ಳುವದಕ್ಕೆ ಮಾರ್ಗಗಳು ಯಾವವು?

**ಉ** : ಆತ್ಮಭಾವದಿಂದ ನಿಷ್ಕಾಮರಾಗಿ ಮಾನವಸೇವೆಯನ್ನು ಮಾಡುವದು; ಜಪ, ಸಂಕೀರ್ತನ, ಪ್ರಾಣಾಯಾಮ, ಸಾತ್ತ್ವಿಕಾಹಾರ, ಸತ್ಸಂಗ, ಧರ್ಮಗ್ರಂಥಗಳ ಪಾರಾಯಣ; ರಾಜಯೋಗದಲ್ಲಿ ತಿಳಿಸಿರುವ ಯಮನಿಯಮಕ್ರಿಯಾಯೋಗಗಳನ್ನು ಅಭ್ಯಾಸ ಮಾಡುವದು; ಗುರುಸೇವೆ, ಮಹಾತ್ಮರ ಸೇವೆ, ನಿತ್ಯಧ್ಯಾನ, ವಿಚಾರ, ಅನುಷ್ಠಾನ ಪೂರ್ವಕವಾಗಿ ಏಕಾಂತವಾಸಮಾಡುವದು, ಪಂಚಮಹಾಯಜ್ಞಗಳನ್ನು ಮಾಡುವದು, ಅಂತರ್ಮುಖತ್ವ, ಆತ್ಮಪರೀಕ್ಷೆ-ಇವೆಲ್ಲವೂ ಚಿತ್ತಶುದ್ಧಿಗೆ ಉಪಯೋಗವಾಗುವ ಸಾಧನಗಳು.

**ಪ್ರ** : ನಾನು ಈಗ ಆರು ವರ್ಷಗಳಿಂದಲೂ ಧ್ಯಾನಮಾಡುತ್ತಿದ್ದರೂ ಪ್ರಯೋಜನವಾಗಲಿಲ್ಲವೇಕೆ?

**ಉ** : ಚಿತ್ತಶುದ್ಧಿಯಿಲ್ಲದ್ದರಿಂದ.

**ಪ್ರ** : ಚಿತ್ತಶುದ್ಧಿಯಿಲ್ಲದೆ ಸಮಾಧಿಯು ಬಂದೀತೋ?

**ಉ** : ಬರಲಾರದು. ಭದ್ರವಾದ ತಳಹದಿಯಿಲ್ಲದೆ ಕಟ್ಟಿದ ಕಟ್ಟಡವು ಹೇಗೆ ಕೆಳಕ್ಕೆ ಬೀಳುವದೋ ಹಾಗೆ ಚಿತ್ತಶುದ್ಧಿಯಿಲ್ಲದೆ ಸಮಾಧಿಯನ್ನು ಸಂಪಾದಿಸಬೇಕೆಂಬ ಸಾಧಕನೂ ಕೆಳಕ್ಕೆ ಬೀಳುವನು. ಅಧ್ಯಾತ್ಮಮಾರ್ಗಕ್ಕೆ-ರಾಜಯೋಗಕ್ಕಾಗಲಿ ಭಕ್ತಿಯೋಗಕ್ಕಾಗಲಿ ಜ್ಞಾನಯೋಗಕ್ಕಾಗಲಿ-ಮೊಟ್ಟಮೊದಲು ಇರಬೇಕಾದದ್ದು ಚಿತ್ತಶುದ್ಧಿಯೇ.

**ಪ್ರ** : ನಿಷ್ಕಾಮಕರ್ಮವೊಂದನ್ನೇ ಮಾಡುವದು ಒಳ್ಳೆಯದೊ; ಜಪ, ನಿಷ್ಕಾಮಕರ್ಮ-ಎರಡನ್ನೂ ಸೇರಿಸಿಮಾಡುವದು ಒಳ್ಳೆಯದೊ?

**ಉ** : ಸೇರಿಸಿಮಾಡುವ ಸಾಧನಕ್ಕೇ ಬಲ ಹೆಚ್ಚು; ಜನತಾಸೇವೆ, ಜಪ, ಧ್ಯಾನ, ಪಾರಾಯಣ,

ಸತ್ಸಂಗ, ವಿಚಾರ-ಎಲ್ಲವನ್ನೂ ಸೇರಿಸಿಕೊಳ್ಳಿರಿ. ದಿನದಿನವೂ ಮಾಡುವ ಸಾಧನಕ್ಕೆ ಒಂದು ದಿನಚರಿಯ ಪುಸ್ತಕವನ್ನಿಟ್ಟುಕೊಳ್ಳಿರಿ. ಹೀಗಾದರೆ ಚಿತ್ತಶುದ್ಧಿಯು ಬೇಗನೆ ಸಿಕ್ಕುತ್ತದೆ.

ಪ್ರ : ಚಿತ್ತಶುದ್ಧಿಯ ಪ್ರಯೋಜನವೇನು?

ಉ : ಅಧ್ಯಾತ್ಮಪ್ರಕಾಶದ ಅವತಾರವಾಗುತ್ತದೆ. ಕನ್ನಡಿಯಲ್ಲಿ ಮುಖವನ್ನು ಹೇಗೆ ಸ್ಪಷ್ಟವಾಗಿ ನೋಡಿಕೊಳ್ಳಬಹುದೋ ಹಾಗೆಯೇ ಕನ್ನಡಿಯಂತಿರುವ ಚಿತ್ತದಲ್ಲಿ ಆತ್ಮನನ್ನು ಕಾಣುವದಕ್ಕಾಗುತ್ತದೆ.

ಪ್ರ : ಅಂತರ್ಮುಖಿತ್ವವನ್ನೂ ಆತ್ಮಪರೀಕ್ಷೆಯನ್ನೂ ಸಾಧನೆಮಾಡುವದು ಹೇಗೆ?

ಉ : ಬೆಳಗ್ಗೆ ನಾಲ್ಕುಘಂಟೆಗೆ ಏಳಿರಿ. ಕಣ್ಣುಮುಚ್ಚಿಕೊಂಡು ಕೂತುಕೊಳ್ಳಿರಿ. ನಿಮ್ಮೊಳಗೇ ನೋಡಿಕೊಳ್ಳಿರಿ. ಚಿತ್ತವನ್ನೂ ಚಿತ್ತವೃತ್ತಿಗಳನ್ನೂ ನೋಡುತ್ತಿರಿ. ಮನಸ್ಸಿನ ಮೃಗಶಾಲೆಯನ್ನು ಎಚ್ಚರಿಕೆಯಿಂದ ನೋಡಿರಿ. ಆ ದೃಶ್ಯಗಳಲ್ಲಿ ತಾದಾತ್ಮ್ಯವನ್ನು ಹೊಂದಬೇಡಿರಿ. ಅವಕ್ಕೆಲ್ಲ ಸಾಕ್ಷಿಯಾಗಿರಿ. ಯಾವ ಗುಣದ ಯಾವ ವೃತ್ತಿಯು ವ್ಯಾಪಾರಮಾಡುತ್ತಿದೆಯೆಂಬುದನ್ನು ಲಕ್ಷ್ಯಕ್ಕೆ ತನ್ನಿರಿ. ಕೆಲವು ವೇಳೆ ದುಷ್ಟಸಂಕಲ್ಪಗಳಿಗೂ ಸಮ್ಯಕ್ಸಂಕಲ್ಪಗಳಿಗೂ ಹೋರಾಟ ವಾಗುತ್ತಿರುತ್ತದೆ. ಕೆಲವು ವೇಳೆಗಳಲ್ಲಿ ತಮೋಗುಣವು ನುಗ್ಗುವದಕ್ಕೆ ಯತ್ನಿಸುತ್ತದೆ. ಆಗ ನಿದ್ರೆಯು ಬಂದುಬಿಡುತ್ತದೆ. ಕೆಲವು ವೇಳೆಗಳಲ್ಲಿ ಕಾಮ, ಕ್ರೋಧ, ದ್ವೇಷ-ಇವುಗಳು ಚಿತ್ತಸರೋವರದಲ್ಲಿ ಸಣ್ಣ ಸಣ್ಣ ಅಲೆಗಳಂತೆ ಕಾಣಿಸಿಕೊಳ್ಳುತ್ತವೆ. ಕೆಲವುವೇಳೆ ಈಶ್ವರೀಯ ವಿಚಾರಗಳು ಕಾಣಿಸಿಕೊಳ್ಳುತ್ತವೆ. ಪ್ರಕಾಶ, ಸಹಾನುಭೂತಿ, ಶಾಂತಿ, ಜ್ಞಾನ-ಎಂಬ ಸಾತ್ತ್ವಿಕ ಪ್ರವಾಹಗಳನ್ನುಂಟುಮಾಡಿಕೊಳ್ಳಿರಿ. ಹೀಗೆ ಒಂದೇ ಸಮನೆ ಅಂತರ್ಮುಖಿತ್ವವನ್ನು ಸಾಧನೆಮಾಡುತ್ತಿದ್ದರೆ ಪುರಾತನವಾದ ದುಷ್ಟಸಂಕಲ್ಪಗಳೂ ವೃತ್ತಿಗಳೂ ತಾವೇ ನಾಶವಾಗುವವು; ಚಿತ್ತಶುದ್ಧಿಯುಂಟಾಗಿ ಬೇಗನೆ ದೀರ್ಘಸತ್ಕಾರಪೂರ್ವಕವಾದ ಧ್ಯಾನವೂ ಸಮಾಧಿಯೂ ವಶವಾಗುವವು. **ಸಂ-10, 169**

# ಸರ್ವಾತ್ಮಭಾವನೆ

ಮನಸ್ಸಂಯಮಕ್ಕೆ ಸರ್ವಾತ್ಮಭಾವನೆಯೆಂಬುದೊಂದು ದೊಡ್ಡ ಸಾಧನವಾಗಿರುತ್ತದೆ. ಏಕೆಂದರೆ ಸಾಮಾನ್ಯಸ್ಥಿತಿಯಲ್ಲಿ ಮನುಷ್ಯನ ಮನಸ್ಸಿಗೆ ವಸ್ತುಗಳಲ್ಲಿ ಭೇದಗಳೂ ತಾರತಮ್ಯಗಳೂ ಸಹಜವಾಗಿ ಕಾಣುತ್ತಿರುತ್ತವೆ. ಈ ಭೇದಗಳೂ ತಾರತಮ್ಯ ಗಳೂ ತನಗೆ ಒಪ್ಪಾದರೆ ರಾಗವೂ, ಬೇಡವಾದರೆ ದ್ವೇಷವೂ, ಸಹಜವಾಗಿ ಮನಸ್ಸಿನಲ್ಲಿ ಮೂಡಿಕೊಳ್ಳುತ್ತವೆ. ಆದರೆ ಇದಕ್ಕೆ ಬದಲು ಎಲ್ಲೆಲ್ಲಿಯೂ ಪರಮಾತ್ಮಭಾವನೆಯಿದ್ದು ಬಿಟ್ಟರೆ ಆಗ ಯಾವ ದೃಶ್ಯದಿಂದಲೂ ಮನಸ್ಸಿನಲ್ಲಿ ಏರುಪೇರುಗಳಾಗುವದಕ್ಕೆ ಎಡೆಯಿರುವದಿಲ್ಲ.

ನಮ್ಮ ಮುಂದೆ ಕಾಣುವ ಉತ್ತಮದೃಶ್ಯಗಳಲ್ಲಿ ನಮ್ಮ ಮನಸ್ಸಿನ ಒಲವು ಇದ್ದೇ ಇರುತ್ತದೆಯಾದ್ದರಿಂದ ಅವುಗಳಲ್ಲಿ ಆತ್ಮಭಾವನೆಯನ್ನು ಮಾಡುವದು ಕೆಲವರಿಗೆ

ಸುಲಭವಾದರೂ ಆಗಬಹುದು; ಆದರೆ ನಮಗೆ ಮೆಚ್ಚಾಗದ, ಅಸಹ್ಯವಾಗಿ ಕಾಣುವ, ನೋಟಗಳಲ್ಲಿಯೂ ಪರಮಾತ್ಮದೃಷ್ಟಿಯುಂಟಾಗುವದು ಎಲ್ಲರಿಗೂ ದಕ್ಕುವದಲ್ಲ. ಆದರೂ ವಸ್ತುಸ್ಥಿತಿಯೇನೆಂದರೆ ಸರ್ವವೂ ಬ್ರಹ್ಮವೇ, ಎಲ್ಲವೂ ಪರಮಾರ್ಥವಾದ ಸಚ್ಚಿದಾನಂದ ವಸ್ತುವೇ. ಹಾಗೆಂದು ಶಾಸ್ತ್ರವು ಸಾರುತ್ತಿದೆ. ನಮ್ಮ ಹೊರಗಿನ ನೋಟಗಳಲ್ಲಿ ನಮಗೆ ಅಶುಭದೃಷ್ಟಿಯುಂಟಾಗಿರುವದು, ನಮ್ಮ ಪಾಪವಾಸನೆಯಿಂದಲೇ ಹೊರತು ಆ ವಸ್ತುಗಳಲ್ಲಿರುವ ದೋಷದಿಂದಲ್ಲ-ಎಂದು ತಿಳಿದವರು ಹೇಳುತ್ತಾರೆ.

ಜ್ಞಾನಿಗಳ ಕಣ್ಣಿಗೆ ಎಲ್ಲವೂ ಪರಮಾತ್ಮನೇ ಆಗಿರುವದೆಂದು ಬಲ್ಲವರು ಹೇಳುತ್ತಾರೆ. ಆ ಮಟ್ಟಕ್ಕೆ ಇನ್ನೂ ಏರದಿರುವ ನಾವುಗಳು ಎಲ್ಲೆಲ್ಲಿಯೂ ಪರಮಾತ್ಮನ ಸನ್ನಿಧಿ ಯಿರುವದೆಂದೂ ಆದ್ದರಿಂದ ಅದೆಲ್ಲವೂ ಪರಮಪೂಜ್ಯವಾದದ್ದೆಂದೂ ಭಾವಿಸುತ್ತಿರಬೇಕು. ಸಾಧ್ಯವಾದರೆ ಎಲ್ಲವೂ ಪರಮಾತ್ಮನ ರೂಪವಿಶೇಷವೇ ಎಂದು ಧ್ಯಾನಿಸುತ್ತಿರಬೇಕು. ಇದರಿಂದ ಮನಸ್ಸು ತನ್ನ ಚಾಂಚಲ್ಯವನ್ನು ಬಿಟ್ಟು ಸ್ವಸ್ಥವಾಗುತ್ತದೆ, ಆಗ ನಮಗೆ ಶಾಂತಿಯು ದೊರಕುತ್ತದೆ. **ಸಂ-13, 103**

## ಸಾಧನವಿಚಾರ

"ತನ್ನ ತಿಳಿದೊಡವ ಯೋಗಿ । ತಾನೇ ತನ್ನ ಮೂಲವ ಕಾಣದವ ಜನ್ಮರೋಗಿ" ಎಂದು ಒಬ್ಬ ಅನುಭವಿಗಳು ತತ್ತ್ವವನ್ನು ಹಾಡಿದ್ದಾರೆ. ಪ್ರತಿಯೊಬ್ಬರ ಹೃದಯದಲ್ಲಿಯೂ ಪರಮಾತ್ಮನು ಗೂಢನಾಗಿರುತ್ತಾನೆ. ಪ್ರತಿಯೊಬ್ಬರೂ ಗಾಢನಿದ್ರೆಯಲ್ಲಿ ಆ ಹೃದಯ ದೊಳಕ್ಕೇ ಹೋಗುತ್ತಾರೆ. ಆದರೂ ಅಲ್ಲಿರುವ ಬ್ರಹ್ಮದ ವಿಷಯವನ್ನು ಅರಿಯದ್ದರಿಂದ, ಮತ್ತೆ ಜೀವರಾಗಿ ಹೊರಬೀಳುವರು.

ವೇದಾಂತವನ್ನು ಎಷ್ಟು ಓದಿದ್ದರೂ ದೇಹವೇ ನಾನೆಂಬ ಭ್ರಾಂತಿಯು ಹೋಗದಿರು ವದರಿಂದ ದುಃಖನಿವೃತ್ತಿಯಾಗುವದಿಲ್ಲ. ಶಾಸ್ತ್ರಪಾಂಡಿತ್ಯಕ್ಕೆ ಹೆಚ್ಚಿನ ಬೆಲೆಯನ್ನು ಕೊಟ್ಟವರು ತಾವು ಪಂಡಿತರೆಂಬ ಅಹಂಕಾರದಲ್ಲಿ ಮುಳುಗಿರುವರು; ಅಥವಾ ಎಲ್ಲರೊಡನೆಯೂ ವಾದಕ್ಕೆ ಕಾಲುಕೆರೆಯುತ್ತಿರುವರು. ಇನ್ನು ಕೆಲವರು ಶಾಸ್ತ್ರಬಾಹುಳ್ಯದಿಂದ ಸಂಶಯಗಳಿಗೆ ತುತ್ತಾಗುವರು. "ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣಕಾರಣಮ್ ।" ಎಂದಂತೆ ಅನುಭವವಿಲ್ಲದ ಶಾಸ್ತ್ರಪಾಂಡಿತ್ಯವು ಚಿತ್ತಭ್ರಮಣೆಗೆ ಕಾರಣವಾಗುವದು. ಆದ್ದರಿಂದ ಅಡಿಗೆ ಯಾದಮೇಲೆ ಕೊಳ್ಳಿಗಳನ್ನು ಬಿಸಾಡುವಂತೆಯೂ, ಕಾಳನ್ನು ಬಯಸುವವರು ಹೊಟ್ಟನ್ನೂ ಕಡ್ಡಿಯನ್ನೂ ಆಚೆಗೆ ಒಗೆಯುವಂತೆಯೂ ಆತ್ಮಾನುಭವವನ್ನು ಬಯಸುವವರು ಶಾಸ್ತ್ರಗಳ ಸಹಾಯವನ್ನು ಕೋರಿದರೂ ಅನುಭವಕ್ಕೇ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕು.

ಉತ್ತಮಸಾಧಕರ ಮನಸ್ಸು ಕೂಡ ಒಂದೊಂದು ವೇಳೆ ಕಳವಳಗೊಂಡು ಹಿಮ್ಮುಖವಾಗುವದು. ಇವರು ಕೂಡ ಸಕಾರಣವಾಗಿಯೋ ನಿಷ್ಕಾರಣವಾಗಿಯೋ ಅಶಾಂತತೆಯನ್ನು ಪಡೆಯುವರು. ಇದನ್ನು ನಿವಾರಣೆಮಾಡಿಕೊಳ್ಳಲು ಪಂಚದಶಿಯಲ್ಲಿ ಒಂದು ಉಪಾಯವನ್ನು ಸೂಚಿಸಿರುತ್ತದೆ. "ಶಾಂತಿಯು ನೆಲೆಯಾಗಿ ನಿಲ್ಲಬೇಕಾದರೆ ವೈರಾಗ್ಯ, ಜ್ಞಾನ, ಉಪರತಿ–ಇವು ಮೂರೂ ಕೂಡಿಯೇ ಇರಬೇಕು." ಎಲ್ಲಾ ಲೋಕಗಳಿಗಿಂತಲೂ ಹೆಚ್ಚಿನ ಬ್ರಹ್ಮಲೋಕದ ಸುಖವನ್ನು ಕೂಡ ಕಸಕ್ಕಿಂತಲೂ ಕಡಿಮೆಯಾಗಿ ನೋಡುವದು ವೈರಾಗ್ಯವು; ಪರಮಾತ್ಮನೇ ತಾನೆಂಬ ಅನುಭವರೂಪವಾದ ಜ್ಞಾನವೇ ನಿಜವಾದ ಜ್ಞಾನ; ನಿದ್ರೆಯೊಳಗೆ ವ್ಯವಹಾರವನ್ನೆಲ್ಲ ಮರೆತಿರುವಂತೆ ಧ್ಯಾನದಲ್ಲಿ ದೇಹವನ್ನೂ ದೇಹೇಂದ್ರಿಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನೂ ಮರೆತಿರುವದು ಉಪರತಿ. ಈ ಮೂರರಲ್ಲಿ ಯಾವದು ಕಡಿಮೆಯಾದರೂ ದೃಷ್ಟ ದುಃಖವು ನಾಶವಾಗಲಾರದು.

ಇನ್ನೊಂದು ವಿಷಯ. ಸಮಾಧಿಯಲ್ಲಿ ಕುಳಿತು ಬ್ರಹ್ಮಾನಂದದಲ್ಲಿ ಮುಳುಗಿರುವಂತೆಯೇ ಜ್ಞಾನಿಯು ಒಂದುವೇಳೆ ಪ್ರಾರಬ್ಧಬಲದಿಂದ ವ್ಯವಹಾರದಲ್ಲಿದ್ದರೂ ಆತ್ಮನಿಷ್ಠೆಯನ್ನು ಬಿಡದೆ ವ್ಯವಹಾರವನ್ನು ನಡೆಯಿಸುತ್ತಿರಬೇಕು. ದೇಹೇಂದ್ರಿಯಗಳಿಂದ ಆಗುವ ಕಾರ್ಯಗಳಿಗೂ ಆತ್ಮನಿಗೂ ಸಂಬಂಧವಿಲ್ಲವೆಂಬ ದೃಢವಾದ ತಿಳಿವಳಿಕೆಯಿದ್ದರೆ ಕರ್ಮವನ್ನು ಮಾಡುವದರಿಂದಾಗಲಿ ಬಿಡುವದರಿಂದಾಗಲಿ ಯಾವ ಹಾನಿಯೂ ಆಗಲಾರದು. ಕಮಲವು ನೀರಿನಲ್ಲಿ ಹುಟ್ಟಿ ನೀರಿನಲ್ಲಿಯೇ ಇದ್ದರೂ ನೀರನ್ನು ಸೋಂಕದೆ ಇರುವಂತೆಯೂ ಕುಂಬಾರನ ಹುಳುವು ಕೆಸರಿನಲ್ಲಿಯೇ ಇದ್ದು ಕೆಸರಿನ ಉಂಡೆಗಳನ್ನು ಮಾಡುತ್ತಿದ್ದರೂ ಕೆಸರನ್ನು ಅಂಟಿಸಿಕೊಳ್ಳದೆ ಇರುವಂತೆಯೂ ಜ್ಞಾನಿಯು ವ್ಯವಹಾರವನ್ನು ಮಾಡುತ್ತಿದ್ದರೂ ನಿರ್ಲಿಪ್ತನಾಗಿರುವನು. ಅವನಲ್ಲಿಯೂ ವೈರಾಗ್ಯ, ಧ್ಯಾನಗಳು ಇದ್ದೇ ಇರುವವು. ಇವು ಒಂದಕ್ಕೊಂದು ಸಹಾಯಮಾಡುವವು. ವೈರಾಗ್ಯವು ಹೆಚ್ಚಿದಂತೆಲ್ಲ ಧ್ಯಾನಕ್ಕೆ ಮನಸ್ಸು ಹೆಚ್ಚುಹೆಚ್ಚು ಒಲಿಯುವದು. ಹಣ್ಣಾದ ಎಲೆಗಳು ಗಿಡಗಳಿಂದ ತಾವಾಗಿ ಉದುರಿಬೀಳುವಂತೆ ಆತ್ಮಾನುಭವವನ್ನು ಪಡೆದವರಿಂದ ವಿಷಯೇಚ್ಛೆಯು ತಾನಾಗಿಯೇ ಕಳಚಿಹೋಗುವದು.

ಸರ್ವಸಾಧನದ ಧ್ಯೇಯವು ಅಪರೋಕ್ಷಾನುಭವವೆಂಬುದನ್ನು ಸಾಧಕರಾದವರು ಎಂದಿಗೂ ಮರೆಯಲಾರರು. **ಸಂ–21, 232**

# ಸಾಧನದ ಆವಶ್ಯಕತೆ

**(ಮೈಸೂರಿನಲ್ಲಿ ಬ್ರಾಶ್ರೀವಿಠ್ಠಲಶಾಸ್ತ್ರಿಗಳವರ ಮನೆಯಲ್ಲಿ ತಾ। 11-2-42ರಲ್ಲಿ ಕೆಲವು ಜನ ಜಿಜ್ಞಾಸುಗಳಿಗೆ ಲೇಖಕರು ಕೊಟ್ಟ ಸೂಚನೆಗಳ ಸಾರ.)**

ಮನುಷ್ಯನಿಗೆ ಮನಸ್ಸೇ ಬಂಧಮೋಕ್ಷಗಳಿಗೆ ಕಾರಣವಾದದ್ದು-ಎಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ. ಇಲ್ಲಿ ಮನಸ್ಸೆಂದರೆ ಅಂತಃಕರಣವೆಂದರ್ಥ. ಅಂತಃಕರಣದ ಒಂದಾನೊಂದು ವೃತ್ತಿಯನ್ನೂ ಮನಸ್ಸೆಂದೇ ಕರೆಯುವದುಂಟು; ಆಗ ಬುದ್ಧಿ, ಅಹಂಕಾರ, ಚಿತ್ತ-ಎಂಬ ಇನ್ನೂ ಮೂರು ವೃತ್ತಿಗಳನ್ನು ಲೆಕ್ಕಕ್ಕೆ ಹಿಡಿಯಬೇಕು.

ದರ್ಶನಗಳಲ್ಲಿ ಅಂತಃಕರಣದ ಒಂದೊಂದು ವೃತ್ತಿಗೆ ಒಬ್ಬೊಬ್ಬರು ಪ್ರಾಮುಖ್ಯವನ್ನು ಕೊಟ್ಟು ವಿಚಾರಮಾಡಿರುತ್ತಾರೆನ್ನಬಹುದು. ಹೇಗೆಂದರೆ, ತರ್ಕದಲ್ಲಿ ಎಂದರೆ **ನ್ಯಾಯವೈಶೇಷಿಕದರ್ಶನಗಳಲ್ಲಿ** ಮನಸ್ಸಿಗೇ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿರುತ್ತದೆ. ನ್ಯಾಯಶಾಸ್ತ್ರದಲ್ಲಿ ಪ್ರಮಾಣವೂ ತರ್ಕವೂ ಎಲ್ಲಕ್ಕಿಂತಲೂ ಮೇಲಿನ ಮಟ್ಟದಲ್ಲಿರುತ್ತದೆ ಎಂಬುದು ನಿಮಗೆ ತಿಳಿದೇ ಇದೆ. ಇವು **'ಮನಸ್ಸು'** ಎಂಬ ಅಂತಃಕರಣ ವೃತ್ತಿಗೆ ಸೇರಿದ್ದಾಗಿವೆ. **ಸಾಂಖ್ಯರು** ಬುದ್ಧಿ ಎಂಬ ವೃತ್ತಿಗೇ ಹಿರಿಮೆಯನ್ನು ತೋರಿಸುತ್ತಾರೆನ್ನಬಹುದು; ಏಕೆಂದರೆ ಅವರು ಆತ್ಮ, ಅನಾತ್ಮ-ಇವುಗಳ ವಿವೇಕವನ್ನೇ ಮುಖ್ಯವೆಂದು ಎಣಿಸುತ್ತಾರೆ. ಇದರಂತೆ **ಯೋಗಿಗಳು 'ಚಿತ್ತ'**ಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಚಿತ್ತವೆಂದರೆ ವಿಚಾರಾತ್ಮಕವಾದ ಅಂತಃಕರಣವಲ್ಲ, ನಿಶ್ಚಯರೂಪವಾದದ್ದೂ ಅಲ್ಲ; ಹೊರಗಿನ ಸಾಮಾನ್ಯವಾದ ಅರಿವು ಏತರಿಂದ ಆಗುವದೋ ಅದೇ ಚಿತ್ತವು. ಈ ಚಿತ್ತವನ್ನು ಒಕ್ಕಡೆಗೆ ಇಡಬೇಕಾದಾಗ 'ಚಿತ್ತವಿಟ್ಟು ಲಾಲಿಸಿರಿ' ಎನ್ನುವದನ್ನು ನೀವು ಕೇಳಿರಬಹುದು. ಚಿತ್ತವು ಬಗೆಬಗೆಯ ಮಟ್ಟಗಳಲ್ಲಿರುತ್ತದೆ; ಚಿತ್ತವೃತ್ತಿಗಳನ್ನೆಲ್ಲ ತಡೆಗಟ್ಟಿ ಸಮಾಧಿಯನ್ನು ಪಡೆಯುವ ಕ್ರಮವನ್ನೇ ಯೋಗದಲ್ಲಿ ವಿಸ್ತರಿಸಿರುತ್ತದೆ. ಚಿತ್ತದಿಂದ ಗ್ರಹಿಸಿದ್ದನ್ನು ಮನಸ್ಸಿನಿಂದ ಮನನಮಾಡಿ ಬುದ್ಧಿಯಿಂದ ನಿಶ್ಚಯಿಸುತ್ತೇವೆ. ಹೀಗೆ ಇವು ಮೂರೂ ಒಂದಕ್ಕಿಂತ ಒಂದು ಒಳಗಿನ ವೃತ್ತಿಗಳು. ಇನ್ನು **ಅಹಂಕಾರವೆಂಬ** ವೃತ್ತಿಯನ್ನು ಎಲ್ಲಾ ದರ್ಶನಕಾರರೂ ಲೆಕ್ಕಕ್ಕೆ ತೆಗೆದುಕೊಂಡಿರುತ್ತಾರೆ. ತಾನಲ್ಲದ ದೇಹಾದಿಗಳಲ್ಲಿ ತಾನೆಂಬ ಹೆಮ್ಮೆಯನ್ನಿಟ್ಟುಕೊಂಡಿರುವದನ್ನೇ ಅಹಂಕಾರವೆಂದು ಕರೆಯುತ್ತಾರೆನ್ನಬಹುದು.

ವೇದಾಂತಿಗಳು ಈ ನಾಲ್ಕು ವೃತ್ತಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ಸಾಧನವನ್ನು ಉಪದೇಶಿಸಿರುತ್ತಾರೆ. ಒಂದು ರಾಜ್ಯದಮೇಲೆ ಶತ್ರುಗಳ ಧಾಳಿಯು ನಡೆಯುತ್ತಿರುವಾಗ ಅರಸನು ತನ್ನ ನಾಲ್ಕು ಮಂತ್ರಿಗಳ ಸಲಹೆಯನ್ನೂ ಕೇಳಿ ಅವರ ಅಭಿಮತವನ್ನು

ಹೊಂದುಗಡೆಮಾಡಿ ಕಾರ್ಯಾಚರಣೆಯನ್ನು ಕೈಕೊಳ್ಳುವಂತೆ ಸಾಧಕನಾದವನು ನಾಲ್ಕು ವೃತ್ತಿಗಳ ವಿಷಯವನ್ನೂ ಮನದಂದುಕೊಂಡು ನಡೆಯಬೇಕಾಗಿರುತ್ತದೆ. ಮನಸ್ಸಿನಿಂದ ವಿಚಾರಮಾಡಿ ಸುಮ್ಮನಾದರೆ ಸಾಲದು. ಬುದ್ಧಿಯಿಂದ ಒಮ್ಮೆ ವಿವೇಕವನ್ನು ಮಾಡಿಕೊಂಡು ಗೆದ್ದೆನೆಂದು ಭಾವಿಸಲೂಬಾರದು. ಏಕೆಂದರೆ ವಿಚಾರದಿಂದ ಹೋದಂತೆ ಕಂಡ ಸಂಶಯಗಳು ಮತ್ತೆ ಕವಲುಕವಲಾಗಿ ಚಿಗುರುವವು; ವಿವೇಕದಿಂದ ಪ್ರಕೃತಿಯ ಅಧ್ಯಾಸವನ್ನು ಬಿಡಿಸಿಕೊಂಡು ನೋಡಿದ ಮೇಲೂ ಮತ್ತೆ ಅಧ್ಯಾಸವು ಬಗೆಬಗೆಯಿಂದ ತನ್ನ ಕೈಚಳಕವನ್ನು ತೋರಿಸುತ್ತಲೇ ಇರುವದು. ಚಿತ್ತವನ್ನು ಸ್ವಲ್ಪಹೊತ್ತು ನಿಲ್ಲಿಸಿಕೊಂಡರೆ ಸಾಲದು; ಅದು ಮತ್ತೆ ಹೇಗೋ ಚದರಿಬಿಡುತ್ತದೆ. ಒಂದು ಬಗೆಯ ಅಹಂಕಾರವನ್ನು ಗೆದ್ದುಕೊಂಡೆನೆಂದು ಹಿಗ್ಗಬಾರದು; ಅದು ಮತ್ತೆ ಹೇಗೋ ಮತ್ತೊಂದು ಬಗೆಯ ಅಭಿಮಾನವಾಗಿ ತೋರಿಕೊಳ್ಳುತ್ತದೆ. ಅಂತಃಕರಣವು ಇರುವವರೆಗೂ ಅದು ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ–ಎಂಬ ರೂಪಗಳಿಂದ ಮತ್ತೆ ಮತ್ತೆ ತೋರಿಕೊಳ್ಳುತ್ತಲೇ ಇರುತ್ತದೆ. ಇದೇ ಅದರ ಸ್ವಭಾವವು.

ಆದ್ದರಿಂದ ನೀವು ಅಂತಃಕರಣದ ನಾಲ್ಕು ವೃತ್ತಿಗಳಿಗೂ ಸಮವಾಗಿ ಕೆಲಸವನ್ನು ಕೊಡುತ್ತಿರಬೇಕು. ಬರಿಯ ಒಣವಿಚಾರದಿಂದ ತೃಪ್ತರಾಗಬೇಡಿರಿ. ಒಣತರ್ಕವನ್ನು ನಂಬಬೇಡಿರಿ. ತರ್ಕಕ್ಕೆ ಆಕಾರಮಾತ್ರದಿಂದ ತೃಪ್ತಿಯಾಗುತ್ತದೆ. ಒಮ್ಮೆ ಬೆಂಗಳೂರಿಗೆ ಒಬ್ಬ ಲಕ್ಕೋಟೆಪ್ರಶ್ನೆಯನ್ನು ಹೇಳುವ ಚತುರನು ಬಂದಿದ್ದನಂತೆ. ಕೇಳುವವರು ಲಕ್ಕೋಟೆಯೊಳಗಡೆಯಲ್ಲಿ ಬರೆದಿಟ್ಟಿದ್ದ ಪ್ರಶ್ನೆಗೆ ಅವನು ಉತ್ತರವನ್ನು ಹೇಳುತ್ತಿದ್ದನಂತೆ. ಆಗ ಅವನು ಒಂದು ಪ್ರಶ್ನೆಗೆ ಕೊಟ್ಟ ಉತ್ತರವು 'ಆರುತಿಂಗಳಿಗೆ' ಎಂದಾಗಿತ್ತು. ಒಬ್ಬ ವಿನೋದಗಾರನು ಹಾಕಿದ್ದ ಪ್ರಶ್ನೆಗೆ ಉತ್ತರವಿದು. ಪ್ರಶ್ನೆಯೇನು ಬಲ್ಲಿರಾ? "ನಂದಿಬೆಟ್ಟವು ಬೆಂಗಳೂರ ಚೌಕಕ್ಕೆ ಯಾವಾಗ ಬರುತ್ತದೆ?" ಎಂಬುದೇ ! ಒಂದು ಮರದಲ್ಲಿರುವ ಹಕ್ಕಿಗಳಲ್ಲಿ ಒಂದನ್ನು ಒಂದು ಬಂದೂಕಿನಿಂದ ಹೊಡೆದು ಕೊಂದರೆ ನಾಲ್ಕು ಬಂದೂಕಿನಿಂದ ಎಷ್ಟು ಕೊಲ್ಲಬಹುದು?–ಎಂಬ ಪ್ರಶ್ನೆಗೆ 'ನಾಲ್ಕು ಹಕ್ಕಿಗಳನ್ನು ಕೊಲ್ಲಬಹುದು' ಎಂಬ ಉತ್ತರದಷ್ಟೇ ಈ ಉತ್ತರವು ಸರಿಯಾದದ್ದು. ಉತ್ತರವು ಒಣತರ್ಕದ ಆಧಾರದ ಮೇಲೆ ನಿಂತಿದೆ. ತತ್ತ್ವವು ಒಣತರ್ಕಕ್ಕೆ ಎಂದಿಗೂ ನಿಲುಕಲಾರದು.

ಭಗವಂತನು ಗೀತೆಯಲ್ಲಿ ಏನು ಹೇಳಿರುತ್ತಾನೆಂಬುದನ್ನು ನೆನಪಿಡಿರಿ. **"ಮಚ್ಚಿತ್ತೋ ಯುಕ್ತ ಆಸೀತ"** (ನನ್ನಲ್ಲಿಯೇ ಚಿತ್ತವುಳ್ಳವನಾಗಿ, ನಾನೇ ಹೆಚ್ಚೆಂದು ತಿಳಿದು ಸಮಾಹಿತ ನಾಗಿರಬೇಕು), **"ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ ತರಿಷ್ಯಸಿ"** (ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿದ್ದರೆ ಎಲ್ಲಾ ಎಡರುಗಳನ್ನೂ ದಾಟುವೆ) ಎಂದು ಹೇಳಿರುವಂತೆ

ಯಾವಾಗಲೂ ಪರಮೇಶ್ವರನಲ್ಲಿಯೇ ಚಿತ್ತವನ್ನಿಟ್ಟುಕೊಳ್ಳಿರಿ; **"ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ"** (ನನ್ನಲ್ಲಿಯೇ ಮನಸ್ಸನ್ನಿಟ್ಟು, ನನ್ನಲ್ಲಿಯೇ ಬುದ್ಧಿಯನ್ನು ಹೊಗಿಸು) ಎಂದಿರುವಂತೆ ಭಗವಂತನಲ್ಲಿಯೇ ಮನನನಿಶ್ಚಯಾತ್ಮಕವಾದ ಅಂತಃಕರಣ ವೃತ್ತಿಗಳನ್ನು ಸೇರಿಸಿಕೊಳ್ಳುವದಕ್ಕೆ ಯತ್ನಿಸಿರಿ; **"ಯದಹಂಕಾರಮಾಶ್ರಿತ್ಯ", "ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ । ವಿಮುಚ್ಯ ನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ"**– ಎಂದಿರುವಂತೆ ಅಹಂಕಾರಮಮಕಾರಗಳಿಂದ ಮಾಡುವ ಕೆಲಸವು ವ್ಯರ್ಥವೆಂದು ನಿಶ್ಚಯಿಸಿರಿ. ನಿರಭಿಮಾನದಿಂದ ಭಗವಂತನಲ್ಲಿಯೇ ಶಾಂತಿಯನ್ನು ಪಡೆಯುವದಕ್ಕೆ ಹವಣಿಸಿರಿ. ಯಾವಾಗಲೋ ಒಂದು ಸಲ ಚಿತ್ತವನ್ನು ಭಗವಂತನಕಡೆಗೆ ತಿರುಗಿಸಿ ಒಂದು ಸಲ ಪರಮಾತ್ಮವಿಚಾರವನ್ನು ಮಾಡಿ, ಒಂದು ಸಲ ವಿವೇಕವನ್ನು ಅಭ್ಯಾಸಮಾಡಿ, ಒಂದು ಸಲ ಅಹಂಕಾರವನ್ನು ಗೆಲ್ಲುವ ಪ್ರಯತ್ನವನ್ನು ಮಾಡಿದರೆ ಸಾಲದು; ಶನಿಶನಿವಾರ ದೇವಾಲಯಕ್ಕೆ ಹೋಗಿಬರುವಂತೆ ಇದೊಂದು ಪದ್ಧತಿಯಾಗಿದ್ದರೆ ಸಾಕೆಂದು ತಿಳಿಯಬೇಡಿರಿ. ನಮ್ಮ ಸರ್ವವ್ಯವಹಾರದಲ್ಲಿಯೂ ಪರಮೇಶ್ವರನೇ ನಮ್ಮ ಚಿತ್ತಮನಬುದ್ಧಿಗಳಿಗೆ ಆಶ್ರಯನಾಗಿರಬೇಕು, ಅಹಂಕಾರವನ್ನು ಯಾವಾಗಲೂ ಮೆಟ್ಟಿ ತುಳಿಯುತ್ತಲೇ ಇರಬೇಕು. ಹಾಗಾದರೆ ಮಾತ್ರ ನಮ್ಮ ಇಷ್ಟಾರ್ಥವು ನೆರವೇರೀತು.

ಚಿತ್ತಕ್ಕೆ ಧ್ಯಾನವನ್ನು ಕೊಡುತ್ತಲೇ ಇರಬೇಕು; ಅಂತಃಕರಣವು ಮನೋರೂಪವಾದರೆ ಕೂಡಲೆ ಅದನ್ನು ಸದ್ವಿಚಾರಕ್ಕೆ ಹತ್ತಿಸಬೇಕು; ಬುದ್ಧಿಯಿಂದ ನಿತ್ಯಾನಿತ್ಯ, ಸತ್ಯಮಿಥ್ಯ ಮುಂತಾದವುಗಳ ವಿವೇಕವನ್ನು ಮಾಡುತ್ತಲೇ ಇರಬೇಕು; ಅಮಾನಿತ್ವ, ಅದಂಭಿತ್ವ ಮುಂತಾದ ಗುಣಗಳಿಂದ ಅಹಂಕಾರವನ್ನು ಹಿಮ್ಮೆಟ್ಟಿಸುತ್ತಿರಬೇಕು. ಇದು ಹೇಗೆ ಸಾಧ್ಯವೆನ್ನುವಿರೊ? ನಮ್ಮ ಸಕಲ ಕರ್ಮಗಳೂ ಭಗವಂತನ ಅರ್ಚನೆಯಾಗಬೇಕು, ನಮ್ಮ ವಾಕ್ಕುಗಳೆಲ್ಲವೂ ಆತನ ನಾಮಜಪಪಾರಾಯಣವಾಗಬೇಕು, ಆಗ ಅಂತಃಕರಣವು ನಮ್ಮ ವಶಕ್ಕೆ ಬರುತ್ತದೆ; ಅದರ ವೃತ್ತಿಗಳನ್ನೂ ಪರಮೇಶ್ವರನಲ್ಲಿಡುವದಕ್ಕೆ ಸಾಧ್ಯವಾಗುತ್ತದೆ– ಹೀಗೆಂದು ಬಲ್ಲವರೆಲ್ಲರೂ ಹೇಳುತ್ತಿದ್ದಾರೆ.

ಸಾಧಕನಾದವನು ಯಾವಾಗಲೂ ಆತ್ಮಪರೀಕ್ಷೆಯನ್ನು ಮಾಡಿಕೊಳ್ಳುತ್ತಲೇ ಇರಬೇಕು. ನನ್ನ ಚಿತ್ತವು ಆತ್ಮಸ್ವರೂಪದ ಅನುಸಂಧಾನವನ್ನೇ ಮಾಡುತ್ತಿದೆಯೊ ಹೊರಮುಖ ವಾಗಿದೆಯೊ, ಮನಸ್ಸು ಭಗವದ್ವಿಚಾರವನ್ನೇ ಮಾಡುತ್ತಿದೆಯೊ ಅಸದ್ವಿಚಾರಕ್ಕೆ ಹಾತುವರಿ ಯುತ್ತಿದೆಯೊ, ಬುದ್ಧಿಯು ಆತ್ಮಾನಾತ್ಮವಿವೇಚನೆಮಾಡಿಕೊಳ್ಳುತ್ತಿದೆಯೊ, ಇಲ್ಲವೆ, ಅಧ್ಯಾಸ ಪೂರ್ವಕವಾದ ವ್ಯವಹಾರದಲ್ಲಿಯೇ ಅಭಿರುಚಿಯನ್ನು ತೋರಿಸುತ್ತಿರುವದೊ, ಅಹಂಕಾರವು ಕುಗ್ಗುತ್ತಾ ಪರಮಾತ್ಮನ ಪ್ರಕಾಶವು ಹೊರಸೂಸುವದಕ್ಕೆ ಅವಕಾಶವನ್ನು ಕೊಡುತ್ತಿದೆಯೊ, ಇಲ್ಲವೆ, ತಾನೇ ತಾನಾಗಿ ಹೊರಹೊಮ್ಮಿಕೊಂಡು ರಜಸ್ತಮೋಗುಣಗಳ

ಹಬ್ಬುಗೆಯನ್ನು ಪ್ರೋತ್ಸಾಹಿಸುತ್ತಿದೆಯೊ?-ಎಂದು ತನ್ನಲ್ಲಿ ತಾನು ವಿಚಾರ ಮಾಡಿಕೊಳ್ಳುತ್ತಿರಬೇಕು. ಇದೇ ಮುಮುಕ್ಷುವಿನ ಕರ್ತವ್ಯವು; ಹೀಗೆ ಪರಮಾತ್ಮನೇ ತನಗೆ ಬೇಕೆಂದು ಹವಣಿಸುವವರೇ ಆತನ ಅನುಗ್ರಹದಿಂದ ತತ್ತ್ವಜ್ಞಾನವನ್ನು ಪಡೆದು ಕೃತಕೃತ್ಯರಾಗುವರು. **ಸಂ-13, 172**

## ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ

ಈಗಿನ ನಾಗರಿಕತೆಗೆ ಕರ್ಮಯೋಗಿಗಳ ಆವಶ್ಯಕತೆಯು ಹೆಚ್ಚಾಗಿದೆ. ಕರ್ಮಯೋಗ ವೆಂದರೆ ಜನತಾಸೇವೆ ಎಂದು ಹಲವರು ಈಗ ವ್ಯಾಖ್ಯಾನಮಾಡುತ್ತಿದ್ದಾರೆ. ತಮ್ಮ ತಮ್ಮ ಸ್ಥಾನದಲ್ಲಿ ಲೋಕಸೇವೆಯನ್ನು ಮಾಡುವದೇ ಕರ್ಮಯೋಗವು, ಪರೋಪಕಾರ ಕ್ಕಿಂತ ಮಿಗಿಲಾದ ಧ್ಯೇಯವಿಲ್ಲ-ಎಂಬುದು ಬಹು ಜನರ ನಂಬಿಕೆ. ಸ್ವಕರ್ತವ್ಯತೆಯಲ್ಲಿ ನಿಷ್ಠೆಯೂ ಮಾನವಸೇವೆಯಲ್ಲಿ ನಿರತರಾಗಿರುವದೂ ಬಹಳ ಹೆಚ್ಚಿನ ಜೀವನಸೂತ್ರ ಗಳೆಂಬ ಮಾತಿಗೆ ಎರಡಿಲ್ಲ. ಆದರೆ ಕರ್ಮಯೋಗವೆಂಬ ಗೀತೆಯ ಉಕ್ತಿಯಲ್ಲಿ ಇನ್ನೊಂದು ಅಂಶವೂ ಸೇರಿರುತ್ತದೆ. ಅದೇ ಈಶ್ವರಾರ್ಚನೆ.

ಸಾಮಾನ್ಯರಾದ ನಮ್ಮಂಥವರಿಗೆ ಈಶ್ವರನು ತಾನೇ ಬೇರೆಯಾಗಿ ಕಾಣಿಸುವದಿಲ್ಲ, ನಿಜ. ನಮಗೆ ಕಾಣಿಸುವ ಜನರ ಸೇವೆಯು ಜನಾರ್ದನಸೇವೆಯೆಂಬುದೂ ನಿಜ. ಆದರೆ ಜನಾರ್ದನನಾದ ಈಶ್ವರನು ಜನರಿಗಿಂತಲೂ ಹೆಚ್ಚಾಗಿರುತ್ತಾನೆ. ಇಡಿಯ ಜಗತ್ತಿನಲ್ಲಿಯೇ ಅವನು ತುಂಬಿತುಳುಕುತ್ತಿದ್ದಾನೆ. ನಮ್ಮೆಲ್ಲರ ಹೃದಯದಲ್ಲಿಯೂ ನಮ್ಮ ಆತ್ಮನೇ ಆಗಿ ಇದ್ದುಕೊಂಡಿರುತ್ತಾನೆ, 'ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ' ಎಂದು ಆ ಭಗವಂತನು ನುಡಿಯುತ್ತಿದ್ದಾನೆ. ನಾವು ಅಜ್ಞಾನನಿದ್ರೆಯಿಂದ ಎಚ್ಚತ್ತು ನೋಡಿದಾಗ ಆತನು ಸಕಲ ಚರಾಚರಪ್ರಾಣಿಗಳಿಗೂ ಆತ್ಮನಾಗಿರುತ್ತಾನೆ ಎಂಬುದು ಸ್ಫುಟವಾಗುವದು.

ಆ ಪರಮಾತ್ಮನನ್ನು ಕಾಣುವದು-ಅವನ ಸ್ವರೂಪದಲ್ಲಿಯೇ ಅಂತಃಕರಣದಲ್ಲಿ ಸಾಕ್ಷಾತ್ಕರಿಸಿಕೊಳ್ಳುವದು-ಬಹುದೂರದ ಗುರಿಯು. ಗೀತೆಯಲ್ಲಿ ಅದಕ್ಕೆ ಈಗಲೆ ಮಾಡಬೇಕಾಗಿರುವ ಒಂದು ಸಾಧನವನ್ನು ಹೇಳಿದೆ. ಕರ್ಮಸಂಗವಾಗಲಿ ಫಲೇಚ್ಛೆಯಾಗಲಿ ಇಲ್ಲದೆ ತನ್ನತನ್ನ ಧರ್ಮವನ್ನು ಆತನ ಅರ್ಚನೆಯೆಂದು ಮಾಡಬೇಕು; ಈ ಅರ್ಚನೆಯಿಂದ ಆ ಸರ್ವಾತ್ಮಜ್ಞಾನಕ್ಕೆ ಬೇಕಾದ ಯೋಗ್ಯತೆ ಎಂಬ ಸಿದ್ಧಿಯು ದೊರಕುತ್ತದೆ.

ಈಗ್ಗೆ ನಾವು ದೊಡ್ಡದೊಡ್ಡ ಮಾತುಗಳನ್ನು ಆಡುತ್ತಿದ್ದೇವೆ; ಪ್ರಪಂಚಕ್ಕೆ ಸುಖಶಾಂತಿಗಳು ಹೇಗೆ ಉಂಟಾದಾವು?- ಎಂಬ ಯೋಚನೆಯ ಮಾತು ಎಲ್ಲರ ಬಾಯಿಯಲ್ಲೂ ಇರುತ್ತದೆ. ಆದರೆ 'ನನ್ನ ಉದ್ಧಾರವು ಹೇಗಾದೀತು, ನನಗೆ ಸುಖಶಾಂತಿಗಳು ಹೇಗೆ ಬಂದಾವು?'-ಎಂದು ಕೇಳಿಕೊಳ್ಳುವವರು ವಿರಳ. ಈಗ ನಾನು ಮಾಡುತ್ತಿರುವ ಕೆಲಸವು

ಬರಿಯ ಹೊಟ್ಟೆಯುಪಾಡಿನ ಸಲುವಾಗಿ ಮಾಡತಕ್ಕದ್ದಲ್ಲ; ಹೊಟ್ಟೆಯುಪಾಡು ಅನುಷಂಗಿಕವಾದದ್ದು. ಈ ಕರ್ತವ್ಯಕ್ಕೆ ಈಶ್ವರನ ಆರಾಧನೆಯೇ ಗುರಿ ಎಂಬ ಭಾವನೆಯು ಬಂದಾಗ ಕರ್ತವ್ಯವು ಪವಿತ್ರವಾಗುವದು; ಅದಕ್ಕೆ ಉತ್ಕೃಷ್ಟಫಲವು ದೊರಕುವದು. ತನ್ನ ಮತ್ತು ತನಗೆ ಸಂಬಂಧಿಸಿದವರ ಉದ್ಧಾರವು ಸ್ವಭಾವವಾಗಿ, ಅನಾಯಾಸವಾಗಿ ಆಗುವದು.

ಈ ಕರ್ಮಯೋಗವನ್ನು ಅನುಸರಿಸುವದರಲ್ಲಿ ಬೋಧಕವರ್ಗದವರು ಮೊದಲಿಗರಾಗಬೇಕು. ಅಧ್ಯಾತ್ಮತತ್ತ್ವಬೋಧಕರು, ಲೌಕಿಕವಿಷಯಗಳ ಬೋಧಕರು-ಎಂಬ ಕೃತಕ ವಿಭಾಗವು ಅಳಿಯುವಂತೆ ಕೆಲವರಾದರೂ ಉಚ್ಚಾದರ್ಶನವನ್ನು ತಮ್ಮ ಜೊತೆಯ ಬೋಧಕರಿಗೆ ತಮ್ಮ ನಡೆನುಡಿಗಳಿಂದ ತೋರಿಸಬೇಕು. ನಾವೆಲ್ಲರೂ ಅಧ್ಯಾತ್ಮ ವಿದ್ಯಾಲಯದ ವಿದ್ಯಾರ್ಥಿಗಳೇ, ಬೋಧಕರೆನ್ನುವವರು ಹಿರಿಯ ವಿದ್ಯಾರ್ಥಿಗಳು-ಎಂಬ ಭಾವನೆ ಮೂಡಬೇಕು. ಲೌಕಿಕವೆಲ್ಲವೂ ಅಧ್ಯಾತ್ಮವಿದ್ಯೆಯ ಸೋಪಾನಪಙ್ಕ್ತಿಯೇ ಎಂಬ ಹೆಗ್ಗುರಿಯನ್ನು ಶ್ರೀ॥ ಗಣಪತರಾವ್ ಮೊಖಾಶಿಯವರು ತಮ್ಮ ವಚನಗಳಲ್ಲಿ ತೋರಿಸಿರುತ್ತಾರೆ. ಅವರು ಇದ ರಲ್ಲಿ ತನ್ನಿಷ್ಠರಾಗುವಂತೆ ನಾರಾಯಣನು ಅನುಗ್ರಹಿಸಲಿ"

ಸಂ-24, 37

## ತತ್ತ್ವವಿಚಾರ

ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವದಕ್ಕೆ ಆತ್ಮಶೋಧನೆ, ಸರ್ವಾತ್ಮಭಾವನೆ-ಇವುಗಳಂತೆ ತತ್ತ್ವವಿಚಾರವೂ ಒಂದು ಒಳ್ಳೆಯ ಸಾಧನವಾಗಿರುತ್ತದೆ. ಆತ್ಮಶೋಧನೆಯು ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಮುಂದಕ್ಕೆ ಹೀಗಿರಬೇಕೆಂಬ ಕಾರ್ಯಕ್ರಮದ ಚಿತ್ರವನ್ನು ಮನಸ್ಸಿನಲ್ಲಿ ಸಿದ್ಧಪಡಿಸಿಟ್ಟುಕೊಳ್ಳುವದಕ್ಕೆ ನೆರವಾಗುತ್ತದೆ. ಆ ಭಾವನೆಯ ವಾಸನೆಯಿದ್ದರೆ ಮನಸ್ಸು ತಟ್ಟನೆ ತಪ್ಪುದಾರಿಯಲ್ಲಿ ಹರಿಯದಂತೆ ತಡೆಯಲೂಬಹುದು. ಸರ್ವಾತ್ಮಭಾವನೆಯು ಮನಸ್ಸಿಗೆ ಏರುಪೇರುಗಳಿಲ್ಲದಂತೆ ಮಾಡುವದಕ್ಕೆ ಸಹಾಯಕವಾಗುವದಲ್ಲದೆ ಆ ಮನಸ್ಸು ಹೆಚ್ಚಿನ ಭೂಮಿಕೆಯಲ್ಲಿ ನಿಲ್ಲುವಂತೆಯೂ ಮಾಡುತ್ತದೆ. ಆದರೆ ತತ್ತ್ವವಿಚಾರವು ಇವೆರಡಕ್ಕೂ ತಳಹದಿಯೆಂದು ಭಾವಿಸಬೇಕು. ಏಕೆಂದರೆ ವಿಚಾರದಿಂದ ಮನಸ್ಸನ್ನು ವ್ಯವಸ್ಥೆಗೆ ತಂದುಕೊಂಡವನು ಮಾತ್ರವೇ ಆತ್ಮಶೋಧನೆಯನ್ನು ಸರಿಯಾಗಿ ಮಾಡಲಾಪನು, ಅವನಿಗೇ ಸರ್ವಾತ್ಮಭಾವನೆಯೂ ಪೂರ್ಣವಾಗಿ ಅಳವಟ್ಟೀತು.

ತತ್ತ್ವವಿಚಾರವೆಂದರೇನು? ಶಾಸ್ತ್ರದ ಪರಿಭಾಷಾಶಬ್ದಗಳನ್ನು ಗಟ್ಟಿಮಾಡಿಕೊಂಡು ಅಥವಾ ಪುಸ್ತಕಗಳಲ್ಲಿರುವ ಕೆಲವು ಅಭಿಪ್ರಾಯಗಳನ್ನು ತಿಳಿದುಕೊಂಡು ಒಬ್ಬರೊಡನೊಬ್ಬರು ಹೋರಾಡುವದನ್ನೇ ವಿಚಾರವೆಂದು ಕೆಲವರು ಮೂಢರು ತಿಳಿದುಕೊಂಡಿರುತ್ತಾರೆ.

ನಿಜವಾಗಿ ನೋಡಿದರೆ ವಿಚಾರವೆಂಬುದು ತನ್ನತನ್ನ ಮನಸ್ಸಿನಲ್ಲಿಯೇ ನಡೆಯತಕ್ಕ ವ್ಯಾಪಾರವಾಗಿರುತ್ತದೆ. ನನ್ನ ಹೊರಗೆ ಕಾಣುತ್ತಿರುವ ಬಗೆಬಗೆಯ ದೃಶ್ಯಗಳ ಮತ್ತು ಘಟನೆಗಳ ಅರ್ಥವೇನು? ಇವುಗಳಿಗೂ ನನಗೂ ಏನು ಸಂಬಂಧ? ನಾವು ಯಾವ ಯಾವ ಸನ್ನಿವೇಶದಲ್ಲಿ ಹೇಗೆ ಏತಕ್ಕೆ ನಡೆದುಕೊಳ್ಳಬೇಕು? ನನ್ನ ಅಂತಃಕರಣದಲ್ಲಿ ಆಗಾಗ ಆಗುತ್ತಿರುವ ಉಬ್ಬರವಿಳಿತಗಳಿಗೆ ಕಾರಣವೇನು? ಅದರಲ್ಲಿ ಕೆಲವು ವೇಳೆ ಕೆಟ್ಟ ಆಲೋಚನೆಗಳೂ ಮತ್ತೆ ಕೆಲವು ವೇಳೆ ಒಳ್ಳೆಯ ಆಲೋಚನೆಗಳೂ ಏತಕ್ಕೆ ಹೊರಹೊಮ್ಮುತ್ತವೆ? ಈ ಮನಸ್ಸನ್ನು ಅಲೆಗಳಿಲ್ಲದ ಕಡಲಿನಂತೆ ಇಟ್ಟುಕೊಳ್ಳುವದು ಸಾಧ್ಯವೆ?–ಎಂದು ಅಳೆದೂ ಹುಯ್ದೂ ಮಾಡುವ ವ್ಯಾಪಾರವೇ ವಿಚಾರವು. ಆ ವಿಚಾರದಲ್ಲಿ ತೊಡಗಿದವನ ಮನಸ್ಸು ಆಗಲೇ ಅವನ ಹಿಡಿತಕ್ಕೆ ಸಿಕ್ಕಿಕೊಂಡಿತೆಂದು ತಿಳಿಯಬೇಕು.

ನಾವು ಈ ಪ್ರಪಂಚವೆಂಬ ನಾಟಕರಂಗಕ್ಕೆ ಏತಕ್ಕೆ ಇಳಿದಿದ್ದೇವೆ? ಇದರಲ್ಲಿ ನಮ್ಮ ಪಾತ್ರವು ಯಾವದು? ಅದಕ್ಕೆ ನಾವು ಯಾವ ಸಿದ್ಧತೆಯನ್ನು ಮಾಡಿಕೊಳ್ಳಬೇಕು? ಯಾವಾಗ ನಮ್ಮ ಅಭಿನಯದ ಕೊನೆಯಾಗುವದು? ಆಗ ನಾವು ಪರದೆಯ ಹಿಂದಕ್ಕೆ ಸರಿದುಕೊಂಡರೆ ಎಲ್ಲಿಗೆ ಹೋಗುವೆವು?–ಎಂದು ನಮ್ಮಲ್ಲಿಯೇ ನಾವು ಬಿಡದೆ ಆಲೋಚಿಸುತ್ತಿರಬೇಕು. ಇದೇ ವಿಚಾರವು. ಇದರಿಂದ ಮನಸ್ಸು ಹಿಡಿತಕ್ಕೆ ಸಿಕ್ಕುವದು.

ಲೌಕಿಕಶಾಸ್ತ್ರಗಳೂ ಕಲಾಕೌಶಲ್ಯಗಳೂ ಮನಸ್ಸಿನ ಸಾಧನೆಗೆ ವಿಷಯವನ್ನು ಒದಗಿಸುವದು ನಿಜ. ಆದರೆ ಆ ಶಾಸ್ತ್ರಗಳಲ್ಲಿಯೂ ಆ ಕಲೆಗಳಲ್ಲಿಯೂ ಇರುವ ಹಿರಿಮೆ ಏತರದು? ಅವುಗಳು ವಿವೇಕಿಗಳಾದವರನ್ನು ಏತಕ್ಕೆ ಸಂತೋಷಗೊಳಿಸುತ್ತವೆ? ಅವುಗಳ ಶುದ್ಧಾನಂದದಿಂದ ಜಾರಿ ಮನಸ್ಸು ಸೀಳುಹಾದಿಗೆ ಹೋಗದಂತಿರುವದಕ್ಕೇನು ಮಾಡಬೇಕು? ಇದನ್ನೂ ವಿಚಾರಮಾಡುತ್ತಿರಬೇಕು.

ಸಕಲಶಾಸ್ತ್ರಗಳಿಗೂ ಸಕಲಕಲೆಗಳಿಗೂ ಗುರಿಯಾದ ಪರಮಾರ್ಥವೊಂದುಂಟು. ಆಯಾ ಶಾಸ್ತ್ರಗಳು ತಮ್ಮ ತಮ್ಮ ವಿಷಯವನ್ನು ಅವಾಂತರತಾತ್ಪರ್ಯದಿಂದ ಹೇಳಿದರೂ ಮಹಾತಾತ್ಪರ್ಯದಿಂದ ಆ ಪರಮಾರ್ಥತತ್ತ್ವವಾದ ಪರಮೇಶ್ವರನನ್ನೇ ಗುರಿಯಿಟ್ಟು ಹೊರಟಿರುತ್ತವೆ. ಪರಂಪರೆಯಿಂದ ಪರಮಾರ್ಥವನ್ನು ಹೇಳುವ ಈ ಶಾಸ್ತ್ರಗಳಿಗಿಂತಲೂ ನೇರಾಗಿಯೇ ಪರಮಾರ್ಥವನ್ನು ತಿಳಿಸುವ ಅಧ್ಯಾತ್ಮಶಾಸ್ತ್ರವೊಂದುಂಟು. ಆ ಶಾಸ್ತ್ರವೇ ನಿಜವಾದ ಅರ್ಥದಲ್ಲಿ ಶಾಸ್ತ್ರವು. ಅದರ ಅರ್ಥವನ್ನು ತತ್ಪರನಾಗಿ ವಿಚಾರಮಾಡುತ್ತಿರಬೇಕು. ಅದರ ಅಭಿಪ್ರಾಯವನ್ನು ಮನಸ್ಸಿನಲ್ಲಿ ತತ್ಪರನಾಗಿ ವಿಚಾರಮಾಡುತ್ತಿರಬೇಕು. ಅದರ ಅಭಿಪ್ರಾಯವನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿರಬೇಕು. ಆ ವಿಚಾರದಿಂದ ಮನಸ್ಸಿಗೆ ಬಲ ಬರುತ್ತದೆ, ಪುಷ್ಟಿ ಬರುತ್ತದೆ, ಏಕಾಗ್ರತೆ ಬರುತ್ತದೆ; ಪರಮೇಶ್ವರನ

ಆನಂದವು ಅಂಥ ಮನಸ್ಸಿನಲ್ಲಿ ಹೊರಚಿಮ್ಮುತ್ತದೆ. ಮನಸ್ಸಂಯಮವು ಆಗ ಲೀಲಾಮಾತ್ರ ವಾಗುತ್ತದೆ. **ಸಂ-13, 196**

## ತತ್ತ್ವನಿರ್ಣಯಕ್ಕಾಗಿ ಚರ್ಚೆ

ಅಧ್ಯಾತ್ಮವಿಷಯಗಳಲ್ಲಿ ಚರ್ಚೆಮಾಡಲಿರುವ ಜಿಜ್ಞಾಸುಗಳು ಬಹಳ ಎಚ್ಚರಿಕೆಯಿಂದ ಇರಬೇಕು. ಏಕೆಂದರೆ ಎಲ್ಲಾ ಬಗೆಯ ಚರ್ಚೆಗಳೂ ಜಿಜ್ಞಾಸುಗಳಿಗೆ ಲಾಭದಾಯಕ ವಾಗಿರುವದಿಲ್ಲ.

ತತ್ತ್ವವನ್ನು ನಿರ್ಣಯಮಾಡಬೇಕೆಂದು ಮಾಡುವ ಚರ್ಚೆಗೆ ವಾದವೆಂದು ಹೆಸರು. 'ವಾದೇ ವಾದೇ ಜಾಯತೇ ತತ್ತ್ವಬೋಧಃ' ಪ್ರತಿಯೊಂದು ವಾದದಲ್ಲಿಯೂ ತತ್ತ್ವದ ಅರಿವು ಉಂಟಾಗುತ್ತಿರುತ್ತದೆ. ಆದರೆ ವಾದವೆಂದರೇನು? ವೀತರಾಗರಾದವರು ಮಾಡುವ ಚರ್ಚೆಗೆ ವಾದವೆಂದು ಹೆಸರು. 'ಈ ಚರ್ಚೆಯಿಂದ ನನಗೆ ಇಂಥಿಂಥ ಲಾಭವಾಗಬೇಕು, ಇದರಿಂದ ನನಗೆ ಕೀರ್ತಿಯು ಬರಬೇಕು, ಅಥವಾ ನನ್ನನ್ನು ಎಲ್ಲರೂ ಗೌರವಿಸಬೇಕು'- ಎಂಬ ಅಭಿಲಾಷೆಯಿಂದ ಮಾಡುವ ಚರ್ಚೆಯು ವಾದವಾಗಲಾರದು. ಮೊದಲ ನೆಯದಾಗಿ ಅದರಿಂದ ಮನಸ್ಸಿಗೆ ವಿಕ್ಷೇಪವಾಗುವದು, ಆದ್ದರಿಂದ ಸಾಧನವನ್ನು ಅನುಷ್ಠಾನಮಾಡುವದಕ್ಕೆ ಅಡ್ಡಿಯಾಗುವದು; ಎರಡನೆಯದಾಗಿ ರಾಗದ್ವೇಷಗಳು ಹೆಚ್ಚಾಗಿ ಬೆಳೆದುಕೊಳ್ಳುವವು. ಮೂರನೆಯದಾಗಿ ಚರ್ಚೆಯಲ್ಲಿ ತಮಗೆ ಸೋಲಾದರೆ ಮನಸ್ಸು ವಿಷಾದದಿಂದ ಕುಸಿಯುವದು, ಮತ್ತೊಬ್ಬರು ಸೋತರೆ ಅವರು ತನ್ನಮೇಲೆ ದ್ವೇಷವನ್ನೂ ಅಸೂಯೆಯನ್ನೂ ತೋರಿಸುವದರಿಂದ ಆಗಲೂ ಮನಸ್ಸಿಗೆ ಖೇದವೇ ಉಂಟಾಗುತ್ತದೆ.

ಈಗಿನ ಕಾಲದಲ್ಲಿ ವೃತ್ತಾಂತಪತ್ರಿಕೆಗಳಲ್ಲಿ ಅಧಿಕಾರಿಗಳ ಮೇಲೂ ಹೆಸರಾಂತ ವ್ಯಕ್ತಿಗಳ ಮೇಲೂ ತಪ್ಪನ್ನು ಹೊರಿಸಿ ದೂರುವ ಸುದ್ದಿಗಳು ಬಹಳವಾಗಿ ಪ್ರಕಟವಾಗುತ್ತಿರುತ್ತವೆ. ಹೀಗೆ ದೂರುವವರು ಒಬ್ಬರಮೇಲೊಬ್ಬರು ಆಪಾದನೆಯನ್ನು ಮಾಡುತ್ತಿರುವದು ಸಾಧಾರಣವೆಂದು ತಿಳಿದವರು ಆ ಪರನಿಂದೆಯ ಲೇಖನಗಳಿಂದೇನೂ ಮೋಸ ಹೋಗುವದಿಲ್ಲ; ಆಯಾ ಪಂಗಡದವರು ತಮ್ಮತಮ್ಮದೇ ಸರಿಯಾದ ವಾದವೆಂದು ಹೇಳಿಕೊಳ್ಳುತ್ತಾ ಮತ್ತೊಬ್ಬರನ್ನು ತೆಗಳಿ ಅಷ್ಟರಿಂದಲೇ ಒಂದುಬಗೆಯ ಮನಃಸಮಾಧಾನ ವನ್ನು ಪಡೆಯುತ್ತಾರೆ. ಅರಿಯದವರನ್ನು ತಮ್ಮ ನಿಂದಾವಾಕ್ಯಗಳಿಂದ ಮೋಸಮಾಡಿ ಯಾವದಾದರೊಂದು ಬಗೆಯ ಐಹಿಕಲಾಭವನ್ನು ಪಡೆದುಕೊಂಡರೂ ಪಡೆಯ ಬಹುದೇನೊ. ಆದರೆ ಅಧ್ಯಾತ್ಮಮಾರ್ಗದಲ್ಲಿದ್ದವರಂತೆ ನಟಿಸಿ ತತ್ತ್ವಪ್ರಚಾರವನ್ನು ಮಾಡುವವರಂತೆ ನಟಿಸುತ್ತಾ ಇರುವ ಲೇಖಕರಿಗೆ ಸಿಕ್ಕುವ ಐಹಿಕಲಾಭವೂ ಕಡಿಮೆ; ಅಧ್ಯಾತ್ಮಿಕ ದೃಷ್ಟಿಯಿಂದ ಆಗುವ ನಷ್ಟವು ಬಹಳವಾಗಿರುತ್ತದೆ.

ಸದ್ಯಸ್ಥಿತಿಯಲ್ಲಿ ಸರಕಾರದವರು ಸಮಾಜಸ್ಥಿತಿಯನ್ನು ಮೇಲುಮಟ್ಟಕ್ಕೆ ಏರಿಸಬೇಕೆಂಬುದರಲ್ಲಿಯೇ ಹೆಚ್ಚು ಮಗ್ನರಾಗಿರುತ್ತಾರೆ. ಧಾರ್ಮಿಕವಿಚಾರಗಳಲ್ಲಿ ಎಲ್ಲರಿಗೂ ಸ್ವಾತಂತ್ರ್ಯವುಂಟು ಎಂದಿಷ್ಟೇ ಹೇಳಿ ಆ ವಿಷಯಕ್ಕೆ ಉದಾಸೀನರಾಗಿರುತ್ತಾರೆ. ಈ ಸಂಧಿಯನ್ನು ದುರುಪಯೋಗಪಡಿಸಿಕೊಂಡು ಕೆಲವರು ಉಪನ್ಯಾಸಗಳಿಂದಲೂ ಲೇಖನಗಳಿಂದಲೂ ಸುಲಭವಾಗಿ ಕೀರ್ತಿಯನ್ನು ಗಳಿಸಬಹುದೆಂಬ ತಪ್ಪು ಭಾವನೆಯಿಂದ ತಮಗೆ ತಿಳಿದಿರುವ ವಿಷಯುಗಳನ್ನು ಮರೆಮಾಚಿ ಅಥವಾ ತಿಳಿಯದಿದ್ದರೂ ತಿಳಿದಿರುವದೆಂಬ ತಪ್ಪುಭಾವನೆಯಿಂದ ವೈದಿಕಧರ್ಮ, ಬೌದ್ಧಧರ್ಮ, ಬ್ರಾಹ್ಮಣ ಬ್ರಾಹ್ಮಣೇತರ ಮುಂತಾದ ಕ್ಷುದ್ರ ಭೇದಭಾವನೆಗಳನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡುತ್ತಾರೆ. ಬೌದ್ಧರಿಗೆ ವೈದಿಕಧರ್ಮದವರಿಂದ ಅನ್ಯಾಯವಾಗಿದೆ, ಅಥವಾ ಸನಾತನಧರ್ಮವು ಬೌದ್ಧರಿಂದ ಹಾಳಾಯಿತು; ಹಿಂದುಗಳು ಹರಿಜನರನ್ನು ತುಳಿದಿಟ್ಟಿದ್ದಾರೆ, ಹರಿಜನರು ಸವರ್ಣರಮೇಲೆ ಧಾಳಿನಡೆಯಿಸುತ್ತಿದ್ದಾರೆ; ಬ್ರಾಹ್ಮಣರು ಧರ್ಮತತ್ತ್ವವನ್ನು ಮುಚ್ಚಿಟ್ಟು ಇತರರಿಗೆ ಅವಕಾಶಗೊಡದೆ ಗೋಳುಗುಟ್ಟಿಸುತ್ತಿದ್ದಾರೆ, ಬ್ರಾಹ್ಮಣೇತರರು ಬ್ರಾಹ್ಮಣರ ಏಳಿಗೆಗೆ ಅಡ್ಡಿ ಬರುತ್ತಿದ್ದಾರೆ–ಎಂದು ಮುಂತಾಗಿ ಗಲಭೆಯೆಬ್ಬಿಸುವದೂ ಒಂದು ಬಗೆಯ ಆಧ್ಯಾತ್ಮತತ್ತ್ವಪ್ರಚಾರಣೆಯೇ ಎಂದು ಅವರು ಬಗೆದಿರುತ್ತಾರೆ !

ಯಾರು ರಾಗದ್ವೇಷಗಳನ್ನು ಹೆಚ್ಚಿಸುವ ಸುದ್ದಿಗಳಿಗೆ ಪ್ರಾಧಾನ್ಯವನ್ನು ಕೊಡುತ್ತಾರೋ, ಯಾರು ಹಿಂದಿನ ಋಷಿಗಳು, ಮತಾಚಾರ್ಯರು, ಸಾತ್ತ್ವಿಕ ಪುರುಷರು–ಎಂದು ಸುಪ್ರಸಿದ್ಧರಾದವರನ್ನು ನಿಂದಿಸುತ್ತಿರುತ್ತಾರೋ, ಯಾರಿಂದ ಶಾಂತಿಸುಖಗಳಿಗೆ ಅವಶ್ಯವಾದ ಯಾವ ಉಪದೇಶವೂ ಬರುತ್ತಿಲ್ಲವೋ ಅಂಥ ಪ್ರಚಾರಕರ ವಿಷಯಕ್ಕೆ ಜಿಜ್ಞಾಸುಗಳು ಲಕ್ಷ್ಯವಿಟ್ಟಿರಬೇಕು. ಅಂಥವರ ಸಂಗದಿಂದ ಸರ್ವಥಾ ದೂರವಾಗಿರಬೇಕು. ತಾವಂತೂ ಆ ಬಗೆಯ ಚರ್ಚೆಗಳಲ್ಲಿ ಎಂದಿಗೂ ಭಾಗವನ್ನು ವಹಿಸಬಾರದು. **ಸಂ–26, 109**

## ತತ್ತ್ವಪ್ರಚಾರಣೆಗೆ ಬೇಕಾದ ಸಮದೃಷ್ಟಿ

ಈಗಿನ ಕಾಲದಲ್ಲಿ ಅಧ್ಯಾತ್ಮಗ್ರಂಥಗಳನ್ನು ಓದುವವರ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತದೆ. ಅದರಲ್ಲಿಯೂ ಮೂಲಗ್ರಂಥ ಗಳನ್ನು ತಾವೇ ನೋಡಿ ಸರಿಯಾದ ಅರ್ಥವನ್ನು ಮಾಡಿಕೊಳ್ಳುವದಕ್ಕೆ ಪ್ರಯತ್ನಿಸುವವರು ಇನ್ನೂ ಕಡಿಮೆ. ಅಧ್ಯಾತ್ಮವಿದ್ಯೆಯು ಕುತೂಹಲಕ್ಕೆ ವೇದಾಂತವನ್ನು ಓದುವವರಿಗೆಂದು ಉಪದೇಶಿಸಿದ್ದಲ್ಲ; ಅದು ಸಂಸಾರದುಃಖದಿಂದ ಬಿಡುಗಡೆಯಾಗಬೇಕೆಂದು ಮನಃ ಪೂರ್ವಕವಾಗಿ ಹವಣಿಸುತ್ತಿರುವ ಮುಮುಕ್ಷುಗಳಿಗಾಗಿ ಹೇಳಿರುವದಾಗಿದೆ. ಆದ್ದರಿಂದ ಅಧ್ಯಾತ್ಮತತ್ತ್ವ ಗಳನ್ನು ಜನರಿಗೆ ಉಪದೇಶಿಸಿ ಹೇಳುವವರು ತಾವು **ಶ್ರೋತ್ರಿಯ** ರಾಗಿರಬೇಕು, ಎಂದರೆ ಶ್ರುತಿಗಳ ತಾತ್ಪರ್ಯವನ್ನು ನಿರ್ಣಯಿಸಿಕೊಂಡವರಾಗಿರಬೇಕು. ಅವರು

ಅವ್ರಜಿನರೂ ಅಕಾಮಹತರೂ ಆಗಿರಬೇಕು. ಅವ್ರಜಿನರೆಂದರೆ ಪಾಪದ ವಾಸನೆಯನ್ನು ಸಮೂಲವಾಗಿ ನಾಶಮಾಡಿಕೊಂಡವರು; ಅಕಾಮಹತರೆಂದರೆ 'ಆ ಫಲವು ಬೇಕು, ಈ ಫಲವು ಬೇಕು'-ಎಂಬ ಆಶೆಯ ಹೊಡೆತಕ್ಕೆ ಸಿಕ್ಕಿಕೊಳ್ಳದವರಾಗಿರ ಬೇಕು. ಇಷ್ಟೇ ಅಲ್ಲ, ಅವರು ಬ್ರಹ್ಮನಿಷ್ಠರಾಗಿರಬೇಕು. ಬ್ರಹ್ಮನಿಷ್ಠರು ಎಂದರೆ ಸಕಲಭೂತ ಗಳಿಗೂ ಆತ್ಮನಾಗಿರುವ ಪರಬ್ರಹ್ಮದಲ್ಲಿ ಅದೇ ನಾನು ಎಂಬ ಅಪರೋಕ್ಷಾನುಭವದಿಂದ ಅದರಲ್ಲಿಯೇ ತಾದಾತ್ಮ್ಯದಿಂದ ನೆಲೆನಿಂತವರು. ಇಂಥವರೇ ತತ್ತ್ವವನ್ನು ಹೇಳುವದಕ್ಕೆ ಮುಖ್ಯಾಧಿಕಾರವನ್ನು ಪಡೆದಿರುವ ಸದ್ಗುರುಗಳು ಎನಿಸುತ್ತಾರೆ. ಅವರ ಬೋಧೆಯನ್ನು ಕೇಳಿದ ಮುಮುಕ್ಷುಗಳಿಗೆ ತತ್ತ್ವದ ವಿಷಯದಲ್ಲಿ ಯಾವ ಮೋಹವೂ ಉಳಿಯುವದಿಲ್ಲ; ಸರ್ವರಿಗೂ ಆತ್ಮನಾದ ಪರಮಾತ್ಮನ ದರ್ಶನವೂ ಆಗಿಬಿಡುತ್ತದೆ. ಹೀಗೆಂದು ಭಗವಂತನು 'ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಣ್ಡವ । ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥' (ಗೀ. 4-35) ಎಂಬ ಶ್ಲೋಕದಿಂದ ತಿಳಿಸಿಕೊಟ್ಟಿರುತ್ತಾನೆ.

ಆದರೆ ಹೀಗೆ ತತ್ತ್ವದರ್ಶಿಗಳಾಗಿರುವ ಸ್ಥಾನವು ಎಲ್ಲರಿಗೂ ಸುಲಭವಾಗಿ ಸಿಕ್ಕು ವದಿಲ್ಲ. ಅಂಥ ಮಹಾತ್ಮರಾದ ಬ್ರಹ್ಮನಿಷ್ಠರು ತತ್ತ್ವಪ್ರಚಾರವನ್ನು ಮಾಡುವ ಮಿಷನರಿ (ಪಾದ್ರಿ)ಗಳಾಗಿ ಎಲ್ಲೆಲ್ಲಿಯೂ ಸಂಚರಿಸುವ ಸಂಭವವಾಗಲಿ, ವೃತ್ತಾಂತಪತ್ರಿಕೆಗಳ ಮೂಲಕ ಆತ್ಮವಿದ್ಯೆಯನ್ನು ಪ್ರಚಾರಗೊಳಿಸುವ ಗೋಜಿಗೆ ಹೋಗುವ ಸಂಭವವಾಗಲಿ, ಬಹಳ ಕಡಿಮೆ. ಬ್ರಹ್ಮನಿಷ್ಠರು ಜನರಿಗೆ ತತ್ತ್ವವನ್ನು ಬೋಧೆಮಾಡುವದಿಲ್ಲವೆಂದೇನೂ ನನ್ನ ಅಭಿಪ್ರಾಯವಲ್ಲ; ಏಕೆಂದರೆ ಅವರ ನಡೆನುಡಿಗಳೆಲ್ಲ ತತ್ತ್ವಬೋಧೆಯೇ ಆಗಿರುತ್ತದೆ. ಆದರೆ ದೇವರ್ಷಿಗಳಾದ ನಾರದರಂತೆ ಬ್ರಹ್ಮನಿಷ್ಠರೆಲ್ಲರೂ ತತ್ತ್ವಪ್ರಚಾರವನ್ನು ಮಾಡುತ್ತಲೇ ಲೋಕಸಂಚಾರಿಗಳಾಗಿರುವರೆಂಬ ನಿಯಮವೇನೂ ಇರುವದಿಲ್ಲ. ಪರಮೇಶ್ವರನು ಯಾವ ಬ್ರಹ್ಮಜ್ಞಾನಿಗಳನ್ನು ಆ ಕೆಲಸಕ್ಕಾಗಿ ನಿಯೋಗಿಸುವನೋ ಅವರು ಅವಶ್ಯವಾಗಿ ತತ್ತ್ವಪ್ರಚಾರವನ್ನು ಮಾಡಬಹುದಾಗಿದೆ. ಮಿಕ್ಕವರು ಬ್ರಹ್ಮಾನುಸಂಧಾನದಲ್ಲಿಯೇ ಕಾಲವನ್ನು ಕಳೆಯುತ್ತಿದ್ದರೂ ಅವರ ದರ್ಶನಸ್ಪರ್ಶನಸಂಭಾಷಣಾದಿಗಳಿಂದಲೇ ಮುಮುಕ್ಷುಗಳು ಸ್ಫೂರ್ತಿಯನ್ನು ಪಡೆದು ಕೃತಕೃತ್ಯರಾಗುತ್ತಿರುವರು. ಅವರ ಬ್ರಹ್ಮ ಚಿಂತನದ ಮಹಿಮೆಯು ಕೂಡ ದೂರದಿಂದಲೇ ಹೂವಿನ ಪರಿಮಳವು ಜನರ ಮೂಗಿಗೆ ತಾಕುವಂತೆ, ಹಲವು ಮುಮುಕ್ಷುಗಳ ಚಿತ್ತದಮೇಲೆ ಪರಿಣಾಮವನ್ನು ಮಾಡುತ್ತಿರುವದು.

ಸಾಧಕರಾದ ಮುಮುಕ್ಷುಗಳುಕೂಡ ತಮ್ಮ ಜ್ಞಾನದ ಅಭಿವೃದ್ಧಿಗಾಗಿ ಪರಮೇಶ್ವರನ ಸೇವೆಯೆಂಬ ಬುದ್ಧಿಯಿಂದ ತತ್ತ್ವಪ್ರಚಾರದಲ್ಲಿ ನಿರತರಾಗಿರಬಹುದಾಗಿದೆ. 'ಮಚ್ಚಿತ್ತಾಃ ಮದ್ಗತಪ್ರಾಣಾ ಬೋಧಯನ್ತಃ ಪರಸ್ಪರಮ್ । ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ ॥' (ಗೀ. 10-9) ಎಂದಿರುವಂತೆ ಭಗವಂತನ ಚಿಂತೆಯನ್ನು ಮಾಡುತ್ತ

ಆತನ ತತ್ತ್ವವನ್ನು ಆತ್ಮವಿಚಾರದಲ್ಲಿ ಅಣ್ಣತಮ್ಮಂದಿರಾಗಿರುವ ಜಿಜ್ಞಾಸುಗಳೂ ಒಬ್ಬರಿಗೊಬ್ಬರು ತಿಳಿಸಿಕೊಟ್ಟು ವಿಚಾರ ವಿನಿಮಯವನ್ನು ಮಾಡಬಹುದಾಗಿದೆ. ಶ್ರವಣ ಮನನಗಳೆಂಬ ಸಾಧನಗಳಲ್ಲಿ ಇವೂ ಅಡಕವಾಗಿರಬಹುದಾಗಿದೆ.

ತತ್ತ್ವವನ್ನು ಪ್ರಚಾರಮಾಡಬೇಕೆಂಬ ದೃಷ್ಟಿಯುಳ್ಳ ಜಿಜ್ಞಾಸುಗಳು ಯಾವ ಭಾವದಿದ ಪ್ರೇರಿತರಾಗಿರಬೇಕು? ಅಂಥವರು ತತ್ತ್ವಾನುಭವಿಗಳಾದವರು ಯಾವ ಲಕ್ಷಣ ವುಳ್ಳವರೆಂದು ಶಾಸ್ತ್ರದಲ್ಲಿ ಹೇಳಿದೆಯೋ ಆ ಗುರಿಯನ್ನು ತಮ್ಮ ಮುಂದೆ ಇಟ್ಟು ಕೊಂಡಿರಬೇಕು. ಮೊಟ್ಟಮೊದಲನೆಯದಾಗಿ ಅವರು ಅವೃಜಿನರಾಗಿರಬೇಕು. ಬ್ರಹ್ಮಜ್ಞಾನಿ ಗಳಿಗೆ ಪಾಪ ಪುಣ್ಯಗಳೆರಡೂ ವೃಜಿನವೇ ಆಗಿರುತ್ತವೆ; ಆದ್ದರಿಂದ ಅವರು ಅವುಗಳೆರಡನ್ನೂ ಬ್ರಹ್ಮದೃಷ್ಟಿಯಿಂದ ಕಂಡುಕೊಂಡು ಬ್ರಹ್ಮನಿಷ್ಠರಾಗಿದ್ದುಕೊಂಡು ಬಿಟ್ಟಿರುತ್ತಾರೆ. ಆದರೆ ಜಿಜ್ಞಾಸುಗಳಾದವರು ಪುಣ್ಯಕರ್ಮಗಳನ್ನು ಸಂಗಫಲಾಶೆಗಳಿಂದ ರಹಿತರಾಗಿ ಪರಮೇಶ್ವರನ ಆರಾಧನೆಯೆಂದು ಮಾಡುತ್ತಿರಬೇಕು. ಪಾಪಕ್ಕೆ ಎಂದಿಗೂ ಮನಸೋಲಬಾರದು. ಪಾಪಕ್ಕೆ ಎಂದಿಗೂ ಮನಸೋಲಬಾರದು. ರಾಗದ್ವೇಷ ಮೋಹಗಳೇ ಸಂಸಾರದಲ್ಲಿ ಮನುಷ್ಯನನ್ನು ಕೆಡಹುವದಕ್ಕೆ ಮೂಲಕಾರಣಗಳಾಗಿರುತ್ತವೆ. ಅವುಗಳು ಹೆಚ್ಚಿದಂತೆಲ್ಲ ಆಸುರಸಂಪತ್ತು ಬೆಳೆಯುವದು; ಮಾಡಬಾರದ ಕೆಲಸಗಳನ್ನು ಮಾಡಿಸುವದು; ಅನಿಷ್ಟವಾದ ಯೋನಿಗಳಲ್ಲಿ ಹುಟ್ಟುವಂತೆ ಮಾಡುವದು. ಆದ್ದರಿಂದ ಜಿಜ್ಞಾಸುಗಳಿಗೆ ಇದೇ ವೃಜಿನವು; ಅವರು ವೃಜಿನವನ್ನು ಸರ್ವಪ್ರಕಾರದಿಂದಲೂ ತ್ಯಜಿಸುತ್ತಾ ಭಗವದಾರಾಧನೆಯ ರೂಪವಾದ ಪುಣ್ಯ ಕರ್ಮವನ್ನು ಮಾಡುತ್ತಿರಬೇಕು.

ಇನ್ನು ಬ್ರಹ್ಮಜ್ಞಾನಿಗಳಾದವರ ಶ್ರೋತ್ರಿಯತ್ವವನ್ನು ಸಂಪಾದಿಸುವದಕ್ಕೂ ಇಂಥ ಜಿಜ್ಞಾಸುಗಳು ಪ್ರಯತ್ನಿಸುತ್ತಿರಬೇಕು. ಇದು ಎರಡನೆಯ ಸಾಧನವು. ಶ್ರುತಿಯ ಅರ್ಥವನ್ನು ತಿಳಿಯುವದಕ್ಕೆಂದೇ ವೇದವೇದಾಂಗಗಳನ್ನು ಪಠಿಸಿ ಶಾಸ್ತ್ರಚಿಂತನೆಗೆಂದೇ ತಮ್ಮ ಶರೀರವನ್ನು ಮುಡುಪುಮಾಡಿಟ್ಟುಕೊಂಡಿದ್ದ ಮಹನೀಯರನ್ನು 'ಬ್ರಾಹ್ಮಣರು' ಎಂದು ಹಿಂದಿನ ಕಾಲದಲ್ಲಿ ಕರೆಯುತ್ತಿದ್ದರು. ತತ್ತ್ವಪ್ರಚಾರವನ್ನು ಮಾಡುವ ಜಿಜ್ಞಾಸುಗಳಲ್ಲಿ ತತ್ತ್ವವನ್ನು ನಿರ್ಧಾರಣೆಮಾಡುವದಕ್ಕಾಗಿ ಶಾಸ್ತ್ರವನ್ನು ಅಭ್ಯಾಸಮಾಡಿ ಅದರ ಅರ್ಥವನ್ನು ಗೊತ್ತುಪಡಿಸುವ ತವಕವು ಹೆಚ್ಚಿನ ಪ್ರಮಾಣದಲ್ಲಿರಬೇಕು. ಯಾರಿಗೆ ಈ ಸಂಸಾರದಲ್ಲಿ ಸಿಕ್ಕುವ ಕ್ಷಣಿಕಸುಖದ ಹಂಬಲು ಇರುವದಿಲ್ಲವೋ ಅವರು ನಿತ್ಯಸುಖವು ದೊರಕುವ ಪರಿಯನ್ನು ತಿಳಿದುಕೊಳ್ಳುವದಕ್ಕೆಂದು ಶಾಸ್ತ್ರದ ಮತ್ತು ಸದ್ಗುರುಗಳ ಸೇವೆಯನ್ನು ಮಾಡುವರು; ತತ್ತ್ವವಿಚಾರವನ್ನು ಏಕಾಗ್ರಚಿತ್ತದಿಂದ ಮಾಡುವರು; ತಮ್ಮಂತೆಯೇ ತತ್ತ್ವಪಕ್ಷಪಾತಿ ಗಳಾದವರೊಡನೆ ತತ್ತ್ವನಿರ್ಣಯಕ್ಕಾಗಿ ವಾದವನ್ನು ಮಾಡುವರು. ಇದು ಅವರ ಕಲ್ಯಾಣಕ್ಕೂ ಕಾರಣವಾಗುತ್ತದೆ; ಮತ್ತೊಬ್ಬರ ಕಲ್ಯಾಣಕ್ಕೂ ಕಾರಣವಾಗುತ್ತದೆ.

ಮೂರನೆಯದಾಗಿ ತತ್ತ್ವಪ್ರಚಾರಕರಾದ ಜಿಜ್ಞಾಸುಗಳ ಚಿತ್ತದಲ್ಲಿ ಬ್ರಹ್ಮನಿಷ್ಠರ ಆದರ್ಶವು ನೆಲೆನಿಂತಿರಬೇಕು. ಕಾಮಕ್ರೋಧಬಲದರ್ಪ-ಮುಂತಾದ ಆಸುರೀ ಸಂಪತ್ತಿನ ದೋಷಗಳನ್ನು ಸಂಪೂರ್ಣವಾಗಿ ತ್ಯಜಿಸಿ ಏಕಾಂತವಾಸವನ್ನು ಮಾಡುತ್ತಾ ಧ್ಯಾನಯೋಗವನ್ನು ಅಭ್ಯಾಸಮಾಡುವದಕ್ಕೆ ಅನುಕೂಲವಾಗಿರುವ ಶಮೆ, ದಮೆ, ತಿತಿಕ್ಷೆ, ಉಪರತಿ, ಶ್ರದ್ಧೆ-ಮುಂತಾದ ನಿವೃತ್ತಿಧರ್ಮವನ್ನು ಅವರು ಎಡೆಬಿಡದೆ ಸೇವಿಸುತ್ತಿರಬೇಕು. ತಮ್ಮಂತೆಯೇ ನಿವೃತ್ತಿಧರ್ಮಪರರಾದವರಿಗೆ ತಮ್ಮ ಅನುಭವವನ್ನು ತಿಳಿಯಿಸುತ್ತಲೂ ಅವರಿಂದ ತಿಳಿದುಕೊಳ್ಳಬಹುದಾದ ಸಾಧನಮರ್ಮಗಳನ್ನು ತಿಳಿದುಕೊಳ್ಳುತ್ತಲೂ ಇರಬೇಕು. ಈ ಬಗೆಯ ವಿಚಾರವಿನಿಯವೂ ಒಂದು ಬಗೆಯ ತತ್ತ್ವಪ್ರಚಾರವೇ ಆಗುತ್ತದೆ.

ಈ ಎಲ್ಲಾ ಬಗೆಯ ತತ್ತ್ವಪ್ರಚಾರದಲ್ಲಿಯೂ 'ಸಮದೃಷ್ಟಿ'ಯು ಅತ್ಯಂತವಾಗಿ ಅವಶ್ಯವಾಗಿರುತ್ತದೆ. ಮುಮುಕ್ಷುಗಳಿಗೆ ಮನಸ್ಸು ತತ್ತ್ವದಲ್ಲಿ ನೆಟ್ಟಿರಬೇಕು. ತತ್ತ್ವವೇ ಅವರಿಗೆ ಎಲ್ಲೆಲ್ಲಿಯೂ ಕಾಣುತ್ತಿರಬೇಕು. ತತ್ತ್ವವೆಂದರೂ ಪರಮಾರ್ಥವೆಂದರೂ ಪರಮಾತ್ಮನೆಂದರೂ ಒಂದೇ. ಪರಮಾತ್ಮನು ಸಮಸ್ತಭೂತಗಳಲ್ಲಿಯೂ ಒಂದೇ ರೂಪದಿಂದ ಎಲ್ಲರಿಗೂ ಆತ್ಮನಾಗಿರುತ್ತಾನೆ; ಆದ್ದರಿಂದ ಅವನಿಗೆ 'ಸಮ'ನೆಂದೇ ಹೆಸರು ಬಂದಿರುತ್ತದೆ. ಯಾವ ಜಿಜ್ಞಾಸುಗಳು ಈ ಸಮತೆಯನ್ನು ತಂದುಕೊಂಡು ಕೃತಾರ್ಥರಾಗಬೇಕೆಂದು ಬಯಸುವರೋ ಅವರು ಮನೋವಾಕ್ಕಾಯಗಳಲ್ಲಿ ಸಮತೆಯನ್ನು ಅಳವಡಿಸಿಕೊಳ್ಳಬೇಕೆಂಬುದು ನ್ಯಾಯಬದ್ಧವಾಗಿರುತ್ತದೆ. ಯಾವ ಕಾರಣದಿಂದಲೂ ಜಿಜ್ಞಾಸುಗಳಾದವರು ಕಾಮಕ್ರೋಧಲೋಭಗಳೆಂಬ ನರಕದ್ವಾರಗಳಾದ ಆತ್ಮನಾಶಕಧರ್ಮಗಳನ್ನು ತಮ್ಮ ಹತ್ತಿರಕ್ಕೆ ಬರಗೊಡಬಾರದು. ತಮ್ಮ ಮನಸ್ಸಿನ ಸಮತೆಯನ್ನು ನಾಶಪಡಿಸುವ ಯಾವ ದೋಷಕ್ಕೂ ಅವಕಾಶವನ್ನು ಕೊಡಬಾರದು. ಅಂಥ ಜಿಜ್ಞಾಸುಗಳು ನಿಜವಾದ ತತ್ತ್ವಾನ್ವೇಷಕರೂ ತತ್ತ್ವಪ್ರಚಾರಕರೂ ಆಗಿರುತ್ತಾರೆ. **ಸಂ-26, 56**

## ಪರಮಾರ್ಥಾನ್ವೇಷಣೆಯ ಪ್ರಕಾರಗಳು

ಪ್ರಪಂಚದಲ್ಲಿ ಪರಮಾರ್ಥತತ್ತ್ವವೊಂದಿದೆ ಎಂಬುದು ಮಾನವನಿಗೆ ಹೇಗೋ ಮನವರಿಕೆಯಾಗಿಬಿಟ್ಟಿರುತ್ತದೆ. ಹಲವು ಕೊಟ್ಟಡಿಗಳಿರುವ ಒಂದು ಭವನದಲ್ಲಿ ಯಾವದೋ ಒಂದು ಕೊಟ್ಟಡಿಯಲ್ಲಿ ಅನರ್ಘಪದಾರ್ಥವಿದೆ ಎಂದು ತಿಳಿದಿರುವವರು ಅಲ್ಲಿಇಲ್ಲಿ ತಡಕಾಡುವಂತೆ ಮಾನವರೆಲ್ಲ-ಕಾಡುಜನಗಳಿಂದ ಮೊದಲಾಗಿ ಋಷಿಗಳವರೆಗೂ-ಪರಮಾರ್ಥವನ್ನು ಅರಸುತ್ತಿರುತ್ತಾರೆ. ಈ ಅನ್ವೇಷಣೆಯ ಪ್ರಕಾರಗಳು ಬಗೆಬಗೆಯವಾಗಿರುತ್ತವೆ.

ಗ್ರಂಥಪ್ರಾಮಾಣ್ಯವನ್ನಿಟ್ಟುಕೊಂಡು ತತ್ತ್ವವನ್ನು ಹುಡುಕುವದು ಇಂಥ ಪ್ರಕಾರಗಳಲ್ಲಿ ಒಂದು. ಬೈಬಲ್, ಕುರಾನ್, ಅವೆಸ್ಟ್, ಬುದ್ಧಾಗಮಗಳು, ಗ್ರಂಥಸಾಹೇಬ್- ಮುಂತಾದ

ಧಾರ್ಮಿಕಗ್ರಂಥಗಳನ್ನು ಪ್ರಮಾಣವಾಗಿಟ್ಟುಕೊಂಡವರು ತಮ್ಮತಮ್ಮ ಗ್ರಂಥವನ್ನು ಪ್ರಮಾಣವೆಂದು ನಂಬಿ, ಆ ಗ್ರಂಥದ ಉಪದೇಶಕ್ಕೆ ವಿರುದ್ಧವಾಗಿ ಯಾರು ಹೇಳಿದರೂ ಯಾವ ಗ್ರಂಥದಲ್ಲಿದ್ದರೂ ಅದನ್ನು ಒಪ್ಪದೆ ಇರುತ್ತಾರೆ. ಗ್ರಂಥಗಳ ಗಂಟುವ್ಯಾಜ್ಯಗಳು ಆಗಾಗ್ಗೆ ತಲೆಹಾಕುತ್ತಲೇ ಇರುತ್ತವೆ. ಒಂದೊಂದು ಗ್ರಂಥವನ್ನು ಪ್ರಮಾಣವಾಗಿ ನಂಬಿರುವವರಿಗೇನೋ ಆಯಾ ಗ್ರಂಥದಿಂದ ಆರಿಸಿದ ಪ್ರಮಾಣವಾಕ್ಯವನ್ನು ಒಪ್ಪಿಸಿದರೆ ಸಾಕಾಗುತ್ತದೆ; ಆದರೆ ಎರಡುಮೂರು ಧರ್ಮಗ್ರಂಥಗಳು ಒಂದಕ್ಕೊಂದು ವಿರುದ್ಧವಾಗಿ ಬೋಧಿಸುವದಾದರೆ ಯಾವದನ್ನು ಏಕೆ ಪ್ರಮಾಣವೆಂದು ಹಿಡಿಯಬೇಕು?–ಎಂಬ ಪ್ರಶ್ನೆ ಎದ್ದುಕೊಳ್ಳುತ್ತದೆ.

**ಈಶ್ವರಾಸ್ತಿತ್ವವಾದಿಗಳೂ** ಹೀಗೆಯೇ ಒಬ್ಬರೊಡನೊಬ್ಬರು ಜಗಳವಾಡುವದಕ್ಕೆ ಅವಕಾಶವಿರುತ್ತದೆ. ಈಶ್ವರನು ಸಾಕಾರನೆಂದು ಕೆಲವರು, ನಿರಾಕಾರನೆಂದು ಕೆಲವರು, ಸಗುಣನೆಂದು ಕೆಲವರು, ನಿರ್ಗುಣನೆಂದು ಕೆಲವರು, ಜೀವನಿಗಿಂತ ಭಿನ್ನನೆಂದು ಕೆಲವರು, ಜೀವರೆಲ್ಲರ ಆತ್ಮನೇ ಎಂದು ಕೆಲವರು. ಈ ಅಭಿಪ್ರಾಯಗಳಲ್ಲಿ ಯಾರದ್ದು ಏಕೆ ಸರಿ?–ಎಂಬುದನ್ನು ನಿಶ್ಚಯಿಸುವದು ಕಷ್ಟ. ಈಶ್ವರನ ವಿಷಯಕ್ಕೆ ತಮ್ಮತಮ್ಮ ಗ್ರಂಥವನ್ನಾಗಲಿ, ಆ ಗ್ರಂಥವನ್ನೂ ಅದರ ವ್ಯಾಖ್ಯಾನೋಪವ್ಯಾಖ್ಯಾನಗಳನ್ನು ಚಿಂತನೆ ಮಾಡಿರುವ ಆಪ್ತರನ್ನಾಗಲಿ ಪ್ರಮಾಣವೆಂದು ಹಿಡಿಯುವದು ಆಯಾ ಮತದವರಿಗೆ ಸರಿಹೋಗುತ್ತದೆ; ಆದರೆ ಬೇರೊಂದು ಮತದವರು ಆ ಪ್ರಮಾಣವನ್ನು ನಂಬಲೇ ಬೇಕೆಂದು ನಿರ್ಬಂಧಿಸುವದಕ್ಕೆ ಬರುವದಿಲ್ಲ.

**ಕರ್ಮಗಳ ಆಚರಣೆ, ತಪಸ್ಸು**–ಇವುಗಳನ್ನು ನಂಬಿ ತತ್ತ್ವನಿರ್ಧಾರಣೆಗೆ ಪ್ರಯತ್ನ ಮಾಡುವವರೂ ಇರುತ್ತಾರೆ. ಆದರೆ ಅಲ್ಲಿಯೂ ಮತಭೇದವಿರುತ್ತದೆ. ಹಿಂದು, ಮುಸಲ್ಮಾನ್, ಬೌದ್ಧ, ಕ್ರಿಸ್ತಿಯನ್, ಪಾರ್ಸಿ, ಸಿಕ್–ಮುಂತಾದವರು ಅವರವರ ಗ್ರಂಥಗಳ ಮತ್ತು ಉಪದೇಶಕರ ಆಧಾರದಿಂದ ಅನುಸರಿಸುತ್ತಿರುವ ಆಚಾರಗಳು ಭಿನ್ನಭಿನ್ನಪ್ರಕಾರ ವಾಗಿರುತ್ತವೆ. ಯಾರ ಆಚಾರವನ್ನು ಯಾರ ತಪಸ್ಸಿನ ಕ್ರಮವನ್ನು ಎಲ್ಲರೂ ಏಕೆ ಅನುಸರಿಸಬೇಕು?–ಎಂಬ ಪ್ರಶ್ನೆಗೆ ಸರ್ವಮಾನ್ಯವಾದ ಉತ್ತರವು ದೊರೆಯುವದು ಕಷ್ಟ

**ತರ್ಕಸಿದ್ಧ**ವಾದದ್ದನ್ನು ಎಲ್ಲರೂ ಒಪ್ಪಬೇಕಾದ್ದರಿಂದ ತರ್ಕವೇ ಎಲ್ಲರಿಗೂ ಸಮಾ ಧಾನವನ್ನು ಕೊಡುತ್ತದೆ ಎಂದು ತಟ್ಟನೆ ತೋರಬಹುದು. ದೃಷ್ಟ (ಕಂಡದ್ದರ ಬಲ)ದಿಂದ ಅದೃಷ್ಟವಾದದ್ದನ್ನು ನಿರ್ಣಯಿಸಬಹುದು ಎಂಬುದು ಸ್ವಲ್ಪಮಟ್ಟಿಗೆ ನಿಜವೇ. ತರ್ಕವನ್ನು ಹೇಗೆ ಮಾಡಬೇಕು?–ಎಂಬ ವಿಷಯಕ್ಕೆ ನಮ್ಮಲ್ಲಿ ನ್ಯಾಯಶಾಸ್ತ್ರವೆಂಬ ಒಂದು ಶಾಸ್ತ್ರವೇ ಹೊರಟಿರುತ್ತದೆ. ಆದರೆ ತರ್ಕದಲ್ಲಿ (ಮಾಡುವ ಚರ್ಚೆ), ಜಲ್ಪ (ಮತ್ತೊಬ್ಬರನ್ನು ಜಯಿಸುವದಕ್ಕೆ ಮಾಡುವ ಚರ್ಚೆ), ವಿತಂಡ (ಮತ್ತೊಬ್ಬರ ಮತವನ್ನು ಖಂಡಿಸುವದಕ್ಕೆ

ಮಾತ್ರವೇ ಉಪಯೋಗಿಸುವ ಚರ್ಚೆ)-ಮುಂತಾದ ತರ್ಕಪ್ರಭೇದಗಳು ಇವೆ. ಬೇರೆ ಬೇರೆಯ ಮತದವರು ತರ್ಕದ ಕ್ರಮಗಳನ್ನು ಬೇರೆಬೇರೆ ರೀತಿಯಿಂದ ಮಾಡಿಕೊಂಡಿರುತ್ತಾರೆ. ಆ ವಿಷಯಕ್ಕೆ ಕೂಡ ಎಲ್ಲಾ ದರ್ಶನಕಾರರುಗಳಿಗೂ ಒಮ್ಮತವಿರುವದಿಲ್ಲ.

**ಯೋಗ**ವೆಂಬುದು ತತ್ತ್ವನಿರ್ಧಾರಣೆಗೆ ಮಾನವನು ಉಪಯೋಗಿಸಿರುವ ಮತ್ತೊಂದು ಸಾಧನ. ತರ್ಕವೆಂಬುದು ಬರಿಯ ಊಹೆಯಾಯಿತು; ಆದರೆ ಸಮಾಧಿಯಲ್ಲಿ ತತ್ತ್ವವು ಇದ್ದಂತೆ ಗೋಚರವಾಗಿಬಿಡುತ್ತದೆ ಎಂದು ಯೋಗಿಗಳು ಹೇಳುತ್ತಾರೆ. ಬರಿಯ ಚೆಕ್ಕನ್ನು ಉಪಯೋಗಿಸುವದಕ್ಕಿಂತ ನಗದಿಹಣವನ್ನುಪಯೋಗಿಸುವ ಕ್ರಮವದು ಎಂದು ಅವರ ಹೇಳಿಕೆ. ಆದರೆ ಯೋಗಪ್ರಕಾರಗಳೂ ಅವುಗಳಿಂದ ಕಂಡುಹಿಡಿದ ತತ್ತ್ವಗಳ ನಿರೂಪಣಗಳೂ ಏಕಮುಖವಾಗಿ ಇರುವದಿಲ್ಲ.

ಇನ್ನು ಕೆಲವರು ಭಕ್ತಿಮಾರ್ಗದಿಂದಲೇ ಪರಮಾತ್ಮನನ್ನು ಕಾಣಬೇಕು ಎನ್ನುತ್ತಾರೆ. ಅವರು ಭಜನೆ, ಕೀರ್ತನೆ-ಮುಂತಾದ ಮಾರ್ಗಗಳಿಂದ ಜೀವನಕ್ಕೆ ಆನಂದವನ್ನು ಸಂಪಾದಿಸುವದಕ್ಕೆ ಹವಣಿಸುತ್ತಾರೆ.

ಹೀಗೆ ತತ್ತ್ವವನ್ನು ಹುಡುಕಿ ಕಂಡುಕೊಳ್ಳುವದಕ್ಕೆ ಬೇರೆಬೇರೆಯ ಪಂಗಡದವರು ಬೇರೆಬೇರೆಯ ಮಾರ್ಗಗಳನ್ನು ಉಪಯೋಗಿಸಿರುತ್ತಾರೆ. ಶರೀರ, ಪ್ರಾಣ, ಮನಸ್ಸು, ಬುದ್ಧಿ, ವೇದನೆ-ಇವುಗಳನ್ನು ಉಪಯೋಗಿಸುವ ಈ ಮಾರ್ಗಗಳಲ್ಲಿ ಮಿಕ್ಕ ಯಾವ ಮಾರ್ಗಗಳನ್ನಾದರೂ ಅಡಕಮಾಡಿಬಿಡಬಹುದಾಗಿದೆ. ವೇದಾಂತದಲ್ಲಿ ಇವು ಎಲ್ಲವೂ ಇವೆ; ಆದರೆ ಇವುಗಳ ಮಿಶ್ರಣದಿಂದಾದ ಮಾರ್ಗವನ್ನು ಅಲ್ಲಿ ಬೋಧಿಸಿದೆ ಎಂದು ತಿಳಿಯಬಾರದು. ಇವೆಲ್ಲದರ ಸಾಮರಸ್ಯದಿಂದ ತತ್ತ್ವ ನಿರ್ಧಾರಣೆಯನ್ನು ವೇದಾಂತದಲ್ಲಿ ಹೇಗೆ ಮಾಡಿದೆ ಎಂಬುದನ್ನು ನಾವು ಕ್ರಮಕ್ರಮವಾಗಿ ಅರಿತುಕೊಳ್ಳಬೇಕಾಗಿದೆ. **ಸಂ-26, 224**

## ಆತ್ಮನಿವೇದನ

ಸ್ನಾನ, ಧ್ಯಾನ, ಪಾರಾಯಣ, ಸದ್ವ್ಯವಹಾರ, ತ್ರಿಕರಣಸಂಯಮ, ಭಜನ, ಈ ಸಾಧನಗಳಲ್ಲಿರುವ ಜೀವಾಳವೇನು? ಇವುಗಳನ್ನು ಅಧ್ಯಾತ್ಮಸಾಧನವೆಂದು ಏಕೆ ಕರೆಯುತ್ತಾರೆ? ಈ ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರವನ್ನು ಹೇಳುವದಕ್ಕೆ ಯತ್ನಿಸುವೆನು.

ಮನುಷ್ಯನು ನಿತ್ಯಜೀವನದಲ್ಲಿ ಆನಂದವನ್ನು ಪಡೆಯುವದಕ್ಕೆ ಒಂದೇ ಒಂದು ಅಡ್ಡಿಯಿದೆ. ಅದನ್ನು 'ನಾನು' ಎಂದು ಕರೆಯುತ್ತಾರೆ. ಜೀವನಸಾಗರವು ಆನಂದಮಯವಾಗಿದ್ದರೂ ಅವಿವೇಕಿಗಳು ಅದರಲ್ಲಿ ನಾನೆಂಬ ಒಂದು ಅಲೆಯನ್ನು ಎಬ್ಬಿಸಿಕೊಂಡು ಸಂಕಟಪಡುತ್ತಿದಾರೆ. ಅಧ್ಯಾತ್ಮಸಾಧನಗಳಲ್ಲಿ ಈ ಅಲೆಯನ್ನು ಮತ್ತೆ ಸಮುದ್ರದಲ್ಲಿ ಸೇರಿಸಿಬಿಡುವ ಉಪಾಯವನ್ನು ಹೇಳಿಕೊಟ್ಟಿರುತ್ತದೆ. ಪರಮಾತ್ಮನೇ ಆನಂದವು,

ಅವನಿಗಿಂತ ಬೇರೆಯ ನಾನೆಂಬುದನ್ನಿಟ್ಟುಕೊಂಡಿರುವದೇ ದುಃಖವು. ಆದ್ದರಿಂದ 'ನಾನೆ'ಂಬುದನ್ನು ಪರಮಾತ್ಮನಲ್ಲಿ ಐಕ್ಯಮಾಡಿಬಿಡುವ, ಪರಮಾತ್ಮನೊಬ್ಬನನ್ನೇ ಎಲ್ಲೆಲ್ಲಿಯೂ ಕಾಣುವ ಸಾಧನವನ್ನು 'ಅಧ್ಯಾತ್ಮಸಾಧನ' ಎಂದು ಕರೆಯುತ್ತಾರೆ. ಕಡಲಿಗಿಂತ ತೆರೆಯು ಬೇರೆ ಎಂಬ ಭ್ರಮೆಯನ್ನು ಬಿಟ್ಟು ಕಡಲಿನಲ್ಲಿ ತೆರೆಯನ್ನು ಮರೆಯುವಂತೆ, ಭಗವಂತನಿಗಿಂತ ನಾನು ಬೇರೆ ಎಂಬ ಭ್ರಮೆಯನ್ನು ಬಿಟ್ಟು ಭಗವಂತನಲ್ಲಿ ತನ್ನನ್ನೂ ಎಲ್ಲವನ್ನೂ ಮರೆಯುವದೇ ಎಲ್ಲ ಅಧ್ಯಾತ್ಮಸಾಧನಕ್ಕೂ ಹೆಗ್ಗುರಿಯಾಗಿರುತ್ತದೆ.

ನಾನೆಂಬ ಒಂದು ವ್ಯಕ್ತಿಯನ್ನು ಕಲ್ಪಿಸಿಕೊಂಡು ಅದನ್ನು ಬಿಡಲಾರದೆ ಜೀವನು ತೊಳಲುತ್ತಿರುತ್ತಾನೆ. ರಾಗ, ದ್ವೇಷ, ಲೋಭ, ಮೋಹ, ಮದ, ಮಾತ್ಸರ್ಯ ಇವೆಲ್ಲ ಈ 'ನಾನು' ಎಂಬುದರ ಧರ್ಮಗಳಾಗಿರುತ್ತವೆ. 'ನಾನು' ಎಂಬುದು ಸ್ವತಂತ್ರವೆಂದು ಅರಿಯುವದೇ ಮೂರ್ಖತನವು, ನಾನು ನನ್ನದೆಂಬುದನ್ನು ಉಳಿಸಿಕೊಳ್ಳದಂತೆ ಎಲ್ಲವನ್ನೂ ಭಗವಂತನಿಗೆ ಅರ್ಪಿಸಿಬಿಡುವದೇ ಜಾಣತನವು.

ನನ್ನದೆಂಬುದನ್ನು ಮೊದಲು ಬಿಡಬೇಕು. ಕಟ್ಟಕಡೆಯಲ್ಲಿ ನಾನೆಂಬುದನ್ನೇ ಬಿಟ್ಟುಬಿಡಬೇಕು. ಭಗವಂತನೆ, ನಾನು ನಿನ್ನ ಕೈಯ ಸೂತ್ರದ ಗೊಂಬೆಯು. ನಾನು ಸ್ವತಂತ್ರವಾಗಿ ಏನನ್ನು ತಾನೆ ಮಾಡಲಾಪೆನು? ನೀನು ನನಗೆ ದಯಮಾಡಿಕೊಟ್ಟಿರುವ ಕರಣಕಳೇಬರಗಳಿಂದ ನಿನ್ನನ್ನು ನಾನು ಅರ್ಚಿಸಿದರೆ ಅದರಲ್ಲಿ ನನ್ನದೆಂಬುದೇನಿದೆ?– ಎಂದು ಚಿಂತಿಸಿಕೊಳ್ಳಿರಿ. ಇದೇ ಆತ್ಮನಿವೇದನೆಗೆ ಮೊದಲನೆಯ ಮೆಟ್ಟಿಲಾಗುವದು.

## ಮಿಕ್ಕ ಮಾತುಗಳನ್ನು ಬಿಡಿ

ಉಪನಿಷತ್ತಿನಲ್ಲಿ ಒಂದು ವಾಕ್ಯವಿದೆ. "ಆ ಪರಮಾತ್ಮನೊಬ್ಬನನ್ನೇ ಅರಿತುಕೊಳ್ಳಿ. ಮಿಕ್ಕ ಮಾತುಗಳನ್ನು ಬಿಡಿರಿ. ಅಮೃತಕ್ಕೆ ಅದೇ ಸೇತು." ಪರಮಾತ್ಮನ ವಿಷಯದ ಮಾತುಗಳಾದರೆ ಆಡಬಹುದು; ಮಿಕ್ಕ ವಸ್ತುಗಳ ಮಾತುಗಳನ್ನು ಆಡತಕ್ಕದ್ದಲ್ಲ. ಪರಮಾತ್ಮನೊಬ್ಬನನ್ನೇ ಅರಿತುಕೊಳ್ಳಬೇಕು; ಮಿಕ್ಕವಸ್ತುಗಳ ಮಾತನ್ನು ಕೂಡ ಆಡತಕ್ಕದ್ದಲ್ಲ. ಪರಮಾತ್ಮನ ಅರಿವು ಅಮೃತಕ್ಕೆ ಸೇತು; ಮಿಕ್ಕವುಗಳ ಮಾತುಕೂಡ ಸಾವಿನ ಪ್ರವಾಹದಲ್ಲಿ ಕೆಡಹುವದು. ಇದಿಷ್ಟೂ ಆ ಉಪನಿಷದ್ವಾಕ್ಯದಲ್ಲಿ ಅಡಗಿರುವ ಅಭಿಪ್ರಾಯವು.

ಮನುಷ್ಯನು ಮನಸ್ಸಿನಲ್ಲಿ ಎಂಥ ಆಲೋಚನೆಗಳನ್ನು ಇಟ್ಟುಕೊಂಡಿರುವನೋ ಅಂಥ ಮಾತುಗಳೇ ಅವನ ಬಾಯಿಯಲ್ಲಿ ಬರುತ್ತಿರುವವು; ಅದಕ್ಕೆ ತಕ್ಕ ಕರ್ಮಗಳನ್ನೇ ಒಂದಲ್ಲ ಒಂದು ದಿನ ಮಾಡುವನು. ಆಲೋಚನೆ, ಕಾಮ, ವಾಕ್ಕು, ಕರ್ಮ–ಇವುಗಳು ಒಂದಾಗುತ್ತಲೊಂದು, ಒಂದಕ್ಕೆ ಅನುಗುಣವಾಗಿಯೇ ಇನ್ನೊಂದು, ಮುಂದುವರಿಯುತ್ತಿರುವವು. ಬೀಜಕ್ಕೆ ತಕ್ಕಂತೆ ಅಂಕುರವಾಗಿ ಬಳ್ಳಿಯಾಗಿ ಅಥವಾ ಗಿಡವಾಗಿ

ಹೂಬಿಟ್ಟು ಹಣ್ಣುಬಿಡುವಂತೆ ನಮ್ಮ ಆಲೋಚನೆಗೆ ತಕ್ಕ ಮಾತುಗಳೂ ಕರ್ಮಗಳೂ ಹುಟ್ಟಿ ಫಲವನ್ನು ಕೊಡುವವು. ಇದಕ್ಕೆ ಪ್ರತಿಯಾಗಿ ನಮ್ಮ ವಾಕ್ಕನ್ನು ಅನುಸರಿಸಿ ಮನಸ್ಸಿನಮೇಲೆ ಪರಿಣಾಮವಾಗಿ ಕಾಲಕ್ರಮದಲ್ಲಿ ಕರ್ಮವೂ, ಕರ್ಮದಿಂದ ಫಲವೂ ಕಾಣಿಸಿಕೊಳ್ಳುತ್ತಿರುವವು. ಮನಸ್ಸಿನ ಅಲೋಚನೆಗೂ ಹೊರಗೆ ಮನುಷ್ಯನು ಮಾಡುವ ಕರ್ಮಕ್ಕೂ ನಡುವೆ ಮಾತು ಇರುತ್ತದೆ. ಮಾತಿನಿಂದ ಹೊರಗೆ ಕರ್ಮಫಲವೂ ಮಾರ್ಪಡುತ್ತದೆ, ಒಳಗೆ ಮನಸ್ಸಿನ ಆಲೋಚನೆಯೂ ಮಾರ್ಪಡುತ್ತದೆ.

ಸಾಧಕನಾದವನು ಮಾತಿನ ವಿಷಯಕ್ಕೆ ಬಹಳ ಎಚ್ಚರಿಕೆಯಿಂದಿರಬೇಕು. ಕಾಡು ಹರಟೆಯನ್ನು ಮೊದಲು ಬಿಟ್ಟುಬಿಡಬೇಕು. ಜೊಳ್ಳುಮಾತುಗಳನ್ನು ಆಡುವ ಚಟಕ್ಕೆ ಬಿದ್ದರೆ ತನ್ನನ್ನು ತಾನು ಹೊಗಳಿಕೊಳ್ಳುವದು, ಮತ್ತೊಬ್ಬರನ್ನು ನಿಂದಿಸುವದು, ಸುಳ್ಳುಹೇಳುವದು, ಮೋಸದ ಮಾತುಗಳನ್ನಾಡುವದು–ಇವೆಲ್ಲ ತಪ್ಪದೆ ಸಂಭವಿಸುವವು. ತಾನು ಆಡುವ ಮಾತು ಮತ್ತೊಬ್ಬರಿಗೆ ತಳಮಳವನ್ನುಂಟುಮಾಡಬಾರದು; ಸುಳ್ಳಲ್ಲದಿರುವಾಗಲೂ ಕೇಳುವವರಿಗೆ ಅಪ್ರಿಯವಾಗಿರಬಾರದು; ಅಥವಾ ಮತ್ತೊಬ್ಬರನ್ನು ಸಂಕಟಕ್ಕೆ ಈಡುಮಾಡುವಂತಿರಬಾರದು. ಇವೆಲ್ಲ ಪರಮಾತ್ಮನನ್ನು ಬಿಟ್ಟ ವಿಷಯದ ಮಾತುಗಳಾದ್ದರಿಂದ ಅನಾತ್ಮದ ಮಾತುಗಳು, ಮಿಕ್ಕಮಾತುಗಳು. ಇವುಗಳು ಸಾವಿನ ಪ್ರವಾಹಕ್ಕೆ ನಮ್ಮನ್ನು ಬೀಳಿಸುತ್ತವೆ. ಮತ್ತೆ ಹುಟ್ಟುವದು, ಮತ್ತೆ ಸಾಯುವದು–ಹೀಗೆ ಆಗುತ್ತಲೇ ಇರುವದಕ್ಕೆ ಈ ಮಿಕ್ಕಮಾತುಗಳೇ ಕಾರಣವಾಗಿರುತ್ತವೆ. ಈ ಮಾತುಗಳನ್ನು ಕೇಳಿದ ಜನರಿಗೆ ಅವುಗಳಿಂದ ಉದ್ವೇಗಾದಿಗಳು ಆಗುವವು. ಬೀಳುಮಾತುಗಳಿಂದ ಅವುಗಳನ್ನು ಆಡಿದವನ ವಾಗಿಂದ್ರಿಯವು ಅಸುರರ ಸೆಳೆತಕ್ಕೆ ಸಿಕ್ಕುವದು, ಮನಸ್ಸು ಮಲಿನವಾಗುವದು, ಆಯುಸ್ಸು ಕ್ಷೀಣವಾಗುವದು. ಆದ್ದರಿಂದ ಮರ್ತ್ಯತ್ವಕ್ಕೆ ಹಾಳುಹರಟೆಯೇ ಮೂಲವು.

ಈಗೀಗ ಭೂಲೋಕದ ವಾತಾವರಣವು ಹಾಳುಹರಟೆ, ಮತ್ತೊಬ್ಬರನ್ನು ಬಯ್ಯುವದು, ಮತ್ತೊಬ್ಬರನ್ನು ಹಳಿಯುವದು, ಇಲ್ಲದ ಸುದ್ದಿಗಳನ್ನು ಹುಟ್ಟಿಸಿ ಹರಡುವದು–ಇವುಗಳಿಂದ ತುಂಬಿಹೋಗಿರುತ್ತದೆ. ಜನಾಂಗಗಳು ಕಾಮ, ಕ್ರೋಧ, ಲೋಭ–ಇವುಗಳಿಗೆ ಒಳಗಾಗಿಬಿಟ್ಟಿರುತ್ತವೆ. ರಾಷ್ಟ್ರಗಳೆಲ್ಲ ತಮ್ಮತಮ್ಮ ಇಚ್ಛೆಯು ಪೂರ್ತಿಯಾಗುವದಕ್ಕಾಗಿ, ತಮ್ಮ ಹಗೆಗಳ ಮೇಲೆ ಸೇಡುತೀರಿಸಿಕೊಳ್ಳುವದಕ್ಕಾಗಿ, ತಮ್ಮಲ್ಲಿರುವ ಅಮೂಲ್ಯ ವಸ್ತುಗಳು ಮತ್ತೆ ಯಾರಿಗೂ ಸಿಕ್ಕದೆ ಇರುವದಕ್ಕಾಗಿ, ಹಾಳುಹರಟೆಯ ಸುಳ್ಳುಸುದ್ದಿಗಳನ್ನು ರೇಡಿಯೊ, ಟೆಲಿಫೋನ್, ಸುದ್ದಿಯ ತಂತಿ–ಮುಂತಾದ ಸಾಧನಗಳ ಮೂಲಕ ಹರಡುತ್ತಿರುವವು. ಸ್ವಾರ್ಥಪರರಾದವರು ತಮ್ಮ ಇಷ್ಟಾರ್ಥಕ್ಕಾಗಿ ಅವುಗಳನ್ನು ವೃತ್ತಾಂತಪತ್ರಿಕೆಗಳಲ್ಲಿ ಬರೆದು ಜನರನ್ನು ಪ್ರಲೋಭನಗೊಳಿಸುತ್ತಿರುವರು. ಏನೂ ತಿಳಿಯದ ಮಂಕರು ಈ ಮಾತುಗಳನ್ನು ಗಿಣಿಗಳಂತೆ ಕಲಿತುಕೊಂಡು ಮತ್ತೊಬ್ಬರಿಗೆ ಒಪ್ಪಿಸುತ್ತಾ ಸ್ವಾರ್ಥವನ್ನೂ ಹಾಳುಮಾಡಿಕೊಂಡು ಪರಾರ್ಥವನ್ನೂ ಹಾಳುಮಾಡುತ್ತಿರುವರು.

ಹಾಳುಹರಟೆಗೆ ಮದ್ದೆಂದರೆ ವರ್ತಮಾನಗಳನ್ನು ಕೇಳದಿರುವದು, ತನ್ನೊಳಗೆ ಪರಮಾತ್ಮನ ಚಿಂತೆಯನ್ನು ಹತ್ತಿಸಿಕೊಂಡು ಆದಷ್ಟುಕಾಲ ಮೌನದಿಂದಿರುವದು. ವ್ಯವಹಾರದಲ್ಲಿ ಮಾತನಾಡುವಾಗ ಭಗವಂತನ ಸಂಬಂಧವಾದ ಮಾತುಗಳನ್ನಲ್ಲದೆ ಮತ್ತೆ ಯಾವ ಮಾತನ್ನೂ ಆಡಬಾರದು. ಬಲ್ಲವರೊಡನೆ ಭಗವನ್ನಾಮದ ಮತ್ತು ಭಗವಂತನ ಲೀಲೆಗಳ ವಿಷಯವಾಗಿ ಸಂಭಾಷಣೆಮಾಡುತ್ತಿರಬೇಕು. ಭಗವಂತನ ಸ್ವರೂಪವನ್ನು ತಿಳಿಸುವ ಅಧ್ಯಾತ್ಮಗ್ರಂಥಗಳನ್ನು ಓದುತ್ತಿರಬೇಕು. ಪುರಾಣಶ್ರವಣಾದಿಗಳಲ್ಲಿ ಮಗ್ನನಾಗಿರಬೇಕು, ಭಗವಂತನ ಭಜನೆಯನ್ನು ಮಾಡುತ್ತಿರಬೇಕು. ಲೌಕಿಕವಾದ ಮಾತುಗಳನ್ನು ಆಡಲೇಬೇಕಾದಾಗ ಕೆಲಸಕ್ಕೆ ಎಷ್ಟು ಬೇಕೋ ಅಷ್ಟು ಮಾತುಗಳನ್ನು ಮಾತ್ರ ಆಡಿ ಮಿಕ್ಕ ಕಾಲದಲ್ಲಿ ಮನಸ್ಸಿನಲ್ಲಿ ಭಗವನ್ನಾಮಜಪವನ್ನು ಮಾಡುತ್ತಿರಬೇಕು. ಪ್ರತಿದಿನವೂ "ಭಗವಂತ, ನಾನು ಎಂದಿಗೂ ವ್ಯರ್ಥಾಲಾಪವನ್ನು ಮಾಡದಂತೆ, ಸುಳ್ಳು ಹೇಳದಂತೆ, ಕಪಟೋಕ್ತಿಗಳನ್ನಾಗಲಿ ಕಠಿನೋಕ್ತಿಗಳನ್ನಾಗಲಿ ಆಡದಂತೆ, ಮತ್ತೊಬ್ಬರಿಗೆ ಮನೋವ್ಯಥೆಯನ್ನುಂಟುಮಾಡುವ ಅಥವಾ ಅಹಿತವಾಗುವದಕ್ಕೆ ಕಾರಣವಾಗುವ ಮಾತುಗಳನ್ನು ಆಡದಂತೆ, ಅನುಗ್ರಹಿಸು. ಎಂದೆಂದಿಗೂ ನನ್ನ ನಾಲಗೆಯಲ್ಲಿ ನಿನ್ನ ನಾಮಜಪವೂ ಸಂಕೀರ್ತನೆಯೂ ನಡೆಯುತ್ತಿರಲಿ !" ಎಂದು ಪ್ರಾರ್ಥಿಸಿಕೊಳ್ಳುತ್ತಿರಬೇಕು.

## ಗುರುತಿಲ್ಲದ ದಾರಿ

ಪ್ರಪಂಚದಲ್ಲಿ ದೈವಿಕವಾದ ಮತಗಳೂ, ಸಂಸ್ಥೆಗಳೂ, ಸಂಪ್ರದಾಯಗಳೂ ಸಂಘಗಳೂ ಪಂಗಡಗಳೂ ಲೆಕ್ಕವಿಲ್ಲದಷ್ಟು ಇವೆ. ಸಂಸಾರಚಕ್ರದಲ್ಲಿ ಸಿಲುಕಿ ನರಳುತ್ತಿರುವ ಜೀವರನ್ನು ಬಂಧವಿಮುಕ್ತರನ್ನಾಗಿ ಮಾಡಬಲ್ಲೆವೆಂದು ಇವುಗಳು ಒಂದೊಂದೂ ಸಾರುತ್ತಿವೆ.

ಮುಮುಕ್ಷುಗಳಲ್ಲಿ ಒಬ್ಬೊಬ್ಬರು ಒಂದೊಂದು ಹಾದಿಯನ್ನು ಹಿಡಿದು ನಡೆಯುತ್ತಾರೆ. ಆದರೆ ಅವರು ಅವಲಂಬಿಸಿದ ಮಾರ್ಗವೇ, ಅವರು ಹಿಡಿದ ನಿಯಮಗಳೇ, ಒಂದಾನೊಂದು ಕಾಲಕ್ಕೆ ಅವರಿಗೆ ಶೃಂಖಲೆಗಳಾಗುವವು, ಮುಂದುವರಿಯಲು ಅಡ್ಡವಾಗುವವು. ಕೆಲವರು ಸಾಧಕರು ಸ್ವಲ್ಪಕಾಲ ಅಭ್ಯಾಸಮಾಡಿ ತಮ್ಮ ಸಾಧನೆಯು ಕೈಗೂಡಲಿಲ್ಲವೆಂದು ಬೇಸತ್ತು ಹತಾಶರಾಗಿ ನಿಂತುಬಿಡುವರು. ಇದಕ್ಕೆ ಮೂಲಕಾರಣವೇನೆಂದರೆ, ಅವರ ಹೃದಯವು ಇನ್ನೂ ಸಂಪೂರ್ಣವಾಗಿ ಪರಿಶುದ್ಧವಾಗಿರುವದಿಲ್ಲ. ಅವರ ಮನಸ್ಸಿನ ಚಾಂಚಲ್ಯವು ಇನ್ನೂ ಹೋಗಿರುವದಿಲ್ಲ. ಅವರಿಗೆ ಒಂದು ವೇಳೆ ಶಾಂತಿಯು ಕಾಣಿಸಿಕೊಂಡರೂ ಕ್ಷಣಮಾತ್ರದಲ್ಲಿ ಅದು ಮರೆಯಾಗಿ ಮತ್ತೆ ತಾಪತ್ರಯಗಳು ಸುಳಿದಾಡುವವು.

ಕೆಲವು ಸಾಧಕರ ಔತ್ಸುಕ್ಯವು ತೀವ್ರವಾಗಿರುವದು, ಮತ್ತೆ ಕೆಲವರ ಹಂಬಲಿಕೆಯು ಮಂದವಾಗಿರುವದು. ಕೆಲವರು ಮುಮುಕ್ಷುಗಳಂತೆ ನಟಿಸುತ್ತಿರುವರು ಅನೇಕರು ಸರಿಯಾದ ಹಾದಿಯನ್ನು ಕಾಣದೆ ತಡಕಾಡುತ್ತಾ ಇರುವರು.

ಕಷ್ಟಪಡದೆ ಕೃಷಿಮಾಡದೆ ಅಧ್ಯಾತ್ಮವಿಕಾಸವಾಗಲಾರದು. ಸಾಧಕನಾದವನು ಅಧ್ಯಾತ್ಮವಿಕಾಸಕ್ಕಾಗಿ ತಾನು ತುಳಿಯಬೇಕಾದ ಹಾದಿಯನ್ನು ಮೊದಲು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು. ತರುವಾಯ ಮಿಕ್ಕ ವಿಷಯಗಳ ಗೊಡವೆಯನ್ನು ಕೈಬಿಟ್ಟು ತನ್ನ ಗುರಿಯನ್ನೇ ಲಕ್ಷ್ಯದಲ್ಲಿಟ್ಟು ನಡೆದರೆ ಅದೇ ಒಂದು ದೊಡ್ಡ ಕೆಲಸವಾಯಿತು.

ಈ ದಾರಿಯು ಒಂದೇ, ಬೇರೊಂದು ಇಲ್ಲವೇ ಇಲ್ಲ, ಎಂದು ಯಾರೂ ಹೇಳಲಾರರು. ಆದರೆ ಸಾಧಕನು ಯಾವದಾದರೊಂದು ಸಂಘಕ್ಕೆ ಸೇರಿಕೊಂಡಮಾತ್ರ ದಿಂದಲೇ, ಯಾವದೊಂದು ಆಶ್ರಮವನ್ನು ಸೇರಿದ ಮಾತ್ರದಿಂದಲೇ, ಅಥವಾ ಯಾವದಾದರೊಂದು ವ್ರತವನ್ನು ಹಿಡಿದ ಮಾತ್ರದಿಂದಲೇ ಕೃತಕೃತ್ಯನಾದೆನೆಂದು ಭಾವಿಸಬಾರದು. ಆತ್ಮಸಾಕ್ಷಾತ್ಕಾರವಿಲ್ಲದೆ ಮೋಕ್ಷವಿಲ್ಲ; ಅಣಿಮಾದಿಸಿದ್ಧಿಗಳು ಕೂಡ ಮೋಕ್ಷಪ್ರಾಪ್ತಿಗೆ ಉಪಾಯವಾಗಲಾರವು.

ಒಂದು ದೃಷ್ಟಿಯಿಂದ ನೋಡಿದರೆ, ಮೋಕ್ಷಮಾರ್ಗವು ಸರಳವೆಂದೇ ಹೇಳಬಹುದು. ಯಾರೇ ಆಗಲಿ "ನನ್ನನ್ನು ನಿನ್ನವನನ್ನಾಗಿ ಮಾಡಿಕೊ !" ಎಂದು ಶುದ್ಧಾಂತಃಕರಣದಿಂದ ಮೊರೆಯಿಟ್ಟರೆ ಕರುಣಾನಿಧಿಯಾದ ಆ ಪರಮಾತ್ಮನು ಅವರನ್ನು ಕೈಹಿಡಿದು ಎತ್ತಿ ದಾರಿಯನ್ನು ತೋರಿಸುವನು. "ನನಗೆ ಬೇಕಿರುವದು ಭಗವಂತನೇ, ಮಿಕ್ಕದ್ದೆಲ್ಲವೂ ಏತಕ್ಕೂ ಬಾರದ್ದು" ಎಂಬ ದೃಢನಿಶ್ಚಯವು ಏರ್ಪಡಬೇಕು. ಆಗ ಪರಮಾತ್ಮನ ಕೃಪೆಯು ನಮ್ಮ ದೇಹದ ಪ್ರತಿಯೊಂದು ಅಂಗಾಂಗದಲ್ಲಿಯೂ ತುಂಬಿತುಳುಕಾಡುವದು. ಪ್ರಾಪಂಚಿಕವಾದ ಅನಿತ್ಯವಾದ ಮೂರುದಿನದ ಬಾಳಿನ ವಿಷಯಸುಖಗಳಲ್ಲಿ ಎಳ್ಳಷ್ಟು ಆಸಕ್ತಿಯಿದ್ದರೂ ಇದು ಸಾಧ್ಯವಾಗಲಾರದು.

ಒಂದು ಬಗೆಯ ಉಡುಪನ್ನು ಧರಿಸಿದ ಮಾತ್ರಕ್ಕೆ, ಒಂದು ವೇಷವನ್ನು ಹಾಕಿಕೊಂಡ ಮಾತ್ರಕ್ಕೆ , ಒಂದು ಹೊಸ ಹೆಸರನ್ನು ಇಟ್ಟುಕೊಂಡಮಾತ್ರಕ್ಕೆ ಪರಮಾತ್ಮನು ಸಿಕ್ಕಲಾರನು. ಸರ್ವಜ್ಞನಾದ ಭಗವಂತನು ಈ ಬಗೆಯ ಮುಸುಕುಗಳಿಗೆ ಅಥವಾ ಮುಖವಾಡಗಳಿಗೆ ಮರುಳಾಗುವದಿಲ್ಲ. "ಮಿಕ್ಕದ್ದನ್ನೆಲ್ಲ ಕಸಕ್ಕೆ ಕಡೆಯಾಗಿ ಬಿಟ್ಟು ಆತನಿಗಾಗಿಯೇ ಹಂಬಲಿಸುತ್ತಿದ್ದಾರೊ?" ಎಂಬುದನ್ನು ಪರೀಕ್ಷಿಸಿ ನೋಡುತ್ತಾನೆ. ಅಧ್ಯಾತ್ಮಮಾರ್ಗದಲ್ಲಿ ಮಿಥ್ಯಾಚಾರವೂ ಕಪಟದ ನಡೆನುಡಿಗಳೂ ಏತಕ್ಕೂ ಬರುವದಿಲ್ಲ. ತೀವ್ರತರವಾದ ಮುಮುಕ್ಷುತೆಯು ಅತ್ಯವಶ್ಯವಾಗಿರುತ್ತದೆ. ತ್ರಿಕರಣಶುದ್ಧಿಯಿಂದ ಪರಮಾತ್ಮನಿಗೇ ಶರಣುಹೋಗಿರಿ. ಅವನನ್ನೇ ಸೇರಿ, ಅವನಲ್ಲಿ ಒಂದಾಗಿಬಿಡಿರಿ. ದೇಹವೇ ನಾನೆಂಬ

ಸಂಕುಚಿತದೃಷ್ಟಿಯನ್ನು ಬಿಡಿರಿ. ನಿಮ್ಮ ಪ್ರೇಮವು ವಿಶಾಲವಾಗಿ ಬ್ರಹ್ಮಾಂಡವನ್ನೆಲ್ಲ ಆವರಿಸಿ ಅಲ್ಲಿಂದ ಮುಂದಕ್ಕೆ ಹರಿಯಲಿ ! ಆತ್ಮಾನಂದವು ನಿಮ್ಮಲ್ಲಿ ತುಂಬಿತುಳುಕಾಡಿ ಉಕ್ಕಿಹರಿಯಲಿ ! ನೀವೂ ಪರಮಾತ್ಮನೂ ಬೇರೆ ಬೇರೆಯಲ್ಲ; ನೀವೇ ಅವನು, ಅವನೇ ನೀವು. ಇದನ್ನು ಅನುಭವದಿಂದ ಅರಿತುಕೊಂಡು ಶಾಶ್ವತವಾದ ಶುದ್ಧವಾದ ಅನಂತಾನಂದವನ್ನು ಪಡೆದುಕೊಳ್ಳಿರಿ. ಇದಕ್ಕಿಂತ ಹೆಚ್ಚಿನ ಲಾಭವಿನ್ನೊಂದಿಲ್ಲ.

## ಮನಸ್ಸಿನ ಸಂಸ್ಕಾರ

ಮನಸ್ಸೆಂಬ ಶಬ್ದವನ್ನು ವೇದಾಂತಿಗಳು ಎರಡು ಅರ್ಥಗಳಲ್ಲಿ ಬಳಸುವರು. ಮನಸ್ಸೆಂದರೆ ಅಂತಃಕರಣವು, ಮನಸ್ಸೆಂದರೆ ಅದರ ವೃತ್ತಿಯೂ ಆಗುವದು. ಸಂದರ್ಭವನ್ನು ನೋಡಿ ಯಾವ ಅರ್ಥದಲ್ಲಿ ಈ ಮಾತನ್ನು ಉಪಯೋಗಿಸಿದೆ ಎಂಬುದನ್ನು ಗೊತ್ತುಮಾಡಬೇಕಾಗುತ್ತದೆ.

ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ–ಈ ಇಂದ್ರಿಯಗಳು **ಬಹಿಃಕರಣಗಳು**. ಏಕೆಂದರೆ ಇವು ಹೊರಗಿನ ವಿಷಯಗಳನ್ನು ಎಂದರೆ ರೂಪ, ಶಬ್ದ, ವಾಸನೆ, ಸವಿ, ಸೋಂಕು–ಇವುಗಳನ್ನು ಮಾತ್ರ ಅರಿಯುವದಕ್ಕೆ ಸಾಧನವಾಗಿವೆ. ಆದರೆ ಇವುಗಳು ಹೊರಗಿನ ವಿಷಯಗಳನ್ನು ಅರಿಯಬೇಕಾದರೆ ವಿಷಯಕ್ಕೂ ಇವಕ್ಕೂ ಸಂಬಂಧ ವಾಗಬೇಕು; ಜೊತೆಗೆ ಒಳಗಿನ ಕರಣವಾದ ಮನಸ್ಸಿನ (ಅಂತಃಕರಣದ) ನೆರವೂ ಬೇಕು. ಮನಸ್ಸಿನ ಸಹಾಯವಿಲ್ಲದೆ ಅವು ವಿಷಯವನ್ನು ಅರಿಯಲಾರವು.

ಮನಸ್ಸಿಗೆ **ಅಂತಃಕರಣ**ವೆಂಬ ಹೆಸರು ಬಂದಿರುವದು ಅದು ನಮ್ಮ ಒಳಗೆ ಇದೆ–ಎಂಬ ಕಾರಣವೊಂದರಿಂದಲೇ ಅಲ್ಲ. ಒಳಗೆ ಇರುವ ತತ್ತ್ವಗಳನ್ನು ಅರಿಯುವದಕ್ಕೂ ಅದೇ ಬೇಕಾಗಿದೆ. ಉದಾಹರಣೆಗೆ ನಮಗೆ ಮನಸ್ಸು ಇದೆ; ಅದರಲ್ಲಿ ಆಸೆ, ಸಿಟ್ಟು ಮುಂತಾದವುಗಳು ಆಗುತ್ತಿರುತ್ತವೆ–ಎಂಬುದನ್ನು ತಿಳಿಯುವದೂ ಮನಸ್ಸೇ, ಬೇರೆ ಯಾವ ಕರಣವೂ ಅಲ್ಲ. ಆದ್ದರಿಂದಲೂ ಅದಕ್ಕೆ ಅಂತಃಕರಣವೆಂಬ ಹೆಸರು ಬಂದಿರುತ್ತದೆ.

ಯಾರು ಹೊರಗಿನ ವಿಷಯಗಳನ್ನು ನೋಡುವದರಲ್ಲಿಯೇ ತಮ್ಮ ಜೀವನವನ್ನೆಲ್ಲ ವಿನಿಯೋಗಿಸುತ್ತಿರುವರೋ ಅವರಿಗೆ ಬಹಿರ್ಮುಖರು ಎಂದು ಹೆಸರು. ಅಂಥವರಿಗೆ ಒಳಗಿನ ಮನಸ್ಸನ್ನು ಪರೀಕ್ಷಿಸುವದಕ್ಕಾಗಲಿ, ಅದನ್ನು ಸರಿಪಡಿಸಿಕೊಳ್ಳುವದಕ್ಕಾಗಲಿ ಬಿಡುವೇ ಇರುವದಿಲ್ಲ. ಯಾರು ತಮ್ಮ ಒಳಗೆ ಇರುವ ಮನಸ್ಸನ್ನೇ ಪರೀಕ್ಷಿಸುವದಕ್ಕೆ ಹೊರಟಿರುವರೋ ಅವರು **ಅಂತರ್ಮುಖಿಗಳು**.

ಅಂತಃಕರಣದಲ್ಲಿ ಮನಸ್ಸೆಂಬ ವೃತ್ತಿಯೊಂದು ಇರುವದು. ಮನಸ್ಸು ಯಾವಾಗಲೂ ಕೆಲಸಮಾಡುತ್ತಲೇ ಇರುವದು. ಅದರ ವ್ಯಾಪಾರವು ನಿಲ್ಲುವ ಹಾಗೆಯೇ ಇಲ್ಲ.

ಹೊರಗಿನ ವಿಷಯಗಳಿಂದ ಅದರಲ್ಲಿ ಯಾವದಾದರೊಂದು ಪ್ರತಿಕ್ರಿಯೆ ನಡೆಯುತ್ತಲೇ ಇರುತ್ತದೆ. ಇದರಿಂದ ಅಂತಃಕರಣದಲ್ಲಿ ಆಯಾ ವಿಷಯಗಳ ವಾಸನೆಯು ನಿಂತುಕೊಳ್ಳುತ್ತದೆ. ಇದಕ್ಕೆ ಸಂಸ್ಕಾರವೆಂದು ಹೆಸರು. ವಿವೇಕಿಯಾದವನು ಹಿಂದಿನ ಸಂಸ್ಕಾರವು ಕೆಟ್ಟದ್ದಾದರೆ ಅದನ್ನು ತೆಗೆದುಹಾಕಿ ಒಳ್ಳೆಯ ಸಂಸ್ಕಾರವನ್ನುಂಟುಮಾಡುವದಕ್ಕೆ ಯತ್ನಿಸಬೇಕು. ಹೀಗೆ ಪ್ರಯತ್ನಮಾಡುವದನ್ನೇ ಮನಸ್ಸಿನ ಸಂಸ್ಕಾರವೆಂದು ನಾವು ಕರೆದಿರುವೆವು. **ಸಂ-15, 32**

## ಮನಸ್ಸಿನಿಂದ ಹೆಚ್ಚಿನ ಲಾಭವನ್ನು ಪಡೆಯುವ ಉಪಾಯ

"ಮನಸ್ಸೇ ಮನುಷ್ಯರ ಬಂಧಕ್ಕೂ ಮೋಕ್ಷಕ್ಕೂ ಕಾರಣವಾಗಿರುತ್ತದೆ" ಎಂದು ಶಾಸ್ತ್ರವು ಸಾರುತ್ತದೆ. ಆದ್ದರಿಂದ ವಿವೇಕಿಗಳಾದವರು ತಮ್ಮ ಮನಸ್ಸಿನ ಸಂಸ್ಕಾರವು ಹೇಗಿದೆಯೆಂಬುದನ್ನು ತಿಳಿದುಕೊಂಡು ಅದನ್ನು ಸರಿಯಾದ ಕ್ರಮದಿಂದ ತಿದ್ದಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಮನಸ್ಸಿನ ಸ್ವಭಾವವನ್ನು ಅರಿತುಕೊಂಡು ಅದನ್ನು ಉತ್ತಮರೀತಿಯಿಂದ ಉಪಯೋಗಿಸಿದರೆ ಅದರಿಂದ ಆದಷ್ಟು ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬಹುದು.

ಮನಸ್ಸು ಸಾಮಾನ್ಯವಾಗಿ ವ್ಯಷ್ಟಿಬುದ್ಧಿಯನ್ನೇ ಉಂಟುಮಾಡುತ್ತಿರುವದೆಂದೂ ಇದರಿಂದ ಅದರಲ್ಲಿ ಕಾಮಕ್ರೋಧಾದಿಗಳು ಬೆಳೆದುಕೊಳ್ಳುವವೆಂದೂ ನಮ್ಮೆಲ್ಲರ ಅನುಭವದಲ್ಲಿಯೇ ಇದೆ. ಆದರೆ ಮನಸ್ಸು ಯಾವಾಗಲೂ ಹೀಗೆಯೇ ಇರುವದಿಲ್ಲ. ಅದನ್ನು ಸಮಷ್ಟಿಬುದ್ಧಿಯನ್ನುಂಟುಮಾಡುವ ಕರಣವಾಗಿ ಮಾರ್ಪಡಿಸಿಕೊಳ್ಳುವದಕ್ಕೂ ಬರುತ್ತದೆ. ಆಗ ನಮಗೆ ಅದರಿಂದ ಹೆಚ್ಚಿನ ಲಾಭವೂ ಆಗುತ್ತದೆ. ಒಂದೇ ಕತ್ತಿಯನ್ನು ಹೇಗೆ ಶತ್ರುವನ್ನು ಸಂಹರಿಸುವದಕ್ಕೂ ಆತ್ಮಹತ್ಯೆಗೂ ಉಪಯೋಗಿಸಿಕೊಳ್ಳಬಹುದೋ, ಒಂದೇ ಬೆಂಕಿಯನ್ನು ಹೇಗೆ ಪಾಕಾದಿಗಳಿಗೆ ಉಪಯೋಗಿಸಿಕೊಂಡು ಲಾಭವನ್ನು ಪಡೆಯುವಂತೆ ನಮ್ಮ ಮನೆಗೆ ಬೆಂಕಿಹೊತ್ತಿಸಿಕೊಂಡು ನಷ್ಟವನ್ನೂ ಅನುಭವಿಸಬಹುದೋ ಹಾಗೆಯೇ ಮನಸ್ಸನ್ನು ನಮ್ಮ ಶ್ರೇಯಸ್ಸಿಗೂ ಉಪಯೋಗಿಸಿಕೊಳ್ಳಬಹುದು, ನಮ್ಮ ಅನರ್ಥಗಳಿಗೆಲ್ಲ ಕಾರಣವಾಗಿಯೂ ಮಾಡಿಕೊಳ್ಳಬಹುದು. ಆದ್ದರಿಂದ ಮನಸ್ಸು ತನ್ನಷ್ಟಕ್ಕೆ ತಾನು ಒಳ್ಳೆಯದೆಂದಾಗಲಿ ಕೆಟ್ಟದೆಂದಾಗಲಿ ಹೇಳುವದಕ್ಕೆ ಬರುವದಿಲ್ಲ. ಅದನ್ನು ಒಳ್ಳೆಯ ಫಲವಾಗುವಂತೆ ಉಪಯೋಗಿಸಿಕೊಂಡರೆ ಒಳ್ಳೆಯ ಸಾಧನವಾಗುತ್ತದೆ. ಕೆಟ್ಟ ಫಲವಾಗುವಂತೆ ಉಪಯೋಗಿಸಿಕೊಂಡರೆ ಕೆಟ್ಟಸಾಧನವಾಗುತ್ತದೆ. ಅಷ್ಟೆ.

ಮನಸ್ಸು ಉತ್ತಮಫಲವನ್ನು ಕೊಡುವಂತೆ ಅದನ್ನು ಉಪಯೋಗಿಸುವದು ಹೇಗೆ?- ಎಂಬುದನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ನಾವುಗಳು ಮನಸ್ಸನ್ನು ಶಾಸ್ತ್ರವಿಧಿಗೆ

ಕಟ್ಟುಬೀಳುವಂತೆ ತಿದ್ದಿಕೊಳ್ಳುತ್ತಾಬಂದರೆ ನಾವು ಮಾಡುವ ಕರ್ಮವು ಧರ್ಮವೆನಿಸುತ್ತದೆ; ಶಾಸ್ತ್ರದಲ್ಲಿ ನಿಷೇಧಮಾಡಿರುವ ಕೆಲಸಗಳನ್ನು ಮಾಡುವದಕ್ಕೆ ಮನಸ್ಸನ್ನು ಬಿಟ್ಟರೆ ಆಗ ನಾವು ಮಾಡುವ ಕರ್ಮವು ಅಧರ್ಮವೆನಿಸುತ್ತದೆ. ಧರ್ಮದಿಂದ ಪುಣ್ಯವೂ ಅಧರ್ಮದಿಂದ ಪಾಪವೂ ಆಗುವದೆಂದು ಶಾಸ್ತ್ರವು ಹೇಳುತ್ತದೆಯಷ್ಟೆ. ಪುಣ್ಯಪಾಪಗಳು ಕಣ್ಣಿಗೆ ಕಾಣಿಸುವುದಿಲ್ಲವಾದರು ನಾವು ಮಾಡುವ ಧರ್ಮಾಧರ್ಮಗಳು ನಮಗೇ ತಿಳಿಯಬರುತ್ತದೆ. ಧರ್ಮ, ಅಧರ್ಮ–ಇವುಗಳೆರಡೂ ಕರ್ಮವೇ ಆಗಿರುತ್ತವೆ. ಅವು ಎರಡು ಬೇರೆ ಬೇರೆ ಪದಾರ್ಥಗಳಲ್ಲ; ಒಂದೇ ಕರ್ಮವೇ ಬೇರೆಬೇರೆಯ ದೃಷ್ಟಿಯಿಂದ ಧರ್ಮವೆಂದೂ ಅಧರ್ಮವೆಂದೂ ಹೆಸರುಗಳನ್ನು ಪಡೆಯುತ್ತದೆ. ಧ್ವನಿಯು ಬೇರೆಬೇರೆ ಅಂತಸ್ತಿನಲ್ಲಿ ಬೇರೆಬೇರೆಯ ಸ್ವರವೆನಿಸುವಂತೆಯೂ, ಒಂದೇ ವಸ್ತುವು, ಬೇರೆಬೇರೆಯ ಮಾರ್ಪಾಡುಗಳಿಂದ ಬೇರೆಬೇರೆ ರೂಪಗಳನ್ನಾಂತು ಬೇರೆಬೇರೆಯ ಹೆಸರುಗಳನ್ನು ಪಡೆಯುವಂತೆಯೂ ನಮ್ಮ ಕರ್ಮವೇ ಧರ್ಮವೆಂದೂ ಅಧರ್ಮವೆಂದೂ ಭಿನ್ನರೂಪಗಳನ್ನು ಪಡೆಯುತ್ತಿರುತ್ತದೆ.

ಮನಸ್ಸಿಗೆ ಸಮಷ್ಟಿಬುದ್ಧಿಯಲ್ಲಿ ಸವಿ ಹತ್ತಬೇಕಾದರೆ, ಅದು ಶಾಸ್ತ್ರವಿಹಿತವಾದ ಕರ್ಮಗಳನ್ನು ಮಾಡಿ ಧಾರ್ಮಿಕಮನಸ್ಸೆನ್ನಿಸಿಕೊಳ್ಳಬೇಕಾದರೆ, ನಾವು ಏನು ಮಾಡಬೇಕು? ಸಮಷ್ಟಿಬುದ್ಧಿಯ ಕಡೆಗೆ ಲಕ್ಷ್ಯಕೊಡಬೇಕೆಂಬುದೇನೋ ಸರಿ; ಆದರೆ ಆ ಬುದ್ಧಿಯನ್ನು ರಕ್ಷಿಸಿಕೊಳ್ಳುವದಕ್ಕೆ ಯಾವ ಯಾವ ಮೆಟ್ಟಲಿನ ಸಾಧನಗಳನ್ನು ಮಾಡಬೇಕು?–ಎಂಬ ವಿಷಯಕ್ಕೆ ಶಾಸ್ತ್ರದಲ್ಲಿ ಕೆಲವು ಉಪದೇಶಗಳಿರುತ್ತವೆ. ಮನಸ್ಸೆಂಬುದು ಒಂದು ಅಮೂಲ್ಯವಾದ ರತ್ನವಿದ್ದಂತೆ ಇದೆ. ರತ್ನವನ್ನು ಮೀನುಗಳನ್ನು ಹೊಡೆಯುವದಕ್ಕೆ ಉಪಯೋಗಿಸುವ ಗಾಂಪರಂತೆ ನಾವು ಅದನ್ನು ವಿಷಯಗಳ ಕಡೆಗೇ ಬಿಡುತ್ತಿರುವೆವು. ಅದನ್ನು ಮೆಲ್ಲಮೆಲ್ಲಗೆ ವಿಷಯಗಳ ಸಂಗದಿಂದ ಹಿಂತಿರುಗಿಸಿ ಭಗವಂತನಲ್ಲಿಯೇ ರತವಾಗುವಂತೆ ಮಾಡಬೇಕು. ಆಗಲೇ ಅದರಿಂದ ನಮಗೆ ಆಗಬೇಕಾದ ಸುಖ ಶಾಂತಿಗಳು ದೊರಕುವವು–ಎಂದು ಶಾಸ್ತ್ರಕಾರರು ಹೇಳುತ್ತಾರೆ.

ಮನಸ್ಸು ಬಹುಸೂಕ್ಷ್ಮವಾಗಿರುವದು. ಅದು ಅನೇಕರಿಗೆ ಹತೋಟಿಗೆ ಸಿಕ್ಕುವದೇ ಇಲ್ಲ. ಆದ್ದರಿಂದ ಮೊದಲು ಅದರ ತೀರ ಸ್ಥೂಲವಾದ ಕೊನೆಯನ್ನು ಹಿಡಿದು ಕೊಳ್ಳಬೇಕು. ಮನಸ್ಸಿಗೆ ಇಂದ್ರಿಯಗಳೇ ಸ್ಥೂಲವಾದ ಕೊನೆಗಳು. ಈ ಇಂದ್ರಿಯಗಳನ್ನು ನಾವು ವಶಪಡಿಸಿಕೊಳ್ಳುವದಕ್ಕೆ ಮೊದಲುಮಾಡುವದರಿಂದ ಕ್ರಮಕ್ರಮವಾಗಿ ಮನಸ್ಸೂ ಪಳಗುವದು. ನಾವು ಹೇಳಿದಂತೆ ಧರ್ಮಮಾರ್ಗವನ್ನು ಅವಲಂಬಿಸುವದು, ಜೀವನವನ್ನು ಆನಂದಮಯವಾಗಿ ಮಾಡುವದು. ಸಂ–15, 118

# ಮನೋರಥ

ರಥವನ್ನು ನೋಡಿರುತ್ತೀರಷ್ಟೆ. ರಥವೆಂಬ ಶಬ್ದಕ್ಕೆ ಗಾಡಿ ಎಂದು ಅರ್ಥ. ರಥಕ್ಕೆ ಕುದುರೆಗಳನ್ನು ಕಟ್ಟಿರುತ್ತಾರೆ. ರಥದ ಒಡೆಯನು ಅಥವಾ ಪ್ರಯಾಣಿಕನು ಅದರೊಳಗೆ ಕುಳಿತಿರುತ್ತಾನೆ. ಗಾಡಿಯನ್ನು ಹೊಡೆಯುವವನು ಕುದುರೆಗಳ ಲಗಾಮನ್ನು ಹಿಡಿದಿರುತ್ತಾನೆ. ಅವನು ಜಾಣನಾಗಿದ್ದರೆ ಸರಿಯಾದ ದಾರಿಯಲ್ಲಿ ಕುದುರೆಗಳನ್ನು ನಡೆಯಿಸುತ್ತಾನೆ. ಮುಟ್ಟಬೇಕಾದ ಊರನ್ನು ಪ್ರಯಾಣಿಕನು ತಲುಪುವಂತೆ ಮಾಡುತ್ತಾನೆ. ಅವನು ದಡ್ಡನಾದರೆ, ಕುದುರೆಗಳು ತುಂಟಾಟವನ್ನು ಮಾಡುವ ಸ್ವಭಾವದವಾದರೆ, ರಥವನ್ನು ಕಂಡಕಡೆಗೆ ಎಳೆದುಕೊಂಡು ಹೋಗುತ್ತವೆ. ಪ್ರಯಾಣಿಕನೂ ಗಾಡಿಯವನೂ ಒಂದು ಕೊರಕಲಲ್ಲಿ ಬಿದ್ದುಬಿಡಬಹುದು. ಮನೋರಥವು ಕಣ್ಣಿಗೆ ಕಾಣಿಸುವದಿಲ್ಲ. ಅದಕ್ಕೆ ಕಟ್ಟಿರುವ ಕುದುರೆಗಳೂ ನಮಗೆ ಕಾಣಿಸುವದಿಲ್ಲ. ಅದನ್ನು ನಡೆಸುವವರು ಯಾರೆಂಬುದೂ ನಮಗೆ ತಿಳಿಯದು. ರಥವು ಯಾವ ದಾರಿಯಲ್ಲಿ ನಡೆಯಬೇಕೋ ಅದು ಮೊದಲೇ ತಿಳಿಯದು. ಆ ರಥವು ನೆಲದ ಮೇಲೆ ಉರುಳಿಕೊಂಡು ಹೋಗುವ ಚಕ್ರಗಳನ್ನು ನಂಬಿರುವದಿಲ್ಲ. ಆಕಾಶದಲ್ಲಿ ಹತ್ತು ದಿಕ್ಕುಗಳಿಗೂ ಹರಿದಾಡುತ್ತಿರುವದು. ಈ ರಥದಲ್ಲಿ ಕುಳಿತವರು ಮುಟ್ಟುವ ಮಜಲು ಯಾವದು? ಅದನ್ನೂ ನಮ್ಮಲ್ಲಿ ಬಲುಮಂದಿ ವಿಚಾರಿಸಿಕೊಂಡಿಲ್ಲ!

ಮಿಕ್ಕ ರಥಗಳು ಬಹು ದೀರ್ಘಕಾಲ ಸರಿಯಾಗಿ ಪ್ರಯಾಣಮಾಡಿದ ಬಳಿಕ ಮಜಲನ್ನು ಮುಟ್ಟುವವು. ಮನೋರಥದ ಪರಿ ಹೀಗಲ್ಲ. ರಥವು ಚೊಕ್ಕಟವಾಗಿರಬೇಕು, ಇದರ ಕುದುರೆಗಳು ನಡೆಯದಂತೆ ಜಗ್ಗಿಹಿಡಿಯಬೇಕು ರಥವು ಸ್ವಲ್ಪವೂ ಅಲುಗಾಡಬಾರದು. ಹೀಗಾದರೆ ಮನೋರಥವು ಒಂದು ವಿಚಿತ್ರವಾದ ಮಾರ್ಪಾಡನ್ನು ಪಡೆಯುವದು. ಆಗ ರಥವು 'ಬ್ರಹ್ಮರಥ'ವಾಗುವದು, ಇದರೊಳಗೆ ಕುಳಿತಿರುವ ಜೀವನು ಬ್ರಹ್ಮವಾಗುವದು. ರಥದಲ್ಲಿ ಕುಳಿತು ಪ್ರಯಾಣಮಾಡಬೇಕಾದ ಆವಶ್ಯಕತೆ ಅಲ್ಲಿಗೆ ಮಾಯವಾಗುವದು.

ಮನೋರಥದಲ್ಲಿ ಕುಳಿತು ಇಂದ್ರಿಯಗಳೆಂಬ ಕುದುರೆಗಳನ್ನು ದೌಡಾಯಿಸಿಕೊಂಡು ಹೋಗುತ್ತಿರುವವನು ವಿಷಯಗಳೆಂಬ ಕೊರಕಲುಗಳಿಗೆ ಉರುಳಿ ಸಾಯುವ ಅಪಾಯವಿದೆ. ಆದ್ದರಿಂದ ಅಂಥವನನ್ನು 'ಮರ್ತ್ಯ' ನೆಂದು ಕರೆಯುತ್ತಾರೆ. ಆದರೆ ಆ ಕುದುರೆಗಳನ್ನು ಹತೋಟಿಗೆ ತಂದುಕೊಂಡು ಮನೋರಥವನ್ನು ಬ್ರಹ್ಮರಥವಾಗಿ ಮಾರ್ಪಡಿಸಿಕೊಂಡವನು ಅಮೃತವಾದ ಬ್ರಹ್ಮವೇ ಆಗಿಬಿಡುತ್ತಾನೆ. ಮನೋರಥದಲ್ಲಿ ಕುಳಿತು ಮಾಡುವ ಸವಾರಿಯು ತತ್ಕಾಲಕ್ಕೆ ಮೋಹಕವಾಗಿರುತ್ತದೆ, ಬೇಕೆನಿಸುತ್ತದೆ;

ಆದರೆ ಕೊನೆಯಲ್ಲಿ ಅದರಿಂದ ಅನರ್ಥವೇ ಆಗುತ್ತದೆ. ಆದರೆ ಬ್ರಹ್ಮರಥದಲ್ಲಿ ಕುಳಿತವನಿಗೆ ನಿತ್ಯಾನಂದರೂಪವಾದ ಪರಮಪುರುಷಾರ್ಥವೇ ಕೈವಶವಾಗುತ್ತದೆ. **ಸಂ–17, 23**

# ಮನೋರೋಗ

ಮನುಷ್ಯನ ಶರೀರಕ್ಕೆ ರೋಗವು ಬರುವದೆಂಬುದನ್ನು ಎಲ್ಲರೂ ಬಲ್ಲರು. ಅದನ್ನು ಪರಿಹರಿಸುವದಕ್ಕೆ ಆಯುರ್ವೇದ, ಅಲೋಪೆತಿ, ಹೋಮಿಯೋಪೆತಿ–ಮುಂತಾದ ಬೇರೆಬೇರೆಯ ಚಿಕಿತ್ಸಾಪದ್ಧತಿಗಳಿವೆ. ಶರೀರದ ರೋಗಕ್ಕೆ ಕಾರಣವೇನೆಂಬು ದನ್ನು ಕಂಡುಹಿಡಿದು, ಅದು ಬಾರದೆ ಇರುವಂತೆ ಮಾಡುವ ಉಪಾಯಗಳನ್ನೂ ತಿಳಿಸುವ ವೈದ್ಯರಿದ್ದಾರೆ. ಮನುಷ್ಯರು ದೇಹದಲ್ಲಿ ಆರೋಗ್ಯವಾಗಿರುವದಕ್ಕೆ ಉಪಾಯ ಗಳು ಯಾವಯಾವವು ಬೇಕು ಎಂಬುದನ್ನು ಹುಡುಗರಿಗೆ ವಿದ್ಯಾಶಾಲೆಯಲ್ಲಿ ಆರೋಗ್ಯ ಶಾಸ್ತ್ರದ ಮೂಲಕವಾಗಿ ಹೇಳಿಕೊಡುತ್ತೇವೆ. ಆದರೆ ಮನಸ್ಸಿಗೂ ರೋಗವು ಬರುತ್ತದೆ ಎಂಬುದನ್ನು ತಿಳಿದವರು ಬಹಳಕಡಿಮೆಯ ಸಂಖ್ಯೆಯಲ್ಲಿರುತ್ತಾರೆ. ಮನೋರೋಗದ ನಿದಾನವನ್ನೂ ಅದು ತಲೆಯಿಕ್ಕದಂತೆ ಮಾಡಿಕೊಳ್ಳುವ, ಅಥವಾ ಅದನ್ನು ಪರಿಹರಿಸುವ ಕ್ರಮವನ್ನೂ, ಜನರಿಗೆ ತಿಳಿಸುವ ವೈದ್ಯರುಗಳು ಅಥವಾ ಗ್ರಂಥಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಾಗಿರುವವು.

ದೇಹದಲ್ಲಿ ರೋಗಗಳು ಮನುಷ್ಯನ ಆಹಾರ, ನಿದ್ರೆ–ಮುಂತಾದವುಗಳಲ್ಲಿಯೂ ಅವನ ಆಚಾರವ್ಯವಹಾರಗಳಲ್ಲಿಯೂ ಇರುವ ಕುಂದುಕೊರತೆಗಳಿಂದ ಉಂಟಾಗುವ ವೆಂಬುದನ್ನು ಕೆಲವು ಜನರಾದರೂ ಬಲ್ಲರು. ಆದರೆ ಹಲವು ರೋಗಗಳು ಮನಸ್ಸಿನಲ್ಲಿ ಆಗಿರುವ ಏರುಪೇರುಗಳಿಂದ ಉಂಟಾಗಿರುವವೆಂಬುದನ್ನು ಅರಿಯದವರೇ ಬಹಳ. ಇನ್ನು ಮನಸ್ಸಿನ ರೋಗಗಳ ನಿದಾನ, ಚಿಕಿತ್ಸೆ–ಇವುಗಳ ವಿಚಾರಮಾಡುವವರು ಎಲ್ಲಿ ಸಿಕ್ಕಬೇಕು? ನಾಡೀಪರೀಕ್ಷೆಯಿಂದ ರೋಗವನ್ನು ವಿಮರ್ಶಿಸುವವರುಂಟು, ಆದರೆ ಮನಸ್ಸಿನ ಪರೀಕ್ಷೆಯಿಂದ ಅದನ್ನು ನೋಡುವವರು ನಮ್ಮ ದೇಶದಲ್ಲಿ ಎಲ್ಲಿರುತ್ತಾರೆ?

ಮನಸ್ಸು ಉಲ್ಲಾಸದಿಂದ ಕೂಡಿದ್ದರೆ, ದೇಹವೂ ಆರೋಗ್ಯವಾಗಿರುತ್ತದೆ. ದೇಹವು ಆರೋಗ್ಯವಿಲ್ಲದೆ ನರಳುತ್ತಿದ್ದರೆ ಮನಸ್ಸಿಗೂ ಕಳವಳವುಂಟಾಗುತ್ತದೆ. ಹೀಗೆ ದೇಹವೂ ಮನಸ್ಸೂ ಒಂದಕ್ಕೊಂದು ಹತ್ತಿರದ ಸಂಬಂಧವುಳ್ಳವಾಗಿರುತ್ತವೆ. ಆದರೂ ನಮ್ಮ ದೇಹದಲ್ಲಿ ದೇಹದ ಹೊರಭಾಗಕ್ಕೆ ಚಿಕಿತ್ಸೆಯನ್ನು ಮಾಡುವ ಆಸ್ಪತ್ರೆಗಳು ಮಾತ್ರ ತಕ್ಕಮಟ್ಟಿಗಿವೆ. ಆದರೆ ರೋಗದ ಸೂಕ್ಷ್ಮಕಾರಣವಾಗಿರುವ ಸಿಟ್ಟು, ಆಸೆ, ಚಿಂತೆ, ಕಳವಳ, ಹೊಟ್ಟೆಯಕಿಚ್ಚು ಮುಂತಾದ ಮನಸ್ಸಿನ ರೋಗಗಳಿಗೆ ಆಸ್ಪತ್ರೆಗಳು ಎಲ್ಲಿಯೂ ಸ್ಥಾಪಿತವಾಗಿಲ್ಲ. ಇದೇಕೆ? **ಸಂ–17, 167**

# ಮನಸ್ಸಿನ ಗಾಯಗಳು ಮಾಯುವ ಬಗೆ

ನಮ್ಮ ಶರೀರದಲ್ಲಿ ಏನಾದರೊಂದು ಅಪಾಯದಿಂದ ಗಾಯವಾದರೆ, ಅಥವಾ ನಮ್ಮ ಶರೀರದೊಳಗಿನ ರಕ್ತವು ಕೆಟ್ಟು ಅಲ್ಲಲ್ಲಿ ಕುರುಗಳು ಎದ್ದರೆ ಆಗ ನಮ್ಮ ಮನಸ್ಸಿನಲ್ಲಿ ಆಗುವ ವ್ಯಥೆಯನ್ನು ಹೇಳತರದು. ಗಾಯದ ಅಥವಾ ಹುಣ್ಣಿನ ಮೇಲೆ ನೊಣ, ಗುಂಗುರು-ಮುಂತಾದವುಗಳು ಕುಳಿತು ರಕ್ತವನ್ನೂ ಕೀವನ್ನೂ ಹೀರುತ್ತಿರುವುವು. ಆಗ ನಮ್ಮ ಶರೀರವು ನೋಡುವವರಿಗೂ ಅಸಹ್ಯವಾಗಿ ಕಾಣುವದು; ನಮಗಂತೂ ಶರೀರದ ಹೊರಗಡೆಯಲ್ಲಿ ಭೀಭತ್ಸವಿಕಾರ ದಿಂದಾಗುವ ಜಿಗುಪ್ಸೆಯೂ ಒಳಗಡೆಯಲ್ಲಿ ಆಗುತ್ತಿರುವ ನೋವಿನಿಂದಾಗುವ ಕ್ಲೇಶವೂ ಸಹಿಸುವದಕ್ಕೆ ಅಸಾಧ್ಯವಾಗಿರುವದು. ಅಲ್ಲವೆ? ಮನಸ್ಸಿನಲ್ಲಾಗುವ ಗಾಯಗಳು ಹೀಗೆಯೇ. ಅವೂ ನಮ್ಮ ಮನಸ್ಸಿಗೆ ಬೇಸರವನ್ನೂ ಕ್ಲೇಶವನ್ನೂ ಉಂಟುಮಾಡುತ್ತಿರುವವು, ನಮ್ಮ ಸುತ್ತಮುತ್ತ ಇರುವವರಿಗೂ ನಮ್ಮಿಂದ ಬಹಳ ಅಸಹ್ಯವಾದ ವೇದನೆಯಾಗಿರುವದು.

ಶರೀರದ ಗಾಯಗಳು ಯಾವ ಕಾರಣದಿಂದಲೇ ಆಗಿರಲಿ, ಅವಕ್ಕೆ ತಕ್ಕ ಚಿಕಿತ್ಸೆಯಾದರೆ ಕೆಲವು ದಿನಗಳಲ್ಲಿ ಮಾಯುವವು. ಮೇಲೆ ಹುಣ್ಣನ್ನು ಸರಿಯಾದ ದ್ರಾವಕದಿಂದ ತೊಳೆಯುವದು, ಹಿತವಾಗಿ ಶಾಖವನ್ನು ಕೊಡುವದು, ಆಮೇಲೆ ಮುಲಾಮನ್ನು ಬಳಿಯುವುದು-ಮುಂತಾದ ಚಿಕಿತ್ಸೆಗಳಿಂದ ನೋವು ಉಪಶಮನವಾಗುತ್ತಾ ಬರುವದು; ಒಳಗೆ ರೇಚನಕ್ಕೆ ಔಷಧವನ್ನು ತೆಗೆದುಕೊಳ್ಳುವುದು, ರಕ್ತಶುದ್ಧಿಗೆ ತಕ್ಕ ಔಷಧವನ್ನು ಸೇವಿಸುವುದು-ಮುಂತಾದ ಉಪಾಯಗಳಿಂದ ಶುದ್ಧರಕ್ತದಿಂದ ಹೊಸದಾಗಿ ಬೆಳೆದ ಚರ್ಮವು ಕಾಣಿಸಿಕೊಳ್ಳುವುದು. ಸ್ವಲ್ಪ ದಿನಗಳಲ್ಲಿಯೇ ಮೊದಲಿದ್ದ ಮೇಲಿನ ಪೊರೆಯು ಒಣಗಿ ಬಿದ್ದು ಹೋಗುವುದು, ಆಮೇಲೆ ದೇಹವು ಎಂದಿನಂತೆ ಕಾಂತಿಯುಕ್ತ ವಾಗಿಬಿಡುವುದು. ಇದರಂತೆಯೇ ಮನಸ್ಸಿನ ಗಾಯಗಳನ್ನೂ ತಿಳಿಯಬೇಕು. ಅವುಗಳು ಯಾವ ಕಾರಣದಿಂದಲೇ ಆಗಿರಲಿ, ಅವಕ್ಕೆ ತಕ್ಕ ಬಾಹ್ಯಚಿಕಿತ್ಸೆಯೂ ಅಂತರಚಿಕಿತ್ಸೆಯೂ ಆದರೆ ಅವೂ ಕೆಲವು ಕಾಲದಲ್ಲಿ ಮಾದುಬಿಡುವವು; ಆಗ ನಮಗೆ ಹರ್ಷವೂ ಉಲ್ಲಾಸವ ಆಗುವವಲ್ಲದೆ ಸುತ್ತಮುತ್ತಲಿನವರಿಗೂ ಮನಃಪ್ರಸನ್ನತೆಯು ದೊರಕುವದು.

ಮನಸ್ಸಿನ ಗಾಯಗಳಿಗೆ ಆಗಬೇಕಾದ ಹೊರಗಿನ ಚಿಕಿತ್ಸೆಗಳು ಯಾವುವು? ಗಾಯವನ್ನು ಮೈತ್ರಿಯೇ ಮುಂತಾದ ಶುಭವಾಸನೆಗಳ ನೀರಿನಿಂದ ತೊಳೆಯಬೇಕು, ಅದಕ್ಕೆ ಸತ್ಸಂಗದ ಶಾಖವನ್ನು ಕೊಡಬೇಕು, ಶಾಸ್ತ್ರಗಳ ಮತ್ತು ಮಹಾತ್ಮರ ಸದುಪದೇಶಗಳ ಮುಲಾಮನ್ನು ಸವರಬೇಕು. ಈ ಚಿಕಿತ್ಸೆಗಳನ್ನು ಒಂದೆರಡು ದಿನ ಮಾಡಿದರೆ ಸಾಲದು, ಬೇಸರವಿಲ್ಲದೆ ಒಂದೇ ಸಮನೆ ಮಾಡುತ್ತಲೇ ಇರಬೇಕು. ಹಾಗಾದರೆ ಮಾತ್ರ ಮನಸ್ಸಿನ ಗಾಯದ ನೋವು ಉಪಶಮನವಾಗುವುದು.

ಹುಣ್ಣಿಗೆ ಹೊರಗೆ ಎಷ್ಟೇ ಉಪಚಾರಗಳನ್ನು ಮಾಡಿದರೂ ಒಳಗೆ ರಕ್ತ ಶುದ್ಧಿಯಿಲ್ಲದಿದ್ದರೆ ಅದು ಬೇಗ ವಾಸಿಯಾಗುವದಿಲ್ಲ; ಒಂದು ವೇಳೆ ಅದು ವಾಸಿಯಾದರೂ ಮೈಮೇಲೆ ಮತ್ತೊಂದು ಹುಣ್ಣು ಬೇಗನೆ ಕಾಣಿಸಿಕೊಂಡುಬಿಡುತ್ತದೆ. ಮನಸ್ಸಿನ ಹುಣ್ಣೂ ಹೀಗೆಯೇ. ಅದಕ್ಕೆ ಬರಿಯ ಮೇಲುಪಚಾರಗಳನ್ನು ಮಾಡಿದರೆ ಸಾಲದು. ಒಳಗೂ ಶುದ್ಧಿಯಾಗುವಂತೆ ಉಪಾಯಗಳನ್ನು ಅನುಸರಿಸಬೇಕು. ವಿಷಯಚಿಂತನೆಯೂ ಭೋಗೇಚ್ಛೆಯೂ ಆಲಸ್ಯವೂ ನಿದ್ರೆಯೂ ಮೈಯುಂಡುಕೊಳ್ಳದಂತೆ ಅದಕ್ಕೆ ಪರಮೇಶ್ವರನ ಚಿಂತೆಯನ್ನು ಹತ್ತಿಸಬೇಕು, ಪರಮೇಶ್ವರನ ಆರಾಧನೆಯಿಂದಾಗುವ ಆನಂದದಲ್ಲಿ ಲಾಲಸೆಯನ್ನು ಬೆಳೆಸಬೇಕು, ಯಾವದಾದರೊಂದು ಸದ್ವಿಚಾರದಿಂದ ಯಾವಾಗಲೂ ಜಾಗರಣೆಯನ್ನು ಮಾಡಿಸಬೇಕು. ಈ ಬಗೆಯ ಆಂತರಚಿಕಿತ್ಸೆಗಳಿಂದ ಅದು ಶುದ್ಧವಾಗುವದು, ಪುಷ್ಟವಾಗುವದು; ಆಮೇಲೆ ಅದರ ಮೇಲಿದ್ದ ವಿಷಯವಾಸನೆಯು ಪೊರೆಯು ಹೊಪ್ಪಿನಂತೆ ತನಗೆ ತಾನೇ ಸುಲಿದುಕೊಂಡು ಉದುರಿಹೋಗುತ್ತದೆ.

ಶರೀರದ ಗಾಯವು ಮಾಯವಾಗುವದು ಹೇಗೋ ಹಾಗೆಯೇ ಮನಸ್ಸಿನ ಗಾಯವು ಮಾಯುವುದೂ ಅತ್ಯದ್ಭುತರಹಸ್ಯವಾಗಿರುತ್ತದೆ. ಅದು ಪರಮೇಶ್ವರನ ಮಹಾಮಾಯಾ ಶಕ್ತಿಯ ವಿಲಾಸವು. ಶರೀರವನ್ನೂ ಮನಸ್ಸನ್ನೂ ನಾವೆಲ್ಲರೂ ಆರೋಗ್ಯದಲ್ಲಿಟ್ಟುಕೊಂಡಿರಬೇಕೆಂಬುದು ಈಶ್ವರನ ಸಂಕಲ್ಪವು. ಆತನನ್ನು ಚಿತ್ತದಲ್ಲಿಟ್ಟುಕೊಂಡಂತೆಲ್ಲ ಶರೀರಾರೋಗ್ಯವೂ ಮನಸ್ಸಿನ ಆರೋಗ್ಯವೂ ಸ್ವಯಂಸಿದ್ಧವಾಗುವವು. ಇದು ಮನುಷ್ಯಪ್ರಯತ್ನದ ಫಲವಲ್ಲ, ಪರಮೇಶ್ವರನ ಮಹಾಪ್ರಸಾದವು. ಭವರೋಗದಿಂದಲೇ ಪಾರುಮಾಡುವ ಆ ಆದಿವೈದ್ಯನಿಗೆ ಶರೀರದ ನೋವಾಗಲಿ ಮನಸ್ಸಿನ ವ್ಯಥೆಯಾಗಲಿ ಒಂದು ಹೆಚ್ಚಿನ ವಿಷಯವಾದೀತೆ? ಎಂದಿಗೂ ಇಲ್ಲ. ಆತನಲ್ಲಿ ಪೂರ್ಣವಿಶ್ವಾಸವಿಟ್ಟು ಆತನ ಕಡೆಗೆ ತಿರುಗುವುದೊಂದು ಮಾತ್ರ ಅವಶ್ಯವು. **ಸಂ–8, 148**

## ಮನಶ್ಶಾಂತಿಗೆ ಸುಲಭೋಪಾಯ

ಮನಸ್ಸಿಗೆ ಗಡಿಬಿಡಿಯನ್ನುಂಟುಮಾಡುವ ವ್ಯವಹಾರಗಳಲ್ಲಿ–ರಾಜಕೀಯ ಚಳುವಳಿ, ಗುಂಪುಗುಂಪಾಗಿ ಸೇರಿಕೊಂಡು ವ್ಯರ್ಥವಾದ ಕಲಹಗಳಲ್ಲಿ ಭಾಗವನ್ನು ವಹಿಸುವದು, ಮನಸ್ಸಿಗೆ ಮಿತಿಮೀರಿದ ಆಶ್ಚರ್ಯ, ಅದ್ಭುತ ಘಟನೆ, ಪರದ್ವೇಷವರ್ಧಕವಾದ ಕಾಮಕ್ರೋಧೋತ್ತೇಜಕವಾಗಿರುವ ವರ್ತಮಾನಗಳನ್ನು ಓದುವದು, ಕೆಲಸವಿಲ್ಲದೆ ಸುಮ್ಮನೆ ಅಲೆದಾಡುವದು, ಪ್ರಯೋಜನವಿಲ್ಲದ ವಿನೋದಕ್ಕಾಗಿ ದೂರಪ್ರಯಾಣಮಾಡುವದು– ಇಂಥವುಗಳಲ್ಲಿ ಭಾಗವನ್ನು ವಹಿಸಬಾರದು. ಸಿನೆಮ, ನಾಟಕ–ಇಂಥ ಮನಸ್ಸನ್ನು ಉದ್ರೇಕಗೊಳಿಸುವ ದೃಶ್ಯಗಳನ್ನು ನೋಡುವ ಹವ್ಯಾಸವನ್ನಿಟ್ಟುಕೊಳ್ಳಬಾರದು. ಕುಡುಕತನ,

ಅತ್ಯಶನ, ನಿದ್ರೆಗೆಡುವದು, ಜೂಜಾಡುವದು-ಮುಂತಾದ ವ್ಯಸನಗಳನ್ನು ಜೀವನದ ಗುರಿಯಾಗಿ ಮಾಡಬಾರದು.

ಸದ್ವಿಚಾರಗಳನ್ನೂ ಸದಾಚಾರವನ್ನೂ ತಮ್ಮ ನಡೆನುಡಿಗಳಿಂದ ತೋರಿಸಿಕೊಡುವ ಮಹನೀಯರ ಸಂಗವನ್ನು ಮಾಡುವದರಲ್ಲಿ ಆಸಕ್ತನಾಗಿರಬೇಕು. ಭಕ್ತರಾದವರು ಸಿಕ್ಕಂತೆಲ್ಲ ಅವರಿಂದ ಪುರಾಣ, ಕೀರ್ತನೆ-ಮುಂತಾದವುಗಳನ್ನು ಕೇಳಿ ಆನಂದಿಸುವ ಅಭ್ಯಾಸವನ್ನು ಮಾಡಬೇಕು.

ಸ್ನಾನಸಂಧ್ಯಾಜಪಾದಿಕರ್ಮಗಳು, ದೇವತಾರ್ಚನೆ, ಭಗವಂತನ ಚಿಂತನೆ-ಇವುಗಳನ್ನು ತಕ್ಕಮಟ್ಟಿಗಾದರೂ ಮಾಡಬೇಕು. ಯಥಾಶಕ್ತಿಯಾಗಿ ದಾನಧರ್ಮಪರೋಪಕಾರಗಳಲ್ಲಿ ನಿರತನಾಗಿರಬೇಕು. ಭಗವಂತನ ನಾಮವನ್ನು ಎಡೆಬಿಡದೆ ಉಚ್ಚರಿಸುವ ಅಭ್ಯಾಸವನ್ನು ಮಾಡಬೇಕು. ಇಂಥವರಿಗೆ ಭಗವಂತನ ದಯೆಯಿಂದ ಅವಶ್ಯವಾಗಿ ಮನಃಶಾಂತಿಯು ದೊರಕುವದು, ಇಹಲೋಕದ ವ್ಯವಹಾರವು ಸುಖಮಯವಾಗುವದು, ಪರಗತಿಗೆ ಮಾರ್ಗವು ದೊರೆಯುವದು. **ಸಂ-31, 287**

# ಸತ್ಕಾಲಕ್ಷೇಪ

ಆಧ್ಯಾತ್ಮಿಕದೃಷ್ಟಿಯನ್ನು ಸಂಪಾದಿಸಿರುವವರು ಇಹಪರಗಳಲ್ಲಿ ಉತ್ತಮ ಗತಿಯನ್ನೂ ಪರಮಪುರುಷಾರ್ಥವಾದ ಮೋಕ್ಷವನ್ನೂ ಕೊಡುವ ಪ್ರವೃತ್ತಿನಿವೃತ್ತಿ ಧರ್ಮಗಳನ್ನು ಅಭ್ಯಾಸಮಾಡುವದಕ್ಕೆ ಶ್ರದ್ಧಾದರಗಳಿಂದ ಪ್ರಯತ್ನಿಸಬೇಕು. ಯಾರು ಅಂತರ್ಮುಖಿಗಳಾಗಿ ಸಾಧನನಿರತರಾಗಿರುವರೋ ಅವರ ಸಂನಿವೇಶವೆಲ್ಲ ಸಾತ್ತ್ವಿಕವಾಗುವದು. ಅವರ ಪ್ರೇರಣೆಯಿಂದ ಜನರು ಸ್ವಕರ್ಮದಲ್ಲಿ ನಿಃಸ್ವಾರ್ಥತೆಯಿಂದ ತೊಡಗುವರು. ದೇಶದವರ ಶಾರೀರಿಕ ಮಾನಸಿಕಶಕ್ತಿಯು ತೇಜಸ್ವಿಯಾಗುವದಕ್ಕೆ ದೇಶದಲ್ಲಿ ಅಧ್ಯಾತ್ಮವಿದ್ಯಾಸಾಧಕರೂ ಅಧ್ಯಾತ್ಮ ವಿದ್ಯಾನಿಷ್ಠರೂ ಇದ್ದಷ್ಟೂ ಒಳ್ಳೆಯದು. **ಸಂ-31, 258**

# ಸ್ಥೈರ್ಯ

ತಪ್ಪುಮಾಡುವದು ಮನುಷ್ಯನ ಸ್ವಭಾವ; ಅದಕ್ಕಾಗಿ ಹೆದರಬೇಕಾದ್ದಿಲ್ಲ. 'ಇಷ್ಟು ದಿನಗಳವರೆಗೂ ಪ್ರಯತ್ನವನ್ನು ಮಾಡಿದರೂ ನನಗೆ ಸಾಧನದಲ್ಲಿ ಸ್ಥೈರ್ಯವು ದೊರೆಯಲಿಲ್ಲ. ಮತ್ತೂಮತ್ತೂ ಅದೇ ಅಪರಾಧಗಳು ಆಗುತ್ತಿರುವವು; ಹೀಗಿರುವಲ್ಲಿ ನಮ್ಮಂಥವರಿಗೆ ಅಧ್ಯಾತ್ಮಸಾಧನವು ದಕ್ಕೀತೆ?' ಎಂದು ನಿರಾಶನಾಗಬಾರದು. 'ಇದುವರೆಗೆ ತಪ್ಪಾಯಿತು. ಮುಂದಕ್ಕೆ ಸರಿಪಡಿಸಿಕೊಳ್ಳುವೆನು' ಎಂದು ಧೈರ್ಯವನ್ನು ತಂದುಕೊಳ್ಳಬೇಕು.

**'ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ । ತ್ರಾಹಿ ಮಾಂ ಕೃಪಯಾ ದೇವ ಶರಣಾಗತವತ್ಸಲ ॥'** ನಾನು ಪಾಪಿ, ಪಾಪವನ್ನು ಮಾಡುತ್ತಿರುವೆನು. ಪಾಪವು ನನ್ನ ಸ್ವಭಾವವಾಗಿಬಿಟ್ಟಿದೆ, ಪಾಪದಲ್ಲಿಯೇ ಹುಟ್ಟಿಬೆಳೆಯುತ್ತಿದ್ದೇನೆ; ದೇವ, ಕೃಪೆಯಿಂದ ನನ್ನನ್ನು ಕಾಪಾಡು, ನೀನು ಶರಣಾಗತವತ್ಸಲನಲ್ಲವೆ?' ಎಂಬರ್ಥದ ಶ್ಲೋಕವನ್ನು ದೇವರಲ್ಲಿ ಹೇಳಿಕೊಳ್ಳುತ್ತಲೇ ಇರುವೆವಲ್ಲವೆ? ಇಲ್ಲಿ ತಿಳಿದುಕೊಳ್ಳಬೇಕಾದ ಒಂದು ರಹಸ್ಯವಿದೆ; 'ನಾನು ಪಾಪಿ' ಎಂದು ಹಿಂದೆ ಮಾಡಿದ ಪಾಪವನ್ನು ಕುರಿತು ಪಶ್ಚಾತ್ತಾಪಪಡುವದನ್ನು ಬಿಟ್ಟುಬಿಡಬೇಕು. 'ನಾನು ಪಾಪವನ್ನು ಮಾಡಿರುವದು ನಿಜ; ಆದರೆ ದೇವ, ನಿನ್ನ ಕೃಪೆಯಿದ್ದರೆ ಇನ್ನು ಮಾಡುವದಿಲ್ಲ !' ಎಂದು ಈಶ್ವರನಲ್ಲಿ ತಪ್ಪನ್ನು ಒಪ್ಪಿಕೊಂಡು ಅವನ ಸಹಾಯವನ್ನು ಕೋರಬೇಕು. 'ಇನ್ನುಮೇಲೆ ಸಾಧನವು ಅವಶ್ಯವಾಗಿ ಸಾಗುತ್ತದೆ' ಎಂಬ ನಂಬಿಕೆಯಿಂದ ತಪ್ಪಿಗೆ ವಿರುದ್ಧವಾದ ಒಳ್ಳೆಯ ಗುಣವನ್ನು ಅಭ್ಯಾಸಮಾಡುವದಕ್ಕೆ ನಿಲ್ಲಬೇಕು.

ತಪ್ಪುಮಾಡುವ ಮನಸ್ಸುಬಂದರೆ ಕೂಡಲೆ 'ದೇವ, ಇಗೊ, ನೀನು ಸಹಾಯ ಮಾಡಬೇಕಾದದ್ದು ಇಲ್ಲಿಯೇ; ನಾನು ಸನ್ಮಾರ್ಗಕ್ಕೆ ಹೊರಡುವೆನು, ದಾರಿಯಲ್ಲಿ ಎಡವದಂತೆ ಕೈಹಿಡಿಯುವದು ನಿನ್ನ ಮೇಲೆ ಬಿದ್ದ ಭಾರ !' ಎಂದು ಮನಸ್ಸಿನಲ್ಲಿ ಕರುಣಾಮಯನಾದ ಭಗವಂತನನ್ನು ಪ್ರಾರ್ಥಿಸಬೇಕು.

ತಪ್ಪಿಗೆ ಮದ್ದಾಗಿರುವ ಸತ್ಸಾಧನವನ್ನು ಹಿಡಿಯುವದು, ಅದನ್ನು ಸಾಗಿಸಿಕೊಡುವಂತೆ ದೇವರನ್ನು ಬೇಡಿಕೊಳ್ಳುವದು–ಇವುಗಳನ್ನು ಎಡೆಬಿಡದೆ ಮಾಡುತ್ತಿರಿ. ಆದ ತಪ್ಪುಗಳನ್ನು ಮನಸ್ಸಿಗೆ ತಂದುಕೊಳ್ಳದೆ ಪ್ರತಿಪಕ್ಷಸಾಧನೆಯನ್ನೇ ಬಲಗೊಳಿಸಿಕೊಳ್ಳಿರಿ. ಭಗವಂತನ ದಯೆಯಿಂದ ನಿಮಗೆ ಸಾಧನವು ಅವಶ್ಯವಾಗಿ ಅಳವಡುವದು. **ಸಂ–32, 74**

## ಶಾಂತಿ

ಶಾಂತಿಯು ಎಲ್ಲರಿಗೂ ಬೇಕು. ನಮ್ಮ ಮನಸ್ಸು ಚದರಬಾರದು, ಹರಿದಾಡಬಾರದು, ಅಂಜಿಕೆಯಿಂದ ಬೆದರುತ್ತಿರಬಾರದು; ಸಮಾಧಾನದಿಂದ ತಕ್ಕಡಿಯಂತೆ ಏರುಪೇರಿಲ್ಲದೆ ಇರಬೇಕು–ಎಂಬುದು ನಮ್ಮೆಲ್ಲರಿಗೂ ಇಷ್ಟ. ನಮಗೆ, ನಮ್ಮ ಮನೆಯವರಿಗೆ, ನಮ್ಮ ಊರಿನವರಿಗೆ, ನಮ್ಮ ದೇಶದವರಿಗೆ, ಇಷ್ಟೇಕೆ, ಇಡಿಯ ಭೂಮಂಡಲದ ನಿವಾಸಿಗಳಿಗೆಲ್ಲ ಶಾಂತಿಯು ಬರಲಿ!–ಎಂದೇ ನಮ್ಮಗಳ ಹಾರೈಕೆ. ಶಾಂತಿ ಎಂಬುದು ಅಷ್ಟು ಬೆಲೆಯುಳ್ಳ ಒಡವೆ !

ಆದರೆ ಶಾಂತಿಯನ್ನುಂಟುಮಾಡಿಕೊಳ್ಳುವದಕ್ಕೆ ನಾವು ಮಾಡುತ್ತಿರುವ ಪ್ರಯತ್ನವು ಶಾಂತಿಯ ಭಂಗವನ್ನು ತರುವದಕ್ಕೇ ತಕ್ಕದ್ದಾಗಿರುತ್ತದೆ. ಶಾಂತಿಗೆಂದೇ ನಾವು

ಪ್ರಯತ್ನಮಾಡುತ್ತಿರುವೆವು; ಆದರೆ ನಮ್ಮ ಪ್ರಯತ್ನದಿಂದ ಜಗಳ, ಕಲಹ, ಮನಸ್ಸಿನ ಅಸಮಾಧಾನ-ಇವೇ ಹೆಚ್ಚುತ್ತಿರುವವು. ಶಾಂತಿಯನ್ನುಂಟುಮಾಡಬೇಕೆಂಬವರು ಮೊದಲು ತಾವು ಶಾಂತಿಯನ್ನು ಸಂಪಾದಿಸಿಕೊಂಡಿರಬೇಕು. ಆದರೆ ಈ ಮುಖ್ಯವಿಚಾರವನ್ನು ಒತ್ತಟ್ಟಿಗೆ ತಳ್ಳಿ, ನಮ್ಮ ಮನಸ್ಸಿನಲ್ಲಿ ಕಳವಳವು ಒಂದಿಷ್ಟೂ ಕಡಿಮೆಯಾಗಿಲ್ಲವೆಂಬುದನ್ನು ಕಡೆಗಣಿಸಿ, ನಾವು ಎಲ್ಲರನ್ನೂ ಶಾಂತಿಯಿಂದಿರಬೇಕೆಂದು ಒತ್ತಾಯಮಾಡುತ್ತಿರುವೆವು!

ಶಾಂತಿಯನ್ನು ನಿಜವಾಗಿ ಸಂಪಾದಿಸುವದಕ್ಕೆ ಒಂದೇ ಒಂದು ಮಾರ್ಗವಿದೆ. ಶಾಂತನೂ ಶಿವನೂ ಅದ್ವೈತನೂ ಆದ ಪರಮಾತ್ಮನ ಕಡೆಗೆ ತಿರುಗುವದೇ ಆ ಮಾರ್ಗ. ನಮ್ಮಲ್ಲಿ ಈ ಪರಮಾತ್ಮನ ನೆನಹಿನ ಶಾಂತಿಯು ನೆಲಸುವವರೆಗೆ ನಮ್ಮ ಮನೆಯಲ್ಲಿ ಎಂದಿಗೂ ಇಂಥ ಶಾಂತಿಯು ತೋರಿಕೊಳ್ಳಲಾರದು; ಆವರೆಗೆ ನಮ್ಮ ವ್ಯವಹಾರದಲ್ಲಿ ಕಾಣಬರುವ ಜನರಲ್ಲಿ ಎಂದಿಗೂ ಶಾಂತಿಯು ಕಾಣಿಸಿಕೊಳ್ಳಲಾರದು. ನಿಮ್ಮ ಸುತ್ತಮುತ್ತಲೂ ಶಾಂತಿಯೇ ನೆಲಸಿರಬೇಕೆಂಬ ಕುತೂಹಲವೂ ತವಕವೂ ಹವಣಿಕೆಯೂ ನಿಮಗೆ ಇದೆಯೆ? ಹಾಗಾದರೆ ಮೊಟ್ಟಮೊದಲು ನಿಮ್ಮ ಹೃದಯದಲ್ಲಿ ಪರಮೇಶ್ವರನ ಶಾಂತಿಯನ್ನು ತಂದುಕೊಳ್ಳಿರಿ. "ಪರಮೇಶ್ವರನು ಎಲ್ಲರ ಹೃದಯದಲ್ಲಿಯೂ ನೆಲಸಿರುವ ಶಾಂತಮೂರ್ತಿಯು, ಆತನನ್ನು ನಾನು ಆರಾಧಿಸುವೆನು. ಯಾರೊಬ್ಬರಿಗೂ ನೆಮ್ಮದಿಗೆ ಭಂಗವನ್ನು ತರದಂತೆ ಪ್ರಯತ್ನಿಸು ವೆನು" ಎಂಬ ಶುಭ ಸಂಕಲ್ಪವನ್ನು ಮಾಡಿಕೊಳ್ಳಿರಿ. "ಶಾಂತನಾದ ಶಿವಸ್ವರೂಪನಾದ ಪರಮಾತ್ಮನೆ, ನನಗೆ ಮತ್ತು ನನ್ನ ಸುತ್ತಮುತ್ತಿನ ಎಲ್ಲರಿಗೂ ಶಾಂತಿಯನ್ನು ಅನುಗ್ರಹಿಸು!" ಎಂದು ಮನಮುಟ್ಟಿ ಪ್ರಾರ್ಥಿಸಿಕೊಳ್ಳಿರಿ. ಸಂ- 16, 14

# ವೈರಾಗ್ಯ

ಮನೆಮಾರನ್ನು ಬಿಟ್ಟು ಓಡುವದು ವೈರಾಗ್ಯವಲ್ಲ. ಮೈಮೇಲಿನ ಬಟ್ಟೆಗಳನ್ನು ತೆಗೆದು ಹಾಕುವದು ವೈರಾಗ್ಯವಲ್ಲ. ಮೈಗೆಲ್ಲ ಬೂದಿಯನ್ನು ಬಳಿದುಕೊಳ್ಳುವದು, ಅಥವಾ ಪಟ್ಟೆಪಟ್ಟೆಯ ನಾಮಗಳನ್ನಿಟ್ಟುಕೊಳ್ಳುವದು ವೈರಾಗ್ಯವಲ್ಲ. ರುಚಿಯಾದ ಊಟವನ್ನು ತಿನ್ನದೆಬಿಟ್ಟರೆ ವೈರಾಗ್ಯವಲ್ಲ. ಎಲ್ಲರನ್ನೂ ಬಿಟ್ಟು ತಾನೇ ಒಂದು ಏಕಾಂತಸ್ಥಲದಲ್ಲಿ ಕುಳಿತರೆ ವೈರಾಗ್ಯವಾಗುವದಿಲ್ಲ. ಪ್ರಪಂಚವು ಅಸ್ಥಿರ, ಇದೆಲ್ಲ ಮಿಥ್ಯೆ, ಮಾಯೆ-ಎಂದು ಉದ್ದುದ್ದನೆಯ ವೇದಾಂತದ ಮಾತುಗಳನ್ನು ಬಳಸುತ್ತಿರುವದೂ ವೈರಾಗ್ಯವಲ್ಲ. ಯಾವ ದಾನವನ್ನೂ ಹಿಡಿಯುವದಿಲ್ಲವೆಂಬ ವ್ರತವನ್ನು ಧರಿಸಿದ ಮಾತ್ರದಿಂದ ವೈರಾಗ್ಯವು ದಕ್ಕುವದಿಲ್ಲ. ಗಡ್ಡವನ್ನು ಬೆಳೆಯಿಸುವದರಿಂದಲಾಗಲಿ ತಲೆಯನ್ನೆಲ್ಲ ಬೋಳಿಸಿಕೊಳ್ಳುವದರಿಂದಾಗಲಿ ವೈರಾಗ್ಯವನ್ನು ಸಂಪಾದಿಸುವದಕ್ಕೆ ಆಗಲಾರದು. ವೈರಾಗ್ಯವು ಶರೀರಕ್ಕೆ ಸೇರಿದ್ದಲ್ಲ, ಮನಸ್ಸಿಗೆ ಸೇರಿದ್ದು. ವಿಷಯಗಳಿಂದ ಮನಸ್ಸು ರಂಗು ರಂಗಾಗುತ್ತಿರುವದು ರಾಗವು, ಹಾಗಿಲ್ಲದಿರುವದೇ ವೈರಾಗ್ಯವು. ಸಂ-16, 59

# ವೇದಾಂತದ ಅಭ್ಯಾಸಕ್ರಮಗಳು

ವೇದಾಂತಸಿದ್ಧಾಂತಕ್ಕೆ ಮೂಲವು ಉಪ ನಿಷತ್ತುಗಳು. ಉಪನಿಷತ್ತುಗಳಿಗೆ 'ವೇದಾಂತಗಳು' ಎಂಬ ಹೆಸರೂ ಇದೆ. ಆದ್ದರಿಂದ ಉಪನಿಷತ್ತುಗಳಿಂದ ಹೊರಟಿರುವ ಸಿದ್ಧಾಂತವನ್ನು ವೇದಾಂತ ಎಂದು ಕರೆಯುವ ವಾಡಿಕೆಯಾಗಿದೆ.

ಆದರೆ ವೇದಾಂತವನ್ನು ಉಪನಿಷತ್ತುಗಳ ಮೂಲಕವೇ ಅಭ್ಯಾಸಮಾಡಬೇಕೆಂಬ ನಿಯಮವಿಲ್ಲ; ಅದು ಎಲ್ಲರಿಗೂ ಸಾಧ್ಯವೂ ಅಲ್ಲ. ವೇದಾಂತ ಸಿದ್ಧಾಂತದ ಬೀಜವು ಉಪನಿಷತ್ತುಗಳಲ್ಲಿದ್ದರೂ ಆ ಉಪನಿಷತ್ತುಗಳಲ್ಲಿ ನಂಬಿಕೆಯಿಟ್ಟವರಿಗೇ ವೇದಾಂತವು ತಿಳಿಯುವದೆಂಬ ಭರವಸೆಯೂ ಇಲ್ಲ. ಎಷ್ಟೋ ಜನರು ಉಪನಿಷತ್ತುಗಳನ್ನು ಬಾಯಿಗೆ ಕಲಿತುಕೊಂಡಿರುತ್ತಾರೆ; ಅವುಗಳ ವಾಕ್ಯಗಳ ಅರ್ಥವನ್ನು ತಿಳಿದುಕೊಂಡಿರುತ್ತಾರೆ. ಆದಮಾತ್ರದಿಂದ ಅವರಿಗೆ ವೇದಾಂತವು ಮನದಟ್ಟಾಯಿತೆನ್ನುವದಕ್ಕೆ ಬರುವದಿಲ್ಲ. ಉಪನಿಷತ್ತುಗಳು ವೇದಭಾಗಗಳು; ಅವನ್ನು ಅಭ್ಯಾಸಮಾಡುವದಕ್ಕೆ ಎಲ್ಲರಿಗೂ ಅಧಿಕಾರ ವಿಲ್ಲ-ಎಂದುಮುಂತಾಗಿ ಒಣಜಗಳಗಳನ್ನು ಮಾಡುತ್ತಾ ಕಾಲಹರಣಮಾಡುತ್ತಿರುವ ಉಪನಿಷದ್ಗ್ರಂಥದ ಆರಾಧಕರಾದ ಪುಸ್ತಕವೇದಾಂತಿಗಳು ಅಲ್ಲಲ್ಲಿ ಕಂಡುಬರುತ್ತಾರೆ. ಅವರು ನಿಜವಾದ ವೇದಾಂತಿಗಳಲ್ಲ.

ವೇದಾಂತವನ್ನು ತಿಳಿಸುವದಕ್ಕೆ ಹಲವು ಭಾಷ್ಯಗಳು ಈಗ ಹೊರಕ್ಕೆ ಬಂದಿರುತ್ತವೆ. ಚೆನ್ನಾಗಿ ಓದುವದಕ್ಕೆ ಬರುವವರಿಗೆ ಅವು ಅರ್ಥವಾಗಲೂಬಹುದು. ಆದರೂ ಪೂರ್ವಪಕ್ಷ, ಸಿದ್ಧಾಂತ, ಮತಾಂತರಖಂಡನೆ-ಎಂದು ಭಾಷ್ಯಗಳ ಆಧಾರದಮೇಲೆ ಹೊಡೆದಾಡುತ್ತಾ ಇರುವ ಭಾಷ್ಯವೇದಾಂತಿಗಳೂ ಕಾಣಬರುತ್ತಿದ್ದಾರೆ. ಅವರೂ ನಿಜವಾದ ವೇದಾಂತಿಗಳಲ್ಲ.

ಇನ್ನು ಕೆಲವರು ವೇದಾಂತದ ಯಾವದಾದರೊಂದು ಸಂಸ್ಕೃತ ಅಥವಾ ದೇಶ ಭಾಷೆಯ ಪ್ರಕರಣವನ್ನು ಹಲವು ಬಾರಿ ಓದಿ ಅದರಲ್ಲಿರುವ ವಿಚಾರಸರಣಿಯನ್ನು ಗಟ್ಟಿಮಾಡಿಕೊಂಡಿರುತ್ತಾರೆ. ಆ ಗ್ರಂಥದಲ್ಲಿರುವ ಅಧ್ಯಾಯಗಳು, ಅವುಗಳಲ್ಲಿರುವ ಮುಖ್ಯ ಮುಖ್ಯಶ್ಲೋಕಗಳು, ಅಲ್ಲಿರುವ ಕೆಲವು ವಾದಗಳು-ಇವನ್ನು ಗಟ್ಟಿ ಮಾಡಿಕೊಂಡಿರುತ್ತಾರೆ. ಅವರು ಎಷ್ಟೋ ಸಲ ಆ ಗ್ರಂಥಗಳನ್ನು ಜನರಿಗೆ ಓದಿಹೇಳಿ ಜನರ ಮೆಚ್ಚಿಗೆಗೆ ಪಾತ್ರರಾಗಿರುತ್ತಾರೆ. ಆದರೆ ಅವರಿಗೆ ಬೇರೊಂದು ಪ್ರಕರಣದಲ್ಲಿ ನಿರೂಪಿಸಿರುವ ವಿಚಾರ ಕ್ರಮವು ಒಗ್ಗುವದಿಲ್ಲ. ತಮ್ಮಲ್ಲಿರುವ ಪ್ರಕರಣವು ಅಸಮಾನವೆಂದು ವಾದಿಸುವದರಲ್ಲಿಯೇ ಅವರ ಕಾಲವು ಕಳೆದುಹೋಗುತ್ತಿರುತ್ತದೆ. ಅವರೂ ನಿಜವಾದ ವೇದಾಂತಿಗಳಲ್ಲ.

ಇನ್ನು ಕೆಲವರು ಪ್ರಾಣಾಯಾಮ, ಮಂತ್ರ ತಂತ್ರ, ಕೆಲವು ಕೀರ್ತನಗಳು-ಇವುಗಳ ಪ್ರದರ್ಶನಮಾಡುತ್ತಿರುತ್ತಾರೆ. ಅವರಲ್ಲಿ ಕೆಲವರು ಸಮಾಧಿಯನ್ನು ಅನುಭವಿಸಿದ್ದೇವೆಂದೂ

ಅನುಭವವಿಲ್ಲದ ಬಾಯಿವೇದಾಂತವು ಯಾವ ಪ್ರಯೋಜನಕ್ಕೂ ಬಾರದೆಂದೂ ಹೇಳುತ್ತಿರುತ್ತಾರೆ. ಅಂಥವರಿಗೆ ಹೆಚ್ಚಾಗಿ ಶಿಷ್ಯಸಂಗ್ರಹವೂ ಆಗುತ್ತಿರುತ್ತದೆ. ಆದರೆ ಅದೇನೂ ವೇದಾಂತವಲ್ಲ.

ವೇದಾಂತವನ್ನು ಹಲವು ತರ್ಕಗಳಿಂದ ಸಿದ್ಧಮಾಡುವವರು ಕೆಲವರು ಇರುತ್ತಾರೆ. ಅವರಿಗೆ ತರ್ಕಶಾಸ್ತ್ರದ ಬಲವು ಚೆನ್ನಾಗಿರುತ್ತದೆ; ಅಥವಾ ತರ್ಕದ ಪ್ರಮಾಣ, ಪ್ರಮೇಯ, ಲಕ್ಷಣ, ಲಕ್ಷ್ಯ, ಅನುಮಾನ, ವ್ಯಾಪ್ತಿ-ಮುಂತಾದ ಪಾರಿಭಾಷಿಕಶಬ್ದಗಳ ಪರಿಚಯವಿರುತ್ತದೆ. ಜನರನ್ನು ವಾದದಲ್ಲಿ ಬಾಯಿಮುಚ್ಚಿಸುವದರಲ್ಲಿ ಅವರು ಗಟ್ಟಿಗರು. ಆದರೆ ಅವರೂ ವೇದಾಂತಿಗಳಲ್ಲ.

ವೇದಾಂತವನ್ನು ಅಭ್ಯಾಸಮಾಡಬೇಕೆನ್ನುವವರಿಗೆ ಇಂದ್ರಿಯಾರ್ಥಗಳ ಆಶೆಯು ಕಡಿಮೆಯಾಗಿರಬೇಕು. ಮನೋವಾಕ್ಕಾಯಗಳು ಹಿಡಿತದಲ್ಲಿರಬೇಕು, ಪರಮಾರ್ಥವನ್ನು ಈ ಜನ್ಮದಲ್ಲಿಯೇ ಕಂಡು ಕೃತಾರ್ಥನಾಗಬೇಕೆಂಬ ಹಂಬಲು ಇರಬೇಕು. ಅವರಿಗೆ ಇಂದ್ರಿಯಜ್ಞಾನ, ಅಂತಃಕರಣದಿಂದ ಆಗುವ ವಿಚಾರಾತ್ಮಕವಾದ ಜ್ಞಾನ-ಇವೆರಡೇ ಅಲ್ಲದೆ ಇವೆರಡಕ್ಕಿಂತಲೂ ಬೇರೆಯಾದ ಸಾಕ್ಷ್ಯನುಭವದ ಬೆಲೆಯು ತಿಳಿದಿರಬೇಕು, ತತ್ತ್ವವನ್ನು ಸಾರ್ವತ್ರಿಕಾನುಭವದ ಆಧಾರದಿಂದ ಬೋಧಿಸಬಲ್ಲ ಗುರುವಿನಲ್ಲಿ ಶ್ರದ್ಧಾಭಕ್ತಿಗಳಿರಬೇಕು. ಮಂತ್ರ, ತಪಸ್ಸು, ಹಠಯೋಗ, ಸಮಾಧಿ-ಮುಂತಾದ ವ್ಯಕ್ತಿಪ್ರಧಾನವಾದ ಅನುಭವಗಳಲ್ಲಿ ಶ್ರದ್ಧಾತಿರೇಕವಿರಬಾರದು. ತತ್ತ್ವವನ್ನು ನೇರಾಗಿ ಅರಿತುಕೊಳ್ಳಬೇಕೆಂಬ ತಹತಹವಿರಬೇಕು, ಇಂಥವರೇ ವೇದಾಂತವಿಚಾರಕ್ಕೆ ಅರ್ಹರು.

ವೇದಾಂತವಿಚಾರಕ್ಕೆ ಗ್ರಂಥಗಳಾಗಲಿ ಸಾಧನಗಳಾಗಲಿ ಅವಶ್ಯವಿಲ್ಲವೆಂದು ತಿಳಿಯ ಬಾರದು. ಅವಶ್ಯವಾಗಿ ಅವುಗಳನ್ನು ಉಪಯೋಗಿಸಿಕೊಳ್ಳಬೇಕು. ಆದರೆ ತತ್ತ್ವ ವಿಚಾರವನ್ನು ಮೇಲೆ ಹೇಳಿದ ಇಂದ್ರಿಯಾನುಭವ ಮತ್ತು ತರ್ಕಪ್ರಧಾನವಾದ ವಿಚಾರ-ಇವೆರಡನ್ನೂ ಮೀರಿರುವ ಸಾರ್ವತ್ರಿಕಾನುಭವಕ್ಕೆ ಹೆಚ್ಚಿಗೆಯ ಬೆಲೆಯನ್ನು ಕೊಟ್ಟೇ ಮಾಡಬೇಕು.

ಸ್ವವರ್ಣಾಶ್ರಮಧರ್ಮಗಳ ಆಚರಣೆಯನ್ನು ಮಾಡುತ್ತಾ ಪರಮೇಶ್ವರನಿಗೆ ಅದನ್ನು ಆರಾಧನೆಯಾಗಿ ಮಾಡಿಕೊಳ್ಳುವದು, ಸದ್ಗುರುವಿನಸೇವೆಯನ್ನು ಮಾಡಿ ತತ್ತ್ವವನ್ನು ಶ್ರವಣಮಾಡುವದು, ಆತನ ಉಪದೇಶಗಳನ್ನು ಕಿವಿಗೊಟ್ಟುಕೇಳಿ ಮನನಮಾಡಿ ಅನುಭವಕ್ಕೆ ತಂದುಕೊಳ್ಳುವದಕ್ಕೆ ಯತ್ನಿಸುವದು-ಇವೇ ವೇದಾಂತವಿಚಾರಕ್ಕೆ ಬೇಕಾದ ಮುಖ್ಯಸಾಧನ ಸಾಮಗ್ರಿಗಳು.

## ಉಪಾಸನೆ ಎಂದರೇನು?

ಮನಸ್ಸು ಭಗವಂತನಿಗೆ ತೀರಹತ್ತಿರವಾಗಿ ಆತನಲ್ಲಿಯೇ ಕುಳಿತುಬಿಡುವದೇ ಉಪಾಸನೆಯು. ಸಾಮಾನ್ಯವಾಗಿ ಜನರಿಗೆ ತಮ್ಮ ಶರೀರ, ಇಂದ್ರಿಯ, ಪ್ರಾಣ- ಇವುಗಳಿಗಿಂತ ಹೆಚ್ಚಿನದು ಮತ್ತೆ ಬೇರೆ ಯಾವದೂ ಕಾಣುತ್ತಿರುವದಿಲ್ಲ. ಆದ್ದರಿಂದ ಆ ಶರೀರಾದಿಗಳಿಗೆ ಮಧುರವಾಗಿ ತೋರುವ ಭೋಗಗಳನ್ನು ಕೊಡುವವೆಂದು ಮೋಹದಿಂದ ನಂಬಿರುವ ವಿಷಯಗಳು ಎದುರಿಗಿರಲಿ, ಇಲ್ಲದಿರಲಿ, ಅವುಗಳಲ್ಲಿಯೇ ಅವರ ಮನಸ್ಸು ಕುಳಿತುಕೊಂಡುಬಿಟ್ಟಿರುತ್ತದೆ. ಈ ಶರೀರಾದಿಗಳೂ ಅವುಗಳಿಗೆ ಭೋಗವನ್ನು ಕೊಡುವವೆಂಬ ವಿಷಯಗಳೂ ಕನಸಿನಂತೆ ಅಥವಾ ಮಾಯೆಯಂತೆ ಕ್ಷುಲ್ಲಕವಾಗಿ ಕಂಡು ಪರಮಾತ್ಮನ ಬಳಿಗೇ ಮನಸ್ಸು ಧಾವಿಸಿದರೆ, ಆತನಲ್ಲಿಯೇ ಎಂದೆಂದಿಗೂ ನೆಲೆನಿಂತರೆ ಅದೇ ಉಪಾಸನೆ. **ಸಂ–27, 257**

## ವೇದಶಾಸ್ತ್ರಗಳನ್ನು ಹೇಗೆ ಉಪಯೋಗಿಸಬೇಕು ?

ಶಾಸ್ತ್ರವನ್ನು ನಿತ್ಯವೂ ಓದಬೇಕು, ಅದರಲ್ಲಿರುವ ಉಪದೇಶವನ್ನು ಅರಿತುಕೊಳ್ಳಬೇಕು. ಶಾಸ್ತ್ರದ ಉಪದೇಶವು ಮನಸ್ಸಿನ ನೀಚಪ್ರವೃತ್ತಿಯನ್ನು ತಪ್ಪಿಸುತ್ತದೆ; ಮನಸ್ಸಿಗೆ ಪಾವಿತ್ರ್ಯವನ್ನುಂಟುಮಾಡುತ್ತದೆ, ಮನಸ್ಸನ್ನು ಮೇಲುಮಟ್ಟಕ್ಕೇರಿಸುತ್ತದೆ.

ಶಾಸ್ತ್ರವನ್ನು ಓದಿದರೆ ಸಾಲದು, ಅರ್ಥವನ್ನು ತಿಳಿದುಕೊಂಡರೆ ಸಾಲದು; ಅದರಲ್ಲಿ ಹೇಳಿರುವಂತೆ ನಡೆಯುವದಕ್ಕೆ ಪ್ರಯತ್ನಿಸಬೇಕು. ಶಾಸ್ತ್ರದಂತೆ ನಡೆಯುವ ಶಿಷ್ಟರನ್ನು ಸೇರಿಸಿ ಸತ್ಕರ್ಮವನ್ನು ಮಾಡುವ ಬಗೆಯನ್ನು ಅವರಿಂದ ಕಲಿತುಕೊಳ್ಳಬೇಕು; ಅದರಂತೆ ತಾವೂ ಆಚರಿಸಬೇಕು.

ಶಾಸ್ತ್ರವನ್ನು ವಾದಕ್ಕೆ ಎಂದಿಗೂ ಉಪಯೋಗಿಸಬಾರದು. ಅದು ಪರಮೇಶ್ವರನ ಅಪ್ಪಣೆ ಎಂದು ಭಾವಿಸಬೇಕು. ನಾವೆಲ್ಲರೂ ಮುಂದುವರಿಯಬೇಕು, ಶಾಂತಿಯನ್ನು ಪಡೆಯಬೇಕು ಎಂಬುದೇ ಶಾಸ್ತ್ರದ ಉದ್ದೇಶ. ವಾದದಿಂದ ಎಂದಿಗೂ ಮನಃಶಾಂತಿ ಯುಂಟಾಗುವದಿಲ್ಲ. ಶಾಸ್ತ್ರದಲ್ಲಿ ಹೇಳಿರುವಂತೆ ಮನಮುಟ್ಟಿ ಆಚರಿಸಬೇಕು; ಅದರಿಂದಲೇ ಲಾಭವಾಗುತ್ತದೆ. ಶಾಸ್ತ್ರವು ಪರಮೇಶ್ವರನಿಂದ ಬಂದಿರುತ್ತದೆ. ಅದು ಪರಮೇಶ್ವರನ ರೂಪಾಂತರವೇ ಆಗಿರುತ್ತದೆ. ಶಾಸ್ತ್ರವನ್ನು ಗೌರವಿಸುವದು, ಅದರಂತೆ ನಡೆಯುವದು, ಪರಮೇಶ್ವರನಿಗೆ ಕರ್ಮದ ಫಲವನ್ನು ಅರ್ಪಿಸುವದು– ಇದೇ ಶಾಸ್ತ್ರದ ಸದುಪಯೋಗವು.

## ಅಂತಃಕರಣಕ್ಕೆ ಸಂಸ್ಕಾರದ ಆವಶ್ಯಕತೆ

ಅಧ್ಯಾತ್ಮವಿಷಯಕವಾದ ಪುಸ್ತಕವನ್ನು ಓದಿ ಪಙ್ಕ್ತಿಗಳ ಅರ್ಥವನ್ನು ಮಾಡಿ ಕೊಳ್ಳುವದು, ಮತ್ತೊಬ್ಬರಿಗೆ ಹೇಳಿಕೊಡುವದು, ಉಪನ್ಯಾಸಮಾಡುವದು, ವಾದ ವಿವಾದಗಳನ್ನು ನಡೆಯಿಸುವದು-ಇವೇ ಮುಂತಾದವುಗಳು ಅಧ್ಯಾತ್ಮಸಾಧನದ ಮುಖ್ಯವಾದ ಗುರುತೆಂದು ಭಾವಿಸಬಾರದು. ಅಧ್ಯಾತ್ಮವಿಚಾರವು ಮುಖ್ಯವಾಗಿ ನಮ್ಮ ಅಂತಃಕರಣಕ್ಕೆ ಸಂಬಂಧಪಟ್ಟಿದ್ದು; ಅಂತಃಕರಣವು ಆತ್ಮನ ಕಡೆಗೆ ತಿರುಗುವ ಮತ್ತು ಆತ್ಮನ ಅನುಭವಕ್ಕೆ ಸಜ್ಜಾಗುವ ಸಂಸ್ಕಾರವನ್ನು ಮೊದಲು ಪಡೆದುಕೊಳ್ಳಬೇಕು.

ಅಧ್ಯಾತ್ಮತತ್ತ್ವವನ್ನು ಬೋಧಿಸಬಲ್ಲ ಸದ್ಗುರುಗಳ ಸೇವೆಯು ಈ ವಿಷಯದಲ್ಲಿ ಬಹುಮುಖ್ಯವಾದ ಸಾಧನವಾಗಿರುತ್ತದೆ. ಸದ್ಗುರುಗಳೆಂದರೆ ಅಧ್ಯಾತ್ಮತತ್ತ್ವದಲ್ಲಿ ನೆಲೆನಿಂತು ಶಾಂತ್ಯಾದಿಗುಣಗಳಿಂದ ಕೂಡಿರುವ ಮಹಾತ್ಮರು. ಅಂಥವರು ನುಡಿಗಿಂತಲೂ ನಡೆಯಿಂದಲೇ ಹೆಚ್ಚಾಗಿ ಬೋಧಿಸುತ್ತಿರುವರು. ತತ್ತ್ವದರ್ಶಿಗಳ ನಡತೆಯು ನಮಗೆ ಅಧ್ಯಾತ್ಮಸಾಧನೆಗೆ ಉತ್ತಮವಾದ ಆದರ್ಶವಾಗಿರುವದು; ಅಂಥವರು ಎಷ್ಟು ಮಿತವಾಗಿ ಮಾತನಾಡುತ್ತಿದ್ದರೂ ಅವರ ಉಪದೇಶದಿಂದ ನಮ್ಮ ಮೋಹವು ಬಲುಬೇಗನೆ ತೊಲಗುವದು.

ಭಗವಚ್ಚಿಂತನೆಯು ಅಂತಃಕರಣಕ್ಕೆ ಒಂದು ಅವಶ್ಯಕವಾದ ಸಾಧನವು. ಚಿಂತನೆಯು ದಕ್ಕದೆ ಇರುವ ಸ್ಥಿತಿಯಲ್ಲಿ ಸಾಧಕನು ಭಗವಂತನ ಸ್ತೋತ್ರವನ್ನೂ ನಾಮಸ್ಮರಣೆಯನ್ನೂ ಮಾಡಬೇಕು.

ಯಾವ ಸಾಧನದಲ್ಲಿಯೂ ದಂಭವು-ಧರ್ಮಗಳನ್ನು ಬಾವುಟವಾಗಿ ಎತ್ತಿಹಿಡಿದು ಜನರ ಮುಂದೆ ಪ್ರದರ್ಶಿಸುವ ಒಣತೋರಿಕೆಯು-ತಲೆದೋರಬಾರದು. ಸಾಧನವು ನಿಮ್ಮ ಮನಸ್ಸನ್ನು ಒಳಕ್ಕೆಳೆದುಕೊಳ್ಳುವದಕ್ಕೆ ಸಹಕಾರಿಯಾಗಿರುವದೆ? ಮನಸ್ಸಿನ ಚಾಂಚಲ್ಯವು ಹೋಗುವದಕ್ಕೆ ಸಹಾಯಕವಾಗಿರುವದೆ? ಮನಸ್ಸಿಗೆ ದಿನದಿನಕ್ಕೂ ಶಾಂತಿ ಯನ್ನುಂಟುಮಾಡುತ್ತಿರುವದೆ?-ಎಂಬುದನ್ನು ನೋಡಿಕೊಳ್ಳಿರಿ. ಇದೇ ಸಾಧನದ ಮರ್ಮವು.

## ನಮ್ಮ ಜೀವನದ ಸ್ವರೂಪ-ಹೆಗ್ಗುರಿ

ಬೆಳಕಿನ ಮಕ್ಕಳಿರಾ, ಈ ಪ್ರಪಂಚದರ್ಶನದ ಹಿಂಗಡೆಯಲ್ಲಿ ಈ ಬಾಹ್ಯ ದೃಶ್ಯಗಳ ಹಿಂಗಡೆಯಲ್ಲಿ, ಈ ನಾಮರೂಪಗಳ ಹಿಂಗಡೆಯಲ್ಲಿ, ಈ ನಮ್ಮ ವೇದನೆಗಳ, ಚಿತ್ತವೃತ್ತಿಗಳ, ಮನೋಭಾವಗಳ ಮತ್ತು ಒಲವುಗಳ ಹಿಂಗಡೆಯಲ್ಲಿ, ಉದಾಸೀನನಾದ ಸಾಕ್ಷಿಯು, ನಿಮ್ಮ ಸಾವಿಲ್ಲದ ಗೆಳೆಯನು, ನಿಜವಾದ ಹಿತಚಿಂತಕನು, ಪುರುಷನು ಅಥವಾ ಜಗದ್ಗುರುವು, ಯಾರಿಗೂ ಕಾಣಿಸದ ಶಾಸಕನು ಅಥವಾ ಒಡೆಯನು, ಯಾರೂ ಅರಿಯದ

ಯೋಗೀಶ್ವರನು, ಅದೃಶ್ಯವಾದ ಶಕ್ತಿಯು, ಅಥವಾ ಚೈತನ್ಯವು ಅಥವಾ ಗೂಢನಾದ ಋಷಿಯು, ಇದ್ದುಕೊಂಡಿರುತ್ತಾನೆ. ಅದೊಂದೇ ನಿತ್ಯವಾದ ಪರಮಾರ್ಥವು, ಜೀವಂತವಾದ ಜ್ಞಾನವು. ಅದೇ ಬ್ರಹ್ಮವು, ಪರಮಾತ್ಮನು ಅಥವಾ ನಿರಪೇಕ್ಷತತ್ತ್ವವೆಂಬುದು. ಅದೇ ಆತ್ಮನು. ಅದೇ ನಮ್ಮ ಸ್ವರೂಪವು.

ಮಾನವಜೀವನದ ಹೆಗ್ಗುರಿಯೆಂದರೆ ಅನಿತ್ಯವಾದ ದೃಶ್ಯಗಳ ಹಿನ್ನೆಲೆಯಾಗಿರುವ ಪರಮಾರ್ಥವನ್ನು ಸಾಕ್ಷಾತ್ಕಾರಮಾಡಿಕೊಳ್ಳುವದು. ಮಾನವನಿಗೆ ಬೇಕಾದ ಪರಮ ಪುರುಷಾರ್ಥವೆಂದರೆ ಆತ್ಮಾನುಭವವೇ. ಆತ್ಮಾನುಭವದಿಂದಲೇ ಕರ್ಮಬಂಧವು ಕತ್ತರಿಸುವದು. ಆತ್ಮಾನುಭವದಿಂದಲೇ ನಮಗೆ ಸಂಪೂರ್ಣವಾದ ಬಿಡುಗಡೆಯೂ ಸ್ವಾತಂತ್ರ್ಯವೂ ದೊರಕೀತು. ದೃಢಭಕ್ತಿಯಿಂದಲೂ ಸಾಧನದಿಂದಲೂ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಿರಿ. ಅತಿಮೃತ್ಯುತ್ವದ ಅಮೃತವನ್ನು ಕುಡಿಯಿರಿ, ಸಂಕಟಗಳನ್ನೂ ದುಃಖ ಗಳನ್ನೂ ದೌರ್ಮನಸ್ಯವನ್ನೂ ಪರಿಹರಿಸಿಕೊಳ್ಳಿರಿ.

ಅಣ್ಣಗಳಿರ, ಊಟ, ನಿದ್ರೆ, ಹರಟೆ-ಇಷ್ಟನ್ನು ಬಿಟ್ಟರೆ ಬಾಳಿಗೆ ಮತ್ತೇನೂ ಹೆಚ್ಚಿನ ಉದ್ದೇಶವಿಲ್ಲವೆ? ಈ ಅನಿತ್ಯವಾದ ಮಾಯಿಕವಾದ ಸುಖಗಳಿಗಿಂತ ಹೆಚ್ಚಿನದಾದ ನಿತ್ಯಾನಂದವೆಂಬುದೇನೂ ಇಲ್ಲವೆ? ವಿಷಯಭೋಗಕ್ಕಿಂತ ಮೇಲ್ತರದ ಜೀವನಕ್ರಮ ವಿಲ್ಲವೆ? ಬಗೆಬಗೆಯ ಅಂಜಿಕೆಗಳಿಂದೊಡಗೊಂಡಿರುವ ಈ ಭೂಲೋಕದಲ್ಲಿ ನಮ್ಮ ಬಾಳು ಎಷ್ಟು ಅಸ್ಥಿರವಾಗಿರುತ್ತದೆ, ನೋಡಿ ! ಇಹಜೀವನವೆಂಬುದು ಎಷ್ಟು ದುಃಖ ಮಯವಾಗಿರುತ್ತದೆ ! ನಿತ್ಯವಾಗಿ ಸೂರ್ಯನ ಬೆಳಕೇ ಇರುವ, ನಿರತಿಶಯಕ್ಷೇಮ ಧಾಮವಾದ, ಪೂರ್ಣಶಾಂತಿಯಿರುವ, ರೋಗವಾಗಲಿ ಯುದ್ಧವಾಗಲಿ ಇಲ್ಲದ, ಎಂದೆಂದಿಗೂ ನಾಶವಿಲ್ಲದ ನಿತ್ಯಾವಾಸವೆನಿಸಿರುವ, ಪರಮಶುದ್ಧವಾದ ದಿವ್ಯಪ್ರಕಾಶಯುತ ವಾದ ನಿಮ್ಮ ಮುನ್ನಿನ ನೆಲೆವೀಡನ್ನು ಮುಟ್ಟುವದಕ್ಕೆ ಮನಃಪೂರ್ವಕವಾಗಿ ಪ್ರಯತ್ನವನ್ನು ಮಾಡುವದು ಯುಕ್ತವಲ್ಲವೆ?

ಬನ್ನಿ ಬನ್ನಿ ಯೋಗಿಯಾಗಿರಿ. ನಿಮ್ಮ ಬಿಲಗಳಿಂದ ಹೊರಕ್ಕೆಬನ್ನಿರಿ, ನಿಮ್ಮ ಸವೆದ ಹಾದಿಯನ್ನು ಬಿಟ್ಟು, ಇತ್ತಬನ್ನಿರಿ. ಎಲ್ಲಾ ಬಗೆಯ ಮೂಢಭಕ್ತಿಗಳನ್ನೂ ಕಿತ್ತುಹಾಕಿರಿ. ನಿಮಗೆ ಉಚ್ಚವಾದ ಧ್ಯೇಯವಿರಲಿ. ಒಬ್ಬ ಅಡ್ವೋಕೇಟನಾಗಬೇಕೆಂದೋ, ಒಬ್ಬ ಡಾಕ್ಟರ ನಾಗಬೇಕೆಂದೋ, ಇಲ್ಲವೆ ಒಬ್ಬ ಇಂಜಿನಿಯರಾಗಬೇಕೆಂದೋ, ಅಲ್ಲವೆ, ನಿಮಗಿರುವ ಹೆಚ್ಚಿನ ಆಸೆಯೆಂಬುದು? ಆದರೆ ಅದರಿಂದ ಮುಕ್ತಿ ಸಿಕ್ಕೀತೇ? ಅದರಿಂದ ನಮಗೆ ನಿತ್ಯಾನಂದವು ದೊರಕೀತೆ? ಅದರಿಂದ ನಿಮಗೆ ನಿತ್ಯಶಾಂತಿಯು ಲಭಿಸೀತೆ? ಅದು ನಿಮ್ಮನ್ನು ಅಮೃತರನ್ನಾಗಿ ಮಾಡೀತೇನು? ಪರಿಪೂರ್ಣನಾಗಬೇಕು, ಅಮೃತನಾಗಬೇಕು-ಎಂಬ ಆಸೆ ನಿಮಗಿಲ್ಲವೇನು? ನಿಮಗೆ ಕೈವಲ್ಯವೆಂಬ ಸ್ವಾತಂತ್ರ್ಯವನ್ನು ಆತ್ಮಸ್ವಾರಾಜ್ಯವನ್ನು,

ಪರಮಪುರುಷಾರ್ಥವನ್ನು, ಪಡೆಯಬೇಕೆಂಬ ಅಭಿಲಾಷೆ ಇಲ್ಲವೇನು? ಇದ್ದರೆ ಬನ್ನಿರಿ ಉತ್ಕೃಷ್ಟವಾದ ಧ್ಯೇಯಗಳಿಗಾಗಿ ಪ್ರಯತ್ನಮಾಡಿರಿ. ಧೀರರಾಗಿರಿ, ಹಿಂದಕ್ಕೆ ನೋಡದಿರಿ, ಮುಂದಕ್ಕೆ ಹೆಜ್ಜೆಯಿಡಿರಿ, "ನಾನು ಯಾರು"? ಎಂದು ವಿಚಾರಮಾಡಿರಿ. ಶ್ರವಣಮಾಡಿರಿ, ಮನನಮಾಡಿರಿ. ಧ್ಯಾನಮಾಡಿರಿ, ಆತ್ಮಜ್ಯೋತಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿರಿ!

ಓಂಕಾರವೇ ಸಚ್ಚಿದಾನಂದವು. ಓಂಕಾರವೇ ಅನಂತವು. ಓಂಕಾರವೇ ನಿತ್ಯತತ್ತ್ವವು. ಓಂಕಾರವೇ ಅಮೃತತತ್ವವು. ಓಂಕಾರವನ್ನು ಗಾನಮಾಡಿರಿ, ಓಂಕಾರವನ್ನು ಹಾಡಿರಿ, ಓಂಕಾರದ ಅನುಭವವನ್ನು ತಂದುಕೊಳ್ಳಿರಿ. ಸಂ-15, 1

## ಯಾವ ಸಾಧನವನ್ನು ಮಾಡಲಿ ?

ಒಬ್ಬ ಸಾಧುಗಳಿದ್ದರು. ಅವರಲ್ಲಿಗೆ ದೂರದೂರ ದೇಶಗಳಿಂದ ಮುಮುಕ್ಷುಗಳು ಬಂದು ಅವರಿಂದ ತಾವು ಮಾಡಬೇಕಾದ ಅಧ್ಯಾತ್ಮಸಾಧನಗಳ ವಿಷಯಸೂಚನೆಯನ್ನು ಪಡೆಯುತ್ತಿದ್ದರು.

ಈದಿನ ಅನೇಕ ಜಿಜ್ಞಾಸುಗಳು ನೆರೆದಿದ್ದಾರೆ. ಅವರಲ್ಲಿ ಒಬ್ಬನು ದೀರ್ಘದಂಡ ನಮಸ್ಕಾರವನ್ನು ಮಾಡಿ "ಗುರುಮಹಾರಾಜ, ನನಗೆ ಇದೊಂದೇ ದಿನದ ರಜವಿದೆ. ನಾನೊಬ್ಬ ಅಂಚೆಯವನು. ಪ್ರತಿದಿನವೂ ಟಪ್ಪಾಲನ್ನು ತೆಗೆದುಕೊಂಡು ಓಡುತ್ತಿರುವದೇ ನನ್ನ ಕೆಲಸ. ಸ್ವಲ್ಪವೂ ಬಿಡುವಿಲ್ಲದ ನಾನು ಯಾವ ಸಾಧನವನ್ನು ಮಾಡಲಿ? ಅಪ್ಪಣೆ ಕೊಡಿಸಬೇಕು" ಎಂದನು. ಸಾಧುಗಳು ಕೂಡಲೆ "ಮತ್ತೇನೂ ಮಾಡಬೇಕಾದದ್ದಿಲ್ಲ. ನೀನು ಓಡುತ್ತಿರುವಾಗ 'ನಾನು ಪರಮೇಶ್ವರನಿಗೆ ಟಪಾಲು ತೆಗೆದುಕೊಂಡು ಹೋಗುತ್ತಿದ್ದೇನೆ. ಪರಮೇಶ್ವರನೇ ನಾನು ಮುಟ್ಟಬೇಕಾದ ತಪ್ಪಲು ಎಂದು ನೆನೆಯುತ್ತಿರು" ಎಂದರು.

ಮತ್ತೊಬ್ಬನು ಕೈಮುಗಿದುಕೊಂಡು "ಮಹಾಸ್ವಾಮಿ, ಕೂತುಕೊಂಡು ಮಾಡುವ ಸಾಧನವೇನೂ ಇಲ್ಲವೆ? ನಾನೊಬ್ಬ ಗುಮಾಸ್ತನು, ಬಹಳ ಹೊತ್ತು ಕೂತುಕೊಂಡೇ ಇರಬೇಕಾಗುತ್ತದೆ" ಎನ್ನಲು ಸಾಧುಗಳು "ಒಳ್ಳೆಯದಾಯಿತು. 'ನಾನು ಪರಮೇಶ್ವರನ ಕರಣಿಕನು, ಪಾಪಪುಣ್ಯಗಳ ಲೆಕ್ಕ ಇಡುತ್ತಿದ್ದೇನೆ' ಎಂದುಕೊ" ಎಂದರು.

ಇನ್ನೂ ಒಬ್ಬನು "ಸ್ವಾಮಿ, ನಾನೊಬ್ಬ ಕಾವಲುಗಾರನು. ಯಾವಾಗಲೂ ಖಜಾನೆಯ ಮುಂದೆ ನಿಂತಿರುವದೇ ನನ್ನ ಕೆಲಸ. ನಾನೇನು ಸಾಧನವನ್ನು ಮಾಡಬಹುದು?" ಎಂದನು. ಅದಕ್ಕೆ ಆ ಮಹಾತ್ಮರು "ಸರಿ, ಹಾಗಾದರೆ 'ನಾನು ಪರಮೇಶ್ವರನ ಹಣವನ್ನು ಕಾಯುತ್ತಿದ್ದೇನೆ. ಯಾರೊಬ್ಬರನ್ನೂ ಇಲ್ಲಿಗೆ ಅವನಪ್ಪಣೆ ಇಲ್ಲದೆ ಬಿಡೆನು. ದಣಿಯ ರೂಪದಲ್ಲಿ ಪರಮೇಶ್ವರನು ಬಂದರೆ ಮಾತ್ರ ಬಿಟ್ಟೇನು' ಎನ್ನುತ್ತಿರು" ಎಂದರು.

ನಾಲ್ಕನೆಯವನೊಬ್ಬನು "ಪೂಜ್ಯರೆ, ನಾನೊಬ್ಬ ಉಪಾಧ್ಯಾಯನು; ಸರ್ಕಾರದ ಶಾಲೆಯಲ್ಲಿ ಓದುಬರಹವನ್ನು ಹೇಳುತ್ತಿದ್ದೇನೆ. ಅಲ್ಲಿ ಏನು ಸಾಧನವನ್ನು ತಾನೆ ಮಾಡಲಾಪೆನು?" ಎನ್ನುವಷ್ಟರಲ್ಲಿ "ಅಪ್ಪ, ನಿನಗೇನು ಕೊರತೆ? 'ಪರಮೇಶ್ವರನ ಮಕ್ಕಳೇ ನನ್ನ ಮುಂದೆ ಇರುತ್ತಾರೆ. ಅವರಿಗೆ ನಾನು ಹೇಳಿಕೊಡುವ ವಿದ್ಯೆಯು ಆ ಪರಮೇಶ್ವರನ ದಯೆಯಿಂದಲೇ ಬಂದದ್ದು, ಅದನ್ನು ಅವನ ಮಕ್ಕಳಿಗೆ ಒಪ್ಪಿಸಿಬಿಡುತ್ತೇನೆ' ಎಂದರಾಯಿತು" ಎಂದರು. ಬಳಿಕ ಹತ್ತಿರವಿದ್ದ ಮಿಕ್ಕವರನ್ನು ನೋಡಿ "ಅಣ್ಣಗಳಿರ, 'ಯಾವ ಸಾಧನವನ್ನು ಮಾಡಲಿ?' ಎಂದೇಕೆ ಕೇಳುವಿರಿ? 'ಹೇಗೆ ಮಾಡಲಿ?' ಎಂದೇ ಕೇಳಿರಿ. **ಯಾವಯಾವದನ್ನು ಮಾಡಿದರೂ ಭಗವಂತನಿಗೆಂದೇ ಭಾವನೆಯನ್ನು ಇಟ್ಟುಕೊಳ್ಳಿರಿ. ಅದೇ ಹೆಚ್ಚಿನ ಸಾಧನವು**" ಎಂದರು. **ಸಂ–13, 18**

## ತೀರ್ಥಗಳಿಂದ ಲಾಭವನ್ನು ಪಡೆಯುವ ಬಗೆ

ತೀರ್ಥಗಳೂ ಕ್ಷೇತ್ರಗಳೂ ಏರ್ಪಟ್ಟ ಬಗೆ ಹೇಗೆ? ಪುರಾತನಕಾಲದಲ್ಲಿ ಋಷಿಗಳೂ, ಸಾಧುಗಳೂ, ಮಹಾತ್ಮರೂ ಏಕಾಂತವನ್ನು ಮಾಡಿ ತಮ್ಮ ತಪಸ್ಸಿನ ಪ್ರಭಾವದಿಂದ ಈಶ್ವರನನ್ನು ಒಲಿಸಿಕೊಂಡರು. ಅವರು ತಪಸ್ಸುಮಾಡಿದ ಸ್ಥಳ, ಸ್ನಾನಮಾಡಿದ ಜಲಾಶಯ, ಒಲಿಸಿಕೊಂಡ ಪರಮೇಶ್ವರನ ಆಕಾರಾದಿಗಳು–ಇವುಗಳನ್ನು ಕಾಲಾನುಕಾಲಕ್ಕೆ ಆಸ್ತಿಕರು ವರ್ಣಿಸಿದರು. ಒಬ್ಬರಿಂದೊಬ್ಬರಿಗೆ ಅವುಗಳ ಮಾಹಾತ್ಮ್ಯವು ತಿಳಿಯಬಂತು. ಅವುಗಳನ್ನು ದರ್ಶನ ಮಾಡುವದು, ಅಲ್ಲಿ ಸ್ನಾನತರ್ಪಣಾದಿಗಳನ್ನು ಮಾಡುವದು, ಪರಮೇಶ್ವರನ ಮೂರ್ತಿಯ ದರ್ಶನವನ್ನು ಮಾಡಿಕೊಳ್ಳುವದು, ಕೆಲವು ಕಾಲ ಅಲ್ಲಿ ನಿಯಮದಿಂದ ಇದ್ದುಕೊಂಡು ಜಪ, ಪಾರಾಯಣ, ಧ್ಯಾನವೇ ಮುಂತಾದವುಗಳನ್ನು ಅನುಷ್ಠಾನಮಾಡುವದು–ಹೀಗೆ ಮಾಡುವದರಿಂದ ಹಿಂದಿನ ಪಾಪಗಳು ಹೋಗುವವು, ಪುಣ್ಯವು ಲಭಿಸುವದು, ಅಂತಃಕರಣವು ಶುದ್ಧಿಯಾಗುವದು–ಎಂಬ ನಂಬಿಕೆಯು ಜನರಲ್ಲಿ ಉಂಟಾಯಿತು. ಬಹಳ ಶ್ರಮಪಟ್ಟಾದರೂ ಅತ್ಯಂತದೂರಪ್ರದೇಶದಲ್ಲಿ, ಅತ್ಯಂತ ಅಗಮ್ಯಪ್ರದೇಶಗಳಲ್ಲಿ ಮತ್ತು ಅತ್ಯಪಾಯಕರವಾದ ಸನ್ನಿವೇಶಗಳಲ್ಲಿಕೂಡ ಇರುವ ಇಂಥ ಸ್ಥಳಗಳನ್ನು ಕಾಣುವದಕ್ಕೆಂದು ಜನರು ಗುಂಪಾಗಿ ಅಥವಾ ಒಬ್ಬೊಬ್ಬರೇ ಪಾದಚಾರಿಗಳಾಗಿ ನಡೆಯುವದಕ್ಕೆ ಪ್ರಾರಂಭಿಸಿದರು. ಇದೇ ತೀರ್ಥಯಾತ್ರೆಯ ಮೂಲ.

ಮಹಾತ್ಮರುಗಳ ದರ್ಶನವೇ ಪವಿತ್ರವಾದದ್ದು; ಅವರೊಡನೆ ಸಂಭಾಷಣೆ ಮಾಡಿ ಉಪದೇಶವನ್ನು ಪಡೆದು ಅದರಂತೆ ನಡೆಯುವದು ಇನ್ನೂ ಪವಿತ್ರತರವಾದದ್ದು. ಈ ನಂಬಿಕೆಯು ಮಿಕ್ಕ ದೇಶಗಳಿಗಿಂತಲೂ ನಮ್ಮ ದೇಶದಲ್ಲಿ ಅನಾದಿಕಾಲದಿಂದ ಬೆಳೆದು ಕೊಂಡುಬಂದಿರುತ್ತದೆ. ಯಾರಿಗೆ ಈ ಸಂಸಾರವು ಜನ್ಮಮೃತ್ಯುಜರಾರೋಗಮಯ

ವಾಗಿರುವದೆಂದೂ, ಅನಿತ್ಯವೆಂದೂ, ಇದನ್ನು ದಾಟಿರುವ ಪರಮಾರ್ಥತತ್ತ್ವವೊಂದು ನಿಜವಾಗಿ ಇದ್ದುಕೊಂಡಿರುವದೆಂದೂ ಅದನ್ನು ದೊರಕಿಸಿಕೊಳ್ಳಬೇಕೆಂದೂ, ವೈರಾಗ್ಯವೂ ವಿವೇಕವೂ ಮುಮುಕ್ಷುತ್ವವೂ ಉಂಟಾಗುವವೋ ಅವರು ಅವಶ್ಯವಾಗಿ ತತ್ತ್ವಜ್ಞಾನದ ಲಾಭಕ್ಕಾಗಿ ಕಾಮಕ್ರೋಧಾದಿವರ್ಜಿತವಾಗಿರುವ ಬ್ರಹ್ಮನಿಷ್ಠರಾದ ಸಾಧುಗಳ ಸಂಗವನ್ನು ಹುಡುಕುವರು. ಸಾಧುಗಳು ಏಕಾಂತವಾಸದಲ್ಲಿ ತೀರ್ಥಕ್ಷೇತ್ರಾದಿಗಳಲ್ಲಿ ವಾಸಮಾಡಿ ಕೊಂಡಿರುತ್ತಾರೆ. ಆದ್ದರಿಂದ ವಿರಕ್ತರಾದ ಆಸ್ತಿಕರು ಜ್ಞಾನಕ್ಕೆಂದು ತೀರ್ಥಕ್ಷೇತ್ರಗಳಿಗೆ ಹೋಗುವದು ಮುಖ್ಯವಾದ ತೀರ್ಥಯಾತ್ರೆಯು, "ಹರೇ ಕೃಷ್ಣ ಹರೇ ಕೃಷ್ಣ ಭಕ್ತವತ್ಸಲ ಗೋಪತೇ । ಶರಣ್ಯ ಭಗವನ್ ವಿಷ್ಣೋ ಮಾಂ ಪಾಹಿ ಬಹುಸಂಸೃತೇಃ । ಇತಿ ಬ್ರುವನ್ ರಸನಯಾ ಮನಸಾ ಚ ಹರಿಂ ಸ್ಮರನ್ । ಪಾದಚಾರೀ ಗತಿಂ ಕುರ್ಯಾತ್ ತೀರ್ಥಂ ಪ್ರತಿ ಮಹೋದಯಃ" 'ಭಗವಂತನೆ, ನಿನಗೆ ಶರಣು ಬಂದಿರುತ್ತೇನೆ; ನನ್ನನ್ನು ಈ ಅಗಾಧವಾದ ಸಂಸಾರದಿಂದ ಪಾರುಮಾಡಬೇಕು' ಎಂದು ಬೇಡಿಕೊಳ್ಳುತ್ತಾ, ಮನಸ್ಸಿನಿಂದಲೂ ಹರಿಯನ್ನೇ ಸ್ಮರಿಸುತ್ತಾ ಪಾದಚಾರಿಯಾಗಿ ತೀರ್ಥಕ್ಕೆ ಹೋಗಬೇಕು-ಎಂದು ಪುರಾಣವಚನವಿದೆ.

ಯಾರು ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವರೋ ವಿದ್ಯಾತಪಸ್ಸುಗಳಲ್ಲಿ ನಿರತರಾಗಿರುವರೋ, ಯಾರು ಯಾವ ವಸ್ತುವನ್ನೂ ಮತ್ತೊಬ್ಬರಿಂದ ಪ್ರತಿಗ್ರಹಣ ಮಾಡದೆ ಅಲ್ಪಸಂತುಷ್ಟಿಯುಳ್ಳವರಾಗಿರುವರೋ, ದಂಭ, ಅಹಂಕಾರ-ಮುಂತಾದ ದೋಷ ಗಳಿಲ್ಲದೆ ಸರ್ವಸಂಗವಿಮುಕ್ತರಾಗಿರುವರೋ, ಕಾಮಕ್ರೋಧಾದಿಗಳ ಕೋಟಲೆಯಿಂದ ಬಿಡುಗಡೆಯನ್ನು ಹೊಂದಿರುವರೋ, ಸರ್ವಭೂತಗಳಲ್ಲಿಯೂ ತಮ್ಮಂತೆ ಪ್ರೇಮವನ್ನು ಮಾಡುವವರಾಗಿರುವರೋ ಅಂಥವರಿಗೆ ತೀರ್ಥಯಾತ್ರೆಗಳ ಪೂರ್ಣಫಲವು ಬರುತ್ತದೆ. ಭಾವಭಕ್ತಿಯಿಂದ ಕೂಡಿದ ಪಾಪಿಗಳೂ ತೀರ್ಥಗಳಲ್ಲಿ ಪರಿಶುದ್ಧರಾಗುವರು; ಇನ್ನು ಸತ್ಯ, ದಾನ, ಧರ್ಮ-ಮುಂತಾದವುಗಳಿಂದ ಕೂಡಿದವರು ಅಲ್ಲಿ ಮಹಾಫಲವನ್ನು ಪಡೆಯುವರೆಂಬುದಕ್ಕೆ ಸಂಶಯವೇನು? ತೀರ್ಥಯಾತ್ರೆಗೆ ಭಾವವು ಬಹಳ ಮುಖ್ಯ. "ಗಂಗಾದಿತೀರ್ಥೇಷು ವಸನ್ತಿ ಮತ್ಸ್ಯಾಃ । ದೇವಾಲಯೇ ಪಕ್ಷಿಗಣಾಶ್ಚ ಸನ್ತಿ । ಭಾವೋಜ್ಝಿತಾಸ್ತೇ ನ ಫಲಂ ಲಭನ್ತೇ ತೀರ್ಥಾಚ್ಚ ದೇವಾಯತನಾಚ್ಚ ಮುಖ್ಯಾತ್ । ಭಾವಂ ತತೋ ಹೃತ್ಕಮಲೇ ನಿಧಾಯ । ತೀರ್ಥಾನಿ ಸೇವೇತ ಸಮಾಹಿತಾತ್ಮಾ ॥" 'ತೀರ್ಥಗಳಲ್ಲಿ ಮೀನುಗಳು ಯಾವಾಗಲೂ ಇರುತ್ತವೆ, ದೇವಾಲಯಗಳಲ್ಲಿ ಪಕ್ಷಿಗಳೂ ವಾಸಿಸುತ್ತವೆ; ಆದರೆ ಅವಕ್ಕೆ ತೀರ್ಥದೇವಾಲಯವಾಸದ ಫಲವು ಬಂದೀತೇನು? ಆದ್ದರಿಂದ ಹೃತ್ಕಮಲದಲ್ಲಿ ಭಾವವನ್ನು ಬೆಳೆಯಿಸಿಕೊಂಡು ಸಮಾಧಾನಚಿತ್ತನಾಗಿ ತೀರ್ಥಗಳನ್ನು ಸೇವಿಸಬೇಕು' ಎಂದು ನಾರದಪುರಾಣದಲ್ಲಿ ಹೇಳಿದೆ.

ಆದರೆ ಇಂದು ತೀರ್ಥಕ್ಷೇತ್ರಗಳ ಸ್ಥಿತಿಯೂ ಅಲ್ಲಿಗೆ ಹೋಗುವವರ ಮನಃಸ್ಥಿತಿಯೂ ಹೇಗಿರುತ್ತದೆ? ಎಲ್ಲಿಯೋ ಇರುವ ಕೆಲವು ಪ್ರತಿಷೇಧಗಳನ್ನು ಬಿಟ್ಟರೆ, ಈಗ ಬಹುಮಟ್ಟಿಗೆ ಕ್ಷೇತ್ರಗಳೆಂದರೆ ಕೆಲವು ಗುಡಿಗೋಪುರಗಳಿಂದ ಕೂಡಿರುವ ಜನನಿಬಿಡವಾದ ಸ್ಥಳಗಳು. ಆ ಕ್ಷೇತ್ರಗಳಲ್ಲಿ ದೇವತಾದರ್ಶನಕ್ಕೂ ಪೂಜಾಭಿಷೇಕಾದಿಗಳಿಗೂ ಯಾತ್ರಿಕರಿಗೆ ಸಹಾಯಮಾಡುತ್ತೇವೆಂದು ಹೇಳಿಕೊಳ್ಳುವ ಕೆಲವರು ಮಾರ್ಗದರ್ಶಿಗಳಿರುತ್ತಾರೆ. ಎಷ್ಟೋ ಕಡೆಗಳಲ್ಲಿ ಯಾತ್ರಿಕರಿಗೆ ಇಳಿದುಕೊಳ್ಳುವ ಧರ್ಮಶಾಲೆಗಳು, ಸತ್ರಗಳು ಅಥವಾ ಛತ್ರಗಳು–ಎಂಬಿವು ನಾನಾಜಾತಿಯ ಶೌಚಾಚಾರರಹಿತರಾದ ಜನರ ಗುಂಪಿನಿಂದ ಕೂಡಿರುವ ಕೊಳಕು ಪ್ರದೇಶಗಳಾಗಿರುತ್ತವೆ. ಈ ಮಾರ್ಗದರ್ಶಿಗಳು ಆ ಸತ್ರಗಳಿಗೆ ದಿನವೊಂದಕ್ಕೆ ಇಂತಿಷ್ಟೆಂದು ಹೆಚ್ಚಿನ ಬಾಡಿಗೆಯನ್ನು ತೋರಿಸಿ ಇಳಿದುಕೊಳ್ಳುವ ಸ್ಥಳಗಳ ಕಶ್ಮಲದಿಂದ ಮಾನಸಕಲ್ಮಷಕ್ಕೂ ಅವಕಾಶವನ್ನು ಕಲ್ಪಿಸುತ್ತಾರೆ.

ಯಾತ್ರೆಗಳಿಗೆ ಹೋಗುವ ಈಗಿನ ಪ್ರಯಾಣಿಕರ ಮನೋಭಾವವೂ ಮಾರ್ಪಟ್ಟಿರುತ್ತದೆ. ಅವರಿಗೆ ವೈರಾಗ್ಯ, ಸತ್ಸಂಗಾಭಿಲಾಷೆ, ತೀರ್ಥಕ್ಷೇತ್ರಗಳ ಮಾಹಾತ್ಮ್ಯದ ಅರಿವು, ಅನುಷ್ಠಾನದ ಕುತೂಹಲ–ಇವುಗಳು ಬರುಬರುತ್ತಾ ಕುಗ್ಗುತ್ತಿರುವವು. ಸಿನೆಮಾ ಮುಂತಾದ ದೃಶ್ಯಗಳನ್ನು ನೋಡಿ ತೃಪ್ತರಾಗುವ ಹಾಗೆಯೇ ತೀರ್ಥಯಾತ್ರೆ ಎಂಬ ವಿನೋದಕಾಲಕ್ಷೇಪದಿಂದಲೂ ತೃಪ್ತರಾಗಬೇಕೆಂಬ ಲಾಲಸೆಯ ಜನರೇ ಹೆಚ್ಚುತ್ತಿರುವರು. ಅವರಿಗೆ ಪ್ರೋತ್ಸಾಹಕವಾಗಿ ರೈಲಿನವರು ಟೂರ್‌ಟಿಕೆಟ್‌ಗಳೆಂಬ ಕೆಲವು ನಿಯತಸಂಚಾರಕ್ರಮದ ನಿಬಂಧನೆಯ ಟಿಕೆಟುಗಳನ್ನು ಏರ್ಪಡಿಸಿರುತ್ತಾರೆ; ಈಗ ದೇಶದಲ್ಲಿ ಎಲ್ಲೆಲ್ಲಿಯೂ ಬಸ್ಸುಗಳು ಓಡಾಡುತ್ತಿರುತ್ತವೆ. ಆದ್ದರಿಂದ ಯಾರುಬೇಕಾದರೂ ಈ ಯಾತ್ರೆಗಳನ್ನು ತಮಗೆ ಸೂಕ್ತಕಂಡಂತೆ ಭರ್‍ರನೆ ಮಾಡಿಕೊಂಡು ಬಂದುಬಿಡಬಹುದಾಗಿದೆ. ಶ್ರದ್ಧಾಭಕ್ತಿಗಳಿಂದ ಮಾಡಿದ ಪಾದಸಂಚಾರದ ಯಾತ್ರೆಗಳು ಹರ್ಷಪ್ರದವಾಗುವವು; ದೇಶದ ವಿಜ್ಞಾನವನ್ನು ಹೆಚ್ಚಿಸುವವು, ಭರತಖಂಡದ ಸಂಸ್ಕೃತಿಯ ಏಕಮುಖತ್ವವನ್ನು ತೋರಿಸಿಕೊಡುವವು. ಅವು ಕಷ್ಟಸಹಿಷ್ಣುತೆಯನ್ನೂ ಪರದೇಶಗಳಲ್ಲಿ ಸಾತ್ತ್ವಿಕರ ಸಂದರ್ಶನಗಳನ್ನೂ ತಂದು ಕೊಡುತ್ತಿದ್ದವಷ್ಟೆ? ಅದಕ್ಕೆ ಪ್ರತಿಯಾಗಿ ಈ ಯಾತ್ರೆಗಳು ಶರೀರದ ಮತ್ತು ಮನಸ್ಸಿನ ಯಾತನೆಯನ್ನು ತಂದುಕೊಡುತ್ತವೆ ಎನ್ನಬೇಕಾಗಿದೆ. ವಿವಿಧೋದ್ದೇಶಗಳಿಂದ ಪ್ರಯಾಣ ಮಾಡುವ ವಿವಿಧಮತಾಚಾರಗಳ ಜನರ ಕೂಟದಿಂದಲೂ ವೇಗದಿಂದ ಸಂಚರಿಸುವ ಯಾನಗಳ ಘರ್ಷಣೆಯಿಂದಲೂ ಸಾಮಾನುಗಳನ್ನು ಸಾಗಿಸುವದಕ್ಕೆಂದು ಲಗ್ಗೇಜು ಚಾರ್ಜು, ಕೂಲಿ, ಆಯಾ ಕಾಲಕ್ಕೇ ಕೊಳ್ಳಬೇಕಾಗುವ ಆಹಾರಸಾಮಗ್ರಿಗಳ ದುಬಾರಿಯ ವೆಚ್ಚ–ಮುಂತಾದವುಗಳಿಗೆ ಆಗುವ ಧನವ್ಯಯದಿಂದಲೂ ಮನಸ್ಸಿನಲ್ಲಿ ಅನಿರೀಕ್ಷಿತವಾದ ಅನಿಷ್ಟಪರಿಣಾಮಗಳು ಆಗುವವು. ಯಾತ್ರಿಕರಿಗೆ ಆಚಾರವಿಚಾರಗಳನ್ನು ಹಿಡಿತದಲ್ಲಿಟ್ಟು ಕೊಳ್ಳುವದು ಬಲು ಕಷ್ಟಸಾಧ್ಯವಾಗುವದು.

ಇವುಗಳ ಜೊತೆಗೆ ಹೋದ ಕಡೆಗಳಲ್ಲಿ ದೇವಾಲಯಗಳಿಗೆ ಬರುವ ಜನಸಂದಣಿ, ದೇವತಾದರ್ಶನಕ್ಕೆ ಜನರ ನೂಕುನುಗ್ಗಲಿನಿಂದ ಆಗುವ ಆಯಾಸ, ವ್ಯರ್ಥಕಾಲಕ್ಷೇಪ, ಮಂಗಳಾರತಿ ಪೂಜಾಭಿಷೇಕಗಳು ಮುಂತಾದವುಗಳನ್ನು ಮಾಡಿಸುವದಕ್ಕೆ ಆಗುವ ಅಡಚಣೆಗಳು, ಅರ್ಚಕರೇ ಮುಂತಾದವರು ಮಾಡುವ ಮೋಸದ ಸುಲಿಗೆ-ಇವುಗಳಿಂದ ಮನಸ್ಸಿಗೆ ಬಹಳ ಕಿರಿಕಿರಿಯಾಗುವದು. ಉಳಿದ ಖರ್ಚುಗಳನ್ನೂ ಈ ಅಸಹ್ಯಸಂನಿವೇಶ ವನ್ನೂ ಮನದದಂದುಕೊಂಡು, ದೇವರಿಗೆಂದು ನಾವು ಸಲ್ಲಿಸಬೇಕಾದ ಸೇವೆಯ ವಿಷಯದಲ್ಲಿ ಬಹಳ ಜಿಪುಣತನದ ಬುದ್ಧಿಯು ಉಂಟಾಗುತ್ತದೆ.

ಈ ಎಲ್ಲಾ ಕಾರಣಗಳಿಂದ ಸದ್ಯದ ಕಾಲಕ್ಕೆ ಅನೇಕಕ್ಷೇತ್ರಗಳು ಕ್ಷೇತ್ರಗಳಲ್ಲದೆ ಹೋಗಿರುತ್ತವೆ; ತೀರ್ಥಗಳು ತೀರ್ಥಗಳಲ್ಲದೆಹೋಗಿಬಿಟ್ಟಿರುತ್ತವೆ. ಈ ಪರಿಸ್ಥಿತಿಯಲ್ಲಿ ಆಸ್ತಿಕರು ಏನುಮಾಡಬೇಕು? ದೇವಾಲಯಗಳ ವ್ಯವಸ್ಥಾಪಕರು ಏನುಮಾಡಬೇಕು? ತೀರ್ಥಕ್ಷೇತ್ರಗಳಲ್ಲಿರುವ ಆಸ್ತಿಕಜನರೂ ಲೋಕೋಪಕಾರಬುದ್ಧಿಯುಳ್ಳ ವಿದ್ವಾಂಸರೂ ಉದಾರಾಶಯರೂ ಏನುಮಾಡಬೇಕು?-ಎಂಬುದನ್ನು ಆಲೋಚಿಸುವದು ಅತ್ಯವಶ್ಯ ವಾಗಿರುತ್ತದೆ. ಈ ವಿಷಯಕ್ಕೆ ನನ್ನ ಮನಸ್ಸಿನಲ್ಲಿ ಹೊಳೆದಿರುವ ಕೆಲವು ವಿಚಾರಗಳನ್ನು ಇಲ್ಲಿ ವಾಚಕರ ಮುಂದೆ ಇಡುವೆನು. ಅವುಗಳಲ್ಲಿರುವ ಗುಣವನ್ನು ಮಾತ್ರ ವಿವೇಕಿಗಳಾದವರು ಸ್ವೀಕರಿಸಬೇಕೆಂದು ಕೋರುತ್ತೇನೆ.

(1) ಮೊಟ್ಟಮೊದಲನೆಯದಾಗಿ ಶೌಚಾಚಾರಗಳ ಮತ್ತು ಕರ್ಮಾನುಷ್ಠಾನಗಳ ಬೆಲೆಯನ್ನು ಅರಿತ ಬ್ರಾಹ್ಮಣರೇ ಮುಂತಾದವರು ಸದ್ಯಕ್ಕೆ ಈ ತೀರ್ಥಯಾತ್ರೆಯನ್ನು ಮಿಕ್ಕವರಿಗೆ ಬಿಟ್ಟುಕೊಟ್ಟು ತಾವುತಾವು ಇರುವ ಕಡೆಯಲ್ಲಿಯೇ ನಿತ್ಯಾಹ್ನಿಕ, ಶಾಸ್ತ್ರಶ್ರವಣ, ದಾನಧರ್ಮಗಳು, ದೇವತಾರ್ಚನ-ಮುಂತಾದವುಗಳನ್ನು ಮಾಡಬೇಕು. ನದೀತೀರ ಗಳಲ್ಲಿಯೂ ಸಣ್ಣಸಣ್ಣ ಕ್ಷೇತ್ರಗಳಲ್ಲಿಯೂ ಇರುವ ಆಸ್ತಿಕರು, ಸ್ವತಂತ್ರವಾದ-ಎಂದರೆ ಹರಿಜನರ ಪ್ರವೇಶ, ದೇವಾಲಯಗಳನ್ನು ಲೌಕಿಕವಿಚಾರಗಳಿಗೆ ಅಥವಾ ರಾಜಕಾರಣಕ್ಕೆ ಉಪಯೋಗಿಸುವದು, ಸಮಾಜಸುಧಾರಣೆ ಮುಂತಾದವುಗಳ ಉಪಟಳವಿಲ್ಲದ-ದೇವಸ್ಥಾನಗಳನ್ನು ಏರ್ಪಡಿಸಿಕೊಂಡು ಅಲ್ಲಿ ಪೂಜಾರಿಗಳನ್ನು ಉಪಯೋಗಿಸದೆ ತಾವೇ ನಿರಂತರವಾಗಿ ಪೂಜೆ, ಅಭಿಷೇಕ, ಅರ್ಚನೆ, ಭಜನೆ, ಪಾರಾಯಣ-ಮುಂತಾದ ರೂಪದ ತಪಸ್ಸಿನಿಂದ ಅವನ್ನು ಪವಿತ್ರಸ್ಥಾನಗಳಾಗಿ ಮಾರ್ಪಡಿಸಬೇಕು. ಈಗ ತೀರ್ಥಯಾತ್ರೆಯ ಹೆಸರಿನಲ್ಲಿ ಪೋಲಾಗುತ್ತಿರುವ ಹಣದ ಅರ್ಧದಷ್ಟನ್ನು ಪ್ರತಿಯೊಬ್ಬನೂ ಈ ಕಾರ್ಯಕ್ಕಾಗಿ ಮೀಸಲಾಗಿಟ್ಟರೆ-ಈ ದೇವಾಲಯಗಳು ನಿಜವಾಗಿಯೂ ದೇವನ ಆಲಯಗಳಾಗುವವು. ಇಂಥ ಅರ್ಚನಸ್ಥಾನಗಳು ಹೆಚ್ಚಿದಷ್ಟೂ ಮಹಾಜನಕ್ಕೆ ಕಲ್ಯಾಣ ವಾಗುವದು; ನಿಃಸ್ಪೃಹರಾದ ಆಸ್ತಿಕರು ಮಾಡುವ ಈ ತಪಸ್ಸಿನಿಂದ ಆ ದೇವಾಲಯ

ಗಳಿರುವ ಸ್ಥಾನಗಳು ನಿಜವಾದ ತೀರ್ಥಗಳೂ ಕ್ಷೇತ್ರಗಳೂ ಆಗುವವು. ಅನುಷ್ಠಾತೃಗಳ ತಪೋಬಲದಿಂದಲೇ ದೇವಾಲಯ, ನದಿ, ಶಾಸ್ತ್ರಶ್ರವಣ–ಮುಂತಾದವು ವೀರ್ಯವಂತ ವಾಗುತ್ತವೆ ಎಂದು ಶಾಸ್ತ್ರವಿರುವದರಿಂದ ಈ ಮಾರ್ಗದಿಂದ ನಿಜವಾದ ತೀರ್ಥಗಳು ಎದ್ದುಕೊಳ್ಳುವವು, ತೀರ್ಥಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈಗಿನ ಅಶುಚ್ಯಾಚಾರದ ಸ್ಥಳಗಳಲ್ಲಿ ಜನರ ನೂಕುನುಗ್ಗಲೂ ಕಡಿಮೆಯಾಗುವದು.

(2) ಎರಡನೆಯದಾಗಿ ಕೆಲವು ಜನ ಆಸ್ತಿಕರುಗಳಾದವರು ವಿರಕ್ತರಾಗಿದ್ದರೆ ಸುಪ್ರಸಿದ್ಧವಾದ ಸಣ್ಣಸಣ್ಣ ತೀರ್ಥಕ್ಷೇತ್ರಗಳಿಗೆ ಹೋಗಿ ಮತ್ತೊಬ್ಬರ ಹಂಗಿಲ್ಲದೆ ಅಲ್ಲಿ ಜಪತಪಾದ್ಯನುಷ್ಠಾನವನ್ನು ತಾವು ಮಾಡಿ ಮಿಕ್ಕವರು ಮಾಡುವಂತೆ ಪ್ರೋತ್ಸಾಹಿಸಬೇಕು. ಯಾವ ಜನರಿಂದಲೂ ಯಾವ ದಾನಾದಿಗಳನ್ನೂ ಬಯಸದೆ ಸ್ಥಳಮಾಹಾತ್ಮ್ಯ, ಸತ್ಕರ್ಮಾನುಷ್ಠಾನದಿಂದಾಗುವ ಮಹಾಫಲ, ಭಗವದ್ಭಕ್ತಿಯ ಮಹಿಮೆ–ಮುಂತಾದವುಗಳನ್ನು ಆಡಂಬರವಿಲ್ಲದೆ ಜನರಿಗೆ ತಿಳಿಯಹೇಳುವ ಕೆಲಸಕ್ಕೆ ಸೊಂಟಕಟ್ಟಿ ನಿಲ್ಲಬೇಕು. ಇಂಥ ತಿಳಿವಳಿಕೆಯಾಗಲಿ ಹೆಚ್ಚಿನ ಆಧ್ಯಾತ್ಮಿಕಶಕ್ತಿಯಾಗಲಿ ಇಲ್ಲದ ಉದಾರಾಶಯರಾದ ಧನ ವಂತರು ಇಂಥವರಿಗೆ ಇರುವದಕ್ಕೆ ಸ್ಥಲ, ಸಾತ್ತ್ವಿಕರಾಗಿರುವ ಯಾತ್ರಿಕರಿಗೆ ಸೌಕರ್ಯ–ಮುಂತಾದವುಗಳನ್ನು ಕಲ್ಪಿಸುವದಕ್ಕೇ ತಮ್ಮ ಧನದ ಒಂದು ಭಾಗವನ್ನು ಮುಡುಪಾಗಿಡ ಬೇಕು. ಅದರಿಂದ ಭಗವತ್ಪ್ರೀತಿಯೂ ಆಗುವದು, ಕ್ಷೇತ್ರಗಳ ವೀರ್ಯವೂ ಹೆಚ್ಚುವದು.

(3) ಮೂರನೆಯದಾಗಿ ಸರಕಾರದವರು ಈಗ ದೇವಾಲಯಗಳ, ತೀರ್ಥಕ್ಷೇತ್ರಗಳ ಉತ್ಪತ್ತಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವ ಕಡೆಗಳಲ್ಲಿ ಬರುವ ಯಾತ್ರಾರ್ಥಿಗಳಿಗೆ ಕಲ್ಪಿಸಿಕೊಡಬೇಕಾದ ಸೌಕರ್ಯಗಳು, ಜನರು ಕ್ಷೇತ್ರಗಳಲ್ಲಿ ನಡೆದುಕೊಳ್ಳಬೇಕಾದ ತಿಳಿವಳಿಕೆ–ಮುಂತಾದವುಗಳನ್ನು ಒದಗಿಸುವಂತೆ ಪ್ರಜೆಗಳು ಪ್ರಾರ್ಥಿಸಬೇಕು. ದೇವಸ್ಥಾನಗಳಲ್ಲಿ ಮೂಲೋದ್ದೇಶಕ್ಕೆ ಭಂಗವನ್ನು ತರುವ ಯಾವ ಆಚಾರವನ್ನು ಇಟ್ಟುಕೊಳ್ಳದಂತೆ ಅಧಿಕಾರಿಗಳು ನಿಗನೋಡಿಕೊಳ್ಳಬೇಕೆಂದು ಒತ್ತಾಯಪಡಿಸಬೇಕು. ಆಯಾ ಕ್ಷೇತ್ರತೀರ್ಥಗಳ ಪರಮೋದ್ದೇಶವು ನೆರವೇರುವದಕ್ಕೆ ಬೇಕಾದ ಉಪಾಯಗಳನ್ನು ಕೈಕೊಂಡು ಅದರ ಖರ್ಚುಕಳೆದ ಹಣವನ್ನೇ ವಿದ್ಯಾಭ್ಯಾಸವೇ ಮುಂತಾದ ಬೇರೆಯ ದಿಕ್ಕಿನಲ್ಲಿ ವಿನಿಯೋಗಿಸಬೇಕು–ಎಂಬುದನ್ನು ಅಧಿಕಾರಿಗಳ ಗಮನಕ್ಕೆ ತರಬೇಕು.

ಹೀಗಾದರೆ ತೀರ್ಥಯಾತ್ರೆಗಳ ಪರಮಲಾಭವು ಆಸ್ತಿಕರಿಗೆ ದೊರೆಯುವದು, ಅಲ್ಲಿ ಈಗಿರುವ ಕಲಿಪ್ರಾಬಲ್ಯವು ಕುಗ್ಗುವದು, ತೀರ್ಥಕ್ಷೇತ್ರಗಳಿಗೆ ಪ್ರಸಿದ್ಧವಾಗಿರುವ ಭಾರತ ಭೂಮಿಯ ವೈಭವವು ಮತ್ತೆ ಮೆರೆಯುವದಕ್ಕೆ ನೆರವಾದ ಪುಣ್ಯವು ಎಲ್ಲರಿಗೂ ಲಭಿಸುವದು.

**ಸಂ–27, 204**

# ಪರಮಹಂಸನ ನಿಷ್ಠೆ

ಪರಮಹಂಸನಾದವನು ಯಾವಾಗಲೂ ಸ್ಥಳದಿಂದ ಸ್ಥಳಕ್ಕೆ ಪರ್ಯಟನಮಾಡುತ್ತಲೇ ಇರಬೇಕೆಂತಲೂ ಅಲ್ಲಲ್ಲಿ ವೇದಾಂತಪ್ರಚಾರಕ್ಕಾಗಿ ಉಪನ್ಯಾಸಾದಿಗಳನ್ನು ಮಾಡುತ್ತಿರಬೇಕೆಂತಲೂ ಭಾವನೆ ಇದೆ. ಆದ್ದರಿಂದ ಈಗಿನ ಕಾಲಕ್ಕೆ ನಿಜವಾದ ಸಂನ್ಯಾಸಿಯು ಏನುಮಾಡಬಾರದೆಂಬುದನ್ನು ಮೊದಲು ತಿಳಿಯಿಸುವದು ಅವಶ್ಯ.

ಪರಮಹಂಸನಾದವನು ಗ್ರಂಥವ್ಯಾಖ್ಯಾನಪರನಾಗಬಾರದು. ತತ್ತ್ವನಿರ್ಣಯಕ್ಕಾಗಿ ತನ್ನಲ್ಲಿಗೆ ಬಂದವರಿಗೆ ವೇದಾಂತವಿಚಾರದ ಸರಣಿಯನ್ನು ತನಗೆ ತಿಳಿದಮಟ್ಟಿಗೆ ಹೇಳಿಕೊಡುವದೂ ಅವನ ಕರ್ತವ್ಯವೇ ಸರಿ. ಆದರೆ ಭಾಷಣಾದಿಗಳಿಂದ ಅಲ್ಲಲ್ಲಿ ವಿದ್ವತ್ತಾಪ್ರಕಾಶನಕ್ಕೆ ಎಂದಿಗೂ ಪ್ರಯತ್ನಿಸಬಾರದು.

ಜ್ಯೌತಿಷ, ಸಾಮುದ್ರಿಕ, ವೈದ್ಯ, ಮಂತ್ರತಂತ್ರಾದಿಗಳ ಉಪದೇಶ-ಇವೇ ಮುಂತಾದವುಗಳ ಮೂಲಕ ಎಂದಿಗೂ ಖ್ಯಾತಿಲಾಭಪೂಜೆಗಳನ್ನು ಪಡೆಯುವದಕ್ಕೆ ಹವಣಿಸಬಾರದು.

ಪರಮಹಂಸನಿಗೆ ಮುಖ್ಯವಾಗಿ ಬ್ರಹ್ಮಸಂಸ್ಥನಾಗಿರುವದು-ಎಂದರೆ ಉಪನಿಷದರ್ಥಗಳನ್ನು ಮನನಮಾಡುತ್ತಾ ಅವುಗಳ ಅರ್ಥದ ಸಾರವಾದ ಪ್ರಣವದ ಅರ್ಥದ ಅನುಸಂಧಾನವನ್ನು ಮಾಡುತ್ತಿರುವದು-ನಿತ್ಯಕರ್ತವ್ಯ. ಶಾಂಕರಭಾಷ್ಯದ ಅರ್ಥವನ್ನು ಮತ್ತೆಮತ್ತೆ ಮೂಲಾನುಸಾರವಾಗಿ ಮನನಮಾಡುತ್ತಿರಬೇಕು. ಲೌಕಿಕರ ಪರಿಚಯವನ್ನು ಹೆಚ್ಚಾಗಿ ಬೆಳೆಯಿಸಿಕೊಂಡು ತತ್ತ್ವದಿಂದ ಪ್ರಚ್ಯುತನಾಗಬಾರದು. ಸಂ-43, 82

****

# 4. ಅಧ್ಯಾತ್ಮಪ್ರಕಾಶ

## ನಮ್ಮೊಳಗಿನ ಹೆಬ್ಬೆಳಕು

ನಾವೆಲ್ಲರೂ ಅಣ್ಣತಮ್ಮಂದಿರು, ಅಕ್ಕತಂಗಿಯರು, ಎಲ್ಲರ ಜೀವನವೂ ಒಂದೇ ಬಗೆಯಾಗಿರುವದು. ನಾವೆಲ್ಲರೂ ಏನನ್ನೋ ಕಳೆದುಕೊಂಡಿದ್ದೇವೆ. ಏನನ್ನೋ ಹುಡುಕುತ್ತಿದ್ದೇವೆ.

ನಾವು ಹುಡುಕುತ್ತಿರುವದು ಕತ್ತಲೆಯಲ್ಲಿ, ಕಗ್ಗತ್ತಲೆಯಲ್ಲಿ. ಕೆಲವರಿಗೆ ಹುಡುಕಿ ಹುಡುಕಿ ಬೇಸರಾಗಿರುವದು, ಕೆಲವರು ಉತ್ಸಾಹದಿಂದ ಹುಡುಕುತ್ತಿರುವೆವು, ಇನ್ನು ಕೆಲವರು ಹುಡುಕುವದಕ್ಕೆ ಇಷ್ಟರಲ್ಲಿಯೇ ಹೊರಡುವೆವು. ಈ ಹೆಚ್ಚುಕಡಿಮೆಗಳಿದ್ದರೂ ಎಲ್ಲರೂ ಹುಡುಕುವವರೆ, ಎಲ್ಲರೂ ಕತ್ತಲೆಯಲ್ಲಿ ತಡಕಾಡುತ್ತಿರುವವರೆ. ಕೆಲವರು ಸೋತು ಮೆಲ್ಲಮೆಲ್ಲಗೆ ನಡೆಯುತ್ತಿರುವೆವು, ಕೆಲವರು ಜೋರಾಗಿ ಓಡಾಡುತ್ತಿರುವೆವು. ಆದರೇನು? ಎಲ್ಲೆಲ್ಲಿಯೂ ಕಗ್ಗತ್ತಲೆ. ಏನೇನೂ ಕಾಣಿಸುವದಿಲ್ಲ.

ಈ ಪರದಾಟದಲ್ಲಿ, ನೂಕುನುಗ್ಗಲಿನಲ್ಲಿ, ಒಬ್ಬರನ್ನೊಬ್ಬರು ತಗಲುವೆವು. ಒಬ್ಬರನ್ನೊಬ್ಬರು ತಳ್ಳುವೆವು, ಒಬ್ಬರನ್ನೊಬ್ಬರು ಕೆಡಹುವೆವು, ಒಬ್ಬರನ್ನೊಬ್ಬರು ಬಯ್ಯುವೆವು, ಹೊಡೆಯುವೆವು. ಆದರೆ ನಿಜವಾಗಿ ಈ ಕುರುಡರ ಸಂತೆಗೆ ಯಾರೂ ಹೊಣೆಗಾರರಲ್ಲ. ಸೂಜಿಯಿಂದ ಚುಚ್ಚಿ ನೋಡುವಷ್ಟು ದಟ್ಟವಾಗಿರುವ ಕಗ್ಗತ್ತಲೆಯೊಂದೇ ಈ ಅನಾಹುತಕ್ಕೆಲ್ಲ ಕಾರಣ.

ಆದರೂ ನಮ್ಮೊಳಗೇ ಒಂದು ಹೆಬ್ಬೆಳಕಿದೆ; ಅದು ಝಗಝಗನೆ ಬೆಳಗುತ್ತಲೇ ಇದೆ. ಇದೇ **ಅಧ್ಯಾತ್ಮ ಪ್ರಕಾಶವು.** **ಸಂ–4, 129**

## ಬೆಳಕುಗಳಿಗೆಲ್ಲ ಬೆಳಕು

**ಕಿಂ ಜ್ಯೋತಿಸ್ತವ ಭಾನಮಾನಹನಿ ಮೇ ರಾತ್ರೌ ಪ್ರದೀಪಾದಿಕಂ**
**ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ ।**
**ಚಕ್ಷುಸ್ತಸ್ಯ ನಿಮೀಲನಾದಿಸಮಯೇ ಕಿಂ ಧೀರ್ಧಿಯೋ ದರ್ಶನೇ**
**ಕಿಂ ತತ್ರಾಹಮತೋ ಭವಾನ್ ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ ॥**

**ಗುರು** – ನಿನಗೆ ಬೆಳಕು ಯಾವದು ?

**ಶಿಷ್ಯ** – ಹಗಲು ಸೂರ್ಯ, ರಾತ್ರಿಯಲ್ಲಿ ದೀಪವೇ ಮುಂತಾದದ್ದು.

**ಗುರು** – ಅದನ್ನು ಮುಚ್ಚಿಕೊಂಡಿರುವದೇ ಮುಂತಾದ ಕಾಲದಲ್ಲಿ ಯಾವದು?

**ಶಿಷ್ಯ** – ಬುದ್ಧಿ

**ಗುರು** – ಆ ಬುದ್ಧಿಯನ್ನು ನೋಡುವದಕ್ಕೆ ಯಾವದು ?

**ಶಿಷ್ಯ** – ಅದಕ್ಕೆ ನಾನೆ

**ಗುರು** – ಆದ್ದರಿಂದ ನೀನು ಎಲ್ಲಕ್ಕೂ ಹೆಚ್ಚಿನ ಬೆಳಕಾದೆ

**ಶಿಷ್ಯ** – ಹೌದು, ಮಹಾಸ್ವಾಮಿ, ನಾನು ಬೆಳಕುಗಳಿಗೆಲ್ಲ ಬೆಳಕಾಗಿರುವೆನು. **ಸಂ–5, 88**

## ನಮ್ಮ ಸುತ್ತಲಿರುವ ಕಗ್ಗತ್ತಲೆ

ನಮ್ಮಲ್ಲಿ ಬಲುಮಂದಿ ಕಗ್ಗತ್ತಲೆಯಲ್ಲಿಯೇ ಓಡಾಡುತ್ತಿರುವೆವು. ಮೋಡವಿರುವ ಅಮಾವಾಸ್ಯೆಯ ನಿಟ್ಟಿರುಳಿನಲ್ಲಿ ನಲಿದಾಡುತ್ತಾ ಹಾರಾಡುತ್ತಿರುವ ಗೂಗೆಗಳಂತಾಗಿದೆ, ನಮ್ಮ ಹಾಡು.

ನಮ್ಮ ಸುತ್ತಲಿನ ಕತ್ತಲೆಯಲ್ಲಿಯೇ ನಮಗೆ ಬಗೆಬಗೆಯ ನೋಟಗಳು ಕಾಣಿಸುವವು. ಆದರೆ ಈ ನೋಟಗಳು ನಮ್ಮ ಕಣ್ಣಿನ ದೋಷದಿಂದ ಹಾರಾಡುವ ನೋಟಗಳೋ, ನಿಜವಾಗಿಯೂ ಅವು ಹಾಗೆಯೇ ಹೊರಗೆ ಇರುವವೋ–ಎಂದು ವಿಚಾರಿಸಲು ನಮಗೆ ಬಿಡುವಿಲ್ಲ.

ಮನೆಯಲ್ಲಿಯೂ ಬೀದಿಯಲ್ಲಿಯೂ ಲಾಂದ್ರಗಳು, ವಾತದೀಪಗಳು, ವಿದ್ಯುದ್ದೀಪಗಳು; ತಲೆಯಮೇಲೆ ಅಂಬರದಲ್ಲಿ ನಕ್ಷತ್ರಗಳು, ಚಂದ್ರ, ಸೂರ್ಯ–ಇವೆಲ್ಲವುಗಳ ಬೆಳಕಿನ ಸಹಾಯವು ನಮಗಿರುವದೆಂದು ನಮ್ಮಗಳ ಎಣಿಕೆ. ಆದರೆ ನಿಜವಾಗಿ ಈ ಬೆಳಕೂ ಒಂದು ಬಗೆಯ ಕತ್ತಲೆಯೇ. ನಮ್ಮಲ್ಲಿ ಎಡವದವರಿಲ್ಲ, ಮುಗ್ಗರಿಸದವರಿಲ್ಲ, ತಬ್ಬಿಬ್ಬಾಗದವರಿಲ್ಲ.

ನಮ್ಮಲ್ಲಿ ಒಬ್ಬಿಬ್ಬರು ದಿಟ್ಟರಿರುವರು. ಅವರು "ಎಲಾ, ಏತಕ್ಕೆ ತಡವರಿಸುವಿರೋ? ದಾರಿ ತಿಳಿಯದೇನು? ಇಕೋ, ಈ ಹಾದಿಯಲ್ಲಿ ಬನ್ನಿ" ಎಂದು ಮಿಕ್ಕವರಿಗೆ ದಾರಿ ತೋರಿಸುವದಕ್ಕೂ ಬರುವರು. ಆದರೇನು? ಎಲ್ಲವೂ ಕುರುಡರ ಸಾಲಿನಂತೆ. ಅವರೂ ದಿಕ್ಕಗಾಣರು, ನಾವೂ ಕಾಣೆವು. ಅವರು ನಮ್ಮ ಕೈಯನ್ನು ಹಿಡಿದುಕೊಂಡು ಮುಂದೆ ಹೋಗುವರು; ಮತ್ತೆ ಕೆಲವರು ನಮ್ಮ ಕೈಯನ್ನು ಹಿಡಿದುಕೊಂಡು ಹಿಂದೆ ಬರುತ್ತಿರುವರು. ನಾವೆಲ್ಲರೂ ಗುಂಡಿಗೆ ಬೀಳುವವರೆ; ಮುಂದಿನವರು ಮೊದಲು ಬೀಳುವರು, ಹಿಂದಿನವರು ಆಮೇಲೆ–ಇಷ್ಟೇ ಹೆಚ್ಚುಕಡಿಮೆ.

ನಮ್ಮನ್ನು ಹೀಗೆ ಕಂಗಾಣದಂತೆ ಸುತ್ತಿಸುತ್ತಿರುವ, ನಮ್ಮ ಸುತ್ತಲೂ ದಟ್ಟವಾಗಿ ಹಬ್ಬಿರುವ, ಈ ಕತ್ತಲೆ ಯಾವದು? ಇದೇ **ಅವಿದ್ಯೆ** **ಸಂ–4, 208**

# ಒಳಬೆಳಕು

ಅಧ್ಯಾತ್ಮಪ್ರಕಾಶವೆಂಬುದು ನಮ್ಮ ಒಳಗಿನ ಬೆಳಕು. ಇದು ಸೂರ್ಯಚಂದ್ರರ ಬೆಳಕಿನಂತಲ್ಲ; ಇದರಲ್ಲಿ ಶೀತವಾಗಲಿ, ಉಷ್ಣವಾಗಲಿ, ಇರುವದಿಲ್ಲ. ಇದು ಹೊತ್ತಿಕೊಳ್ಳುವದಲ್ಲ, ಆರುವದಲ್ಲ; ಇದರಲ್ಲಿ ಯಾವ ಮಾರ್ಪಾಡುಗಳೂ ಇರುವದಿಲ್ಲ. ಈ ಬೆಳಕು ನಮ್ಮೆಲ್ಲರಲ್ಲಿಯೂ ಒಂದೇ ಸಮನೆ ಬೆಳಗುತ್ತಲಿರುವದು.

ಬೆಳಕು ಕತ್ತಲೆಯನ್ನು ತೊಲಗಿಸುವಂತೆ ಇದು ನಮ್ಮಗಳ ಮರಹಿನ ಕತ್ತಲೆಯನ್ನು ತೊಲಗಿಸಬಲ್ಲದು. ಕತ್ತಲೆಯಲ್ಲಿ ಎಡವಿ, ಮುಗ್ಗರಿಸಿ, ಬಿದ್ದು ಗಾಯಪಡೆಯುವ ಜನರಂತೆ ನಮ್ಮಗಳಲ್ಲನೇಕರು ಮರಹಿನ ಕತ್ತಲೆಯ ಮುಸುಕಿನಲ್ಲಿ ದಾರಿಗಾಣದೆ ಎಡವುತ್ತಲೂ ಮುಗ್ಗರಿಸುತ್ತಲೂ ವ್ಯವಹಾರಮಾಡುತ್ತಿರುವೆವು. ಈ ಕತ್ತಲೆಯನ್ನು ಹೇಳಹೆಸರಿಲ್ಲದಂತೆ ಒರಸಿಹಾಕಬೇಕಾದರೆ ಅಧ್ಯಾತ್ಮಪ್ರಕಾಶದ ಬೆಳಕು ಬೇಕು.

ರಾತ್ರಿಯಲ್ಲಿ ನಾವು ಉಪಯೋಗಿಸುವ ಬೆಳಕಿಗೆ ಎಣ್ಣೆಬೇಕು, ಬತ್ತಿಬೇಕು, ದೀಪದ ಕಂಬವೋ ಮತ್ತಾವದಾದರೊಂದು ಬೇರೆಯ ಬಗೆಯ ಆಶ್ರಯವೋ ಬೇಕು. ಇದರಂತೆ ಅಧ್ಯಾತ್ಮಪ್ರಕಾಶವನ್ನು ನಾವು ಉಪಯೋಗಿಸುವದಕ್ಕೆ ಪರಮಾತ್ಮ ಭಕ್ತಿಯೆಂಬ ಎಣ್ಣೆಯು ಬೇಕು, ಬ್ರಹ್ಮಚರ್ಯವೇ ಮುಂತಾದ ಸಾಧನಗಳ ಸಂಸ್ಕಾರದಿಂದೊಡಗೂಡಿದ ಪ್ರಜ್ಞೆಯೆಂಬ ಬತ್ತಿಯು ಬೇಕು, ವಿರಕ್ತಿಯಿಂದೊಡಗೂಡಿದ ಅಂತಃಕರಣವೆಂಬ ದೀಪದಾಧಾರವು ಬೇಕು.

ದೀಪವು ಉರಿಯುವದಕ್ಕೆ ವಾಯುಬೇಕು, ಆದರೆ ಬಲವಾದ ಗಾಳಿ ಇರಕೂಡದು; ಇದರಂತೆ ಅಧ್ಯಾತ್ಮಪ್ರಕಾಶಕ್ಕೆ ಪರಮಾತ್ಮಭಾವನೆಯೆಂಬ ವಾಯುಬೇಕು, ಆದರೆ ಹೊರಗಿನ ವಿಷಯಗಳಿಂದ ಹೊಡೆದಾಡುತ್ತಿರುವ ಚಿತ್ತದ ರಾಗದ್ವೇಷಗಳೆಂಬ ಸುಂಟರುಗಾಳಿಗಳಿರಬಾರದು. ಹೀಗಿದ್ದರೆ ಮಾತ್ರ ಅಧ್ಯಾತ್ಮಪ್ರಕಾಶವು ಬೆಳಗುವದು, ಮರಹಿನ ಕತ್ತಲೆಯನ್ನು ತೊಲಗಿಸುವದು.

ಅಧ್ಯಾತ್ಮಪ್ರಕಾಶದ ಬೆಳಕಿನಲ್ಲಿ ನೋಡಿದಾಗ ಎಲ್ಲವೂ ಆನಂದಮಯವಾಗಿರುತ್ತದೆ, ದುಃಖವೆಂಬುದು ಎಲ್ಲಿಯೂ ಇರುವದೇ ಇಲ್ಲ. ಕತ್ತಲೆಯೆಂಬುದು ಬೆಳಕಿನ ಅಭಾವ ವಾದರೂ ಅದಕ್ಕೊಂದು ಹೆಚ್ಚಿಗೆಯನ್ನು ಕೊಟ್ಟು ಜನರು ಹೇಗೆ ಅದಕ್ಕೆ ಹೆದರಿಕೊಂಡು ನಡೆಯುವರೋ ಅದರಂತೆ ಅಧ್ಯಾತ್ಮಪ್ರಕಾಶವನ್ನು ಕಂಡುಕೊಳ್ಳಲಾರದ ಜನರು ಇಲ್ಲದ ಸಂಕಟಗಳನ್ನು ಅನುಭವಿಸುತ್ತಿರುವರು. ಅವ್ಯವಸ್ಥೆ, ಚಿಂತೆ, ರೋಗ, ಮುಪ್ಪು, ಬಡತನ, ಮರಣ–ಇವುಗಳ ಅಂಜಿಕೆಯೆಲ್ಲವೂ ಅಧ್ಯಾತ್ಮಪ್ರಕಾಶದ ಅಭಾವದಿಂದಲೇ ಉಂಟಾಗಿರುವದು.

ಅಧ್ಯಾತ್ಮಪ್ರಕಾಶವೆಂಬುದು ನಮ್ಮೆಲ್ಲರಲ್ಲಿಯೂ ಇರುವದು, ಒಂದೇ ಸಮಪ್ರಮಾಣ ದಲ್ಲಿರುವದು, ಬೆಳಗುತ್ತಲೇ ಇರುವದು. ನಮ್ಮನಮ್ಮಲ್ಲಿ ನೋಡಿಕೊಂಡರೆ ಸಾಕು, ಕೂಡಲೆ

ಇದು ಗೋಚರವಾಗಿಬಿಡುವದು. ಯಾವ ವೆಚ್ಚವೂ ಇಲ್ಲದೆ ಇದನ್ನು ಕಂಡುಕೊಂಡು ನಲಿದಾಡುವದು ನಮ್ಮೆಲ್ಲರಿಗೂ ಸಾಧ್ಯವಾಗಿರುವದು. ಹೀಗಿದ್ದೂ ನಾವು ಮರಹಿನ ಕತ್ತಲೆಯಲ್ಲೇಕೆ ಸಂಕಟಪಡಬೇಕು? ನಮ್ಮನಮ್ಮಲ್ಲಿಯೇ ಇರುವ ಆ ಬೆಳಕನ್ನು ಕಂಡು ನಮ್ಮ ಜೀವನವನ್ನು ಏಕೆ ಸುಖಮಯವಾಗಿ ಮಾಡಿಕೊಳ್ಳಬಾರದು? **ಸಂ-6, 1**

## ಅಧ್ಯಾತ್ಮದ ಬೆಳಕು ಏಕೆ ಕಾಣಿಸುವದಿಲ್ಲ?

ನಾನು ಬರೆದ ಹಿಂದಿನ ಲೇಖನವನ್ನು ಓದಿದವರಲ್ಲೊಬ್ಬರು ನನ್ನನ್ನು ಹೀಗೆ ಕೇಳಿದರು: "ಏನಿರಯ್ಯ, ನಮ್ಮೆಲ್ಲರಲ್ಲಿಯೂ ಒಂದೇ ಸಮನಾಗಿ ಅಧ್ಯಾತ್ಮಪ್ರಕಾಶವು ಇರುವದು ನಿಜವೆ? ಇದ್ದರೆ ಅದು ನಮಗೇತಕ್ಕೆ ಕಾಣಿಸುವದಿಲ್ಲ? ಅದನ್ನು ಕಂಡುಕೊಂಡ ಮಾತ್ರದಿಂದ ಅವ್ಯವಸ್ಥೆ, ಚಿಂತೆ, ರೋಗ, ಮುಪ್ಪು, ಬಡತನ, ಮರಣ-ಇವೆಲ್ಲವೂ ತೊಲಗುವವೆಂದು ಬರೆದಿದ್ದೀರಲ್ಲ! ಇದು ನಿಜವೆ? ಬೇನೆಗಳು ಇಷ್ಟು ಮಾತ್ರದಿಂದ ಹೋಗುವದಾದರೆ ವೈದ್ಯರೂ ಆಸ್ಪತ್ರೆಗಳೂ ಏತಕ್ಕೆ? ಬಡತನವು ನಿಜವಾಗಿಯೂ ಹಿಂಗುವದಾದರೆ ಆಮೇಲೆ ಕೂಲಿನಾಲಿ ಮಾಡುವವರು ಯಾರು? ಆಮೇಲೆ ರಾಜ್ಯ, ಪ್ರಜೆ, ಜನಾಂಗ-ಎಂಬ ತಾರತಮ್ಯವಿದ್ದೀತೆ? ಮುಪ್ಪುಮರಣಗಳನ್ನು ಕೂಡ ಕಳೆದುಕೊಂಡು ಇರುವದು ಸಾಧ್ಯವೆ? ಹಾಗಾದರೆ ಅಧ್ಯಾತ್ಮಪ್ರಕಾಶವೆಂಬುದೇನು ಶುಕ್ರಾಚಾರ್ಯರ ಸಂಜೀವಿನಿಯೇ? ಇದು ಇಷ್ಟರವರೆಗೆ ಯಾರಿಗೂ ಸಿಕ್ಕದೆ ನಿಮ್ಮೊಬ್ಬರ ಕೈಪೆಟ್ಟಿಗೆಯಲ್ಲಿ ಮಾತ್ರ ಅಡಗಿತ್ತೆ? ಇದೂ ನಿಜವೆಂದರೆ ನಿಮ್ಮ ತಲೆಯಲ್ಲಿ ಆಗಲೆ ನರೆಕೂದಲುಗಳು ಕಾಣಿಸಿಕೊಳ್ಳುತ್ತಿರುವವಲ್ಲ, ಅದಕ್ಕೇಕೆ ಆ ಸಂಜೀವಿನಿಯನ್ನು ಮೊದಲು ಉಪಯೋಗಿಸಿಕೊಳ್ಳಲಿಲ್ಲ?" ಇತ್ಯಾದಿ.

ಇಂಥ ಪ್ರಶ್ನೆಯು ಜನರಲ್ಲಿ ಹುಟ್ಟುವದಿಲ್ಲವೆಂದೇನೂ ನಾನು ನಂಬಿರಲಿಲ್ಲ. ಬಹುಜನರು ಒಳಗೊಳಗೆ ಅಂದುಕೊಳ್ಳುತ್ತಿರುವದನ್ನೇ ಈ ಮಹಾಶಯರು ಸ್ಪಷ್ಟವಾಗಿ ಆಡಿತೋರಿಸಿರುತ್ತಾರೆ. ಅಷ್ಟೇ. ಆದ್ದರಿಂದ ಇವರು ಆಡಿರುವ ಮಾತುಗಳನ್ನು ಒಂದೊಂದಾಗಿ ತೆಗೆದುಕೊಂಡು ಇನ್ನು ಮೇಲೆ ಚರ್ಚೆಗೆ ಇಟ್ಟುಕೊಳ್ಳಬೇಕೆಂದಿರುವೆನು.

ಅಧ್ಯಾತ್ಮಪ್ರಕಾಶವು ನಮ್ಮೊಳಗೇ ಇದ್ದರೆ ನಮಗೇಕೆ ಕಾಣಿಸುವದಿಲ್ಲ?-ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ಮೊದಲು ನಾನೊಂದು ಪ್ರಶ್ನೆ ಹಾಕುತ್ತೇನೆ. ದಯವಿಟ್ಟು ಅದಕ್ಕೆ ಉತ್ತರವನ್ನು ಹೇಳಿರಿ. ಒಂದಾನೊಂದು ಹುಣ್ಣಿಮೆಯಲ್ಲಿ ಚಂದ್ರೋದಯವಾಗಿ ಒಂದೆರಡು ಘಂಟೆಯಾಗಿತ್ತು. ಹಾಲುಚೆಲ್ಲಿದಂತೆ ಎಲ್ಲೆಲ್ಲಿಯೂ ಬೆಳದಿಂಗಳು ತುಂಬಿತ್ತು. ಒಬ್ಬನು ಪಶ್ಚಿಮದಿಗಂತದಲ್ಲಿಯೇ ಕಣ್ಣಿಟ್ಟು ಎವೆಯಿಕ್ಕದೆ ಚಂದ್ರನನ್ನು ಹುಡುಕಿ ನೋಡಿದನು. ಅವನಿಗೆ ಚಂದ್ರನು ಕಾಣಿಸಲೇ ಇಲ್ಲ. ಅದೇಕೆ?

ನಮಗೆಲ್ಲರಿಗೂ ಅಧ್ಯಾತ್ಮಪ್ರಕಾಶವನ್ನು ಕಂಡುಕೊಳ್ಳುವ ಕುತೂಹಲವಿದೆ. 'ಅಜ್ಞಾನವು ಹೋಗಲಿ, ಅಶಾಂತಿಯು ತೊಲಗಲಿ, ರೋಗವು ನೀಗಲಿ, ಮುಪ್ಪು ಮರೆಯಾಗಲಿ, ಬಡತನವು ಬತ್ತಲಿ, ಮರಣವು ಮಾಯವಾಗಲಿ'-ಎಂದು ಯಾರು ಹಾರೈಸುವದಿಲ್ಲ? ಆದರೆ ನಮ್ಮ ಪ್ರಯತ್ನದ ಕ್ರಮವು ಮಾತ್ರ ಸರಿಯಾಗಿಲ್ಲ. ಮೋಡಕವಿದಿರುವ ಅಮಾವಾಸ್ಯೆಯಲ್ಲಿ ದೀಪವನ್ನು ಹುಡುಕಿಕೊಂಡು ಯಾರೂ ಕಗ್ಗಾಡಿಗೆ ನುಗ್ಗುವದಿಲ್ಲ; ಆದರೆ ನಮ್ಮನ್ನು ನೋಡಿರಿ! ಒಳಗಿರುವ ಬೆಳಕನ್ನು ಕಂಡುಕೊಳ್ಳದೆ, ಹೊರಗಿನ ವಿಷಯಗಳ ಕಗ್ಗತ್ತಲೆಯ ಕಡೆಗೇ ಓಡುತ್ತಿರುವೆವು. ಅಲ್ಲಿ ತಡಕಿನೋಡಿ ಅಧ್ಯಾತ್ಮಪ್ರಕಾಶ ವೆಂಬುದೇ ಇಲ್ಲವೆನ್ನುತ್ತಿರುವೆವು.

ನಿಮಗೆ ಅಧ್ಯಾತ್ಮದ ಬೆಳಕು ಬೇಗನೆ ಕಾಣಬೇಕೊ? ಹಾಗಾದರೆ, ನಿಟ್ಟುಸಿರಿಟ್ಟು ಓಡುತ್ತಿರುವದನ್ನು ಮೊದಲು ನಿಲ್ಲಿಸಿರಿ. ನಿಮ್ಮನಿಮ್ಮೊಳಗೆ ಇಣಿಕಿನೋಡಿರಿ. ಇದಕ್ಕಾಗಿ ಯಾವ ಕಿಟಕಿಯನ್ನೂ ತೆರೆದು ನೋಡಬೇಕಾದ್ದಿಲ್ಲ; ಅದಕ್ಕಿಂತಲೂ ಒಂದು ಸುಲಭವಾದ ಉಪಾಯವಿರುವದು. ನಿಮ್ಮ ಮನಸ್ಸಿನ ಸ್ಥಿತಿಯನ್ನು ಸ್ವಲ್ಪ ಮಾರ್ಪಡಿಸಿಕೊಳ್ಳಿರಿ; ಕೂಡಲೆ ಈ ಬೆಳಕು ಗೋಚರವಾಗುತ್ತದೆ. ಸಂ-6, 41

## ಅಧ್ಯಾತ್ಮದರಿವಿನಿಂದಾಗುವ ಪ್ರಯೋಜನ

ನಮ್ಮೊಳಗಿನ ಅಧ್ಯಾತ್ಮದ ಬೆಳಕನ್ನು ಕಂಡುಕೊಂಡ ಮಾತ್ರದಿಂದ ಚಿಂತೆ, ರೋಗ, ಮುಪ್ಪು, ಬಡತನ, ಮರಣ-ಮುಂತಾದವುಗಳನ್ನೆಲ್ಲ ಗೆಲ್ಲಬಹುದೆಂದು ನಮ್ಮ ಶಾಸ್ತ್ರಗಳು ಸಾರುತ್ತಲಿವೆ. ಮಹಾ ಪರಿಮಾಣದ ಬ್ರಹ್ಮಾಂಡಕ್ಕೆ ಹೋಲಿಸಿದರೆ ಮಾನವನು ಎಂಥ ಅಲ್ಪಪ್ರಾಣಿಯೆಂಬುದನ್ನು ಮನದಂದವರು 'ಇದೆಂಥ ಜಂಭದ ಮಾತು!' ಎನ್ನುವದು ಸಹಜವಾಗಿದೆ. ಆದರೂ ನಮ್ಮ ಕಣ್ಣಿನಿಂದ ನೋಡದೆ ಶಾಸ್ತ್ರದ ಕಣ್ಣಿನಿಂದ ನೋಡುವದನ್ನು ಕಲಿತರೆ ಇದೆಲ್ಲವೂ ಸಾಧ್ಯವೆಂದೇ ತೋರುತ್ತದೆ. ಏಕೆಂದರೆ ಎಂದೆಂದಿಗೂ ಚಿಂತೆಯಿಂದ ಬೇಯುತ್ತಿರುವ, ಬೇನೆಯಲ್ಲಿ ಬಿದ್ದು ನರಳುತ್ತಿರುವ, ಮುಪ್ಪಿನಿಂದ ಕಂದಿ ಕುಂದುತ್ತಿರುವ, ಮರಣದಿಂದ ಮಾಯವಾಗುತ್ತಿರುವ ಅಲ್ಪಜೀವರಾದ ನಮ್ಮೆಲ್ಲರ ನಿಜವಾದ ಆತ್ಮನು ಚಿಂತಾಶೂನ್ಯ ನಾಗಿಯೂ, ರೋಗಹೀನನಾಗಿಯೂ, ಜರಾಮರಣವರ್ಜಿತನಾಗಿಯೂ ಇರುತ್ತಾ ನೆಂಬುದು ಆ ದೃಷ್ಟಿಯಲ್ಲಿ ನಿರ್ವಿವಾದ ವಿಷಯವಾಗಿರುತ್ತದೆ.

ಇದಕ್ಕೊಂದು ದೃಷ್ಟಾಂತವನ್ನು ಕೊಡಬಹುದು: ಕನಸಿನಲ್ಲಿ ಒಬ್ಬನು ಬಡತನದಿಂದ ನರಳುತ್ತಾ ಕುಡಿಯುವದಕ್ಕೆ ಗಂಜಿಯು ಕೂಡ ಇಲ್ಲದೆ ಬಗೆಬಗೆಯಾದ ರೋಗಗಳಿಂದ ಸಂಕಟಪಡುತ್ತಾ ಹೊದ್ದುಕೊಳ್ಳುವದಕ್ಕೆ ಒಂದು ತುಂಡು ಬಟ್ಟೆಯೂ ಇಲ್ಲದೆ ಎಲ್ಲಿಯೋ

ಒಂದು ಕಡೆ ಮುದುರಿಕೊಂಡಿರುತ್ತಾನೆಂದು ತಿಳಿಯೋಣ. ಇಂಥವನ ಎದುರಿಗೆ ಅದೇ ಕನಸಿನಲ್ಲಿರುವ ಯಾವನಾದರೂ ಬಂದು 'ಹೆದರದಿರು, ನೀನು ದರಿದ್ರನಲ್ಲ, ನಿನಗೆ ರೋಗವಿಲ್ಲ, ನೀನು ತಿಳಿದುಕೊಂಡಿರುವಂತೆ ನಿನಗೆ ನಿಜವಾಗಿ ಹಸಿವಾಗಿಲ್ಲ' ಎಂದು ಮುಂತಾಗಿ ಹೇಳಿದರೆ ಅವನ ಮನಸ್ಸಿನಲ್ಲಿ ಹೇಗಾದೀತು, ಸ್ವಲ್ಪ ಊಹಿಸಿ! ಅವನು "ನನಗೆ ಆಗಿರುವ ಸಂಕಟವನ್ನು ಗಾಯದ ಮೇಲೆ ಉಪ್ಪುದುರಿಸಿದಂತೆ ಕೆರಳಿಸುವ ಮಾತುಗಳಲ್ಲವೆ, ಇವು !" ಎಂದುಕೊಳ್ಳುವನು. ಆದರೆ ಎಚ್ಚತ್ತವನೊಬ್ಬನು ಸುಮ್ಮನೆ ಕನವರಿಸಿಕೊಂಡು ಸಂಕಟಪಡುತ್ತಿರುವ ಇವನನ್ನು "ಅಪ್ಪ, ಏಳು, ಏಕೆ ಹೀಗೆ ಕನವರಿಸಿಕೊಳ್ಳುತ್ತೀಯೆ?" ಎಂದು ತಟ್ಟಿ ಎಬ್ಬಿಸಿದರೆ? ಅವನು ಎಚ್ಚತ್ತಕೂಡಲೆ ಕನಸಿನಲ್ಲಿ ತಾನು ತಿಳಿದುಕೊಂಡ ಅಲ್ಪತನದ ಅರಿವಿಗೆ ತಾನೇ ನಾಚಿಕೆಪಡುವನು, ಅಲ್ಲವೆ?

ಅಧ್ಯಾತ್ಮದರಿವೆಂಬುದೂ ಹೀಗೆಯೇ. ನಮ್ಮಂತೆಯೇ ಅವಿದ್ಯೆಯ ಕಗ್ಗತ್ತಲೆಯಲ್ಲಿ ಸಂಸಾರನಿದ್ರೆಯಿಂದ ಗೊರಕೆಯಿಡುತ್ತಾ ಸಂಕಟಪಡುತ್ತಿರುವವರು "ಹೆದರಬೇಡಿ! ನಿಮಗೆ ಚಿಂತೆಯಿಲ್ಲ, ರೋಗವಿಲ್ಲ, ಮುಪ್ಪಿಲ್ಲ, ಮರಣವಿಲ್ಲ! ಎಂದರೆ ನಮಗೆ ಅದರಲ್ಲಿ ವಿಶ್ವಾಸವಾಗುವದಿಲ್ಲವೆಂಬುದು ಹಾಗಿರಲಿ, ಅವರು ನಮ್ಮನ್ನು ಹಾಸ್ಯಮಾಡುತ್ತಿರುವರೆಂದೇ ತೋರುವದು. ಆದರೆ ಯಾವ ಮಹಾತ್ಮರು, ಸಂಸಾರನಿದ್ರೆಯಿಂದ ತಾವು ಎಚ್ಚತ್ತವರಾಗಿ, ಬಯಲುಕನವರಿಕೆಯಿಂದ ಕಳವಳಪಡುತ್ತಿರುವ ನಮ್ಮಗಳ ಮೇಲೆ ಕನಿಕರದಿಂದ ತಮ್ಮ ಅಮೃತಹಸ್ತದಿಂದ ತಟ್ಟಿ ನಮ್ಮನ್ನು ಎಚ್ಚರಗೊಳಿಸುವರೋ, ಅವರಿಗೆ ನಾವು ಎಂದೆಂದಿಗೂ ಕೃತಜ್ಞರಾಗಿರುವೆವು; ನಮ್ಮ ಹಿಂದಿನ ಮಬ್ಬುಗಣ್ಣಿನ ತಿಳಿವಳಿಕೆಯನ್ನು ನೆನಸಿಕೊಂಡು ನಮ್ಮಲ್ಲಿ ನಾವೇ ನಾಚಿಕೊಳ್ಳುವೆವು. ನಿಜವಾದ ಅಧ್ಯಾತ್ಮದ ಬೆಳಕು ನಮಗೆ ಗೋಚರವಾಗುವದೂ ಆಗಲೇ, ಅದರ ಪ್ರಯೋಜನದಿಂದ ನಾವು ನಲಿದಾಡುವದೂ ಆಗಲೇ. **ಸಂ–6, 81**

## ಅರಿತವರೂ ಅರಿಯದವರೂ

ಅಧ್ಯಾತ್ಮದ ಬೆಳಕನ್ನು ಕಂಡವರಿಗೂ ಅಜ್ಞರಿಗೂ ಒಂದು ಮುಖ್ಯವಾದ ತಾರತಮ್ಯವೇನೆಂದರೆ ಅವರು ಅಜ್ಞಾನದ ಕತ್ತಲೆಯನ್ನು ಎಂದಿಗೂ ಕಾಣುವ ಹಾಗಿಲ್ಲ. ಕತ್ತಲೆಯೆಂಬುದು ನಿಜವಾಗಿ ಇಲ್ಲದೆ ಇದ್ದರೂ ಜನರನ್ನು ಅಂಜಿಸುತ್ತಿರುವದೆಂಬುದನ್ನು ಅವರು ಚೆನ್ನಾಗಿ ಬಲ್ಲರು. ಅಜ್ಞರೋ ಎಂದರೆ ಕತ್ತಲೆಯನ್ನೇ ಬೆಳಕೆಂದು ಭ್ರಮಿಸಿರುವರು.

ಕತ್ತಲೆಯಲ್ಲಿಯೇ ಸಂಚರಿಸುತ್ತಿರುವ ಗೂಬೆಗೆ ಪ್ರಚಂಡಕಿರಣನಾದ ಸೂರ್ಯನ ಪ್ರಕಾಶವನ್ನು ಕಂಡು ಅನುಭವಿಸುವ ಯೋಗವು ಎಂದಿಗೂ ಇಲ್ಲವೇ ಇಲ್ಲ. ಒಂದು ವೇಳೆ ಅದು ಅಪ್ಪಿತಪ್ಪಿ ನಡುಹಗಲಿನ ಬಿಸಲಿನಲ್ಲಿ ಎಂದಾದರೂ ಹೊರಕ್ಕೆ ಬಂದರೆ

ಅದರ ಕಣ್ಣು ಮಂಜಾಗುವದು. ಆದ್ದರಿಂದ ಅದಕ್ಕೆ ಸೂರ್ಯನ ಬೆಳಕೆಂಬುದು ಇಲ್ಲವೇ ಇಲ್ಲವೆಂಬ ದೃಢವಾದ ನಂಬಿಕೆಯಾಗಿಬಿಟ್ಟಿರುವದು; ಇಲ್ಲದಿದ್ದರೆ, ಸೂರ್ಯನ ಬೆಳಕು ತುಂಬ ಅನರ್ಥಕಾರಿಯೆಂಬುದು ಅದರ ನಿಶ್ಚಿತಜ್ಞಾನವಾಗಿರುವದು. ಇದರಂತೆ ಅಜ್ಞರಿಗೆ ಲೌಕಿಕವ್ಯವಹಾರದ ಕಗ್ಗತ್ತಲೆಯೇ ನಿಜವಾಗಿರುವದು. "ಇದಕ್ಕಿಂತ ಹೆಚ್ಚಿನದಾದ ಅಧ್ಯಾತ್ಮವ್ಯವಹಾರವೊಂದು ಇದೆ, ಅಧ್ಯಾತ್ಮದ ಬೆಳಕಿನಲ್ಲಿ ಸಂಚರಿಸುವವರು ಎಡವಬೇಕಾದದ್ದಿಲ್ಲ, ಮುಗ್ಗರಿಸಬೇಕಾದದ್ದಿಲ್ಲ:–ಎಂದು ಯಾರಾದರೂ ಹೇಳಿದರೆ ಅವರು ಸಂಶಯದಿಂದ ತಲೆಯನ್ನಲ್ಲಾಡಿಸುವರು; ಅಥವಾ ಅಪ್ಪಿತಪ್ಪಿ ಸ್ವಲ್ಪ ಅಧ್ಯಾತ್ಮವಿಚಾರವನ್ನೋ ಸಾಧನವನ್ನೋ ಕೈಕೊಂಡಂತೆ ಮಾಡಿ ಅದು ತಮಗೆ ಒಗ್ಗದ ಅನರ್ಥಕಾರಿಯಾದ ವಸ್ತುವೆಂದೇ ನಿಶ್ಚಯಿಸಿಬಿಡುವರು.

ಇಲ್ಲಿ ಒಂದು ವಿಶೇಷವೇನೆಂದರೆ, ಅಜ್ಞನಿಗೆ ಅಧ್ಯಾತ್ಮವಿಚಾರವೆಂಬುದು ಕಗ್ಗತ್ತಲೆಯೇ ಆಗಿರುವದು. ಅಲ್ಲಿ ಅವನಿಗೆ ಪೂರ್ಣವಾಗಿಯೂ ಅಜ್ಞಾನದ ನಿದ್ರೆಯೇ ಇರುವದು. ಅವನು ಮಾಡುವ ಅಲ್ಪಸ್ವಲ್ಪ ವಿಚಾರವೆಂಬುದೂ ಆ ನಿದ್ರೆಯಲ್ಲಿ ಅವನು ಕಾಣುತ್ತಿರುವ ಕನಸುಗಳೇ ಆಗಿರುವದು. ಜ್ಞಾನಿಯ ವಿಚಾರವು ಹಾಗಲ್ಲ. ಅವನಿಗೆ ತಾನಿರುವ ಅಧ್ಯಾತ್ಮದ ಬೆಳಕಿನ ಸ್ವಭಾವವು ನಿಸ್ಸಂಶಯವಾಗಿ ತಿಳಿದಿದೆ. ಅದರಲ್ಲಿ ಸಂಚರಿಸುವವರಿಗೆ ಹತ್ತು ದಿಕ್ಕುಗಳೂ ಆನಂದಮಯವಾಗಿರುವವೆಂಬುದೂ ಅವನಿಗೆ ತಿಳಿದಿದೆ; ಅಜ್ಞರು ತೊಳಲುತ್ತಿರುವ ಅಜ್ಞಾನನಿದ್ರೆಯ ಕನಸಿನ ಕಗ್ಗಾಡುಗಳ ಸ್ವರೂಪವೂ ಅವನಿಗೆ ತಿಳಿದಿರುತ್ತದೆ. ಅವರ ಕಷ್ಟಸುಖಗಳೂ ಅವುಗಳ ಮಾಯಾರೂಪವೂ ಅವನಿಗೆ ನಿಶ್ಚಿತವಾಗಿ ತಿಳಿದಿರುತ್ತದೆ. ಅದರಿಂದ ಅವರು ಹೇಗೆ ಪಾರಾಗಬಹುದೆಂಬುದೂ ಅವನಿಗೆ ತಿಳಿದಿದೆ.

ಇಷ್ಟೇ ಅಲ್ಲ. ಜ್ಞಾನಿಯಾದ ಮಹಾತ್ಮನು ಮಹಾಕರುಣಿಯಾಗಿರುತ್ತಾನೆ. ಅವನಿಗೆ ತಾನೊಬ್ಬನು ಸರಿಯಾದ ಹಾದಿಯಲ್ಲಿ ಸಂಚರಿಸುತ್ತಿರುವೆನೆಂಬುದರಿಂದ ಸಂತೃಪ್ತಿಯಿಲ್ಲ. ತನ್ನಂತೆ ಎಲ್ಲರೂ ಅಜ್ಞಾನನಿದ್ರೆಯಿಂದ ಎಚ್ಚತ್ತು ಅಧ್ಯಾತ್ಮದ ಹಿತಕರವಾದ ಬೆಳಕಿನಲ್ಲಿ ಆನಂದದಿಂದ ಅಡ್ಡಾಡುತ್ತಿರಲೆಂಬ ಆಸೆಯು ಅವನಿಗೆ ಉಕ್ಕುತ್ತಿರುವದು. ಅದಕ್ಕಾಗಿ ತನ್ನ ಕೈಯಲ್ಲಾಗುವ ಸಹಾಯವನ್ನೆಲ್ಲ ಮತ್ತೊಬ್ಬರಿಗೆ ಮಾಡುವದಕ್ಕೆ ಅವನು ಸಿದ್ಧನಾಗಿರುವನು. ಅವನ ಅಮೃತವಾಣಿಯು ನಮ್ಮ ಕಿವಿಯೊಳಕ್ಕೆ ಬಿದ್ದರೆ ಸಾಕು, ಗರುಡನು ಚಿಮುಕಿಸಿದ ಅಮೃತಬಿಂದುಗಳಿಂದ ಇಂದ್ರಜಿತುವಿನ ಮಾಯಾಯುದ್ಧದಲ್ಲಿ ಮೂರ್ಛೆಹೋಗಿದ್ದ ಶ್ರೀರಾಮನ ಸೈನಿಕರು ಎಚ್ಚತ್ತಹಾಗೆ ನಾವು ಚಟ್ಟನೆ ಎಚ್ಚತ್ತು ಜೀವನದ ಸಂಗ್ರಾಮಕ್ಕೆ ಸನ್ನದ್ಧರಾಗುವೆವು. ಆಗ ನಮ್ಮ ಜೀವನದ ತೊಡಕುಗಳೆಲ್ಲ ಬಿಚ್ಚಿಕೊಳ್ಳುವವು. ಹೆಜ್ಜೆಹೆಜ್ಜೆಗೂ ನಮ್ಮನ್ನು ಕಾಡುತ್ತಿರುವ ಚಿಂತೆ, ರೋಗ, ಮುಪ್ಪು, ಬಡತನ, ಅವ್ಯವಸ್ಥೆ, ಕಲಹ–ಮುಂತಾದವುಗಳೆಲ್ಲ ಮಾಯವಾಗುವವು ! ಸಂ–6, 101

# ಅಧ್ಯಾತ್ಮಪ್ರಕಾಶದಿಂದಾಗುವ ದುಃಖನಿವಾರಣೆ

ಅಧ್ಯಾತ್ಮದ ಬೆಳಕನ್ನು ಕಂಡುಕೊಂಡ ಮಾತ್ರದಿಂದ ಅವ್ಯವಸ್ಥೆ, ಚಿಂತೆ, ಬಡತನ, ರೋಗ, ಮುಪ್ಪು, ಮರಣ-ಇವೆಲ್ಲ ತೊಲಗುವವೆ?-ಎಂಬ ಪ್ರಶ್ನೆಗೆ ಈಗ ಉತ್ತರವನ್ನು ಸಂಕ್ಷೇಪವಾಗಿ ಹೇಳುವುದಕ್ಕೆ ಹೊರಡಬಹುದು.

ಬೆಳಕನ್ನು ಕಂಡುಕೊಂಡಮಾತ್ರದಿಂದ ತೊಲಗುವ ತೋರಿಕೆಗಳ ಸ್ವರೂಪವು ಹೇಗಿರುವದೆಂಬುದನ್ನು ಯಾರಿಗೂ ಹೇಳಿಕೊಡಬೇಕಾಗಿಲ್ಲ. ಕತ್ತಲೆಯಲ್ಲಿ ದೂರಕ್ಕೆ ಒಬ್ಬ ಮನುಷ್ಯನು ನಿಂತಿರುವಂತೆ ಕಾಣಿಸುತ್ತಿತ್ತು; ಅವನು ತೋಳುಗಳನ್ನು ಚಾಚಿರುವಂತೆ ತೋರುತ್ತಿತ್ತು; ಅವನು ತಲೆಯ ಕೂದಲನ್ನೆಲ್ಲ ಕೆದರಿಕೊಂಡಿರುವಂತೆ ಭಾಸವಾಗುತ್ತಿತ್ತು. ಇದನ್ನು ನೋಡಿದ ಹುಡುಗನಿಗೆ ಮೈಬೆವರಿಟ್ಟಿತು, ಕೈಕಾಲುಗಳಲ್ಲಿ ನಡುಕವು ಹುಟ್ಟಿತು. ಕಿಟ್ಟನೆ ಕಿರಚಿಕೊಂಡನು. ಇಷ್ಟರಲ್ಲಿ ಮನೆಯವರು ಯಾರೋ ಒಂದು ಕೈದೀವಿಗೆಯನ್ನು ತಂದರು. ಅದರ ಬೆಳಕಿನಲ್ಲಿ ನೋಡಲಾಗಿ ಮೊದಲು ಮನುಷ್ಯನು ನಿಂತಿದ್ದ ಕಡೆಯಲ್ಲಿ ಒಂದು ಈಚಲಮರವಿತ್ತು. ಮನುಷ್ಯನು ಎಲ್ಲಿ?-ಎಂದು ಹುಡುಗನು ಕೇಳಲಿಲ್ಲ; ಮನುಷ್ಯನು ಇರಲೇ ಇಲ್ಲ, ಮರವನ್ನೇ ಮನುಷ್ಯನೆಂದುಕೊಂಡೆನು-ಎಂಬುದನ್ನು ತಿಳಿದುಕೊಂಡುಬಿಟ್ಟನು.

ಅಧ್ಯಾತ್ಮದ ಬೆಳಕನ್ನು ಕಂಡ ಮಾತ್ರದಿಂದ ತೊಲಗುವ ಅವ್ಯವಸ್ಥೆ, ಚಿಂತೆ, ಬಡತನ, ರೋಗ-ಮುಂತಾದವೂ ಹೀಗೆಯೇ. ಅವು ನಮ್ಮ ಅಜ್ಞಾನದ ಕತ್ತಲೆಯಲ್ಲಿ ತೋರಿ ಕೊಳ್ಳುವವು. ಅವುಗಳಿಂದ ನಮಗೆ ಮಿತಿಮೀರಿದ ಅಂಜಿಕೆಯೂ ಕಳವಳವೂ ಆಗುತ್ತಿರುವವು. ಆಗ ನಾವು ಏನು ಮಾಡಬೇಕು? ಹುಡುಗನಂತೆಯೇ ನಾವೂ ಕೂಗಿಕೊಳ್ಳಬೇಕು. ಸುಮ್ಮನೆ ಅಳುತ್ತಾ ಕೂರಬೇಕೆಂದರ್ಥವಲ್ಲ. ಆ ಕೆಲಸವನ್ನು ಈಗಾಗಲೆ ಎಷ್ಟೋ ಜನರು ಮಾಡುತ್ತಿರುತ್ತಾರೆ. ಅದರಿಂದ ಯಾವ ಪುರುಷಾರ್ಥವೂ ಅವರಿಗೆ ಆಗಿಲ್ಲ. ಇಂಥ ಬಿಕ್ಕಟ್ಟಿನ ಸಮಯದಲ್ಲಿ ನಮ್ಮ ಪೌರುಷವೇ ನಡೆಯುವದೆಂದು ಹೇಳುವದಕ್ಕೂ ಇಲ್ಲ. ಹುಡುಗನಿಗೆ ಕೈಕಾಲುಗಳಲ್ಲಿ ನಡುಕವು ಹುಟ್ಟಿಕೊಂಡಂತೆಯೇ ನಮಗೂ ಈ ಭೀಕರ ದೃಶ್ಯಗಳನ್ನು ತೊಲಗಿಸುವದಕ್ಕೆ ಹೊರಟಾಗ ಅಂಜಿಕೆಯಾಗುವದು, ಎದೆಗೆಡುವದು. ಉತ್ತರಕುಮಾರನಂತೆ ಮೊದಮೊದಲು ಸ್ವಲ್ಪ ಧೈರ್ಯತೋರಿಸುವ ಹೆಮ್ಮೆಯ ಮಾತುಗಳು ನಮ್ಮ ಬಾಯಿಯಿಂದ ಹೊರಕ್ಕೆ ಬರಬಹುದು. ಆದರೇನು? ಕೊನೆಗೆ ಅವುಗಳ ಮೇಲೆ ನಮ್ಮ ಆಟವೇನೂ ಸಾಗದೆ, ಇದೆಲ್ಲ ಪ್ರಪಂಚದಲ್ಲಿ ಸಹಜವಾಗಿರತಕ್ಕದ್ದೇ ಎಂದು ನಿಶ್ಚಯಿಸಿ, ನಿಟ್ಟುಸಿರುಬಿಡುತ್ತಾ, ಅವುಗಳಿಗೆ ಸೆರೆಸಿಕ್ಕಿ ಬಿಡುತ್ತೇವೆ! ಆದ್ದರಿಂದ ಹೊರಗಿನ ಈ ದೃಶ್ಯಗಳಿಂದ ಪಾರಾಗಲು ಒಣ ಪೌರುಷದ

ಮಾತು ಸಾಲದು, ಸುಮ್ಮನೆ ಅಳುತ್ತಾ ಕೂರುವದು ಹೇಡಿತನವಾಗಿರುವದು. ನಾವು ಇವುಗಳನ್ನು ತಪ್ಪಿಸಿಕೊಳ್ಳುವದಕ್ಕೆ ಮಾಡಬೇಕಾದದ್ದೆಲ್ಲ ಇಷ್ಟೆ: ಹುಡುಗನು 'ಅಮ್ಮ!' ಎಂದು ತನ್ನ ತಾಯಿಯನ್ನು ಕೂಗಿ ಕರೆದಂತೆ ನಾವೂ ನಮ್ಮ ತಾಯಿಯ ಸ್ಥಾನದಲ್ಲಿದ್ದು ಜಗದಂಬೆಯೆಂದೂ, ತಂದೆಯ ಸ್ಥಾನದಲ್ಲಿದ್ದು ಅಥವಾ ತಂದೆಗಳಿಗೆಲ್ಲ ತಂದೆಯಂತಿದ್ದು ಜಗತ್ಪಿತೃವೆಂದೂ ಪಿತಾಮಹನೆಂದೂ ಪ್ರಸಿದ್ಧನಾಗಿರುವ ಪರಮಾತ್ಮನನ್ನು ಆರ್ತಧ್ವನಿಯಿಂದ ಕರೆದು ಕೂಗಬೇಕು. ಆಗ ಮಹಾಕಾರುಣಿಕನಾದ ಆತನು ಅಧ್ಯಾತ್ಮದ ಬೆಳಕನ್ನು ನಮಗೆ ತೋರಿಸಿಕೊಡುವನು. ಆಗ ಅಜ್ಞಾನದ ಕತ್ತಲೆಯೆಲ್ಲ ಮಾಯವಾಗುವದು. ಅದರೊಂದಿಗೆ ಮೇಲೆ ಹೇಳಿದ ದೃಶ್ಯಗಳೆಲ್ಲ ಹೇಳಹೆಸರಿಲ್ಲದಂತೆ ಪಲಾಯನವಾಗುವವು, ಇದ್ದಲ್ಲಿಯೇ ಮೈಗರೆಯುವವು, ಅವುಗಳ ಹುಟ್ಟಡಗಿಹೋಗುವದು.

ಅಧ್ಯಾತ್ಮದ ಬೆಳಕನ್ನು ಕಂಡುಕೊಂಡಮೇಲೆ ರೋಗಿಗಳಿಗೆ ವೈದ್ಯರೂ ಆಸ್ಪತ್ರೆಗಳೂ ಬೇಡವೆಂದಾಗಲಿ, ಅನಾಥರಿಗೆ ಸಹಾಯಮಾಡುವ ಪೋಷಕರೂ ಧನವಂತರೂ ಬೇಡವೆಂದಾಗಲಿ, ಲೋಕದಲ್ಲಿ ಒಬ್ಬೊಬ್ಬರ ಮನೆಯಲ್ಲಿ ಥೈಲಿಗಟ್ಟಲೆಯ ರೂಪಾಯಿಗಳು ತುಂಬಿ ಯಾರೊಬ್ಬರೂ ಎಂದೆಂದಿಗೂ ದೇಹವನ್ನು ಬಿಡದೆಯೇ ಇದ್ದುಬಿಡುವ ರೆಂದಾಗಲಿ ನಾನು ಹೇಳಿದೆನೆಂದು ಮಾತ್ರ ತಿಳಿಯಬಾರದು. ಎಷ್ಟೋ ರೋಗಿಗಳಿಗೆ ಎಂಥ ಉತ್ತಮವಾದ ಚಿಕಿತ್ಸೆಯು ನಡೆದರೂ ರೋಗವು ವಾಸಿಯಾಗದೆ ಇರುವದುಂಟು; ಕೆಲವು ಜನರಿಗೆ ಎಷ್ಟು ಹಣದ ಥೈಲಿಗಳ ರಾಶಿಯು ಮನೆಯಲ್ಲಿ ಬಿದ್ದಿದ್ದರೂ ಬಡತನದ ಚಿಂತೆಯು ತಪ್ಪದೆ ಇರುವದುಂಟು; ಜನರು ಎಷ್ಟೇ ಸಹಾಯಮಾಡಲಿ, ತಮ್ಮ ದುಃಖವು ನೀಗಲಾರದೆಂದು ಚಿಂತಿಸುತ್ತಾ ಕಳವಳಪಡುತ್ತಿರುವವರೂ ಹಲವರು ಉಂಟು; ದೇಹವು ಪ್ರಕೃತಿನಿಯಮಿತವಾದ ಯಾವದೋ ಒಂದು ಕಾಲದಲ್ಲಿ ಸಾಯುವದಾದರೂ ಎಲ್ಲಿ ಯಾವಾಗ ಸಾಯುವೆವೋ ಎಂಬ ಚಿಂತೆಯಿಂದ ಗಳಿಗೆಗಳಿಗೆಗೂ ಮನಸಿನಲ್ಲಿಯೇ ಕುದಿದುಕೊಂಡು ಸಾಯುವವರು ಬಹುಜನರು. ಇಂಥ ರೋಗಾದಿಗಳು ಅವರಿಗೆ ಏತಕ್ಕೆ ಬರುವವು? ಈ ಬಗೆಯ ಜನರಿಗೆ ಸಂಸಾರವು ಏತಕ್ಕೆ ಇಷ್ಟೊಂದು ಭಾರವಾಗಿ ತೋರುವದು?–ಎಂದು ವಿಚಾರಿಸಿದರೆ ಅವಕ್ಕೆಲ್ಲ ಮೂಲವು ಒಂದೇ ಒಂದು. ಅವರಿಗೆ ಆನಂದಧಾಮನೂ, ಸರ್ವಚಿಂತಾನಿವಾರಕನೂ, ಲಕ್ಷ್ಮೀಪತಿಯೂ, ದಯಾಮಯನೂ, ಸರ್ವಜ್ಞನೂ, ಸರ್ವಶಕ್ತನೂ ಆದ ಪರಮಾತ್ಮನ ಅನುಗ್ರಹದಿದ ಮಾತ್ರವೇ ದೊರೆಯಬೇಕಾದ ಅಧ್ಯಾತ್ಮದ ಬೆಳಕು ಸಿಕ್ಕಿರುವದಿಲ್ಲ. ಅಜ್ಞಾನದ ಕತ್ತಲೆಯಲ್ಲಿ ಹೊಲಬುದಪ್ಪಿರುವ ಇಂಥವರಿಗೆಲ್ಲ ಆತನ ಅನುಗ್ರಹದಿಂದ ಈ ಬೆಳಕು ದೊರೆತರೆ ಕಾಮಧೇನು ಕಲ್ಪವೃಕ್ಷಗಳೇ ದೊರೆತಂತಾಗದೇನು? ಸಂ–6, 133

# ಅಧ್ಯಾತ್ಮಪ್ರಕಾಶದ ಆನಂದ

ಅಧ್ಯಾತ್ಮಪ್ರಕಾಶವೆಂಬುದು ಒಂದು ಬಗೆಯ ಅಮೃತದ ಕಿರಣವು. ಬೆಟ್ಟ ಬೇಸಿಗೆಯಲ್ಲಿ ಶುಕ್ಲಪಕ್ಷದ ಚಂದ್ರನ ತಂಗದಿರುಗಳು ಎಲ್ಲೆಲ್ಲಿಯೂ ಹರಡಿರುವಾಗ ಜನರು ಅದಕ್ಕೆ ಮೈಯೊಡ್ಡಿ ಶಕೆಯ ದಗೆಯಿಂದಾಗಿದ್ದ ಸಂಕಟವನ್ನು ಪರಿಹರಿಸಿಕೊಳ್ಳುವಂತೆ, ಜನರು ಅಧ್ಯಾತ್ಮಚಂದ್ರನ ಅಮೃತಕಿರಣದ ಬೆಳುದಿಂಗಳಿಗೆ ತಮ್ಮ ಸ್ವರೂಪವನ್ನು ಒಡ್ಡಿದಾಗ ಅಜ್ಞಾನದಿಂದ ಎಡೆಬಿಡದೆ ತಾವು ಹೊಂದುತ್ತಿದ್ದ ತಾಪತ್ರಯಗಳೆಲ್ಲವನ್ನೂ ಹೋಗಲಾಡಿಸಿಕೊಳ್ಳುವರು.

ನಿಜವಾಗಿ ನೋಡಿದರೆ ಈ ಅಧ್ಯಾತ್ಮಚಂದ್ರನು ಬೆಳಗದೆ ಇರುವ ಕಾಲವೇ ಇಲ್ಲ; ಆತನ ಆಸರೆಯಲ್ಲಿಯೇ ನಾವೆಲ್ಲರೂ ಇರುತ್ತಿರುವೆವು. ಆದರೆ ನಮ್ಮಲ್ಲಿ ಕೆಲವರು ಆತನ ತಣ್ಣನೆಯ ಬೆಳದಿಂಗಳಲ್ಲಿ ಹಾಯಾಗಿ ಸುಳಿದಾಡುವದನ್ನು ಕೈಬಿಟ್ಟು ಅಲ್ಲಲ್ಲಿ ನಿಂತು ಅಜ್ಞಾನದಿಂದ ಕಾಣುತ್ತಿರುವ ನೆರಳುಗಳನ್ನು ನೋಡುವದಕ್ಕೆ ಹೊರಟಿರುವೆವು. ಕೆಲವರು ಈ ನೆರಳುಗಳನ್ನು ಹಿಡಿಯಬೇಕೆಂದು ಹೊರಟಿರುವೆವು, ಮತ್ತೆ ಕೆಲವರು ಅವುಗಳು ಭೂತಗಳೆಂದು ಪ್ರೇತಗಳೆಂದೂ ನಂಬಿ ಬೆಚ್ಚಿಬೀಳುತ್ತಿರುವೆವು, ಚೀರುತ್ತಿರುವೆವು!

ನಮ್ಮಲ್ಲಿ ಯಾರು ಸತ್ಸಹವಾಸದಿಂದ ಅಧ್ಯಾತ್ಮದ ಬೆಳಕಿನ ಸ್ವಭಾವವನ್ನೂ ಅಜ್ಞಾನದಿಂದಾಗಿರುವ ನೆರಳಿನ ಸ್ವಭಾವವನ್ನೂ ಬೇರ್ಪಡಿಸಿ ತಿಳಿದುಕೊಂಡಿರುವೆವೋ ಅಂಥವರಿಗೆಲ್ಲ ಒಂದಾನೊಂದು ಇಂಪಾದ ಸಂಗೀತವು ಕಿವಿಗೆ ಬೀಳುವದು. ಅಗೋ! ಮಧುರಗೀತದ ಧ್ವನಿಯು! ಅದರಲ್ಲಿರುವ ಉಪದೇಶವಾಕ್ಯಗಳನ್ನು ಕೇಳಿರಿ: "ಆನಂದದಿಂದಲೇ ಈ ಪ್ರಾಣಿಗಳೆಲ್ಲವೂ ಬಂದಿರುತ್ತವೆ, ಆನಂದದಿಂದಲೇ ಬಾಳುತ್ತಿರುವವು, ಆನಂದದ ಕಡೆಗೇ ಹೋಗಿ ಆನಂದದಲ್ಲಿಯೇ ಅಡಗುತ್ತಿರುವವು."

ಆಹ ! ಎಂಥ ಉತ್ಸಾಹದಾಯಕವಾದ ಗಾನವಿದು ! **ಸಂ-6, 165**

# ಆನಂದವಾಗಿರುವದಕ್ಕೆ ಏನು ಮಾಡಬೇಕು ?

ಆನಂದವಾಗಿರುವದಕ್ಕೇನು ಮಾಡಬೇಕು? ಈ ಪ್ರಶ್ನೆಗೆ ಉತ್ತರವು ಬಲು ದೂರವಿಲ್ಲ. ದುಃಖವಾಗಿರುವ ಹಾದಿಯನ್ನು ಬಿಟ್ಟುಬಿಡಬೇಕು. ನಿಜವಾಗಿ ನಾವು ಆನಂದದಲ್ಲಿಯೇ ಇರುತ್ತೇವೆ, ದುಃಖವನ್ನು ಹಚ್ಚಿಕೊಂಡಿರುತ್ತೇವೆ. ಇರುವದು ಆನಂದ, ಹುಟ್ಟುಗಟ್ಟಿ ಕೊಂಡಿರುವದು ದುಃಖ. ಆದ್ದರಿಂದ ದುಃಖದಿಂದ ಪಾರಾದರೆ ಆಯಿತು. ನಿದ್ರೆಬರುವದಕ್ಕೆ ನಾವೇನೂ ಮಾಡಬೇಕಾದದ್ದೇ ಇರುವದಿಲ್ಲ; ಹೊರಗಿನ ಯೋಚನೆಗಳನ್ನು ಬಿಟ್ಟುಬಿಡಬೇಕು, ಅಲ್ಲವೆ? ಇದರಂತೆ ನಾವು ಆನಂದಸ್ವರೂಪರಾಗಿರಬೇಕಾದರೆ ದುಃಖದ ನೆನಪು ನಮಗೆ ಇಲ್ಲದಂತೆ ಮಾಡಿಕೊಳ್ಳಬೇಕು.

ದುಃಖದ ನೆನಪು ನಮಗೆ ಇಲ್ಲದಿರುವಂತೆ ಮಾಡಿಕೊಳ್ಳುವದು ಹೇಗೆ?– ಎಂಬ ಪ್ರಶ್ನೆಯು ಈಗ ಮುಂದಕ್ಕೆ ಬರುವದಷ್ಟೆ. ಅದಕ್ಕೆ ಉತ್ತರವಿಷ್ಟೆ: ದುಃಖಕ್ಕೆ ಕಾರಣವು ದುಷ್ಟಭಾವನೆಯಲ್ಲಿರುವದು. ಮರಕ್ಕೆ ನೆರಳು ಸ್ವಭಾವವಾಗಿರುವಂತೆ ಆನಂದಕ್ಕೆ ದುಃಖದ ನೆರಳೂ ಉಂಟು; ಈ ನೆರಳೂ ದುಷ್ಟ ಭಾವನೆಗಳೂ ಬೇರೆಬೇರೆಯಲ್ಲ. ರಾಗ, ದ್ವೇಷ, ಲೋಭ, ಮೋಹ, ಮದ, ಮಾತ್ಸರ್ಯ–ಮುಂತಾದ ಭಾವನೆಗಳೇ ದುಃಖದ ನೆನಪನ್ನು ನಮಗೆ ಆಗಾಗ ತಂದುಕೊಡುವವು.

ಹಾಗಾದರೆ ದುಷ್ಟಭಾವನೆಗಳನ್ನು ಕಳೆದುಕೊಳ್ಳುವ ಬಗೆ ಹೇಗೆ? ದುಷ್ಟ ಭಾವನೆಗಳೆಂದರೆ ಎದುರಿಗಿರುವ ಮನುಷ್ಯರಲ್ಲ. ಅವನ್ನು ಹೊಡೆದು ಬಡಿದು ಅಟ್ಟುವದಕ್ಕೆ ಆಗುವದಿಲ್ಲ. ಅವನ್ನು ಹತ್ತಿರಕ್ಕೆ ಬರಗೊಡುವದಿಲ್ಲವೆಂಬ ಸಂಕಲ್ಪವೂ ಕೆಲಸಕ್ಕೆ ಬರುವದಿಲ್ಲ; ಅಷ್ಟೇ ಅಲ್ಲ, ನಿದ್ರೆ ಬಾರದವನು ಹೊರಗಿನ ಯೋಚನೆಗಳನ್ನು ಮಾಡಿಕೊಳ್ಳೆನೆಂದು ಸಂಕಲ್ಪಮಾಡಿದಷ್ಟೂ ಅವು ಬಲವಾಗಿ ಬಂದುಬಿಡುವಂತೆ ಭಾವನೆಗಳೂ ಇಂಥ ಸಂಕಲ್ಪದಿಂದ ಹೆಚ್ಚುಹೆಚ್ಚಾಗಿ ಬೇರುಬಿಟ್ಟುಕೊಂಡುಬಿಡುತ್ತವೆ. ಹಾಗಾದರೆ ಮತ್ತೇನು ಮಾಡಿಕೊಳ್ಳಬೇಕೆನ್ನುವಿರೊ? ಮೊಟ್ಟಮೊದಲು ಶುಭವಾಸನೆಯನ್ನು ಹೆಚ್ಚಿಸುವ ಸಂಕಲ್ಪವನ್ನು ಮಾಡಿಕೊಳ್ಳಬೇಕು. ಆಗ ಬೆಳಕು ಹರಿಯುತ್ತಲೂ ಪಿಶಾಚಿಗಳು ತೊಲಗುವಂತೆ ದುಷ್ಟಭಾವನೆಗಳು ತಮಗೆ ತಾವೇ ಕಣ್ಮರೆಯಾಗುವವು. ನಾವು ಆನಂದದ ದಡದಲ್ಲಿಯೇ ಇರುವೆವೆಂಬುದೂ ಮನದಟ್ಟಾಗುವದು. **ಸಂ–6, 197**

## ಅಧ್ಯಾತ್ಮಪ್ರಕಾಶದ ಬಲ

ನಮಗಿರುವ ಕಷ್ಟಗಳೆಲ್ಲ ನಮ್ಮ ದುಷ್ಟಸಂಕಲ್ಪಗಳಿಂದಲೇ ಬರುವವೆಂಬುದನ್ನು ಅನೇಕರು ತಿಳಿದಿರುವರು. ಆದರೆ ಆ ಸಂಕಲ್ಪಗಳನ್ನು ತಿರುಗಿಸುವದಕ್ಕೆ ಕಷ್ಟಪಟ್ಟುಪಟ್ಟು ಸಾಕಾಗಿ ಅವರು ಕೊನೆಗೆ 'ನಮ್ಮಂಥ ದುರ್ಬಲರಿಗೆ ದುಷ್ಟಭಾವನೆಗಳನ್ನು ಗೆಲ್ಲುವದಾಗಲಾರದು' ಎಂದು ನಿಶ್ಚಯಮಾಡಿಕೊಂಡುಬಿಡುತ್ತಾರೆ. ಶುಭವಾಸನೆಗಳನ್ನು ಅಭ್ಯಾಸಮಾಡುತ್ತಾ ಹೋದಹಾಗೆಲ್ಲ ಕೆಟ್ಟ ವಾಸನೆಗಳು ತಾವೇ ಅಂತರ್ಧಾನವಾಗುವವೆಂಬ ಗುಟ್ಟನ್ನು ಅವರು ಅರಿಯರು.

ಸಿಟ್ಟನ್ನು ಕಳೆದುಕೊಳ್ಳಬೇಕೆಂದು ಎಷ್ಟುಕಾಲ ಹೆಣಗಿದರೂ ಪ್ರಯೋಜನವಿಲ್ಲ, ಶಾಂತಿಯನ್ನು ಭಾವನೆಮಾಡುತ್ತಾ ಹೋಗುವದೇ ಸಿಟ್ಟಿನ ಲಯಕ್ಕೆ ಸುಲಭವಾದ ಉಪಾಯವು. ವಿಷಯಗಳ ಕಾಮನೆಯನ್ನು ಗೆಲ್ಲಬೇಕೆಂಬ ಹೋರಾಟವು ಯಾವ ಕೆಲಸಕ್ಕೂ ಬಾರದ್ದು, ವೈರಾಗ್ಯಭಾವನೆಯೇ ಅದರ ಬೇರನ್ನು ಕೀಳುವದಕ್ಕೆ ಸಾಧನವು. ನಮಗಿಂತ ಉತ್ತಮಸ್ಥಿತಿಗೆ ಬಂದವರನ್ನು ನೋಡಿ ಕರುಬುವದನ್ನು ಬಿಡಬೇಕೆಂದು

ಎಷ್ಟುಕಾಲ ಒದ್ದಾಡಿದರೂ ಅದು ನಿಷ್ಫಲವಾಗುವದು; ಅಂಥವರನ್ನು ಕಂಡು ಅಭಿನಂದನವನ್ನು ಮಾಡುವದನ್ನೇ ಅಭ್ಯಾಸಮಾಡಬೇಕು. ಹೀಗೆಯೇ ಮಿಕ್ಕ ಅಶುಭ ವಾಸನೆಗಳ ವಿಚಾರದಲ್ಲಿಯೂ ತಿಳಿಯಬೇಕು; ಅವುಗಳು ಇಲ್ಲದಂತೆ ಮಾಡಿಕೊಳ್ಳು ವೆನೆಂದು ಪ್ರಯತ್ನವನ್ನು ಹೂಡಿದವನಿಗೆ ಗೆಲವು ಸಿಕ್ಕಲಾರದು, ಅವುಗಳಿಗೆ ಪ್ರತಿಯಾದ ಶುಭವಾಸನೆಯನ್ನು ಅಭ್ಯಾಸಮಾಡುವವನೇ ಜಯಶೀಲನಾಗುವನು. ಪರಮಾರ್ಥ ಸಾಧಕನು ಲಕ್ಷ್ಯದಲ್ಲಿಡಬೇಕಾದರೆ ಮೊಟ್ಟಮೊದಲನೆಯ ವಿಷಯವೇ ಇದು.

ಆದರೆ ಈ ಶುಭವಾಸನೆಗಳು ಹೇಗೆ ನಮಗೆ ಉಂಟಾಗುವವು?–ಎಂದರೆ ಅದಕ್ಕೆ ಒಂದೇ ಉತ್ತರ. ಇದುವರೆಗೆ ನಾವು ಹೇಳಿದ ಅಧ್ಯಾತ್ಮಪ್ರಕಾಶದ ಕಿರಣಗಳು ನಮ್ಮ ಮೇಲೆ ಬಿದ್ದ ಒಡನೆಯೇ ಈ ವಾಸನೆಗಳು ಎದ್ದುಕೊಳ್ಳುವವು. ನಾವು ಶುಭವಾಸನೆಗಳನ್ನು ಒಂದೊಂದಾಗಿ ನೆನಪಿಗೆ ತಂದುಕೊಳ್ಳಬೇಕು, ನಮ್ಮ ಅಂತಃಕರಣದೊಳಗೆಲ್ಲ ಅವು ಹತ್ತಿಕೊಳ್ಳಲೆಂದು ಹಾರೈಸಬೇಕು; ಈ ಪ್ರಯತ್ನವೇನೋ ಸಾಗಲೇಬೇಕು. ಆದರೆ ಈ ಪ್ರಯತ್ನವು ನಮ್ಮ ಸ್ವಂತದ್ದಲ್ಲ, ನಮ್ಮೊಳಗಿನ ಪರಮಾತ್ಮನದೇ. ನಿಜವಾಗಿ ನೋಡಿದರೆ ನಾವು ಆ ಪರಮಾತ್ಮನೇ ನಮ್ಮ ಸ್ವರೂಪವೆಂದು ತಿಳಿದು ಕೊನೆಗೆ ಆತನಲ್ಲಿಯೇ ನಿಷ್ಠೆಯನ್ನು ಪಡೆಯಬೇಕಾಗಿರುವದರಿಂದ ಈಗಿನಿಂದಲೂ ಸಾಧನೆಯ ಬಲವೆಲ್ಲವೂ ಆತನದೇ, ಅದಕ್ಕಾಗಿ ಬೇಕಾಗಿರುವ ವೀರ್ಯವೆಲ್ಲವೂ ಆತನದೇ–ಎಂಬುದನ್ನು ಮರೆಯದೆ ಇರಬೇಕು. **"ಆತ್ಮನಾ ವಿನ್ದತೇ ವೀರ್ಯಂ ವಿದ್ಯಯಾ ವಿನ್ದತೇಽಮೃತಮ್"** (ಆತ್ಮನಿಂದ ವೀರ್ಯವು ದೊರಕುತ್ತದೆ. ಆತ್ಮವಿದ್ಯೆಯಿಂದ ಅಮೃತವು ದೊರಕುತ್ತದೆ) ಎಂಬ ಶ್ರುತಿಗೆ ಇದೇ ಅಭಿಪ್ರಾಯ. ಆದ್ದರಿಂದ ಅಶುಭವಾಸನೆಗಳನ್ನು ಕಳೆದುಕೊಳ್ಳ ಬೇಕೆನ್ನುವವರಿಗೆ ಅಧ್ಯಾತ್ಮಪ್ರಕಾಶದ ಬಲವೇ ನಿಜವಾದ ಬಲವು.

**ಸಂ–6, 229**

## ಬಡತನಕ್ಕೆ ಮದ್ದು

ಬಡತನವೆಂಬುದೊಂದು ಕೆಟ್ಟ ರೋಗ. ಜನರು ಅದಕ್ಕೆ ಮದ್ದನ್ನು ಹುಡುಕಿಹುಡುಕಿ ಸಾಕಾಗುವರು. ಅವರು ಉಪಯೋಗಿಸುತ್ತಿರುವ ಕೆಲಕೆಲ ಮದ್ದುಗಳಿಂದ ಈ ರೋಗವು ಹೋಗುವದು ಹಾಗಿರಲಿ, ಮತ್ತಷ್ಟು ಉಲ್ಬಣವಾಗುತ್ತಿರುವದು.

ಕೆಲವರು ಹಣವಂತರನ್ನು ಯಾಚಿಸುವದಕ್ಕೆ ಹೋಗುವರು. ಆದರೆ ಹಣವಂತರು ಹಣವನ್ನೇಕೆ ಕೊಟ್ಟಾರು? ಮತ್ತೊಬ್ಬರಿಗೆ ಕೊಟ್ಟರೆ ತಾವೇ ಬಡವರಾಗುವೆವೆಂದು ಅವರ ಭಾವನೆ. ಆದ್ದರಿಂದ ಹಣವಂತರ ಬಳಿಗೆ ಹೋದರೆ ಬಡವರಿಗೆ ಅನಾದರ, ಪರಿಹಾಸ್ಯ, ದುರಾಶೆ–ಇವುಗಳೇ ಹೆಚ್ಚುವವು; ಬಡತನವು ಹಿಂಗುವದಿಲ್ಲ.

ಕೆಲವರು ಬಡವರು ಕಳ್ಳತನಕ್ಕೆ ಅಥವಾ ಮೋಸಕ್ಕೆ ಮನಸೋಲುವರು. ಕಳ್ಳತನವು ಕಷ್ಟಸಾಧ್ಯ, ಸಾಧ್ಯವಾದರೆ ತನ್ನೊಡನೆ ದಿಗಿಲನ್ನೊಂದನ್ನು ಕರೆತರುವದು. ಸಾಧ್ಯವಾಗದೆ ಸಿಕ್ಕಿಬಿದ್ದರಂತೂ ಜುಲ್ಮಾನೆಯ ಅಥವಾ ಕಾರಾಗಾರವಾಸದ ಫಲವೂ, ಮಹಾಜನರಲ್ಲಿ ಅಪಮಾನವೂ ಸಿದ್ಧ. ಆಗ ಸುಖದ ದಾರಿದ್ರ್ಯ, ಮನಃಶಾಂತಿಯ ದಾರಿದ್ರ್ಯ-ಇವೆರಡೂ ಹೆಚ್ಚಿಕೊಳ್ಳುವವು.

ಮತ್ತೆ ಕೆಲವರು ಹಣವಂತರನ್ನು ಬಯ್ಯುವರು. ಇದರಿಂದ ಬಡತನವೆಂದಿಗಾದರೂ ಹಿಂಗುವದುಂಟೆ? ಮನಸ್ಸಿನ ತಳಮಳವು ಹೆಚ್ಚುವದು, ಸಮಾಧಾನದ ದಾರಿದ್ರ್ಯವು ತಲೆಯೆತ್ತಿಕೊಳ್ಳುವದು.

ಕೆಲವರು ಕೂಲಿನಾಲಿಗಳಿಂದ ಜೀವಿಸುವದಕ್ಕೆ ಪ್ರಾರಂಭಿಸುವರು; ಇದೇನೋ ಸರಿಯಾದದ್ದೆ. ಆದರೆ ಇದರಿಂದ ಬಡತನಕ್ಕೆ ಸ್ವಲ್ಪ ಉಪಶಮನವಾಗಬಹುದು; ಅದು ಅತ್ಯಂತವಾಗಿ ಹೋಗುವದೇ ಇಲ್ಲ.

ಇತ್ತೀಚೆಗೆ ಬಡವರೆಲ್ಲ ಹಗಲುದರೋಡೆಮಾಡಬೇಕೆಂದು ಸಂಚುಮಾಡುತ್ತಿರುವರು. ಹಣವಂತರೆಂಬವರೇ ಇಲ್ಲದಂತೆ ಮಾಡಿ ಎಲ್ಲ ಹಣವನ್ನೂ ದೋಚಿಕೊಂಡು ಅದನ್ನು ಸಮಾಜದ ಸ್ವತ್ತನ್ನಾಗಿರಿಸಿದರೆ ಆಯಿತು; ಆಗ ಎಲ್ಲರಿಗೂ ಸಮಪಾಲಾಗಿ ಸ್ವತ್ತುಗಳಿರು ವದರಿಂದ ಬಡತನವೇ ಅಳಿಸಿಹೋಗುವದು-ಎಂದು ಇವರು ಸೂಚನೆಕೊಡುತ್ತಿದಾರೆ. ಆದರೆ ಸಮಾಜವೆಂದರೆ ಯಾರು? ಸಮಾಜದ ನಾಯಕರೆಲ್ಲ ದೇವತೆಗಳಾಗಿರುವರೆ? ಆ ನಾಯಕರು ಸಮಾಜದ ಹೆಸರಿನಲ್ಲಿಯೇ ಮಿಕ್ಕವರನ್ನು ಗೋಳುಗುಟ್ಟಿಸುವದಕ್ಕೆ ಮೊದಲುಮಾಡಿದರೇನು ಗತಿ?

ಸರಿಯಾಗಿ ನೋಡಿದರೆ ಇವುಗಳಲ್ಲಿ ಯಾವದೊಂದೂ ಬಡತನಕ್ಕೆ ಮದ್ದಲ್ಲ. ಬಡತನವು ಹೊರಗಿನ ಆಸ್ತಿಯಿಲ್ಲದ್ದರಿಂದಾಗಿಲ್ಲ; ಆಸ್ತಿಯಿರುವವರೂ ಬಡವರೇ ಆಗಿರುತ್ತಾರೆ. ಇಷ್ಟೇ ಅಲ್ಲ, ಅವರು ಬಡವರೆಂಬವರಿಗಿಂತಲೂ ಹೆಚ್ಚು ಬಡವರಾಗಿರುತ್ತಾರೆ. ಅವರಿಗೆ ಎಷ್ಟು ಹಣವಾದರೂ ಎಷ್ಟು ಆಸ್ತಿಯಾದರೂ ಸಾಲದೆ ಇದೆ, ಹೊರಕ್ಕೆ ಮಾತ್ರ ತಾವು ಐಶ್ವರ್ಯವಂತರಂತೆ ನಟಿಸುತ್ತಾರೆ. ಬಡತನವು ನಮ್ಮೊಳಗಿದೆ, ನಮ್ಮ ಮನಸ್ಸಿನಲ್ಲಿ ಹುದುಗಿಕೊಂಡಿದೆ. ಅಧ್ಯಾತ್ಮದ ಬೆಳಕು ನಮ್ಮ ಮನಸ್ಸಿನ ಮೇಲೆ ಬೀಳದಿರುವದೇ ನಿಜವಾದ ಬಡತನ. ಅದರ ಬೆಳದಿಂಗಳು ಮನಸ್ಸಿನ ಮೇಲೆ ಹರಡಿಕೊಂಡ ಹೊರತು ಬಡತನವು ಶಮನವಾಗದು. ಅಧ್ಯಾತ್ಮಪ್ರಕಾಶವೇ ಬಡತನಕ್ಕೆ ಮದ್ದು. **ಸಂ-7, 2**

# ಸವೆಯದ ಸಂಪತ್ತು

ನಮ್ಮಲ್ಲನೇಕರು 'ನಾವು ಕಷ್ಟಪಟ್ಟು ದುಡಿದು ದುಡಿದು ಕೂಡಿಹಾಕಿದ ಹಣಕಾಸೂ ಕಾಳುಕಡ್ಡಿಯೂ ಎಷ್ಟು ಬೇಗನೆ ತೀರಿಹೋಯಿತಲ್ಲ!' ಎಂದು ಚಿಂತಿಸುತ್ತಿರುವೆವು; ನಮ್ಮ ಹೆಂಡಿರುಮಕ್ಕಳು, ಹೊಲಮನೆ, ಆಳುಕಾಳು, ದನಕರು-ಮುಂತಾದ ಭೋಗಸಾಮಗ್ರಿಗಳು ಅಚ್ಚಳಿಯದೆ ಹಾಗೆಯೇ ಇರಬೇಕೆಂದು ಹಾರೈಸುವೆವು. ಆದರೆ ಮಾನವರಲ್ಲಿ ಯಾವನೊಬ್ಬನ ಸಂಪತ್ತೂ ನೆಲೆಯಾಗಿ ನಿಂತದ್ದನ್ನು ನಾವು ಕಂಡದ್ದೂ ಇಲ್ಲ, ಕೇಳಿದ್ದೂ ಇಲ್ಲ. ಇದುವರೆಗೆ ಎಂಥೆಂಥ ಚಕ್ರವರ್ತಿಗಳ ರಾಜ್ಯಗಳು ಹೇಳಹೆಸರಿಲ್ಲದಂತೆ ಮಾಯವಾಗಿರುತ್ತವೆ !

ಹೀಗಿದ್ದರೂ ಎಂದೆಂದಿಗೂ ಸವೆಯದ ಸಂಪತ್ತು ಎಲ್ಲಿಯೋ ಒಂದು ಕಡೆ ಇರುವದೆಂದೇ ಮನುಷ್ಯನಿಗೆ ಭಾವನೆಯಿದೆ. ಅಥವಾ ಆ ಭಾವನೆಯಿಲ್ಲದಿದ್ದರೆ ತಾನು ಇಲ್ಲಿ ಕೂಡಿಹಾಕುವ ಸಂಪತ್ತನ್ನು ಸ್ವಲ್ಪ ಜೋಪಾನವಾಗಿ ನೋಡಿಕೊಂಡರೆ ಅದನ್ನು ಬಹುದಿನದವರೆಗೆ ಕಾಪಾಡಿಕೊಳ್ಳಬಹುದೆಂಬ ಭಾವನೆಯಾದರೂ ಇದೆ. ಈ ಭಾವನೆಗೆ ಬುಡವೇನಾದರೂ ಉಂಟೆ? ಕಾಮ್ಯಕವನದಲ್ಲಿ ಧರ್ಮರಾಯನಿಗೆ ಸೂರ್ಯನ ಅನುಗ್ರಹದಿಂದ ದೊರೆತ ಅಕ್ಷಯಪಾತ್ರೆಯ ಹಾಗೆ ನಮಗೂ ಪ್ರಯತ್ನಪಟ್ಟರೆ ಎಲ್ಲಿಯಾದರೂ ಅಕ್ಷಯನಿಧಿಯೊಂದು ಸಿಕ್ಕೀತೆ?

ಇದು ಎಂಥ ಹಗಲುಕನವರಿಕೆಯ ಮಾತು ! ಅಕ್ಷಯನಿಧಿಯಂತೆ ! ಎಲ್ಲಿಯಾದರೂ ಉಂಟೆ? ಕೂತು ಉಣ್ಣುವವನಿಗೆ ಕುಡಿಕೆಯ ಹಣವು ಎಷ್ಟು ದಿನಕ್ಕೆ ಬರುತ್ತದೆ? ಮನುಷ್ಯನು ದುಡಿಯುತ್ತಲೇ ಇರಬೇಕು; ಮೈಬೆವರುವ ಕೆಲಸಮಾಡಬೇಕು, ಸಂಪಾದಿಸಬೇಕು, ಸುಖಪಡಬೇಕು. ಸವೆಯದ ಸಂಪತ್ತೆಂಬುದು ಸೋಮಾರಿಗಳು ಹುಟ್ಟಿಸಿರುವ ಸುಳ್ಳುಸುದ್ದಿ !-ಎಂದು ವ್ಯವಹಾರದಲ್ಲಿ ಚತುರರೆನಿಸಿದವರು ಎಚ್ಚರಿಕೆಹೇಳುತ್ತಿರುವರು. ಆದರೂ ಸವೆಯದ ಸಂಪತ್ತೆಂಬ ಮಾತೇ ಸವಿಯಾಗಿದೆ, ಕೇಳುವದಕ್ಕೆ ಅಷ್ಟು ಉತ್ಸಾಹವರ್ಧಕವಾಗಿದೆ ! ಅದು ಇದ್ದಿದ್ದರೆ ಚೆನ್ನಾಗಿತ್ತು-ಎಂದು ನಮಗೆಲ್ಲರಿಗೂ ಅನಿಸುತ್ತದೆ. ಅಲ್ಲವೆ?

ಯೋಚಿಸಬೇಡಿ. ಅದು ನಿಜವಾಗಿಯೂ ಇದ್ದೇ ಇದೆ. ಹೊರಗಿನ ಹಣಕಾಸನ್ನೂ ಅದರಿಂದ ಸಂಪಾದಿಸಿಕೊಳ್ಳುವ ಭೋಗಸಾಮಗ್ರಿಗಳನ್ನೂ ಕಷ್ಟಪಟ್ಟು ದುಡಿದೇ ಸಂಪಾದಿಸಿಕೊಳ್ಳಬೇಕಾಗಿದೆಯೆಂಬುದು ಖಂಡಿತವಾಗಿಯೂ ನಿಜ; ಅವುಗಳು ಸವೆಯದೆ ಇರಬೇಕೆಂದು ಹಾರೈಸುವದು ಅವಿವೇಕಿತನ, ಅವುಗಳು ಯಾವಾಗಲೂ ನಮಗೆ ಸುಖವನ್ನೇ ಕೊಡಬೇಕೆಂದು ನಿರೀಕ್ಷಿಸುವದು ಮತ್ತೂ ಅವಿವೇಕಿತನ. ಆದರೆ

ನಮ್ಮನಮ್ಮೊಳಗೇ ನಿಜವಾಗಿಯೂ ಎಂದೆಂದಿಗೂ ಸವೆಯದ ಸಂಪತ್ತೊಂದು ಇದೆ. ಅದನ್ನು ಅಧ್ಯಾತ್ಮನಿಧಿಯೆಂದು ಕರೆಯುತ್ತಾರೆ.

ಒಂದಾನೊಂದು ನಿಧಿಯನ್ನು ನೆಲದೊಳಗೆ ಹೂಳಿಟ್ಟಿದ್ದರೆ, ಅಲ್ಲಿ ಅದನ್ನು ಇಟ್ಟಿದೆಯೆಂಬುದನ್ನು ಅರಿಯದವರು ಅದರ ಮೇಲೆ ದಿನದಿನವೂ ಓಡಾಡುತ್ತಿದ್ದರೂ ಅದನ್ನು ಅರಿಯದೆ ಇರುವಂತೆ, ನಮ್ಮನಮ್ಮೊಳಗೇ ಗುಪ್ತವಾಗಿರುವ ಈ ಅಧ್ಯಾತ್ಮನಿಧಿಯನ್ನು ನಾವು ಅರಿಯದೆ ಇರುವೆವು. ನಾವು ಮೇಲೆಮೇಲೆಯೇ ನಮ್ಮ ಜೀವನಸಂಚಾರವನ್ನು ನಡೆಸುತ್ತಿದ್ದೇವೆಯೇ ಹೊರತು, ಆಳವಾಗಿ ಒಳಹೊಕ್ಕು ನೋಡದೆ ಇರುವೆವು. ಇದನ್ನು ಒಳಗೆ ನೋಡಿ ಕಂಡುಕೊಳ್ಳಬೇಕಾದರೆ ಬಲ್ಲವರ ಸಹಾಯವು ಬೇಕು. ನಿಧಿಶಾಸ್ತ್ರವನ್ನು ಬಲ್ಲವರು ಕಣ್ಣಿಗೆ ಅಂಜನಹಾಕಿದರೆ ನೆಲದೊಳಗೆ ಆಳವಾಗಿ ಹೂತುಕೊಂಡಿರುವ ಹಣದ ಕೊಪ್ಪರಿಗೆಗಳೇ ಕಾಣುವವೆಂದು ಹೇಳುವರಲ್ಲವೆ? ಅದರಂತೆ ಅಧ್ಯಾತ್ಮವನ್ನು ಬಲ್ಲವರು ನಮ್ಮ ಕಣ್ಣಿಗೆ ಜ್ಞಾನಾಂಜನವನ್ನು ಹಾಕಿದರೆ ಅಜ್ಞಾನವೆಂಬ ಪರೆಯು ಹೋಗುವದು, ಅಧ್ಯಾತ್ಮವೆಂಬ ಈ ಅಕ್ಷಯನಿಧಿಯು ಗೋಚರಿಸುವದು, ಅದು ಯಾವಾಗಲೂ ನಮ್ಮದೇ ಆಗಿರುವದೆಂಬ ಅರಿವೂ ಆಗುವದು. ಆಗ ಸವೆಯದ ಸಂಪತ್ತೆಂಬುದು ಸವಿಗನಸಾಗದೆ, ಸದಾ ನಮ್ಮ ವಶದಲ್ಲಿಯೇ ಇರುವದೆಂಬುದು ನಮಗೆ ಮನದಟ್ಟಾಗುವದು. **ಸಂ–7, 38**

## ಅಧ್ಯಾತ್ಮಪ್ರಯಾಣ

ನಮ್ಮೊಳಗಿರುವ ಅಧ್ಯಾತ್ಮದ ಬೆಳಕನ್ನು ಕಂಡುಕೊಂಡರೆ ಎಲ್ಲೆಲ್ಲಿಯೂ ಆ ಬೆಳಕೇ ಕಾಣಿಸುವದೆಂದು ಆಗಾಗ್ಗೆ ನಾನು ಬರೆಯುತ್ತಿದ್ದೇನೆ. ಹಾಗಾದರೆ ಈಗಲೇನು ನಾವು ನಮ್ಮನ್ನು ಬಿಟ್ಟು ದೂರ ಬಂದಿದ್ದೇವೆಯೆ? ಅದು ನಿಜವಾದರೆ ನಮ್ಮೊಳಕ್ಕೆ ನಾವು ಹೋಗಿ ಸೇರುವ ಬಗೆಯೆಂತು?–ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವೇನೆಂದರೆ, ನಿಜವಾಗಿಯೂ ನಾವು ನಮ್ಮನ್ನು ಬಿಟ್ಟುಬಂದು ಬೇರೊಂದು ಕಡೆ ತಂಗಿರುತ್ತೇವೆ. ನಮಗೆ ನಾವೇ ಬಲುದೂರವಾಗಿಬಿಟ್ಟಿರುತ್ತೇವೆ.

ಈಗ ನಾವು ನಿಂತಿರುವದು ದೇಹದಲ್ಲಿ. ಕೆಲವರು ದೇಹಕ್ಕೆ ಸಂಬಂಧಪಟ್ಟ ಹೆಂಡಿರು, ಮಕ್ಕಳು, ಹೊಲ, ಮನೆ, ಹಣ–ಇವುಗಳಲ್ಲಿ ಕೂಡ ನಿಂತಿರುತ್ತಾರೆ. ಈಗ ನಾವು ನಿಂತಿರುವ ಸ್ಥಳದಿಂದ ನೋಡಿದರೆ ಎಲ್ಲೆಲ್ಲಿಯೂ ಜನರು ನಮ್ಮಂತೆಯೇ ಹೊಲ ಮನೆಗಳನ್ನು ಮಾಡಿಕೊಂಡಿರುವಂತೆಯೂ ಹೆಂಡಿರುಮಕ್ಕಳನ್ನು ಸಾಕುವುದಕ್ಕೆಂದು ಹಣಕಾಸನ್ನು ಕೂಡಿಹಾಕುತ್ತಿರುವಂತೆಯೂ ಕಾಣುವರು. ದೇಹದಲ್ಲಿರುವ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ–ಇವುಗಳಿಂದ ಮುಟ್ಟಿಯೇ ವಸ್ತುಗಳ ಬೆಲೆಯನ್ನು ನಾವು ಕಟ್ಟುವಂತೆ ಆಗಿರುತ್ತದೆ. ಕಣ್ಣಿಗೆ ರಂಜನೆಯಾದ ಸಿನಿಮಾ, ನಾಟಕ–ಮುಂತಾದವುಗಳ ನೋಟವು ಬೇಕು, ಕಿವಿಗೆ

ಇಂಪಾದ ಸಂಗೀತದ ಶಬ್ದಬೇಕು, ಮೂಗಿಗೆ ಘಮಘಮಿಸುವ ವಾಸನೆ ಬೇಕು, ನಾಲಗೆಗೆ ಸವಿಸವಿಯಾದ ತಿಂಡಿತೀರ್ಥಗಳು ಬೇಕು, ಚರ್ಮಕ್ಕೆ ಮೆತ್ತನೆಯ ಹಿತವಾದ ಹಾಸಿಗೆಯೇ ಮುಂತಾದ ಸ್ಪರ್ಶಗಳು ಬೇಕು. ಇವಿಲ್ಲದಿದ್ದರೆ ಲೋಕವೇ ಅಸಾರವೆಂದು ನಾವು ಎಣಿಸಿರುವೆವು; ಅವು ಸಿಕ್ಕಿದರೆ ರೂಪಾದಿಗಳನ್ನು ನಾವು ಹುಡುಕಿ ಕೊಂಡು ಹೋಗುವೆವು; ಅವು ಸಿಕ್ಕಿದರೆ ಹಿಗ್ಗುವೆವು, ಸಿಕ್ಕದಿದ್ದರೆ ತಗ್ಗುವೆವು. ಅವುಗಳನ್ನು ನಮಗೆ ಒದಗಿಸಿಕೊಟ್ಟವರ ಮೇಲೆ ನಮ್ಮ ಪ್ರೀತಿಯಿರುವದು. ಅವುಗಳನ್ನು ನಮಗೆ ಸಿಕ್ಕದಂತೆ ಅಡ್ಡಿ ಮಾಡುವವರನ್ನು ಕಂಡರೆ ಅವರ ಮೇಲೆ ನಮಗೆ ಕೆಂಗಣ್ಣು ಬೀಳುವದು.

ನಮ್ಮಲ್ಲಿ ಕೆಲವರು ಇನ್ನೂ ಸ್ವಲ್ಪ ಒಳಕ್ಕೆ ಹೋಗಿರುವರು. ಅವರಿಗೆ ಶರೀರದ ಸುಖವು ಅಷ್ಟೊಂದು ಬೇಡ. ಅವರಿಗೆ ಕಣ್ಣು, ಕಿವಿ–ಮುಂತಾದವುಗಳೇ ವಸ್ತುಗಳ ಬೆಲೆಯನ್ನು ಕಟ್ಟುವ ಒರೆಗಲ್ಲಾಗಿರುವದಿಲ್ಲ. ಅವರಿಗೆ ತಿಳಿವಳಿಕೆ ಬೇಕು. ಅವರು ಓದಬೇಕು, ಬರೆಯಬೇಕು, ಶಾಸ್ತ್ರವಿಚಾರಮಾಡಬೇಕು, ಜಗತ್ತೆಲ್ಲವನ್ನೂ ಪರೀಕ್ಷಿಸಬೇಕು, ಅದರಲ್ಲಿರುವ ವೈಚಿತ್ರ್ಯವನ್ನು ಕಂಡುಕೊಳ್ಳಬೇಕು. ಇಂಥವರು ಮನಸ್ಸಿನಲ್ಲಿ ನಿಂತಿರುತ್ತಾರೆ. ಜಗತ್ತೆಲ್ಲವೂ ತಮ್ಮಂತೆಯೇ ಜ್ಞಾನಕ್ಕಾಗಿ ಹೊಡೆದಾಡುತ್ತಿರುವಂತೆ ಅವರಿಗೆ ಕಾಣಿಸುತ್ತದೆ. ಜನರ ಬೆಲೆಯನ್ನು ಅವರು ಜ್ಞಾನದ ಅಳತೆಯಿಂದಲೇ ಗೊತ್ತುಮಾಡುವದಕ್ಕೆ ಹೋಗುತ್ತಾರೆ. ಹೊಲ, ಮನೆ, ಹಣಕಾಸು–ಏನೇ ಇರಲಿ, ಜ್ಞಾನವಿಲ್ಲದಿದ್ದರೆ ಮನುಷ್ಯನ ಬಾಳು ಬಾಳಲ್ಲವೆಂದು ಅವರ ನಂಬಿಕೆ.

ಕೆಲವರು ಮತ್ತೂ ಒಳಕ್ಕೆ ಹೋಗಿರುತ್ತಾರೆ. ಅವರಿಗೆ ದೇಹದ ಸುಖವು ಸಪ್ಪೆಯೆನಿಸಿರುವದು, ಮನಸ್ಸಿನ ತಿಳಿವಳಿಕೆಗೆ ಅವರಲ್ಲಿ ಅಷ್ಟೇನೂ ಬೆಲೆಯಿರುವದಿಲ್ಲ. ಹೊಟ್ಟೆಗೆ ತುಂಬ ತಿಂಡಿತೀರ್ಥವನ್ನು ಕೂಡಿಹಾಕುವದೇ ಆದರೆ ಬತ್ತದ ಕಣಜಗಳಿಗೂ ಹಗೇವುಗಳಿಗೂ ಗೌರವಸ್ಥಾನವನ್ನು ಕೊಡಬೇಕಾಗುವದು; ಹಣವನ್ನು ಕೂಡಿಹಾಕಿರುವ ವರಿಗೇ ಪೂಜ್ಯತೆಯಾದರೆ ಬ್ಯಾಂಕಿನವರಿಗೆಲ್ಲಾ ಅತ್ಯಂತ ಪೂಜ್ಯತೆಯಿರಬೇಕಾಗುವದು; ತಿಳಿವಳಿಕೆಯ ರಾಶಿಯಿರುವ ಕಡೆಯಲ್ಲಿಯೇ ನಮ್ಮ ಮೆಚ್ಚಿಕೆಯಿರಬೇಕಾದರೆ ಪುಸ್ತಕ ಭಂಡಾರಗಳನ್ನು ನಾವು ನಿತ್ಯವೂ ನಮಸ್ಕರಿಸುತ್ತಿರಬೇಕಾಗುವದು. ಆದ್ದರಿಂದ ಮನುಷ್ಯನು ದೇಹದಲ್ಲಿ ನಿಂತು ಹೊರಗಿನ ಶಬ್ದಸ್ಪರ್ಶಾದಿಗಳನ್ನು ಅನುಭವಿಸುವ ಪಶುವಲ್ಲ, ಹಣಕಾಸುಗಳನ್ನು ಕೂಡಿಹಾಕುವ ಟ್ರೆಜರಿಯಲ್ಲ, ತಿಳಿವಳಿಕೆಯನ್ನು ಕೂಡಿಹಾಕಿಕೊಂಡಿರುವ ವಿಶ್ವಕೋಶವೂ ಅಲ್ಲ, ಆಗಾಗ್ಗೆ ಅದನ್ನು ಹೊರಹೊರಡಿಸುವ ಗ್ರಾಮಾಫೋನೂ ಅಲ್ಲ–ಎಂದು ಈ ಮಹಾಶಯರು ಭಾವಿಸುತ್ತಾರೆ. ಇಂತವರು ಶರೀರಮನಸ್ಸುಗಳನ್ನು ದಾಟಿಹೋಗಿ ಹೃದಯದಲ್ಲಿ ನಿಂತಿರುತ್ತಾರೆ ಪರೋಪಕಾರವನ್ನು ಮಾಡುವವನೇ ನಿಜವಾದ ಮನುಷ್ಯನು, ನೀತಿಯೇ ಮನುಷ್ಯನ ಮನುಷ್ಯತ್ವದ ಒರೆಗಲ್ಲು–ಎಂದು ಅವರು ಎಣಿಸುತ್ತಾರೆ. **ಸಂ–7, 70**

ನಮ್ಮೊಳಗಿನ ಅಧ್ಯಾತ್ಮಪ್ರಕಾಶವನ್ನು ಕಂಡುಕೊಳ್ಳುವದಕ್ಕೆ ಯಾವ ದಾರಿಯನ್ನು ಹಿಡಿಯಬೇಕೆಂಬುದನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡದ್ದಾಗಿದೆ. ಇಂದ್ರಿಯಗಳ ಬೆಳಕಿನಲ್ಲಿ ತೃಪ್ತರಾಗಿದ್ದರೆ ಸಾಲದು; ಅದು ಅಮಾವಾಸ್ಯೆಯ ಕತ್ತಲಲ್ಲಿ ಹಾರಾಡುವ ದೀಪದ ಹುಳುಗಳ ಮಿನುಗಿಗೆ ಸಮವಾಗಿರುವದು. ಮನಸ್ಸಿನ ವಿಚಾರದ ಬೆಳಕಾಗಲಿ, ಹೃದಯದಿಂದ ಹೊರಡುವ ಪ್ರೇಮದ ಬೆಳಕಾಗಲಿ ಸಾಲದು; ಏಕೆಂದರೆ ಅವು ಗಾಳಿಯಲ್ಲಿ ಹಿಡಿದಿರುವ ಬುಡ್ಡಿಯ ಬೆಳಕಿಗೂ ಕತ್ತಲೆಯಲ್ಲಿ ಥಳಾರೆನ್ನುವ ಮಿಂಚಿನ ಬೆಳಕಿಗೂ ಸಮವಾಗಿರುವವು. ಇವುಗಳೆಲ್ಲವನ್ನೂ ಮೀರಿದ ಮತ್ತೊಂದು ಬೆಳಕಿದೆ. ಅದು ನಮ್ಮ ತೀರ ಒಳಗಡೆ ಇರುತ್ತದೆ.

ಇಂದ್ರಿಯಗಳು ವಿಷಯಗಳನ್ನು ಬೆಳಗಿದ್ದು, ಬೆಳಗದಿದ್ದದ್ದು; ಮನಸ್ಸಿನಲ್ಲಿ ವಿಚಾರವು ಹೊಳೆದದ್ದು, ವಿಚಾರವು ಕಂಗೆಟ್ಟದ್ದು; ಹೃದಯದಲ್ಲಿ ಪ್ರೇಮವು ಮಿಂಚಿದ್ದು, ಮಾಯವಾದದ್ದು–ಇದೆಲ್ಲವೂ ನಮಗೆ ಏತರ ಬೆಳಕಿನಿಂದ ಕಾಣುವದು? ಇದನ್ನು ಅವಧಾನವಿಟ್ಟು ಚಿಂತಿಸಬೇಕು. ಈ ಚಿಂತನೆಯ ಮಾರ್ಗದಲ್ಲಿ ಯಾವ ಬುತ್ತಿಯನ್ನೂ ಕಟ್ಟಿಕೊಂಡು ಹೋಗಬೇಕಾದದ್ದಿಲ್ಲ. ಹೊರಗಿನ ಪಯಣದಲ್ಲಿ ಶಕ್ತಿಬರುವದಕ್ಕೆ ಆಹಾರವು ಮುಖ್ಯ, ಇಲ್ಲಿ ಪ್ರತ್ಯಾಹಾರವು ಮುಖ್ಯ. ಇಂದ್ರಿಯಗಳಿಂದಲೂ ಮನಸ್ಸಿನಿಂದಲೂ ಹೃದಯದಿಂದಲೂ ಇವುಗಳಲ್ಲೆಲ್ಲ ಅಭಿಮಾನವಿಟ್ಟಿರುವ ನಾನೆಂಬ ಅಹಂಕಾರದಿಂದಲೂ ಒಳಸರಿಯಬೇಕು; ಇದೇ ಪ್ರತ್ಯಾಹಾರವು, ಪ್ರತ್ಯಾಹಾರಸಹಿತವಾದ ಧ್ಯಾನವು. ಇದರಲ್ಲಿಯೇ ಶ್ರದ್ಧೆಯಿಟ್ಟು, ಇದರಲ್ಲಿಯೇ ತಾತ್ಪರ್ಯದಿಂದ, ಒಳಕ್ಕೆ ಧೈರ್ಯದಿಂದ ನಡೆದೆವೆಂದರೆ ಸ್ವಯಂಪ್ರಭೆಯ ಗುಹೆಯಲ್ಲಿ ಹನುಮಂತನೇ ಮೊದಲಾದವರಿಗೆ ದಿವ್ಯತಮವಾದ ಬೆಳಕೊಂದು ಕಾಣಿಸಿಕೊಂಡಂತೆ ನಮಗೆ ಅಧ್ಯಾತ್ಮದ ದಿವ್ಯಪ್ರಕಾಶವು ಕಾಣಿಸಿಕೊಳ್ಳುವದು. ಆಗ ನೋಡಿದರೆ ಆ ಬೆಳಕು ತಾನೇ ತಾನಾಗಿರುವದೆಂದೂ, ಅದಕ್ಕಿಂತ ಬೇರೆಯಾಗಿ ಮತ್ತೊಂದು ಯಾವದೂ ಇಲ್ಲವೆಂತಲೂ ಮನದಟ್ಟಾಗುವದು. ಆ ಬೆಳಕೇ ನಮ್ಮ ವ್ಯವಹಾರದಲ್ಲಿ ಪ್ರೇಮವೆಂದೂ ವಿಚಾರದರಿವೆಂದೂ ಇಂದ್ರಿಯಗಳ ಜ್ಞಾನವೆಂದೂ ಕರೆಯಿಸಿಕೊಳ್ಳುತ್ತಿರುವದೆಂತಲೂ ನಿಶ್ಚಿತವಾಗಿಬಿಡುತ್ತದೆ ! ಸಂ–7, 102

## ಅಧ್ಯಾತ್ಮಜ್ಞಾನ ನಿತ್ಯತ್ವ

ಮಾನವ, ಮೇಲುಗಡೆಯೇ ನೋಡುತ್ತಾ ಮುಗ್ಗರಿಸುವ ಮೂರ್ಖತನವನ್ನು ಬಿಡು. ಖಗೋಳದ ನಕ್ಷತ್ರಗಳನ್ನೇ ನಿರೀಕ್ಷಿಸುತ್ತಾ ಭೂಗೋಳವನ್ನು ಮರೆತು ಗುಂಡಿಗೆ ಬಿದ್ದ ಜೋಯಿಸನನ್ನು ಅನುಕರಿಸಬೇಡ ! ನಿನ್ನ ಸುತ್ತಲೂ ಇರುವವರ, ನೆರೆಯವರ ಗುಣದೋಷಗಳ ವಾರ್ತೆಯನ್ನು ಆಡುತ್ತಾ ನಿನ್ನ ವಿಚಾರವನ್ನೇ ಮರೆತುಬಿಡಬೇಡ.

ನಿನ್ನೊಳಗೆ, ತೀರ ಒಳಗೆ, ಒಂದು ತತ್ತ್ವವಿದೆ. ಅದನ್ನು ಆತ್ಮ ಎನ್ನುವರು. ನೀನು ನಡೆಯುವದು, ಕೆಲಸಮಾಡುವದು, ಹೋಗುವದು, ಬರುವದು, ಕುಳ್ಳಿರುವದು, ಮನನ ಮಾಡುವದು, ಸುಖದುಃಖಗಳನ್ನು ಅನುಭವಿಸುವದು-ಈ ಎಲ್ಲಾ ವ್ಯವಹಾರಕ್ಕೂ ಈ ಆತ್ಮತತ್ತ್ವವೇ ಬೆಳಕು ತೋರಿಸುತ್ತಿರುವದು. ಆ ಪರಂಜ್ಯೋತಿಯನ್ನು ಅಸಡ್ಡೆಮಾಡದಿರು; ಅದನ್ನು ಲಕ್ಷಿಸದೆ ಇದ್ದರೆ ನಿನ್ನ ಬಾಳೆಲ್ಲ ಕಗ್ಗತ್ತಲೆಯಲ್ಲಿ ತಟ್ಟಾಡುವವರ ನಡೆಯನ್ನು ಹೋಲುವದು.

ಈ ಜೀವನದಲ್ಲಿ ನಿನಗೆ ಯಾವಯಾವ ವಸ್ತುಗಳು, ಯಾವಯಾವ ಮರಗಿಡ ಬಳ್ಳಿಗಳು, ಯಾವಯಾವ ಪ್ರಾಣಿಗಳು, ಯಾವಯಾವ ಮನುಷ್ಯರು, ಯಾವಯಾವ ಆಶಾಪ್ರತೀಕ್ಷೆಗಳು ಚಿತ್ತಾಕರ್ಷಕವಾಗಿ, ಮನಮೋಹಕವಾಗಿ, ಅತ್ಯಮೂಲ್ಯವಾಗಿ ಕಾಣಿಸುತ್ತಿರುವವೋ ಅವೆಲ್ಲ ಆ ಆತ್ಮಜ್ಯೋತಿಯ ಬೆಳಕಿನಲ್ಲಿಯೇ ಕಾಣಿಸುತ್ತಿವೆಯೆಂಬುದನ್ನು ಮರೆಯಬೇಡ. ನಿನ್ನ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಕೊನೆಗೆ ನೀನು-ಎಲ್ಲವೂ ಆ ಹೆಬ್ಬೆಳಕಿನಿಂದಲೇ ಬೆಳಗುತ್ತಾ ನಿಮ್ಮನಿಮ್ಮ ವ್ಯವಹಾರವನ್ನು ಮಾಡುತ್ತಿರುವಿರಿ, ಆ ನಂದಾದೀವಿಗೆಯನ್ನು ಕಡೆಗಣಿಸುವ ಜಾಣಹುಚ್ಚನಾಗಬೇಡ.

'ನಾನು ಆ ಸ್ವಯಂಜ್ಯೋತಿಯಾದ ಆತ್ಮನಲ್ಲಿ ಒಂದಾಗಿರುವೆನು, ಇದನ್ನು ಕಂಡುಕೊಳ್ಳುವದೇ ನನ್ನ ಜೀವನದ ಹೆಗ್ಗುರಿ' ಎಂದು ಆಗಾಗ್ಗೆ ಮನಸ್ಸಿನಲ್ಲಿ ಜಪ ಮಾಡುತ್ತಿರು. ಶರೀರದ ಆರೋಗ್ಯ, ಬಲ, ಅದಕ್ಕೆ ಬೇಕಾದ ಸಾಮಗ್ರಿಗಳು, ನೆಂಟರು, ಇಷ್ಟರು, ವಿದ್ಯೆ, ಕೀರ್ತಿ, ವಿಷಯಭೋಗ, ಅಧಿಕಾರ, ಸಂಪತ್ತು-ಇವೆಲ್ಲವೂ ಆ ಆತ್ಮನೆಂಬ ಅಮೃತದ ನದಿಯ ದಂಡೆಯಲ್ಲಿ ಬಿದ್ದಿರುವ ಹೊಳೆಯುವ ಕಲ್ಲುಗಳು ಮಾತ್ರ. ಹತ್ತಿರವೇ ಅಮೃತದ ಹೊಳೆಯಿರುವಾಗ ಅದನ್ನು ಮನಸಾರೆ ಈಂಟಿ ಬಾಯಾರಿಕೆಯನ್ನು ಎಂದೆಂದಿಗೂ ಇಂಗಿಸಿಕೊಳ್ಳುವದನ್ನು ಬಿಟ್ಟು ಬಿಸಲಿನಲ್ಲಿ ದಡದಮೇಲೆ ಹೊಳೆಯುತ್ತಿರುವ ಬೆಣಚುಕಲ್ಲುಗಳನ್ನು ಆರಿಸಿ ರಾಸಿಹಾಕುತ್ತಾ ಬೆಳಲಿಬೆಂಡಾಗುವ ಮಕ್ಕಳಾಟಿಕೆಯ ಕೆಲಸಕ್ಕೆ ಕೈಹಾಕದಿರು. ನಾನು, ನೀನು, ಎಲ್ಲರೂ, ಎಲ್ಲವೂ ಆ ಪರಮಾತ್ಮತತ್ತ್ವದಲ್ಲಿ ಒಂದಾಗಿರುವೆವು ಎಂಬ ಆನಂದದ ಅರಿವನ್ನು ಬಿಡದೆ ಮನದಲ್ಲಿ ಹೊರಳಾಡಿಸುತ್ತಿರು.

**ಸಂ-27, 163**

## ಅಧ್ಯಾತ್ಮಸಾಕ್ಷಾತ್ಕಾರಕ್ಕೆ ಸಾಧನ

"ಅಧ್ಯಾತ್ಮತತ್ತ್ವವು ನಮ್ಮೆಲ್ಲರಿಗೂ ಏತಕ್ಕೆ ಗೋಚರ ವಾಗುವದಿಲ್ಲ? ಅದು ಇದ್ದರೆ ಎಲ್ಲರಿಗೂ ಕಾಣಬೇಕಲ್ಲವೆ?"-ಎಂದು ಕೆಲವರು ಕೇಳುತ್ತಾರೆ. ಅಂಥವರಿಗೆ ನಾವು ಎರಡು ಪ್ರಶ್ನೆಗಳನ್ನು ಹಾಕಬೇಕು: "ಕಣ್ಣಿದ್ದವರಿಗೂ ಗೋಡೆಯಿಂದಾಚೆಗೆ ಇರುವ

ವಸ್ತುಗಳು ಏತಕ್ಕೆ ಕಾಣಿಸುವದಿಲ್ಲ? ಕಣ್ಣಿಗೆ ಪರೆ ಮುಚ್ಚಿದ್ದವರಿಗೆ ತಮ್ಮೆದುರಿಗೇ ಇರುವ ವಸ್ತುಗಳು ಕೂಡ ಕಾಣುವದಿಲ್ಲವೇಕೆ?"

ನಮಗೆ ಅಧ್ಯಾತ್ಮವು ಕಾಣದೆ ಇರುವದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ: ನಾವು ಹೊರಗಿನ ವಿಷಯಗಳನ್ನೇ ಚಿಂತಿಸುತ್ತಾ ಅವುಗಳ ಕಡೆಗೇ ಮನಸ್ಸು ತಿರುಗಿಸಿರುವದು ಒಂದು ಕಾರಣ; ಒಳಗಡೆಗೆ ತಿರುಗಿದರೂ ಅಧ್ಯಾತ್ಮ ಸಾಕ್ಷಾತ್ಕಾರಕ್ಕೆ ಅಡ್ಡಿಯಾದ ಪರೆಯನ್ನು ತೆಗೆಸಿಕೊಂಡು ಸರಿಯಾಗಿ ನೋಡದೆ ಇರುವದು ಮತ್ತೊಂದು ಕಾರಣ.

ನಮಗೆ ನಮ್ಮೊಳಗೇ ಇರುವ ಆತ್ಮತತ್ತ್ವವನ್ನು ಕಾಣಬೇಕೆಂಬ ಉತ್ಕಟವಾದ ಇಚ್ಛೆಯು ಬಂದಿದೆಯೆಂದು ಇಟ್ಟುಕೊಳ್ಳಿ. ಆಗ ನಾವು ಯಾವಯಾವ ಸಾಧನಗಳನ್ನು ಒದಗಿಸಿಕೊಳ್ಳಬೇಕು? ಆಗ ಶ್ರದ್ಧೆ, ಭಕ್ತಿ, ಧ್ಯಾನ–ಎಂಬ ಮೂರು ಸಾಮಗ್ರಿಗಳನ್ನು ಕೂಡಿಹಾಕಿಕೊಳ್ಳಬೇಕಾಗುವದು.

"ಆತ್ಮತತ್ತ್ವವು ನಿಜವಾಗಿಯೂ ಇದೆ, ಅದನ್ನು ಕಾಣುವದಕ್ಕೆ ಸರಿಯಾದ ದಾರಿಯಲ್ಲಿ ಪ್ರಯತ್ನಪಟ್ಟರೆ ಖಂಡಿತವಾಗಿ ಅದರ ಸಾಕ್ಷಾತ್ಕಾರವಾಗುವದು"–ಎಂಬ ದೃಢವಾದ ನಂಬಿಕೆಯೇ ಶ್ರದ್ಧೆಯು. ಹಿಮಾಲಯದ ಒಂದು ಗುಹೆಯಲ್ಲಿ ಸಿದ್ಧರಸವಿದೆಯೆಂಬ ನಂಬಿಕೆಯಿಂದ ಒಬ್ಬನು ಸಾವಿರಾರು ಯೋಜನಗಳನ್ನು ಕಾಲುನಡಗೆಯಿಂದಾದರೂ ನಡೆದುಬರುವಂತೆ ಬಲವಾದ ಶ್ರದ್ಧೆಯಿಂದ ಕೂಡಿದ ಸಾಧಕನ ಪ್ರಯತ್ನವು ಮಾತ್ರ ಕೈಗೂಡುವದು; ಕುತೂಹಲಕ್ಕೆ ಒಂದೆರಡು ದಿನ ಸ್ವಲ್ಪ ಅಧ್ಯಾತ್ಮವಿಚಾರವನ್ನು ಮಾಡಿ ಕೈಬಿಡುವವರಿಗೆ ಪರಮಾರ್ಥವು ಎಂದಿಗೂ ದಕ್ಕಲಾರದು.

ಕಳ್ಳನು ತನಗೆ ಬೇಕಾದ ಪದಾರ್ಥವನ್ನು ಅಪಹರಿಸುವದಕ್ಕೆ ಪ್ರಯತ್ನಿಸುವಾಗಲೂ ಕಾಮಿಯು ಮತ್ತೊಬ್ಬರಿಗೆ ತಿಳಿಯದಂತೆ ತನ್ನ ಪ್ರಿಯೆಯ ಸಮಾಗಮವಾಗಬೇಕೆಂದು ಹೊಂಚಿಹಾಕುವಾಗಲೂ ಅವರ ಮನಸ್ಸಿನಲ್ಲಿ ತಮ್ಮ ಇಷ್ಟಾರ್ಥದ ಚಿಂತೆಯೇ ಎಲ್ಲೆಲ್ಲಿಯೂ ಯಾವಾಗಲೂ ಹೇಗೆ ಹತ್ತಿಕೊಂಡಿರುವದೋ ಹಾಗೆ ಅಧ್ಯಾತ್ಮತತ್ತ್ವದ ಚಿಂತೆಯನ್ನು ಒಂದೇ ಸಮನೆ ಯಾವಾಗಲೂ ಹತ್ತಿಸಿಕೊಂಡಿರುವದು ಧ್ಯಾನವು. ಈ ಧ್ಯಾನವು ಬಲಿತುಕೊಂಡಹಾಗೆಲ್ಲ ಅಧ್ಯಾತ್ಮವು ನಮಗೆ ಹತ್ತಿರಹತ್ತಿರವಾಗುತ್ತದೆ.

ಶ್ರದ್ಧೆಯಿಂದಲೂ ಧ್ಯಾನದಿಂದಲೂ ಹುಡುಕುತ್ತಿರುವಾಗ ಅಧ್ಯಾತ್ಮಪ್ರಕಾಶದ ಒಂದು ಕಿರಣವು ಹೇಗೋ ನಮ್ಮ ಹೃದಯದಲ್ಲಿ ತೋರಿಕೊಳ್ಳುವದು. ಆಗ ಅದರಲ್ಲಿ ಉಂಟಾಗುವ ಪ್ರೇಮವೇ ಭಕ್ತಿಯು. ಭಕ್ತಿಯು ತಲೆದೋರಿದ ಮೇಲೆ ನಮ್ಮ ಶ್ರದ್ಧೆಯೂ ಧ್ಯಾನವೂ ಬೆಳೆಯುತ್ತವೆ; ಭಕ್ತಿಯು ಬಲಿತುಕೊಂಡಾಗ ಆತ್ಮಪ್ರಕಾಶವು ಬರಿಯ ಅಧ್ಯಾತ್ಮವಾಗಿರುವದಿಲ್ಲ, ಏಕೆಂದರೆ ಅದು ನಮ್ಮೊಳಗೇ ಇರುವದಿಲ್ಲ. ಎಲ್ಲೆಲ್ಲಿಯೂ ತಾನೊಂದೇ ಝುಗಝುಗಿಸುತ್ತಿರುತ್ತದೆ. **ಸಂ–7, 262**

****

# 5. ಅಧ್ಯಾತ್ಮಚಿಂತನ

## ಅಧ್ಯಾತ್ಮಚಿಂತನ

ನಮ್ಮಗಳಲ್ಲಿ ಒಬ್ಬೊಬ್ಬರ ಮನಸ್ಸು ಒಂದೊಂದು ಅಂತಸ್ತಿನಲ್ಲಿರುವದು. ಆ ಅಂತಸ್ತಿಗೆ ತಕ್ಕಂತೆ ಅದಕ್ಕೆ ಒಂದೊಂದು ಯೋಚನೆಯು ಹತ್ತಿಕೊಂಡಿರುತ್ತದೆ. ಹುಡುಗರಿಗೆ ಆಟದ ಚಿಂತೆ, ಯುವಕರಿಗೆ ಭೋಗದ ಚಿಂತೆ, ಮುದುಕರಿಗೆ ಮಕ್ಕಳು ಮರಿಗಳ ಮತ್ತು ತಮ್ಮ ಮುಂದಿನ ಸ್ಥಿತಿಯ ಚಿಂತೆ-ಹೀಗೆ ಬೇರೆಬೇರೆ ವಯಸ್ಸಿನಲ್ಲಿ ಬೇರೆಬೇರೆಯ ಚಿಂತೆ ಹತ್ತಿಕೊಳ್ಳುವದು. ಇಷ್ಟೇ ಅಲ್ಲ, ಒಂದೇ ವಯಸ್ಸಿನಲ್ಲಿರುವವರಿಗೂ ಅವರವರ ಮನಸ್ಸಿನ ಅಂತಸ್ತಿಗೆ ತಕ್ಕಂತೆ ಮನಸ್ಸಿನ ಚಿಂತೆಯೂ ಇರುತ್ತದೆ.

ಬಹುಜನರಿಗೆ ಇಂದ್ರಿಯವಿಷಯಗಳ ಚಿಂತೆಯೇ ಮುಖ್ಯವಾಗಿರುತ್ತದೆ-ಮಿಕ್ಕ ಪ್ರಾಣಿಗಳಂತೆಯೇ ಅವರು ಇಂಥದ್ದನ್ನು ನೋಡಬೇಕು, ಇಂಥದ್ದನ್ನು ಕೇಳಬೇಕು, ಇಂಥದ್ದನ್ನು ಮೂಸಬೇಕು, ಇಂಥದ್ದನ್ನು ಮುಟ್ಟಬೇಕು-ಎಂದು ಹವಣಿಸುತ್ತಿರುವರು. ಕೆಲವರಿಗೆ ಮಾತ್ರ ಲೌಕಿಕಬುದ್ಧಿಯಿಂದುಂಟಾಗುವ ಸುಖದ ಚಿಂತೆಯು ಹತ್ತಿಕೊಂಡಿರುತ್ತದೆ. ಅವರಿಗೆ ಓದಬೇಕು, ಬರೆಯಬೇಕು, ವಿಚಾರಮಾಡಬೇಕು, ಚರ್ಚಿಸಬೇಕು-ಎಂಬುದೊಂದೇ ಹವಣಿಕೆ.

ಎಲ್ಲಿಯೋ ಕೆಲವರ ಮನಸ್ಸು ಈ ಎರಡು ಅಂತಸ್ತುಗಳನ್ನೂ ಮೀರಿ ಅಧ್ಯಾತ್ಮ ಬುದ್ಧಿಯ ಸುಖವನ್ನು ಬಯಸುತ್ತಿರುವದು. ಅವರಿಗೆ ಹೊರಗಿನ ವಿಷಯಗಳೂ ಅವುಗಳಿಂದ ತಮ್ಮ ದೇಹೇಂದ್ರಿಯಗಳಿಗೆ ಆಗುವ ಭೋಗದ ಸುಖವೂ ತೀರ ಸಪ್ಪೆಯಾಗಿ ತೋರುವವು. ಆದ್ದರಿಂದ ಅವರು ಯಾವಾಗಲೂ ಇವೆರಡಕ್ಕೆ ಹೆಚ್ಚಿನ ತರದ ಮತ್ತೊಂದು ಚಿಂತೆಯನ್ನು ಇಟ್ಟುಕೊಂಡಿರುವರು-ಇದಕ್ಕೆ **"ಅಧ್ಯಾತ್ಮಚಿಂತನ"** ಎಂದು ಹೆಸರು.

ಮಿಕ್ಕ ಚಿಂತೆಗಳು ಹತ್ತಿಕೊಂಡರೆ ನಮ್ಮ ಮನಸ್ಸು ಗಾಳಿಗೆ ಒಡ್ಡಿದ ದೀಪದಂತೆ ಹೊಯ್ದಾಡುವದು, ಕಾದ ಎಣ್ಣೆಯಂತೆ ಮಳಮಳನೆ ಕುದಿಯುವದು, ತುಪ್ಪವನ್ನು ಹಾಕಿ ಹುರಿದ ಸೊಪ್ಪಿನಂತೆ ಬತ್ತಿಕೊಂಡು ಸುರುಟಿಕೊಳ್ಳವದು. ಅಧ್ಯಾತ್ಮಚಿಂತೆಯಲ್ಲಿ ಹೀಗಿಲ್ಲ. ಆ ಚಿಂತೆಯು ಮೊದಲಾದರೆ ಮನಸ್ಸಿಗೆ ಹೊಯ್ದಾಡುವದು ತಪ್ಪುವದು, ಶಾಂತಿಯ ತಂಪು ಕಾಣಿಸಿಕೊಳ್ಳುವದು, ಆನಂದದ ಸವಿಯು ಕೂಡಲೆ ತೋರಿ ಹರ್ಷವು ಉಕ್ಕೇರುವದು. **ಸಂ-7, 246**

# ಅಧ್ಯಾತ್ಮಚಿಂತನೆಯಿಂದ ದೊರಕುವ ಜಯ

ಯಾರು ಅಧ್ಯಾತ್ಮಪ್ರಕಾಶವನ್ನು ಕಂಡುಕೊಂಡಿರುವರೋ ಅವರ ಜೀವನದಲ್ಲಿ ಆಶಾಭಂಗವೆಂಬುದೇ ಇರುವದಿಲ್ಲ. "ನನಗೆ ಈ ವ್ಯವಹಾರದಲ್ಲಿ ನಷ್ಟವಾಯಿತಲ್ಲ, ನನಗೆ ಈ ಕಾರ್ಯದಲ್ಲಿ ಸೋಲಾಯಿತಲ್ಲ!" ಎಂದು ಪರಿತಪಿಸುತ್ತಿರುವವರ ಜೀವನಕ್ಕೂ ಆಧ್ಯಾತ್ಮಿಕಜೀವನಕ್ಕೂ ತುಂಬ ಅಂತರವಿರುತ್ತದೆ.

"ಹಿಡಿದ ಕಾರ್ಯವೆಲ್ಲ ಜಯವಾಗಬೇಕು, ಬಯಸಿದ್ದೆಲ್ಲ ಸಿಗಬೇಕು"–ಎಂದು ಹಂಬಲಿಸುತ್ತಾ ಅನೇಕರು ಸಂಸಾರದಲ್ಲಿ ಸಂಕಟಪಡುತ್ತಿರುವರು. ಯಾರು ಅಧ್ಯಾತ್ಮ ತತ್ತ್ವವನ್ನು ಕಂಡಕೊಂಡಿರುವರೋ ಯಾರು ಸ್ವಾರ್ಥದ ಮೊಳಕೆಯನ್ನು ಚಿಗುಟಿಹಾಕಿ ತಮ್ಮ ಹೃದಯದಲ್ಲಿರುವ ಪರಮಾತ್ಮನೊಡನೆ ಐಕ್ಯವನ್ನು ಸಾಕ್ಷಾತ್ಕರಿಸಿಕೊಂಡಿರುವರೋ ಅವರ ಜೀವನಕ್ರಮದಲ್ಲಿ ಈ ಗೋಳಿರುವದಿಲ್ಲ. ಅವರು ಜಯವಾಗದ ಕಾರ್ಯದಲ್ಲಿ ಕೈಹಾಕುವದಿಲ್ಲ, ಆದ್ದರಿಂದ ಅವರು ಕೈಹಾಕಿದ ಕೆಲಸದಲ್ಲಿ ಜಯವೇ ಸಿದ್ಧವು; ಅವರು ಕಂಡಕಂಡದ್ದೆಲ್ಲ ತಮಗೆ ಆಗಬೇಕೆಂದು ಬಯಸುವದಿಲ್ಲ. ಆದ್ದರಿಂದ ಅವರು ಬಯಸಿದ್ದೆಲ್ಲ ಅವರಿಗೆ ದೊರಕುವದೂ ಸಿದ್ಧ.

ಅವರು ಇಂಥ ಸತ್ಯಕಾಮರೂ ಸತ್ಯಸಂಕಲ್ಪರೂ ಆಗಿರುವ ರಹಸ್ಯವು ಇದೇ: ಅವರ ಹೃದಯಲ್ಲಿ ಸರ್ವಮಂಗಲಸ್ವರೂಪನಾದ ಪರಮಾತ್ಮನು ನೆಲಸಿರುವನು; ಅವರಿಗೆ ಅಮಂಗಲವು ಹೇಗೆ ಆಗಬೇಕು? ಸರ್ವವಸ್ತುಗಳೂ ನಿತ್ಯಾಪ್ತವಾಗಿರುವ ಪರಮಾತ್ಮನು ಅವರಲ್ಲಿ ಎಡೆಮಾಡಿಕೊಂಡಿರುವನು; ಅವರಿಗೆ ಲಾಭವೆಲ್ಲಿ ಬಂದೀತು? ಸಕಲಮೋಹಾ ಸುರರನ್ನೂ ಗೆದ್ದಿರುವ ಭಗವಂತನೇ ಅವರ ಹೃದಯಕಮಲದಲ್ಲಿರುವನು; ಅವರಿಗೆ ಪರಾಜಯವೆಲ್ಲಿ ಬಂದೀತು?

ದುಃಖ, ರೋಗ, ದಾರಿದ್ರ್ಯ–ಮುಂತಾದ ಅಮಂಗಲಗಳಿಂದ ಪಾರಾಗಬೇಕೋ? ಅಪಮಾನ, ತಿರಸ್ಕಾರ, ಅನಾದರ, ಪರಾಭವ–ಮುಂತಾದ ಪರಾಜಯಗಳಿಂದ ಬಿಡುಗಡೆಯಾಗಬೇಕೊ? ಆಶಾಭಂಗ, ಸ್ವಧನಹಾನಿ, ಸ್ವಜನಹಾನಿ–ಮುಂತಾದ ನಷ್ಟಗಳ ದುಃಖವಿಲ್ಲದಂತಾಗಬೇಕೊ? ಹಾಗಾದರೆ ಇದಕ್ಕೆಲ್ಲ ಒಂದೇ ಉಪಾಯವಿರುವದು. ನಿಮ್ಮಗಳ ಹೃದಯದಲ್ಲಿ ಕಲ್ಯಾಣಕಾರಕನಾದ ಭಗವಂತನನ್ನು ಪ್ರತಿಷ್ಠೆಮಾಡಿಕೊಳ್ಳಿರಿ.

**ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಭವಃ ।**

**ಯೇಷಾಂ ಹೃದಿಸ್ಥೋ ಭಗವಾನ್ ಮಂಗಲಾಯತನಂ ಹರಿಃ ॥**

ಭಾವಾರ್ಥ: ಯಾರ ಹೃದಯದಲ್ಲಿ ಮಂಗಲಗಳಿಗೆಲ್ಲ ತೌರುಮನೆಯಾದ, ಭಗವಂತನಾದ ಶ್ರೀಹರಿಯು ನೆಲೆಸಿರುವನೋ ಅವರಿಗೆ ಲಾಭವಾಗುವದು, ಅವರಿಗೇ ಜಯವುಂಟಾಗುವದು; ಅವರಿಗೆ ಪರಾಭವವೆಲ್ಲಿಯದು? **ಸಂ–6, 293**

# ಅಧ್ಯಾತ್ಮ ಚಿಂತಕರೂ ಸಮಾಜವೂ

ಅಧ್ಯಾತ್ಮವಿಚಾರದ ಫಲವು ಜೀವನದಲ್ಲಿ ಒಡಮೂಡಿದವರ ಮನಸ್ಸಿನಲ್ಲಿ ಎಲ್ಲಾ ಬಗೆಯ ತಳಮಳವೂ ನಿಂತುಹೋಗುವದು; ಏಕೆಂದರೆ ಅವರಿಗೆ ಯಾವ ಮಾರ್ಪಾಡೂ ಇಲ್ಲದ ಶಾಂತಿಯ ಪರಮಾವಧಿಯಾದ ಪರಮಾತ್ಮನೊಡನೆ ಐಕ್ಯವು ಸಿದ್ಧಿಸಿರುತ್ತದೆ. ಲಾಭ ನಷ್ಟ, ಜಯ ಅಪಜಯ-ಮುಂತಾದ ಹೊರಗಿನ ದ್ವಂದ್ವಗಳು ಅವರಲ್ಲಿ ಯಾವ ವಿಕಾರವನ್ನೂ ಉಂಟುಮಾಡುವಂತಿರುವದಿಲ್ಲ; ಮನಸ್ಸಿನಲ್ಲಿ ಉಬ್ಬುವದು ತಗ್ಗುವದು, ಅಂಜುವದು ಧೈರ್ಯಗೊಳ್ಳುವದು, ದುಃಖದಲ್ಲಿ ಸಂಕಟಪಡುವದು, ಸುಖದಲ್ಲಿ ನಲಿದಾಡುವದು-ಇಂಥ ಒಳಗಿನ ದ್ವಂದ್ವಗಳು ಅವರನ್ನು ಕಾಡುವಂತಿರುವದಿಲ್ಲ. ಜಗತ್ತಿನಲ್ಲಿ ಕಾಣಬರುವ ಯಾವದೊಂದು ಮಾರ್ಪಾಡಿನಿಂದಲೂ ತನ್ನಲ್ಲಿ ಒಂದಿಷ್ಟೂ ಮಾರ್ಪಾಡಿಲ್ಲದೆ, ಅವುಗಳನ್ನೆಲ್ಲ ತನ್ನ ನಿಯಮಕ್ಕೆ ಒಳಪಡಿಸಿಕೊಂಡಿರುವ ಭಗವಂತನಂತೆಯೇ ಅಧ್ಯಾತ್ಮಚಿಂತಕರೂ ಎಂದೆಂದಿಗೂ ಮನಸ್ಸಿನಲ್ಲಿ ಏರುಪೇರುಗಳಿಲ್ಲದೆ ಇರುತ್ತಿರುವರು. ಭಗವಂತನಿಗೂ ಭಗವಂತನ ಭಕ್ತರಿಗೂ ಈ ವಿಷಯದಲ್ಲಿ ಯಾವ ಹೆಚ್ಚು ಕಡಿಮೆಯೂ ಇರುವದೇ ಇಲ್ಲ.

ಅಧ್ಯಾತ್ಮಚಿಂತಕರು ತಮ್ಮ ಮನಸ್ಸಿನಲ್ಲಿ ಶಾಂತರಾಗಿರುವರೆಂಬುದಿಷ್ಟೇ ಅಲ್ಲ, ತಮ್ಮ ಸುತ್ತುಮುತ್ತಲಿನ ಜನರಿಗೂ ಪ್ರಾಣಿಗಳಿಗೂ ತಮ್ಮ ಪೂರ್ಣಶಾಂತಿಯ ಬೆಳದಿಂಗಳನ್ನು ಹಂಚಿಕೊಟ್ಟು ಅವರನ್ನೆಲ್ಲ ಆಹ್ಲಾದದಲ್ಲಿರಿಸುವರು. ಅವರು ತಮ್ಮೊಳಗೆ ಕಂಡುಕೊಂಡಿರುವ ಅಧ್ಯಾತ್ಮತತ್ತ್ವವು ಪ್ರಪಂಚದಲ್ಲಿ ಕಾಣುವ ಪ್ರತಿಯೊಂದು ಪ್ರಾಣಿಯಲ್ಲಿಯೂ ಸಮವಾಗಿಯೇ ಇರುತ್ತಿರುವದೆಂಬುದು ಅವರ ಜೀವನದ ಅಡಿಗಲ್ಲಾಗಿರುವದೇ ಅವರ ಈ ಸಮಬುದ್ಧಿಗೆ ಕಾರಣವಾಗಿರುತ್ತದೆ. ಅವರಿಗೆ ಇಂಥವನು ಪರಿಚಿತನು, ಇಂಥವನು ಗೆಳೆಯನು, ಇಂಥವನು ಹಗೆಯು, ಇಂಥವನು ಕುಲಸ್ಥನು, ಇಂಥವನು ತಮಗೆ ಆಗದವನು, ಇಂಥವನು ತಮ್ಮ ಆಪ್ತನು-ಎಂಬ ವಿಭಾಗವೇ ಪ್ರಪಂಚದಲ್ಲಿ ಕಾಣುತ್ತಿರುವದಿಲ್ಲ; ತಮ್ಮೊಳಗಿನ ಪರಮಾತ್ಮನು ಹೇಗೆ ತಮಗೆ ಅತ್ಯಂತ ಪ್ರೇಮಾಸ್ಪದನಾಗಿರುವನೋ, ಮತ್ತೆಲ್ಲರಲ್ಲಿಯೂ ಇರುವವನೂ ಆತನೇ ಆಗಿರುವದರಿಂದ ಅವರೂ ತಮಗೆ ಹಾಗೆಯೇ ಪರಮಪ್ರೇಮಾಸ್ಪದವಾಗಿರುವರು. ಈ ಪ್ರೇಮವನ್ನು ಅವರು ಪ್ರಯತ್ನದಿಂದ ಮಾಡಬೇಕಾಗಿರುವದಿಲ್ಲ, ಅದು ಅವರ ಸ್ವಭಾವವಾಗಿಬಿಟ್ಟಿರುತ್ತದೆ. ಇದಕ್ಕೆ ಅವರು ಸಾಕ್ಷಾತ್ಕರಿಸಿಕೊಂಡಿರುವ ಪರಮಾತ್ಮೈಕ್ಯತೆಯೇ ಕಾರಣವಾಗಿರುವದು.

**ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।**

**ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥**

ಭಾವಾರ್ಥ: ವಿದ್ಯೆಯಿಂದಲೂ ವಿನಯದಿಂದಲೂ ಕೂಡಿದ ಬ್ರಾಹ್ಮಣನು, ಗೋವು, ಆನೆ, ನಾಯಿ, ಚಂಡಾಲ-ಇವರೆಲ್ಲರಲ್ಲಿಯೂ ಒಂದೇ ಸಮನಾಗಿರುವ ಪರಮಾತ್ಮನನ್ನು ಪಂಡಿತರು ಕಂಡುಕೊಂಡಿರುವರು. ಸಂ-6, 345

## ಮಾನವನ ಹೆಚ್ಚುಗಾರಿಕೆ

ಮನುಷ್ಯನಿಗೆ ಪುಣ್ಯದ ಒಲವು ಇರುವಂತೆ ಪಾಪದ ಒಲವೂ ಹೆಚ್ಚಾಗಿರುತ್ತದೆ. ಪ್ರಾಣಿಗಳಿಗೆ ಪಾಪದ ಅರಿವೂ ಇರುವದಿಲ್ಲ. ಪುಣ್ಯದ ಅರಿವೂ ಇಲ್ಲ. ಅರಿತು ಕೆಲಸವನ್ನು ಮಾಡುವವರಿಗೆ ಮಾತ್ರ ಪುಣ್ಯಪಾಪಗಳ ಅಂಟು. ಆದ್ದರಿಂದ ಮನುಷ್ಯನಲ್ಲಿ ಪ್ರಾಣಿಗಳಿಗಿಲ್ಲದ ಇಂಥ ಅರಿವು ಇರುವದರಿಂದ, ಅವನ ಹೊಣೆಗಾರಿಕೆಯು ಅವುಗಳಿಗಿಂತ ಹೆಚ್ಚಾಗಿ ಇರುತ್ತದೆ.

ಆದರೆ ಮಾನವನಿಗೆ ತನ್ನ ಜ್ಞಾನ, ಇಚ್ಛೆ, ಕ್ರಿಯೆ-ಈ ಶಕ್ತಿಗಳನ್ನು ಸ್ವತಂತ್ರವಾಗಿ ಉಪಯೋಗಿಸುವ ಹೆಚ್ಚುಗಾರಿಕೆಯೂ ಇರುತ್ತದೆ. ಪಾಪಕರ್ಮವನ್ನು ಮಾಡದೆ, ತನಗೆ ಅನಿಷ್ಟವಾದ ಫಲವನ್ನು ಕೊಡುವ ಕರ್ಮಗಳಲ್ಲಿ ತೊಡಗದೆ, ಕೊನೆಗೆ ದುಷ್ಫಲವನ್ನು ಕೊಡುವ ವಸ್ತುಗಳನ್ನು ಬಯಸದೆ ಇರುವದಕ್ಕೂ ಮಾನವನಿಗೆ ಶಕ್ಯವಿದೆ. ಹೀಗೆ ಅನಿಷ್ಟವಾದದ್ದನ್ನು ತೊರೆಯುವದಕ್ಕೂ ಇಷ್ಟವಾದದ್ದನ್ನು ಅರಿತುಕೊಳ್ಳುವದಕ್ಕೂ ಸ್ವಾತಂತ್ರ್ಯವು ಯಾವ ಪ್ರಾಣಿಗೂ ಇರುವದಿಲ್ಲ.

ಮನುಷ್ಯನ ಶರೀರರಚನೆಯೂ ಇಂದ್ರಿಯಗಳ ಮತ್ತು ಮನಸ್ಸಿನ ಸ್ಥಿತಿಯೂ ಮಿಕ್ಕ ಪ್ರಾಣಿಗಳ ಶರೀರಾದಿಗಳ ರಚನೆಗಿಂತಲೂ ಸ್ಥಿತಿಗಿಂತಲೂ ವಿಲಕ್ಷಣವಾಗಿರುತ್ತವೆ. ಮಿಕ್ಕ ಪ್ರಾಣಿಗಳಿಗೆ ಆಗ್ಗೆ ತಮಗೆ ಪ್ರಿಯವಾಗಿ ತೋರಿದ್ದರಲ್ಲಿ ತೊಡಗುವದಿಷ್ಟೇ ಸ್ವಾತಂತ್ರ್ಯ. ಹಸಿವಾದರೆ ಆಹಾರವನ್ನು ಉಪಯೋಗಿಸುವದು, ನೀರಡಿಕೆಯಾದರೆ ನೀರನ್ನು ಕುಡಿಯುವದು-ಇಷ್ಟೇ ಅವಕ್ಕೆ ತಿಳಿದಿದೆ. ಮನುಷ್ಯನಿಗೆ ಹಾಗಲ್ಲ; ಅವನಿಗೆ ಹಿಂದೆ ತನ್ನ ಕರ್ಮಗಳಿಂದ ಆಗಿರುವ ಒಳ್ಳೆಯ ಕೆಟ್ಟ ಫಲಗಳನ್ನು ನೆನಪಿನಲ್ಲಿಡುವ, ಮುಂದೆ ತನಗೆ ಉಂಟಾಗಬಹುದಾದ ಇಷ್ಟಾನಿಷ್ಟಗಳನ್ನು ಈಗಲೇ ನಿರೀಕ್ಷಿಸಿ ಗೊತ್ತುಪಡಿಸಿಕೊಳ್ಳುವ ಶಕ್ತಿಯಿದೆ. ಮುಂದೆ ಆಗಬಹುದಾದ ಇಷ್ಟಪ್ರಾಪ್ತಿಗೂ ಅನಿಷ್ಟಪರಿಹಾರಕ್ಕೂ ಪ್ರಯತ್ನಮಾಡುವ ಶಕ್ತಿಯೂ ಅವನಿಗೆ ಇದೆ.

ತನ್ನ ಶರೀರೇಂದ್ರಿಯಗಳ ಸದುಪಯೋಗವನ್ನು ಮಾಡಿಕೊಂಡರೆ ತನಗೆ ಅಭ್ಯುದಯ ವಾಗುವದು, ದುರುಪಯೋಗವನ್ನು ಮಾಡಿಕೊಂಡರೆ ತನಗೆ ಕೇಡಾಗುವದು ಎಂಬುದೂ ಮನುಷ್ಯನಿಗೆ ತಿಳಿದಿದೆ. ಆದ್ದರಿಂದ ತನ್ನ ತಿಳಿವಳಿಕೆಯನ್ನು ಅಸಡ್ಡೆಮಾಡಿ ಸ್ವೇಚ್ಛೆಯಿಂದ ನಡೆದುಕೊಂಡರೆ ದುಃಖಕ್ಕೆ ಪಾತ್ರನಾಗಬೇಕಾಗುವದು; ಆಗ ತನಗೆತಾನೇ ಶತ್ರು

ವಾಗುವನು. ಅದರ ಸದುಪಯೋಗವನ್ನು ಮಾಡಿಕೊಂಡು ಶರೀರೇಂದ್ರಿಯಗಳನ್ನು ಹಿಡಿದುಕೊಂಡರೆ ಸುಖಶಾಂತಿಗಳು ಲಭಿಸುವವು, ಆಗ ತನಗೆತಾನೇ ಮಿತ್ರನಾಗುವನು.

ಮನುಷ್ಯನಿಗೆ ತನ್ನ ದೇಹೇಂದ್ರಿಯಗಳ ಸದುಪಯೋಗಮಾಡಿಕೊಳ್ಳುವ ರೀತಿಯನ್ನು ತಿಳಿಸಿಕೊಡುವದೇ ಶಾಸ್ತ್ರದೃಷ್ಟಿ. ಶಾಸ್ತ್ರದೃಷ್ಟಿಯನ್ನು ಸಂಪಾದಿಸಿಕೊಳ್ಳಬಲ್ಲವನಾಗಿರುವದೇ ಅವನ ಹೆಚ್ಚುಗಾರಿಕೆ. ಸಂ–32, 23

# ವ್ಯವಹಾರವೂ ಪರಮಾರ್ಥವೂ

ವ್ಯವಹಾರದ ವಿಷಯಗಳು ಕೆಲವು ಇಂದ್ರಿಯಗಳಿಗೆ ಗೋಚರವಾಗುತ್ತವೆ; ಮತ್ತೆ ಕೆಲವು ಇಂದ್ರಿಯಗೋಚರವಾಗಿರುವ ದೃಶ್ಯಗಳ ಆಧಾರದಿಂದ ಊಹಿಸಬಹುದಾಗಿರುತ್ತವೆ. ಆದ್ದರಿಂದ ಅವುಗಳ ನಿಜವನ್ನು ಮನಸ್ಸಿನಿಂದ ತರ್ಕಿಸ ಬಹುದು, ಮತ್ತೊಬ್ಬರಿಗೆ ಮಾತಿನಿಂದ ವಿವರಿಸಿ ತಿಳಿಯಿಸಿಕೊಡಲೂಬಹುದು.

ಇಂದ್ರಿಯಗಳಿಗೆ ಗೋಚರವಾಗುವ ಅಥವಾ ಇಂದ್ರಿಯಗೋಚರವಾದ ಗುರುತಿನಿಂದ ತರ್ಕಿಸಲಾಗುವ ಕೆಲವು ವಿಷಯಗಳು ಕಾಲ, ದೇಶ–ಎಂಬ ಆಧಾರಗಳನ್ನು ಬಯಸಿ ಕಾಣಿಸಿಕೊಳ್ಳುತ್ತವೆ. ಮತ್ತೆ ಕೆಲವು ಕಾಲದೇಶಗಳನ್ನು ಬಯಸದಂತೆ ತೋರಿದರೂ ತರ್ಕದ ನಿಯಮಕ್ಕೆ ಕಟ್ಟುಬಿದ್ದಿರುತ್ತವೆ. ಉದಾಹರಣೆಗೆ: 'ನಮ್ಮೂರ ಮುಂದೆ ರೈಲುದಾರಿಯಿದೆ'. ಇದು ಈಗಿನ ಕಾಲದಲ್ಲಿ ಒಂದು ದೇಶದಲ್ಲಿರಬಹುದಾದ ವಿಷಯ; ಇದು ಕಾಲಾಂತರದಲ್ಲಿ ಮಾರ್ಪಡಬಹುದು, ದೇಶಾಂತರದಲ್ಲಿ ಇರುವದಿಲ್ಲ. 'ಹಕ್ಕಿಗಳು ಹಾರುತ್ತವೆ'. ಇದು ಭೂಮಿಯಮೇಲೆ ಕಾಣಬರುವ ಕೆಲವು ಪ್ರಾಣಿಗಳು ಎಲ್ಲಾ ಕಾಲದಲ್ಲಿಯೂ ಮಾಡಬಹುದಾದ ಕ್ರಿಯೆಯನ್ನು ಹೇಳುವ ವಾಕ್ಯ. ಕಾಲಾಂತರದಲ್ಲಿ ಹಕ್ಕಿಗಳ ಸ್ವಭಾವವೇನೆಂಬುದನ್ನು ಹೇಳುವದಕ್ಕೆ ಆಗುವದಿಲ್ಲ. 'ಆ ಊರಿನಲ್ಲಿ ಜನರು ಒಮ್ಮೆಗೇ ಕೂತಿರುತ್ತಾರೆ, ನಿಂತುಕೊಂಡೂ ಇರುತ್ತಾರೆ' ಇದು ಆಗದ ವಿಷಯವನ್ನು ಹೇಳುವ ವಾಕ್ಯ, ಇಂಥ ವ್ಯವಹಾರದ ವಿಷಯಗಳನ್ನು ಮನಸ್ಸಿನಲ್ಲಿ ತರ್ಕಿಸಿ ನಿಶ್ಚಯಿಸಬಹುದು, ಮತ್ತೊಬ್ಬರಿಗೆ ತಿಳಿಯಿಸಲೂಬಹುದು.

'ಭಿನ್ನವಸ್ತುಗಳೆಲ್ಲವೂ ಒಂದೇ ಪರಮಾರ್ಥದ ರೂಪವಿಶೇಷಗಳು', 'ನಮಗೆಲ್ಲರಿಗೂ ಒಬ್ಬನೇ ನಿಜವಾದ ಆತ್ಮ', 'ನಮ್ಮ ಆತ್ಮನಿಗೆ ಹುಟ್ಟೂ ಇಲ್ಲ, ಸಾವೂ ಇಲ್ಲ'. ಇಲ್ಲಿ ಹೇಳಿರುವ ವಿಷಯಗಳು ಅನುಭವದಿಂದ ಸುನಿಶ್ಚಿತವಾಗಿ ಕೆಲವರಿಗೆ ಕಾಣಬಹುದು. ಇದನ್ನು ಬರಿಯ ತರ್ಕದಿಂದ ಮತ್ತೊಬ್ಬರಿಗೆ ಸಿದ್ಧಪಡಿಸಿಕೊಡುವದಾಗಲಿ, ಮನಸ್ಸಿನಿಂದ ಕಲ್ಪಿಸಿಕೊಳ್ಳುವದಾಗಲಿ ಆಗುವದಿಲ್ಲ. ವ್ಯವಹಾರದ ದೃಷ್ಟಿಯಿಂದ ಇವು ವಿರುದ್ಧವಾದ ಅರ್ಥವನ್ನೇ ಬೋಧಿಸುವ ವಾಕ್ಯಗಳಾಗಿರುತ್ತವೆ. ಭಿನ್ನವಸ್ತುಗಳು ಒಂದು ಹೇಗೆ?

ಅನೇಕರಿಗೆ ಆತ್ಮನು ಒಬ್ಬನು ಹೇಗೆ? ಹುಟ್ಟಿಸಾಯುತ್ತಿರುವರೆಂದು ಗೊತ್ತಾಗಿರುವ ಜೀವರ ಆತ್ಮನು ಹುಟ್ಟುಹೊಂದುಗಳಿಲ್ಲದವನೆಂಬುದು ಹೇಗೆ? ಈ ಪರಮಾರ್ಥ ತತ್ತ್ವವನ್ನು ಭಾಷೆಯಿಂದ ತಿಳಿಸಿಕೊಡುವದಾಗಲಿ ಮನಸ್ಸಿನಿಂದ ತರ್ಕಿಸುವದಾಗಲಿ ಆಗಲಾರದು. ಆದರೂ ಇದು ಸರಿಯಾದ ಅಧಿಕಾರವನ್ನು ಸಂಪಾದಿಸಿಕೊಂಡರೆ ಯಾವ ಮನುಷ್ಯನಿಗಾದರೂ ಅನುಭವಕ್ಕೆ ಬರಬಹುದಾದ ವಿಷಯ. ಇದನ್ನು ತಿಳಿಸಿಕೊಡುವದಕ್ಕೆ ಒಂದಾನೊಂದು ವಿಶಿಷ್ಟಪ್ರಕಾರವು ಬೇಕಾಗುವದು.

## ಪರಮಪುರುಷಾರ್ಥ

***(ಮೂಲ: ಶ್ರೀ ಸ್ವಾಮಿ ಶಿವಾನಂದ ಸರಸ್ವತಿಗಳು) :*** ಪ್ರತಿಯೊಂದು ಪ್ರಾಣಿಯೂ ಸುಖಕ್ಕಾಗಿಯೇ ಹೊಡೆದಾಡುತ್ತಿರುವದೆಂಬುದು ಎಲ್ಲರಿಗೂ ತಿಳಿದಿರುವ ಹಳೆಯ ಸಂಗತಿ; ಆದರೆ ಆ ಪ್ರಾಣಿಯು ತಾನು ಮಾಡಿದ ಕರ್ಮಗಳಿಂದ ಪಡೆದುಕೊಂಡ ಸುಖವು ಅತ್ಯಲ್ಪಕಾಲವಿರುವದನ್ನು ಕಂಡು ಸ್ವಲ್ಪವೂ ಮನಸ್ಸಮಾಧಾನವಿಲ್ಲದೆ ದುಃಖಪಡುತ್ತಿರುವದು. ಇಂದ್ರಿಯಗಳ ಭೋಗಗಳು ಅನಿತ್ಯವಾಗಿರುತ್ತವೆ; ಅತಿಭೋಗದಿಂದ ಇಂದ್ರಿಯಗಳೇ ಸವೆದುಹೋಗುತ್ತವೆ. ಇದೂ ಅಲ್ಲದೆ ಇಂಥ ಭೋಗಗಳ ಜೊತೆಯಲ್ಲಿ ಸಾಮಾನ್ಯವಾಗಿ ಪಾಪವು ಇದ್ದೇ ಇರುವದರಿಂದ ಜೀವನಿಗೆ ಇವುಗಳಿಂದ ಮಿತಿಮೀರಿದ ದುಃಖವೇ ಉಂಟಾಗುತ್ತದೆ. ಈ ಪ್ರಪಂಚದ ಸುಖಗಳು ಎಷ್ಟುಮಟ್ಟಿಗೆ ಸಿಕ್ಕಬಹುದೋ ಅಷ್ಟುಮಟ್ಟಿಗೇ ಅವುಗಳನ್ನು ಭೋಗಿಸುವದಕ್ಕೆ ಸಾಧ್ಯವಾದರೂ ಅವು ಎಷ್ಟರಮಟ್ಟಿಗೆ ಯಾವದೊಂದು ಅಡಚಣೆಯೂ ಇಲ್ಲದೆ ಇರಬಹುದೋ ಅಷ್ಟರಮಟ್ಟಿಗೂ ದೊರಕಿದರೂ ಕೂಡ ಕೊನೆಗೆ ಅತಿಭೀಕರವಾದ ಮುಪ್ಪು ಬಂದು ಮರಣವನ್ನೂ ನಾಶವನ್ನೂ ಮೈಮೇಲೆ ಕೆಡಹುವೆನೆಂದು ಅಂಜಿಸುವದು. ಇನ್ನು ಪರಲೋಕದ ಭೋಗಗಳಾದರೂ ಇಹಲೋಕದ ಈ ಇಂದ್ರಿಯಭೋಗಗಳಿಗಿಂತ ಉತ್ತಮ ವೆಂದೆಣಿಸುವಹಾಗಿರುವದಿಲ್ಲ; ಅವುಗಳಲ್ಲಿ ಇಷ್ಟು ದುಃಖದ ಮಿಶ್ರಣವಿಲ್ಲದೆ ಇರ ಬಹುದು, ಅವು ಅಷ್ಟುಬೇಗನೆ ಹಾರಿಹೋಗದೆ ಇರಬಹುದು, ಆದರೆ ಸ್ವಭಾವದಲ್ಲಿ ಅವೂ ಇವುಗಳಂತೆಯೇ ಇರುತ್ತವೆ–ಎಂಬದನ್ನು ನೆನಪಿಡಬೇಕು. ಇದೂ ಅಲ್ಲದೆ ಅವುಗಳನ್ನು ಕರ್ಮಗಳಿಂದಲೇ ಸಂಪಾದಿಸಬೇಕಾಗಿರು ವದರಿಂದ ಅವೂ ಕೊನೆಗಂಡೇ ತೀರುತ್ತವೆ. ಒಂದೇ ಮಾತಿನಲ್ಲಿ ಹೇಳಿದರೆ, ಭೋಗಗಳಿಗೆಲ್ಲ ನಾಶವುಂಟು.

ಓ ಅಲ್ಪಶ್ರದ್ಧೆಯ ಅಲ್ಪಮಾನವ ! ಯಾವ ಸುಖಗಳೂ ಭೋಗದ ಕ್ಷಣದಿಂದಾಚೆಗೆ ಇರಲೇ ಆರವೆಂದು ತಿಳಿದು ತಿಳಿದೂ ಸುಮ್ಮನೆ ಏತಕ್ಕೆ ಅವುಗಳಿಗಾಗಿ ಚಡಪಡಿಸುತ್ತಿರುವೆ? ನಿರ್ವಿಕಾರಿಯಾದ ತತ್ತ್ವದಿಂದಲೇ ಬರಬೇಕಾಗಿರುವ ಎಂದಿಗೂ ಮಾರ್ಪಡದ,

ಅನಂತವಾದ ನಿರತಿಶಯವಾದ ಸುಖವನ್ನು ಹುಡುಕಿಕೊ, ಅಂಥ ಮಹಾತ್ಮನನ್ನು ಹುಡುಕಿ ಕಂಡುಕೊ; ಆ ಅನ್ವೇಷಣೆಯು ಜಯಶೀಲವಾದರೆ ಅಂಥಾತನಿಂದ ಆ ಮಾರ್ಪಡದ ಸುಖವನ್ನು ಪಡೆದುಕೊಳ್ಳಲೇಬಹುದೆಂದು ಖಂಡಿತವಾಗಿ ನಂಬು.

ಈ ಲೋಕದ ಮುಖ್ಯಧರ್ಮಪಂಥಗಳೆಲ್ಲವೂ ಇಂಥ ಮಹೇಶ್ವರನೊಬ್ಬನು ನಿಜ ವಾಗಿಯೂ ಇರುವನೆಂದು ಐಕ್ಯಕಂಠದಿಂದ ಸಾರಿಹೇಳುತ್ತಿವೆ. ಈ ಪರಮೇಶ್ವರನು, ನಿಜವಾಗಿಯೂ ನಿನಗೆ ಬಹುದೂರದಲ್ಲಿಲ್ಲ, ಆತನು ನಿನಗೆ ತೀರ ಹತ್ತಿರದಲ್ಲಿಯೇ ಇರುತ್ತಾನೆ, ನಿನ್ನ ದೇಹವೆಂಬ ದೇವಾಲಯದಲ್ಲಿಯೇ ನಿನ್ನ ಹೃದಯ ಕುಹರದ ನಡುವೆಯೇ ಇರುತ್ತಾನೆ. ಆತನೇ ನಿನ್ನ ಮನಸ್ಸಿಗೆ ಸಾಕ್ಷಿಯಾಗಿದ್ದುಕೊಂಡು ನಿನ್ನ ಬುದ್ಧಿವೃತ್ತಿಗಳೆಲ್ಲವನ್ನೂ ನೋಡುತ್ತಿರುವಾತನು. ಮಹಾತ್ಮರೂ ಋಷಿಗಳೂ ಯೋಗಿಗಳೂ ತತ್ತ್ವಜ್ಞಾನಿಗಳೂ ಕಾಲಜ್ಞಾನಿಗಳೂ ಕೊಂಡಾಡಿರುವ ಧರ್ಮಗ್ರಂಥಗಳ ಪರಮತತ್ತ್ವವೇ ಆತನು. ಆತನನ್ನು ಭಕ್ತಿಯೋಗದ ಸಾಧನದಿಂದ ಎಲ್ಲರೂ ಸಾಕ್ಷಾತ್ಕಾರಗೊಳಿಸಿ ಕೊಳ್ಳಬಹುದಾಗಿದೆ.

ನೀನು ಈ ದೇಹವನ್ನು ಧರಿಸಿದ್ದು ಏತಕ್ಕೆ? ನೀನು ಹುಟ್ಟಿರುವದು ಏತಕ್ಕೆ? ಈ ಜೀವನದಲ್ಲಿ ನಿನ್ನ ಕರ್ತವ್ಯವೇನು? ತಿನ್ನುವದು, ಕುಡಿಯುವದು, ವಿಲಾಸದಿಂದ ಕಾಲ ಹಾಕುವದು, ಹೆಂಡಿರುಮಕ್ಕಳನ್ನು ನೋಡಿಕೊಳ್ಳುವದು-ಇಷ್ಟೆಯೊ, ಅಥವಾ ಇದಕ್ಕಿಂತ ಹೆಚ್ಚಿನ ಕರ್ತವ್ಯವೇನಾದರೂ ಇರುವದೊ? ಅಪ್ಪಾ, ಅಮರ್ತ್ಯರಾದ ಜೀವರುಗಳಿರ, ಅಮೃತಪುತ್ರರಿರ, ಎಚ್ಚರಗೊಳ್ಳಿರಿ, ಸುತ್ತಲೂ ನೋಡಿರಿ ! ನಿತ್ಯಶಾಂತಿಯ ನಿತ್ಯಾನಂದದ ಧಾಮವೊಂದುಂಟು; ಅಲ್ಲಿ ಸಾವಿಲ್ಲ ಸಂಕಟವಿಲ್ಲ, ದುಃಖವಿಲ್ಲ ವ್ಯಥೆಯಿಲ್ಲ, ಸಂಶಯವಿಲ್ಲ ಭ್ರಾಂತಿಯಿಲ್ಲ. ಈ ನಿತ್ಯೋಲ್ಲಾಸದ ನಿತ್ಯಸುಖದ ಅವಿನಾಶಿಯಾದ ಪರಮಧಾಮವನ್ನು ಮುಟ್ಟಬೇಕೆಂಬ ಆಶೆಯು ನಿಮಗಿಲ್ಲವೇನು? ಮನಸ್ಸನ್ನೂ ಇಂದ್ರಿಯವನ್ನೂ ವಶಕ್ಕೆ ತೆಗೆದುಕೊಳ್ಳಿರಿ. ಒಂದೇ ಸಮನೆ ಸಂಕೀರ್ತನವನ್ನು ಮಾಡುತ್ತಾ ಈ ಪರಮಾತ್ಮನ ಚಿಂತನೆಯನ್ನು ಮಾಡಿರಿ. ಆಗಲೇ ನಿಮಗೆ ಅಮೃತತ್ವವೂ ಶಾಶ್ವತವಾದ ಸಂತೋಷವೂ ಸಿಕ್ಕುವದು.

ಮನುಷ್ಯನಿಗೆ ಸುಖವೇ, ಸುಖವೊಂದೇ, ಬೇಕು. ಅವನು ಅದನ್ನು ಹಣದಿಂದ, ಅಧಿಕಾರದಿಂದ, ಹೆಂಗಸಿನಿಂದ, ಮಗನಿಂದ, ಅಥವಾ ಸ್ಥಾನಮಾನಗಳಿಂದ ಪಡೆಯು ವದಕ್ಕೆ ಹವಣಿಸುತ್ತಾನೆ, ಅದನ್ನು ಹಿಡಿದುಕೊಳ್ಳುವದಕ್ಕೆಂದು ಅವನು ಒಂದು ವಿಷಯ ದಿಂದ ಮತ್ತೊಂದಕ್ಕೆ ಹಾರುತ್ತಿರುತ್ತಾನೆ. ಅದು ಹೇಗೋ ನುಣುಚಿಕೊಂಡು ಹೋಗಿ ಬಿಡುತ್ತದೆ. ಅವನಿಗೆ ಪೆಟ್ಟಿನ ಮೇಲೆ ಪೆಟ್ಟು, ಗುದ್ದಿನ ಮೇಲೆ ಗುದ್ದು ಬೀಳುತ್ತದೆ, ಕಾರ್ಯವು ಕೆಟ್ಟಹೋಗುತ್ತದೆ, ಮನಸ್ಸಿನ ಮಂಡಿಗೆಯು ಮಾಯವಾಗುತ್ತದೆ. ಅವನು

ನಗುತ್ತಾನೆ, ಕುಣಿಯುತ್ತಾನೆ, ಅಳುತ್ತಾನೆ, ಗೋಳಿಡುತ್ತಾನೆ, ಅವನ ಇಂದ್ರಿಯಗಳು ಸೋತುಹೋಗುತ್ತವೆ. ಅವನಿಗೆ ವಿಷಯಗಳೆಂದರೆ ಅಸಹ್ಯವಾಗುತ್ತದೆ. ಕೊನೆಗೆ ಇಂದ್ರಿಯಾರ್ಥಗಳು ಮಾಯಿಕವೆಂದೂ ನಿಜವಾದ ನಿತ್ಯಸುಖವು ಅವುಗಳಲ್ಲಿ ದೊರೆಯಲಾರದೆಂದೂ ಕಂಡುಕೊಳ್ಳುತ್ತಾನೆ.

ತನಗೆ ಬೇಕಾದದ್ದು ಸಿಕ್ಕದೆಹೋಗಲು ಮನುಷ್ಯನು ದುಃಖಿಯಾಗುತ್ತಾನೆ. ಅವನಿಗೆ ಇಂಥದೊಂದು ವಸ್ತು ಬೇಕೆನಿಸುತ್ತದೆ. ಆದದ್ದು ಆಗಲಿ ತನಗೆ ಅದೊಂದು ಬೇಕೇ ಬೇಕೆಂದು ಹಟಹಿಡಿಯುತ್ತಾನೆ. ಸಿಕ್ಕಿದರೆ ಒಂದು ಕ್ಷಣ ಹಿಗ್ಗುತ್ತಾನೆ. ಸಿಕ್ಕದೆ ಇದ್ದರೆ ತಗ್ಗಿ ಕತ್ತಲೆಕವಿದಂತಾಗಿ ನಿರಾಶೆಯಿಂದ ದಿಕ್ಕುತೋಚದೆ ಮನೋರಥಭಂಗವಾಯಿತಲ್ಲ!– ಎಂದು ವ್ಯಥೆಗೊಳ್ಳುತ್ತಾನೆ. ಅದು ಸಿಕ್ಕಿದಮೇಲೆ ಕೈತಪ್ಪಿದರೆ ಅವನಿಗೆ ಬಹುಸಂಕಟ ವಾಗುತ್ತದೆ. ಒಂದು ಇಚ್ಛೆಯು ಪೂರ್ತಿಯಾದರೆ ಕೂಡಲೆ ಮತ್ತೊಂದು ತಲೆಯೆತ್ತಿ ಕೊಳ್ಳುತ್ತದೆ. ಅವನು ದಿನದಿನವೂ ಹೊಸಹೊಸ ಇಚ್ಛೆಗಳನ್ನು ಸೃಷ್ಟಿಸಿಕೊಳ್ಳುತ್ತಿರುತ್ತಾನೆ. ಅವನ ಇಚ್ಛೆಗಳಿಗೆ ಕೊನೆಯೇ ಇರುವದಿಲ್ಲ; ಚಿಂತೆಗಳು, ಕೊರಗುಗಳು, ಕಳವಳಗಳು, ಅಂಜಿಕೆಗಳು ಇವುಗಳೂ ಅವನ ಇಚ್ಛಾತೃಷ್ಣೆಗಳ ಜೊತೆಯಲ್ಲಿಯೇ ಇದ್ದುಕೊಂಡಿರುತ್ತವೆ. ಇಚ್ಛೆಯೆಂಬುದು ಕೇವಲ ಅಜ್ಞಾನದ ಮರಿಯು.

ಬ್ರಹ್ಮವು ಪರಿಪೂರ್ಣವಾಗಿರುತ್ತದೆ. ಅಲ್ಲಿ ಕಾಮಗಳೆಲ್ಲವೂ ಪರಿಸಮಾಪ್ತವಾಗುತ್ತವೆ. ಮನಸ್ಸಿನ ಚಾಂಚಲ್ಯಕ್ಕೆ ಇಚ್ಛೆಗಳೇ ನಿಲುಗಂಬಗಳು; ಇಚ್ಛೆಗಳು ಎಷ್ಟು ಕಡಿಮೆಯಾಗಿದ್ದರೆ ಸುಖವೂ ಅಷ್ಟು ಹೆಚ್ಚಾಗುತ್ತದೆ. ಯಾವನಿಗೆ ಯಾವದೊಂದರ ಇಚ್ಛೆಯೂ ಇಲ್ಲವೇ ಇಲ್ಲವೋ ಅವನೇ ಈ ಇಡಿಯ ಭೂಲೋಕದ ಚಕ್ರಾಧಿಪತಿಯು. “ಕೌಪೀನಧಾರಿಯಾಗಿ, ನನ್ನದೆಂಬುದಿಲ್ಲದೆ, ನನ್ನದೆಂಬ ಭಾವನೆಯೇ ಇಲ್ಲದೆ, ಯಾವದೊಂದು ಬಯಕೆಯೂ ಇಲ್ಲದೆ ನಿಸ್ಸಂಗನಾಗಿ ಸಂಚರಿಸುತ್ತಿರುವ ಮಹಾತ್ಮನೇ ಈ ಲೋಕದಲ್ಲಿ ಪರಮಾನಂದಿಯು. ಇಚ್ಛೆಯೂ ಕಾಮಗಳೂ ಆತ್ಮಸಾಕ್ಷಾತ್ಕಾರದಿಂದಲೇ ನಿರ್ಮೂಲವಾಗುತ್ತವೆ” ಎಂದು ಶ್ರೀಶಂಕರಾಚಾರ್ಯರು ಹೇಳಿರುತ್ತಾರೆ.

ಪರಮಪುರುಷಾರ್ಥವೆಂಬುದು ಯಾವದು? ಯಾವ ಕೆಲಸಗಳನ್ನೇ ಮಾಡುತ್ತಿರಲಿ, ಸುಖವನ್ನು ಪಡೆಯಬೇಕೆಂಬುದೇ ಮನುಷ್ಯನ ಪರಮೋದ್ದೇಶವೆಂಬುದನ್ನು ಎಲ್ಲರೂ ಒಪ್ಪಿರುತ್ತಾರೆ. ಆದ್ದರಿಂದ ಪರಮಪುರುಷಾರ್ಥವೆಂದರೆ ನಿತ್ಯಸುಖವನ್ನು ಪಡೆಯು ವದೆಂದೇ ಏರ್ಪಡುತ್ತದೆ. ಈ ನಿತ್ಯಸುಖವು ಆತ್ಮನಲ್ಲಿ ಎಂದರೆ ನಮ್ಮ ಪರಮಾರ್ಥ ಸ್ವರೂಪದಲ್ಲಿ ಮಾತ್ರವೇ ಸಿಕ್ಕತಕ್ಕದ್ದಾಗಿರುತ್ತದೆ; ಏಕೆಂದರೆ ವಿಷಯಗಳ ಸಂಬಂಧದಿಂದ ಆಗುವ ಸುಖವು ಮಾಯಿಕವಾಗಿದೆ, ಕ್ಷಣಿಕವಾಗಿರುತ್ತದೆ; ಕಳವಳ, ಸಂಕಟ, ಅಂಜಿಕೆ, ಪಾಪ–ಇವುಗಳಿಂದ ಮಿಶ್ರವಾಗಿಯೂ ಇರುತ್ತದೆ. ಸಂ–9, 10

# ಪರಮಮುಕ್ತಿ

ಮುಕ್ತಿ ಎಂದರೆ ಬಿಡುಗಡೆ. ಯಾರು ಯಾರು ಯಾರಾದರೊಬ್ಬರಿಂದ ಅಥವಾ ಯಾವದಾದರೊಂದು ಕಟ್ಟಿನಿಂದ ಬಿಡುಗಡೆಯನ್ನು ಹೊಂದಬೇಕೆಂದು ಪ್ರಯತ್ನಿಸುವರೋ ಅವರೆಲ್ಲರೂ ಒಂದೊಂದು ದೃಷ್ಟಿಯಿಂದ 'ಮುಮುಕ್ಷುಗಳು' ಎನ್ನಿಸಿಕೊಳ್ಳುವದಕ್ಕೆ ಅರ್ಹರು. ಆದರೆ ಅಧ್ಯಾತ್ಮವಿದ್ಯೆಯಲ್ಲಿ ಉಪಯೋಗಿಸಿರುವ ಮೋಕ್ಷೇಚ್ಛೆಗೇ ಈ ಶಬ್ದವನ್ನು ಮುಖ್ಯವಾಗಿ ಸಂಸ್ಕೃತದಲ್ಲಿ ಮೀಸಲಾಗಿ ಇಟ್ಟಿರುತ್ತಾರೆ.

ಕೆಲವು ಜನರು ಸರಕಾರದ ಬಂದೀಖಾನೆಗಳಲ್ಲಿ ಬಂಧವನ್ನು ಅನುಭವಿಸುತ್ತಿರುತ್ತಾರೆ. ಅವರಿಗೆ ದಂಡದ ಅವಧಿಯಾದಾಗ ಅಥವಾ ಅಧಿಕಾರಿಗಳಿಗೆ ಯುಕ್ತವೆಂದು ತೋರಿದಾಗ 'ಮುಕ್ತಿ'ಯಾಗುವದು. ಕೆಲವರಿಗೆ ಹಸಿವಿನ ಬಂಧವಾಗಿರುತ್ತದೆ; ಅವರಿಗೆ ಆಹಾರವು ಸಿಕ್ಕಾಗ ಅದರಿಂದ ಬಿಡುಗಡೆಯಾಗುವದು. ಈಗ ನಮ್ಮ ದೇಶದಲ್ಲಿ ಬಹು ಜನರಿಗೆ ಈ 'ಕ್ಷುದ್ಬಂಧ' (ಹಸಿವಿನ ಬಂಧ)ವಾಗಿರುತ್ತದೆ. ಬಡವರನೇಕರಲ್ಲಿ ಅಲ್ಪ ಸ್ವಲ್ಪ ಆಹಾರವು ಇದ್ದರೂ ಜೀವನಕ್ಕೆ ಬೇಕಾದಷ್ಟು ಸೌಕರ್ಯಗಳಿಲ್ಲದ್ದರಿಂದ ಅವರನ್ನು ದಾರಿದ್ರ್ಯಬಂಧವು ಕಾಡುತ್ತಿರುವದು. ಅವರು ಕಷ್ಟಪಟ್ಟು ಧನವನ್ನು ಸಂಪಾದಿಸಿದರೆ, ಅಥವಾ ಯಾರಾದರೂ ಧನಿಕರು ತಕ್ಕಷ್ಟು ಸಹಾಯಮಾಡಿದರೆ ಆ ಬಂಧದಿಂದ ಬಿಡುಗಡೆಯಾಗುತ್ತದೆ. ಕೆಲವರಿಗೆ ಸಮಾಜದಲ್ಲಿ ಕಟ್ಟುನಿಟ್ಟುಗಳಾಗಿರುತ್ತವೆ; ಅವರನ್ನು ಸಮಾಜದವರು ಕೆಲವು ಕಡೆಗಳಲ್ಲಿ ಎಲ್ಲರೊಡನೆ ಇರುವದಕ್ಕೆ ಅವಕಾಶವನ್ನು ಕೊಡುವದಿಲ್ಲ. ಅವರಿಗೆ ಸಮಾಜಬಂಧದಿಂದ ಮುಕ್ತಿ ಬೇಕಾಗಿರುತ್ತದೆ. ಇನ್ನು ಕೆಲವರಿಗೆ ವಾಕ್ಸ್ವಾತಂತ್ರ್ಯವಿರುವದಿಲ್ಲ; ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ನುಡಿಯದಂತೆ ಅಡ್ಡಿಯಾಗಿರುತ್ತದೆ. ಅವರಿಗೆ ವಾಗ್ಬಂಧದ ಮುಕ್ತಿಬೇಕು. ಮತ್ತೆ ಕೆಲವರಿಗೆ 'ಪೂಜಾಬಂಧ'. ತಮಗೆ ಬೇಕಾದ ರೀತಿಯಲ್ಲಿ ಈಶ್ವರನನ್ನು ಅರ್ಚಿಸುವದು, ಧ್ಯಾನಮಾಡುವದು, ಸ್ತೋತ್ರಗೈಯುವದು-ಮುಂತಾದದ್ದನ್ನು ಮಾಡುವದಕ್ಕೆ ಅವರಿಗೆ ಸ್ವಾತಂತ್ರ್ಯವಿಲ್ಲ. ಮತ್ತೆ ಕೆಲವರಿಗೆ ರಾಷ್ಟ್ರಸ್ವಾತಂತ್ರ್ಯವು ಬೇಕಾಗಿದೆ; ತಾವೂ ತಮ್ಮ ದೇಶದವರೂ ತಮ್ಮ ಇಚ್ಛೆಯಿದ್ದ ರೀತಿಯಲ್ಲಿ ರಾಜ್ಯಭಾರವನ್ನು ಏರ್ಪಡಿಸಿಕೊಳ್ಳಬೇಕೆಂದು ಅವರ ಇಚ್ಛೆ; ಅವರಿಗೆ ರಾಜಕೀಯಮುಕ್ತಿ ಬೇಕು.

ಆದರೆ ವೇದಾಂತಿಗಳು ಹೇಳುವ 'ಮುಕ್ತಿ' ಎಂಬುದು ಇಚ್ಛಾದ್ವೇಷಾದಿಗಳಿಗೆ ಸಿಕ್ಕಿಬಿದ್ದು ಮಾಡಬಾರದ್ದನ್ನು ಮಾಡಿ ಆಗಬಾರದ ಅನಿಷ್ಟಫಲವನ್ನು ಅನುಭವಿಸುವ ಬಂಧದಿಂದ ತಪ್ಪಿಸಿಕೊಳ್ಳುವ ಬಿಡುಗಡೆ. ಈ ಬಂಧವು ಅಜ್ಞಾನದಿಂದ ಆಗಿದೆಯೆಂದೂ ತತ್ತ್ವಜ್ಞಾನದಿಂದ ತೊಲಗುವದೆಂದೂ ಅವರು ಸಾರುತ್ತಿದ್ದಾರೆ. ಈ ಬಂಧಕ್ಕೂ ಅದರಿಂದ ಆಗಬೇಕಾಗಿರುವ ಮುಕ್ತಿಗೂ ಪ್ರತಿಯೊಬ್ಬನೂ ತಾನೇ ಹೊಣೆಯಾಗಿರುತ್ತಾನೆಂಬುದು ಸ್ಪಷ್ಟ

**ಸಂ-35, 190**

# ಆತ್ಮನೇ ಎಲ್ಲಕ್ಕಿಂತಲೂ ಪ್ರಿಯನು

ಮೊಗಲ್ ಚಕ್ರವರ್ತಿಯಾದ ಅಕ್ಬರ್ ಮಹಾಶಯನಿಗೂ ಅವನ ವಿದೂಷಕ ಚಕ್ರವರ್ತಿಯಾದ ಬೀರಬಲನಿಗೂ ನಡೆದ ಒಂದು ಸ್ವಾರಸ್ಯವಾದ ಸಂವಾದಕಥೆ: ಮಂತ್ರಿಯ ಪ್ರಶ್ನೋತ್ತರರೂಪದ ಹಿತೋಕ್ತಿಯು ಅಕ್ಬರನ ಹೃದಯಸ್ಪರ್ಶಿಯಾಯಿತು. ತನ್ನ ಸಾಮ್ರಾಜ್ಯವೆಂದು ಕೊಚ್ಚುಕೊಳ್ಳುತ್ತಿದ್ದದ್ದಕ್ಕೆ ಕೊನೆಗೆ ಯಾವ ಬೆಲೆಯೂ ಇಲ್ಲವೆಂಬುದು ಮನದಟ್ಟಾಗಿ ಅತ್ಯಂತವ್ಯಥೆಯಾಯಿತು.

ದೊರೆಯ ಮನಸ್ಸಿನಲ್ಲಿ ವಿವೇಕೋದಯವಾಗಿದೆ ಎಂಬುದನ್ನು ಮನಗಂಡ ಬೀರಬಲನು ಇಂತೆಂದನು : "ಓ ಬಾದಷಹನೆ, ನನ್ನ ರಾಜ್ಯಕ್ಕೆ ಯಾವ ಬೆಲೆಯೂ ಇಲ್ಲವಲ್ಲ !– ಎಂದು ಈಗ ತಮಗೆ ವ್ಯಥೆಯಾಗಿದೆಯಲ್ಲವೆ? ಶೋಕವನ್ನೆಲ್ಲ ದಾಟಿ ಶಾಶ್ವತಶಾಂತಿಯನ್ನು ಪಡೆದುಕೊಳ್ಳುವದಕ್ಕೆ ಒಂದು ಮಾರ್ಗವಿದೆ. ಈಗ ಅದನ್ನು ಹೇಳುವೆನು ಕೇಳಿ, ಇಂದ್ರಿಯಗಳಿಗೆ ಭೋಗವನ್ನರ್ಪಿಸಿರುವ ವಿಷಯಗಳೇನೋ ಮನುಷ್ಯನಿಗೆ ಪ್ರಿಯವೆಂಬುದೇ ನಿಜ; ಆದರೆ ಇಂದ್ರಿಯಗಳು ಅವಕ್ಕಿಂತಲೂ ಪ್ರಿಯವಾಗಿರುತ್ತವೆ. ಒಬ್ಬನಿಗೆ 'ನೀನು ಇನ್ನುಮೇಲೆ ಸಿನಿಮನೋಡುವದಕ್ಕೆ ಹೋಗಬೇಡ, ಅದನ್ನು ನೋಡುತ್ತಲೇ ಇದ್ದರೆ ನಿನ್ನ ದೃಷ್ಟಿಪಾಟವವೇ ಹೋಗಿಬಿಡುವದು' ಎಂದು ವೈದ್ಯನು ಹೇಳಿದರೆ ಅವನು ಕೂಡಲೆ ಬಿಟ್ಟುಬಿಡುತ್ತಾನೆ. ಅಲ್ಲವೆ? ಆದರೆ ಪ್ರಾಣವು ಇಂದ್ರಿಯಗಳಿಗಿಂತಲೂ ಹೆಚ್ಚು ಪ್ರಿಯವಾಗಿರುತ್ತದೆ. ಕಣ್ಣಿಗೆ ಯಾವದಾದರೂ ಬೇನೆ ಬಂದರೆ ಅದನ್ನು ಕಿತ್ತುಹಾಕಿದರೇ ಪ್ರಾಣವು ಉಳಿದೀತೆಂದು ತಿಳಿಯಬಂದರೆ, ಕಣ್ಣನ್ನು ಕಳೆದುಕೊಂಡಾದರೂ ಪ್ರಾಣವನ್ನುಳಿಸಿಕೊಳ್ಳುವದಕ್ಕೆ ಅವನು ಪ್ರಯತ್ನಿಸುವನು. ಆದರೆ ಈ ಪ್ರಾಣಕ್ಕಿಂತಲೂ ಆತ್ಮನು ಪ್ರಿಯನಾಗಿರುತ್ತಾನೆ. ಹೇಗೆಂದರೆ ಯಾವದಾದರೂ ಜೀವಾವಧಿಯ ರೋಗದಿಂದ ಬಲವಾಗಿ ನರಳುತ್ತಿರುವವನು, ಪ್ರಾಣವನ್ನು ಕೂಡ ಕಳೆದುಕೊಳ್ಳುವದಕ್ಕೆ ಸಿದ್ಧನಾಗುವನು.

ಮನುಷ್ಯನಿಗೆ ಆತ್ಮನೇ ಎಲ್ಲಕ್ಕಿಂತಲೂ ಪ್ರಿಯತಮನಾಗಿರುತ್ತಾನೆ. ಏಕೆಂದರೆ ಅವನು ಆನಂದಸ್ವರೂಪನಾಗಿರುತ್ತಾನೆ. ಆದ್ದರಿಂದಲೇ ಪುರಾತನ ಋಷಿಗಳು ಹೀಗೆಂದು ನುಡಿದಿರುತ್ತಾರೆ : "ಆತ್ಮನನ್ನೇ ಅನ್ವೇಷಣೆಮಾಡಿರಿ, ಆತ್ಮನನ್ನೇ ಅರಿತುಕೊಳ್ಳಿರಿ. ಆತ್ಮನಲ್ಲಿಯೇ ನೆಲೆನಿಲ್ಲಿರಿ; ಹಾಗಾದರೆ ಯಾವ ಇಂದ್ರಿಯಾರ್ಥಗಳಿಂದಲೂ ದೊರೆಯದ ಶಾಂತಿಸುಖಗಳು ನಿಮಗೆ ದೊರೆಯುವವು. ಶಾಂತಿಯು ಒಳಗೆ ಇರುತ್ತದೆ; ಸುಖವೂ ಒಳಗೇ ಇರುತ್ತದೆ. ಹೊರಗಿನ ಇಂದ್ರಿಯಾರ್ಥಗಳಲ್ಲಿ ಸುಖವನ್ನು ಅರಸುವದು ವ್ಯರ್ಥ. ಸಿರಿಸಂಪತ್ತಾಗಲಿ ರಾಜ್ಯವಾಗಲಿ ಶಾಂತಿಯನ್ನು ಕೊಡಲಾರದು. ಇದಕ್ಕೆ ಬದಲು ಮೂಢರಿಗೆ ಅವು ದುಃಖಕ್ಕೆ ಕಾರಣವಾಗಿರುವುವು. ವಿಷಯಭೋಗಗಳೆಂಬಿವು ಮಾಯಿಕ

ವಾಗಿರುತ್ತವೆ; ಅವು ಬರಿಯ ಕಲ್ಪನೆಯ ಫಲವಾಗಿರುತ್ತವೆ. ಅವು ಅನಿತ್ಯವಾಗಿರುತ್ತವೆ. ಅವುಗಳಿಗಾಗಿ ಆಯಾಸಪಡಬೇಕು. ಅವುಗಳಿಂದಾಗಿ ಶರೀರವು ಶ್ರಮಿಸುವದು, ಕೊನೆಗೆ ಅವು ದುಃಖಕ್ಕೇ ಕಾರಣವಾಗಿರುವವು. ಒಂದು ಸಾಸಿವೆಯ ಕಾಳಿನಷ್ಟು ಭೋಗದ ಜೊತೆಗೆ ಭಾರಿಯ ವ್ಯಥೆಯು ಸೇರಿಕೊಂಡಿರುತ್ತದೆ. ಹಣಕ್ಕೆ ಬೆಲೆಯಿಲ್ಲ. ಹಣವನ್ನು ಕೊಟ್ಟರೂ ಯಾರೂ ತನ್ನ ಕಣ್ಣನ್ನು ಕಿತ್ತುಕೊಡಲಾರ. ಆತ್ಮನನ್ನು ಅರಿತುಕೊಂಡು ಮುಕ್ತರಾಗಿರಿ !" ಸಂ–27, 48

## ಸದ್ಗುರುವು ಹೇಗಿರುವನು ?

ಸದ್ಗುರುವೆಂದರೆ ಪರಮಾರ್ಥವಾಗಿರುವ ಸದ್ರೂಪನಾದ ಭಗವಂತನನ್ನು ಹೃದಯ ದಲ್ಲಿಟ್ಟುಕೊಂಡು ಯಾವಾಗಲೂ ಆತನ ದಿವ್ಯಮಹಿಮೆಯ ಅನುಸಂಧಾನದಿಂದಲೇ ತುಂಬಿತುಳುಕುವ ಹೃದಯದಿಂದ ತನಗೂ ಅರಿವಿಲ್ಲದೆ ಭಗವಂತನನ್ನು ಕೊಂಡಾಡುತ್ತ ತನ್ನ ಸನ್ನಿಧಿಯಲ್ಲಿರುವವರಿಗೂ ಆ ಆನಂದದ ಸೂರೆಯನ್ನು ಮಾಡಿಕೊಡುತ್ತಿರುವಾತನು.

ಗುರುವೆಂಬ ಶಬ್ದಕ್ಕೆ ಪರಮಾರ್ಥವಾಗಿರುವವನು, ಸಾಧುವೃತ್ತದಲ್ಲಿರುವಾತನು ಎಂದೇ ಅಲ್ಲದೆ ಭಾರವಾಗಿರುವವನು ಎಂದೂ ಅರ್ಥವಾಗಬಹುದು. ಈಗ್ಗೆ ಅನೇಕ ಗುರುಗಳು ಪಾಂಡಿತ್ಯದ ಹೊರೆಯನ್ನು ತಾವೂ ಹೊತ್ತು ಹತ್ತಿರಕ್ಕೆ ಬರುವವರ ತಲೆಯಮೇಲೂ ಅದನ್ನು ಹೇರುತ್ತಿರುವದರಿಂದ ಎಲ್ಲರಿಗೂ ಭಾರವಾಗಿರುತ್ತದೆ !

ಗುರುವು ಉಪದೇಶಮಾಡುವದು ಮುಖ್ಯವಾಗಿ ತನ್ನ ನಡೆಯಿಂದ. ನುಡಿಯಿಂದ ಉಪದೇಶದ ಹೊರೆಯನ್ನು ಇಳಿಯಿಸುತ್ತಾ ಇರುವವರಾಗದೆ ತಮ್ಮ ದರ್ಶನ ಮಾತ್ರದಿಂದಲೇ ಜನರಿಗೆ ಭಕ್ತಿಜ್ಞಾನವೈರಾಗ್ಯಗಳು ಉದಯಿಸುವಂತೆ ಮಾಡುವವರೇ ನಿಜವಾದ ಸದ್ಗುರುಗಳು.

ಮಕ್ಕಳು ಒಬ್ಬರೊಡನೊಬ್ಬರು ಆಡುತ್ತಿರುವಾಗ ತಾವು ಏನು ಮಾತನಾಡುತ್ತಿದ್ದೇವೆ, ಯಾವ ಕೆಲಸವನ್ನು ಮಾಡುತ್ತಿದ್ದೇವೆ?– ಎಂಬ ಅರಿವಿಲ್ಲದೆಯೇ ಇರುತ್ತಿದ್ದರೂ ಎಲ್ಲರೂ ಆನಂದದಲ್ಲಿ ಮಗ್ನರಾಗಿ ಹೊರಗಿನ ಭಾನ(ಜ್ಞಾನ)ವಿಲ್ಲದೆ ಇರುತ್ತಾರೆ. ಆದರೆ ದೊಡ್ಡವರು ಯಾರಾದರೂ ಬಂದಾಗ ಅವರಿಗೆ ಹೊರಗಿನ ಅರಿವು ಆಗಿ ಆಟದ ಆನಂದವನ್ನು ನಿಲ್ಲಿಸಿಬಿಡುತ್ತಾರೆ. ಹೀಗೆಯೇ ಸದ್ಗುರುಗಳು ಹತ್ತಿರಕ್ಕೆ ಬಂದವರ ಸಂಸಾರತಾಪವನ್ನೂ ಮನಸ್ಸಿನ ಪಾಪವನ್ನೂ ತಮ್ಮ ಸಹಜವಾದ ನಡೆನುಡಿಗಳಿಂದ ಕಳೆಯುತ್ತಿರುವರು. ಆದರೆ ಯಾರಾದರೂ ಅವರನ್ನು 'ನಮಗೆ ಭಕ್ತಿಜ್ಞಾನವೈರಾಗ್ಯಗಳ ಮಾರ್ಗದ ದಿಗ್ದರ್ಶನ ವನ್ನು ಮಾಡಿರಿ' ಎಂದರೆ ಅವರಿಗೆ ಭಗವಂತನ ಸಂಬಂಧವು ತಪ್ಪಿ ಲೌಕಿಕರ ಸನ್ನಿಧಿಯ ಅರಿವಾಗುವದು. 'ಇಂಥಲ್ಲಿ ಒಬ್ಬರು ಮಹಾತ್ಮರಿದಾರಂತೆ, ಅವರಲ್ಲಿಗೆ ಹೋಗೋಣವೆ?'–

ಎಂದು ಕೇಳುವ ನಿರಹಂಕಾರಿಗಳಾದ ಸಾಧುಭಾವದ ಮಹಾತ್ಮರಲ್ಲಿ ಪಾಂಡಿತ್ಯದ ಗುರುತು ಒಂದಿಷ್ಟೂ ಇರುವದಿಲ್ಲ; ಅವರು ತಮ್ಮ ಧರ್ಮವೈರಾಗ್ಯಪಾಂಡಿತ್ಯಾದಿಗಳನ್ನು ತೋರಿಸಿಕೊಳ್ಳದೆ ಮಕ್ಕಳಂತೆಯೇ ಇದ್ದುಬಿಡುತ್ತಾರೆ. ಭಗವಂತನಿಗೆ ನಾವೆಲ್ಲರೂ ಮಕ್ಕಳೇ ಅಲ್ಲವೆ? ನಾನು ಭಗವಂತನ ಮಗು–ಎಂದು ಭಾವವು ಭಕ್ತರಾದ ಮಹಾನುಭಾವರ ಹೃದಯದಲ್ಲಿ ತುಂಬಿರುತ್ತದೆ. ಅವರ ಸಹವಾಸವೇ ಲೌಕಿಕರಿಗೊಂದು ಪರಮೋಪಕಾರವು.

ಸದ್ಗುರುಗಳ ಮಾತು ಮಿತವಾಗಿದ್ದರೂ ಒಂದೊಂದು ವಾಕ್ಯವೇ ಜಿಜ್ಞಾಸುಗಳ ಪೇಚಾಟವನ್ನೆಲ್ಲ ಕಳೆಯುತ್ತದೆ. ಅವರು ಮೌನವಾಗಿದ್ದರೂ ಚಿಂತೆಯಿಲ್ಲ; ಅವರ ನೋಟದಿಂದಲೇ ಭಕ್ತರ ಸರ್ವಕಾಮಿತಾರ್ಥಗಳೂ ಈಡೇರುವವು; ಸರ್ವಸಂಶಯಗಳೂ ಪರಿಹಾರವಾಗುವವು, ಹೃದಯದ ಕುಂದುಗಳೆಲ್ಲವೂ ನೀಗುವವು !

ಸದ್ಗುರುವಾಗುವದಕ್ಕೆ ತಕ್ಕ ಸತ್ಪುರುಷರು ಒಂದು ಕಲ್ಪವೃಕ್ಷವಿದ್ದಂತೆ ಇರುತ್ತಾರೆ. ಅವರನ್ನು ಸೇವಾನಮಸ್ಕಾರಾದಿಗಳಿಂದ ಅರ್ಚಿಸುವ ಕಾಮಿಗಳಿಗೆ ಅವರವರ ಇಷ್ಟಾರ್ಥಗಳು ಲಭಿಸುವವು. ಧನ, ವಿದ್ಯೆ, ಆಯುಸ್ಸು, ಆರೋಗ್ಯ, ಐಶ್ವರ್ಯ–ಮುಂತಾದವುಗಳು ಅಭಿವೃದ್ಧಿಯಾಗುವವು. ಅವರ ಸಹವಾಸದಿಂದಲೂ ಸೇವೆಯಿಂದಲೂ ಪಾಪವಾಸನೆಯು ನೀಗುವದು; ಆಸ್ತಿಕ್ಯವು ಹೆಚ್ಚುವದು, ಶಾಸ್ತ್ರದಲ್ಲಿಯೂ ಹಿರಿಯರಲ್ಲಿಯೂ ಶ್ರದ್ಧಾಭಕ್ತಿಗಳು ಉಂಟಾಗುವವು. ಶೌಚ, ಆಚಾರ, ಸತ್ಯ– ಇವುಗಳು ಅಂಕುರಿಸಿ ಚಿಗುರಿಕೊಳ್ಳುವವು. ಇವೆಲ್ಲ ಕಾಮಿಗಳಿಗೆ ಆಗುವ ಫಲಗಳು.

ಆದರೆ ಯಾರು ಸಂಸಾರದಲ್ಲಿ ವಿರಕ್ತರಾಗಿ ಇಂಥ ಮಹಾತ್ಮರನ್ನು ಸೇರುವರೊ, ಅವರಿಗೆ ವಿಷಯಗಳಲ್ಲಿರುವ ದೋಷವು ಸ್ಫುಟವಾಗಿ ತೋರಿ, ಭಗವಂತನಲ್ಲಿಯೂ ಭಗವದ್ಭಕ್ತರಲ್ಲಿಯೂ ಶ್ರದ್ಧಾಭಕ್ತಿಗಳು ಉಂಟಾಗಿ ಬೆಳೆದುಕೊಳ್ಳುವವು. ಸತ್ಪುರುಷರ ಜೀವನಚರಿತೆಗಳನ್ನು ಕೇಳುವದರಲ್ಲಿ ಒಂದು ಹೊಸಬಗೆಯ ಔತ್ಸುಕ್ಯವು ಉಂಟಾಗುವದು. ತಾವು ಸೇವಿಸುತ್ತಿರುವ ಮಹಾತ್ಮರ ಸದ್ಗುಣಗಳನ್ನು ದಿನದಿನವೂ ಮೆಚ್ಚುತ್ತಾ ತಮ್ಮ ದೋಷಗಳನ್ನು ಕಳೆದುಕೊಳ್ಳುವದರಲ್ಲಿ ಆದರವುಂಟಾಗುವದು. ತಮ್ಮ ಪುರುಷಾರ್ಥ ಸಾಧನಕ್ಕೆ ಅವರು ನಿಲುಗನ್ನಡಿಯಾಗಿರುತ್ತಾರೆಂಬ ಬುದ್ಧಿಯು ಬಲವಾಗುವದು. ಧರ್ಮಜ್ಞಾನಗಳ ಸಂಪಾದನೆಯೇ ಜೀವನಕ್ಕೆ ಮೆರುಗಿಟ್ಟಂತೆ ಎಂಬ ದೃಢ ನಿಶ್ಚಯವುಂಟಾಗುವದು. ಭಗವನ್ನಾಮಜಪ, ಭಗವಂತನ ಗುಣಗಾನ–ಇವುಗಳಲ್ಲಿ ಹಿಂದೆ ಎಂದೂ ಉಂಟಾಗದೆ ಇರುವ ಆನಂದವು ಕಾಣಿಸಿಕೊಳ್ಳುವದು. ಮೀನುಗಳಿಗೆ ಹೇಗೆ ನೀರಿನಲ್ಲಿ ವಾಸ, ಆಹಾರ, ಜೀವನ–ಎಲ್ಲವೂ ಸಿಕ್ಕುವದೋ ಹಾಗೆಯೇ ಸದ್ಗುರುಗಳಾಗಬಲ್ಲ ಸಜ್ಜನರ ಸಂಗವೇ ತಮಗೆ ಶಾಂತಿಸುಖಜೀವನದ ಆಶ್ರಯವೆಂಬುದು ಮನದಟ್ಟಾಗುವದು.

ಯಾವನು ಸತ್ಪುರುಷನೆಂದಾಗಲಿ ಅಸತ್ಪುರುಷನೆಂದಾಗಲಿ ಏನೂ ಓದಿದವನಲ್ಲ ವೆಂದಾಗಲಿ ಬಹಳ ಓದಿದ ಪಂಡಿತನೆಂದಾಗಲಿ ತಿಳಿಯುವದಕ್ಕೆ ಆಗದೆಇದ್ದರೂ ತನ್ನ ನಡೆನುಡಿಗಳಿಂದ ಜನರ ಸಾಂಸಾರಿಕಭಾವನೆಗಳನ್ನು ತೊಲಗಿಸಬಲ್ಲನೋ ಅವನೇ ಸದ್ಗುರುವಾಗುವದಕ್ಕೆ ತಕ್ಕವನು. **ಸಂ–39, 252**

## ನಾಲ್ಕು ಉಪದೇಶಗಳು

ಧಾರಾನಗರದ ಭೋಜನ ವಿಷಯದಲ್ಲಿ ಅನೇಕ ಕಥೆಗಳನ್ನು ಹೇಳುವರಷ್ಟೆ. ಅವುಗಳಲ್ಲಿ ಇದೂ ಒಂದು; ಒಮ್ಮೆ ಒಬ್ಬ ವೃದ್ಧಬ್ರಾಹ್ಮಣನು ದೇಶಸಂಚಾರ ಕ್ರಮದಿಂದ ಧಾರಾನಗರಕ್ಕೆ ಬಂದನು. ಅವನು ಹೀಗೆಂದು ಊರಲ್ಲೆಲ್ಲ ಡಂಗುರವನ್ನು ಸಾರಿಸಿದನು: "ನನಗೆ ನಾಲ್ಕು ರಹಸ್ಯಗಳು ತಿಳಿದಿವೆ; ಇವುಗಳನ್ನು ತಿಳಿದವರು ಮತ್ತೆ ಏನನ್ನೂ ತಿಳಿದುಕೊಳ್ಳಬೇಕಾದ ಆವಶ್ಯಕತೆಯಿರುವದಿಲ್ಲ. ಈ ತತ್ತ್ವಗಳನ್ನು ತಿಳಿದುಕೊಂಡವರಿಗೆ ಇಹಪರಸುಖಗಳು ಸೂರೆಯಾಗುವವು. ಆದರೆ ಇವುಗಳನ್ನು ನನ್ನಿಂದ ಉಪದೇಶ ಮಾಡಿಸಿಕೊಳ್ಳುವವರು ನಲವತ್ತು ಭಾರದಷ್ಟು ಚಿನ್ನವನ್ನು ಗುರುದಕ್ಷಿಣೆಯಾಗಿ ಸಮರ್ಪಿಸಬೇಕಾಗುತ್ತದೆ."

ಈ ವೃತ್ತಾಂತವು ಮೆಲ್ಲಮೆಲ್ಲಗೆ ರಾಜನ ಕಿವಿಗೆ ಬಿತ್ತು. ಅವನು ಬ್ರಾಹ್ಮಣನನ್ನು ಕರೆಯಿಸಿ ಆದರಸತ್ಕಾರಗಳಿಂದ ಮನ್ನಣೆಮಾಡಿದ ಬಳಿಕ ನಲವತ್ತು ಭಾರ ಚಿನ್ನವನ್ನು ಆತನ ಬಳಿಯಲ್ಲಿರಿಸಿ "ಸ್ವಾಮಿ, ಆ ಅನುಭವವಾಕ್ಯಗಳನ್ನು ನನಗೆ ತಿಳಿಸಿಕೊಡಬೇಕು!" ಎಂದು ಕೇಳಿಕೊಂಡನು.

ಬ್ರಾಹ್ಮಣನು "ಪ್ರಭುವೆ, ನಾನು ಸಾವಿರಾರು ಗ್ರಂಥಗಳನ್ನು ಓದಿರುತ್ತೇನೆ, ಎಷ್ಟೋ ಜನ ಮಹಾತ್ಮರ ಸತ್ಸಂಗವನ್ನೂ ಮಾಡಿರುತ್ತೇನೆ. ಜೀವಮಾನದಲ್ಲಿ ನನಗೆ ಎಷ್ಟೋ ಅನುಭವಗಳು ಆಗಿರುತ್ತವೆ. ಆದರೆ ಇವುಗಳಲ್ಲಿ ನಾಲ್ಕನ್ನು ಮಾತ್ರ ನಾನು ಆರಿಸಿಕೊಂಡಿರುತ್ತೇನೆ. ನಾನು ಇವುಗಳನ್ನು ನಾಲ್ಕು ಸಾವಿರ ಸಲ ಪಾಠಮಾಡಿದ್ದರೂ ಇನ್ನೂ ಪಾಠಮಾಡುತ್ತಲೇ ಇರುವೆನು. ಇವುಗಳಿಂದ ನನಗೆ ದೊರಕಿರುವ ಸುಖಶಾಂತಿಗಳನ್ನು ವರ್ಣಿಸುವದು ಸಾಧ್ಯವಲ್ಲ. ನೀನು ತಕ್ಕ ಅಧಿಕಾರಿಯೆಂದು ತಿಳಿದು ಇವನ್ನು ನಿನಗೆ ಉಪದೇಶಮಾಡುತ್ತೇನೆ, ಕೇಳು :

**"1. ಈಗಿನ ಯಜಮಾನನು ನಿನಗೆ ಕೊಟ್ಟಿರುವದರಿಂದ ನಿನಗೆ ತೃಪ್ತಿಯಾಗದಿದ್ದರೆ ಇನ್ನೂ ಹೆಚ್ಚಾಗಿ ಕೊಡುವಾತನನ್ನು ಹುಡುಕಿಕೊ.**

**2. ಯಾವ ಕೆಲಸವು ಈಶ್ವರನ ಆಜ್ಞೆಗೆ ವಿರುದ್ಧವಾಗಿರುವದೋ ಅದನ್ನು ಬಿಟ್ಟುಬಿಡು. ಇಲ್ಲದಿದ್ದರೆ ಆತನ ದೇಶವನ್ನು ಬಿಟ್ಟು ಹೊರಡು.**

**3. ಪಾಪಕರ್ಮವನ್ನು ಮಾಡಬೇಕೆಂದಿದ್ದರೆ ಯಾರೊಬ್ಬರೂ ನಿನ್ನನ್ನು ಎಲ್ಲಿ ನೋಡಲಾರರೋ ಅಂಥ ಸ್ಥಾನವನ್ನು ಹುಡುಕಿಕೊ; ಇಲ್ಲದಿದ್ದರೆ ಪಾಪಕರ್ಮವನ್ನೇ ಬಿಟ್ಟುಬಿಡು.**

**4. ಈ ಪ್ರಪಂಚದಲ್ಲಿರಬೇಕಾದರೆ ಇದರ ಧಣಿಯನ್ನು ವಂದಿಸಿ ಆತನು ನಿನಗೆ ಕೊಟ್ಟಿರುವ ಪದಾರ್ಥಗಳಿಗಾಗಿ ಕೃತಜ್ಞತೆಯನ್ನು ಅರ್ಪಿಸುತ್ತಿರು; ಇಲ್ಲದಿದ್ದರೆ ಆತನ ಅನ್ನವನ್ನು ತಿನ್ನಬೇಡ, ಆತನ ಪದಾರ್ಥಗಳನ್ನು ನೀನು ಉಪಯೋಗಿಸಿಕೊಳ್ಳಬೇಡ."**

"ರಾಜನೆ, ಈ ಉಪದೇಶಗಳನ್ನು ಅನುಷ್ಠಾನದಲ್ಲಿಟ್ಟುಕೊಂಡವರಿಗೆ ಎಂದಿಗೂ ದುಃಖವು ಹತ್ತಿರ ಬರುವದಿಲ್ಲ. ಅವರು ಯಾವಾಗಲೂ ಆನಂದದಲ್ಲಿ ಮುಳುಗಿರುತ್ತಾರೆ. ಇನ್ನು ನಾನು ಹೊರಡುವೆನು, ಈ ಹಣವನ್ನೆಲ್ಲ ಬಡವರಿಗೂ, ಕುರುಡರು, ಕಿವುಡರು, ಹೆಳವರು–ಮುಂತಾದ ಸಹಾಯಹೀನರಿಗೂ ದಾನಮಾಡು. ಇದನ್ನು ನಿನ್ನ ಪರೀಕ್ಷಾರ್ಥವಾಗಿ ಮಾತ್ರ ನಾನು ಕೇಳಿದೆನೇ ಹೊರತು ನನಗೇನೂ ಇದರಿಂದ ಆಗಬೇಕಾದದ್ದಿಲ್ಲ" ಎಂದು ಹೇಳಿ ಆ ಬ್ರಾಹ್ಮಣನು ಅಲ್ಲಿಂದ ಹೊರಟುಹೋದನಂತೆ!

## ಕಾಮಜಯ

ಪೂರ್ವದಲ್ಲಿ ವೃತ್ರಾಸುರನೆಂಬ ರಾಕ್ಷಸನು ತನ್ನ ಹಾವಳಿಯಿಂದ ದೇವತೆಗಳನ್ನೆಲ್ಲ ಗೋಳಾಡಿಸುತ್ತಿದ್ದನು. ಇವನು ಬಗೆಬಗೆಯ ವೇಷಗಳನ್ನು ಹಾಕಿಕೊಂಡು ಅವರನ್ನು ಮರುಳುಮಾಡಿ ಕೊನೆಗೆ ಅವರನ್ನು ಕೋಟಲೆಗೆ ಸಿಕ್ಕುಹಾಕಿ ಪಡಬಾರದ ಸಂಕಟಗಳನ್ನು ಪಡಿಸುತ್ತಿದ್ದನು. ದೇವತೆಗಳ ಪ್ರಾರ್ಥನೆಯಿಂದ ಇಂದ್ರನು ಕೂಡಲೆ ವಜ್ರಾಯುಧ ಸಮೇತನಾಗಿ ಇವನನ್ನು ಎದುರಿಸುವದಕ್ಕೆ ಹೋದನು. ಆದರೆ ವೃತ್ರನು ಧೀರನಂತೆ ಎದುರಿಗೆ ಬಂದು ಯುದ್ಧಮಾಡುವವನಲ್ಲ. ಇವನಿಗಿದ್ದ ಶಕ್ತಿಯೆಲ್ಲ ಮಾಯಾ ಮಯವಾದದ್ದು. ಆದ್ದರಿಂದ ಇಂದ್ರನು ತನ್ನ ಸಂಹಾರಕ್ಕೆ ಪ್ರಯತ್ನಮಾಡಿರುವನೆಂದು ತಿಳಿಯಿತೋ ಇಲ್ಲವೋ, ಆ ರಕ್ಕಸನು ಪೃಥ್ವಿಯನ್ನು ವ್ಯಾಪಿಸಿಕೊಂಡುಬಿಟ್ಟನು. ಎಲ್ಲೆಲ್ಲಿ ಪೃಥ್ವೀತತ್ತ್ವವಿರುವದೋ ಅಲ್ಲಲ್ಲಿ ವಾಸನೆಯೆಂಬ ಗುಣವಿರುವದು. ಆ ರೀತಿ ವೃತ್ರನು ಪೃಥ್ವಿಯೊಳಗೆ ಸೇರುತ್ತಲೂ ಅದರಲ್ಲಿದ್ದ ಸುಗಂಧವೆಲ್ಲ ಮಾಯವಾಯಿತು. ಇಂದ್ರನು ಕೂಡಲೆ ತನ್ನ ವಜ್ರಾಯುಧವನ್ನು ಪ್ರಯೋಗಮಾಡಲು, ವೃತ್ರನು ಜಲವನ್ನು ಸೇರಿಕೊಂಡನು. ಈಗ ಪೃಥ್ವಿಗೆ ಬಂದಿದ್ದ ಪಾಡು ಜಲಕ್ಕೆ ಬಂತು. ಜಲತತ್ತ್ವಕ್ಕೆ ಸವಿಯೇ ಗುಣವಷ್ಟೇ, ವೃತ್ರನ ಪ್ರವೇಶದಿಂದ ಅದರಲ್ಲಿರುವ ಉತ್ತಮವಾದ ಸವಿಯೆಲ್ಲ ಮಾಯವಾಯಿತು. ಇಂದ್ರನು ಒಂದು ಸಲ ಗೆದ್ದವನಾದ್ದರಿಂದ ಧೈರ್ಯದಿಂದ ಮತ್ತೆ ವಜ್ರಾಯುಧವನ್ನು ಪ್ರಯೋಗಿಸಿದನು. ಆಗ ನೀರನ್ನು ಬಿಟ್ಟು ಬೆಂಕಿಯನ್ನು ಸೇರಿ ಕೊಂಡನು. ತೇಜಸ್ಸಿಗೆ ರೂಪವೇ ಮುಖ್ಯಗುಣವಾದ್ದರಿಂದ, ಈಗ ಲೋಕದಲ್ಲಿದ್ದ ಒಳ್ಳೆಯ

ರೂಪವು ಯಾವದೂ ಇಲ್ಲದಂತಾಯಿತು. ಇಂದ್ರನು ಅಲ್ಲಿಯೂ ಬಿಡದೆ ವಜ್ರಾಯುಧ ಪ್ರಯೋಗವನ್ನು ಮಾಡಲು, ವೃತ್ರನು ವಾಯುವನ್ನು ಸೇರಿಸ್ಪರ್ಶವನ್ನು ನಾಶಮಾಡಿದನು. ಅಲ್ಲಿಯೂ ವಜ್ರಾಯುಧವು ಬೆನ್ನಟ್ಟಲು ವೃತ್ರನು ಆಕಾಶವನ್ನು ಸೇರಿ ಶಬ್ದಗುಣಕ್ಕೆ ಹಾನಿಯನ್ನು ತಂದನು. ಕೊನೆಗೆ ವೃತ್ರನು ಒಂದು ಕೆಲಸವನ್ನು ಮಾಡಿದನು; ಹೊರಗೆ ಯಾವ ವಿಷಯಗಳಿಗೆ ಸೇರಿಕೊಂಡರೂ ಇಂದ್ರನು ಬೆನ್ನಟ್ಟುವನೆಂದು ಯೋಚಿಸಿ ಆ ಇಂದ್ರನನ್ನೇ ಹೊಕ್ಕು ಅವನಿಗೆ ಮಹಾಮೋಹವನ್ನುಂಟುಮಾಡಿಬಿಟ್ಟನು. ಇಂದ್ರನಿಗೆ ದಿಕ್ಕುತೋಚದಂತಾಯಿತು. ಇಂದ್ರನು ವೃತ್ರನಿಗೆ ವಶನಾಗಿರುವನೆಂಬುದನ್ನು ದೇವಗುರುವಾದ ಬೃಹಸ್ಪತಿಗಳು ಅರಿತು ಒಂದಾನೊಂದು ಸಾಮವನ್ನು ಗಾನಮಾಡಿ ಎಚ್ಚರಿಕೆಕೊಟ್ಟರು. ಆಗ ಇಂದ್ರನು ನಡೆದಿರುವ ಸಂಗತಿಯನ್ನು ತಿಳಿದು ಆ ವೃತ್ರನನ್ನು ಸಂಹಾರಮಾಡಿ ವೃತ್ರಸಂಹಾರಕನೆಂಬ ಶಾಶ್ವತವಾದ ಹೆಸರನ್ನು ಪಡೆದನು.

ಇಲ್ಲಿ ಕೊಟ್ಟಿರುವ ಕಥೆಯನ್ನು ಅಹಂಕಾರ ಮಮಕಾರ ರೂಪವಾದ ಕಾಮವನ್ನು ಸಂಪೂರ್ಣವಾಗಿ ಜಯಿಸುವ ನಿಮಿತ್ತದಿಂದ ದೃಷ್ಟಾಂತವಾಗಿ ಧರ್ಮರಾಯನಿಗೆ ಶ್ರೀಕೃಷ್ಣಭಗವಂತನು ಅಪ್ಪಣೆಕೊಡಿಸಿದ್ದಾಗಿ ಭಾರತದಲ್ಲಿರುವದು. ನಿಜವಾಗಿ ನೋಡಿದರೆ ಕಾಮನೇ ವೃತ್ರಾಸುರನು, ನಮ್ಮ ಇಂದ್ರಿಯಗಳೇ ದೇವತೆಗಳು. ಲೋಕದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಗುಣಗಳೇ ತೋರುವವಷ್ಟೆ; ಇವುಗಳನ್ನು ಕಾಮಪೀಡಿತವಾದ ಇಂದ್ರಿಯಗಳಿಂದ ನಾವು ನೋಡಿದೆವೆಂದರೆ ಇವುಗಳಲ್ಲಿದ್ದ ಸೊಬಗೆಲ್ಲ ಎಲ್ಲಿಯೋ ಅಡಗಿಕೊಳ್ಳುವದು. ಇಂದ್ರಿಯಗಳಿಗೆ ವಿಷಯಗಳು ಬೇಕೆಂದ ಹಾಗೆಲ್ಲ, ವಿಷಯಗಳು ನೀರಸವಾಗಿ ಕಾಣುವವು. ಜಗತ್ತಿನ ಸೌಂದರ್ಯವನ್ನು ಅನುಭವಿಸುವ ಮಹಾತ್ಮನು ಯಾರೆಂದರೆ, ನಾನು ನನ್ನದು ಎಂಬ ಬುದ್ಧಿಯಲ್ಲಿ ಕಟ್ಟುಬೀಳದೆ ವಿಷಯಗಳನ್ನು ನೋಡುವಾತನು; ಸುಂದರ ಚಿತ್ರಗಳನ್ನಾಗಲಿ, ಸೃಷ್ಟಿವೈಚಿತ್ರ್ಯವನ್ನಾಗಲಿ ವಾದ್ಯಧ್ವನಿಗಳನ್ನಾಗಲಿ ಕೇಳುವಾಗಲೂ, ನಾನು ವಿಷಯ–ಎಂಬ ವಿಂಗಡವೇ ಇಲ್ಲದಂತೆ ಯಾವನು ಅನುಭವಿಸುವನೋ ಅವನೇ ನಿರುಪಾಧಿಕವಾದ ಆನಂದವೆಂದರೇನೆಂಬುದನ್ನು ಅರಿಯುವನು. ಆದ್ದರಿಂದ ಇಂಥ ಆನಂದವನ್ನು ಅನುಭವಿಸುವದಕ್ಕೆ ಅಡ್ಡಬಂದಿರುವದು ಕಾಮವೆಂದೇ ಸಿದ್ಧವಾಗುವದು.

ಇದು ಹಾಗಿರಲಿ, ಶಬ್ದ, ಸ್ಪರ್ಶ–ಮೊದಲಾದ ವಿಷಯಗಳನ್ನು ಆಶ್ರಯಿಸಿಕೊಂಡೇ ಕಾಮನ ತೋರಿಕೊಳ್ಳುವನೆಂದು ನಮ್ಮೆಲ್ಲರ ಭಾವನೆಯುಂಟು. ಆದರೆ ಕಾಮನು ಮಾಯಾವಿಯು. ಅವನು ಮಮತ್ವವೆಂಬ ರೂಪವನ್ನು ಬಿಟ್ಟು ಅಹಂಕಾರವೆಂಬ ರೂಪನ್ನು ಧರಿಸಿದಾಗ, ನಮಗೆ ದಿಕ್ಕೇ ತೋಚದಂತೆ ಮಾಡಿಬಿಡುವದು. ಕಾಮನೇ ಒಂದುಸಲ ಹೇಳಿಕೊಂಡ–

'ಯಾವನು ನನ್ನನ್ನು ಹಟದಿಂದಲೇ ಹೊಡೆದು ಕೊಲ್ಲಬೇಕೆಂದು, ಆ ಬಲವನ್ನು ನಂಬಿ ಪ್ರಯತ್ನಿಸುವನೋ, ಅವನ ಆ ಹೊಡೆತದಲ್ಲಿಯೇ ನಾನು ನನ್ನ ಸಮಾನ ವಿಲ್ಲವೆಂಬ ಅಭಿಮಾನವಾಗಿ ಮತ್ತೆ ತೋರಿಕೊಳ್ಳುವೆನು. ಗೋವು, ಭೂಮಿ, ಸುವರ್ಣ ಮುಂತಾದ ದಕ್ಷಿಣೆಗಳನ್ನು ಕೊಟ್ಟು ಯಜ್ಞಮಾಡಿ, ಆ ಸಾಧನದಿಂದ ನನ್ನನ್ನು ಜಯಿಸಬೇಕೆನ್ನುವವನಿಗೆ ಒಂದು ರೂಪದಲ್ಲಿ ಕಾಮಹೋದರೂ ಮತ್ತೊಂದು ರೂಪ ದಲ್ಲಿ ಸತ್ತಪ್ರಾಣಿಗಳು ಕರ್ಮಾನುಸಾರವಾಗಿ ಮತ್ತೆ ಹುಟ್ಟುವಂತೆ ನಾನೂ ತೋರಿಕೊಳ್ಳು ವೆನು. ವೇದಗಳನ್ನು ಅಧ್ಯಯನಮಾಡಿ ವೇದಾನ್ತದ ಸಾಧನಗಳ ಅನುಷ್ಠಾನದಿಂದ ಕಾಮನನ್ನು ಜಯಿಸಬೇಕೆಂಬುವನಿಗೆ ಕಡಿದಮರಗಳು ಮೊದಲಿಗಿಂತಲೂ ಬಲವಾಗಿ ಪಲ್ಲವಿಸಿಕೊಂಡು ಏಳುವಂತೆ ಹೆಚ್ಚಾಗಿ ಬೆಳೆದುಕೊಂಡು ತೋರಿಕೊಳ್ಳುತ್ತೇನೆ. ಮನಸ್ಸನ್ನು ಬಿಗಿಹಿಡಿದು ಸತ್ಯಬಲದಿಂದ ನನ್ನನ್ನು ಕೊಲ್ಲಬೇಕೆಂದು ಯಾವನು ಪ್ರಯತ್ನಿಸುವನೋ ಅವನ ಅಂತಃಕರಣವೇ ನಾನಾಗಿ ಬಿಡುವದರಿಂದ ಅವನಿಗೆ ನಾನು ಬಂದಿರುವದೇ ತಿಳಿಯದೆ ಹೋಗುವದು."

ಹೀಗೆ ಸಾತ್ತ್ವಿಕಭಾವನೆಗಳಲ್ಲಿಯೂ ಕಾಮನು ನಮ್ಮನ್ನು ಕಾಡುತ್ತಾ ವೃತ್ರನನ್ನು ಗೋಳಾಡಿಸಿದ ಇಂದ್ರನಂತೆ ನಮಗೆ ತೊಂದರೆಕೊಡುತ್ತಿರುವನು. ಬೃಹಸ್ಪತಿಯ ಸಾಮವನ್ನು ಕೇಳಿ ಇಂದ್ರನು ಹೇಗೆ ಎಚ್ಚತ್ತನೋ, ಹಾಗೆ ನಾವು ಶಾಸ್ತ್ರಾಚಾರ್ಯರ ಉಪದೇಶವಾಕ್ಯಗಳ ಬಲದಿಂದ ನಮ್ಮ ಸ್ಥಿತಿಯನ್ನು ತಿಳಿದುಕೊಳ್ಳಬೇಕು. ಕಾಮಕ್ಕೆಲ್ಲ ಸಂಕಲ್ಪವೇ ಮೂಲವಷ್ಟೆ, ಅಂಥ ಸಂಕಲ್ಪವೇ ಇಲ್ಲದಂತೆ ನೋಡಿಕೊಳ್ಳಬೇಕು. ಆಗ ಅಹಂಕಾರವೆಂಬ ಬೇರಾಗಲಿ ಮಮಕಾರವೆಂಬ ಕೊಂಬೆಯಾಗಲಿ ಇನ್ನು ಬೆಳೆಯಲಾರದೆ, ತಾಯಿಬೇರು ಹೋದ ಮರದಂತೆ ಕಾಮನು ಶುಷ್ಕನಾಗುವನು. ಇಂಥ ಸ್ಥಿತಿ ಬಂದು ಯಾವ ಸಂಕಲ್ಪವೂ ನಮ್ಮಲ್ಲಿ ತಲೆದೋರದೆ ಇರಬೇಕಾದರೆ ಅಧ್ಯಾತ್ಮಚಿಂತೆಗಿಂತ ಮತ್ತೆ ಯಾವ ಉಪಾಯವೂ ಅಷ್ಟು ಕಾರ್ಯಕಾರಿಯಾಗಲಾರದು. ಕಾಮಜಯಕ್ಕೆ ಇದೇ ವಜ್ರಾಯುಧವು. **ಸಂ-1, 173**

## ಅಯೋಧ್ಯೆಯಲ್ಲಿ ಸ್ವರ್ಗ

**ಅಷ್ಟಾ ಚಕ್ರಾ ನವ ದ್ವಾರಾ । ದೇವಾನಾಂ ಪೂರಯೋಧ್ಯಾ ।**

**ತಸ್ಯಾಗ್ಂ ಹಿರಣ್ಮಯಃ ಕೋಶಃ ಸ್ವರ್ಗೋ ಲೋಕೋ ಜ್ಯೋತಿಷಾ ವೃತಃ ॥**

**ಯೋ ವೈ ತಾಂ ಬ್ರಹ್ಮಣೋ ವೇದ, ಅಮೃತೇನಾವೃತಾಂ ಪುರೀಂ ।**

**ತಸ್ಮೈ ಬ್ರಹ್ಮ ಚ ಬ್ರಹ್ಮಾ ಚ । ಆಯುಃ ಕೀರ್ತಿಂ ಪ್ರಜಾಂ ದದುಃ ॥ (ತೈ. ಆ..1-28)**

ಇಲ್ಲಿ ಕೊಟ್ಟಿರುವ ವೇದವಾಕ್ಯನ್ನು ಅನೇಕರು ಕೇಳಿರುವರು, ಅನೇಕರು ಈಗಲೂ ಪೂಜಾಕಾಲದಲ್ಲಿ ಹೇಳುತ್ತಿರುವರು. ಇದರ ಅಭಿಪ್ರಾಯವೇನೆಂಬುದನ್ನು ಇಲ್ಲಿ ಸ್ವಲ್ಪ ವಿವರಿಸುವೆವು. "ಎಂಟು ಚಕ್ರಗಳೂ ಒಂಭತ್ತು ಬಾಗಿಲುಗಳೂ ಇರುವದೇ ದೇವತೆಗಳ ಪುರವು, ಇದು ಅಯೋಧ್ಯೆಯು. ಈ ಅಯೋಧ್ಯೆಯಲ್ಲಿ ಒಂದು ಚಿನ್ನದ ಕೋಶವಿದೆ, ಇದೇ ಸ್ವರ್ಗಲೋಕವು, ಇದು ಬೆಳಕಿನಿಂದ ಕೂಡಿರುವದು." ಎಂಬುದು ಮೊದಲನೆಯ ವಾಕ್ಯದ ಅರ್ಥವು–ಈ ಅಯೋಧ್ಯೆಯಲ್ಲಿ ಸ್ವರ್ಗವೆಂದರೇನು?

ಇನ್ನು ಎರಡನೆಯ ವಾಕ್ಯದ ಅರ್ಥವೇನೆಂದರೆ, "ಈ ಪುರವೇ ಬ್ರಹ್ಮದ ಅಮೃತದಿಂದ ಆವೃತವಾಗಿರುವದೆಂದು ಯಾವಾತನು ಅರಿಯುವನೋ ಅವನಿಗೆ ಬ್ರಹ್ಮವೂ ಬ್ರಹ್ಮನೂ ಆಯುಸ್ಸು, ಕೀರ್ತಿ, ಪ್ರಜಾಸಂತತಿ ಇವುಗಳನ್ನು ಕೊಡುವರು" ಈಗ ಮತ್ತೊಂದು ಯೋಚನೆ ಬಂತು; ಅಯೋಧ್ಯೆಯಲ್ಲಿರುವ ಸ್ವರ್ಗವನ್ನು ಅಮೃತವು ಮುಚ್ಚಿಕೊಂಡಿರುವದೆಂದರೇನು?

ವೇದದಲ್ಲಿ ಬಹು ಮುಖ್ಯವಾದ ಅರ್ಥವನ್ನು ಹೀಗೆ ಒಗಟೆಗಳ ಹಾಗೆ ಕಾಣಿಸುವ ವಾಕ್ಯಗಳಲ್ಲಿಟ್ಟಿರುವದುಂಟು. ಪ್ರಕೃತದ ಒಗಟೆಯನ್ನು ಬಿಡಿಸಿದರೆ ಆಗುವ ಅರ್ಥವೇನೆಂದರೆ, ಪುರವೆಂದರೆ ಶರೀರವು, ಶರೀರವನ್ನು ಪುರವೆಂತಲೂ ಆತ್ಮವನ್ನು ಪುರಸ್ವಾಮಿಯೆಂತಲೂ ವರ್ಣಿಸುವ ಶ್ರುತಿಸ್ಮೃತಿಪುರಾಣವಾದಗಳು ಅನಂತವಾಗಿರುವವು. ಶ್ರೀಮದ್ ಭಾಗವತದಲ್ಲಿ ಪುರಂಜನೋಪಾಖ್ಯಾನವೆಂಬ ದೊಡ್ಡ ಕಥೆಯನ್ನೇ ಈ ರೂಪಕದ ಆಧಾರದ ಮೇಲೆ ಹೇಳಿರುತ್ತದೆ. ಶರೀರದಲ್ಲಿ ಅಲ್ಲಲ್ಲಿ ಬೇರೆ ಬೇರೆ ಶಕ್ತಿವಿಶೇಷಗಳು ಕೆಲಸ ಮಾಡುತ್ತಿರುವದರಿಂದಲೂ ಅಂಥವುಗಳಿಗೆಲ್ಲ ಜೀವನು ಅಭಿಮಾನಿಯಾಗಿ ಇರುವವನಂತೆ ಕೆಲಸ ದಾಟಿಸುತ್ತಿರುವದರಿಂದಲೂ ಇವನನ್ನು ಪುರಸ್ವಾಮಿಯೆಂದು ವರ್ಣಿಸಿರುವದು ಯುಕ್ತವೇ ಆಗಿದೆ. ಈ ಶರೀರವೆಂಬ ಪುರಕ್ಕೆ ಎಂಟು ಚಕ್ರಗಳು. ಚಕ್ರವೆಂದರೆ ಸುತ್ತು. ಸಾಮಾನ್ಯವಾಗಿ ಏಳುಸುತ್ತಿನ ಕೋಟೆ ಇರುವ ದುರ್ಗವೆಂದು ಪಟ್ಟಣಗಳನ್ನು ವರ್ಣಿಸುವದುಂಟಷ್ಟೆ ಈ ಶರೀರ ಪುರಕ್ಕೆ ಎಂಟು ಸುತ್ತಿನ ಕೋಟೆ. ಚರ್ಮ, ರಕ್ತ, ಮಾಂಸ, ಕೊಬ್ಬು, ಎಲುಬು, ಮಜ್ಜಾ, ಶುಕ್ರ, ಓಜಸ್ಸು–ಎಂಬ ಅಷ್ಟಧಾತುಗಳೇ ಈ ಸುತ್ತು ಕೋಟೆಗಳು. ಇವುಗಳು ಪುರವನ್ನು ಆವರಿಸಿಕೊಂಡಿರುತ್ತವೆ. ಇದೇ ಪುರಕ್ಕೆ ಒಂಭತ್ತು ಬಾಗಿಲುಗಳು; ತಲೆಯಲ್ಲಿ ಏಳು, ಶರೀರದ ಅಧೋಭಾಗದಲ್ಲಿ ಎರಡು–ಹೀಗೆ ಒಂಭತ್ತು ಪುರದ್ವಾರಗಳು. ಇದೇ ದೇವತೆಗಳ ಪಟ್ಟಣವು. ದೇವತೆಗಳೆಂದರೆ ಇಂದ್ರಿಯಗಳು. ಇಂದ್ರಿಯಗಳು ಈ ಪಟ್ಟಣವನ್ನು ಆಶ್ರಯಿಸಿಕೊಂಡೇ ತಮ್ಮ ಕಾರ್ಯವನ್ನು ನಡೆಸುವವು. ಸ್ವಭಾವವಾಗಿ ಇಂದ್ರಿಯಗಳ ಸ್ವಾಮಿತ್ವವೇ ಈ ಪುರದಲ್ಲಿ ನಡೆಯುವದು. ಮ್ಯುನಿಸಿಪಲ್ ಸಂಘಗಳೆಂಬ ಈಗಿನ ಪುರಾಭಿವೃದ್ಧಿಯ ಸಂಘಗಳಲ್ಲಿ ಮೆಂಬರುಗಳೆಂಬ ಸಭಿಕರು ತಮ್ಮ ಮತವನ್ನು ನಿರ್ಣಯಮಾಡಿ ಕೆಲಸಮಾಡುತ್ತಿರುವಂತೆಯೆ ಈ ಇಂದ್ರಿಯಗಳೂ ತಮ್ಮ ನಿರ್ಣಯವನ್ನೇ ಈ ಶರೀರಪುರದಲ್ಲಿ ನಡೆಸುತ್ತಿವವು. ಇದು ಅಯೋಧ್ಯೆ; ಯುದ್ಧಮಾಡಿ

ಗೆಲ್ಲುವದಕ್ಕಾಗದ ಪುರವು. ತನ್ನ ಕರ್ಮಗತಿಯಿಂದ ತಾನೇ ಹಾಳಾಗಬೇಕಲ್ಲದೆ ಮತ್ತೊಂದು ಕಾರಣದಿಂದ ಜಯಿಸಲು ಅಶಕ್ಯವು. ಎಷ್ಟೋ ಜನರು ಆತ್ಮಹತ್ಯವನ್ನು ಮಾಡಿಕೊಳ್ಳುತ್ತೇವೆಂದು ಕೊಚ್ಚಿಕೊಳ್ಳುವರು, ಆದರೆ ಪ್ರಯತ್ನ ಮಾಡುವಕಾಲದಲ್ಲಿ ಇವರಿಗೆ ಹೇಡಿತನವು ಆವರಿಸಿಕೊಳ್ಳುವದು-ಮತ್ತೆ ಕೆಲವರು ವಿಷಪ್ರಯೋಗ ಮುಂತಾದ ಕಾರಣಗಳಿಂದ ಮತ್ತೊಬ್ಬರನ್ನು ಕೊಲ್ಲುವದಕ್ಕೆ ಪ್ರಯತ್ನಪಡುವರು. ಆದರೆ ಕಾಲಕರ್ಮಗಳ ಸಂಯೋಗವಿಲ್ಲದ್ದರಿಂದ ಅಂಥ ವಿಷವನ್ನೂ ಕೂಡ ಈ ಶರೀರವು ಅರಗಿಸಿಕೊಂಡು ಬಿಡುವದು. ಶರೀರದಲ್ಲಿ ಒಂದು ಚಿನ್ನದ ಕೋಶವು ಎಂದರೆ ಬಯಲು ಇರುವದು. ಈ ಕೋಶವೇ ಹೃದಯವು. ಹೃದಯದಲ್ಲಿ ಬುದ್ಧಿಯಿರುವದೆಂಬುದನ್ನು ಸೂಚಿಸುವದಕ್ಕೆ ಇದನ್ನು ಹಿರಣ್ಮಯಕೋಶವೆಂದು ಶ್ರುತಿಯಲ್ಲಿ ವರ್ಣಿಸಿರುತ್ತದೆ. ಇದೇ ಸ್ವರ್ಗ ಲೋಕವು. ಸ್ವರ್ಗವೆಂದರೆ ಅತ್ಯಂತವಾದ ಆನಂದವು. ಸುಖವನ್ನು ಅನುಭವಿಸುವದಕ್ಕೆ ಬುದ್ಧಿಯೇ ಸ್ಥಾನವು. ಈ ಸ್ವರ್ಗಲೋಕವು ಒಂದಾನೊಂದು ಬೆಳಕಿನಿಂದ ಕೂಡಿರುವದು. ಇದು ಬುದ್ಧಿಯ ಸ್ವತಂತ್ರವಾದ ಬೆಳಕಲ್ಲ. ಈ ಪುರಸ್ವಾಮಿಯಾದ ಜೀವನ ಚೈತನ್ಯಪ್ರಕಾಶವು. ಹೀಗೆ ಹೊರಗೆ ಚರ್ಮಮಾಂಸಾದಿಗಳಿಂದ ಕೂಡಿರುವ ಶರೀರ, ಇವುಗಳಲ್ಲಿ ಕೆಲಸ ಮಾಡುವ ಇಂದ್ರಿಯಗಳು, ಇವುಗಳೆಲ್ಲಕ್ಕೂ ಒಳಗೆ ಸ್ವರ್ಗಲೋಕದಷ್ಟು ಪ್ರಿಯವಾಗಿರುವ ಬುದ್ಧಿ-ಇವುಗಳೆಲ್ಲವನ್ನೂ ವಿಂಗಡಿಸಿಕೊಂಡರೆ ಚೈತನ್ಯರೂಪನಾದ ಆತ್ಮನನ್ನು ಅರಿಯ ಬಹುದೆಂದು ಒಂದನೆಯ ವಾಕ್ಯದ ತಾತ್ಪರ್ಯವಾಯಿತು.

ಈಗ ಎರಡನೆಯ ವಾಕ್ಯವನ್ನು ಪರಿಶೀಲಿಸೋಣ. ಮೇಲೆ ವರ್ಣಿಸಿರುವ ಪುರವೇ ಬ್ರಹ್ಮದ ಅಮೃತದಿಂದ ಆವೃತವಾಗಿರುವದೆಂದು ತಿಳಿಯಬೇಕು. ದೇಹವೆಂಬುದು ಇಂದು ಹುಟ್ಟಿ ನಾಳೆ ಹೋಗುವ ಸ್ವಭಾವದ್ದೆಂದೂ ಅದೇ ನಮ್ಮ ಸ್ವರೂಪವೆಂದೂ ಜನರು ತಿಳಿದುಕೊಂಡಿರುವರು. ದೇಹವೇ ನಾನೆಂದು ಯಾರೂ ಹೇಳುವದಿಲ್ಲವೆಂಬುದು ನಿಜವೇ. ಆದರೂ ನಾನು ಬಡವಾದೆನು, ಚೆನ್ನಾಗಿ ಬೆಳೆದೆನು, ನನ್ನ ಕಾಂತಿಯು ಹೆಚ್ಚಿತು, ನನ್ನ ವಯಸ್ಸು ಹೆಚ್ಚಿಲ್ಲ, ನನ್ನ ಆರೋಗ್ಯವು ಕಡಿಮೆಯಾಗುತ್ತಿದೆ, ನನ್ನ ಕಣ್ಣಿನ ಪಾಟವವು ಕಡಿಮೆಯಾಗಿದೆ-ಎಂದು ಮೊದಲಾಗಿ ಜನರು ರೂಢಿಯಾಗಿ ಆಡಿಕೊಳ್ಳುವರು. ಆ ದೇಹಕ್ಕೆ ಸಂಬಂಧಪಟ್ಟ ಹೆಂಡಿರುಮಕ್ಕಳು, ಬಂಧು ಬಳಗ, ನೆಂಟರು ಇಷ್ಟರು, ಊರುಕೇರಿ, ತೋಟ ತುಡಿಕೆ, ಮುಂತಾದವರಲ್ಲಿ ಹೆಚ್ಚಿನ ಅಭಿಮಾನವನ್ನು ತೋರಿಸುವರು. ಇದೆಲ್ಲವೂ ದೇಹವು ತಾನೆಂಬ ಅಭಿಮಾನವಲ್ಲದೆ ಮತ್ತೇನು? ಇಲ್ಲಿ ಪುರವೆಂದರೆ ಹೊರಮುಚ್ಚಳದಂತೆಯಿರುವ ಚರ್ಮದಿಂದ ಕೂಡಿದ ಕೈಕಾಲುಗಳ ದೇಹವೊಂದೇ ಅಲ್ಲ, ಹಿಂದಿನ ಮಂತ್ರದಲ್ಲಿ ವರ್ಣಿಸಿರುವ ಎಂಟುಧಾತುಗಳೂ ಒಂಭತ್ತು ದ್ವಾರಗಳೂ ಇವುಗಳೊಳಗೆ ಕೆಲಸ ಮಾಡುತ್ತಿರುವ ಇಂದ್ರಿಯಗಳೂ ಮತ್ತು ಇನ್ನೂ ಒಳಗೆ ಕೆಲಸಮಾಡುತ್ತಿರುವ ಬುದ್ಧಿ-ಇವೆಲ್ಲವನ್ನೂ ಗ್ರಹಿಸಬೇಕು. "ಧನುರ್ಧಾರಿಗಳು

ಅನೇಕರು ಯುದ್ಧರಂಗದಲ್ಲಿದ್ದರು" ಎಂದು ಹೇಳಿದರೆ ಬರಿಯ ಬಿಲ್ಲನ್ನು ಹಿಡಿದವರೆಂದು ನಾವು ಯಾರೂ ಅರ್ಥಮಾಡಿಕೊಳ್ಳುವದಿಲ್ಲ ! ಬಿಲ್ಲು, ಬಾಣ, ಬತ್ತಳಿಕೆ, ಗುರಾಣಿ, ಈಟಿ, ಭರ್ಜಿ, ಮೊದಲಾದ ಆಯುಧಗಳನ್ನು ಇಟ್ಟುಕೊಂಡಿರುವ ವೀರರೆಂದೇ ಅರ್ಥಮಾಡಿಕೊಳ್ಳುತ್ತೇವಲ್ಲವೆ? ಇದರಂತೆ ಈ ಪುರವು ಎಂದರೆ ಹಿಂದಿನ ಮಂತ್ರದಲ್ಲಿ ದೇಹದಲ್ಲಿ ದೇಹದಿಂದ ಹಿಡಿದು ಬುದ್ಧಿಯವರೆಗೆ ಬಿಡಿಸಿ ಹೇಳಿದ ಶರೀರಕರಣಗಳ ಸಮೂಹವು ಎಂದೇ ಅರ್ಥ. ಈ ಸಮೂಹವು ಬ್ರಹ್ಮದ ಅಮೃತದಿಂದ ವ್ಯಾಪ್ತವಾಗಿರುವದು, ಎಂದರೆ ನಿಜವಾದ ವೇದಾಂತಜ್ಞಾನದಿಂದ ಸಾಕ್ಷಾತ್ಕಾರವನ್ನು ಪಡೆದವರಿಗೆ ಇದೆಲ್ಲವೂ ಅಮೃತಸ್ವರೂಪವಾದ ಅಂದರೆ ನಾಶವಿಲ್ಲದ ಪರಬ್ರಹ್ಮವಸ್ತುವೇ ಆಗಿತೋರುವದು. ಕತ್ತಲೆಯಲ್ಲಿ ಬಿದ್ದಿರುವ ಒಂದು ಹಗ್ಗವನ್ನು ಹಾವೆಂದು ಒಬ್ಬನೂ ನೀರಿನ ಕೋಡಿಯೆಂದು ಮತ್ತೊಬ್ಬನೂ ಜಲದ ಬಿರುಕೆಂದು ಮತ್ತೊಬ್ಬನೂ ಭ್ರಮಿಸುವರು. ಅಥವಾ ಒಬ್ಬನೆ ಬೇರೆಬೇರೆಯ ಕಾಲದಲ್ಲಿ ಬೇರೆಬೇರೆ ಬಗೆಯಾಗಿ ಅದನ್ನು ತಿಳಿದುಕೊಳ್ಳುವನು. ಆದರೆ ದೀಪದ ಬೆಳಕಿನಲ್ಲಿ ಅದನ್ನು ನೋಡಿದಕೂಡಲೆ ತಾವು ನೋಡಿದ ಹಾವು ಮುಂತಾದ ವಸ್ತುಗಳೆಲ್ಲ ಸುಳ್ಳೆಂತಲೂ ಅವುಗಳು ನಿಜವಾಗಿ ಹಗ್ಗವೇ ಎಂತಲೂ ಹೇಗೆ ನಿಶ್ಚಯವಾಗಿ ಗೊತ್ತಾಗುವದೋ ಅದರಂತೆಯೇ ಇದೆಲ್ಲ ಬ್ರಹ್ಮವೇ, ಈ ವಿಷಯವನ್ನು ಅರಿಯದೆ ಬಗೆಬಗೆಯ ತಪ್ಪುತಿಳಿದುಕೊಂಡೆವು-ಎಂದು ತತ್ತ್ವಜ್ಞಾನವನ್ನು ಪಡೆದುಕೊಂಡವರಿಗೆ ಹೊಳೆಯುವದು. ಹೇಗೆ ಹಾವೆಲ್ಲ ನಿಜವಾಗಿ ಹಗ್ಗವೇ ಆಗಿರುವದೋ ಅದರಲ್ಲಿ ಹಗ್ಗದ ಅವಯವಗಳೇ ಹೊರತು ಮತ್ತೆ ಯಾವ ವಸ್ತುವೂ ಸೇರಿಲ್ಲವೋ ಹಾಗೆ ನಮಗೆ ತೋರುವ ಶರೀರಾದಿ ಅನಾತ್ಮವಸ್ತುಗಳ ಸುಳ್ಳು ತೋರಿಕೆಯಲ್ಲಿ ಅಮೃತರೂಪವಾದ ಬ್ರಹ್ಮವೇ ಹಬ್ಬಿಕೊಂಡಿರುವದು.

ಹೀಗೆ ಬ್ರಹ್ಮವೇ ಎಲ್ಲವೂ ಆಗಿರುವದೆಂದು ಯಾವನಾದರೂ ಸುಮ್ಮನೇ ನಂಬಿದರೆ ಸಾಕು. ಅವನಿಗೆ ಸಾಕ್ಷಾದ್ಬ್ರಹ್ಮನೇ ಆಯುಸ್ಸು, ಕೀರ್ತಿ, ಪ್ರಜಾಸಂತತಿ-ಇವುಗಳನ್ನು ಕೊಡುವನು. ಏಕೆಂದರೆ ಎಲ್ಲವೂ ಬ್ರಹ್ಮವೆಂದು ನಂಬುವಾತನು ಯಾರಿಗೂ ದ್ರೋಹಮಾಡಲಾರನು, ಯಾವ ಪಾಪವನ್ನೂ ಮಾಡುವದಕ್ಕೆ ಹೋಗುವದಿಲ್ಲ. ಪಾಪಕರ್ಮದಿಂದಲೇ ನಮ್ಮ ಆಯುಸ್ಸು ಕಡಿಮೆಯಾಗುವದು, ಕೆಟ್ಟಹೆಸರು ಬರುವದು, ನಮ್ಮ ಸಂತತಿಯೂ ಬೆಳೆಯದೇ ಹೋಗುವದು-ಎಲ್ಲವೂ ಬ್ರಹ್ಮವೆಂದು ಅರಿಯುವಾತನ ನಂಬಿಕೆಯೆ ಪುಣ್ಯದ ತಳಹದಿಯಾದ್ದರಿಂದ ಆ ಪುಣ್ಯಪ್ರಭಾವದಿಂದ ಆಯುಸ್ಸು, ಕೀರ್ತಿ, ಪ್ರಜಾಸಂತತಿ-ಇವೆಲ್ಲವೂ ಬೆಳೆಯುವವು. ಆದ್ದರಿಂದ ಎಲ್ಲವೂ ಪರಮೇಶ್ವರನ ವಿಭೂತಿಯೆಂದರಿತು ನಡೆಯಬೇಕೆಂದು ಅಭಿಪ್ರಾಯ. ಹೀಗೆ ನಂಬಿದವರಿಗೇ ಈ ಫಲವಿರುವಾಗ ಸಾಕ್ಷಾತ್ತಾಗಿ ಜ್ಞಾನವನ್ನೇ ಪಡೆದವನಿಗೆ ಹೇಳತಕ್ಕದ್ದೇನು? ಅವನೇ ಪರಬ್ರಹ್ಮವಾಗಿಬಿಡುವನು. ಬ್ರಹ್ಮಕ್ಕೆ ಕಾಲದ ಪರಿಚ್ಛೇದವೇ ಇಲ್ಲ, ಆದ್ದರಿಂದ ಜ್ಞಾನಿಯ ಆಯುಸ್ಸಿಗೆ ಮಿತಿಯೇ ಇಲ್ಲ ! ಲೋಕವೆಲ್ಲ ಪರಮಾತ್ಮನ ಕೀರ್ತಿಯನ್ನೇ

ಹೊಗಳುತ್ತಿರುವದು, ಆದ್ದರಿಂದ ಜ್ಞಾನಿಯ ಕೀರ್ತಿಯನ್ನು ಇಡಿಯ ಜಗತ್ತೆ ಹೊಗಳಿದಂತಾಯಿತು; ಈ ಸೃಷ್ಟಿಯೆಲ್ಲವೂ ಪರಮಾತ್ಮನ ಸಂತತಿಯೆ. ಆದ್ದರಿಂದ ಜ್ಞಾನಿಯ ಸಂತತಿಗೆ ವಿಚ್ಛೇದವೇ ಇರುವದಿಲ್ಲ. ಈ ರೀತಿಯಲ್ಲಿ ಈ ಪ್ರಪಂಚವೂ ನಾನೂ ಪರಬ್ರಹ್ಮವೆಂದು ನಂಬುವುದು ಅಥವಾ ತಿಳಿಯುವದು ಅನಂತ ಫಲವನ್ನು ಕೊಡುವದೆಂದು ಎರಡನೆಯ ಮಂತ್ರದ ತಾತ್ಪರ್ಯವಾಯಿತು.

ಮಂತ್ರಪುಷ್ಪಕಾಲದಲ್ಲಿ ಹೇಳುವ ಈ ಎರಡು ಮಂತ್ರಗಳಿಗೆ ಆತ್ಮಾನಾತ್ಮವಿವೇಕ, ಪರಬ್ರಹ್ಮ ಸಾಕ್ಷಾತ್ಕಾರ, ಇವೇ ಧ್ಯೇಯಗಳೆಂಬುದನ್ನು ಯಾರು ಮನಸ್ಸಿಗೆ ತಂದುಕೊಳ್ಳುವರೋ ಅವರೇ ನಿಜವಾಗಿ ಪರಮೇಶ್ವರನ ಆರಾಧನೆಯನ್ನು ಮಾಡಿದವರಾಗುವರು. ಸಂ– , 66

## ಪರಮಾವಲಂಬನೆ

ಹಣದ ಬಲ, ಜನರ ಬಲ, ಮಂತ್ರದ ಬಲ, ರಸಾಯನಬಲ, ತಪಸ್ಸಿನ ಬಲ, ಯೋಗದ ಬಲ–ಇವುಗಳನ್ನು ಅವಲಂಬಿಸದಿರು. ಇವುಗಳೆಲ್ಲವೂ ಯಾವಾಗಲೂ ನಿನಗೆ ಬಲವನ್ನು ಕೊಡುವವಲ್ಲ. ಆತ್ಮಬಲವೇ ಬಲ. ಆತ್ಮನೆಂದರೆ ನೀನೆ, ನೀನೇ ನಿನಗೆ ಬಲವಾಗಿರಬೇಕು.

ನಾನು ಎಂದು ನೀನು ಈಗ ತಿಳಿದುಕೊಂಡಿರುವದೆಲ್ಲ ಆತ್ಮನಲ್ಲ. ದೇಹವು ನಾನೆಂದು ತಿಳಿದಿರುವಾಗ ಅದೇ ಆತ್ಮನಾಗಿರುವದು. ಹೀಗೆಯೇ ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ–ಇವೆಲ್ಲ ನಿನಗೆ ಒಂದೊಂದು ವೇಳೆ ಆತ್ಮನಾಗಿರುವವು. ಆದರೆ ಅವೆಲ್ಲ ಕಲ್ಪಿತಾತ್ಮರುಗಳು; ಅವುಗಳ ಬಲವೂ ಬಲವಲ್ಲ. ನಿಜವಾದ ಆತ್ಮನ ಬಲವೇ ಬಲ; ಅವನ ಅವಲಂಬನೆಯೇ ನಿಜವಾಗಿ ಪರಮಾವಲಂಬನೆ.

ಹಣವು ಬರುತ್ತಲೂ ಹೋಗುತ್ತಲೂ ಇರುವದು. ಚಲಾವಣೆಯಲ್ಲಿಲ್ಲದಿದ್ದರೆ ಅದು ಹಣವೆನಿಸೀತೆ? ನಿನ್ನಲ್ಲಿ ಹಣವಿರುವ ತನಕ ಜನರು ನಿನ್ನ ಮಾತನ್ನು ಕೇಳುತ್ತಿರುವರು. ಅದರಿಂದ ನಾನೇ ಬಲವಂತನೆಂದು ನೀನು ಭ್ರಾಂತನಾಗಿರುತ್ತೀಯೆ. ಆದರೆ ಮೋಸ ಹೋಗದಿರು. ನಿನ್ನ ಹಣವನ್ನು ಕಸಿದುಕೊಳ್ಳುವದಕ್ಕೇ ಜನರು ನಿನ್ನನ್ನು ಅನುಸರಿಸುತ್ತಿರುವರು. ಇಷ್ಟೇ ಹೊರತು ಅವರು ನಿನ್ನ ಬಲಕ್ಕೆ ಅಂಜಿ ಅನುಸರಿಸುತ್ತಿರುವದಿಲ್ಲ. ಆ ಹಣವು ಅವರ ಕೈಗೆ ಬಂದೊಡನೆ ಅವರು ಕಣ್ಮರೆಯಾಗುವರು; ಆಮೇಲೆ ನಿನ್ನ ಮಾತನ್ನು ಎಂದಿಗೂ ಕೇಳುವದಿಲ್ಲ. ನೀನು ನಂಬಿದ್ದ ಹಣದ ಬಲವು ಮಾಯವಾಗುವದು. ಆಮೇಲೆ ಬೇರೆ ಹಣವಂತರು ನಿನ್ನನ್ನು ತುಳಿದುಹಾಕುವರು. ಹಣದ ಬಲವನ್ನು ಅವಲಂಬಿಸಬೇಡ.

ಜನರ ಬಲವೂ ಯಾವಾಗಲೂ ಇರಲಾರದು. ತಂದೆತಾಯಿಗಳು, ಅಣ್ಣತಮ್ಮಂದಿರು, ಅಕ್ಕತಂಗಿಯರು–ಇವರು ಕೂಡ ಯಾವಾಗಲೂ ನಿನಗೆ ಸಹಾಯಕರಾಗಿ ನಿಲ್ಲುವರೆಂಬ

ನಂಬಿಕೆಯಿಲ್ಲ. ನೆಂಟರಿಷ್ಟರೂ ಅಷ್ಟೇ. ಹೀಗೆಯೇ ಅಧಿಕಾರಿ ಜನರ ಬಲವನ್ನಾದರೂ ನಂಬಿ ಕುಳಿತಿರಬೇಡ. ಅವರ ಅಧಿಕಾರವು ಸ್ಥಿರವಲ್ಲ. ಮಿಕ್ಕ ಜನರ ಬಲವನ್ನು ನಂಬ ಬೇಡವೆಂಬುದನ್ನು ಹೇಳಬೇಕೆ? ಅವರು ನಿನ್ನನ್ನು ಯಾವದೋ ಕಾರಣದಿಂದ ಹಿಂಬಾಲಿ ಸುತ್ತಿರುವರು; ಆ ಪ್ರಯೋಜನವು ಮತ್ತೊಬ್ಬರಿಂದ ಹೆಚ್ಚಾಗಿ ಆಗುವದೆಂದು ಕಂಡು ಬಂದರೆ ಅವರೂ ಅತ್ತ ಸರಿಯುವರು. ಆದ್ದರಿಂದ ಜನಬಲವನ್ನೂ ಅವಲಂಬಿಸಬೇಡ.

ಮಂತ್ರದಿಂದ ನಿನ್ನ ಮೇಲ್ಮೆಯಾಗುವದೆಂದು ತಿಳಿಯಬೇಡ. ಮಂತ್ರವು ಭಾವನೆ, ಪುರಶ್ಚರಣೆ, ಗುರುವಿನ ಉಪದೇಶ, ಮನಃಸ್ಥೈರ್ಯ–ಮುಂತಾದವುಗಳನ್ನು ಅವಲಂಬಿಸಿ ಇರುತ್ತದೆ. ಈ ಸಾಮಗ್ರಿಗಳಲ್ಲಿ ಯಾವದಾದರೊಂದರ ಕೊರತೆಯಿದ್ದರೆ ಅದರ ಬಲವೂ ಕುಗ್ಗುತ್ತದೆ. ಮಂತ್ರವು ನಿನ್ನ ಮನಸ್ಸಿನ ಸ್ಥಿತಿಯನ್ನು ಅವಲಂಬಿಸಿರುತ್ತದೆ; ಆ ಮನಸ್ಸು ಬದಲಾಯಿಸುತ್ತಲೇ ಇರುತ್ತದೆ. ಬರಿಯ ಮಂತ್ರದ ಬಲವನ್ನು ಅವಲಂಬಿಸಬೇಡ.

ಔಷಧಿಗಳು, ರಸಾಯನಗಳು–ಇವುಗಳೂ ಅಷ್ಟೇ. ಅವುಗಳಲ್ಲಿ ಒಂದಿಷ್ಟು ವೀರ್ಯ ವಿರಬಹುದು. ಅವನ್ನು ಕೊಡುವ ವೈದ್ಯರು, ನೀನು ಮಾಡುವ ಪಥ್ಯ, ಶರೀರದೊಳಗಿರುವ ಪ್ರಾಣಶಕ್ತಿ–ಇವುಗಳನ್ನವಲಂಬಿಸಿ ಔಷಧಿಗಳು ಕೆಲಸಮಾಡುತ್ತವೆ. ಔಷಧಿಗಳಲ್ಲಿಯೇ ಸಹಜವಾದ ಬಲವಿರುವದಿಲ್ಲ. ನಿನ್ನಲ್ಲಿರುವ ಬಲವನ್ನು ಅವು ಅರಳಿಸಬಲ್ಲವು; ನಿನ್ನಲ್ಲಿಯೇ ಬಲವಿಲ್ಲದಿದ್ದರೆ ಅವು ಏನೂ ಮಾಡಲಾರವು. ಔಷಧಬಲವನ್ನೇ ಅವಲಂಬಿಸಬೇಡ.

ತಪಸ್ಸು ಅನೇಕಸಿದ್ಧಿಗಳನ್ನು ತಂದುಕೊಡುವದೆಂದು ಶಾಸ್ತ್ರಗಳಲ್ಲಿ ಹೇಳಿದೆ. ಆದರೆ ಈಗಿನ ಕಾಲಕ್ಕೆ ಅನ್ನಾಹಾರಗಳನ್ನು ತೊರೆದು ನಿಯಮದಿಂದ ತಪಸ್ಸು ಮಾಡುವದು ಸಾಧ್ಯವಿಲ್ಲ. ಸಾಧ್ಯವಿದ್ದರೂ ಅವುಗಳಿಂದ ಬರುವ ಸಿದ್ಧಿಯು ಚಿರಕಾಲ ನಿಲ್ಲುವದಲ್ಲ. ಕೋಪತಾಪಗಳು ಹೆಚ್ಚಿದರೆ ತಪಸ್ಸಿನ ಬಲವು ಕ್ಷಯವಾಗುತ್ತದೆ; ಔಷಧದ ಬಲದಿಂದ ಸ್ವೇಚ್ಛಾಚಾರಿಯಾದ ಮನುಷ್ಯನು ಮೊದಲಿಗಿಂತಲೂ ಹೀನಬಲನಾಗುವಂತೆ ತಪೋ ಬಲವು ಕ್ಷೀಣವಾಗಲು ಸಾಧಕನೂ ಬಲಹೀನನಾಗುವನು. ತಪಸ್ಸಿನ ಬಲದಿಂದ ಏಳಿಗೆಯಾದೀತೆಂಬ ಹಂಬಲನ್ನು ಬಿಟ್ಟುಬಿಡು.

ಯೋಗವೂ ಅಷ್ಟೇ. ಈಗಿನ ಕಾಲಕ್ಕೆ ಹಠಯೋಗದ ಆಸನಗಳು ಕೆಲವನ್ನು ಹಾಕಿ ಜನರನ್ನು ಮರುಳುಮಾಡುವವರು ಹಲವರು ಇರುತ್ತಾರೆ, ಆದರೆ ಹಠಯೋಗವನ್ನು ಪೂರ್ಣವಾಗಿ ಮಾಡಿಕೊಂಡಿರುವವರು ತೀರ ವಿರಳ. ಬರಿಯ ಪ್ರಾಣಾಯಾಮಾದಿ ಗಳಿಂದಾಗುವ ಬಲವೂ ಬಹುಕಾಲ ನಿಲ್ಲಲಾರದು. ಈಗಿನ ಕಾಲಕ್ಕೆ ಚಿತ್ತವೃತ್ತಿನಿರೋಧ ದಿಂದ ಪಡೆಯುವ ಸಮಾಧಿಯೆಂಬುದು ಬರಿಯ ಮಾತಾಗಿ ಉಳಿದಿದೆ. ಯೋಗಬಲ ದಿಂದ ಪುರುಷಾರ್ಥವನ್ನು ಸಾಧಿಸುವೆನೆಂಬ ಹಂಬಲಿಕೆಯಿಂದ ಮೋಸಹೋಗಬೇಡ.

ನಿಜವಾಗಿ ಆತ್ಮಬಲವೇ ಬಲವು. ಆತ್ಮನೆಂದರೆ ನಿನ್ನ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ-ಇವೆಲ್ಲವನ್ನೂ ಮೀರಿರುವ ಸಚ್ಚಿದಾನಂದ ಸ್ವರೂಪವು. ಅದು ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿರುತ್ತದೆ. ಅದನ್ನೇ ಪರಮಾತ್ಮನೆನ್ನುವರು. ಆ ಪರಮಾತ್ಮನನ್ನು ಆಶ್ರಯಿಸಿರುವದೇ ಪರಮಾವಲಂಬನೆ. ಸಂ-27, 25

## ಮುಪ್ಪು ತಪ್ಪದು

ಮಾನವ, ಈ ಶರೀರವು ಕ್ಷಣಕ್ಷಣಕ್ಕೂ ಮುದಿಯಾಗುತ್ತಿರುವದು, ಇದನ್ನು ಮರೆಯದಿರು. ನನಗೆ, ನಿನಗೆ, ಎಲ್ಲರಿಗೂ ಮುಪ್ಪು ತಪ್ಪದೆ ಬರುತ್ತಲೇ ಇರುವದು. ಮುಪ್ಪು ಎಂದೋ ಒಂದು ದಿನ ಬರುವದಿಲ್ಲ; ಈಗಲೇ ಬರುತ್ತಿದೆ.

ಶರೀರವು ಬೆಳೆಯುತ್ತಿರುವಾಗಲೂ ಅದರ ಕೆಲವು ಅವಯವಗಳು ಸವೆಯುತ್ತಿರುವವು. ಆದರೆ ಹೊಸದಾಗಿ ಕೆಲವು ಅವಯವಗಳು ಹುಟ್ಟಿ ಶರೀರಕ್ಕೆ ಸೇರಿಕೊಳ್ಳುತ್ತಿರುವದರಿಂದ ಆ ಸವೆದ ಅವಯವಗಳ ಮುಪ್ಪುಸಾವಿನ ಅರಿವು ನಮಗೆ ಆಗುವದಿಲ್ಲ.

ಕೆಲವು ಕಾಲದ ಮೇಲೆ ಮೈಬೆಳೆಯುವದು ನಿಂತುಹೋಗುವದು, ಆದರೆ ಅದು ಮುದಿಯಾಗುವದು ಮುನ್ನಡೆಯುತ್ತಲೇ ಇರುವದು. ಬರುಬರುತ್ತಾ ಕೈಕಾಲುಗಳು ಸೋಲುವವು, ಮಾಂಸಖಂಡಗಳು ಒತ್ತುವವು, ಚರ್ಮವು ಸುಕ್ಕುವದು, ತಲೆಗೂದಲು ನರೆಯುವದು, ಕಣ್ಣು ಮಂಜಾಗುವದು, ಕಿವಿಕೇಳುವದು ಕಡಿಮೆಯಾಗುವದು, ಹಲ್ಲುಗಳು ಸಡಿಲುವವು, ನಾಲಗೆಗೆ ಸವಿ ಚೆನ್ನಾಗಿ ತೋರದೆಹೋಗುವದು, ಮೂಗಿಗೆ ವಾಸನೆ ಸರಿಯಾಗಿ ತಿಳಿಯದಾಗುವದು, ಕಳ್ಳ ಹಸಿವು ತೋರುವದು, ಉಂಡ ಅನ್ನವು ಅರಗದೆಹೋಗುವದು, ಕೈಯಲ್ಲಿ ಕೆಲಸವು ಸಾಗದೆಹೋಗುವರು, ಬುದ್ಧಿಮಂಕಾಗುವದಕ್ಕೆ ಮೊದಲಾಗುವದು. ಜನರು ನಿನ್ನನ್ನು ಅಸಡ್ಡೆಮಾಡುವರು.

ಇದೆಲ್ಲ ಏತರ ಗುರುತುಗಳು? ಈಗ ಹೊರಗಿನ ಪ್ರಪಂಚದಲ್ಲಿ ಆಸಕ್ತಿ ಕಡಿಮೆ ಯಾಗುವದು. ಆದರೆ ಒಳಗಿನ ಪ್ರಪಂಚವನ್ನು ಕಾರುಗತ್ತಲೆ ಕವಿದುಕೊಂಡಿರುವದು. 'ನಿನ್ನೊಳಗೆ ನೋಡು ! ಬಹಿರ್ಮುಖತ್ವವು ಸಾಕು !' ಎಂದು ಇಡಿಯ ಭೂಮಂಡಲವೇ ಡಂಗುರವನ್ನು ಹಾಕುವಂತೆ ಕಾಣುತ್ತಿರುವದು.

ಈ ಮುಪ್ಪು ಬರುವದೊಳಗೆ ಎಚ್ಚರಿಕೆ ತೆಗೆದುಕೊ. ಹೊರಗಿನ ನೋಟಗಳನ್ನಾಗಲಿ, ಜನರನ್ನಾಗಲಿ, ನೆಚ್ಚದಿರು. ಕೊನೆಗೆ ನಿನ್ನ ಶರೀರೇಂದ್ರಿಯಗಳನ್ನು ಕೂಡ ನಂಬಬೇಡ. ಇವೆಲ್ಲ ನಿನ್ನನ್ನು ನಡುನೀರಿನಲ್ಲಿ ಕೈಬಿಟ್ಟು ಅತ್ತಸರಿಯುವವು. ನಿನ್ನೊಡನೆ ಯಾವಾಗಲೂ ಇದ್ದುಕೊಂಡಿರುವ ಶಾಶ್ವತತತ್ತ್ವವೊಂದು ಇದ್ದುಕೊಂಡಿದೆ. ಅದು ಜನ್ಮಜನ್ಮಾಂತರದಲ್ಲಿಯೂ

ನಿನ್ನೊಡನೆ ಇರುವದು. ನಿನ್ನೊಡನೆ ಇರುವದೆಂದೇಕೆ ಹೇಳಲಿ? ನಿನ್ನ ಪರಮಸ್ವರೂಪವೇ ಅದು. ಅದನ್ನು ಬಲ್ಲವರು 'ಸಚ್ಚಿದಾನಂದಪರಮಾತ್ಮ' ಎಂದು ಕರೆಯುವರು. ಇನ್ನೂ ಕಣ್ಣು ಕೈಕಾಲು ಕಿವಿಗಳು ಗಟ್ಟಿಯಾಗಿರುವಾಗಲೇ, ಬುದ್ಧಿಯು ಸ್ಥಿರವಾಗಿರುವಾಗಲೇ ನಿನ್ನೊಳಗಿರುವ, ನಿನ್ನದೇ ಆದ, ಆ ಪರಮಾತ್ಮತತ್ತ್ವವನ್ನು ಒಳಹೊಕ್ಕು ಅರಿತುಕೊ, ಶಾಸ್ತ್ರವನ್ನೂ ಗುರುಗಳನ್ನೂ ಶರಣುಹೊಕ್ಕು ಅದರ ತಿಳಿವಳಿಕೆಯನ್ನು ಸಂಪಾದಿಸಿಕೊ. ಹಾಗಾದರೆ ನಿನಗೆ ಎಂದಿಗೂ ಭಯವಿರುವದಿಲ್ಲ, ಏಕೆಂದರೆ ಆ ನಿನ್ನ ಪರಮಾರ್ಥ ಸ್ವರೂಪಕ್ಕೆ ಮುಪ್ಪುಸಾವುಗಳು ಎಂದಿಗೂ ಇರುವದಿಲ್ಲ. ಸಂ–27, 51

## ಪ್ರಪಂಚವನ್ನು ತ್ಯಜಿಸಿ ಬ್ರಹ್ಮವನ್ನು ಸೇರುವದು

ಈ ಪ್ರಪಂಚವು ದುಃಖಪ್ರದವಾಗಿದೆಯೆಂದೂ ಅದನ್ನು ತ್ಯಜಿಸಿ ಪರಮಾತ್ಮನನ್ನು ಭಜಿಸಬೇಕೆಂದೂ ಕೆಲವರು ಬೋಧಿಸುವರು. ಅದರ ಅಭಿಪ್ರಾಯವನ್ನು ಸರಿಯಾಗಿ ಮನದಟ್ಟುಮಾಡಿಕೊಳ್ಳಲಾರದೆ ಕೆಲವರು ಮೂಢರು ಮನೆಮಾರುಗಳನ್ನು ಬಿಟ್ಟು ದೇಶಾಂತರಕ್ಕೊ, ಕಾಡುಮೇಡುಗಳಿಗೊ, ಹೋಗಿ ತಪಸ್ಸುಮಾಡುವದೇ ಪ್ರಪಂಚತ್ಯಾಗ ಎಂದು ತಪ್ಪಾಗಿ ಭಾವಿಸಿಕೊಳ್ಳುವರು. ಇದರಿಂದ ಅನೇಕ ಅನರ್ಥಗಳು ಆಗುವ ವೆಂಬುದನ್ನು ಹೇಳಬೇಕಾದದ್ದೇ ಇಲ್ಲ, ನಿಜವಾಗಿ ಪ್ರಪಂಚತ್ಯಾಗವೆಂಬ ಮಾತಿಗೆ ಏನರ್ಥ? ಪರಮಾತ್ಮನೊಬ್ಬನೇ ಪರಮಾರ್ಥಸತ್ಯವಾಗಿರುತ್ತಾನೆ; ಅವನಲ್ಲಿ ನಿಜವಾಗಿಲ್ಲದ ಪ್ರಪಂಚ ವನ್ನು–ಭೇದವನ್ನು–ಕಲ್ಪಿಸಿಕೊಂಡಿರುವದೂ ನಮ್ಮ ಸುತ್ತಮುತ್ತಲೂ ಇರುವ ಮನುಷ್ಯ ರನ್ನೂ ಮಿಕ್ಕ ಪ್ರಾಣಿಗಳನ್ನೂ ನಮಗೆ ಪ್ರಿಯರಾದವರು, ಅಪ್ರಿಯರಾದವರು, ಉದಾಸೀನ ರಾದವರು–ಎಂದು ಮುಂತಾಗಿ ಭಾವಿಸಿಕೊಂಡು ರಾಗದ್ವೇಷಗಳಿಗೆ ತುತ್ತಾಗಿರುವದೂ ಪ್ರಪಂಚಸ್ವೀಕಾರವು. ಈ ಪ್ರಪಂಚದಲ್ಲಿ ಕಾಣುವದೆಲ್ಲವೂ ಪರಮೇಶ್ವರನ ವಿಭೂತಿಯೇ; ಈ ಇಡಿಯ ಜಗತ್ತೇ ಆತನ ಮಹಿಮೆಯು. ಆತನ ಪರಮಾರ್ಥತತ್ತ್ವವು ಈ ವಿಭೂತಿಗಿಂತಲೂ ಅಪಾರವಾದದ್ದು ಎಂದು ತಿಳಿಯುವದೇ ನಿಜವಾದ ಪ್ರಪಂಚತ್ಯಾಗವು. ಸಂ–27, 59

## ಕೊನೆಗೆ ನಾವು ತೆಗೆದುಕೊಂಡುಹೋಗಲಿರುವ ಗಂಟು

ಅಣ್ಣಗಳಿರ, ರೈಲುಪ್ರಯಾಣಮಾಡುವಾಗ ನೀವು ಸಾಮಾನುಗಳನ್ನು ಆದಷ್ಟುಮಟ್ಟಿಗೆ ಕಡಿಮೆಮಾಡಿಕೊಳ್ಳಬೇಕೆಂದು ಹವಣಿಸುವಿರಿ. ಆದರೆ ಯಾವದು ಅತ್ಯವಶ್ಯವಾಗಿ ನಿಮಗೆ ಬೇಕೇಬೇಕೋ ಅದನ್ನು ಮಾತ್ರ ತಪ್ಪದೆ ಒಯ್ಯುವಿರಿ. ಅಲ್ಲವೆ? ಪ್ರಯಾಣವು ಸುಕರವಾಗಬೇಕು, ಅನವಶ್ಯವಾದ ಸಾಮಾನುಗಳು ನಮ್ಮೊಡನೆ ಇರಬಾರದು, ಅವಶ್ಯವಾದದ್ದನ್ನು ಬಿಡಬಾರದು–ಇವೇ ಸುಖ ಪ್ರಯಾಣದ ಗುಟ್ಟು.

ಈ ಜೀವನವೆಂಬುದು ಒಂದು ಪ್ರಯಾಣವು. ನಾವು ಎಲ್ಲಿಗೋ ಹೋಗುತ್ತಿದ್ದೇವೆ. ಅದರ ಅರಿವು ನಮಗೆಲ್ಲರಿಗೂ ಇರುವದಿಲ್ಲ. ದಾರಿಯಲ್ಲಿ ಪ್ರಯಾಣವು ಸುಖಮಯವಾಗಿರಬೇಕಾದರೆ ಕೆಲವು ಸಾಮಗ್ರಿಗಳು ಅವಶ್ಯವಾಗಿ ನಮಗೆ ಬೇಕು; ಅವುಗಳ ಅರಿವೂ ಇಲ್ಲ. ಇಲ್ಲಿಂದ ನಾವು ಹೊರಟೇಹೋಗುವಾಗ, ರೈಲುಗಾಡಿಯಿಂದ ಇಳಿದವರು ತಮ್ಮ ಗಂಟನ್ನು ತಾವು ಇಳಿಸಿಕೊಳ್ಳುವಂತೆ, ನಾವು ತೆಗೆದುಕೊಂಡು ಹೋಗಬಹುದಾದ ಸಾಮಾನು ನಮ್ಮಲ್ಲಿ ಯಾವದೋ ಉಳಿದಿರುತ್ತದೆ. ಅದರ ತಿಳಿವಳಿಕೆಯೂ ನಮ್ಮಲ್ಲಿ ಅನೇಕರಿಗೆ ಇಲ್ಲ.

ಜೀವನವೆಂಬ ಈ ರೈಲುಗಾಡಿಯಲ್ಲಿ ನಮ್ಮ ಜೊತೆಯಲ್ಲಿಯೇ ಪ್ರಯಾಣ ಮಾಡುವರು ಅನೇಕರು ಇದಾರೆ. ಅದರಲ್ಲಿ ಕೆಲವರು ನಮಗೆ ನೆಂಟರು. ಕೆಲವರು ಪರಿಚಿತರು, ಇನ್ನು ಕೆಲವರು ಪರಿಚಯವಿಲ್ಲದ ಪ್ರಯಾಣಿಕರು. ನಾವು ಎಲ್ಲರೊಡನೆಯೂ ಪ್ರೀತಿಯಿಂದ ಸಹಕರಿಸಬೇಕಾದದ್ದು ಯುಕ್ತ, ಯಾರೊಬ್ಬರಿಗೂ ಮನಸ್ಸಿಗೆ ನೋವುಮಾಡಬಾರದೆಂಬುದೂ ಯುಕ್ತ. ಸಾಧ್ಯವಾದರೆ ಎಲ್ಲರೊಡನೆಯೂ ಸಂತೋಷದಿಂದಿರುವದಕ್ಕೆ ಪ್ರಯತ್ನಿಸಬೇಕು.

ಆದರೆ ನಾವು ಕೂಡಿಹಾಕಿಕೊಂಡಿರುವ ಸಾಮಾನುಗಳೆಲ್ಲವೂ ನಮಗೆ ಕೊನೆಯವರೆಗೂ ಬೇಕಾದವುಗಳಲ್ಲ. ಹಣಕಾಸು, ಹೊಲಮನೆ, ಆಳುಕಾಳು, ದೇಶಭಾಷೆ– ಇವುಗಳು ಈ ಪ್ರಯಾಣದ ಸೌಕರ್ಯಕ್ಕೆ ಮಾತ್ರ. ಇವುಗಳಲ್ಲಿ ಯಾವದೊಂದನ್ನೂ ನಾವು ಈ ಜನ್ಮದಿಂದಾಚೆಗೆ ತೆಗೆದುಕೊಂಡು ಹೋಗುವದಕ್ಕೆ ಬರುವದಿಲ್ಲ.

ಆದರೆ ನಾವು ಮಾಡು ಧರ್ಮಾಧರ್ಮಗಳು ನಮ್ಮ ಬೆನ್ನಿಗೆ ಕಟ್ಟಿಕೊಂಡಿರುವ ಗಂಟಿನಂತೆ ಇರುತ್ತವೆ. ನಾವು ನಮಗೆ ಸೇರಿದ್ದೆಂಬುದೆಲ್ಲವನ್ನೂ ಬಿಟ್ಟುಹೋಗಬಹುದು, ಹೋಗಲೂಬೇಕಾಗುವದು. ಹೆಚ್ಚೇಕೆ? ನಮ್ಮ ಶರೀರವನ್ನು ಕೂಡ ಬಿಟ್ಟೇಹೋಗಬೇಕಾಗಿದೆ. ಆದರೆ ನಮ್ಮ ಪುಣ್ಯಪಾಪಗಳು ನಮ್ಮನ್ನು ಹಿಂಬಾಲಿಸಿಕೊಂಡೇ ಬರುತ್ತವೆ. ಪರಲೋಕದಲ್ಲಿಯೂ ಮತ್ತೊಂದು ಜನ್ಮದಲ್ಲಿಯೂ ಅವುಗಳಿಂದಲೇ ನಮಗೆ ಸುಖದುಃಖಗಳು ಆಗುವವು. ಪುಣ್ಯವನ್ನು ಕಟ್ಟಿಟ್ಟುಕೊಂಡುಹೋದವರಿಗೆ, ಬುತ್ತಿಯನ್ನು ದಾರಿಯಲ್ಲಿ ತಿಂದು ಹಸಿವನ್ನಡಗಿಸಿಕೊಳ್ಳುವವರಂತೆ, ಸುಖವು ಕಾದುಕೊಂಡಿರುವದು. ಪಾಪವನ್ನು ಕಟ್ಟಿಟ್ಟುಕೊಂಡವರಿಗೆ, ಸೆರಗಿನಲ್ಲಿರುವ ಕೆಂಡದಿಂದ ಮೈಯೆಲ್ಲವನ್ನೂ ಸುಟ್ಟುಕೊಳ್ಳುವವರಂತೆ, ದುಃಖವು ಕಾದುಕೊಂಡಿರುವದು. ನಿಮ್ಮ ಗಂಟಿನಲ್ಲಿರುವದೇನೆಂಬುದನ್ನು ದಯವಿಟ್ಟು ನೋಡಿಕೊಳ್ಳುತ್ತಿರಿ. **ಸಂ–28, 23**

# ನಿತ್ಯ ವ್ಯವಹಾರದಲ್ಲಿ ಅಂತಸ್ತುಗಳು

ಮನುಷ್ಯನ ನಿತ್ಯಜೀವನದಲ್ಲಿ ಒಂದಕ್ಕೊಂದು ವಿರುದ್ಧವಾದ ಘಟನೆಗಳು ಆಗಾಗ್ಗೆ ಸಂಭವಿಸುತ್ತಿರುವವು. ಅಂಥ ಸಂದರ್ಭಗಳಲ್ಲಿ ಈಗ ನಾನು ಹೇಗೆ ವ್ಯವಹರಿಸಬೇಕು?- ಎಂಬ ಪ್ರಶ್ನೆಯು ಎದ್ದುಕೊಳ್ಳುವದು. ಬೇರೆಬೇರೆಯ ದೃಷ್ಟಿಕೋಣದಿಂದ ನೋಡಿದಾಗ ಆ ಪ್ರಶ್ನೆಗೆ ಬೇರೆಬೇರೆಯ ಉತ್ತರಗಳು ದೊರಕುವವು. ಅವಿವೇಕಿಗಳಾದವರು ತಮ್ಮ ಮನಸ್ಸಿನ ವಾಸನೆಯ ಸೆಳೆತಕ್ಕೆ ಸಿಕ್ಕಿ ಹೇಗೋ ನಡೆದುಕೊಳ್ಳುವರು; ಆಮೇಲೆ ತಮ್ಮ ನಡತೆಯೇ ಸರಿಯಾಗಿತ್ತೆಂದು ಅದನ್ನು ತರ್ಕದಿಂದ ಪೋಷಿಸುವದಕ್ಕೆ ಪ್ರಯತ್ನಿಸುವರು. ಆದರೆ ವಿವೇಕಿಗಳಾದವರು ಆಗಿಂದಾಗಲೆ ಈಗ ಹೀಗೆ ನಡೆದುಕೊಳ್ಳುವದೇ ಯುಕ್ತ ಎಂದು ನಿಶ್ಚಯಿಸಿ ಅದರಂತೆ ನಡೆಯುವರು. ಅದರಿಂದಲೇ ಅವರಿಗೆ ಪುರುಷಾರ್ಥವು ದೊರಕುವದು.

ಜೀವನದಲ್ಲಿ ಯಾವದೊಂದು ಗುರಿಯನ್ನೂ ಇಟ್ಟುಕೊಳ್ಳದೆ ಇರುವವರು ಪಶುಗಳಂತೆ ಇಚ್ಛಾದ್ವೇಷಗಳಿಗೆ ವಶರಾಗಿ ನಡೆಯುತ್ತಾರೆ. ಯಾವದೊಂದು ಉದ್ಯೋಗವನ್ನೂ ಕೈಕೊಳ್ಳದೆ ತಮ್ಮ ಹೊಟ್ಟೆಬಟ್ಟೆಗಳಿಗೆ ಕೂಡ ಮತ್ತೊಬ್ಬರನ್ನು ಅವಲಂಬಿಸಿ, ಅಥವಾ ಮಾಡಬಾರದ ಹಿಂಸೆ, ಮೋಸ, ಕಳವು-ಮುಂತಾದವುಗಳನ್ನು ಆಶ್ರಯಿಸಿ ನಡೆಯಿಸುವ ವರನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಳ್ಳುವದು ಬೇಕಿಲ್ಲ. ಏಕೆಂದರೆ ವ್ಯವಹಾರದಲ್ಲಿ ಚತುರರಾಗಿ ತಮ್ಮ ಜೀವನವನ್ನು ನಾಲ್ಕು ಜನರಿಗೆ ಒಪ್ಪಾಗುವಂತೆ ಸಾಗಿಸುವವರೆಲ್ಲರೂ ಹೊಣೆಗಾರಿಕೆಯಿಲ್ಲದ ಸ್ವೇಚ್ಛಾಚಾರಿಗಳ ವರ್ತನೆಯನ್ನು ಖಂಡಿಸಿಯೇತೀರುತ್ತಾರೆ. ಸರಕಾರದವರ ಶಾಸನನಿಯಮಗಳೂ ಪ್ರಕೃತಿದೇವತೆಯ ಅಸಮಾಧಾನವೂ ಅಂಥ ಅವಿವೇಕಿಗಳನ್ನು ಕಾಲಕ್ರಮದಲ್ಲಿ ಹಿಡಿತಕ್ಕೆ ತಂದೇತರುತ್ತವೆ.

ಆದರೆ ವ್ಯವಹಾರದಲ್ಲಿ ಲಾಭನಷ್ಟಗಳ ದೃಷ್ಟಿಯನ್ನಿಟ್ಟುಕೊಂಡು ಆದಷ್ಟುಮಟ್ಟಿಗೂ ಎಚ್ಚರಿಕೆಯಿಂದ ನಡೆಯುತ್ತಿರುವವರಿಗೂ ಯತ್ನವಿಲ್ಲದೆ ಕಪಟ, ಸುಳ್ಳು, ಹಿಂಸೆ-ಮುಂತಾದ ವಕ್ರಮಾರ್ಗವನ್ನು ಅನುಸರಿಸುವ ಸಂದರ್ಭಗಳು ಬರುತ್ತವೆ. ಆಗ ಇದನ್ನು ಮಾಡಿದರೆ ನನಗೆ ಲಾಭವೇನೊ ಆಗುತ್ತದೆ, ಆದರೆ ಅಧರ್ಮವು ಗಂಟುಬೀಳುತ್ತದೆಯಲ್ಲ!- ಎಂಬ ಯೋಚನೆಯು ಹತ್ತಿಕೊಳ್ಳುತ್ತದೆ. ಅರ್ಥಶಾಸ್ತ್ರದಿಂದ ಲಾಭವನ್ನು ಸಂಪಾದಿಸಿಕೊಳ್ಳ ಬೇಕೆಂಬ ಜನಾಂಗದವರುಕೂಡ ಈ ಯೋಚನೆಗೆ ಸಿಕ್ಕಿಕೊಳ್ಳುತ್ತಾರೆ. ಆದರೆ ಪ್ರಬಲವಾದ ಅವರ ಆಶೆಯು ಅವರನ್ನು ಮಾಡಬಾರದ್ದನ್ನು ಮಾಡುವಂತೆ ಬಲಾತ್ಕಾರದಿಂದ ದೂಡುತ್ತದೆ. ಸಾಮಾನ್ಯಜನರೂ, ಇಹಲೋಕದ ಸಿರಿಸಂಪತ್ತನ್ನೇ ಹೆಚ್ಚೆಂದು ಬಗೆಯುವ ಜನಾಂಗಗಳೂ ಅಂಥ ಸಂದರ್ಭದಲ್ಲಿ, ಧರ್ಮವನ್ನು ಹಿಂತಳ್ಳಿ, ಅರ್ಥದೃಷ್ಟಿಯನ್ನೇ ಅವಲಂಬಿಸುತ್ತಾರೆ. ಆದರೆ ಆ ಅರ್ಥವು ಅನರ್ಥವನ್ನೇ ತರುತ್ತದೆ; ಧರ್ಮಕ್ಕೆ ವಿರುದ್ಧವಲ್ಲದ ಅರ್ಥಕಾಮಗಳೇ

ನಿಜವಾಗಿ ಪುರುಷಾರ್ಥವೆನಿಸುವವು. ಆದ್ದರಿಂದ ತೋರಿಕೆಯ ಅರ್ಥಕಾಮಗಳಿಗಾಗಿ ಧರ್ಮವನ್ನು ಎಂದಿಗೂ ಕೈಬಿಡಬಾರದು ಎಂದು ವ್ಯಾಸಾದಿಗಳು ಹೇಳಿರುತ್ತಾರೆ. ಕಾಮಕ್ರೋಧಗಳಿಗೆ ವಶರಾಗಿ ಮಾಡಬಾರದ್ದನ್ನು ಮಾಡಿದವರನ್ನು 'ಹೀಗೇಕೆ ಮಾಡಿದಿರಿ?' ಎಂದು ಕೇಳಿದರೆ "ಹಾಗೆ ಮಾಡದೆ ಇದ್ದರೆ ನನ್ನ ವ್ಯವಹಾರವೆಲ್ಲ ಕೆಟ್ಟುಹೋಗುತ್ತಿತ್ತು; ನನ್ನ ಆಸ್ತಿಯೆಲ್ಲವೂ ಹರಾಜಾಗುವ ಸಂಭವವಿತ್ತು, ಮಕ್ಕಳುಮರಿಗಳ ಕೈಗೆ ಚಿಪ್ಪನ್ನು ಕೊಡುವ ಗತಿಬರುತ್ತಿತ್ತು, ನನ್ನ ಹೆಸರಿಗೆ ಕಳಂಕವು ಬರುತ್ತಿತ್ತು, ಅಧಿಕಾರವು ಕೈಬಿಡುತ್ತಿತ್ತು. ಆದ್ದರಿಂದ ಯತ್ನವಿಲ್ಲದೆ ಆಪದ್ಧರ್ಮವಾಗಿ ಹಾಗೆ ಮಾಡಿದೆನು" ಎನ್ನುತ್ತಾರೆ! ಆದರೆ ನಿಜವೇನೆಂದರೆ ಧರ್ಮದಿಂದ ಎಂದಿಗೂ ಅನರ್ಥವಾಗುವದಿಲ್ಲ. ಅವರು ಒಡ್ಡಿರುವದು ಕುಂಟುಯುಕ್ತಿಯೇ ಹೊರತು ಧರ್ಮದ ಸಂಬಂಧವೇನೂ ಅದರಲ್ಲಿರುವದಿಲ್ಲ. ಅರ್ಥಕಾಮಗಳು ಈ ಜನ್ಮಕ್ಕೆ ಮಾತ್ರ, ಈ ಲೋಕಕ್ಕೆ ಮಾತ್ರ, ಸಂಬಂಧಪಟ್ಟವುಗಳಾಗಿರುತ್ತವೆ; ಧರ್ಮವು ಜನ್ಮಾಂತರಗಳಿಗೂ ಲೋಕಾಂತರಗಳಿಗೂ ಸಂಬಂಧಪಟ್ಟದ್ದು. ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದಾಗ 'ಧರ್ಮವು ನಿತ್ಯ, ಸುಖದುಃಖಗಳಾದರೆ ಅನಿತ್ಯ' ಎಂಬ ವ್ಯಾಸರ ಹಿತಬೋಧೆಯನ್ನನುಸರಿಸುವದೇ ಮೇಲೆಂದು ಸ್ಪಷ್ಟವಾಗಿ ತೋರುವದರಲ್ಲಿ ಸಂಶಯವಿಲ್ಲ.

ಈಗ ಧರ್ಮದೃಷ್ಟಿಗೂ ತತ್ತ್ವದೃಷ್ಟಿಗೂ ಇರುವ ಅಂತಸ್ತುಗಳನ್ನು ವಿಚಾರಮಾಡಿ ನೋಡೋಣ. ಭಗವಂತನ ಅನುಗ್ರಹದಿಂದ ನಮಗೆ ಕುಲ, ಶೀಲ, ವಿದ್ಯೆ, ಯೌವನ-ಮುಂತಾದ ಆನುಕೂಲ್ಯಗಳೇ ಅಲ್ಲದೆ ತತ್ತ್ವಜ್ಞಾನವನ್ನು ಸಂಪಾದಿಸುವದಕ್ಕೆ ಬೇಕಾದ ಬ್ರಹ್ಮಚರ್ಯ, ಗ್ರಹಣಶಕ್ತಿ, ಮೇಧಾಶಕ್ತಿ, ಬುದ್ಧಿಶಕ್ತಿ–ಇವುಗಳೂ ದೊರಕುವ ಸಂದರ್ಭಗಳು ಬಹಳ ಅಪೂರ್ವವಾಗಿರುತ್ತವೆ. ಇಂಥ ಸೌಕರ್ಯಗಳು ಎಲ್ಲರಿಗೂ ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಲಭಿಸಿರುವದಿಲ್ಲ. ಒಂದುವೇಳೆ ಇದೆಲ್ಲವೂ ದೊರಕಿದ್ದರೂ ಕೆಲವರಿಗೆ ಇಹಲೋಕದ ವಾಸನೆಯು, ಅವರಿಗೂ ಗೊತ್ತಿಲ್ಲದೆಯೇ, ಅಂಟಿಕೊಂಡುಬಿಟ್ಟಿರುತ್ತದೆ. ಅಂಥವರು ಗ್ರಂಥಾವಲೋಕನವನ್ನು ಮಾಡುತ್ತಾರೆ. ವಿಚಾರಶಕ್ತಿಯನ್ನು ಉಪಯೋಗಿಸಿ ತತ್ತ್ವವು ಹೀಗೆಯೇ ಇರಬೇಕೆಂದು ಊಹಿಸಿಕೊಳ್ಳುತ್ತಾರೆ, ಸಾತ್ತ್ವಿಕಭಾವದಿಂದ ಕೂಡಿರುವದರಿಂದ ಧರ್ಮವನ್ನು ಬಿಟ್ಟು ಅತ್ತಿತ್ತ ಕದಲುವದಕ್ಕೂ ಮನಸ್ಸು ಹಾಕುವದಿಲ್ಲ. ಆದರೇನು? ಅವರಿಗೆ ಧರ್ಮವೆಂದು ತೋರುವ ಕರ್ತವ್ಯವೇ ಜ್ಞಾನಾರ್ಜನೆಗೆ ಅಡ್ಡಿಯನ್ನು ತಂದೊಡ್ಡುತ್ತದೆ. ಈ ನನ್ನ ಮಕ್ಕಳನ್ನು ಸರಿಯಾದ ಸ್ಥಿತಿಯಲ್ಲಿ ನಿಲ್ಲಿಸದೆ ನಾನು ತತ್ತ್ವವಿಚಾರದಲ್ಲಿ ಮುಳುಗಿಬಿಡುವದು ಯುಕ್ತವಾದೀತೆ? ಈ ವೃದ್ಧರಾದ ತಾಯಿತಂದೆಗಳನ್ನು ಕಾಪಾಡುವ ಧರ್ಮವನ್ನು ಕಡೆಗಣಿಸಿದರೆ ನಮಗೆ ಮೋಕ್ಷಮಾರ್ಗವಾದರೂ ಸುಪಥವಾದೀತೆ? ನನ್ನ ನೆಂಟರಿಷ್ಟರುಗಳು ಇಷ್ಟೊಂದು ಜನ ಕಷ್ಟದಲ್ಲಿ

ನರಳುತ್ತಿರುವಾಗ ನಾನು ಮುಮುಕ್ಷುವೆಂದುಕೊಂಡು ತತ್ತ್ವವಿಚಾರಕ್ಕೆ ತಿರುಗಿದರೆ ಯುಕ್ತವಾದೀತೆ? ಜೀವನಕ್ಕೆ ಕಡುಕಷ್ಟವಾಗಿರುವ ಈ ಕಾಲದಲ್ಲಿ ಕೈಕಾಲುಗಳು ಗಟ್ಟಿಯಾಗಿರುವ ನಾನು ಯಾವದೊಂದು ಉದ್ಯೋಗವನ್ನೂ ಮಾಡದೆ ಮೋಕ್ಷ ಮಾರ್ಗವನ್ನು ಹಿಡಿಯುವೆನೆಂದರೆ ಈಶ್ವರನಿಗೆ ಮೆಚ್ಚಾದೀತೆ? ನಮ್ಮ ವಂಶದ ಹೆಸರನ್ನು ಉಳಿಸುವ ಧರ್ಮಕ್ಕಿಂತ ಈ ಅಧ್ಯಾತ್ಮವಿಚಾರವೆಂಬುದು ಹೆಚ್ಚಿನ ಕರ್ತವ್ಯವೆನಿಸೀತೆ?-ಹೀಗೆಲ್ಲ ಬಗೆ ಬಗೆಯ ವಿಚಾರತರಂಗಗಳು ಅವರ ಅಂತಃಕರಣದಲ್ಲಿ ಆಗಿಂದಾಗ್ಗೆ ಏಳುತ್ತಿರುವವು. ಅವುಗಳು ಅವರನ್ನು ಹಿಡಿದು ಕಟ್ಟಿಹಾಕುವವು. ಅವರು ಧರ್ಮವೆಂಬ ನೆಪದಿಂದ ಅಲ್ಲಿಗೇ ನಿಂತುಬಿಡುವರು. ಪರಮೇಶ್ವರನು ಅನುಗ್ರಹಿಸಿದ್ದ ಮೋಕ್ಷ ಸಾಧನ ಸಂಭಾರವನ್ನು ಮತ್ತೆ ಏತಕ್ಕೋ ಉಪಯೋಗಿಸುವದಕ್ಕೆ ಹೋಗುವರು. ಜೀವನದ ಮುಖ್ಯಗುರಿಯಿಂದಲೇ ವಂಚಿತರಾಗುವರು!

ಗೃಹಸ್ಥನಾಗಿರುವದು, ಕುಟುಂಬಪೋಷಣೆಯನ್ನು ಮಾಡುವದು, ಮಾತಾಪಿತೃಗಳ ಸೇವೆ, ಅತಿಥಿಸತ್ಕಾರ, ನೆಂಟರಿಷ್ಟರಿಗೂ ನೆರೆಹೊರೆಯವರಿಗೂ ಸಹಾಯಮಾಡುವದು, ದೇಶಸೇವೆ-ಇವೇ ಮುಂತಾದ ಧ್ಯೇಯಗಳೇನೂ ಕಡಿಮೆಯವುಗಳಲ್ಲ. ಆದರೆ ಅವುಗಳೆಲ್ಲ ಏತಕ್ಕಾಗಿ? ಇದನ್ನು ನಾವು ಮನಸ್ಸಿನಲ್ಲಿ ಚೆನ್ನಾಗಿ ಹೊರಳಾಡಿಸಬೇಕು. ಲೋಕದಲ್ಲಿ ಎಲ್ಲವೂ ಆತ್ಮಾರ್ಥವಾಗಿ ಪ್ರಿಯವಾಗಿರುವದೇ ಹೊರತು, ಅದಕ್ಕಾಗಿ ಅಲ್ಲ. ಕುಲ, ಜಾತಿ, ಶೀಲ, ಕರ್ಮ, ವಿದ್ಯೆ, ದಾನಧರ್ಮ, ಪರೋಪಕಾರ-ಇವುಗಳೆಲ್ಲವೂ ಶಾಸ್ತ್ರದಲ್ಲಿ ವಿಹಿತವಾಗಿರುವದು ನಿಶ್ಚಯ. ಇವುಗಳನ್ನು ನಾವು ಮಾಡದೆಬಿಟ್ಟರೆ ಕರ್ತವ್ಯಭ್ರಷ್ಟರಾಗಿ ಹೋಗುವೆವೆಂಬುದೂ ನಿಶ್ಚಯವೇ, ಆದರೆ ಅವುಗಳಿಂದಾಗಬೇಕಾದ ಪರಮಲಾಭವು ಯಾವದು? ಶಾಸ್ತ್ರದಲ್ಲಿ ಹೇಳಿರುವ ಧರ್ಮವೆಲ್ಲವೂ ಪಾಪವನ್ನು ಕಳೆದುಕೊಂಡು, ಅಂತಃಕರಣಕ್ಕೆ ಸಂಸ್ಕಾರವನ್ನು ಮಾಡಿಕೊಂಡು, ವೈರಾಗ್ಯವನ್ನು ಸಂಪಾದಿಸಿಕೊಂಡು, ಪರಮಪುರುಷಾರ್ಥಕ್ಕೆ ಬೇಕಾದ ಪರಮಾತ್ಮತತ್ತ್ವದ ಶ್ರವಣಮನನ ನಿದಿಧ್ಯಾಸನಗಳನ್ನು ಮಾಡುವದಕ್ಕೇ ಹೊರತು ತನತನಗಾಗಿಯಲ್ಲ. ಸ್ವೇಚ್ಛಾವೃತ್ತಿಯನ್ನು ವ್ಯವಹಾರದೃಷ್ಟಿಯಿಂದಲೂ ವ್ಯವಹಾರದೃಷ್ಟಿಯನ್ನು ಧರ್ಮದೃಷ್ಟಿಯಿಂದಲೂ ಹೇಗೆ ತಿದ್ದಿಕೊಳ್ಳುವದು ಅವಶ್ಯವೋ ಹಾಗೆಯೇ ಅಥವಾ ಅದಕ್ಕಿಂತಲೂ ಹೆಚ್ಚಿನ ರೀತಿಯಿಂದ, ಈ ಧರ್ಮದೃಷ್ಟಿಯನ್ನು ತತ್ತ್ವದೃಷ್ಟಿಯಿಂದ ತಿದ್ದಿಕೊಳ್ಳುವದು ಅವಶ್ಯವಾಗಿರುತ್ತದೆ. ಆದ್ದರಿಂದ ವಿವೇಕಿಯಾದವನು ಭಗವಂತನ ದಯೆಯಿಂದ ಲಭಿಸಿರುವ ಭಗವತ್ಪ್ರಾಪ್ತಿಸಾಧನಗಳನ್ನು 'ಧರ್ಮ'ವೆಂಬ ನೆಪದಿಂದ ಅತ್ತೊಗೆಯಬಾರದು-ಸತ್ಸಂಗವನ್ನು ಮಾಡಿ ವೈರಾಗ್ಯವನ್ನೂ ಮುಮುಕ್ಷುತ್ವವನ್ನೂ ಬೆಳೆಯಿಸಿಕೊಳ್ಳಬೇಕು. ಶ್ರದ್ಧಾಭಕ್ತಿಧ್ಯಾನಗಳಿಂದ ಭಗವತ್ಪ್ರಾಪ್ತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಸಂ-27, 75

# ದ್ವೇಷಬುದ್ಧಿ

ಮಾನವ, ಈ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ–ಇವುಗಳ ಗುಂಪನ್ನೇ ನೀನೆಂದುಕೊಂಡಿರುವೆಯಲ್ಲವೆ? ಇವುಗಳ ಯೋಗಕ್ಷೇಮಕ್ಕಾಗಿ ನೀನು ಎಷ್ಟು ಬವಣೆಪಡುತ್ತಿರುವೆ ! ಎಷ್ಟು ಮಾಡಬಾರದ ಕೆಲಸಗಳನ್ನು ಮಾಡುತ್ತಿರುವೆ! ಎಷ್ಟು ಮಾಡಬೇಕಾದ ಕೆಲಸಗಳನ್ನು ಬಿಡುತ್ತಿರುವೆ !

ಈ ಶರೀರಾದಿಗಳ ಗುಂಪನ್ನು ನಾನು ಎಂದುಕೊಂಡಿದ್ದರಿಂದಲೇ ನೀನು ಇದಕ್ಕೆ ಅನುಕೂಲವಾಗಿರುವವರನ್ನು ನನ್ನವರು ಎನ್ನುತ್ತಿರುವೆ ! ಇದಕ್ಕೆ ಪ್ರತಿಕೂಲವಾಗಿರುವವರಲ್ಲಿ ದ್ವೇಷವನ್ನು ಮಾಡುತ್ತಿರುವೆ. ಅಲ್ಲವೆ? ಆದರೆ ವಿಚಾರಮಾಡಿನೋಡು ಈ ಶರೀರಾದಿಗಳಲ್ಲಿ ಯಾವದೊಂದಾದರೂ ಇದ್ದಂತೆ ಇರುವದೆ? ಇದಕ್ಕೆ ಅನುಕೂಲವಾದದ್ದು ಯಾವದಿದ್ದೀತು ! ಪ್ರತಿಕೂಲವಾದದ್ದು ಯಾವದಿದ್ದೀತು?

ಈ ಶರೀರಾದಿಗಳ ನಿಮಿತ್ತದಿಂದ ನಮಗೆ ಕೇಡುಮಾಡಿದವರೆಂದು ಕೆಲವರನ್ನು ಎಣಿಸಿ ಅವರನ್ನು ಹಗೆಮಾಡುತ್ತಿರುವೆಯಲ್ಲ ! ಅವರು ನಿಜವಾಗಿಯೂ ನಿನಗೆ ಒಳ್ಳೆಯದನ್ನು ಮಾಡಿದ್ದಾರೆಯೊ ಇಲ್ಲವೊ–ಎಂಬುದನ್ನಾದರೂ ಯೋಚಿಸಬೇಡವೆ?

ದ್ವೇಷಬುದ್ಧಿಯು ಎಂಬುದು ಹುಲ್ಲುಮನೆಗೆ ಅಥವಾ ಹುಲ್ಲುಬಣವೆಗೆ ಸಿಡಿದುಬಿದ್ದ ಬೆಂಕಿಯಕಡ್ಡಿಯಂತೆ ಇರುತ್ತದೆ. ಅದು ಸ್ವಲ್ಪಸ್ವಲ್ಪವಾಗಿ ಹುಲ್ಲನ್ನು ಸುಡುತ್ತಾಹೋಗುತ್ತಿರುತ್ತದೆ. ಆ ಮನೆಯ ಮಾಳಿಗೆಯಲ್ಲಿ ಅಥವಾ ಆ ಬಣವೆಯಲ್ಲಿ ಹೊಗೆಯನ್ನು ಹೆಚ್ಚಿಸುತ್ತಾಹೋಗುತ್ತಿರುತ್ತದೆ. ಅದರಂತೆ ದ್ವೇಷಬುದ್ಧಿಗೆ ಅವಕಾಶವನ್ನು ಕೊಟ್ಟಮೇಲೆ ಅದು ನಿನ್ನನ್ನೇ ಸುಡುತ್ತಿರುತ್ತದೆ; ನಿನ್ನ ಬುದ್ಧಿಗೆ ಮಂಕಿನ ಹೊಗೆಯನ್ನು ಮುಚ್ಚಿ, ಮಾಡಬಹುದಾದದ್ದು, ಮಾಡಬಾರದ್ದು; ನಿಜವಾದದ್ದು, ಸುಳ್ಳಾದದ್ದು–ಇವುಗಳ ತತ್ತ್ವವನ್ನು ಅರಿಯದಂತೆ ಅಡ್ಡಿಯನ್ನು ಮಾಡಿಬಿಡುತ್ತದೆ. ಇದನ್ನು ಮರೆಯದಿರು !

ಒಬ್ಬನನ್ನು ಒಳಗೆ ದ್ವೇಷಬುದ್ಧಿಯಿಂದ ಕಾಣುತ್ತಾ 'ನಿನ್ನನ್ನು ಕ್ಷಮಿಸಿಬಿಟ್ಟಿದ್ದೇನೆ' ಎಂದು ಹೊರಗೆ ಆಡುವ ಬೂಟಾಟಿಕೆಯ ಮಾತನ್ನು ಬಿಡು. ನಿನ್ನ ಅಂತರಂಗದಿಂದ ದ್ವೇಷದ ಲೇಶವೂ ಇಲ್ಲದಂತೆ ಹೊರಗೆ ಹಾಕಿಬಿಡು.

ಪರಮೇಶ್ವರನನ್ನು "ದೇವ, ಇಂಥವನೊಬ್ಬನು ನನಗೆ ಕೆಟ್ಟದ್ದನ್ನು ಮಾಡಿರುತ್ತಾನೆ; ಅವನಿಗೆ ಒಳ್ಳೆಯ ಬುದ್ಧಿಯನ್ನು ಕೊಡು !" ಎಂದು ಪ್ರಾರ್ಥನೆಮಾಡಿದಮಾತ್ರದಿಂದ ನೀನು ಸಾತ್ತ್ವಿಕನಾದೆ ಎಂದು ತಿಳಿಯದಿರು. "ದೇವ, ನಾನು ತಪ್ಪುಮಾಡಿದ್ದು ಇವನನ್ನು ಹಗೆಮಾಡುತ್ತಿರುವೆನೋ ಏನೋ, ತಿಳಿಯದು, ನನ್ನ ತಪ್ಪನ್ನು ನನಗೆ ತಿಳಿಸಿ ಕಾಪಾಡು!" ಎಂದು ಹೃದಯಪೂರ್ವಕವಾಗಿ ಬೇಡಿಕೊ. ನಿನ್ನ ಅಂತರಂಗವು ಶುದ್ಧವಾದರೆ ನಿನಗೆ ಹಗೆಗಳು ಇರುವ ಸಂಭವವೇ ಇಲ್ಲ ಎಂಬುದನ್ನು ಮರೆಯದಿರು ! **ಸಂ–27, 78**

# ಸ್ವಾರ್ಥ

ಸ್ವಾರ್ಥವೆಂದರೆ ತನ್ನ ಪ್ರಯೋಜನವು ಪ್ರತಿಯೊಬ್ಬನೂ ತನಗೆ ಪ್ರಯೋಜನ ವಾಗಲೆಂದು ಬಯಸುವದು ಸಹಜವಾಗಿದೆ. ಆದರೆ ಮತ್ತೊಬ್ಬರಿಗೆ ಕೆಡುಕಾದರೂ ಚಿಂತೆಯಿಲ್ಲ, ತನಗೆ ಒಳ್ಳೆಯದಾಗಲಿ !- ಎಂದು ಬಯಸುವವನನ್ನು ಮಾತ್ರ ನಾವು ಸ್ವಾರ್ಥದೃಷ್ಟಿಯ ಮನುಷ್ಯನೆಂದು ಕರೆಯುವೆವು. ಅಂಥ ಮನುಷ್ಯನನ್ನು ಜನರು ಹೀಯಾಳಿಸುವರು. ಸ್ವಾರ್ಥದೃಷ್ಟಿಯ ಜನರು ತಾವೂ ಕೆಟ್ಟು ಪರರನ್ನೂ ಕೆಡಿಸುವರು ಎಂದು ಅನೇಕರು ಹೇಳಿಕೊಳ್ಳುತ್ತಾರೆ.

ಆದರೆ ಇಲ್ಲಿ ಸ್ವಲ್ಪ ವಿಚಾರಮಾಡತಕ್ಕದ್ದು ಇದೆ. ಸ್ವಾರ್ಥದೃಷ್ಟಿಯವನು ಮತ್ತೊಬ್ಬರ ಸುಖದ ಕಡೆಗೆ ಲಕ್ಷ್ಯವಿಡುವದಿಲ್ಲ ಎಂಬುದು ನಿಜವಾಗಬಹುದು. ಆದಮಾತ್ರಕ್ಕೆ ತನ್ನ ಪ್ರಯೋಜನವನ್ನು ಕೂಡ ಅವನು ಮಾಡಿಕೊಳ್ಳುವದಿಲ್ಲವೆಂದು ಹೇಳಬಹುದೆ? ಹಾಗಿದ್ದರೆ ಅವನನ್ನು ಸ್ವಾರ್ಥಿ ಎಂದೇಕೆ ಕರೆಯಬೇಕು? ಸ್ವಾರ್ಥಿಯು ತನ್ನ ಪ್ರಯೋಜನವನ್ನು ನೋಡಿಕೊಳ್ಳುವದಿಲ್ಲವೆಂಬುದು ತನಗೆ ತಾನೇ ವಿರುದ್ಧವಾದ ಮಾತಲ್ಲವೆ?

ಇದಕ್ಕೆ ಉತ್ತರವೇನೆಂದರೆ ಸ್ವ ಎಂದರೆ ತಾನು. ಆದರೆ ತಾನು ಯಾರು ಎಂಬುದನ್ನು ನಿಶ್ಚಯಿಸದೆ ಯಾರಾದರೊಬ್ಬನನ್ನು ತಾನು ಎಂದು ಬಗೆಯುವವನು. ತನ್ನ ಹಿತವನ್ನು ನೋಡಿಕೊಳ್ಳುವನೆಂದು ತಿಳಿಯುವದಕ್ಕೆ ಬರುವದಿಲ್ಲ. ಒಂದು ವೃತ್ತಕ್ಕೆ ಎರಡು ಕೇಂದ್ರಗಳು ಇರಲಾರವು. ಸುಳ್ಳಾದ ಕೇಂದ್ರವು ಕೇಂದ್ರವೇ ಅಲ್ಲ; ಅದರಂತೆ ಸುಳ್ಳಾದ ತಾನು ತಾನೇ ಅಲ್ಲ. ನಮ್ಮಲ್ಲಿ ಅನೇಕರಿಗೆ ತಮ್ಮ ನಿಜವು ಗೊತ್ತಿಲ್ಲ. ನಾನು ಎಂದು ತಾವು ತಿಳಿದಿರುವದನ್ನೇ ನಿಜವಾಗಿ ತಮ್ಮ ಸ್ವರೂಪವೆಂದು ಬಗೆಯುವರು. ಸ್ವಾರ್ಥಿಗಳು ಎಂದರೆ ಸುಳ್ಳಾಗಿರುವ ಈ ನಾನು ಎಂಬ ಪದಾರ್ಥವು. ಹುಡುಗರಾಗಿರುವಾಗ ಓದುವದು ರುಚಿಸದೆ ಆಡುತ್ತಲೇ ಇರಬೇಕೆಂದು ಬಯಸುವ ನಾನು ಎಂಬ ಪದಾರ್ಥವೇ ತಾನೆಂದು ಬಗೆದು ಕಾಲಕ್ಷೇಪವನ್ನು ಮಾಡಿದವನು ದೊಡ್ಡವನಾದ ಬಳಿಕ ತನ್ನ ಹಿತವನ್ನು ಮಾಡಿಕೊಳ್ಳದೆ ಕೆಟ್ಟೆನು ಎಂದು ಪರಿತಪಿಸುವನು. ಕುಡಿಯಬಾರದ ಮದ್ಯವನ್ನು ಕುಡಿದ ಅಮಲಿನಿಂದ ಮನೆಯಲ್ಲಿದ್ದ ಪೀತಾಂಬರವನ್ನು ಸುಟ್ಟುಹಾಕಿದವನು ಅಮಲು ಇಳಿದ ಬಳಿಕ, "ಅಯ್ಯೋ! ನನ್ನ ಅಹಿತವನ್ನೇ ನಾನು ಮಾಡಿಕೊಂಡೆನಲ್ಲ!" ಎಂದು ಸಂಕಟಪಡುವನು. ಇದರಂತೆ ಸ್ವಾರ್ಥಿಗಳೆಂದು ನಾವು ಕರೆಯುತ್ತಿರುವ ಜನರು ಒಂದು ಸುಳ್ಳು ನಾನನ್ನು ಸಾಕಿಕೊಂಡಿರುವನು. ಅದೇ ನಮ್ಮ ಸ್ವರೂಪವು ಎಂದು ಬಗೆಯುತ್ತಿರುವರು. ಈ ಹುಸಿ ನಾನು ಎಂಬ ಪದಾರ್ಥವು **ಅಹಂಕಾರವು, ಚಿದಾಭಾಸವು** -ಎಂದು ವೇದಾಂತಿಗಳು ಹೇಳುವರು.

ಕನ್ನಡಿಯ ಮುಂದೆ ನಾವು ನಿಂತಿರುವಾಗ ನಮ್ಮ ಮುಖದಂತೆ ತೋರುವ ಒಂದು ಪ್ರತಿಬಿಂಬವು ಕನ್ನಡಿಯೊಳಗೆ ತೋರುತ್ತದೆ. ಆದರೆ ಸ್ವಲ್ಪ ಲಕ್ಷ್ಯವಿಟ್ಟು ನೋಡಿದರೆ ಅದು ನಮ್ಮ ಮುಖವಲ್ಲ, ಮುಖದ ನೆರಳು. ಆ ಮುಖದಲ್ಲಿ ನಮ್ಮ ಎಡಗಣ್ಣು ಬಲಗಣ್ಣಾಗಿರುತ್ತದೆ; ಬಲಗಣ್ಣು ಎಡಗಣ್ಣಾಗಿರುತ್ತದೆ; ಇದರಂತೆ ನಾನು ಎಂದ ನಾವು ಕರೆಯುವದು ನಮ್ಮ ಸ್ವರೂಪವಲ್ಲ. ಕನಸಿನಲ್ಲಿ ನಮಗೆ ಒಂದು ನಾನು ಕಾಣಿಸುತ್ತಿರುತ್ತದೆ. ಆ ನಾನು ಎಂಬ ಪದಾರ್ಥವನ್ನೂ ನಾವು ನಮಗೆ ಪ್ರಿಯವಾದ ವಸ್ತುವೆಂದು ಎಣಿಸುತ್ತಾ ಅದಕ್ಕೆ ಬೇಕಾದದ್ದನ್ನೆಲ್ಲ ಬಯಸುತ್ತಾ ಬೇಡವಾದದ್ದನ್ನೆಲ್ಲ ಹಗೆ ಮಾಡುತಾ ಇರುವೆವು. ಆದರೆ ನಮಗೆ ಆಗುವ ಕನಸುಗಳಿಗೆ ಲೆಕ್ಕವಿಲ್ಲ; ಅಲ್ಲಿ ತೋರುವ ನಾನುಗಳಿಗೂ ಲೆಕ್ಕವಿಲ್ಲ. ಈ ಅಗಣಿತವಾದ ನಾನುಗಳಲ್ಲಿ ನಮ್ಮ ನಿಜ ತೋರಿಕೆಯೇ ನಾನೆಂದು ಬಗೆದು ಅದರ ಸಂತೋಷಕ್ಕಾಗಿ ಮತ್ತೊಬ್ಬರಿಗೆ ಹಿಂಸೆ ಕೊಡುವವನು ತನ್ನ ಪ್ರಯೋಜನ ವನ್ನು ನಿಜವಾಗಿ ಸಾಧಿಸಿಕೊಳ್ಳುವನೋ, ಇಲ್ಲವೋ ಆಗ ಸ್ಪಷ್ಟವಾಗಿ ತಿಳಿಯುತ್ತದೆ.

ನಾನು ಬದುಕಬೇಕು ಎಂದು ಮತ್ತೊಬ್ಬರನ್ನು ಹಾಳುಮಾಡುವ ಸ್ವಾರ್ಥವು ಕೆಟ್ಟದ್ದು ಎಂಬುದಕ್ಕೆ ಈ ವಿಚಾರವು ಸಾಕೆಂದು ಯಾರಿಗಾದರೂ ತಿಳಿಯುತ್ತದೆ. ನಮ್ಮ ನಿಜವಾದ ರೂಪವಲ್ಲದ ನಾನು ಎಂಬ ಹಿತಶತ್ರುವೊಬ್ಬನು ನಮ್ಮೊಳಗೇ ಸೇರಿಕೊಂಡು ದಿನದಿನವೂ ನಮ್ಮನ್ನು ವಂಚಿಸುತ್ತಾ ಇರುವನು. ಗರ್ವ, ಬಲ, ದರ್ಪ, ಕಾಮ, ಕ್ರೋಧ–ಎಂಬ ರಾಕ್ಷಸಗುಣಗಳು ಈ ಹಿತಶತ್ರುವಿನ ಪರಿವಾರಗಳು. ಈ ಠಕ್ಕರ ಗುಂಪನ್ನು ನಾವು ಮೊದಲು ದೂರಮಾಡಬೇಕು, ಅಹಂಕಾರವನ್ನು ಮಟ್ಟ ಮಾಡುವ ವಿದ್ಯೆಯನ್ನು ಸಾಧುಜನರ ಸಹವಾಸದಿಂದ ಕಲಿತುಕೊಳ್ಳಬೇಕು. ನಾವು ನಮ್ಮ ಹಿತವನ್ನೇ ಕೋರುವದಾದರೆ ಈ ನಾನು ಎಂಬ ಪಿಶಾಚಿಯ ಆವೇಶಕ್ಕೆ ಸ್ವಲ್ಪವೂ ಅವಕಾಶವನ್ನು ಕೊಡಬಾರದು. ಆಗಲೇ ನಾವು ನಿಜವಾದ ಸ್ವಾರ್ಥವನ್ನು ಸಂಪಾದಿಸಿಕೊಳ್ಳಲು ಸಿದ್ಧರಾದಂತಾಗುವದು. ನಿಜವಾದ ಸ್ವಾರ್ಥವೇ ಪರಮ ಪುರುಷಾರ್ಥವು. ಕನಕದಾಸರನ್ನು ಒಮ್ಮೆ ಯಾರೋ ಒಬ್ಬರು "ನನಗೆ ಮುಕ್ತಿಯಾಗುವದು ಯಾವಾಗ?" ಎಂದು ಕೇಳಲು ಆ ಮಹಾತ್ಮರು "ನಾನು ಸತ್ತಾಗ !" ಎಂದು ಉತ್ತರವಿತ್ತರಂತೆ, ನಾನು ಹೋಗಬೇಕು, ನಮ್ಮೊಳಗೆ ನಾರಾಯಣನ ಪ್ರತಿಷ್ಠೆಯಾಗುವದು. ಸಂ–16, 45

## ಧರ್ಮವೂ ಮನುಷ್ಯಜೀವನವೂ

ಮನುಷ್ಯನ ಜೀವನಕ್ರಮವು ದಿನದಿನವೂ ಮಾರ್ಪಡುತ್ತಿದೆ. ದಿನದಿನಕ್ಕೂ ಬದಲಾಯಿಸುತ್ತಿರುವ ಪ್ರಪಂಚದಲ್ಲಿ ಮಾರ್ಪಾಡಾಗುವುದೇ ಜೀವನದ ಗುರುತು. ಯಾವದು ಮಾರ್ಪಡುವದಿಲ್ಲವೋ ಅದು ನಿರ್ಜೀವ; ಯಾವದು ಮಾರ್ಪಡುತ್ತಿರುವದೋ

ಅದೇ ಸಜೀವ. ರೈಲ್ವೆ, ಹಡಗು, ಜಹಜುಗಳು, ವಾಯು ವಿಮಾನಗಳು, ಆಕಾಶ ಸ್ಫುಟನಿಕೆಗಳು-ಹೀಗೆ ಒಂದಾಗುತ್ತಲೊಂದು ಮನೋವೇಗದಿಂದ ಬಂದು ಕಾಣಿಸಿ ಕೊಂಡಿರುವ ಜಗತ್ತಿನಲ್ಲಿ ಹಳೆಯ ಒಡ್ಡರಬಂಡಿಯಲ್ಲಿಯೇ ಪ್ರಯಾಣ ಮಾಡುವೆನೆನ್ನುವ ಮೂರ್ಖನು ಯಾವನಿರುವನು? ಬಾಂಬುಗಳಿಂದಲೂ ವಿಷವಾಯುಗಳಿಂದಲೂ ಯುದ್ಧವು ಜರುಗುವ ಈ ಕಾಲದಲ್ಲಿ ಬಿಲ್ಲುಬಾಣಗಳನ್ನು ಯಾವ ತಿಳಿಗೇಡಿಯು ಹುಡುಕಿಯಾನು? ಹೀಗೆಯೇ ಧರ್ಮವೂ ಕಾಲಕ್ಕೆ ತಕ್ಕಂತೆ ಬದಲಾಯಿಸಬೇಡವೆ? ಶಾಸ್ತ್ರಗಳೂ ಕಾಲಕ್ಕೆ ತಕ್ಕಂತೆ ಮಾರ್ಪಡಬೇಡವೆ? ಆಚಾರಗಳೂ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳಬೇಡವೆ?-ಎಂದು ನವೀನವಿಚಾರಧಾರೆಯವರ ಪ್ರಶ್ನೆಗಳು ಆಗಿಂದಾಗ್ಗೆ ಕೇಳಬರುತ್ತಿರುವವು.

ಇಂಥ ಪ್ರಶ್ನೆಗಳನ್ನು ಸ್ವಲ್ಪ ಸಾವಧಾನದಿಂದ ವಿಮರ್ಶಿಸಬೇಕಾದದ್ದು ಅವಶ್ಯವಾಗಿರುತ್ತದೆ. ಪ್ರಪಂಚವು, ಎಂದರೆ ನಮ್ಮ ಭೂಮಂಡಲದಲ್ಲಿರುವ ಜನರ ಕೆಲವು ವ್ಯವಹಾರಗಳು, ಬೇಗಬೇಗನೆ ಬದಲಾಯಿಸುತ್ತಿರುವದು ನಿಜ. ಜನರಿಗೆ ತಮ್ಮ ಸುತ್ತಲೂ ಇರುವ ದೃಶ್ಯಗಳ ತಿಳಿವಳಿಕೆಯು ಹೆಚ್ಚುಹೆಚ್ಚಾಗಿ ಗೊತ್ತಾಗುತ್ತಿರುವದೂ ನಿಜ; ಆ ತಿಳಿವಳಿಕೆಯನ್ನು ಅವರು ಉಪಯೋಗಿಸಿಕೊಂಡಂತೆಲ್ಲ ಅವರ ವ್ಯವಹಾರಕ್ರಮವು ಮಾರ್ಪಡುತ್ತಿರುವದೂ ನಿಜ. ಆದರೆ ಅಷ್ಟುಮಾತ್ರದಿಂದ ಇಡಿಯ ವಿಶ್ವವೇ ಮಾರ್ಪಡುತ್ತಿರುವದೆಂದು ಭಾವಿಸಬಹುದೆ? ಭೌತಿಕವಿಜ್ಞಾನವು ಹೆಚ್ಚಾದಂತೆಲ್ಲ ಪದಾರ್ಥಗಳ ಸ್ವಭಾವದ ವಿಷಯಕ್ಕೆ ನಮ್ಮ ತಿಳಿವಳಿಕೆಯ ಕ್ಷೇತ್ರವೂ ವಿಶಾಲವಾಗಿರುತ್ತದೆ. ಆದರೆ ಆ ವಿಜ್ಞಾನದ ಬೆಳೆವಣಿಗೆಗೆ ಆಧಾರವಾಗಿರುವ ನಿಯಮಗಳೂ ಮಾರ್ಪಡುತ್ತಿರುವವೇನು? ಇಲ್ಲ. ಹಾಗಾದರೆ ಧರ್ಮವೂ ಶಾಸ್ತ್ರಗಳೂ ಹೆಚ್ಚುಕಡಿಮೆಯಾಗುತ್ತಾಹೋಗಬೇಕು-ಎಂಬ ಅಭಿಪ್ರಾಯದಲ್ಲಿ ಯಾವ ಹುರುಳು ಇದೆ?

ನಮ್ಮ ಸುತ್ತಲೂ ಇರುವ ಭೂಲೋಕದ ದೃಶ್ಯಗಳನ್ನೇ ನೋಡಿರಿ. ಮನುಷ್ಯನು, ಮೃಗಗಳು, ಪಶುಪಕ್ಷಿಕ್ರಿಮಿಕೀಟಾದಿಗಳು, ಗಿಡಮರಬಳ್ಳಿಗಳು, ಖನಿಜವಾದ ಧಾತುಗಳು- ಇವುಗಳ ವಿಂಗಡವು ಸಾವಿರಾರು ವರ್ಷಗಳಿಂದ ಇರುವಂತೆಯೇ ಇರುವದಲ್ಲವೆ? ಈ ಪದಾರ್ಥವರ್ಗಗಳ ವಿಷಯಕ್ಕೆ ನಮ್ಮ ವಿಚಾರಕ್ರಮವು ಸೂಕ್ಷ್ಮವಾದಂತೆಲ್ಲ ತಿಳಿವಳಿಕೆಯ ಕ್ರಮವು ಹೆಚ್ಚುಹೆಚ್ಚು ವಿಶಾಲವಾಗಿರಬಹುದು; ಮುಂದೆ ನಾವು ವಿಚಾರಸರಣಿಯನ್ನು ಬಿಟ್ಟರೆ ಅದು ಸಂಕುಚಿತವೂ ಆಗಬಹುದು. ಆದರೆ ಮನುಷ್ಯನು ಮನುಷ್ಯನೇ, ಇತರ ಪ್ರಾಣಿಗಳು ಇತರ ಪ್ರಾಣಿಗಳೇ, ಅಚೇತನವಸ್ತುಗಳು ಅಚೇತನ ವಸ್ತುಗಳೇ. ಅವುಗಳ ಸ್ವಭಾವಗಳೂ ಎಂದಿನಂತೆಯೇ ಇದ್ದು ಕಾಲಾನುಸಾರವಾಗಿ ಕೆಲಕೆಲವು ಮಾರ್ಪಾಡುಗಳನ್ನು ಹೊಂದುತ್ತಿರುವವು. ಅಷ್ಟೆ ಇದು ಆಧಿಭೌತಿಕಪ್ರಪಂಚದ ವಿಚಾರ. ಈಗ ಆಧಿದೈವಿಕಪ್ರಪಂಚವನ್ನು ಪರೀಕ್ಷಿಸಿದರೆ ಸೂರ್ಯ, ಚಂದ್ರ, ಗ್ರಹಗಳು,

ನಕ್ಷತ್ರಗಳು-ಎಲ್ಲವೂ ಕೆಲಕೆಲವು ನಿಯಮಗಳಿಗೆ ಒಳಪಟ್ಟೇ ತೋರಿಕೊಳ್ಳುತ್ತಿವೆ. ಅವುಗಳಲ್ಲಿ ತೋರಿಬರುವ ಅಲ್ಪಸ್ವಲ್ಪ ಮಾರ್ಪಾಡುಗಳೂ ಗೊತ್ತಾದ ಪ್ರಕೃತಿನಿಯಮಗಳಿಗೆ ಅನುಸಾರವಾಗಿಯೇ ಇರುತ್ತವೆ. ಸೂರ್ಯಚಂದ್ರಾದಿಗಳ ಸಂಬಂಧದಿಂದ ಆಗುವ ಋತುಮಾನಗಳೂ ಅವುಗಳಿಂದ ಪ್ರಾಣಿಗಳ ಮತ್ತು ಮನುಷ್ಯನ ಶರೀರೇಂದ್ರಿಯಗಳ ಮೇಲೆ ಆಗುತ್ತಿರುವ ಪರಿಣಾಮಗಳೂ ನಿಯಮಬದ್ಧವಾಗಿಯೇ ಆಗುತ್ತಿರುವವು. ಅಲ್ಲವೆ?

ಈಗ ಆಧ್ಯಾತ್ಮಿಕಪ್ರಪಂಚದತ್ತ ನಮ್ಮ ಬಗೆಗಣ್ಣನ್ನು ಹೊರಳಿಸೋಣ. ಮನುಷ್ಯನ ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ-ಇವುಗಳು ಅನಾದಿಕಾಲದಿಂದಲೂ ಕೆಲವು ನಿಯಮಗಳಿಗೆ ಒಳಪಟ್ಟೇ ಪ್ರವರ್ತಿಸುತ್ತಿರುವವು. ಇಂದ್ರಿಯಗಳಲ್ಲಿ ಚಕ್ಷುರಿಂದ್ರಿಯವು ಶ್ರೋತ್ರೇಂದ್ರಿಯದ ಕೆಲಸವನ್ನು ಯಾವ ಯುಗದಲ್ಲಿಯೂ ಮಾಡಲಿಲ್ಲ; ಮುಂದೆ ಯಾವ ಯುಗದಲ್ಲಿಯಾದರೂ ಮಾಡೀತೆಂದು ನಿರೀಕ್ಷಿಸುವ ಹಾಗೂ ಇಲ್ಲ. ಮನಸ್ಸು ಇಂದ್ರಿಯಗಳ ಮೂಲಕವೇ ಹೊರಗಿನ ಪ್ರಪಂಚವನ್ನು ಕಂಡುಕೊಳ್ಳಬೇಕು; ತನ್ನೊಳಗೆ ಸುಖ ದುಃಖಗಳನ್ನು ಹೊಂದಿಯೇ ಹರ್ಷವಿಷಾದಗಳನ್ನು ಅನುಭವಿಸಬೇಕು. ಬುದ್ಧಿಯು ತರ್ಕನಿಯಮಬದ್ಧವಾಗಿಯೇ ವಿಚಾರಮಾಡಬೇಕು. ಅಹಂಕಾರವು ತನ್ನ ಅಭಿಮಾನಕ್ಕೆ ತಕ್ಕಂತೆಯೇ ಮಾನವನಿಗೆ ಸುಖದುಃಖಗಳನ್ನು ತಂದುಕೊಡಬೇಕು. ಇವುಗಳಲ್ಲಿ ಯಾವವೂ ಭೌತಿಕಶಾಸ್ತ್ರದ ತಿಳಿವಳಿಕೆಯಿಂದ ಸ್ವಭಾವಪರಿವರ್ತನೆಯನ್ನು ಹೊಂದುವದಿಲ್ಲ. ಅಲ್ಲವೆ?

ಸನಾತನಧರ್ಮ, ಧರ್ಮಕ್ಕೆ ಹೊಂದಿಕೆಯಾಗುವ ಸದಾಚಾರ, ಪರಮಾರ್ಥದ ವಿಚಾರಕ್ರಮ-ಇವುಗಳೆಲ್ಲವೂ ಈ ಆಧ್ಯಾತ್ಮಿಕಪ್ರಪಂಚದ ನಿಯಮಗಳಿಗೆ ಸಂಬಂಧಪಟ್ಟಿರುತ್ತವೆ. ಕಾಲಕ್ರಮದಿಂದ ಮನುಷ್ಯನ ವೇಷಭೂಷಣಾದಿಗಳೂ ಬಾಹ್ಯ ಜೀವನಕ್ರಮವೂ ವಿದ್ಯಾಭ್ಯಾಸವೂ, ರಾಷ್ಟ್ರವ್ಯವಸ್ಥೆಯ ಕ್ರಮವೂ ಮಾರ್ಪಡುತ್ತಾ ಹೋಗಬಹುದು. ಆದರೆ ಆ ಮಾರ್ಪಾಡಿನಿಂದ ಆಗುವ ಪುರುಷಾರ್ಥಗಳು ಅಥವಾ ಅನರ್ಥಗಳು ಕೆಲವು ನಿತ್ಯನಿಯಮಗಳಿಗೆ ಒಳಪಟ್ಟು ಎಂದೆಂದಿಗೂ ಹಾಗೆಯೇ ಆಗುತ್ತಿರುವವು. ಆ ನಿಯಮಗಳು ಎಂದೆಂದಿಗೂ ಮಾರ್ಪಡದ ಪರಮಾರ್ಥದ ಆಧಾರದಿಂದಲೇ ಏರ್ಪಟ್ಟಿರುವವು. ಅವುಗಳು ಎಂದಿಗೂ ಮಾರ್ಪಡುವ ಸಂಭವವೇ ಇಲ್ಲ. ಆ ನಿಯಮಗಳ ಕ್ರಮಪಡಿಸಿದ ತಿಳಿವಳಿಕೆಯೇ ಶಾಸ್ತ್ರ.

ಶಾಸ್ತ್ರವೇ ಮಾಡಬಹುದಾದದ್ದು, ಮಾಡಬಾರದ್ದು-ಎಂಬುದಕ್ಕೆ ಪ್ರಮಾಣ. ಶಾಸ್ತ್ರವೇ ಪರಮಾರ್ಥ, ತೋರಿಕೆಯ ದೃಶ್ಯ-ಇವುಗಳ ನಿರ್ಣಯಕ್ಕೆ ಆಧಾರ. **ಸಂ-29, 44**

# ಸರಳ ಜೀವನ

ಮಾನವ, ಹೆಚ್ಚಿನ ದುಂದುಗಾರಿಕೆಯ, ಆಡಂಬರದ, ತೋರುಗಾಣಿಕೆಯ ಜೀವನವನ್ನು ಬಿಟ್ಟುಬಿಡು. ಅದಕ್ಕೆ ಹೆಚ್ಚಿನ ಹಣವು ಬೇಕಾಗುವದು, ಆ ಹಣದ ಸಂಪಾದನೆಗಾಗಿ ಅನವಶ್ಯವಾಗಿ ಹೆಚ್ಚು ಶ್ರಮಿಸಬೇಕಾಗುವದು; ಜೀವನವು ಕೃತಕವಾಗುವದು, ನಿಷ್ಪ್ರಯೋಜನವಾಗುವದು, ಅನರ್ಥಕಾರಿಯೂ ಆಗಬಹುದು.

ನಿನ್ನ ಉಡುಪಿಗೆ ಅವಶ್ಯವಾದಷ್ಟೇ ಬಟ್ಟೆಗಳನ್ನು ಧರಿಸಬೇಕು. ಉಪಯೋಗಕ್ಕೆ ಬರುವ, ಆದಷ್ಟು ಕಡಿಮೆಯ ಬೆಲೆಯ, ಚೊಕ್ಕಟವಾಗಿಟ್ಟುಕೊಳ್ಳುವದಕ್ಕೆ ಸುಲಭವಾಗಿರುವ ಅಂದವಾದ ಬಟ್ಟೆಗಳನ್ನುಪಯೋಗಿಸು. ಇದು ನೋಡುವವರಿಗೂ ಹರ್ಷವನ್ನುಂಟು ಮಾಡುವದು; ನಿನ್ನ ವ್ಯವಹಾರದಲ್ಲಿ ಯಾವ ಕಿರಿಕಿರಿಯೂ ಇಲ್ಲದೆ, ಮನಸ್ಸಿಗೆ ನೆಮ್ಮದಿಯೂ ದೊರಕುವದು.

ನಿನ್ನ ಆಹಾರವು ಸಾತ್ತ್ವಿಕವಾಗಿರಲಿ. ಆರೋಗ್ಯ, ಬಲ-ಇವುಗಳಿಗೆ ಬೇಕಾದ ಆಹಾರವನ್ನು ಹಿತಮಿತವಾಗಿರುವಂತೆ ಸೇವಿಸು. ಇದರಿಂದ ಇಂದ್ರಿಯಗಳೂ ಮನಸ್ಸೂ ಶುದ್ಧವಾಗುವವು.

ನಿನ್ನ ನುಡಿಯು ಸತ್ಯವಾಗಿ ಜನಪ್ರಿಯವಾಗಿರಲಿ, ಇಹಲೋಕದ ಮತ್ತು ಪರಲೋಕದ ಸುಖಕ್ಕೆ ಅನುಕೂಲವಾಗಿಲ್ಲದ ವ್ಯರ್ಥಾಲಾಪಗಳನ್ನು ಬಿಟ್ಟುಬಿಡು. ನಿನ್ನ ಸುತ್ತುವಳೆಯ ದವರಿಗೂ ಇದರಿಂದ ಲಾಭವಾಗುವದು, ನಿನ್ನ ಮನಸ್ಸಿನ ಆಲೋಚನೆಗಳೂ ಇದಕ್ಕೆ ಅನುಗುಣವಾಗುವವು.

ನಿನ್ನ ಬಗೆಯಲ್ಲಿ (ಅಂತಃಕರಣದಲ್ಲಿ) ಸದ್ಭಾವನೆಗಳೇ ಇರಲಿ; ಸದ್ವಿಚಾರಗಳೇ ತುಂಬಿರಲಿ. ಮೊಟ್ಟ ಮೊದಲು ಸರ್ವಾತ್ಮನಾದ ಪರಮೇಶ್ವರನಲ್ಲಿ ಶ್ರದ್ಧಾಭಕ್ತಿಗಳನ್ನು ಸಂಪಾದಿಸಿಕೊ. ನಿನ್ನ ಸಂಗಡಿಗರು ಇಂಥ ವಿಚಾರದವರೇ ಆಗಿರುವಂತೆ ನೋಡಿಕೊ. ಇದರಿಂದ ಮನಸ್ಸು ನಿರ್ಮಲವಾಗುವದು, ಪರಮೇಶ್ವರನು ನಿನ್ನಲ್ಲಿ ಪ್ರಸನ್ನನಾಗುವನು. ಎಲ್ಲರಲ್ಲಿಯೂ ನಿನಗೆ ಮೈತ್ರಿಯೂ ಕರುಣೆಯೂ ಉಪಕಾರಬುದ್ಧಿಯ ಉಂಟಾಗುವದು.

ಮನಸ್ಸು, ವಾಕ್ಕು-ಈ ಎರಡೂ ಒಂದಕ್ಕೊಂದು ಹೊಂದಿಕೆಯಾಗಿದ್ದರೆ ನಿನ್ನ ನಡೆಯೂ ಇವಕ್ಕೆ ಅನುಗುಣವಾಗಿಯೇ ಮಾರ್ಪಡುವದು. ನಿನ್ನ ಶರೀರಪೋಷಣೆಗೂ ಕುಟುಂಬಪೋಷಣೆಗೂ ಬೇಕಾದ ಸಾಮಗ್ರಿಗಳನ್ನು ಧರ್ಮದಿಂದಲೇ ಸಂಪಾದಿಸುವೆ ನೆಂದು ಸಂಕಲ್ಪಿಸಿಕೊ. ಜನರು ನಿನ್ನನ್ನು ಮೋಸಪಡಿಸುವರೆಂದು ಅಂಜದಿರು. ನಿನ್ನ ಸಾತ್ತ್ವಿಕತನವೇ ನಿನ್ನ ಸುತ್ತಲಿನ ಜನರ ನಡೆಯನ್ನು ಸುಧಾರಿಸುವದು. ಇಹಪರಸುಖಗಳು ನಿನಗೆ ಕಟ್ಟಿಟ್ಟಬುತ್ತಿಯಾಗುವದು. ನಡೆನುಡಿಬಗೆಗಳು ಒಂದಾಗಿರುವ ಸರಳ ಜೀವನದವರಿಗೇ ಪರಮಪುರುಷಾರ್ಥವು ಮೀಸಲಾಗಿರುವದು. ಸಂ-27, 107

# ಗುರುಪರಮೇಶ್ವರನಲ್ಲಿ ಭಕ್ತಿ

ಶ್ವೇತಾಶ್ವತರೋಪನಿಷತ್ತಿನಲ್ಲಿ ಒಂದು ವಾಕ್ಯವಿದೆ : "ಯಾವನಿಗೆ ದೇವರಲ್ಲಿ ಪರಮಭಕ್ತಿಯಿರುವದೋ, ದೇವರಲ್ಲಿರುವಷ್ಟೇ ಗುರುವಿನಲ್ಲಿಯೂ ಭಕ್ತಿಯಿರುವದೋ ಆತನಿಗೆ ಈ ಹೇಳಿದ ವಿಷಯಗಳು ಮನದಟ್ಟಾಗುವವು."

"ನೀವು ಈಶ್ವರ, ಜೀವ, ಕಮ್ಯೂನಿಸ್ಟ್ ರಾಷ್ಟ್ರದಲ್ಲಿ ಧಾರ್ಮಿಕ ವಿಚಾರದಲ್ಲಿರುವ ವ್ಯಕ್ತಿ ಸ್ವಾತಂತ್ರ್ಯ-ಇವುಗಳ ಪರಾಮರ್ಶಮಾಡಿದಿರಷ್ಟೆ; ಆದರೆ ಈಶ್ವರನ ಅಸ್ತಿತ್ವದಲ್ಲಿ ಧಾರ್ಮಿಕತೃಪ್ತಿಯು ಪುರುಷಾರ್ಥಪರವೆಂಬುದರಲ್ಲಿಯೂ ನಂಬಿಕೆಯಿರುವವರಿಗೆ ನಿಮ್ಮ ಪಕ್ಷದಲ್ಲಿ ಸ್ಥಾನವಿಲ್ಲವೇಕೆ?" ಎಂದು ಪತ್ರಿಕೆಯ ಸಂಪಾದಕರು ಕೇಳಿದ್ದಕ್ಕೆ ಖ್ರುಶ್ಚಾವ್‌ರವರು ಕೊಟ್ಟ ಉತ್ತರವು ಮನನೀಯವಾಗಿದೆ : **"ಈಶ್ವರನಲ್ಲಿ ನಂಬಿಕೆಯಿರುವದು ನಮ್ಮ ಕಮ್ಯೂನಿಸ್ಟು ನೀತಿಗೆ ವಿರುದ್ಧವೆಂದು** ನಮ್ಮ ಭಾವನೆ; ಆದರೆ ಜನರು ಯಾವದಾದರೂ ಮತವನ್ನು ಇಟ್ಟುಕೊಂಡಿದ್ದರೆ ಅವರನ್ನೇನೂ ಅದಕ್ಕಾಗಿ ನಾವು ಹಿಂಸೆಮಾಡುವದಿಲ್ಲ. ಏಕೆಂದರೆ ಇದು ಅವರವರ ಮನಸ್ಸಾಕ್ಷಿಗೆ ಸೇರಿದ ಮಾತಾಗಿದೆ." ಸಂಪಾದಕರು 'ಆದರೂ ಯಾವದಾದರೊಂದು ದೇವತೆಯಲ್ಲಿ ನಂಬಿಕೆಯಿಡದ ಜನಾಂಗವಾಗಲಿ, ಮಹಾದೇಶವಾಗಲಿ, ಈವರೆಗೆ ಎಲ್ಲಿಯೂ ಇರಲಿಲ್ಲವಷ್ಟೆ?' ಎಂದು ಹೇಳಲು ಖ್ರುಶ್ಚಾವ್‌ರು ಕೊಟ್ಟ ಉತ್ತರವು ಪರಿಶೀಲಿಸತಕ್ಕದ್ದಾಗಿದೆ:

"ಇದನ್ನು ಸ್ವಲ್ಪ ವಿಶದಗೊಳಿಸುವದಕ್ಕೆ ನಾನು ಹೇಳತಕ್ಕದ್ದಿದೆ. ಯಾವದೊಂದು ದೇಶದಲ್ಲಿಯೂ ಜನರೆಲ್ಲ ಒಂದೇ ಮತದವರಾಗಿದ್ದದ್ದು ಎಂದಿಗೂ ಇಲ್ಲ; ಎಲ್ಲ ಜನರೂ ಈಶ್ವರನ ಅಸ್ತಿತ್ವವನ್ನು ನಂಬಿದ್ದಿಲ್ಲ. ನಮ್ಮಲ್ಲಿಯೂ ಈಶ್ವರನನ್ನು ನಂಬುವ ಆಸ್ತಿಕರು ಇನ್ನೂ ಇರುತ್ತಾರೆ. ಆದ್ದರಿಂದ ಅವರು ನಂಬಿಕೊಂಡಿರಲಿ ! ದೇವರನ್ನು ನಂಬುವದೂ ಬಿಡುವದೂ ಒಬ್ಬೊಬ್ಬ ವ್ಯಕ್ತಿಗೆ ಸೇರಿದ್ದು, ಅದು ಅವನವನ ಮನಃಸಾಕ್ಷಿಗೆ ಸಂಬಂಧಿಸಿದ್ದು. **ಎಷ್ಟೋವೇಳೆ ಒಂದೇ ಕುಟುಂಬದಲ್ಲಿಯೇ ನಂಬುವವರೂ ಇರುತ್ತಾರೆ, ನಂಬದವರೂ ಇರುತ್ತಾರೆ. ಆದರೆ ಈಶ್ವರನಲ್ಲಿ ನಂಬಿಕೆಯಿರುವವರು ದಿನದಿನಕ್ಕೂ ಕಡಿಮೆಯಾಗುತ್ತಿದ್ದಾರೆ; ತರುಣರು ದೊಡ್ಡವರಾಗುತ್ತಿದ್ದಾರೆ, ಅವರಲ್ಲಿ ಈಶ್ವರನನ್ನು ನಂಬದವರೇ ಆಸ್ತಿಕರಿಗಿಂತ ಹೆಚ್ಚಿನ ಸಂಖ್ಯೆಯವರಾಗಿರುತ್ತಾರೆ. ಜನಸಾಮಾನ್ಯದ ವಿದ್ಯಾಭ್ಯಾಸ, ಭೌತಿಕವಿಜ್ಞಾನದ ತಿಳಿವಳಿಕೆಯ ಪ್ರಸಾರ, ಪ್ರಕೃತಿನಿಯಮಗಳ ವಿಮರ್ಶೆ-ಇವುಗಳಿಂದಾಗಿ ಈಶ್ವರನಲ್ಲಿ ನಂಬಿಕೆಯಿಡುವದಕ್ಕೆ ಅವಕಾಶವೇ ದೊರಕುವಂತಿಲ್ಲ."**

ವಿದ್ಯಾಶಾಲೆಗಳಲ್ಲಿ ಮತವಿಚಾರವನ್ನು ಬೋಧಿಸಕೂಡದು-ಎಂಬ ಶಾಸನವು ಇರುತ್ತದೆ. ಮನೆಗಳಲ್ಲಿ ತಾಯಿತಂದೆಗಳಿಗೆ ನಿತ್ಯಜೀವನದ-ಹೊಟ್ಟೆಬಟ್ಟೆಯ-ವಿಚಾರಗಳು ಹೆಚ್ಚು

ಕರೆಕರೆಯನ್ನು ಮಾಡುತ್ತಿರುವದರಿಂದ ಅವರು ತಮ್ಮ ಮಕ್ಕಳಿಗೆ ಮತವಿಚಾರವನ್ನು ತಿಳಿಸಿಕೊಡುವದಕ್ಕೆ ಅವಕಾಶವೇ ದೊರಕುವಹಾಗಿಲ್ಲ. ಹೀಗಾಗಿ ಈಶ್ವರನಲ್ಲಿ ಭಕ್ತಿ, ಗುರುವಿನಲ್ಲಿ ಭಕ್ತಿ-ಎಂಬ ಮಾತುಗಳಿಗೆ ಅರ್ಥವೇನೆಂಬುದೇ ನಮ್ಮ ಬಾಲಕರಿಗೆ ತಿಳಿಯದೆಹೋಗುವ ಸಂಭವವೂ ಉಂಟಾಗಿಬಿಟ್ಟಿದೆ ಎನ್ನಬಹುದು !

ಇದನ್ನು ಹಿರಿಯರಾದವರು ಮನದಂದುಕೊಳ್ಳುವದು ಅವಶ್ಯ. ನಮ್ಮಲ್ಲನೇಕರು ನಮ್ಮ ಮಕ್ಕಳಿಗೆ ಓದುಬರಹವನ್ನು ಕಲಿಸಿ, ಅವರಿಗೆ ಕಾಲೇಜುಗಳೆಂಬ ಪ್ರೌಢವಿದ್ಯಾ ಶಾಲೆಗಳಲ್ಲಿ ತಿಳಿವಳಿಕೆಯನ್ನು ಕೊಟ್ಟು ಅವರ ಜೀವನವು ಸುಖಮಯವಾಗಿರಬೇಕೆಂದು ನಮ್ಮ ಕೈಯಲ್ಲಾದ ಪ್ರಯತ್ನವನ್ನೆಲ್ಲ ಮಾಡುತ್ತಿದ್ದೇವೆ. ಆದರೆ ಅವರ ಅಂತಃಕರಣದಲ್ಲಿ ಪರಮಾತ್ಮನ ಅಸ್ತಿತ್ವಕ್ಕೆ ಸ್ಥಳವು ಇರಬೇಕೆಂಬ ಹಾರೈಕೆಯು ನಮ್ಮ ಮನಸ್ಸಿನಲ್ಲಿ ನಿಜವಾಗಿ ಇದೆಯೆ? "ಈಶ್ವರನಲ್ಲಿಯೂ ಗುರುಗಳಲ್ಲಿಯೂ ಭಕ್ತಿ ಇರುವನಿಗೆ ಅಧ್ಯಾತ್ಮವಿಚಾರಗಳ ಮರ್ಮವು ಶಾಸ್ತ್ರವಾಕ್ಯದಲ್ಲಿ ನಮಗೆ ಶ್ರದ್ಧೆಯಿದೆಯೆ? ಹಾಗಿದ್ದರೆ ನಮ್ಮ ಮಕ್ಕಳಿಗೆ ಆ ಸುಖಶಾಂತಿಗಳು ಬೇಡವೆಂದೇ ನಮ್ಮ ಅಭಿಲಾಷೆಯೆ? ಈ ಪ್ರಶ್ನೆಗೆ ನಮ್ಮಲ್ಲಿ ನಾವು ಮೊದಲು ಉತ್ತರವನ್ನು ಕೊಟ್ಟುಕೊಳ್ಳಬೇಕು.

ವರ್ಷವರ್ಷವೂ ಕ್ರೈಸ್ತಜಯಂತಿ, ಮಹಮ್ಮದನ ಜಯಂತಿ, ಕೃಷ್ಣನ ಜಯಂತಿ-ಎಂದು ಹಬ್ಬವನ್ನೂ ಉತ್ಸವವನ್ನೂ ಮಾಡುವವರಿಗೆಲ್ಲ ಇಲ್ಲಿ ಒಂದು ಪ್ರಶ್ನೆಯಿದೆ : ಕ್ರೈಸ್ತನ ಉಪದೇಶವಿರುವ ಕ್ರಿಸ್ತಿಯನ್ನರ ಬೈಬಲಿನಲ್ಲಿ, ಮಹಮ್ಮದನ ಮೂಲಕ ನಮಗೆ ಬಂದಿರುವ ಈಶ್ವರನ ಸಂದೇಶವನ್ನು ನಂಬುವ ಮುಸಲ್ಮಾನರ ಕೊರಾನಿನಲ್ಲಿ, ಶ್ರೀಕೃಷ್ಣ ಭಗವಂತನ ಉಪದೇಶಗಳೆಂದು ನಂಬಿರುವ ಗೀತಾಶ್ಲೋಕಗಳ ಸೂಕ್ತಿಗಳಲ್ಲಿ ಆಯಾ ಮತದವರಾದ ನಿಮಗೆ ನಿಜವಾದ ನಂಬಿಕೆ ಇದೆಯೊ, ಇಲ್ಲವೊ? ಆ ಉಪದೇಶಗಳಂತೆ ನಡೆದುಕೊಂಡರೆ ಇಹದಲ್ಲಿಯೂ ಪರದಲ್ಲಿಯೂ ಸದ್ಗತಿಯಾಗುವದೆಂದು ನೀವು ನಿಜವಾಗಿ ನಂಬುತ್ತೀರೊ, ಇಲ್ಲವೊ? ಇದಕ್ಕೆ ಉತ್ತರವನ್ನು ನಿಮಗೆ ನೀವೇ ಹೇಳಿಕೊಳ್ಳಿರಿ. ರಷಿಯದವರು 'ನಾವು ನಾಸ್ತಿಕರು, ನಮಗೆ ಈಶ್ವರನ ಅಸ್ತಿತ್ವದಲ್ಲಿ ನಂಬಿಕೆಯಿಲ್ಲ' ಎನ್ನುತ್ತಿದ್ದಾರೆ. ಅವರದು ಋಜುಮಾರ್ಗ; ಮನಸ್ಸಿನಲ್ಲಿ ಒಂದು, ಬಾಯಲ್ಲಿ ಇನ್ನೊಂದು, ನಡೆಯಲ್ಲಿ ಮತ್ತೊಂದು-ಹೀಗಿಲ್ಲ. ನಮ್ಮ ದೇಶದವರಾದ ವಾಚಕರುಗಳು ನಿಜವಾಗಿ ಆಸ್ತಿಕರೆಂದಾದರೆ, ಈಶ್ವರನಲ್ಲಿ ನಿಜವಾದ ಅಸ್ತಿತ್ವಬುದ್ಧಿಯು ಅವರಿಗೆ ಇದ್ದರೆ, ಕೂಡಲೆ ನಮ್ಮ ನಡೆನುಡಿಗಳನ್ನು ಅದಕ್ಕೆ ತಕ್ಕಂತೆ ತಿದ್ದಿಕೊಳ್ಳಬೇಕು; ತಮ್ಮ ಮಕ್ಕಳಿಗೂ ಗುರುದೇವತಾ ಭಕ್ತಿಯುಂಟಾಗುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಪಾಠಕಮಹಾಶಯ, ಇದಕ್ಕೆ ನಿಮ್ಮ ಹೃದಯದಿಂದ ಬರುವ ಉತ್ತರವೇನು? ಸಂ-27, 131

# ಗುರುವಾಕ್ಯದಲ್ಲಿ ಶ್ರದ್ಧೆ

ಅಧ್ಯಾತ್ಮಜ್ಞಾನವು ಉಪಾಸನೆಯೆಂದೂ ತತ್ತ್ವಜ್ಞಾನವೆಂದೂ ಎರಡು ಬಗೆಯಾಗಿರುತ್ತದೆ. ಈ ಎರಡು ಜ್ಞಾನಗಳೂ ಗುರುಗಳ ಮೂಲಕವೇ ನಮಗೆ ತಿಳಿಯಬರಬೇಕಾಗಿದೆ. ಏಕೆಂದರೆ ಅವು ಅತೀಂದ್ರಿಯವಾಗಿರುತ್ತವೆ; ಈಗಿನ ನಮ್ಮ ತಿಳಿವಳಿಕೆಯು ಇಂದ್ರಿಯಗಳ ಮೂಲಕವೇ ಬರುತ್ತಿದೆ.

ಗುರುಗಳಲ್ಲಿ ಬರಿಯ ಶಾಸ್ತ್ರವನ್ನು ತಿಳಿದವರು, ವಿಷಯದ ಅನುಭವವನ್ನು ಪಡೆದವರು ಎಂದು ಎರಡು ಬಗೆ. ಶಾಸ್ತ್ರವನ್ನು ತಿಳಿದವರು, ವಿಷಯದ ವಾಕ್ಯಗಳನ್ನು ಸೂರೆಮಾಡಬಹುದು; ಆದರೆ ನಮಗೆ ಅವರ ಪಾಂಡಿತ್ಯವು ಪ್ರಕಟವಾದೀತೇ ಹೊರತು ಅವರ ಉಪದೇಶದಿಂದ ನಮ್ಮ ಅಂತಃಕರಣದಮೇಲೆ ಯಾವ ಪರಿಣಾಮವೂ ಆಗುವದೇ ಇಲ್ಲ. ಆದರೆ ಅನುಭವಿಗಳಾದ ಗುರುಗಳು ಮಾಡಿದ ಉಪದೇಶವು ಕಾರ್ಯಕ್ಷಮ ವಾಗಿರುತ್ತದೆ; ಅದು ನಮ್ಮ ಅಂತಃಕರಣಕ್ಕೆ ತಾಕುತ್ತದೆ; ನಮ್ಮನ್ನು ಸಾಧನೆಗೆ ಹತ್ತಿಸುತ್ತದೆ, ಫಲವನ್ನು ಕೊಡುವವರೆಗೂ ಅಭ್ಯಾಸಮಾಡಬೇಕೆಂದು ಹವಣಿಸುವಂತೆ ಮಾಡಿಸುತ್ತದೆ. ಆದ್ದರಿಂದ ಯಾವ ಗುರುಗಳು ಬರಿಯ ಮಾತಿನಮಲ್ಲರೋ, ಅವರು ಗುರುವಿನ ಆಭಾಸ ಮಾತ್ರ; ಆದರೆ ಯಾರು ನಮಗೆ ಯಾವದಾದರೊಂದು ಮನಸ್ಸಿಗೆ ಮುಟ್ಟುವ ಅನುಭವದ ಮಾತನಾಡುವರೋ ಅವರೇ ನಮಗೆ ನಿಜವಾಗಿ ಗುರುಗಳು.

ಗುರುಗಳನ್ನು ಆರಿಸಿಕೊಳ್ಳುವದರಲ್ಲಿ ಬಹಳ ಎಚ್ಚರಿಕೆ ಇರಬೇಕು. ಬರಿಯ ಖ್ಯಾತಿ, ಲಾಭ, ಪೂಜೆ–ಇವುಗಳಿಗಾಗಿ ಹಾತುವರಿಯುವವರು ಎಂದಿಗೂ ಗುರುಗಳಾಗಲಾರರು. ಆದರೆ ಲೋಕೋಪಕಾರವಾಗಲೆಂದು ಕರುಣೆಯಿಂದ ತತ್ತ್ವವನ್ನು ಉಪದೇಶಮಾಡುವ ಮಹನೀಯರೇ ಗುರುಗಳು. ಸದ್ಗುರುಗಳಾದವರು ಖ್ಯಾತ್ಯಾದಿಗಳನ್ನು ಬಯಸದಿದ್ದರೂ ಅವರ ನಿಜವಾದ ಯೋಗ್ಯತೆಯಿಂದಲೂ ಲೋಕಾನುಗ್ರಹದ ನಿಮಿತ್ತದಿದಲೂ ಅವರ ಕೀರ್ತಿಯು ಹೆಚ್ಚಿರಬಹುದು; ಜನರು ಅವರನ್ನು ಪೂಜಿಸುತ್ತಲೂ ಇರಬಹುದು. ಖ್ಯಾತಿಯಿರಲಿ, ಇಲ್ಲದಿರಲಿ; ಜನರು ಅವರನ್ನು ಗೌರವಿಸುತ್ತಿರಲಿ, ಗೌರವಿಸದಿರಲಿ; ಯಾವ ಮಹನೀಯರ ಸನ್ನಿಧಿಯಲ್ಲಿ ನಮ್ಮ ಮನಸ್ಸಿಗೆ ನೆಮ್ಮದಿಯು ಸಿಕ್ಕುವದೋ ಯಾರ ನಡೆನುಡಿಗಳಿಂದ ನಮ್ಮ ಮನಸ್ಸಿಗೆ ಸಾಧನದ ಅಥವಾ ಸಿದ್ಧಾಂತಜ್ಞಾನದ ಹಾದಿಯು ಕಂಡುಬರುವದೋ, ಅವರನ್ನೇ ಗುರುಗಳೆಂದು ನಂಬಬೇಕು. ಅವರ ವಾಕ್ಯದಲ್ಲಿ ಶ್ರದ್ಧೆಯಿಟ್ಟು ಸಾಧನಮಾಡಬೇಕು; ಅವರ ಉಪದೇಶದಂತೆ ಶ್ರವಣಮನನ ನಿದಿಧ್ಯಾಸನಗಳನ್ನು ಮಾಡಬೇಕು.

ಸದ್ಗುರುವಿಗೆ ನಮಸ್ಕಾರಮಾಡುವದು, ಸಮಯವರಿತು ಆತನನ್ನು ಸಾಧನ ಸಿದ್ಧಾಂತಗಳ ವಿಷಯಕ್ಕೆ ಪ್ರಶ್ನೆಯನ್ನು ಮಾಡುವದು, ಅವಿರತ ಶ್ರದ್ಧಾಭಕ್ತಿಗಳಿಂದ

ಸೇವೆಮಾಡುವದು-ಇವುಗಳೇ ನಮಗೆ ಅಧ್ಯಾತ್ಮಮಾರ್ಗದಲ್ಲಿ ಪ್ರವೇಶವು ಸಿಕ್ಕುವದಕ್ಕೆ ಉಪಾಯಗಳು. ಗುರುವಾಕ್ಯವು ನಮಗೆ ಅನುಭವಕ್ಕೆ ಹೊಂದುಗೆಯಾದರೆ, ಅವರ ಉಪದೇಶದಂತೆ ಅನುಷ್ಠಾನಮಾಡುವಾಗ ನಮಗೆ ಮಾರ್ಗವು ಸುಗಮವಾದರೆ, ಆ ಸಾಧನಾನುಷ್ಠಾನದಿಂದ ಅಜ್ಞಾನದ ಕತ್ತಲೆಯು ತೊಲಗುತ್ತಾ ತಿಳಿವಳಿಕೆಯ ಪ್ರಕಾಶವು ತೋರುತ್ತಾಬಂದರೆ, ಅಲ್ಲಿಂದ ಮುಂದಕ್ಕೆ ಗುರುವಾಕ್ಯವೇ ಶಾಸ್ತ್ರವಾಕ್ಯವಾಗುವದು. ಗುರುಗಳು ದಿನದಿನಕ್ಕೂ ಉಪನ್ಯಾಸಮಾಡಿ ತಿಳಿಸಿಕೊಡಬೇಕಾದದ್ದಿಲ್ಲ; ಅವರು ಹೇಳಿದ್ದನ್ನು ಮನನಮಾಡಿಕೊಂಡು ನಾವು ಅದರಂತೆ ನಡೆದರೆ ಸಾಕು, ನೂರಾರು ಉಪನ್ಯಾಸಗಳಿಗಿಂತಲೂ ಹೆಚ್ಚಿನ ಲಾಭವು ನಮಗೆ ದೊರೆಯುವದು. ಪ್ರತಿದಿನವೂ ಅನುಷ್ಠಾನವನ್ನು ಮಾಡುವಾಗ ಸದ್ಗುರುವನ್ನು ಸ್ಮರಿಸಿಕೊಳ್ಳಬೇಕು; ಆತನೇ ಪ್ರತ್ಯಕ್ಷವಾಗಿರುವ ಪರಮೇಶ್ವರನೆಂದು ಭಾವಿಸಬೇಕು. ಆತನ ವಾಕ್ಯವೇ ವೇದವೆಂದು ಭಾವಿಸಬೇಕು. ಪರಮೇಶ್ವರನ ಸಾನ್ನಿಧ್ಯದಲ್ಲಿದ್ದದ್ದಕ್ಕೆ ನಮಗೆ ಮನಃಶಾಂತಿಯು ದೊರಕಿದ್ದೇ ಗುರುತು; ವೇದವಾಕ್ಯವನ್ನು ಶ್ರವಣಮಾಡಿದ್ದಕ್ಕೆ ಹೊಸ ಆಧ್ಯಾತ್ಮಿಕ ಅನುಭವವು ಮನದಲ್ಲಿ ಮಿಂಚಿದ್ದೇ ಗುರುತು.

ನಮಸ್ಕಾರ, ಪ್ರಶ್ನೆ, ಸೇವೆ-ಇವು ಹೊರಗಿನ ಸಾಧನಚಿಹ್ನೆಗಳು; ಅವುಗಳಲ್ಲಿ ಮಾಯಾವಿತ್ವವೂ ಇರಬಹುದಾಗಿದೆ. ಎಷ್ಟೋ ಜನರು ಗುರುಸೇವೆಯನ್ನು ಮಾಡಿರುತ್ತಾರೆ, ಅವರಲ್ಲಿ ಅಧ್ಯಾತ್ಮವಿಚಾರವನ್ನು ಮಾಡಿರುತ್ತಾರೆ. ಆದರೂ ತತ್ತ್ವದ ಅರಿವು ಅವರ ಹೃದಯದಲ್ಲಿ ಸುಳಿದಿರುವದಿಲ್ಲ. ಇದಕ್ಕೆ ಕಾರಣವೇನೆಂದರೆ ಸಿದ್ಧಿಗೆ ಏಕಾಂತಕಾರಣವಾದ ಶ್ರದ್ಧೆಯು ಅವರ ಹೃದಯದಲ್ಲಿರುವದಿಲ್ಲ. ಅವರು ಗುರುವಾಕ್ಯದಲ್ಲಿ ಶ್ರದ್ಧೆಯಿಟ್ಟು ಅನುಷ್ಠಾನವನ್ನು ಮಾಡಿರುವದಿಲ್ಲ; ಗುರುವಿನಲ್ಲಿ ಅವರಿಗೆ ಆಂತರಿಕ ಅಶ್ರದ್ಧೆಯೂ ಇರುತ್ತದೆ. ನೆಪಮಾತ್ರಕ್ಕೆ ಗುರುಸಾನ್ನಿಧ್ಯದಲ್ಲಿದ್ದರೆ ಸಾಲದು. ಶಿಷ್ಯನು ಇಂದ್ರಿಯಗಳನ್ನು ಸಂಯಮಮಾಡಿಕೊಂಡಿರಬೇಕು; ಸಾಧನಸಿದ್ಧಾಂತಗಳಲ್ಲಿಯೇ ತಾತ್ಪರ್ಯವುಳ್ಳವನಾಗಿರಬೇಕು. ಯಾವದಾದರೊಂದು ವ್ಯವಹಾರದ ನಿಮಿತ್ತದಿಂದ ಗುರುಸೇವೆಯ ನಟನೆಯನ್ನು ಮಾಡುವವನಿಗೆ ಎಂದಿಗೂ ಸಿದ್ಧಿಯಾಗಲಾರದು. ತೋರಿಕೆಯ ಗುರು ಸೇವೆಗೆ ಹಾರಿಕೆಯ ಜ್ಞಾನವೇ ಫಲವಾಗುವದು. **ಸಂ-23, 283**

## ಗುರುಭಕ್ತಿ, ಗುರು ಪೂರ್ಣಿಮೆ

ವ್ಯಾಸಪೂರ್ಣಿಮೆಯನ್ನು ಗುರುಪೂರ್ಣಿಮೆ ಯೆಂದೂ ಕರೆಯುತ್ತಾರೆ. ಆ ದಿನ ನಮ್ಮ ದೇಶದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಗುರುಗಳ ಆರಾಧನೆಮಾಡುತ್ತಾರೆ. ಗುರುಮೂಲಕವಾಗಿ ಬಂದ ವಿದ್ಯೆಯೇ ವೀರ್ಯವತ್ತಾಗಿರುತ್ತದೆ. ವಿದ್ಯೆಯಿಂದ ಜೀವನ

ಮಾಡುವವರೆಲ್ಲ ಅವರವರ ಗುರುಗಳ ಅನುಗ್ರಹದಿಂದಲೇ ಜೀವನಮಾಡುತ್ತಿರುತ್ತಾರೆನ್ನಬಹುದು. ಆದ್ದರಿಂದ ವಂಶದ ದೃಷ್ಟಿಯಿಂದ ತಂದೆಮಕ್ಕಳಿಗೆ ಇರುವ ಸಂಬಂಧವೇ ವಿದ್ಯಾದೃಷ್ಟಿಯಿಂದ ಗುರುಶಿಷ್ಯರಿಗೆ ಇರುತ್ತದೆ. ಆದ್ದರಿಂದ ತಂದೆತಾಯಿಗಳನ್ನು ಕೃತಜ್ಞತೆಯಿಂದ ಸ್ಮರಿಸುವದಕ್ಕಿಂತಲೂ ಹೆಚ್ಚಾಗಿಯೇ ವಿದ್ಯಾಗುರುಗಳನ್ನು ಶಿಷ್ಯರು ಸ್ಮರಿಸುತ್ತಾರೆ; ಗುರುಪೂರ್ಣಿಮೆಯ ದಿನ ಗುರುಗಳ ಆರಾಧನೆಮಾಡುತ್ತಾರೆ. ವಿದ್ಯೆಯೆಂದರೆ ಅಕ್ಷರವಿದ್ಯೆ ಮಾತ್ರವೇ ಅಲ್ಲ; ಕೈಗಾರಿಕೆ, ಕೃಷಿ, ಸಂಗೀತ, ಚಿತ್ರ, ಶಿಲ್ಪ-ಮುಂತಾದವುಗಳ ತಿಳಿವಳಿಕೆಯೂ ಇದರಲ್ಲಿ ಅಡಕವಾಗುತ್ತದೆ. ಆದ್ದರಿಂದ ಗುರುಪೂರ್ಣಿಮೆಯನ್ನು ಸನಾತನಾರ್ಯರ, ಅಷ್ಟೇಕೆ, ಭಾರತನಿವಾಸಿಗಳೆಲ್ಲರ, ಗುರುಪೂಜಾದಿನವೆಂದು ಭಾವಿಸಿ ಜನಾಂಗಕ್ಕೂ ಒಂದು ವಿಶೇಷ ಉತ್ಸವದಿನವಾಗಿ ಮಾರ್ಪಡಿಸಿಕೊಂಡರೆ ನಮ್ಮ ದೇಶಕ್ಕೇ ಕಲ್ಯಾಣವಾದೀತು.

"ಯಾವನಿಗೆ ದೇವನಲ್ಲಿ ಪರಭಕ್ತಿಯಿರುವದೋ, ದೇವನಲ್ಲಿರುವಂತೆ ಗುರುವಿನಲ್ಲಿಯೂ ಇರುವದೋ, ಅಂಥ ಮಹಾತ್ಮನಿಗೆ ಈ ನಾನು ಹೇಳಿದ ವೇದಾಂತಾರ್ಥಗಳು ಬೆಳಗುವವು" ಎಂಬರ್ಥದ ಮಂತ್ರವು ಶ್ವೇತಾಶ್ವತರ ಮಹರ್ಷಿಗೆ ಹೊಳೆಯಿತು; ಈ ವಾಕ್ಯವನ್ನು ನಾವು ಶ್ರದ್ಧೆಯಿಂದ ನಂಬಿ ನಡೆದುಕೊಂಡರೆ ಶ್ರೇಯಸ್ಸಾಗುವದು.

ಕತ್ತಲೆಯ ಕೋಣೆಯಲ್ಲಿರುವ ಮನುಷ್ಯನು ಬೆಳಕು ಎಲ್ಲೆಲ್ಲಿಯೂ ವ್ಯಾಪಿಸಿರುವ ಬಯಲಿಗೆ ಬಂದರೆ ಸೂರ್ಯಪ್ರಕಾಶವು ಎಷ್ಟು ವಿಸ್ತೃತವಾಗಿ ವ್ಯಾಪ್ತವಗಿರುವದೆಂಬ ಅರಿವು ತಟ್ಟನೆ ಮನದಲ್ಲುಂಟಾಗುವಂತೆ, ತನ್ನ ದೇಹೇಂದ್ರಿಯ ಸಂಘಾತದೊಳಗೆ ಅಭಿಮಾನವೆಂಬ ಕತ್ತಲೆಯಲ್ಲಿ ಬಿದ್ದಿರುವ ಸಾಧಕನು ಸದ್ಗುರುವೆಂಬ ತೇಜೋರಾಶಿಯಲ್ಲಿ ಸೇರಿಕೊಂಡಮಾತ್ರದಿಂದ ಪರಮಾತ್ಮ ಚೈತನ್ಯಜ್ಯೋತಿಯು ಸರ್ವವ್ಯಾಪ್ತಿಯಾಗಿ ಸರ್ವಭೂತಗಳ ಹೃದಯದಲ್ಲಿಯೂ ಸಾಕ್ಷಿಯಾಗಿ ಬೆಳಗುತ್ತಿರುವದೆಂಬರ್ಥವು ಮನದಲ್ಲಿ ಮಿಂಚುವದು. ಸದ್ಗುರುವಿನ ವಂದನ, ಅರ್ಚನ, ಸೇವನ, ಆತ್ಮಾರ್ಪಣ, ಹೃದಯಮಿಲನ-ಮುಂತಾದ ಪ್ರಕಾರಗಳಿಂದ ಮಾಡುವ ಉಪಾಸನೆಯು ಸಕಲಶಾಸ್ತ್ರಗಳ ಪಠನಕ್ಕಿಂತಲೂ ಹೆಚ್ಚಿನ ಲಾಭವನ್ನು ಕೊಡುವದು. ಸದ್ಗುರುವಿನ ಉಪದೇಶವೆಂಬ ಆಗಮದ ಅನುಗ್ರಹದಿಂದಲೂ ಸದ್ಗುರುವು ತೋರಿಕೊಡುವ ಮಾರ್ಗದಲ್ಲಿ ಮಾಡುವ ಮನದಿಂದಲೂ ಆತ್ಮಪ್ರತ್ಯಯಿಕವಾದ ಅನುಭವವು ದೊರಕುವದು.

ಈ ಪೂರ್ಣಿಮೆಯನ್ನು ಅಧ್ಯಾತ್ಮವಿದ್ಯೆಗೇ ವಿಶೇಷವಾಗಿ ಅನ್ವಯಿಸಿಕೊಂಡು ಬಂದಿರುತ್ತಾರೆ. ಒಂದು ದೃಷ್ಟಿಯಿಂದ ಇದು ಯುಕ್ತವೂ ಆಗಿರುತ್ತದೆ. ಏಕೆಂದರೆ ಅಧ್ಯಾತ್ಮವಿದ್ಯೆಯು ಎಲ್ಲಕ್ಕೂ ಹೆಚ್ಚಿನದಾಗಿರುವ, ಇಡಿಯ ಜಗತ್ತಿನ ಸಾರವೇ ಆಗಿರುವ, ಬ್ರಹ್ಮವನ್ನು ತಿಳಿಸುವ ವಿದ್ಯೆಯಾಗಿರುತ್ತದೆ. ಬ್ರಹ್ಮವಿದ್ಯೆಯು ಸಕಲವಿದ್ಯೆಗಳ ಪ್ರತಿಷ್ಠೆಯು,

ಎಲ್ಲಾ ವಿದ್ಯೆಗಳೂ ಕೊನೆಯಲ್ಲಿ ಈ ವಿದ್ಯೆಯಲ್ಲಿ ಸೇರಿ ಮುಗಿಯುವವು ಎಂದು ಉಪನಿಷತ್ತುಗಳಲ್ಲಿ ಹೇಳಿರುತ್ತದೆ. ಆದ್ದರಿಂದ ಗುರುಪೂರ್ಣಿಮೆಯನ್ನು ಬ್ರಹ್ಮವಿದ್ಯಾ ಗುರುಗಳನ್ನು ಸ್ಮರಿಸುವ ಮತ್ತು ಆರಾಧಿಸುವ ದಿನವೆಂದು ಭಾವಿಸಿಯೇ ನಮ್ಮ ದೇಶದಲ್ಲಿ ಗುರ್ವಾರಾಧನೆಯನ್ನು ನಡೆಯಿಸುತ್ತಾ ಬಂದಿರುತ್ತಾರೆ. ಆದ್ದರಿಂದಲೇ ಈ ದಿನವನ್ನು 'ವ್ಯಾಸಪೂರ್ಣಿಮೆ' ಎಂದು ಕರೆಯುವದು; ಏಕೆಂದರೆ ವ್ಯಾಸರ ಮೂಲಕವೇ ನಮಗೆ ಪ್ರವೃತ್ತಿನಿವೃತ್ತಿಧರ್ಮಗಳ ಭಂಡಾರವಾಗಿರುವ ವೇದವೂ ಇತಿಹಾಸವೂ ಪುರಾಣಗಳೂ ದೊರಕಿರುತ್ತವೆ. ಆದ್ದರಿಂದಲೇ ಈ ದಿನ ಸಂನ್ಯಾಸಿಗಳು ಬ್ರಹ್ಮವಿದ್ಯೆಗೆ ಆದಿಗುರುವಾದ ಶ್ರೀಮನ್ನಾರಾಯಣನನ್ನೂ ದ್ವಾಪರಯುಗದಲ್ಲಿ ಅವತರಿಸಿ ಅಧ್ಯಾತ್ಮವಿದ್ಯೆಯ ಸಾರವಾದ ಭಗದ್ಗೀತೆಯನ್ನು ಉಪದೇಶಿಸಿದ ಶ್ರೀಕೃಷ್ಣಭಗವಂತನನ್ನೂ ವ್ಯಾಸರನ್ನೂ ಈಚೆಗೆ ಕಲಿಯುಗದಲ್ಲಿ ಅಧ್ಯಾತ್ಮಧರ್ಮವನ್ನು ಪ್ರಚಾರಕ್ಕೆ ತಂದ ಶ್ರೀ ಶಂಕರಭಗವತ್ಪಾದಾ ಚಾರ್ಯರೇ ಮುಂತಾದ ಮಹನೀಯರನ್ನೂ ಕೃತಜ್ಞತಾಪೂರ್ವಕವಾಗಿ ಪೂಜೆ ಮಾಡುತ್ತಾರೆ.

ವೇದೋಕ್ತವಾದ ನಿವೃತ್ತಧರ್ಮವು ಪ್ರವೃತ್ತಿಧರ್ಮರೂಪವಾದ ವರ್ಣಾಶ್ರಮಧರ್ಮ ದಿಂದ ಚಿತ್ತಶುದ್ಧಿಯನ್ನು ಹೊಂದಿದವರಿಗಾಗಿಯೇ ಮುಖ್ಯವಾಗಿ ಉಪದಿಷ್ಟವಾಗಿರು ವದರಿಂದ, ಈ ಪೂರ್ಣಿಮೆಯ ದಿನ ವರ್ಷಾಕಾಲದ ನಿಮಿತ್ತವಾಗಿ ಸಂಚಾರವನ್ನು ನಿಲ್ಲಿಸಿ ಒಂದು ಕಡೆಯಲ್ಲಿ ನಿಲ್ಲುವ ಪರಿವ್ರಾಜಕರನ್ನು ಅಧ್ಯಾತ್ಮವಿದ್ಯಾಗುರುಗಳ ಪ್ರತಿನಿಧಿ ಗಳೆಂದು ಭಾವಿಸಿ ಗೃಹಸ್ಥರು ಪೂಜಿಸಿ ಆದರಿಸುವ ಪದ್ಧತಿಯು ನಮ್ಮ ದೇಶದಲ್ಲಿ ಈಗಲೂ ಉಳಿದುಕೊಂಡಿದೆ. ವರ್ಣಾಶ್ರಮಧರ್ಮವೆಂಬುದು ನಮ್ಮ ಭರತಖಂಡದಲ್ಲಿ ಮಾತ್ರ ಪ್ರಚಾರದಲ್ಲಿದ್ದು ಇದನ್ನು ದೇಶಾಂತರಕ್ಕೆ ಒಯ್ಯುವ ಪ್ರಯತ್ನವನ್ನು ನಮ್ಮವರು ಎಂದಿಗೂ ಮಾಡಿಯೇ ಇರುವದಿಲ್ಲ. ಈಗ ಭರತಖಂಡದಲ್ಲಿಯೂ ಆ ಧರ್ಮವು ಅನೇಕ ಕಾರಣಗಳಿಂದ- ಮುಖ್ಯವಾಗಿ ಜನರಿಗೆ ಅಜ್ಞಾನವು ಹೆಚ್ಚಿ ಕಾಮವು ಬೆಳೆಯುತ್ತಾ ಬಂದದ್ದರಿಂದ-ಅಲ್ಲಲ್ಲಿ ಬಿರುಕುಬಿಟ್ಟು ಬೀಳುತ್ತಿರುವ ಹಳೆಯ ಕೋಟೆಯಂತೆ ಕಡಿಮೆ ಯಾಗುತ್ತಲೇ ಬಂದಿರುತ್ತದೆ. ಒಂದಾನೊಂದು ಕಾಲದಲ್ಲಿ ಆರ್ಯಧರ್ಮವು ಈಗಿನ ಭರತಖಂಡಕ್ಕಿಂತಲೂ ಆಚೆ ಇರುವ ಅನೇಕ ದೇಶಗಳಲ್ಲಿ ಇರುತ್ತಿತ್ತು. ಕೃಷ್ಣಸಾರಮೃಗವು ಸಂಚರಿಸುತ್ತಿರುವ ದೇಶವೆಲ್ಲ ಇದರ ವ್ಯಾಪ್ತಿಗೆ ಒಳಪಟ್ಟಿರುವದೆಂದು ಸ್ಮೃತಿಕಾರರು ಬರೆದಿರುತ್ತಾರೆ. ನಮ್ಮ ದುರ್ದೈವದಿಂದ ನಮ್ಮ ದೇಶದವರೂ ಧರ್ಮದಿಂದ ಚ್ಯುತರಾದ ದ್ದಲ್ಲದೆ ಇಲ್ಲಿಗೆ ವಿಧರ್ಮದ ಜನರೂ ಬಂದು ನೆಲಸಲು ಅವರ ಸಂಪರ್ಕದಿಂದ ನಮ್ಮ ಆಚಾರವಿಚಾರಗಳು ಬಗೆಬಗೆಯಲ್ಲಿ ಸಂಕರವಾಗಿರುವದರಿಂದ ಈಗ ಸರ್ಕಾರ ದವರು ಕೂಡ ಯಾವದೊಂದು ಮತದವರಿಗೂ ಬೆಂಬಲವನ್ನು ಕೊಡಲಾರದಂಥ ಸ್ಥಿತಿಗೆ ನಾವು ಇಳಿದಿರುತ್ತೇವೆ. ಈಗ್ಗೆ ನಮಗೆ ಶಾಸ್ತ್ರೋಕ್ತವಾದ ಕರ್ಮಗಳ ಆಚರಣೆಯು

ತಪ್ಪಿರುವದು ಹಾಗಿರಲಿ, ಐಹಿಕಜೀವನಕ್ಕೆ ಬೇಕಾದ ಕರ್ಮದಕ್ಷತೆಯೂ ಕೈಬಿಟ್ಟು ಹೋಗಿರುತ್ತದೆ. ಹೀಗೆ ಇಹಪರಸುಖವನ್ನು ಕಳೆದುಕೊಂಡು ನಾವು ವ್ಯಥೆಪಡುತ್ತಿದ್ದೇವೆ.

ಜಾತಿಪ್ರಯುಕ್ತವಾದ ವರ್ಣಾಶ್ರಮಧರ್ಮವು ಎಲ್ಲಾ ದೇಶಕ್ಕೂ ಎಲ್ಲಾ ಕಾಲಕ್ಕೂ ಹೊಂದುವಹಾಗಿಲ್ಲವೆಂಬುದು ನಿಜವಾದರೂ ಮನುಷ್ಯಲೋಕದಲ್ಲಿ ಗುಣಪ್ರಯುಕ್ತವಾದ ವರ್ಣಭೇದಗಳು ಯಾವಾಗಲೂ ಇದ್ದೇ ಇರುವವು. ಕೆಲವರು ಬುದ್ಧಿಜೀವಿಗಳು, ಕೆಲವರು ಬಲಜೀವಿಗಳು, ಕೆಲವರು ಕೃಷಿವಾಣಿಜ್ಯಾದಿವ್ಯಾಪಾರದಿಂದ ಜೀವಿಸುವವರು, ಮತ್ತೆ ಕೆಲವರು ಶ್ರಮಜೀವಿಗಳು–ಹೀಗೆ ಬ್ರಾಹ್ಮಣಾದಿವರ್ಣಗಳ ನೆರಳಾಗಿರುವ ಗುಂಪುಗಳು ಎಲ್ಲಾ ದೇಶದವರಲ್ಲಿಯೂ ಎಲ್ಲಾ ಕಾಲದವರಲ್ಲಿಯೂ ಇದ್ದೇ ಇರುವವು. ಆದರೆ ನಮ್ಮ ದೇಶದಲ್ಲಿ ಏರ್ಪಟ್ಟಿದ್ದ ವರ್ಣಾಶ್ರಮಭೇದವು ಮುಖ್ಯವಾಗಿ ಧರ್ಮದ ಆಧಾರದಿಂದ ಏರ್ಪಟ್ಟಿತ್ತು. ಈಗ್ಗೆ ಧರ್ಮದಲ್ಲಿ ಜನರಿಗೆ ಆದರವು ಕಡಿಮೆಯಾಗುತ್ತಾಬಂದಿರುತ್ತದೆ; ಮುಕ್ಕಾಲು ಭಾಗದವರಲ್ಲಿ ಧರ್ಮಬುದ್ಧಿಯೇ ಲೋಪವಾಗುತ್ತಿದೆ ಎಂದರೂ ಸಲ್ಲುವಂತಿದೆ. ಇಲ್ಲಿ ಧರ್ಮವೆಂಬ ಮಾತಿನಲ್ಲಿ ನಾನು ಶಾಸ್ತ್ರೋಕ್ತವಾದ ಕರ್ಮಗಳನ್ನೂ ಆಚಾರಗಳನ್ನೂ ಲೆಕ್ಕಕ್ಕೆ ಹಿಡಿದಿಲ್ಲ; ಅವುಗಳಿಗೆ ನಿಯಮಗಳೆಂಬ ಹೆಸರನ್ನು ಹಿಂದಿನವರು ಕೊಟ್ಟಿರುತ್ತಾರೆ. ಅವುಗಳು ಎಲ್ಲರಿಗೂ ಒಂದೇ ಆಗಿರುವದು ಸಾಧ್ಯವಲ್ಲ. ಆದರೆ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಭೂತಪ್ರೇಮ, ಈಶ್ವರಭಕ್ತಿ–ಈ ಬಗೆಯ ಮಾನಸ ವ್ರತಗಳಿಂದ ಕೂಡಿರುವ ಧರ್ಮವು ಎಲ್ಲರಿಗೂ ಒಂದೇ ಆಗಿರುವದು ಶಕ್ಯವಿದೆ; ಹಾಗೆ ಇರಬೇಕಾದದ್ದು ಅಪೇಕ್ಷಣೀಯವೂ ಆಗಿರುತ್ತದೆ. ಈ ಧರ್ಮವನ್ನು ಕೂಡ ನಾವು, ಅದೇಕೊ, ಹೆಚ್ಚುಹೆಚ್ಚಾಗಿ ಕಡೆಗಣಿಸುತ್ತಿರುವೆವು. ಇದರ ಫಲವಾಗಿ ಲೋಕದ ಸ್ಥಿತಿಯು ಹಿಡಿತಕ್ಕೆ ಸಿಕ್ಕದೆ ಇದೆ; ಜನರೆಲ್ಲರೂ ದುಃಖಕ್ಕೆ ಒಳಗಾಗಿರುತ್ತಾರೆ.

ಈಗಿನ ಲೋಕವು ಧರ್ಮವನ್ನು ಬಿಟ್ಟು ಹಕ್ಕನ್ನು ಪ್ರಧಾನವಾಗಿ ಎಣಿಸುತ್ತಾಬಂದಿದೆ. ಧರ್ಮವು ಎಲ್ಲಿಗಾದರೂ ಹೋಗಲಿ, ಪ್ರತಿಯೊಬ್ಬನೂ ತನ್ನತನ್ನ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಬೇಕು, ಜನ್ಮಸಿದ್ಧವಾದ ಹಕ್ಕುಗಳನ್ನು ದೊರಕಿಸಿಕೊಂಡು ನಮ್ಮನಮ್ಮ ಯೋಗಕ್ಷೇಮವನ್ನು ನಾವುನಾವು ನೋಡಿಕೊಳ್ಳಬೇಕು–ಎಂಬುದು ಈಗಿನ ಜನತೆಯ ಕೂಗು ! ಇದರಿಂದ ಜನರು ಒಂದೊಂದು ಬಗೆಯ ಆಶೋತ್ತರಗಳನ್ನಿಟ್ಟುಕೊಂಡಿರುವ ಜನರುಗಳು ಒಂದೊಂದು ಗುಂಪಾಗಿ ಸೇರಿಕೊಂಡು ತಮ್ಮ ಸ್ಥಾನಮಾನಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವದಕ್ಕೂ ತಮ್ಮ ಹಕ್ಕನ್ನು ಸಂಪಾದಿಸುವದಕ್ಕೆ ಅಡ್ಡಿಯಾಗಿರುವರೆಂದು ತಾವು ಭಾವಿಸಿಕೊಂಡಿರುವ ವರ್ಗದವರನ್ನು ಎದುರಿಸಿ ತಮ್ಮ ವಶಕ್ಕೆ ತೆಗೆದುಕೊಳ್ಳುವದಕ್ಕೂ ಹವಣಿಸುತ್ತಿರುತ್ತಾರೆ. 'ಧರ್ಮವು ಇಡಿಯ ಜಗತ್ತಿಗೇ ಪ್ರತಿಷ್ಠಾಕಾರಣವು' ಎಂದು ವೇದವು ಸಾರುತ್ತಿದೆ. ಆದರೆ ನಮ್ಮ ನಮ್ಮ ಪಂಗಡಗಳ ಯೋಗಕ್ಷೇಮವನ್ನು

ನೋಡಿಕೊಳ್ಳುವದಕ್ಕೆ ಮಿಕ್ಕವರೊಡನೆ ಹೊಡೆದಾಡುವದೊಂದೇ ಉಪಾಯವು; ಲೋಕದಲ್ಲಿ ಯಾವ ಪಂಗಡದವರು ಒಗ್ಗಟ್ಟಿನಿಂದ ತಮ್ಮ ಹಕ್ಕುಗಳಿಗಾಗಿ ಹೊಡೆದಾಡಿ ಗೆಲ್ಲುವರೋ ಅವರೇ ಮುಂದಕ್ಕೆ ಬರುವವರು-ಎಂಬುದು ಈಗ ನಮ್ಮಲ್ಲಿ ಅನೇಕರ ಜೀವನಸೂತ್ರವಾಗಿಬಿಟ್ಟಿದೆ.

ಇದರಿಂದ ಬ್ರಾಹ್ಮಣಾದಿವರ್ಣಗಳಲ್ಲಿದ್ದ ಪರಸ್ಪರಸೌಹಾರ್ದವು ತಪ್ಪಿಹೋಗಿರುತ್ತದೆ, ಒಬ್ಬರಿಗೊಬ್ಬರಿಗೆ ದ್ವೇಷಾಸೂಯಾಪೂರಿತವಾದ ಕಲಹಗಳು ಏರ್ಪಟ್ಟಿರುತ್ತವೆ. ಬ್ರಾಹ್ಮಣಾದಿ ವರ್ಣಗಳು ಎಂಬ ಮಾತಿಗೆ ನಾವು ಈಗ ಸಂಕುಚಿತವಾದ ಅರ್ಥವನ್ನು ಕೊಡುತ್ತಿದ್ದೇವೆ, ಬುದ್ಧಿಜೀವಿಗಳೇ ಆಗಲಿ, ಬಲಜೀವಿಗಳೇ ಆಗಲಿ, ವಾಣಿಜ್ಯಾದಿಜೀವಿಗಳೇ ಆಗಲಿ, ಶ್ರಮಜೀವಿಗಳೇ ಆಗಲಿ, ಧರ್ಮವನ್ನು ಲೆಕ್ಕಕ್ಕೆ ತಂದುಕೊಳ್ಳದೆ ಹೇಗಾದರೂಮಾಡಿ ತಮ್ಮ ತಮ್ಮ ಪಂಗಡದವರು ಮುಂದಕ್ಕೆ ಬರಬೇಕೆಂದು ಬಯಸುತ್ತಿದ್ದಾರೆ; ಮಿಕ್ಕ ಪಂಗಡದವರನ್ನು ತಮ್ಮ ಏಳಿಗೆಗೆ-ಎಂದರೆ ತಮಗೆ ಬೇಕಾಗಿರುವ ಲೌಕಿಕ ಭೋಗವಸ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ-ಸಾಧನವಾಗಿ ಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದಾರೆ.

ಸ್ವಾಮಿ ವಿವೇಕಾನಂದರವರು ತಮ್ಮ ಭಾಷಣಗಳಲ್ಲೊಂದರಲ್ಲಿ ಒಂದಾನೊಂದು ಭಾವಗರ್ಭಿತವಾದ ಭವಿಷ್ಯವನ್ನು ನುಡಿದಿರುತ್ತಾರೆ. ಒಂದಾನೊಂದು ಕಾಲದಲ್ಲಿ ಬ್ರಾಹ್ಮಣನು ಮಾನವಸಮಾಜಕ್ಕೆಲ್ಲ ಅಧಿಪತಿಯಾಗಿದ್ದನು; ಅವನು ಅಧರ್ಮಕ್ಕೆ ಬೀಳಲು ಕ್ಷತ್ರಿಯನು ಪ್ರಬಲನಾದನು; ಅವನ ಆಳ್ವಿಕೆಯೂ ಮುಗಿದ ಬಳಿಕ ವೈಶ್ಯನ ರಾಜ್ಯವು ಬಂದಿರುತ್ತದೆ; ಮುಂದೆ ಶೂದ್ರನ ಆಳ್ವಿಕೆಯು ಬರುವದರಲ್ಲಿದೆ- ಎಂದು ಅವರು ನುಡಿದಿರುತ್ತಾರೆ. ಭೂಲೋಕದ ಇತಿಹಾಸದಲ್ಲಿ ಇದಕ್ಕೆ ಎಲ್ಲೆಲ್ಲಿಯೂ ಉದಾಹರಣೆಗಳು ದೊರೆಯುತ್ತವೆ. ಒಂದಾನೊಂದು ಕಾಲದಲ್ಲಿ ಬ್ರಾಹ್ಮಣರು ಎಂದರೆ ಧರ್ಮಪ್ರಧಾನರಾದ ಜನರು ಎಲ್ಲರ ಹಿತವನ್ನೂ ಬಯಸುತ್ತಿದ್ದ ಕಾಲವಿತ್ತು. ನಮ್ಮ ದೇಶದಲ್ಲಿ ಬಲು ಹಿಂದಿನ ಕಾಲದ ಋಷಿಗಳೂ ಧರ್ಮಸೂತ್ರಗಳು ಸ್ಮೃತಿಗಳು-ಮುಂತಾದವನ್ನು ರಚಿಸಿದ ಮಹನೀಯರೂ ಸರ್ವರಿಗೂ ಮಾನ್ಯರಾಗಿದ್ದಂತೆ ಇಸ್ಲಾಂ, ಯಹೋದಿ, ಕ್ರಿಸ್ತೀಯ-ಮುಂತಾದ ಧರ್ಮಗಳು ಹುಟ್ಟಿದ ಅನ್ಯದೇಶಗಳಲ್ಲಿಯೂ ಧರ್ಮೋಪದೇಶಕರಾದವರು ಮೊದಮೊದಲು ಸರ್ವಮಾನ್ಯರಾಗಿಯೇ ಇದ್ದರು. ಆದರೆ ಆ ಜನರು ಕಾಮೋಪಹತರಾಗಿ ತಮಗೆ ದೊರೆತ ಅಧಿಕಾರವನ್ನು ದುರುಪಯೋಗಪಡಿಸಿಕೊಂಡದ್ದರಿಂದ ಕ್ಷತ್ರಿಯರು ಎಂದರೆ ಬಲಪ್ರಧಾನರಾಗಿರುವ ಜನರು ಎಲ್ಲರ ಗೌರವಕ್ಕೂ ಪಾತ್ರರಾದರು. ಆ ಜನರು ಧರ್ಮಪ್ರೇಮಿಗಳಾಗಿರುವವರೆಗೂ ಉನ್ನತಸ್ಥಾನದಲ್ಲಿದ್ದರು. ಯಾವಾಗ ಅವರು ಉದ್ವೃತ್ತರಾಗಿ ನಡೆದುಕೊಂಡರೋ ಆಗಿನಿಂದ ಅವರ ಬೀಳು ಮೊದಲಾಯಿತು. ಹೀಗೆ ಕ್ಷತ್ರಿಯತೇಜಸ್ಸು ಧರ್ಮಬಾಹ್ಯವಾಗಿ ಕೆಳಕ್ಕೆ ಉರುಳಿದ್ದನ್ನು ಪುರಾಣಗಳಲ್ಲಿಯೂ ಈಚಿನ

ಇತಿಹಾಸದಲ್ಲಿಯೂ ಕಾಣಬಹುದು. ಯೂರೋಪಿನಲ್ಲಿ ಮಧ್ಯಯುಗದ "ಷಿವಲ್ರಿ" ಎಂಬ ಸರದಾರರ ಇತಿಹಾಸವನ್ನೂ ಮಹಮ್ಮದೀಯರ ಖಲೀಫರ ಇತಿಹಾಸವನ್ನೂ ನೆನಪಿಗೆ ತಂದುಕೊಂಡರೆ ಈ ಅಭಿಪ್ರಾಯಕ್ಕೆ ಪುಷ್ಟಿಬರುವದು. ಬಹಳ ಈಚಿನ ಕಾಲದಲ್ಲಿ ಪ್ರಬಲವಾದ ರಾಷ್ಟ್ರಗಳು ಎಲ್ಲಾ ಕಡೆಗೂ ನುಗ್ಗಿ ದೇಶಗಳನ್ನು ವಿವಿಧೋಪಾಯಗಳಿಂದ ಗೆದ್ದು ಚಕ್ರಾಧಿಪತ್ಯವನ್ನು ಮಾಡಿಕೊಂಡದ್ದರಲ್ಲಿ ವೈಶ್ಯರ ಎಂದರೆ ವಾಣಿಜ್ಯಪ್ರಧಾನರಾದವರ ಏಳಿಗೆಯು ಕಂಡುಬರುತ್ತದೆ. ಶಿಪಾಯಿಗಳು ಧನಪ್ರಧಾನರಾದವರ ಆಳಾದದ್ದು, ಭೌತಿಕ ವಿಜ್ಞಾನವು ಕೂಡ ಈ ವ್ಯಾಪಾರದ ಜನರಿಗೆ ಅನುಕೂಲವಾಗುವ ಯಂತ್ರೋಪ ಕರಣಗಳನ್ನೂ ಶತ್ರುಮಾರಕವಾದ ಟ್ಯಾಂಕುಗಳು, ಬಾಂಬುಗಳು ಮುಂತಾದವನ್ನೂ ಸಿದ್ಧಗೊಳಿಸಿಕೊಟ್ಟದ್ದು–ಇವೆಲ್ಲ ನಮ್ಮ ಕಣ್ಣಮುಂದೆಯೇ ಇದೆ. ಎಲ್ಲಿಯವರೆಗೆ ಧನವಂತರು ಧರ್ಮಬುದ್ಧಿಯಿಂದ ಮಿಕ್ಕವರನ್ನು ಕಾಣುತ್ತಿದ್ದರೋ ಅಲ್ಲಿಯವರೆಗೂ ಸ್ವಲ್ಪವಾದರೂ ಜನತಾಭಿವೃದ್ಧಿಯು ಕಾಣುತ್ತಿತ್ತು. ಆದರೆ ಧನದ ಆಶೆಯೂ ಲೋಭವೂ ಬೆಳೆದಂತೆ ಕರುಬುತನ, ಹೊಟ್ಟೆಕಿಚ್ಚು, ಹಗೆತನ–ಇವುಗಳೂ ಬೆಳೆಯುತ್ತಾ ಬಂದಿರುತ್ತವೆ. ಈಗ ಬಡವರಿಗೆ ನೇರವಾಗಿ ಅನ್ನಬಟ್ಟೆ ಕೂಡ ದೊರಕುವದು ಕಷ್ಟವಾಗಿರುತ್ತದೆ; ಕೂಲಿನಾಲಿ ಗಳನ್ನು ಮಾಡಿಕೊಂಡು ಜೀವಿಸುವದು ಕೂಡ ಆಗುವಂತಿಲ್ಲ. ಇಂಥ ಸಮಯದಲ್ಲಿ ಶೂದ್ರರ ಎಂದರೆ ಶ್ರಮಜೀವಿಗಳ ಅಧಿಕಾರವು ಮುಂದಕ್ಕೆ ಬರುವದು ಸಹಜವಾಗಿರುತ್ತದೆ. ಸಮಾಜವಾದಿಗಳು (Socialists), ಸಮತಾವಾದಿಗಳು (Communists) –ಮುಂತಾದ ಹೆಸರುಗಳಿಂದ ಧನವಂತರ ಹಣವನ್ನೆಲ್ಲ ಸುಲಿಗೆಮಾಡಿಕೊಂಡು ಹಂಚಿಕೊಳ್ಳುವ ಕೆಲಸಗಾರರ ರಾಜ್ಯವು ಅಲ್ಲಲ್ಲಿ ತಲೆ ಎತ್ತುತ್ತಿದೆ ಎಂಬುದರಲ್ಲಿ ಆಶ್ಚರ್ಯವೇನಿದೆ?

ಮನುಷ್ಯರು ಧರ್ಮಪ್ರಧಾನರಾಗಿರುವವರೆಗೆ ಸಮಾಜವೂ ಧರ್ಮದ ಆಧಾರದ ಮೇಲೆಯೇ ರಚಿತವಾಗಿರುತ್ತದೆ. ಇಹಲೋಕದ ಭೋಗವೂ ಧರ್ಮಕ್ಕೆ ಅವಿರುದ್ಧವಾಗಿಯೇ ಸಾಗುತ್ತಿರುತ್ತದೆ. ಜನರ ಆಚಾರವಿಚಾರಗಳೂ ಧರ್ಮಕ್ಕೆ ಅನುಗುಣವಾಗಿಯೇ ಇರುತ್ತವೆ. ಆದ್ದರಿಂದ ಅಂಥ ಸಮಾಜದಲ್ಲಿ ಸಹಜವಾಗಿ ಈಶ್ವರಭಕ್ತಿ, ಪಾಪಭೀತಿ, ಗುರುಹಿರಿಯರ ವಚನದಲ್ಲಿ ಶ್ರದ್ಧೆ– ಇವುಗಳೆಲ್ಲ ಜನರಲ್ಲಿ ನೆಲಸಿರುತ್ತವೆ. ಆದರೆ ಯಾವಾಗ ಜನರ ಮನಸ್ಸಿನ ದೌರ್ಬಲ್ಯದಿಂದ ಕಾಮವು ಹೆಚ್ಚಿಕೊಳ್ಳುವದೋ ಆಗ ಅಧರ್ಮವು ಹೆಚ್ಚಿ ಧರ್ಮವು ಕಣ್ಮರೆಯಾಗುತ್ತದೆ; ಆಸ್ತಿಕ್ಯವು ಹೋಗುತ್ತದೆ, ಧರ್ಮದಲ್ಲಿ ಪ್ರೇಮವಿರುವದಕ್ಕೆ ಬದಲು ದ್ವೇಷವು ಕೂಡ ಉಂಟಾಗಬಹುದಾಗುತ್ತದೆ; ಜನರ ಆಚಾರವಿಚಾರಗಳು ಸ್ವೇಚ್ಛೆಯಿಂದ ನಡೆಯುವದಕ್ಕೆ ಪ್ರಾರಂಭವಾಗುತ್ತದೆ. ಎಲ್ಲರಿಗೂ ದುಃಖಪರಂಪರೆಗಳು ಬಂದೊದಗುತ್ತದೆ.

ಸಮಾಜದ ಪದ್ಧತಿಯನ್ನಾಗಲಿ ರಾಜ್ಯಭಾರಕ್ರಮವನ್ನಾಗಲಿ ಮಾರ್ಪಡಿಸಿದ ಮಾತ್ರದಿಂದ ಯಾವ ದೇಶಕ್ಕೂ ಸುಖವು ಬರುವದಿಲ್ಲ; ಧರ್ಮವನ್ನು ಧ್ಯೇಯವಾಗಿಟ್ಟುಕೊಂಡಿದ್ದರೆ

ಯಾವ ಪದ್ಧತಿಯಾದರೂ ಯಾವ ರಾಜ್ಯಕ್ರಮವಾದರೂ ಸುಖದಾಯಕವಾಗುತ್ತದೆ; ಅದನ್ನು ಕೈಬಿಟ್ಟರೆ ಯಾವ ಬದಲಾವಣೆಯಿಂದಲೂ ನಮಗೆ ಯಾವ ಸುಖವೂ ದೊರೆಯಲಾರದು. ತುಲಸೀದಾಸರ ಒಂದು ವಾಕ್ಯವುಂಟು; ಎಲ್ಲಿ ರಾಮನಿರುವನೋ ಅಲ್ಲಿ ಕಾಮಕ್ಕೆ ಸ್ಥಲವಿಲ್ಲ, ಎಲ್ಲಿ ಕಾಮವಿರುವದೋ ಅಲ್ಲಿ ರಾಮನಿಗೆ ಸ್ಥಲವಿಲ್ಲ-ಎಂದು ಅವರು ಹೇಳಿರುತ್ತಾರೆ. ಕಾಮವು ಹೆಚ್ಚಿದಂತೆಲ್ಲ ಜನರು ಈಶ್ವರಭಕ್ತಿ, ಗುರುಭಕ್ತಿ-ಎಲ್ಲವನ್ನೂ ಕೈಬಿಡುತ್ತಾರೆ. ಧರ್ಮವನ್ನು ಅವಲಂಬಿಸಲಿ ಬಿಡಲಿ, ವರ್ಣಚತುಷ್ಟಯ ವಿಭಾಗವು ಎಲ್ಲಾ ದೇಶದಲ್ಲಿಯೂ ಇದ್ದೇ ತೀರುತ್ತದೆ. ಆದರೆ ಧರ್ಮವನ್ನು ಬಿಟ್ಟ ಬ್ರಾಹ್ಮಣ್ಯವು ನಿಜವಾದ ಬ್ರಾಹ್ಮಣ್ಯವಲ್ಲ, ಅದರ ಹೊರಚಿಪ್ಪು. ಹೀಗೆಯೇ ಧರ್ಮವನ್ನು ಬಿಟ್ಟ ಕ್ಷತ್ರಿಯತ್ವಾದಿಗಳನ್ನೂ ತಿಳಿಯಬೇಕು. ಧರ್ಮವನ್ನು ಬಿಟ್ಟುಬಿಟ್ಟಾಗಲೆಲ್ಲ ಆಯಾ ವರ್ಣದವರು ಮಿಕ್ಕವರನ್ನು ತುಳಿದು, ಅಥವಾ ಉಪಾಯದಿಂದ ಅವರನ್ನು ತಮ್ಮ ಲಾಭಕ್ಕೆ ಉಪಯೋಗಿಸಿಕೊಂಡು ಬಾಳುವದಕ್ಕೆ ಇಚ್ಛೆಸುತ್ತಾರೆ. ಇದರಿಂದ ತಾವೂ ಕೆಡುತ್ತಾರೆ, ಮಿಕ್ಕವರನ್ನೂ ಕೆಡಿಸುತ್ತಾರೆ. ಸದ್ಯದ ಕಾಲಕ್ಕೆ ಧರ್ಮದ ವಿಷಯಕ್ಕೆ ಅನಾದರ, ಧರ್ಮತ್ಯಾಗ, ಧರ್ಮದ ಅನುಯಾಯಿಗಳ ವಿಷಯದಲ್ಲಿ ಔದಾಸೀನ್ಯ-ಎಂಬ ಕೆಳಕೆಳಗಿನ ಮೆಟ್ಟಲುಗಳಿಗೆ ಇಳಿದು ಸಮಾಜವು ಧರ್ಮದ್ವೇಷಕ್ಕೇ ಅಗ್ರಸ್ಥಾನವನ್ನು ಕೊಟ್ಟ 'ಕಮ್ಯೂನಿಸಂ' ಎಂಬ ಸಮತಾವಾದವನ್ನು ಅವಲಂಬಿಸಿದೆ. ಆ ಪಂಗಡದವರು ಧರ್ಮ ವಿಷಯದಲ್ಲಿ ಉದಾಸೀನರಲ್ಲ, ಧಾರ್ಮಿಕರು ರಾಜ್ಯದಲ್ಲಿ ಉಳಿದುಕೊಂಡಿರಲಿ ಎಂಬಷ್ಟು ಉದಾರಿಗಳಲ್ಲ; ಅವರು ಧರ್ಮದ್ವೇಷಿಗಳು ! ಧರ್ಮವೆಂಬ ಹೆಸರೆತ್ತಿದರೂ ಅವರಿಗೆ ಆಗದು; ನೀತಿಯಾಗಲಿ ತತ್ತ್ವವಿಚಾರವಾಗಲಿ ಶ್ರಮಜೀವಿಗಳ ಹೋರಾಟಕ್ಕೆ ಸಹಾಯಮಾಡದೆ ಇದ್ದರೆ ಅದನ್ನೂ ಕಿತ್ತೊಗೆಯುವದಕ್ಕೆ ಅವರು ಸಿದ್ಧ !

ಆದರೆ ದೇಶಾಂತರಗಳಲ್ಲಿ ಆಗಿರುವ ಧರ್ಮದ ಇತಿಹಾಸವೇ ಬೇರೆ; ನಮ್ಮದೇಶದ ಇತಿಹಾಸವೇ ಬೇರೆ. ಮಿಕ್ಕಕಡೆಗಳಲ್ಲಿ ಧರ್ಮವನ್ನುಪದೇಶಿಸಿದವರು ಆಸ್ತಿಪಾಸ್ತಿಗಳನ್ನು ಹೆಚ್ಚಿಸಿಕೊಂಡು, ಅಧಿಕಾರವನ್ನು ಸಂಪಾದಿಸಿಕೊಂಡು, ರಾಜರುಗಳನ್ನೂ ಪ್ರಜೆಗಳನ್ನೂ ತಮ್ಮ ಅಡಿಯಾಳುಗಳಾಗಿ ಮಾಡಿಕೊಂಡು ತಾವು ಮಾಡುವ ಉಪದೇಶಕ್ಕೆ ಒಂದಿಷ್ಟು ಅಡ್ಡಿ ಮಾಡಿದರೂ ಜನರಿಗೆ ಬಗೆಬಗೆಯ ಹಿಂಸೆಗಳನ್ನು ಮಾಡಿದರು. ರಷ್ಯದೇಶದಲ್ಲಿ ಗ್ರೀಕ್‌ಚರ್ಚ್ ಎಂಬ ಒಂದಾನೊಂದು ಕ್ರಿಸ್ತಿಯನ್ ಮತದವರ ಕಾಟವನ್ನು ತಡೆಯಲಾರದೆ ಜನರು ಅವರಿಗೆ ತಿರುಗಿಬಿದ್ದರು; ಅವರು ತಮ್ಮ ಪುರುಷಮತಿಯಿಂದ ಒಂದಾನೊಂದು ಸಮಾಜತತ್ತ್ವಶಾಸ್ತ್ರವನ್ನು ನಿರ್ಮಾಣಮಾಡಿಕೊಂಡು ಲೋಕಸ್ಥಿತಿಯನ್ನೇ ತಲೆಕೆಳಗು ಮಾಡುವ ಒಂದಾನೊಂದು ವರ್ಗಯುದ್ಧ (Class-struggle) ವನ್ನು ಏರ್ಪಡಿಸಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಬ್ರಾಹ್ಮಣ್ಯವನ್ನು ಎತ್ತಿಹಿಡಿದ ಸನಾತನಧರ್ಮೀಯರು

ಬ್ರಾಹ್ಮಣನಿಗೆ ಯಾವ ಆಸ್ತಿಯೂ ಇರಕೂಡದು, ಅವರು ಧರ್ಮವನ್ನೇ ಪ್ರಧಾನವಾಗಿ ಹಿಡಿದು ಆದರ್ಶಜೀವನವನ್ನು ಅವಲಂಬಿಸಿ ಮಿಕ್ಕವರಿಗೆ ಮೇಲುಪಙ್ಕ್ತಿಯಾಗಿರಬೇಕೆಂಬುದನ್ನು ಒತ್ತಿಹೇಳಿರುತ್ತಾರೆ. ಹೀಗಿರುವಲ್ಲಿ ನಮ್ಮ ದೇಶದ ತರುಣರು ಏತಕ್ಕೆ ನಮ್ಮ ದೇಶದ ಹವೆಗೆ ಒಂಟದ ಈ ವಿದೇಶೀಯಪದ್ಧತಿಯನ್ನು ಅವಲಂಬಿಸಬೇಕು?

ವರ್ಣಾಶ್ರಮಧರ್ಮವೆಂಬುದು ಒಬ್ಬರನ್ನೊಬ್ಬರು ತಮ್ಮ ಲಾಭಕ್ಕೆ ಉಪಯೋಗಿಸಿಕೊಳ್ಳಲೆಂದು ಏರ್ಪಡಿಸಿದ ಪದ್ಧತಿಯಲ್ಲ. ಎಲ್ಲಾ ಬಗೆಯಿಂದಲೂ ಪರಸ್ಪರಸಹಾಯಕರಾಗಿದ್ದುಕೊಂಡು ಧರ್ಮವನ್ನೇ ತಮ್ಮ ಗುರಿಯಾಗಿಟ್ಟುಕೊಂಡಿದ್ದು ಈ ಲೋಕದಲ್ಲಿ ಸುಖವನ್ನೂ ಪರಲೋಕದಲ್ಲಿ ಗತಿಯನ್ನೂ ಪಡೆಯಲೆಂದು ಏರ್ಪಡಿಸಿರುವ ಸಂಸ್ಥೆಯದು. ಈ ಪದ್ಧತಿಯಂತೆ ಬ್ರಾಹ್ಮಣನೆಂಬುವವನು ಪ್ರವೃತ್ತಿನಿವೃತ್ತಿ ರೂಪವಾದ ಧರ್ಮಗಳನ್ನು ಯಥಾಸಂಭವವಾಗಿ ಅವಲಂಬಿಸಿ ತಾನೂ ಮೇಲಕ್ಕೇರುತ್ತಾ ಮಿಕ್ಕವರನ್ನೂ ತನ್ನನ್ನು ಅನುಸರಿಸುವಂತೆ ಮಾಡುವವನು. ಅದರಲ್ಲಿಯೂ ಸಂನ್ಯಾಸಿಯಾದವನು ಪರಮಾತ್ಮಚಿಂತನೆಗೆಂದೇ ತನ್ನ ಜೀವನವನ್ನು ಮೀಸಲುಮಾಡಿಕೊಂಡು, ತನ್ನ ಸರ್ವಸಮತಾ ದೃಷ್ಟಿಯಿಂದ ಎಲ್ಲರಿಗೂ ಶಾಂತಿಸುಖಗಳನ್ನು ಕೊಡುವ ಮಾರ್ಗವನ್ನು ತೋರಿಸಿ ಕೊಡುತ್ತಿರುವವನು. ಆದ್ದರಿಂದ ನಮ್ಮ ದೇಶದವರು ಯಾವ ಪುರುಷಾರ್ಥವನ್ನೂ ಕೊಡದೆ, ಅನರ್ಥಕ್ಕೇ ಕಾರಣವಾಗಿರುವ, ವರ್ಣದ್ವೇಷಾದಿಗಳನ್ನು ಬಿಟ್ಟು ಗುಣಪ್ರಧಾನವಾದ ವರ್ಣಾಶ್ರಮಪದ್ಧತಿಗೆ ಉದಾರಬುದ್ಧಿಯಿಂದ ಸಹಾಯಮಾಡಬೇಕು. ಧರ್ಮಬುದ್ಧಿಯೂ ಜ್ಞಾನಭಕ್ತಿವೈರಾಗ್ಯಗಳೂ ಎಲ್ಲಿಕಂಡರೆ ಅಲ್ಲಿ ಗೌರವವನ್ನು ಕೊಡಬೇಕು; ಪೂರ್ವದಲ್ಲಿ ಈ ಕ್ಷೇತ್ರದಲ್ಲಿಯೇ ಲೋಕೋಪಕಾರಕ್ಕಾಗಿ ದುಡಿದಿರುವ ಭಗವಾನ್‌ನಾರಾಯಣ, ವ್ಯಾಸ, ಶಂಕರಾದಿಗಳನ್ನು ಸ್ಮರಿಸಬೇಕು; ಈಗಲೂ ಜನರನ್ನು ಕಲ್ಯಾಣಮಾರ್ಗಕ್ಕೆ ಒಯ್ಯಬಲ್ಲ ಸಾಧುಸಂತರನ್ನು ಆದರದಿಂದ ಸೇವಿಸಬೇಕು. ಈ ಧ್ಯೇಯವನ್ನು ನೆನಪುಕೊಡುವದೇ ಗುರುಪೂರ್ಣಿಮೆಯಂಥ ಉತ್ಸವಗಳ ಸಾಫಲ್ಯವು.

## ವಿಭೂತ್ಯುಪಾಸನೆ

ಮಾನವ, ಈ ಜಗತ್ತೆಲ್ಲವೂ ಆನಂದಮಯವಾಗಿದೆ; ಎಲ್ಲಿ ನೋಡಿದರೂ ಸುಂದರವಾದ ದೃಶ್ಯಗಳಿವೆ. ಹೀಗಿರುವಲ್ಲಿ ಏತಕ್ಕೆ ಇಲ್ಲದ ದುಃಖಗಳನ್ನು ಕಲ್ಪಿಸಿಕೊಂಡು ಮನಸ್ಸನ್ನು ವ್ಯಥೆಗೆ ಈಡುಮಾಡಿಕೊಳ್ಳುತ್ತಿರುವೆ? ಸರಿಯಾಗಿ ಕಣ್ದೆರೆದು ನೋಡು ! ಈ ಜಗತ್ತಿನಲ್ಲಿ ದುಃಖಪಡುವದಕ್ಕೆ ಏನು ಕಾರಣವಿದೆ ?

ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ–ಎಂಬ ಮಹಾಭೂತಗಳು. ಅವುಗಳಿಂದಾಗಿ ತೋರುತ್ತಿರುವ ಭೂಮಿ, ವನಪ್ರದೇಶಗಳು, ಪರ್ವತಗಳು, ನದಿಗಳು, ಸಮುದ್ರ, ದೇಶಗಳು,

ಪಟ್ಟಣಗಳು, ವಾಯುಮಂಡಲ, ಆಕಾಶ, ಸೂರ್ಯಚಂದ್ರನಕ್ಷತ್ರಗಳು-ಎಲ್ಲಿ ನೋಡಿದರೂ ಭಗವಂತನ ದಿವ್ಯಮಹಿಮೆಯೇ ಕಾಣುತ್ತಿರುವದಿಲ್ಲವೆ? ಅವುಗಳ ವೈಶಾಲ್ಯ, ವೈಭವ, ಸೌಂದರ್ಯ, ಕಾಂತಿ-ಇವುಗಳು ನಿನ್ನ ಹೃದಯಕ್ಕೇಕೆ ಆಹ್ಲಾದವನ್ನು ಕೊಡುತ್ತಿಲ್ಲ?

ಭೂಮಿಯಲ್ಲಿ ಬೆಳೆಯುತ್ತಿರುವ ಗಿಡಮರಬಳ್ಳಿಗಳು, ಇಲ್ಲಿ ಹರಿದಾಡುತ್ತಿರುವ ಕ್ರಿಮಿ ಕೀಟಾದಿಗಳು, ನಡೆಯುತ್ತಿರುವ ಮೃಗಗಳು, ಹಾರಾಡುತ್ತಿರುವ ಪಕ್ಷಿಗಳು, ಮಾತಾಡು ತ್ತಿರುವ ನರನಾರಿಯರು-ಈ ದೃಶ್ಯಗಳನ್ನು ನೋಡಿದರೆ ನಿನಗೆ ಈ ವಿಚಿತ್ರ ಸೃಷ್ಟಿಯನ್ನು ಮಾಡಿರುವ ಭಗವಂತನ ಮಹಿಮೆಯು ಮನಸ್ಸಿಗೆ ಬರುತ್ತಿಲ್ಲವೆ? ಹೀಗಿದ್ದರೂ ಏತಕ್ಕೆ ದುಃಖದಿಂದ ಕೊರಗುತ್ತಿರುವೆ?

ಕಷ್ಟಪಟ್ಟು ದುಡಿಯುವವರಿಗೆ ಬೇಕಾದ ಆಹಾರವನ್ನು ಕೊಡುವ ಭೂಮಿಯಿದೆ, ಮೈಗೆ ಬೇಕಾದ ಸುಂದರವಾದ ಉಡುಪುಗಳನ್ನು ಮಾಡಿಕೊಳ್ಳುವದಕ್ಕೆ ಬೇಕಾದ ಸಾಮಗ್ರಿಯಿದೆ, ಮನಸ್ಸಿಗೆ ಉಲ್ಲಾಸವನ್ನು ಕೊಡುವ ದೃಶ್ಯಗಳಿವೆ, ಬುದ್ಧಿಯ ವಿಕಾಸವನ್ನುಂಟುಮಾಡುವ ವಿದ್ಯೆಗಳನ್ನು ತಿಳಿಸಬಲ್ಲ ವಿಜ್ಞರಿದ್ದಾರೆ, ಶಾಂತಿಸುಖಗಳನ್ನು ನೀಡಬಲ್ಲ ಮಹಾತ್ಮರಿದ್ದಾರೆ. ಇದೆಲ್ಲ ಆ ದಯಾಘನನ ವರಪ್ರಸಾದವೆಂಬ ಭಾವವು ನಿನ್ನಲ್ಲೇಕೆ ಮೂಡುವದಿಲ್ಲ? ನಿನ್ನ ಕಣ್ಮನಗಳೇಕೆ ಕುರುಡಾಗಿವೆ?

ನಿಜವಾಗಿ ನೆನೆದು ನೋಡು, ನಿನ್ನ ಆತ್ಮನಾಗಿರುವ ಆ ಭಗವಂತನು ಪರಮಾ ನಂದಾಮೃತದ ಸಾಗರವಾಗಿರುತ್ತಾನೆ. ಇಲ್ಲಿ ಕಾಣುವ ದೃಶ್ಯಗಳೆಲ್ಲ ಆ ಸಾಗರಕ್ಕೆ ಹೋಗಿ ಅವನಲ್ಲಿ ಒಂದಾಗುವ ಅಮೃತದ ಹೊನಲುಗಳಾಗಿರುತ್ತವೆ. ನೀನು, ನಾನು, ಎಲ್ಲರೂ, ಇದೆಲ್ಲವೂ ಎಂಥ ಆನಂದದ ವ್ಯಾಪಕಾಕಾಶವಿದು ! ಇದರಿಂದಲೇ ನಿನ್ನ ಜೀವನವು ಸಾಗಿರುವದೆಂಬುದನ್ನು ಮರೆಯದಿರು? ತಲ್ಲಣಿಸಬೇಡ, ಕುಗ್ಗಬೇಡ, ಕೊರಗಬೇಡ. ಆನಂದದಲ್ಲಿ ಮುಳುಮುಳುಗಿ ಏಳುವದನ್ನು ಕಲಿತುಕೊ ! ಸಂ-27, 182

## ಪರಮಾತ್ಮನ ವಿಭೂತಿ

ಮಾನವ, ಹಗಲು ಸೂರ್ಯನ ಬೆಳಕು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವಂತೆಯೂ ರಾತ್ರೆ ಶುಕ್ಲಪಕ್ಷದಲ್ಲಿ ಎಲ್ಲೆಲ್ಲಿಯೂ ಚಂದ್ರನ ಬೆಳದಿಂಗಳು ವ್ಯಾಪಿಸಿಕೊಂಡಿರುವಂತೆಯೂ ಇಡಿಯಬ್ರಹ್ಮಾಂಡವನ್ನೆಲ್ಲ ಭಗವಂತನ ಪ್ರಕಾಶವೇ ವ್ಯಾಪಿಸಿಕೊಂಡಿರುವದೆಂದು ಶಾಸ್ತ್ರಗಳು ಹೇಳುತ್ತಿವೆ, ದೊಡ್ಡವರೂ ಉಪದೇಶಿಸುತ್ತಿರು ತ್ತಾರೆ; ಇದನ್ನು ದೃಢವಾಗಿ ನಂಬು, ಆ ಭಾವನೆಯಿಂದ ನಿನಗೆ ಸರ್ವದಿಕ್ಕುಗಳೂ ಸುಖಮಯವಾಗುವವು.

ಅಪ್ಪ, 'ನನಗೇಕೆ ಈ ಪ್ರಪಂಚವು ದುಃಖಮಯವಾಗಿ ಕಾಣುತ್ತಿದೆ?' ಎಂದು ಆಗಾಗ್ಗೆ ಚಿಂತಿಸುತ್ತಿರುವೆಯಲ್ಲವೆ? ಅದಕ್ಕೆ ನಿನ್ನ ಮನಸ್ಸೇ ಕಾರಣವೆಂದು ತಿಳಿ. ನಿನ್ನ ಮನಸ್ಸಿನಲ್ಲಿ

'ಈ ಪ್ರಪಂಚವು ಹೀಗಿರಬೇಕಾಗಿತ್ತು, ಇವರು ಹೀಗೆ ನಡೆದುಕೊಳ್ಳಬೇಕಾಗಿತ್ತು, ಇವರು ನನ್ನನ್ನು ಹೀಗೆ ಕಾಣಬೇಕಾಗಿತ್ತು....' ಎಂದು ಮುಂತಾಗಿ ಸ್ವಾರ್ಥದ ವಿಚಾರಗಳು ಆಗಾಗ್ಗೆ ಎದ್ದುಕೊಳ್ಳುತ್ತಿರುವವು. ಆ ಕಲ್ಮಷದ ವಿಚಾರವೇ ನಿನಗೆ ಹೊರಗೆ ದುಃಖಪ್ರದವಾದ ದೃಶ್ಯವಾಗಿ ಕಾಣುತ್ತಿರುವದೆಂದು ತಿಳಿ.

ಹುಚ್ಚ, 'ಈ ಪ್ರಪಂಚವು ದುಃಖಮಯವಾಗಿದೆ, ಇಲ್ಲಿದ್ದು ಏನು ಪ್ರಯೋಜನ? ನಾನು ಈ ದುಃಖದಿಂದ ಪಾರಾಗುವದಕ್ಕೆ ಈ ಶರೀರವನ್ನೇ ಬಿಟ್ಟುಬಿಡುವೆನು !' ಎಂದು ಚಿಂತಿಸಿಕೊಳ್ಳಬೇಡ. ನೀನು ಈ ಪ್ರಪಂಚವನ್ನು ಬಿಟ್ಟು ಮತ್ತೆ ಎಲ್ಲಿಗೆ ಹೋಗುವೆ? ಈ ಶರೀರವನ್ನು ಬಿಟ್ಟರೆ ಮತ್ತೊಂದು ಶರೀರವನ್ನು ತೆಗೆದುಕೊಳ್ಳುವೆ. ಮತ್ತೆ ಅಲ್ಲಿಯೂ ನಿನಗೆ ನಿನ್ನ ಮನಸ್ಸಿನ ಕಲ್ಮಷದಿಂದ ದುಃಖವೇ ಕಾಣಿಸುವದು. ಆದ್ದರಿಂದ ನಿನ್ನ ದುಷ್ಟವಾದ ಆ ಭಾವನೆಗಳನ್ನೇ ಬಿಟ್ಟುಬಿಡು. 'ಈ ಪ್ರಪಂಚದಲ್ಲಿ ಕಾಣಿಸುವದೆಲ್ಲವೂ ಆ ಭಗವಂತನ ವಿಭೂತಿಯು. ಆದ್ದರಿಂದ ಇಲ್ಲಿ ದುಃಖಪ್ರದವಾದದ್ದು ಯಾವದೂ ಇಲ್ಲ' ಎಂದು ಮತ್ತೆಮತ್ತೆ ನಿನ್ನ ಮನಸ್ಸಿಗೆ ಬುದ್ಧಿಯನ್ನು ಹೇಳಿಕೊ.

ಎಲಾ ಅವಿವೇಕಿಯೆ, ಕಣ್ಣುಬಿಟ್ಟು ನೋಡು ! ಮನಮುಟ್ಟಿ ಯೋಚಿಸು ! ಯಾವ ಯಾವದು ಸುಂದರವಾಗಿರುವದೋ, ಯಾವಯಾವದು ಅದ್ಭುತವಾಗಿರುವದೋ, ಯಾವ ಯಾವದು ವೀರ್ಯವಂತವಾಗಿರುವದೋ ಉತ್ಸಾಹಯುಕ್ತವಾಗಿರುವದೋ, ಆನಂದಜನಕವಾದ ಅದೆಲ್ಲವೂ ಆ ಭಗವಂತನ ವಿಭೂತಿಯೇ ಎಂಬುದನ್ನು ಮೊದಲು ಭಾವಿಸಕೊ. ಆಮೇಲೆ ಇಡಿಯ ಜಗತ್ತೇ ಆ ಭಗವಂತನ ವಿಭೂತಿ ಎಂಬ ಭಾವನೆಯು ಅಳವಡುವದು. ಎಲ್ಲಕ್ಕೂ ಮೊದಲು ನಿನ್ನ ಮನಸ್ಸನ್ನು ಸರಿಪಡಿಸಿಕೊ. ಅದರಲ್ಲಿ ಭಗವಂತನ ಭಾವನೆಯನ್ನು ಮೂಡಿಸಿಕೊ ! ಆಮೇಲೆ ನಿನಗೆ ಎಲ್ಲಿಯೂ ದುಃಖವು ಕಾಣುವದಿಲ್ಲ. ಮನಸ್ಸಿನಲ್ಲಿ ಆನಂದದ ಮೂಲವಾದ ಪರಮಾತ್ಮನನ್ನು ಇಟ್ಟುಕೊ, ಎಲ್ಲೆಲ್ಲಿಯೂ ಆನಂದವೇ ಕಾಣಿಸುವದು. **ಸಂ–27, 242**

## ನಾವು ಆಕಾಶದಂತಿರುವ ಆತನಲ್ಲಿ, ಆತನು ನಮ್ಮಲ್ಲಿ

ಅಣ್ಣಗಳಿರ, ನಮಗೆ ಗೊತ್ತಿಲ್ಲದ ಎಷ್ಟೋ ಅದ್ಭುತಶಕ್ತಿಗಳು ಈ ಪ್ರಪಂಚದಲ್ಲಿಯೂ ನಮ್ಮಲ್ಲಿಯೂ ಅಡಗಿರುವವು. ವಿಜ್ಞಾನಶಾಸ್ತ್ರಗಳು ಕಂಡುಹಿಡಿದಂತೆಲ್ಲ, ನೀರಿನ ಆವಿಯ ಶಕ್ತಿ, ಅಯಸ್ಕಾಂತಶಕ್ತಿ, ವಿದ್ಯುಚ್ಛಕ್ತಿ–ಮುಂತಾದವುಗಳು ಇಲ್ಲಿಯೇ ಇರುವವೆಂದು ನಮಗೆ ತಿಳಿದುಬಂದಿತು. ಅವುಗಳ ತಿಳಿವಳಿಕೆಯಿಂದ ನಮಗೆ ನೆಲದಮೇಲೆ ರೈಲುಪ್ರಯಾಣ, ಸಮುದ್ರದಮೇಲೆ ಜಹಜಿನಲ್ಲಿ ಪ್ರಯಾಣ, ಆಕಾಶದಲ್ಲಿ ವಿಮಾನಪ್ರಯಾಣ–ಇವೆಲ್ಲ ಸಾಧ್ಯವಾಗಿವೆ. ಅತ್ಯಂತದೂರದಲ್ಲಿ ನಡೆಯುವ ಘಟನೆಗಳ ಸುದ್ದಿಗಳೂ ಆಗಿಂದಾಗ್ಗೆ

ನಮಗೆ ತಿಳಿಯುವ ಸಾಧನಗಳೂ ವಶವಾಗಿವೆ; ದೂರದಲ್ಲಿರುವ ಧ್ವನಿಯನ್ನು ಕೇಳುವದು, ದೂರದಲ್ಲಿರುವ ಅಕಾರವನ್ನು ನೋಡುವದು, ಗ್ರಹಗಳವರೆಗೂ ಸ್ಫುಟನಕಗಳನ್ನು ಹಾರಿಸುವದು-ಇವೆಲ್ಲ ಸಾಧ್ಯವಾಗಿಬಿಟ್ಟಿದೆ !

ಇದರಂತೆ ಇನ್ನೊಂದು ಮಹಾದ್ಭುತಶಕ್ತಿಯು ಈ ಬ್ರಹ್ಮಾಂಡದಲ್ಲಿ ಎಲ್ಲೆಲ್ಲಿಯೂ ತುಂಬಿರುತ್ತದೆ ಎಂಬುದನ್ನು ಋಷಿಗಳು ಕಂಡುಹಿಡಿದಿರುತ್ತಾರೆ. ಅದು ಭಗವಂತನ ಅವ್ಯಕ್ತಶಕ್ತಿ. ನಾವು ಆ ಭಗವಂತನ ಶಕ್ತಿಯನ್ನಾಶ್ರಯಿಸಿಕೊಂಡೇ, **ನೀರಿನಲ್ಲಿ ಮೀನುಗಳಿರುವಂತೆ,** ನಮ್ಮ ವ್ಯವಹಾರವನ್ನೆಲ್ಲ ಸಾಗಿಸುತ್ತಿರುವೆವು. ಮೀನುಗಳ ಒಳಗೂ ಹೊರಗೂ ಎಲ್ಲೆಲ್ಲಿಯೂ ನೀರೇ ಇರುವಂತೆ ನಮ್ಮ ಒಳಗೂ ಹೊರಗೂ ಎಲ್ಲೆಲ್ಲಿಯೂ ಆ ಭಗವಂತನ ದಿವ್ಯಶಕ್ತಿಯೇ ತುಂಬಿತುಳುಕಾಡುತ್ತಿರುವದು !

ಆದರೆ ನೀರಿನಲ್ಲಿರುವ ಮೀನುಗಳಿಗೂ ಕಪ್ಪೆಗಳಿಗೂ ತಮ್ಮ ಸುತ್ತಲಿನ ನೀರಿನ ಮಹಿಮೆಯು ಸರಿಯಾಗಿ ತಿಳಿಯದೆ ಇರುವಂತೆ ನಮಗೂ ಆ ಭಗವಂತನ ಅದ್ಭುತಮಹಿಮೆಯು ಸರಿಯಾಗಿ ತಿಳಿಯದೆ ಇರುತ್ತದೆ. ಆದ್ದರಿಂದ ನಾವು ನಿಜವಾಗಿ ಆತನಲ್ಲಿಯೇ ಇರುತ್ತಿದ್ದರೂ ನಮ್ಮ ಸದ್ಯದ ಸ್ಥಿತಿಯಲ್ಲಿ ನೀರಿನಿಂದ ಹೊರಕ್ಕೆ ಹಾಕಿದ ಮೀನುಗಳಂತೆ ಸಂಕಟಪಟ್ಟು ಒದ್ದಾಡುತ್ತಿರುವೆವು. ನೀರಿನ ಹೊರಗಿರುವ ಮೀನುಗಳಿಗೆ ನೀರನ್ನು ಮುಟ್ಟುವದೇ ಬೇಕಾಗಿರುವಂತೆ ನಮಗೆಲ್ಲ ಆ ಭಗವಂತನ ಆನಂದದಲ್ಲಿಯೇ ಹಾಯಾಗಿ ಈಜಾಡುತ್ತಿರುವದೇ ಬೇಕಾಗಿರುತ್ತದೆ. ನಮ್ಮ ದುಃಖಗಳೆಲ್ಲ ಆ ಆನಂದಸಾಗರದ ಹೊರಕ್ಕೆ ಬಂದಿರುವದರಿಂದಲೇ ಆಗಿರುತ್ತವೆ.

ಇಲ್ಲಿ ಇನ್ನೊಂದು ರಹಸ್ಯವಿದೆ. **ನಾವು ನಿಜವಾಗಿ ಭಗವಂತನ ಆನಂದಾಮೃತದ ಸಾಗರದಲ್ಲಿಯೇ ಇರುತ್ತೇವೆ.** ಆದರೂ ಅದರಿಂದ ಹೊರಕ್ಕೆ ಬಂದು ನೀರಡಿಕೆಯಿಂದ **ಸಂಕಟಪಡುತ್ತಿರುವೆವೆಂಬ ಭ್ರಾಂತಿಗೆ ಪಕ್ಕಾಗಿರುತ್ತೇವೆ.** ಎಲ್ಲೆಲ್ಲಿಯೂ ಆ ಪರಮಾತ್ಮನ ಆನಂದವು ತುಂಬಿಲ್ಲದಿದ್ದರೆ ನಾವು ಯಾರೂ ಬದುಕಿರುತ್ತಿರಲಿಲ್ಲ, ಈಗಿರುವ ಚಟುವಟಿಕೆಯುಳ್ಳವರೂ ಆಗಿರುತ್ತಿರಲಿಲ್ಲ. ಈ ತತ್ತ್ವವನ್ನು ಮನಗಾಣಿರಿ. **ನೀವು ನಿಜವಾಗಿ ಆ ಪರಮಾತ್ಮನಲ್ಲಿಯೇ ಇರುವಿರಿ, ಆತನೂ ನಿಮ್ಮೊಳಗೇ ಇರುತ್ತಿರುವನು.** **ಸಂ-28, 45**

## ಋಣಪೂಜೆ

ಮಾತೃದೇವೋ ಭವ (ತಾಯಿಯನ್ನು ದೇವರೆಂದು ಪೂಜಿಸು), ಪಿತೃದೇವೋ ಭವ (ತಂದೆಯನ್ನು ದೇವರೆಂದು ಪೂಜಿಸು), ಆಚಾರ್ಯದೇವೋ ಭವ (ಆಚಾರ್ಯನನ್ನು ದೇವರೆಂದು ಪೂಜಿಸು) !-ಎಂಬ ಮೂರು ವಾಕ್ಯಗಳು ಉಪನಿಷತ್ತಿನಲ್ಲಿರುತ್ತವೆ.

ಒಬ್ಬ ತರುಣನು ಈ ವಾಕ್ಯಗಳನ್ನು ಓದಿದನು. 'ಆಹಾ ! ನಮ್ಮ ಧಾರ್ಮಿಕ ಗ್ರಂಥ ಗಳಲ್ಲಿ ಹೇಳಿರುವ ಈ ಉತ್ತಮಕಾರ್ಯಗಳನ್ನು ಈವರೆಗೆ ನಾನು ಆಚರಿಸಲೇ ಇಲ್ಲವಲ್ಲ!' ಎಂದು ಅವನಿಗೆ ಪಶ್ಚಾತ್ತಾಪವಾಯಿತು. ಸರಿ, ಅಂದಿನಿಂದ ಅವನು ಪ್ರತಿದಿನವೂ ತಾಯಿತಂದೆಗಳಿಬ್ಬರನ್ನೂ ಉಚ್ಚಾಸನದಮೇಲೆ ಕುಳ್ಳಿರಿಸಿ ಅವರಿಗೆ ಹೂಗಳನ್ನೇರಿಸುವದು, ಧೂಪವನ್ನು ಹಾಕುವದು, ದೀಪವನ್ನು ಅವರ ಮುಂದೆ ಹೊತ್ತಿಸಿಡುವದು, ಕರ್ಪೂರ ದಾರತಿಯನ್ನು ಮಾಡುವದು–ಹೀಗೆ ಮಾಡಿ ಒಂದು ಕೋಣೆಯಲ್ಲಿ ಅವರಿಬ್ಬರನ್ನೂ ಸೇರಿಸಿಟ್ಟು ಬಾಗಿಲಿಗೆ ಬೀಗವನ್ನು ಹಾಕುವದಕ್ಕೆ ಮೊದಲುಮಾಡಿದನು. ದೇವರ ಪೂಜೆ ಯನ್ನು ಮಾಡುವವರು ದೇವರ ಮೂರ್ತಿಯನ್ನು ಒಂದು ಕೋಣೆಯಲ್ಲಿರಿಸಿ ಷೋಡ ಶೋಪಚಾರದ (ಹದಿನಾರು ಉಪಚಾರಗಳ) ಪೂಜೆಯನ್ನು ಮಾಡಿ, ಆ ಕೋಣೆ ಮಡಿಯಾಗಿರಬೇಕೆಂದು ಯಾರನ್ನೂ ಅದರೊಳಕ್ಕೆ ಬಿಡದೆ ಭದ್ರವಾಗಿರಿಸುತ್ತಿದ್ದದ್ದನ್ನು ಅವನು ಕಂಡಿದ್ದನು. ಆದ್ದರಿಂದ ತಂದೆತಾಯಿಗಳನ್ನು ದೇವರಂತೆ ಪೂಜಿಸುವದದೆಂದರೆ, ಅವರನ್ನು ಹಾಗೆ ಕೋಣೆಯಲ್ಲಿ ಕೂಡಿಡುವದೇ ಎಂದು ಆ ಹುಚ್ಚನ ಭಾವನೆ !

ನಮ್ಮ ದೇಶಭಕ್ತರನೇಕರು ಇಂಥ ಒಣಪೂಜೆಗೆ ಪ್ರಾರಂಭಿಸಿರುತ್ತಾರೆ. ನಮ್ಮ ದೇಶದ ಕಾವ್ಯ, ಶಿಲ್ಪ, ಚಿತ್ರ, ಸಂಗೀತ, ನಾಟ್ಯ, ಆಯುರ್ವೇದ, ಸಂಸ್ಕೃತಭಾಷೆ, ವೇದ, ಉಪನಿಷತ್ತುಗಳು, ಧರ್ಮಶಾಸ್ತ್ರಗಳು, ಗೀತೆ, ಪುರಾಣಗಳು, ಉದ್ಯೋಗ, ಧರ್ಮಾಚರಣೆ, ಋಷಿಗಳು, ಸಾಧುಸಂತರು–ಇವುಗಳನ್ನೆಲ್ಲ ಭಾಷಣಗಳಿಂದಲೂ ವೃತ್ತಾಂತಪತ್ರಿಕೆಯ ಲೇಖನಗಳಿಂದಲೂ ಜಯಂತಿ, ಆರಾಧನೆ–ಮುಂತಾದ ಉತ್ಸವಗಳಿಂದ ಆಗಾಗ್ಗೆ ಆರಾಧನೆಮಾಡುತ್ತಾರೆ. ಆಮೇಲೆ ಅವುಗಳನ್ನು ಪೆಟ್ಟಿಗೆಗಳಲ್ಲಿ, ಪುಸ್ತಕಭಂಡಾರಗಳಲ್ಲಿ, ಪ್ರದರ್ಶನಶಾಲೆಗಳಲ್ಲಿ, ದೇವಸ್ಥಾನಗಳಲ್ಲಿ, ಬೆಟ್ಟಗಳಮೇಲೆ–ಹೀಗೆ ಎಲ್ಲಿಯೋ ಒಂದು ಅಭುಕ್ತಮೂಲೆಯಲ್ಲಿ ಭದ್ರವಾಗಿಟ್ಟುಬಿಡುತ್ತಾರೆ ! ಆವಾಹನೆ, ವಿಸರ್ಜನೆ–ಇವೆರಡು ಉಪಚಾರಗಳನ್ನು ತಪ್ಪದೆ ಮಾಡುತ್ತಿದ್ದಾರೆ ! ಭಗವಂತನೇ ಅವರಿಗೆ ನಿಜವಾದ ದೇಶಭಕ್ತಿಯ ಮರ್ಮವನ್ನು ತಿಳಿಸಿಕೊಡಬೇಕಾಗಿದೆ. **ಸಂ–28, 94**

## ಋಷಿಗಳ ದಾನ

ಗೋದಾನ, ಭೂದಾನ, ಗ್ರಾಮದಾನ, ಸಂಪತ್ತಿನ ದಾನ, ಶ್ರಮದಾನ–ಮುಂತಾದ ಅನೇಕ ದಾನಗಳು ಈಗ ಪ್ರಶಂಸೆಪಡೆಯುತ್ತಿವೆ. ಆದರೆ ಪೂರ್ವಕಾಲದ ಋಷಿಗಳ ದಾನಕ್ಕೆ ಹೋಲಿಸಿದರೆ ಈ ಯಾವದೊಂದು ದಾನವೂ ಅದಕ್ಕೆ ಸರಿಗಟ್ಟುವಂತಿಲ್ಲವೆಂದು ನನಗೆ ಆಗಾಗ ತೋರುತ್ತಿರುತ್ತದೆ.

ನಾವು ಸಂಪಾದನೆಮಾಡುತ್ತಿರುವ ಹಣವು ನಮಗೆ ಯಾವ ದ್ವಾರದಿಂದ ಬರುತ್ತಿದೆ ಎಂಬುದನ್ನು ಹೇಳುವದು ಕಷ್ಟ. ಯಾರೊಬ್ಬರನ್ನೂ ಹಿಂಸೆಮಾಡದೆ, ಧರ್ಮದಿಂದ

ದುಡಿದ ಹಣವೆ, ಅದು?–ಎಂದು ಒಳಹೊಕ್ಕು ನೋಡಿದರೆ ನಿಜವನ್ನು ಹೇಳುವದು ಕಷ್ಟವಾಗಿರುತ್ತದೆ. ವ್ಯಾಪಾರ, ಕೈಗಾರಿಕೆಯ ಉದ್ಯೋಗ, ಶಿಲ್ಪ, ವೈದ್ಯ, ವಕೀಲಿ–ಮುಂತಾದ ಹಣವನ್ನು ಗಳಿಸುವ ವೃತ್ತಿಗಳು ಬಹಳ ಇರುತ್ತವೆ. ಆದರೆ ಇವುಗಳಲ್ಲಿ ನಮಗೆ ಹಣವು ಪಾಪದ್ರವ್ಯವಲ್ಲವೆಂದು ಎದೆತಟ್ಟಿಕೊಂಡು ಹೇಳಬಲ್ಲವರು ಯಾರು?

ನಾವು ಗಳಿಸಿದ ಹಣವು ನಮ್ಮದಲ್ಲದೆ ಇದ್ದರೆ, ಆ ಹಣವನ್ನು ಕೀರ್ತಿಗಾಗಿ, ಅಥವಾ ಯಾವದಾದರೊಂದು ಸ್ವಾರ್ಥದ ಸಾಧನೆಗಾಗಿ ಅಥವಾ ಮತ್ತೊಬ್ಬರ ಒತ್ತಾಯದಿಂದ ಯಾರಿಗಾದರೂ ಕೊಟ್ಟರೆ ಅದು 'ದಾನ'ವೆನಿಸುವದೆ? ದಾನಕ್ಕಾಗಿ ದಾನಮಾಡಿದರೆ, ಉಪಕಾರಿಯಲ್ಲದ ಸತ್ಪಾತ್ರನಿಗೆ ದಾನಮಾಡಿದರೆ, ದೇಶಕಾಲಗಳನ್ನರಿತು ದಾನಮಾಡಿದರೆ, ಅದು ನಿಜವಾದ ದಾನವು–ಎಂದು ಬಲ್ಲವರು ಹೇಳುತ್ತಾರೆ. ಈ ಅರ್ಥದಲ್ಲಿ ನಮ್ಮ ದಾನಗಳಲ್ಲಿ ಎಷ್ಟು ನಿಜವಾದ ದಾನಗಳಾಗುವವು?

ಧರ್ಮದಿಂದ ಧನವನ್ನು ಸಂಪಾದಿಸಿ ತಮ್ಮ ಕುಟುಂಬದವರಿಗೂ ಸತ್ಪಾತ್ರರಿಗೂ ದಾನಮಾಡಿ, ಅರಣ್ಯಕ್ಕೆ ಹೋಗಿ ಕಂದಮೂಲಗಳನ್ನು ತಿನ್ನುತ್ತಾ, ನಾರುಡೆಯನ್ನುಟ್ಟು, ಮರದ ಕೆಳಗೆ ಎಲೆಮನೆಗಳಲ್ಲಿ ವಾಸಮಾಡುತ್ತಾ, ಇಹಲೋಕದ ಸುಖಕ್ಕೂ ಪರಲೋಕದ ಸುಖಕ್ಕೂ ಬೇಕಾದ ಸಾಧನಗಳನ್ನು ತಿಳಿಸುವ ಧರ್ಮಾರ್ಥಕಾಮಗಳ ವಿಷಯದ ಗ್ರಂಥಗಳನ್ನೂ ಶಾಸ್ತ್ರಗಳನ್ನೂ ರಚಿಸಿ, ತಮಗೆ ಸಿಕ್ಕಿದ ಎಲೆಗಳಮೇಲೆ ಅವನ್ನು ಬರೆದು, ಯೋಗ್ಯಶಿಷ್ಯರಿಗೆ ಉಪದೇಶಮಾಡಿ, ತಮ್ಮ ಕುಲಗೋತ್ರನಾಮಗಳನ್ನು ಕೂಡ ಸರಿಯಾಗಿ ತಿಳಿಸದೆ ಪರೋಪಕಾರಕ್ಕಾಗಿಯೇ ದುಡಿಯುತ್ತಾ ಸಂತತವೂ ತಪಸ್ಸಿನಿಂದಲೇ ಜೀವಿಸುತ್ತಾ ಪರಮಾತ್ಮನಿಷ್ಠರಾಗಿದ್ದ ಋಷಿಗಳ ದಾನದ ಪರಿಮಾಣವನ್ನು ಯಾವ ಮಾನದಂಡದಿಂದ ಅಳೆಯೋಣ? ಅವರಿಗೆ ದೊರಕಿರಬಹುದಾದ ಪರಮಾನಂದವು ಎಂಥದ್ದೆಂದು ಕಲ್ಪಿಸೋಣ? **ಸಂ–28, 142**

## ಗೋರಕ್ಷಣೆ

ಧರ್ಮಬಾಂಧವರೆ, ಸಂಸ್ಕೃತಭಾಷೆಯಲ್ಲಿ ಗೋಶಬ್ದಕ್ಕೆ ಅನೇಕ ಅರ್ಥಗಳಿರುತ್ತವೆ. ಅವುಗಳಲ್ಲಿ ನಾನು ಈ ಲೇಖನಕ್ಕೆ ಹಸು, ಎತ್ತು, ನೆಲ, ನೀರು, ಮಾತು, ಕಣ್ಣು, ಸೂರ್ಯ, ಸ್ವರ್ಗ–ಎಂಬ ಅರ್ಥಗಳನ್ನು ಆರಿಸಿಕೊಂಡು ಇದಕ್ಕೆ 'ಗೋರಕ್ಷಣೆ' ಎಂಬ ತಲೆಬರಹವನ್ನು ಕೊಟ್ಟಿರುತ್ತೇನೆ.

ನಮ್ಮ ಇಹಪರಗಳು ಸುಖದಾಯಕವಾಗಬೇಕಾದರೆ ಗೋರಕ್ಷಣೆಯು ಅತ್ಯವಶ್ಯ. ಇಹಲೋಕವು ಸುಖದಾಯಕವಾಗಬೇಕೆಂದಿದ್ದರೆ ನಾವು ವಾಸಮಾಡುವ ಭೂಮಿ, ಇದರಲ್ಲಿರುವ ನೀರು, ಇದರ ಮೇಲೆ ಓಡಾಡುವ ದನಕರುಗಳು–ಇವುಗಳ ರಕ್ಷಣೆಯು

ಅತ್ಯವಶ್ಯ. ಈಗ್ಗೆ ಭೂಮಿಯನ್ನು ಬಗೆದು ಅದರೊಳಗಿರುವ ಖನಿಜಸಂಪತ್ತನ್ನು ಸಂಪಾದಿಸಿಕೊಂಡು ಸುಖಿಸಬೇಕೆಂಬ ಲಾಲಸೆಯು ನಮ್ಮಲ್ಲಿ ಹೆಚ್ಚುತ್ತಿದೆ. ಆದರೆ ನೆಲವನ್ನು ಉತ್ತು, ಅದರಲ್ಲಿ ಹುಲುಸಾದ ಪೈರನ್ನು ಬೆಳೆದು ನಮಗೂ ನಮ್ಮ ಪಶುವರ್ಗಕ್ಕೂ ಬೇಕಾದ ಆಹಾರವನ್ನು ಬೆಳೆದುಕೊಳ್ಳುವದು ಅತ್ಯವಶ್ಯವೆಂಬ ಬುದ್ಧಿಯು ಈಗ್ಗೆ ಮಾಯವಾಗಿರುವಂತೆ ತೋರುತ್ತಿದೆ. ಭೂಮಿಯಮೇಲೆ ನಲಿದಾಡುತ್ತಾ ಹಸು, ಎತ್ತು, ಕರು–ಮುಂತಾದ ಪ್ರಾಣಿಗಳು ಓಡಾಡುತ್ತಿದ್ದರೆ ನಮ್ಮ ದೈವಸಂಪತ್ತಿನ ಅಭಿವೃದ್ಧಿಯಾಗುತ್ತಿದೆ ಎಂದು ತಿಳಿಯಬೇಕು. ಹಸು ನಮಗೆ ಕೊಡುವ ಹಾಲು, ಮೊಸರು, ತುಪ್ಪ–ಇವುಗಳಿಂದ ದೇಹಕ್ಕೂ ಬುದ್ಧಿಗೂ ಆಗುವ ಲಾಭವನ್ನು ಅದೇಕೊ, ನಾವು ಮರೆತಿರುತ್ತೇವೆ. ಹಸುಗಳಿಂದಲೂ ಎತ್ತುಗಳಿಂದಲೂ ಸಿಕ್ಕುವ ಗೊಬ್ಬರವು ಉತ್ತಮವಾದ ಆಹಾರದ ಬೆಳವಣಿಗೆಗೆ ಸಾಧನವೆಂಬುದು ನಮಗೆ ಗೊತ್ತಿದ್ದರೂ ದನಗಳನ್ನು ಸಾಕುವ ಕೆಲಸವು ನಮಗೆ ಬೇಸರದ ಸ್ಥಾನವಾಗಿದೆ. ಯಂತ್ರಗಳು, ಕೃತಕವಾದ ಗೊಬ್ಬರಗಳು–ಇವುಗಳಿಂದಲೇ ಭೂಮಿಯಲ್ಲಿ ಹೆಚ್ಚಿನ ಸಸ್ಯಸಂಪತ್ತು ದೊರಕುವದೆಂಬ ಹುಚ್ಚು ನಮ್ಮನ್ನು ಹಿಡಿದುಕೊಂಡಿದೆ. ಇದರಿಂದ ಇಹಸುಖವಲ್ಲದೆ ಗೋವನ್ನು ಪೂಜ್ಯ ಬುದ್ಧಿಯಿಂದ ಕಾಣುವದರಿಂದ ದೊರಕುವ ಪುಣ್ಯವೂ ನಮಗೆ ದೂರವಾಗುತ್ತಿದೆ. ಭೂಮಿಗೆ ದುಷ್ಟರ ಭಾರವು ಹೆಚ್ಚಲು ಭೂದೇವಿಯು ಗೋರೂಪದಿಂದ ಭಗವನ್ನಾರಾಯಣನಿಗೆ ಮೊರೆಯಿಟ್ಟಳೆಂಬ ಪುರಾಣದ ಕಥೆಯನ್ನು ನೆನಸಿಕೊಂಡು ನಾವು ಗೋರಕ್ಷಣೆ ಮಾಡಬೇಕು. ನೆಲವನ್ನೂ ನೀರನ್ನೂ ಪವಿತ್ರಸ್ಥಿತಿಯಲ್ಲಿಟ್ಟುಕೊಳ್ಳಬೇಕು; ದನಕರುಗಳನ್ನು ಪೂಜ್ಯಬುದ್ಧಿಯಿಂದ ಕಾಣುವ ಹಳೆಯ ಪದ್ಧತಿಯನ್ನು ಉಜ್ಜೀವನಗೊಳಿಸಿಕೊಳ್ಳಬೇಕು. ಕೆರೆಕಟ್ಟೆಭಾವಿಗಳನ್ನು ತೋಡುವ, ನದಿಗಳನ್ನು ಶುಚಿಯಾಗಿಟ್ಟುಕೊಳ್ಳುವ, ಪುಣ್ಯಕಾರ್ಯವನ್ನು ಪ್ರಾರಂಭಿಸಬೇಕು. ಇದು ಆಧಿಭೌತಿಕಗೋರಕ್ಷಣೆ.

ಇನ್ನು ವಾಕ್ಕು, ನೇತ್ರ–ಇವುಗಳನ್ನು ಕಾಪಾಡಿಕೊಳ್ಳುವ ಗೋರಕ್ಷಣೆಯು ವಿಚಾರ. ವಾಕ್ಕು ಕರ್ಮೇಂದ್ರಿಯಗಳಿಗೂ ನೇತ್ರವು ಜ್ಞಾನೇಂದ್ರಿಯಗಳಿಗೂ ಹೆಗ್ಗುರುತೆಂದು ತಿಳಿಯಿರಿ. ಪವಿತ್ರತಮವಾದ ಸಂಸ್ಕೃತವಾಣಿಯನ್ನು ಕಲಿಯುವದು, ಪ್ರಚಾರಮಾಡುವದು; ವೇದಶಾಸ್ತ್ರಪುರಾಣಾದಿಗಳನ್ನು ಹೇಳುವದು, ಕೇಳುವದು–ಇವುಗಳನ್ನು ಪೂಜ್ಯ ಬುದ್ಧಿಯಿಂದ ಕೈಕೊಳ್ಳಿರಿ. ಪಾಣಿ, ಪಾದ, ಪಾಯು, ಉಪಸ್ಥ–ಎಂಬ ಕರ್ಮೇಂದ್ರಿಯಗಳನ್ನು ಚಾಪಲ್ಯದಿಂದ ಬಳಸದೆ ಪುಣ್ಯಕಾರ್ಯಕ್ಕೇ ಮೀಸಲಾಗಿರಿಸಿ. ಇದರಂತೆ ಚಕ್ಷುಃ, ಶ್ರೋತ್ರ, ಜಿಹ್ವೆ, ನಾಸಿಕೆ, ತ್ವಕ್ಕು–ಎಂಬ ಜ್ಞಾನೇಂದ್ರಿಯಗಳ ಚಾಂಚಲ್ಯಕ್ಕೆ ಅವಕಾಶವನ್ನು ಕೊಡದಿರಿ. ಕೆಟ್ಟ ನೋಟಗಳನ್ನು ನೋಡುವದು, ದುಷ್ಟವಾಕ್ಕುಗಳನ್ನು ಕೇಳುವದು, ನಾಲಗೆಯ ಸವಿಗೆ ಮರುಳಾಗುವದು, ಪರಿಮಳವಾಸನೆಗೆಂದು ಎಲ್ಲದರಲ್ಲಿ

ಹರಿದಾಡುವದು, ಮೃದುಸ್ಪರ್ಶವನ್ನೇ ಬಯಸುವದು-ಎಂಬ ವಿಷಯಲೋಲುಪತೆಗೆ ಜ್ಞಾನೇಂದ್ರಿಯಗಳನ್ನು ಬಿಡದೆ ಸಾತ್ತ್ವಿಕವಿಷಯಗಳ ಸೇವನೆಗೇ ಉಪಯೋಗಿಸಿಕೊಳ್ಳಿರಿ. ಇಂದ್ರಿಯಗಳನ್ನು ಭಗವದ್ವಿಭೂತಿಗಳ ದರ್ಶನಾದಿಗಳಿಗೂ ಭಗವತ್ಕಾರ್ಯಕ್ಕೂ ಮೀಸಲಾಗಿರಿಸಿಕೊಳ್ಳಿರಿ. ಹೀಗಾದರೆ ಆಧ್ಯಾತ್ಮಿಕ ಗೋರಕ್ಷಣೆಯಾಯಿತು.

ಈ ಎರಡು ಬಗೆಯ ಗೋರಕ್ಷಣೆಯನ್ನು ಉತ್ತಮರೀತಿಯಿಂದ ನಡೆಯಿಸಿಕೊಂಡ ವರಿಗೆ ಸ್ವರ್ಗರೂಪವಾದ ಗೋವನ್ನು ರಕ್ಷಿಸಿಕೊಳ್ಳುವ ಕೆಲಸವು ಬಹಳ ಸುಲಭ ವಾಗುವದು. ಅವರಿಗೆ ಸೂರ್ಯನೆಂಬ ಆಧಿದೈವಿಕಗೋವಿನ ರಕ್ಷಣೆಯು ಧರ್ಮದಿಂದ ದೊರಕುವದು, ಪರಸುಖವು ಕಟ್ಟಿಟ್ಟ ಬುತ್ತಿಯಾಗುವದು, ಕಾಲಕ್ರಮದಿಂದ ಪರಮ ಪುರುಷಾರ್ಥವೂ ಅವಶ್ಯವಾಗಿ ದೊರಕುವದು. **ಸಂ-28, 165**

## ದೇವರ ಕಡೆಗೆ ತಿರುಗುವದು

ಈಗ ಚಾರ್ವಾಕವಾದವು ನಮ್ಮ ದೇಶದಲ್ಲಿ ಎಲ್ಲೆಲ್ಲಿಯೂ ಹರಡಿಕೊಂಡು ನಮ್ಮ ಸಂಸ್ಕೃತಿಯನ್ನೇ ಮುಳುಗಿಸುವ ದುಃಸ್ಥಿತಿಯು ಬಂದೊದಗಿದೆ. ಪರದೇಶದವರು ಮನಶ್ಶಾಂತಿದಾಯಕವಾದ ವಿಚಾರಗಳು ಈಗಲೂ ದೊರೆಯುವ ದೇಶವೆಂದರೆ ಭಾರತವೇ' ಎಂದು ಕಂಠೋಕ್ತವಾಗಿ ಸಾರುತ್ತಿರುವಲ್ಲಿ ನಾವು ಮಾತ್ರ ದೇವರು, ಧರ್ಮ, ನೀತಿ-ಇಂಥ ಮಾತುಗಳನ್ನು ಬಳಸುವದಕ್ಕೆ ಅಂಜುತ್ತಿರುವ ಕಾಲವು ಬಂದಿರುತ್ತದೆ !

ಹುಡುಗರಿಗೆ ತಂದೆತಾಯಿಗಳಿಂದಲಾಗಲಿ ಉಪಾಧ್ಯಾಯರಿಂದಲಾಗಲಿ ಸೌಜನ್ಯಶಿಕ್ಷಣವು ದೊರೆಯದೆ ಇದ್ದರೆ ಮುಂದೆ ನಮ್ಮ ದೇಶದ ನೀತಿಯ ಮಟ್ಟವು ಎಲ್ಲಿಗೆ ಇಳಿಯಬಹುದು? ಲಂಚ, ಪರನಿಂದೆ, ಆತ್ಮಶ್ಲಾಘನೆ, ಪರುಷವಚನ, ಅಹಂಕಾರ-ಇವುಗಳ ಆದರ್ಶವೇ ಹಿರಿಯರಲ್ಲಿ ದೊರೆಯುತ್ತಿದ್ದರೆ ನಮ್ಮ ತರುಣರು ಗಹನವಾದ ಪರಮಾರ್ಥವಿಚಾರಗಳನ್ನೂ, ಭಕ್ತಿ, ಜ್ಞಾನ, ಪರೋಪಕಾರ, ಅಹಿಂಸೆ, ಸತ್ಯ, ಅಭಯ-ಇಂಥ ದೈವಸಂಪತ್ತಿನ ಭಾವನೆಗಳನ್ನೂ ಎಲ್ಲಿಂದ ಕಲಿತುಕೊಳ್ಳಬೇಕು? ಈಗ ಅವರಲ್ಲಿ ಮೊಳೆಯುತ್ತಿರುವ ಅವಿಧೇಯತೆ, ಹೊಣೆಗಾರಿಕೆಯಿಲ್ಲದ ನಡತೆ, ಅನೀತಿಯ ಪ್ರೇಮ-ಮುಂತಾದ ದುರ್ಭಾವಗಳು ಹೇಗೆ ನಾಶವಾಗಬೇಕು? **ಸಂ-28, 214**

## ಎಲ್ಲಕ್ಕೂ ಕಷ್ಟವಾದದ್ದು

ಪೂರ್ವದಲ್ಲಿ ಗ್ರೀಸ್‌ದೇಶದಲ್ಲಿ ಸೋಫಿಸ್ಟರೆಂಬ ತಾರ್ಕಿಕರಿದ್ದರು. ಅವರನ್ನು ವಾದದಲ್ಲಿ ಗೆಲ್ಲುವದು ಎಂಥವರಿಗಾದರೂ ಕಷ್ಟವಾಗಿತ್ತು. ಸುಳ್ಳನ್ನು ನಿಜಮಾಡುವದಕ್ಕೂ ನಿಜವನ್ನು ಸುಳ್ಳುಮಾಡುವದಕ್ಕೂ ಬರುತ್ತಿತ್ತು, ಅವರ ತರ್ಕ!

ಒಮ್ಮೆ ಇಂಥ ತಾರ್ಕಿಕನೊಬ್ಬನು ಮೈಲೀಟಸ್ ನಗರದ ಸಾಧುವಿನ ಬಳಿಗೆ ಬಂದನು. ಉತ್ತರಹೇಳುವದಕ್ಕೆ ಯಾರಿಗೂ ಆಗದೆಂದು ತಾನು ಭಾವಿಸಿದ್ದ ಕೆಲವು ಪ್ರಶ್ನೆಗಳನ್ನು ಒಂದೇ ಸಮನೆ ಒಂದರ ಹಿಂದೊಂದರರಂತೆ ಹಾಕುತ್ತಾ ಬಂದನು, ಸಾಧುವು ಮಾತ್ರ ಶಾಂತಿಯಿಂದ ಅವೆಲ್ಲಕ್ಕೂ ಉತ್ತರಹೇಳಿದನು.

1. ಪ್ರ : ಅತ್ಯಂತ ಪುರಾತನವಾದ ವಸ್ತು ಯಾವದು?
ಉ : ದೇವರು; ಏಕೆಂದರೆ ಆತನು ಯಾವಾಗಲು ಇದ್ದೇ ಇರುತ್ತಾನೆ.

2. ಪ್ರ : ಅತ್ಯಂತ ಸುಂದರವಾದ ವಸ್ತು ಯಾವುದು?
ಉ : ಪ್ರಪಂಚವು; ಏಕೆಂದರೆ ಅದು ದೇವರ ಸೃಷ್ಟಿಯಾಗಿರುತ್ತದೆ.

3. ಪ್ರ : ಅತ್ಯಂತ ವಿಶಾಲವಾದದ್ದು ಯಾವದು?
ಉ : ಆಕಾಶವು; ಏಕೆಂದರೆ ಸೃಷ್ಟಿಯಾದ ವಸ್ತುಗಳೆಲ್ಲ ಅದರಲ್ಲಿಯೇ ಇರುವವು.

4. ಪ್ರ : ಅತ್ಯಂತ ವಿಶಾಲವಾದದ್ದು ಯಾವದು?
ಉ : ಆಸೆ; ಏಕೆಂದರೆ ಎಲ್ಲವ ಹೋದಮೇಲೂ ಮನುಷ್ಯನೊಡನೆ ಅದು ಉಳಿದುಕೊಂಡಿರುತ್ತದೆ.

5. ಪ್ರ : ಅತ್ಯಂತ ಉತ್ತಮವಾದದ್ದು ಯಾವದು?
ಉ : ಸದ್ಗುರುವು; ಏಕೆಂದರೆ ಅದಿಲ್ಲದೆ ಯಾವದೂ ಒಳ್ಳೆಯದೇ ಆಗಿರುವದಿಲ್ಲ.

6. ಪ್ರ : ಅತ್ಯಂತ ವೇಗವಾದದ್ದು ಯಾವದು?
ಉ : ಮನಸ್ಸು; ಏಕೆಂದರೆ ಅದು ನಿಮಿಷಾರ್ಧದಲ್ಲಿ ಪ್ರಪಂಚದ ಕೊನೆಗೂ ಹೋಗಬಲ್ಲದು.

7. ಪ್ರ : ಅತ್ಯಂತ ಬಲವಾದದ್ದು ಯಾವದು?
ಉ : ಆವಶ್ಯಕತೆ; ಏಕೆಂದರೆ ಅದಿದ್ದರೆ ಜೀವನದ ಸಂಕಷ್ಟಗಳನ್ನೆಲ್ಲ ಮನುಷ್ಯನು ಎದುರಿಸಬಹುದು.

8. ಪ್ರ : ಅತ್ಯಂತ ಸುಲಭವಾದದ್ದು ಯಾವದು?
ಉ : ಮತ್ತೊಬ್ಬರಿಗೆ ಉಪದೇಶಮಾಡುವದು.

ಹೀಗೆ ಪ್ರಶ್ನೋತ್ತರಗಳಾದ ಮೇಲೆ ತಾರ್ಕಿಕನು ಮತ್ತೊಂದು ಪ್ರಶ್ನೆಯನ್ನು ಹಾಕಿದನು. ಆಗ ಸಾಧುವು ಕೊಟ್ಟ ಉತ್ತರವು ಪ್ರಶ್ನೆಮಾಡಿದವನಿಗೆ ತಿಳಿದಂತೆ ಕಾಣಲಿಲ್ಲ; ಈಗಲೂ ಅದರ ಪೂರ್ಣಾಭಿಪ್ರಾಯವು ಅನೇಕರಿಗೆ ತಿಳಿಯುವದು ಕಷ್ಟವಾಗಿಯೇ ಇರುವದು.

9. ಪ್ರ : ಅತ್ಯಂತ ಕಷ್ಟವಾದದ್ದು ಯಾವದು?
ಉ : ತನ್ನನ್ನು ತಾನು ತಿಳಿದುಕೊಳ್ಳುವದು.

# ಪ್ರಯಾಣ ಮುಗಿದಾಗ

ಪಾಠಕಮಹಾಶಯರೆ, ನೀವು ಆಗಾಗ್ಗೆ ಎಲ್ಲಿಗಾದರೂ ಪ್ರಯಾಣಮಾಡಿರುತ್ತೀರಷ್ಟೆ? ಪ್ರಯಾಣಕ್ಕೆ ಸಿದ್ಧರಾದಾಗ ಮನಸ್ಸು ಹೇಗಿತ್ತು? ಇದನ್ನು ಎಂದಾದರೂ ಯೋಚಿಸಿದ್ದೀರಾ?

ಪ್ರಯಾಣಕ್ಕೆ ಹೊರಡುವ ಮುಂಚೆ ನಾವು ಎಲ್ಲಿಗೆ ಹೋಗಬೇಕೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡಿರುತ್ತೇವೆ. ಅದಕ್ಕೆ ತಕ್ಕಂತೆ ಸಾಮಾನುಗಳನ್ನು ಸಿದ್ಧಗೊಳಿಸಿಕೊಳ್ಳುತ್ತೇವೆ. ನಾವು ಎಷ್ಟೇ ಸಿದ್ಧರಾಗಿದ್ದರೂ, ನಾವು ಮುಟ್ಟಬೇಕಾದ ಸ್ಥಳವು ನಮಗೆ ಎಷ್ಟೇ ಪರಿಚಿತವಾಗಿದ್ದರೂ ಪ್ರಯಾಣವು ಸುಖವಾಗಿ ಸಾಗಬೇಕು, ಸುರಕ್ಷಿತವಾಗಿ ಮಜಲನ್ನು ಮುಟ್ಟಬೇಕು-ಎಂದು ನಮ್ಮ ಮನಸ್ಸು ಹವಣಿಸುತ್ತಿರುವದು. ಪ್ರಯಾಣದಲ್ಲೆಲ್ಲ ನಾವು ಬೇರೆ ಯಾವದರಲ್ಲಿ ಆಸಕ್ತರಾಗಿದ್ದರೂ ನಾವು ಮುಟ್ಟಬೇಕಾದ ಕೊನೆಯ ಸ್ಥಳವನ್ನು ಮಾತ್ರ ಎಂದಿಗೂ ಮರೆಯುವಂತಿರುವದಿಲ್ಲ. ಅಲ್ಲವೆ? ಆದರೆ ನಾವು ಸೇರಬೇಕಾಗಿದ್ದ ಸ್ಥಳಕ್ಕೆ ಮುಟ್ಟಿದಾಗ? ಅಂತೂ ಪ್ರಯಾಣದ ಕಷ್ಟವು ಮುಗಿಯಿತಲ್ಲ ! ಇಲ್ಲಿಗೆ ಬಂದು ಸೇರಿದೆನಲ್ಲ !-ಎಂಬ ತೃಪ್ತಿಯು ನಿಮ್ಮ ಮನಸ್ಸಿಗೆ ಶಾಂತಿಯನ್ನು ಕೊಡುತ್ತದೆ. ಅಲ್ಲವೆ?

ಆದರೆ ಯಾವದಾದರೂ ಕಾರಣದಿಂದ ನಿಮಗೆ ಮುಟ್ಟಬೇಕಾದ ಸ್ಥಳದ ಅರಿವೂ ಇಲ್ಲದೆ, ಜೊತೆಗೆ ಮತ್ತೊಬ್ಬ ಮಾರ್ಗದರ್ಶಿಗಳೂ ಇಲ್ಲದೆ, ನಟ್ಟನಡುವೆ ಎಲ್ಲಿಯೋ ದಾರಿತಪ್ಪಿ ಇಳಿಯಬೇಕಾಗಿಬಂದರೊ? ಆಗ, ಹೊರಡುವಾಗಲೂ ಮನಸ್ಸಿನಲ್ಲಿ ತಳಮಳ, ಇಳಿದಾಗಲೂ ತಳಮಳ !

ನಮ್ಮಲ್ಲಿ ಹಲವರಿಗೆ ಜೀವನದ ಪಯಣವು ನಮ್ಮನ್ನು ಎಲ್ಲಿಗೆ ಮುಟ್ಟಿಸಬೇಕಾಗಿದೆ ಎಂಬುದೇ ತಿಳಿದಿರುವದಿಲ್ಲ. ಜೀವನದಲ್ಲಿ ಯಾವ ಮಾರ್ಗದಿಂದ ನಡೆದರೆ ಒಳ್ಳೆಯದೆಂದು ತಿಳಿಸುವವರೂ ಸಿಕ್ಕಿರುವದಿಲ್ಲ. ಈ ಲೋಕದ ಜೀವನವು ಮುಗಿದು ಈ ಶರೀರವನ್ನು ಇಲ್ಲಿಯೇ ಬಿಟ್ಟುಹೋಗುವಾಗ ಕೊನೆಗೆ 'ಎಲ್ಲಿಗೆ ಬಂದು ನಿಂತೆನು? ಮುಂದೆ ಎಲ್ಲಿಗೆ ಹೋಗಲಿರುವೆನೋ ಯಾರು ಬಲ್ಲರು?' ಎಂಬ ಕಳವಳವು ಮನಸ್ಸಿನಲ್ಲಿ ಹುಟ್ಟುಕೊಳ್ಳುವ ಸಂಭವವಿದೆ.

ನಾವು ಮಾಡುವ ಧರ್ಮಾಧರ್ಮಗಳಿಗೂ, ನಮ್ಮ ಸದಸದ್ಭಾವನೆಗಳಿಗೂ ಅನುಗುಣವಾಗಿ ನಮ್ಮ ಪಯಣವು ಸಲೀಸಾಗಿಯೋ ಆಯಾಸಕರವಾಗಿಯೋ ಇರುತ್ತದೆ. ಕೊನೆಗೆ ಈ ಶರೀರವನ್ನು ಬಿಟ್ಟು ತೆರಳುವಾಗ ಮನಸ್ಸಿನಲ್ಲಿ ಉದ್ವೇಗವೋ, ಸಮಾಧಾನವೋ ಇರುತ್ತದೆ. ಆದ್ದರಿಂದ ಈ ಪ್ರಯಾಣಕ್ಕೆ ಎಚ್ಚರಿಕೆಯಿಂದ ಸಿದ್ಧರಾಗಿ ಮಾರ್ಗದರ್ಶಕಸಾಧುಗಳನ್ನು ಜೊತೆಗೆ ಇರಿಸಿಕೊಳ್ಳಿರಿ. ಸಂ-28, 238

# ಧರ್ಮದ್ರೋಹ, ಸಂಸ್ಕೃತಿ ದ್ರೋಹ

ಭಾರತದೇಶದಲ್ಲಿ ಸಂಸ್ಕೃತಿಯು ಧರ್ಮದ ಆಧಾರದಮೇಲೆ ನಿಂತಿರುತ್ತದೆ. ಆದರೆ ಆಧುನಿಕಶಿಕ್ಷಣದ ಪ್ರಭಾವದಿಂದ ನಮ್ಮ ಜನರಿಗೆ ಧರ್ಮದ ಮೇಲಿನ ಪ್ರೇಮವು ಸಂಸ್ಕೃತಿಯ ಮೇಲಿನ ಪ್ರೇಮವೂ ಕಡಿಮೆಯಾಗುತ್ತಲೇ ನಡೆದಿದೆ.

ಇದಕ್ಕೆ ಸರಕಾರಿಯ ಕಾನೂನುಗಳೂ, ಸ್ಥಳೀಯ ಅಧಿಕಾರಿಗಳೂ, ಕೆಲವು ವೇಳೆಗಳಲ್ಲಿ ನ್ಯಾಯಾಲಯಗಳುಕೂಡ ಪ್ರೋತ್ಸಾಹಕವಾಗಿವೆಯೆಂದೂ ಮತಕ್ಕಾಗಿಯೂ, ಮುಖ್ಯವಾಗಿ ಸಂಸ್ಕೃತಭಾಷೆಗಾಗಿಯೂ, ಮೀಸಲಿಟ್ಟಿರುವ ಧನನಿಧಿಗಳನ್ನು ಬೇರೆಯ ಪ್ರಯೋಜನಕ್ಕಾಗಿ ವಿನಿಯೋಗಿಸಲಾಗುತ್ತಿದೆಯೆಂದೂ ಇದನ್ನು ನಿಲ್ಲಿಸುವದು ಅತ್ಯವಶ್ಯವೆಂದೂ ಶ್ರೀ ಕೆ.ಎಮ್: ಮುನ್ಷಿಯವರು "Bhavan's Journal" ಎಂಬ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ.

ಆಚಾರಗಳು, ಪೂಜೆ, ಜಪಾಭಿಷೇಕ, ಧ್ಯಾನ, ಭಜನ–ಮುಂತಾದವುಗಳ ಬೆಲೆಯನ್ನು ಮನದಂದು ತಾವೂ ಅನುಸರಿಸುತ್ತಾ ಮತ್ತೊಬ್ಬರಿಗೂ ಅವುಗಳಲ್ಲಿ ಆದರವಾಗುವಂತೆ ಮಾಡುವ ಸ್ವಯಂಸೇವಕರ ಆವಶ್ಯಕತೆಯು ಈಗ ಹೆಚ್ಚಾಗಿ ಬೇಕಾಗಿರುತ್ತದೆ.

ಜನರು ಹೆಚ್ಚಾಗಿ ಧರ್ಮಮಾರ್ಗದಲ್ಲಿ ನಡೆಯಬೇಕೆಂದು ನಿಮ್ಮ ಉದ್ದೇಶವಿದೆಯೆ? ಮೊದಲು ನೀವು ಸತ್ಸಾಧನಗಳಲ್ಲಿ ನಿರತರಾಗಿರಿ. ಎಲ್ಲರಿಗೂ ಸನ್ಮಾರ್ಗದಲ್ಲಿ ಆಸಕ್ತರಾಗುವ ಬುದ್ಧಿಯನ್ನು ಅನುಗ್ರಹಿಸೆಂದು ಭಗವಂತನನ್ನು ಬೇಡಿಕೊಳ್ಳಿರಿ. ಆಗ ಮತಾಚಾರಗಳ ಧನದ ಅಪವ್ಯಯವು ನಿಂತುಹೋಗುವದು. ಭಕ್ತಿಜ್ಞಾನವೈರಾಗ್ಯಗಳ ಬೋಧೆಗಿಂತಲೂ ಹೆಚ್ಚಾಗಿ ಅವುಗಳನ್ನು ಆಚರಣೆಗೆ ತರುವ ಮಹಾತ್ಮರೇ ಈಗಿನ ಕಾಲಕ್ಕೆ ಹೆಚ್ಚಾಗಿ ಬೇಕಾಗಿರುತ್ತಾರೆ. ಸದ್ಗೃಹಸ್ಥರೆಲ್ಲರೂ ತಮ್ಮ ಕುಟುಂಬದಲ್ಲಿರುವವರಿಗೆಲ್ಲ ಅಧ್ಯಾತ್ಮ ಸಾಧನೆಯಲ್ಲಿ ಆಸಕ್ತಿಯುಂಟಾಗುವ ಹಾಗೆ ತಮ್ಮ ಆದರ್ಶವರ್ತನೆಯಿಂದ ತೋರಿಸಿ ಕೊಡುವದಕ್ಕೆ ಯತ್ನಿಸಬೇಕು. **ಸಂ–28, 297**

# ದೇಶ ಪ್ರೀತಿ ಈಶ ಪ್ರೀತಿ

ದೇಶವು ಎಷ್ಟೆಂದರೂ ಏಕದೇಶ, ಈಶನು ಸರ್ವದೇಶಕಾಲ ಗಳಲ್ಲಿಯೂ ಇದ್ದು ದೇಶಕಾಲಾತೀತನಾಗಿರುವನು. ಆದ್ದರಿಂದ ಈಶಪ್ರೀತಿಯೊಳಗೆ ದೇಶಪ್ರೀತಿಯು ಅಡಕವಾಗಿರುವದೇ ಯುಕ್ತ.

ದೇಶವು ಭೂಮಂಡಲವನ್ನು ತುಂಡುತುಂಡುಮಾಡಿರುವ ತಾತ್ಕಾಲಿಕಕಲ್ಪಿತ ಭಾಗ; ಈಶನೆಂದರೆ ಭೂಲೋಕವೇ ಮುಂತಾಗಿ ಎಲ್ಲಾ ಲೋಕಗಳನ್ನೂ ಒಂದುಗೂಡಿಸುವ ಚಿದಾನಂದಸಾಗರ. ಆದ್ದರಿಂದ ದೇಶಪ್ರೀತಿಯು ಅಲ್ಪವಾಗದಿರಬೇಕಾದರೆ, ಈಶಪ್ರೀತಿಗೆ ಒಯ್ಯುವದಾಗಿರಬೇಕು.

ದೇಶವೆಂದರೆ ಖನಿಜಸಂಪತ್ತು, ಸಸ್ಯಸಂಪತ್ತು, ಪ್ರಾಣಿಸಂಪತ್ತು-ಇವುಗಳು ಆಯಾ ದೇಶದವರಿಗೆ ಹೆಮ್ಮೆಯನ್ನು ತರುವ ಭಾಗವಾಗಬಾರದು. ಮನುಷ್ಯರ ಭಾಷೆ, ಜಾತಿ, ಕುಲ, ಬಣ್ಣ, ಮತ-ಮುಂತಾದವುಗಳ ವೈಲಕ್ಷಣ್ಯವನ್ನು ನೆನಪಿಗೆ ತರುವ ಭೂಭಾಗವಾಗ ಬಾರದು. ಸಮಾಜ, ರಾಜಕಾರಣ-ಈ ನಿಮಿತ್ತಗಳಿಂದ ಒಬ್ಬರಿಂದೊಬ್ಬರನ್ನು ಬೇರ್ಪಡಿಸುವದಾಗಿರಬಾರದು. ಮಿಕ್ಕ ದೇಶಗಳೊಡನೆ ತನ್ನ ಸಂಸ್ಕೃತಿಯನ್ನು ವಿನಿಮಯ ಮಾಡಿಕೊಂಡು, ಎಲ್ಲರೂ ಒಬ್ಬ ಈಶನ ಮಕ್ಕಳೇ, ಅಂಶಗಳೇ, ಪ್ರತಿಬಿಂಬಗಳೇ ಅಥವಾ ಕೊನೆಯಲ್ಲಿ ಅವನಿಂದ ಅಭಿನ್ನರೇ-ಎಂಬ ಅರಿವನ್ನು ಮನದಟ್ಟುಮಾಡಿಕೊಡುವದಾಗ ಬೇಕು. ಇಂಥ ದೇಶಪ್ರೀತಿಯೇ ನಿಜವಾದ ದೇಶಪ್ರೀತಿ.

ಲೋಕಕ್ಷಯವನ್ನು ಮಾಡುವ ಯೋಚನೆಗಳು ದೇಶಪ್ರೀತಿಯ ಕುರುಹಲ್ಲ; ಲೋಕ ವನ್ನೆಲ್ಲ ಒಂದೆಂದು ಭಾವಿಸುವದಕ್ಕೆ ಸೌಕರ್ಯವನ್ನು ಕಲ್ಪಿಸುವ ಯೋಚನೆಗಳೇ ನಿಜವಾದ ದೇಶಪ್ರೀತಿಯ ಕುರುಹು. ದೇಶವೂ ಈಶನಿಗೆ ಪ್ರತೀಕವಾದರೆ ಆಗ ದೇಶಪ್ರೀತಿಯು ಈಶಪ್ರೀತಿಯೇ ಆಗುವದು. 'ಈಶಾವಾಸ್ಯಮಿದಂ ಸರ್ವಮ್' ಇದೆಲ್ಲವನ್ನೂ ಈಶ್ವರ ತತ್ತ್ವದಿಂದ ಮುಚ್ಚಿಬಿಡಬೇಕು. ಈ ಉಪನಿಷದ್ಭಾವನೆಯನ್ನು ಬೆಳೆಯಿಸುವ ಮಹನೀಯರೇ ನಿಜವಾದ ದೇಶಭಕ್ತರು. ಅಣ್ಣಗಳಿರ, ತಮ್ಮಗಳಿರ, ನಿಮ್ಮ ದೇಶಭಕ್ತಿಯು ಎಂದಿಗೂ ಈಶಭಕ್ತಿಗೆ ಅಡ್ಡವಾಗದಿರಲಿ. ನಿಮಗೆ ದೇಶವೂ ಈಶನೂ ಒಂದೇ ಆಗಿರಲಿ! **ಸಂ-30, 46**

# ದ್ವಂದ್ವಮೋಹ

ಸರ್ವಜೀವರನ್ನೂ ಹುಟ್ಟುವಾಗಲೆ ಇಚ್ಛಾದ್ವೇಷದಿಂದುಂಟಾಗುವ ದ್ವಂದ್ವಮೋಹವು ಆವರಿಸಿಕೊಂಡುಬಿಟ್ಟಿರುತ್ತದೆ-ಎಂದು ಭಗವಂತನು ಅಪ್ಪಣೆ ಕೊಡಿಸಿರುತ್ತಾನೆ. ವಿಷಯಗಳು ನಮ್ಮೆದುರಿಗೆ ಬಂದಾಗ ಅವುಗಳಲ್ಲಿ 'ಇದು ಒಳ್ಳೆಯದು, ಇದು ಕೆಟ್ಟದ್ದು' ಎಂಬ ದುರಭಿಪ್ರಾಯವು ಮೊದಲೇ ಉಂಟಾಗಿಬಿಡುತ್ತದೆ, ಒಳ್ಳೆಯದರಲ್ಲಿ ಇಚ್ಛೆಯೂ, ಕೆಟ್ಟದ್ದರಲ್ಲಿ ದ್ವೇಷವೂ ನಮಗೆ ಅರಿವಿಲ್ಲದೆಯೇ ಉಂಟಾಗಿಬಿಡುತ್ತದೆ. ಆಗ ನಮ್ಮ ಅಂತಃಕರಣದಲ್ಲಿ ಮೋಹವು ಉಂಟಾಗಿಬಿಡುತ್ತದೆ. ಮೋಹವೆಂದರೆ ಪರಮಾರ್ಥವಾಗಿರುವ ಆತ್ಮತತ್ತ್ವದ ಜ್ಞಾನವು ಉಂಟಾಗುವದಕ್ಕೆ ಇರುವ ತಪ್ಪುತಿಳಿವಳಿಕೆಯ ರೂಪದ ಅಡ್ಡಿಯು.

ಮೋಹವುಂಟಾಗಿರುವವರಿಗೆ ಹೊರಗಿನ ವಿಷಯಗಳ ವಿಷಯಕ್ಕೆ ಕೂಡ ಸರಿಯಾದ ಜ್ಞಾನವುಂಟಾಗಲಾರದು. ಏಕೆಂದರೆ ಮೋಹಕ್ಕೆ ವಶವಾಗಿರುವ ಚಿತ್ತವು ಹೊಯ್ದಾಡುತ್ತಿರು ವದರಿಂದ ವಿಷಯವನ್ನು ಇದ್ದದ್ದುಇದ್ದಂತೆ ತಿಳಿಯಲಾರದೆ ಇರುತ್ತದೆ. ಇನ್ನು ತನ್ನೊಳಗೇ ಇರುವ ಸೂಕ್ಷ್ಮವಾದ ಆತ್ಮನ ವಿಷಯಕ್ಕೆ ಸರಿಯಾದ ತಿಳಿವಳಿಕೆಯುಂಟಾಗಲಾರದೆಂದು ಹೇಳುವದೇನಿದೆ?

ಆದ್ದರಿಂದ ತತ್ತ್ವಜ್ಞಾನವನ್ನು ಪಡೆದುಕೊಳ್ಳಬೇಕೆನ್ನುವವರು ಮೊದಲು ಇಚ್ಛಾದ್ವೇಷಗಳಿಂದ ಬಿಡುಗಡೆಯಾಗುವದಕ್ಕೆ ಬೇಕಾದ ಪ್ರತಿಪಕ್ಷಭಾವನೆಯನ್ನು ಅಭ್ಯಾಸಮಾಡಿಕೊಳ್ಳಬೇಕು. ಶಾಸ್ತ್ರದಲ್ಲಿ ಹೇಳಿರುವಂತೆ ಪುಣ್ಯಕರ್ಮವನ್ನು ಮಾಡಬೇಕು. ಭಗವಂತನ ನಾಮಸ್ಮರಣೆಯಿಂದ ಶುದ್ಧರಾಗಬೇಕು. **ಸಂ–33, 162**

# ದ್ವಂದ್ವಗಳನ್ನು ದಾಟುವದು

ಸಂಸಾರದಲ್ಲಿ ನಮಗೆ ಕಾಣಬರುವ ದೃಶ್ಯಗಳಲ್ಲಿ ಕೆಲವು ಒಂದಕ್ಕೊಂದು ವಿರುದ್ಧವಾಗಿರುವ ಎರಡು ವಸ್ತುಗಳ ಕೂಟವಾಗಿರುವವು. ಎರಡು ವಸ್ತುಗಳು ಜೊತೆಜೊತೆಯಾಗಿ ನಮ್ಮ ಬುದ್ಧಿಗೆ ಗೋಚರವಾಗುತ್ತಾ ನಮಗೆ ಸುಖದುಃಖಗಳನ್ನು ಉಂಟುಮಾಡುತ್ತಿರುವವು. ಈ ಜೋಡಿಗಳಲ್ಲಿರುವ ಎರಡು ವಸ್ತುಗಳೂ ಯಾವಾಗಲೂ ಜೊತೆಯಲ್ಲಿರುವವೆಂದರ್ಥವಲ್ಲ. ಇವುಗಳಲ್ಲಿ ಒಂದನ್ನು ಕಂಡರೆ ಅದರ ವಿರುದ್ಧವಾದ ಮತ್ತೊಂದರ ನೆನಪನ್ನು ಕೊಡುತ್ತಾ ನಮಗೆ ಒಂದು ಬೇಕೆಂದೂ ಮತ್ತೊಂದು ಬೇಡವೆಂದೂ ಮನಸ್ಸಿನ ಭಾವವುಂಟಾಗುವಂತೆ ಮಾಡುತ್ತಿರುವವು.

ಕೆಲವು ಉದಾಹರಣೆಗಳಿಂದ ನನ್ನ ಅಭಿಪ್ರಾಯವು ನಿಮಗೆ ಸ್ಪಷ್ಟವಾಗಿ ತಿಳಿಯಬರಬಹುದು. ಈಗ ನೋಡಿ: ಕಿವಿಗೆ ಆಗಾಗ ಕರ್ಕಶಶಬ್ದಗಳೂ ಬೀಳುತ್ತಿರುವವು, ಇಂಪಾದ ಧ್ವನಿಗಳೂ ಕೇಳಬರುತ್ತಿರುವವು, ಅಲ್ಲವೆ? ನಾವು ಜನರ ಕಠಿನೋಕ್ತಿಗಳನ್ನೂ ಕೇಳುತ್ತಿರುವೆವು, ಮೃದುವಾದ ಹಿತೋಕ್ತಿಗಳನ್ನೂ ಆಲೈಸುತ್ತಿರುವೆವು. ಇದರಂತೆ ನಮ್ಮ ಮೈಗೆ ಒಂದು ವೇಳೆ ಶೀತವೂ ಮತ್ತೊಂದು ವೇಳೆ ಉಷ್ಣವೂ ತಗಲುತ್ತಿರುವದು, ತರಕಾದ ವಸ್ತುಗಳೂ ಮೆದುವಾದ ವಸ್ತುಗಳೂ ಆಗಿಂದಾಗ್ಗೆ ಸೋಕುತ್ತಿರುವವು. ಹೀಗೆಯೇ ಕಣ್ಣಿಗೆ ಕೊಕ್ಕರಿಸುವ ನೋಟಗಳು, ಸಹಿಸಲಾರದ ಬಣ್ಣಗಳು, ಅಸಹ್ಯಕರವಾದ ರೂಪಗಳು–ಇವೆಲ್ಲ ಒಂದೊಂದು ವೇಳೆ ಗೋಚರವಾಗುವಂತೆ ಮತ್ತೊಂದು ವೇಳೆಯಲ್ಲಿ ಹಿತಕರವಾದ ನೋಟಗಳು, ಹಾಯಾಗಿ ತೋರುವ ಬಣ್ಣಗಳು, ಸುಂದರವಾದ ರೂಪಗಳು–ಇವೂ ಗೋಚರವಾಗುತ್ತಿರುವವು; ನಾಲಗೆಗೆ ತಡೆಯಲಾರದಂಥ ಕಹಿ, ಕಾರ, ಒಗರು–ಇವುಗಳಲ್ಲದೆ ಇಷ್ಟವಾಗುವ ಸಿಹಿ ಮುಂತಾದ ಸವಿಗಳೂ ತಾಕುತ್ತಿರುವವು; ಮೂಗಿಗೆ ಕೊಳೆತ ಕೆಟ್ಟನಾತಗಳೇ ಅಲ್ಲದೆ ಅತ್ಯಂತ ಮೋಹಕವಾದ ಸುಗಂಧಗಳೂ ಬಡಿಯುತ್ತಿರುವವು. ಹೀಗೆ ನಮ್ಮ ಹೊರಗಡೆಯಿಂದ ಪರಸ್ಪರವಿರುದ್ಧಗಳಾದ ಎರಡೆರಡು ಬಗೆಯ ಭಾವಗಳನ್ನುಂಟುಮಾಡುವ ವಿಷಯಗಳ ಜೋಡಿಗಳ ಸೋಂಕು ನಮಗೆ ತಪ್ಪದೆ ಆಗುತ್ತಲೂ ಆ ಸೋಂಕಿನಿಂದ ನಮಗೆ ಆಯಾಕಾಲಕ್ಕೆ ಸುಖವೋ ದುಃಖವೋ ಆಗುತ್ತಲೂ ಇರುವದು. ಅಲ್ಲವೆ? ಹೀಗೆ ಪರಸ್ಪರವಿರುದ್ಧಗಳಾದ ಎರಡುವಿಷಯಗಳ ಜೋಡಿಗಳಿಗೆ **"ದ್ವಂದ್ವಗಳು"** ಎಂದು ಹೆಸರು.

ದ್ವಂದ್ವಗಳ ವಿಷಯದಲ್ಲಿ ಬಹು ಜನರ ಅಭಿಪ್ರಾಯವು ಹೇಗಿರುವದೆಂದರೆ ದ್ವಂದ್ವಗಳಲ್ಲಿ ಒಂದು ಬೇಕಾದದ್ದು, ಮತ್ತೊಂದು ಬೇಡವಾದದ್ದು; ವಿವೇಕಿಯಾದವನು ಬೇಕಾದದ್ದನ್ನು ಸಂಪಾದಿಸಿಕೊಳ್ಳಬೇಕು, ಬೇಡವಾದದ್ದನ್ನು ನಿವಾರಿಸಿಕೊಳ್ಳಬೇಕು ಅಥವಾ ಬಂದರೆ ತೊಲಗಿಸಿಕೊಳ್ಳಬೇಕು. ಈ ಅಭಿಪ್ರಾಯವುಳ್ಳವರಿಗಾಗಿಯೇ "ಇಗೋ, ನಿಮಗೆ ಬೇಕಾದ ಇಂಥ ಪದಾರ್ಥಗಳನ್ನು ಹೀಗೆ ಸಂಪಾದಿಸಿಕೊಳ್ಳಬಹುದು, ಬೇಡವಾದವುಗಳನ್ನು ಹೀಗೆ ನಿವಾರಿಸಿಕೊಳ್ಳಬಹುದು, ಅಥವಾ ಪರಿಹರಿಸಿಕೊಳ್ಳಬಹುದು" ಎಂದು ಜಾಣರಾದವರು ಉಪಾಯಗಳನ್ನು ಕಲ್ಪಿಸಿ ತೋರಿಸುತ್ತಾರೆ. ಇಂಥ ಲೌಕಿಕೋಪಾಯಗಳು ಭೌತಿಕಶಾಸ್ತ್ರದ ಬೆಳವಣಿಗೆಯಿಂದ ಈಗಿನ ಕಾಲದಲ್ಲಿ ಹೇರಳವಾಗಿ ಕಂಡುಬರುತ್ತಿವೆ.

ಆದರೆ ಮೇಲೆ ಕಂಡ ಅಭಿಪ್ರಾಯವು ಸರಿಯಾದದ್ದೆ? ಈ ಉಪಾಯಗಳಿಂದ ನಮಗೆ ಪೂರ್ಣವಾಗಿ ಇಷ್ಟಾರ್ಥವು ಕೈಗೂಡುವದೆ?–ಎಂದರೆ ಹಾಗಿಲ್ಲ. ಏಕೆಂದರೆ ಈ ದ್ವಂದ್ವಗಳಲ್ಲಿ ಒಂದು ಸ್ವಭಾವವುಂಟು. ಅದೇನೆಂದರೆ ಈ ಜೋಡಿಯಲ್ಲಿ ಸೇರಿರುವ ಇಂಥದೊಂದೇ ನಮಗೆ ಬೇಕಾಗಿರುವದು, ಇಂಥದು ಬೇಡವಾಗಿರುವದು–ಎಂದು ನಿಯಮವನ್ನೇರ್ಪಡಿಸುವದಕ್ಕೆ ಬರುವಹಾಗಿಲ್ಲ. ಒಂದು ಪದಾರ್ಥವು ಒಬ್ಬನಿಗೆ ಒಂದು ಕಾಲದಲ್ಲಿ ಬೇಕಾಗಿರುವದು ಮತ್ತೊಂದು ಕಾಲದಲ್ಲಿ ಬೇಡವಾಗಿರುತ್ತದೆ. ಉದಾಹರಣೆಗೆ ಶೀತೋಷ್ಣವೆಂಬ ದ್ವಂದ್ವವನ್ನು ತೆಗೆದುಕೊಳ್ಳಿ, ನಮಗೆ ಶೀತವು ಬೇಕೆ, ಬೇಡವೆ? ಅದರಿಂದ ಯಾವಾಗಲೂ ಸುಖವೇ ಆಗುವದೆಂದಾಗಲಿ, ದುಃಖವೇ ಆಗುವದೆಂದಾಗಲೀ, ಗೊತ್ತಾಗಿ ಹೇಳುವದಕ್ಕೆ ಬರುತ್ತದೆಯೇ? ಇಲ್ಲ. ಆದ್ದರಿಂದ ಶೀತೋಷ್ಣಗಳಲ್ಲಿ ಯಾವದು ಬೇಕು, ಯಾವದು ಬೇಡ–ಎಂಬ ನಿಯಮವನ್ನು ಮಾಡಿಟ್ಟುಕೊಳ್ಳುವದಕ್ಕೆ ಆಗುವದಿಲ್ಲ. ಇದರಂತೆಯೇ ಮಿಕ್ಕ ದ್ವಂದ್ವಗಳನ್ನೂ ತಿಳಿಯಬೇಕು. ಒಮ್ಮೆ ಇಂಥದ್ದೊಂದು ನಮಗೆ ಇಷ್ಟವಾದದ್ದೆಂದು ಇದನ್ನು ಕೂಡಿ ಹಾಕಿಕೊಂಡರೆ ಮತ್ತೊಮ್ಮೆ ಅದೇ ನಮಗೆ ಅನಿಷ್ಟವಾಗುವದು. ಇಷ್ಟವಾದಾಗ ಅದು ಸುಖಕ್ಕೆ ಕಾರಣವಾಗಿರುವದಾದರೂ ಅನಿಷ್ಟವಾದಾಗ ದುಃಖಕ್ಕೂ ಕಾರಣವಾಗುವದು. ಹೀಗಿರುವದರಿಂದ ನಮಗೆ ಸುಮ್ಮನೆ ಕೆಲವು ಪದಾರ್ಥಗಳನ್ನು ಸಂಪಾದಿಸಿಕೊಂಡ ಮಾತ್ರದಿಂದ ನಮಗೆ ಈ ಸುಖದುಃಖಗಳ ಕಾಟವು ತಪ್ಪಿದ್ದಲ್ಲವೆಂದಾಯಿತು.

ಈವರೆಗಿನ ವಿಚಾರದಿಂದ ಏನು ಸಿದ್ಧವಾಯಿತು? ನಮಗೆ ದ್ವಂದ್ವಗಳಿಂದಾಗುವ ಬಾಧೆಯೆಂದರೆ ಸುಖದುಃಖಗಳ ಇರಚಲಿನಿಂದಾಗುವ ಮನಸ್ಸಿನ ಏರುಪೇರು. ನಮಗೆ ಒಂದಿಲ್ಲದಿದ್ದರೆ ಒಂದು ವಿಷಯದಿಂದ ಸುಖದುಃಖಗಳಾಗುವದು ತಪ್ಪಿದ್ದಲ್ಲ. ಆದರೆ ಯಾವ ವಿಷಯದಿಂದ ಯಾವಾಗ ಸುಖ, ಯಾವ ವಿಷಯದಿಂದ ಯಾವಾಗ ದುಃಖ–ಎಂಬುದೇನೋ ನಿಯತವಾಗಿ ಗೊತ್ತಾಗುವಂತಿಲ್ಲ. ಆದ್ದರಿಂದ ಒಂದಿಲ್ಲದಿದ್ದರೆ ಒಂದು

ನೆಪದಿಂದ ಸುಖದುಃಖಗಳು ಒದಗಿ ನಮ್ಮನ್ನು ಕಾಡಿಸುತ್ತಲೇ ಇರುವವು, ಎಂದಾಯಿತು. ಆದ್ದರಿಂದ ಸುಖದುಃಖಗಳ ಹೊಡೆತದಿಂದ ಬಿಡುಗಡೆಯಾಗುವ ಮಾರ್ಗವು ಯಾವದು?-ಎಂಬುದೇ ನಮ್ಮ ನಿಜವಾದ ಪ್ರಶ್ನೆಯಾಯಿತು, ಹೊರಗಿನ ಯಾವದಾದರೊಂದು ವಿಷಯವನ್ನು ನಮ್ಮ ಹತ್ತಿರವಿಟ್ಟುಕೊಂಡ ಮಾತ್ರದಿಂದ ಅಥವಾ ಅದನ್ನು ದೂರಕ್ಕೆ ಸಾಗಿಸಿದ ಮಾತ್ರದಿಂದಲೇ ದ್ವಂದ್ವಬಾಧೆಯಿಂದ ತಪ್ಪಿಸಿಕೊಳ್ಳಲಾಗುವದಿಲ್ಲವೆಂಬುದನ್ನು ಸದ್ಯಕ್ಕೆ ನೆನಪಿನಲ್ಲಿಟ್ಟಿರೋಣ. ಸಂ-7, 127

## ಒಳಗಿನ ದ್ವಂದ್ವಗಳನ್ನು ಮೀರುವ ಬಗೆ

ದ್ವಂದ್ವಗಳು ಎರಡು ಬಗೆ. ಇವುಗಳಲ್ಲಿ ಕೆಲವು ಹೊರಗೆ ಇರುತ್ತವೆ, ಮತ್ತೆ ಕೆಲವು ನಮ್ಮ ಒಳಗೇ ಇರುತ್ತವೆ. ಉದಾಹರಣೆಗೆ ಕತ್ತಲೆ ಬೆಳಕು, ತಣ್ಣನೆಯ ವಸ್ತುಗಳು ಬೆಚ್ಚನೆಯವಸ್ತುಗಳು-ಇವುಗಳು ಹೊರಗಿನ ದ್ವಂದ್ವಗಳು. ಇವುಗಳಿಂದ ನಮಗೆ ಆಗುವ ಅನುಕೂಲಪ್ರತಿಕೂಲಬುದ್ಧಿಗಳು, ಶೀತ ಉಷ್ಣ, ಸುಖದುಃಖ-ಮುಂತಾದವು ಒಳಗಿನ ದ್ವಂದ್ವಗಳು. ಹಿಂದಿನ ಲೇಖನದಲ್ಲಿ ಹೊರಗಿನ ದ್ವಂದ್ವಗಳನ್ನು ಕುರಿತು ಹೇಳಿದ್ದಾಯಿತು. ಈಗ ನಮ್ಮೊಳಗೇ ಕಾಣುವ ದ್ವಂದ್ವಗಳ ವಿಚಾರಕ್ಕೆ ತೆರಳಬೇಕಾಗಿದೆ.

ಹೊರಗಿನ ದ್ವಂದ್ವಗಳಲ್ಲಿರುವ ಇಂಥ ಒಂದು ವಸ್ತುವೇ ನಮಗೆ ಬೇಕಾದದ್ದು ಅಥವಾ ಬೇಡವಾದದ್ದು-ಎಂಬ ನಿಯಮವಿರುವದಿಲ್ಲ. ಯಾವ ವಸ್ತುವೇ ಆಗಲಿ, ಇಷ್ಟವೆಂದಾದರೆ ನಮಗೆ ಕೂಡಲೆ ಅದರಲ್ಲಿ ರಾಗವುಂಟಾಗುವದು; ಅದು ಅನಿಷ್ಟವೆಂದಾದರೆ ಅದರಲ್ಲಿ ದ್ವೇಷವುಂಟಾಗುವದು. ಯಾವದರಲ್ಲಿ ರಾಗವುಂಟಾಗುವದೋ ಅದರ ಮೇಲೆ ನಮ್ಮ ಮನಸ್ಸು ಮೆಚ್ಚಿಕೆಯ ಮೇಲುಗಾಜನ್ನು ಬಳಿಯುತ್ತದೆ, ಯಾವದರಲ್ಲಿ ನಮಗೆ ದ್ವೇಷವುಂಟಾಗುವದೋ ಅದರ ಮೇಲೆ ನಮ್ಮ ಅಸಡ್ಡೆಯ ಅಥವಾ ಜುಗುಪ್ಸೆಯ ಅಥವಾ ಕ್ರೋಧದ ಮೇಲುಗಾಜನ್ನು ಬಳಿಯುತ್ತದೆ. ನಾವು ಇಷ್ಟವೆಂದೆಣಿಸುವ ವಸ್ತುಗಳು ಹತ್ತಿರವಿದ್ದರೆ ಅವು ಸಮಯಕ್ಕೆ ಆಗುವವೆಂಬ ಭರವಸೆಯೂ ಧೈರ್ಯವೂ ಉಂಟಾಗುತ್ತದೆ, ಅನಿಷ್ಟವೆಂದೆಣಿಸುವ ವಸ್ತುಗಳು ಹತ್ತಿರವಿದ್ದರೆ ಅವುಗಳಿಂದ ಯಾವಾಗಲಾದರೂ ಏನಾದರೊಂದು ಅಪಾಯವಾದೀತೆಂಬ ದಿಗಿಲುಹತ್ತಿಕೊಂಡಿರುತ್ತದೆ, ಅವುಗಳನ್ನು ಕಂಡಮಾತ್ರದಿಂದ ನಮಗೆ ಅಂಜಿಕೆಯಾಗುತ್ತದೆ. ಇಷ್ಟವಾದ, ಭರವಸೆಯನ್ನು ಕೊಡುವ, ಮೆಚ್ಚಿಕೆಗೆ ಪಾತ್ರವಾದ ವಸ್ತುಗಳು ನಮ್ಮ ವಶಕ್ಕೆ ಸಿಕ್ಕಿದರೆ ಲಾಭವಾಯಿತೆಂಬ ಹಿಗ್ಗು ಆಗುತ್ತದೆ, ಅವು ಕೈಬಿಟ್ಟು ಹೋದರೆ ನಷ್ಟವಾಯಿತೆಂಬ ದುಗುಡವಾಗುತ್ತದೆ. ಅನಿಷ್ಟವಾದ, ಅಂಜಿಕೆಯನ್ನೀಯುವ, ಅಸಡ್ಡೆಗೆ ಪಾತ್ರವಾದ ವಸ್ತುಗಳು ಬೇಡವೆಂದರೂ ನಮ್ಮ ಬಳಿಗೆ ಬಂದರೆ ಅವುಗಳನ್ನು ಅಡ್ಡಿಪಡಿಸಲಾಗಲಿಲ್ಲವಲ್ಲ, ನಮಗೆ ಸೋಲಾಯಿತಲ್ಲ!

-ಎಂಬ ಉಮ್ಮಳವಾಗುತ್ತದೆ. ಶಾಂತಿಕ್ರೋಧ, ಮರುಕ ಕ್ರೌರ್ಯ-ಮುಂತಾದ ದ್ವಂದ್ವಭಾವಗಳೂ ಹೀಗೆಯೇ ಒಂದೊಂದು ನಿಮಿತ್ತದಿಂದ ಆಗುತ್ತವೆ.

ಒಳಗಿನ ದ್ವಂದ್ವಗಳಲ್ಲಿ ಒಂದು ವಿಶೇಷವುಂಟು. ಹೇಗೆಂದರೆ ಹೊರಗಿನ ದ್ವಂದ್ವಗಳು ಪ್ರಕೃತಿಯ ನಿಯಮವನ್ನನುಸರಿಸಿ ಆಗಾಗ್ಗೆ ಒದಗುತ್ತಾ ಶೀತೋಷ್ಣಾದಿ ದ್ವಂದ್ವಗಳನ್ನು ಉಂಟುಮಾಡುತ್ತಿರುವವು. ಆದರೆ ಆ ಶೀತೋಷ್ಣಾದಿಗಳ ಬಗ್ಗೆ ನಾವು ಮಾಡಿಕೊಳ್ಳುವ ಮನಸ್ಸಿನ ಉಬ್ಬರವಿಳಿತಗಳು ಅವಶ್ಯವಾಗಿ ಹಾಗೆಯೇ ಆಗಿ ತೀರಬೇಕೆಂಬ ನಿಯಮ ವೇನೂ ಇರುವದಿಲ್ಲ. ನಮ್ಮಂತೆಯೇ ಶೀತೋಷ್ಣಗಳಿಗೆ ಈಡಾಗಿರುವವರಲ್ಲಿ ಕೆಲವರು ನಮಷ್ಟು ಹರ್ಷವಿಷಾದಗಳನ್ನು ವ್ಯಕ್ತಗೊಳಿಸದೆ ಇರುವದೂ ಕಂಡುಬರುತ್ತದೆಯಲ್ಲವೆ? ಆದ್ದರಿಂದ ನಾವೂ ಪ್ರಯತ್ನಪಟ್ಟರೆ ಒಳಗಿನ ದ್ವಂದ್ವಗಳನ್ನು ತಡೆದುಕೊಳ್ಳಬಹುದೆಂದಾ ಯಿತು. ದ್ವಂದ್ವಗಳನ್ನು ತಡೆದುಕೊಳ್ಳುವ ಶಕ್ತಿಗೆ ತಿತಿಕ್ಷೆಯೆಂದು ಹೆಸರು. ಈ ತಿತಿಕ್ಷೆಯ ಮರ್ಮವನ್ನು ತಿಳಿದುಕೊಳ್ಳುವದು ಅಧ್ಯಾತ್ಮವಿಚಾರದ ಒಂದು ಮುಖ್ಯ ಪ್ರಯೋಜನವು.

**ಸಂ-7, 166**

## ಮನಸ್ಸಿನ ಏರಿಳಿತಗಳು ತೊಲಗುವದುಂಟೆ ?

ಕಡಲಿನಲ್ಲಿ ನೀರು ಕ್ಲಿಪ್ತಕಾಲದಲ್ಲಿ ಏರುವದು, ಬೀಳುವದು. ಇದಕ್ಕೆ ಸೂರ್ಯಚಂದ್ರರ ಆಕರ್ಷಣವೇ ಕಾರಣವೆಂದು ವಿಜ್ಞಾನಶಾಸ್ತ್ರಜ್ಞರು ಹೇಳುತ್ತಾರೆ. ಈ ಏರಿಳಿತವು ತೀರದ ಆಕಾರ, ಮಾರುತಗಳು ಬೀಸುವ ದಿಕ್ಕು, ಮುಂತಾದ ಕಾರಣದಿಂದ ಬಗೆಬಗೆಯಾದ ಅಲೆಗಳಿಗೆ ಅವಕಾಶವನ್ನು ಕೊಡುವದಂತೆ.

ಮಾನವನ ಚಿತ್ತವೂ ಹೀಗೆಯೇ ಒಂದು ಕಡಲಾಗಿರುತ್ತದೆ. ಅದರಲ್ಲಿಯೂ ಆಗಾಗ್ಗೆ ಏರಿಳಿತಗಳು ಆಗುತ್ತಿರುವವು. ಇದಕ್ಕೆ ವಿಷಯಗಳ ಆಕರ್ಷಣ ವಿಕರ್ಷಣಗಳೇ ಕಾರಣವಾಗಿರುತ್ತವೆ. ಕೆಲವು ವಿಷಯಗಳಿಂದ ನಮ್ಮ ಚಿತ್ತದಲ್ಲಿ ಹರ್ಷವೆಂಬ ಉಬ್ಬರವುಂಟಾಗುವದು, ಮತ್ತೆ ಕೆಲವು ವಿಷಯಗಳಿಂದ ವಿಷಾದವೆಂಬ ಇಳಿತವುಂಟಾಗು ವದು. ಚಿತ್ತದಲ್ಲಿ ಉಬ್ಬರವನ್ನುಂಟುಮಾಡುವ ವಿಷಯವನ್ನು ಪ್ರಿಯವು, ಬೇಕಾದದ್ದು-ಎಂದು ಕರೆಯುತ್ತೇವೆ; ಇಳಿತವನ್ನು ಮಾಡುವ ವಿಷಯವನ್ನು ಅಪ್ರಿಯವು, ಬೇಡ ವಾದದ್ದು-ಎನ್ನುತ್ತೇವೆ. ವಿಷಯಗಳಿಂದ ನಮಗೆ ಆಗುವ ಶೀತ, ಉಷ್ಣ, ಸುಖ, ದುಃಖ-ಇವುಗಳು ಅನೇಕಕಾರಣಗಳಿಂದ ಮಾರ್ಪಟ್ಟು ಬಗೆಬಗೆಯ ಅಲೆಗಳು ನಮ್ಮ ಚಿತ್ತ ಸಾಗರದಲ್ಲಿ ಉಂಟಾಗುತ್ತಿರುವವು. ಇವುಗಳಿಗೆ "ವೃತ್ತಿಗಳು" ಎಂದು ಹೆಸರು.

ಚಿತ್ತದಲ್ಲಾಗುವ ಏರಿಳಿತಗಳು ಮುಖ್ಯವಾಗಿ ಎರಡು ಕಾರಣದಿಂದ ಬಗೆಬಗೆಯ ರೂಪವನ್ನು ತಳೆಯುತ್ತಿರುವವು. ವಿಷಯಗಳ ಕಡೆಯಿಂದ ಇಂದ್ರಿಯ ಮೂಲಕವಾಗಿ

ನಮ್ಮ ಕಡೆಗೆ ಬೀಸುವ "ಸ್ಪರ್ಶ" ಮಾರುತಗಳ ಹೊಡೆತವು ಒಂದು ಕಾರಣ; ನಮ್ಮ ಚಿತ್ತವು ಇಂದ್ರಿಯಗಳ ತೀರದಲ್ಲಿಯೇ ಹೊಯ್ದಾಡುತ್ತಿರುವದೊಂದು ಕಾರಣ. ಇವೆರಡು ಕಾರಣಗಳನ್ನೂ ತಪ್ಪಿಸಿ ನಮ್ಮೊಳಗಿರುವ **ಅಧ್ಯಾತ್ಮದ್ವೀಪದ** ಬಳಿಯಲ್ಲಿ ಹೋಗಿ ನೋಡಿದರೆ ಚಿತ್ತದಲ್ಲಿ ಯಾವದೊಂದು ಏರಿಳಿತವೂ ಇರುವದೇ ಇಲ್ಲ. **ಸಂ-7, 198**

## ಮನುಷ್ಯನು ಏತರಿಂದ ಬದುಕಿರುತ್ತಾನೆ?

ಮನುಷ್ಯನು ಬದುಕಿರುವದಕ್ಕೆ ಮೂಲಸಾಧನವು ಯಾವದು? ಅನ್ನ, ನೀರು, ಉಸಿರಾಡುವದು-ಇವುಗಳು ಅತ್ಯವಶ್ಯವೆಂದು ನಮ್ಮಗಳ ನಂಬಿಕೆ. ಪ್ರಾಣಾಪಾನಗಳು ಕೆಲಸಮಾಡುತ್ತಿದ್ದರೇ ಮನುಷ್ಯನು ಬದುಕಿರುತ್ತಾನೆ, ಇಲ್ಲದಿದ್ದರೆ ಸಾಯುತ್ತಾನೆ-ಎಂದೇ ಅನೇಕರು ನಂಬಿರುತ್ತಾರೆ.

ಆದರೆ ಆಹಾರವನ್ನು ಬಿಟ್ಟು ಅನೇಕ ದಿವಸಗಳವರೆಗೆ ಬದುಕಿದ ಮಹಾತ್ಮಗಾಂಧಿ ಮುಂತಾದವರ ಜೀವನಚರಿತ್ರೆಯನ್ನು ಓದಿದವರೂ, ಅವರು ಅನೇಕ ದಿನಗಳವರೆಗೆ ಉಪವಾಸವ್ರತವನ್ನು ಕೈಕೊಂಡು ಬದುಕಿದ್ದನ್ನು ಪ್ರತ್ಯಕ್ಷಕಂಡವರೂ, ಈಗಲೂ ಇರುತ್ತಾರೆ. ಅವರ ಹೇಳಿಕೆಯಿಂದ ಆಹಾರಾದಿಗಳು ನಾವುಗಳು ತಿಳಿದಿರುವಷ್ಟು ಮನುಷ್ಯನಿಗೆ ಅವಶ್ಯವಲ್ಲವೇನೊ ಎಂದು ಸಂಶಯವು ಉಂಟಾಗುವದಕ್ಕೆ ಎಡೆಯಿದೆ.

ಇದರ ಜೊತೆಗೆ ಅಲ್ಲಲ್ಲಿ ಕೆಲವರು ತಿಂಗಳುಗಟ್ಟಲೆ, ವರ್ಷಗಟ್ಟಲೆ, ಉಪವಾಸದಿಂದಿರುತ್ತಾರೆ-ಎಂಬ ಸುದ್ದಿಗಳೂ ನಮಗೆ ತಲಪುತ್ತಿರುವವು. ಡಾಕ್ಟರುಗಳು ಕೆಲವರು ಇದನ್ನು ಪರೀಕ್ಷಿಸಿ ಅಂಥ ಘಟನೆಗಳಲ್ಲಿ ಮೋಸದ ಕೈವಾಡವಿರುತ್ತದೆ ಎಂದು ತೋರಿಸಿರುವದೂ ಉಂಟು. ಆದರೆ ಈಗ ಕೆಲವು ತಿಂಗಳುಗಳ ಕೆಳಗೆ **'ಪ್ರಪಂಚ'** ಎಂಬ ಪತ್ರಿಕೆಯಲ್ಲಿ **ಶಾಂತವೀರಸ್ವಾಮಿಜಿಯೆಂಬುವರು** ಒಂದು ಲೇಖನವನ್ನು ಬರೆದಿದ್ದನ್ನು ಕಂಡೆ. ಯಾದಗಿರಿ ಸಮೀಪದಲ್ಲಿರುವ ಕಾಡಮಗೇರಿ ಎಂಬ ಗ್ರಾಮದಲ್ಲಿ **ಅಕ್ಕಸಾಲಿಗರ ತಾರಮ್ಮ** ಎಂಬ ಹತ್ತು ವರ್ಷದ ಹುಡುಗಿಯು ಅನ್ನ, ನೀರು, ಸೇವಿಸದೆ, ಮಲಮೂತ್ರಗಳಿಲ್ಲದೆ, ಇರುವಳೆಂಬುದನ್ನು ಕೇಳಿ ಪ್ರತ್ಯಕ್ಷವಾಗಿ ಆಕೆಯನ್ನು ಕಂಡು ಆಕೆಯನ್ನು ಪರೀಕ್ಷಿಸಿದ್ದಾಗಿಯೂ ಅವಳನ್ನು ಎಂಟು ದಿನಗಳವರೆಗೆ ಒಂದು ಕೋಣೆಯಲ್ಲಿ ಬೀಗಹಾಕಿ ಇಟ್ಟಿದ್ದರೆಂತಲೂ ಅವಳು ಆರೋಗ್ಯವಂತಳಾಗಿಯೇ ಇದ್ದಳೆಂದೂ ಸ್ವಾಮಿಜಿಯವರು ಬರೆದಿದ್ದರು. ಇದರ ಜೊತೆಗೆ **'ಯೋಗಿನಿ ಮಾಣಿಕಮ್ಮ'** ಎಂಬವರು 'ಯಾನಾಗೊಂದಿ'ಯಲ್ಲಿ ಒಂದು ಕೋಣೆಯಲ್ಲಿದ್ದುಕೊಂಡು ಅನುಷ್ಠಾನಕ್ಕೆ ಆರಂಭಿಸಿದರೆಂದೂ ಆ ಕೋಣೆಯ ಬಾಗಿಲನ್ನು ಅವರ ಇಷ್ಟದ ಪ್ರಕಾರ ಕಲ್ಲುಸಿಮೆಂಟುಗಳಿಂದ ಮುಚ್ಚಿಬಿಟ್ಟರೆಂದೂ ಅಲ್ಲಿಂದ ನಾಲ್ಕು ತಿಂಗಳಮೇಲೆ ಅನೇಕರು ದೊಡ್ಡಮನುಷ್ಯರೂ

ಗೊತ್ತಾಗಿ ಒಂದು ಶಿವರಾತ್ರೆಯದಿನ ಬಂದು ನೋಡುತ್ತಿದ್ದಹಾಗೆ–ಆಗ್ಗೆ ಹತ್ತುಹನ್ನೆರಡು ಸಾವಿರ ಜನರು ಅಲ್ಲಿ ಸೇರಿದ್ದರಂತೆ!– ಸಿಮೆಂಟುಗೋಡೆಯು ಛಟ್‌ಛಟ್ ಎಂದು ಶಬ್ದಮಾಡುತ್ತಾ ಒಡೆದುಕೊಂಡಿತು, ಕಲ್ಲುಗಳು ಬೀಳಹತ್ತಿದವು ಎಂದೂ 'ಮಾಣಿಕಮ್ಮ' ನವರು ಹೊರಕ್ಕೆ ಬಂದಾಗ ಮೊದಲಿನಂತೆಯೇ ತೇಜಃಪುಂಜಯುಕ್ತರಾಗಿ ಕಂಡುಬಂದ ರೆಂದೂ ಬರೆದಿತ್ತು. ಅವರು ತಮ್ಮಲ್ಲಿಗೆ ಬರುವ ಭಕ್ತರ ಯೋಗಕ್ಷೇಮದ ವಿಷಯವಾಗಿ ಭವಿಷ್ಯವನ್ನು ಕೂಡ ಹೇಳುತ್ತಾರೆಂದೂ ಸ್ವಾಮಿಜಿಯವರು ಆ ಲೇಖನದಲ್ಲಿ ಬರೆದಿದ್ದರು!

ಇದರ ನಿಜವನ್ನು ವಿಚಾರಿಸುವದಕ್ಕಾಗಿ ಗುಲ್ಬರ್ಗದ ಡಿವಿಷನಲ್ ಕಮಿಷನರ್ ರವರಿಗೆ ಒಂದು ಪತ್ರವನ್ನು ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಬರೆಯಿಸಲಾಯಿತು. ಆ ಆಫೀಸಿ ನಿಂದ ಬಂದ ಉತ್ತರದಲ್ಲಿ "ಆನೆಗೊಂದಿಯ ಶ್ರೀಮತಿ ಮಾಣಿಕಮ್ಮನು ದೀರ್ಘಕಾಲ ದಿಂದ ಯಾವ ಆಹಾರವನ್ನೂ ತೆಗೆದುಕೊಳ್ಳುತ್ತಿಲ್ಲವೆಂದು ಹೇಳಲಾಗುತ್ತಿದೆ, ಈ ಡಿಸ್ಟ್ರಿಕ್ಟಿ ನಲ್ಲಿರುವ ಅನೇಕರು ಯಾತ್ರಿಕರು ಆ ಮಹಾತ್ಮಳ ದರ್ಶನಕ್ಕೆಂದು ಬರುತ್ತಿದ್ದಾರೆ" ಎಂದು (ನಂ. 844/ಕೂರ್/17679 ತಾ॥ 19–3–58) ತಿಳಿಸಿರುತ್ತಾರೆ. ಅಂತೂ ಮನುಷ್ಯನು ಬಹುಕಾಲದವರೆಗೆ ಅನ್ನನೀರಿಲ್ಲದೆ ಆರೋಗ್ಯವಂತನಾಗಿರಬಹುದೆಂದು ಸಿದ್ಧವಾಯಿತು!

ಶ್ರೀ ಶಾಂತವೀರಸ್ವಾಮಿಜಿಯವರು ಬರೆದಿರುವ ಲೇಖನದಲ್ಲಿ ವೈದ್ಯಶಾಸ್ತ್ರದೃಷ್ಟಿಯಿಂದ ಈ ವಿಚಿತ್ರಘಟನೆಗೆ ಒಂದು ವಿವರಣೆಯನ್ನು ಕೊಡಲಾಗಿದೆ. "ಮನುಷ್ಯನ ಅನ್ನಕೋಶ, ತ್ರಿದೋಷ, ಜಠರ, ತ್ರಿಮಲ, ಕರಳುಗಳಲ್ಲಿ ಪರಿವರ್ತನೆಗಳನ್ನುಂಟುಮಾಡಿದರೆ, ಅಥವಾ ನೈಸರ್ಗಿಕವಾಗಿಯೇ ಪರಿವರ್ತನೆಯಾಗಿದ್ದರೆ, ಆಹಾರವಿಲ್ಲದೆ ಜೀವಿಸಬಹುದು" ಎಂದು ಅವರು ಬರೆದಿರುತ್ತಾರೆ. ಇದನ್ನು ಈ ದೃಷ್ಟಿಯಿಂದ ಶಾರೀರಶಾಸ್ತ್ರಜ್ಞರು ಇನ್ನಷ್ಟು ಪರೀಕ್ಷಿಸತಕ್ಕದ್ದಾಗಿದೆ.

ಆದರೆ ಈ ಘಟನೆಯಿಂದ ನನಗೆ ಹೊಳೆದ ಅಧ್ಯಾತ್ಮವಿಚಾರವೊಂದನ್ನು ಇಲ್ಲಿ ಅಧ್ಯಾತ್ಮಪ್ರಕಾಶಪತ್ರಿಕೆಯ ವಾಚಕರಿಗೆ ತಿಳಿಸಬಯಸುತ್ತೇನೆ. ಕಾಠಕೋಪನಿಷತ್ತಿನಲ್ಲಿ ಒಂದು ವಾಕ್ಯವಿದೆ : "ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ ।

ಇತರೇಣ ತು ಜೀವನ್ತಿ ಯಸ್ಮಿನ್ನೇತಾವುಪಾಶ್ರಿತೌ ॥"

ಮನುಷ್ಯನು ಬದುಕಿರುವದು ಪ್ರಾಣದಿಂದಲ್ಲ, ಅಪಾನದಿಂದಲೂ ಅಲ್ಲ; ಈ ಎರಡೂ ಯಾವನನ್ನು ಆಶ್ರಯಿಸಿಕೊಂಡಿರುವವೋ ಆ ಇನ್ನೊಬ್ಬನಾದ ಆತ್ಮನಿಂದಲೇ ಜೀವಿಸಿಕೊಂಡಿರುತ್ತವೆ–ಎಂಬುದು ಮಂತ್ರದ ಅರ್ಥ. ಶರೀರದಲ್ಲಿ ರಕ್ತ, ಮಾಂಸ–ಮುಂತಾದ ಧಾತುಗಳು ಸುವ್ಯವಸ್ಥೆಯಿಂದ ಇದ್ದರೆ ಅವನು ಜೀವಿಸಿರುತ್ತಾನೆ; ಅವುಗಳಲ್ಲಿ ಯಾವದಾದರೂ ಕೊರತೆಯುಂಟಾದರೆ ಅವನು ಸತ್ತುಹೋಗುತ್ತಾನೆ–ಎಂಬುದು ನಿಶ್ಚಯ.

ಆದರೆ ಆ ಧಾತುಗಳು ಸರಿಯಾದ ಅವಸ್ಥೆಯಲ್ಲಿರುವದಕ್ಕೆ ಏನುಬೇಕು? ಅನ್ನ, ನೀರು, ಉಸಿರು, ನಿದ್ರೆ-ಮುಂತಾದವು ಎಂದು ನಾವೆಲ್ಲರೂ ಸ್ವಾಭಾವಿಕವಾಗಿಯೇ ಉತ್ತರವನ್ನು ಕೊಡುತ್ತೇವೆ. ವ್ಯವಹಾರದ ಅನುಭವವೂ ಇದಕ್ಕೆ ಪುಷ್ಟಿಯನ್ನು ಕೊಡುತ್ತದೆ. ಆದರೆ ಇಲ್ಲಿ ಒಂದು ವಿಚಾರವನ್ನು ಮಾಡಬೇಕಾದದ್ದು ಅವಶ್ಯ; ಆಹಾರಾದಿಗಳನ್ನು ಒಂದು ಕಲ್ಲಿನ ಅಥವಾ ಮರದ ಗೊಂಬೆಗೆ ಮೆತ್ತಿದರೆ ಅದು ಬೆಳೆಯುವದೆ? ಎಂದಿಗೂ ಇಲ್ಲ. ಅದಕ್ಕೆ ಕಾರಣವೇನು? ಅವುಗಳಲ್ಲಿ ಪ್ರಾಣಶಕ್ತಿಯು ಕೆಲಸಮಾಡುತ್ತಿರುವದಿಲ್ಲ ವಾದ್ದರಿಂದ ಎಂಬುದು ನಮ್ಮಗಳ ಉತ್ತರ. ಆದೆ ಅಲ್ಲಿಯೂ ಒಂದು ಪ್ರಶ್ನೆಗೆ ಅವಕಾಶವಿದೆ. ಮನುಷ್ಯನಲ್ಲಿಯೂ ಇತರ ಪ್ರಾಣಿಗಳಲ್ಲಿಯೂ ಆ ಪ್ರಾಣಶಕ್ತಿಯು ಏತರ ಬಲದಿಂದ ನಿಂತುಕೊಂಡಿರುತ್ತದೆ? ಅನ್ನಪಾನಾದಿಗಳಿಂದ ಎಂಬುದು ಸರಿಯಾದ ಉತ್ತರವಲ್ಲ. ಅನ್ನದಿಂದ ಪ್ರಾಣ, ಪ್ರಾಣವಿದ್ದರೆ ಅನ್ನ-ಹೀಗೆ ಒಂದನ್ನೊಂದು ಅವಲಂಬಿಸಿರುತ್ತವೆ-ಎಂಬ ಅನ್ಯೋನ್ಯಾಶ್ರಯದೋಷವು ಈ ಉತ್ತರಕ್ಕೆ ಗಂಟು ಬೀಳುತ್ತದೆ.

ಶ್ರುತಿಯು ಇದಕ್ಕೆ ಕೊಟ್ಟಿರುವ ಉತ್ತರವೇನೆಂದರೆ ಪ್ರಾಣಾಪಾನಗಳು ಆತ್ಮನನ್ನೇ ಅವಲಂಬಿಸಿರುತ್ತವೆ. ಪ್ರಾಣಶಕ್ತಿಯು ಈ ಇಡಿಯ ಜಗತ್ತಿನ ಜೀವನಕ್ಕೆ ಆಧಾರವಾಗಿರುತ್ತದೆ; ಅದರ ಬಲದಿಂದಲೇ ಎಲ್ಲವೂ ತನ್ನತನ್ನ ಕ್ರಿಯೆಯನ್ನು ಮಾಡುತ್ತದೆ. ಆದರೆ ಆ ಪ್ರಾಣಶಕ್ತಿಯನ್ನು ಪ್ರಾಣಶಕ್ತಿಯೆನಿಸಿರುವ ಮೂಲಶಕ್ತಿಯು ಮತ್ತೊಂದಿದೆ. ಅದೇ ಪರಮಾತ್ಮತತ್ತ್ವವು. ಪರಮಾತ್ಮನನ್ನು ಆಶ್ರಯಿಸಿಕೊಂಡೇ ಪ್ರಾಣವು ತನ್ನ ಅದ್ಭುತಕ್ರಿಯೆ ಗಳನ್ನು ಪ್ರದರ್ಶಿಸುತ್ತಿರುವದು. ಪರಮಾತ್ಮನು ಪ್ರಾಣಕ್ಕೂ ಪ್ರಾಣನೆನಿಸಿರುತ್ತಾನೆ. ಆನಂದ ಸ್ವರೂಪನಾದ ಆ ಪರಮಾತ್ಮನೇ ನಮ್ಮೆಲ್ಲರಿಗೂ ಬದುಕಿರುವದಕ್ಕೆ ಮೂಲಕಾರಣನು. ಹೊರಗಿನ ಅನ್ನಪಾನಾದಿಗಳು ನೆಪಕ್ಕೆ ಮಾತ್ರ ಸಹಾಯಕವು; ಪರಮಾತ್ಮನ ಸಂಬಂಧವು ತಪ್ಪಿದರೆ ಜೀವನು ಒಂದು ಘಳಿಗೆಯೂ ಈ ಶರೀರದಲ್ಲಿದ್ದು ತನ್ನ ಕಾರ್ಯವನ್ನು ಮಾಡಲಾರನು. ಕಾಲಕರ್ಮಸಂಯೋಗದಿಂದ ಈ ಶರೀರವನ್ನು ಪಡೆದಿರುವ ಜೀವನು ಆ ಕರ್ಮವು ಮುಗಿದೊಡನೆ ಮತ್ತೊಂದು ಶರೀರವನ್ನು ಪಡೆಯುವನು; ಪರಮಾತ್ಮನ ಸಾಂನಿಧ್ಯವು ಶರೀರಕ್ಕೆ ತಪ್ಪಿಹೋಗುವದು. ಇನ್ನು ಅದು ಜೀವಿಸಿರಲಾರದು. **'ಕೋ ಹ್ಯೇವಾನ್ಯಾತ್ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನನ್ದೋ ನ ಸ್ಯಾತ್'** ಈ ವಿಶ್ವಾಕಾಶದಲ್ಲಿ ಆನಂದರೂಪನಾದ ಪರಮಾತ್ಮನ ಸಾಂನಿಧ್ಯವಿಲ್ಲದಿದ್ದರೆ ಯಾವನುತಾನೆ ಬದುಕಿದ್ದಾನು, ಕ್ರಿಯೆಗಳನ್ನಾದರೂ ಮಾಡಿಯಾನು?-ಎಂಬ ತೈತ್ತಿರೀಯಶ್ರುತಿಯೂ ಹೀಗೆಂದೇ ಹೇಳುತ್ತಿದೆ. ವಿಶ್ವಾಮಿತ್ರಾದಿ ಮಹರ್ಷಿಗಳು ತಪಃಪ್ರಭಾವದಿಂದ ಬಹುಕಾಲ ಅನ್ನನೀರಿಲ್ಲದೆ ಇದ್ದರೆಂದು ಪುರಾಣದಲ್ಲಿದೆ. ಆ ಅದ್ಭುತಜೀವನಕ್ಕೂ ಪರಮಾತ್ಮನ ಧ್ಯಾನವೇ ಕಾರಣವೆಂದು ನಾವು ನಂಬಬಹುದಲ್ಲವೆ? ಸಂ-27, 236

# ಮುಪ್ಪು ಬರುವದರೊಳಗೆ ಮಾಡಿಕೊಳ್ಳಬೇಕಾದದ್ದು

ಅಣ್ಣಗಳಿರ, ಶರೀರವು ನೀವಲ್ಲ; ಅದು ನಿಮಗೆ ಇರುವ ಒಂದು ಸಾಧನ, ಅಷ್ಟೆ ಇದನ್ನು ಮರೆಯಬೇಡಿರಿ. ಶರೀರಕ್ಕೆ ಬಾಲ್ಯ, ಯೌವನ, ಕೌಮಾರ-ಇವುಗಳು ಬಂದಂತೆಯೇ ಮುಪ್ಪಿನ ಅವಸ್ಥೆಯೂ ಬಂದೇತೀರುವದು. ಇದನ್ನು ಮರೆಯಬೇಡಿರಿ. ಮುಪ್ಪುಬಂದಮೇಲೆ ಒಂದಾನೊಂದು ದಿನ ಈ ಶರೀರವನ್ನು ಅತ್ತೊಗೆದು ನೀವು ಮುಂದಕ್ಕೆ ಪ್ರಯಾಣಮಾಡಲೇಬೇಕು. ಇದನ್ನು ಮರೆಯಬೇಡಿರಿ.

ಮುಪ್ಪುಬರುವದರೊಳಗೆ ನೀವು ಮಾಡಿಕೊಳ್ಳಬೇಕಾದ ಸಾಧನಗಳನ್ನು ಮಾಡಿಕೊಳ್ಳಿರಿ. 'ನನಗೆ ಮುಪ್ಪುಬರುವದಿಲ್ಲ'- ಎಂಬ ಹುಚ್ಚುಕಲ್ಪನೆಯನ್ನು ಮಾಡಿಕೊಳ್ಳಬೇಡಿರಿ. ಅದು ಬಂದಾಗ ಮಾಡಿಕೊಳ್ಳೋಣ ಎಂಬ ಕಲ್ಪನೆಯಂತೂ ಎಂದಿಗೂ ಸಲ್ಲದು. ಅದು ಬಂದಮೇಲೆ ನಿಮ್ಮ ಅವಯವಗಳು ಯಾವವೂ ನಿಮ್ಮ ಹತೋಟಿಯಲ್ಲಿರುವದಿಲ್ಲ, ನಿಮ್ಮ ಆರೋಗ್ಯವು ತಪ್ಪಿಹೋಗುವದು, ಮನಸ್ಸಿನ ಶಕ್ತಿಯೂ ಕುಗ್ಗಿಹೋಗುವದು. ಆಮೇಲೆ ನೀವು ಏನನ್ನು ತಾನೆ ಮಾಡಿಕೊಳ್ಳಲಾಪಿರಿ?

ನಿಮ್ಮಲ್ಲಿ ಯಾರಿಗೆ ಮುಪ್ಪು ಬಂದೇಬಿಟ್ಟಿದೆಯೋ, ಅಥವಾ 'ಇನ್ನೇನು, ಬರುತ್ತಿದ್ದೇನೆ' ಎಂದು ಎಚ್ಚರಿಕೆಕೊಡುತ್ತಿರುವದೋ, ಅಂಥವರು ಈಗಲೂ ಮೊದಲಿನಂತೆ ವಿಷಯಗಳ ಭೋಗಕ್ಕೇ ಮನಸ್ಸನ್ನು ಜೋಲುಬಿಡುತ್ತಾ, ಕೂತುಕೊಳ್ಳುವದು ಎಂಥ ಹುಚ್ಚುತನವು! ಮನೆಯ ಹೊರಗಡೆಗೆ ಬೆಂಕಿ ಬಿದ್ದಿದ್ದರೆ ಇನ್ನೂ ಒಳಕ್ಕೇ ಬಂದಿಲ್ಲವಲ್ಲ !' ಎಂದು ಸುಮ್ಮನೆ ಕೂರಬಹುದೆ?

'ಹೆಂಡತಿಗೆ, ಮಕ್ಕಳಿಗೆ, ಅಥವಾ ಆಶ್ರಿತರಿಗೆ ಏನಾದರೂ ಜೀವನೋಪಾಯವನ್ನು ಕಲ್ಪಿಸಿಕೊಟ್ಟು ಆಮೇಲೆ ವಿಶ್ರಾಂತಿತೆಗೆದುಕೊಳ್ಳುವೆನು' ಎಂಬ ಮಂಕುಬುದ್ಧಿಗೆ ಅವಕಾಶವನ್ನು ಕೊಡಬೇಡಿರಿ. ನಿಮ್ಮವರಿಗೆ ಜೀವನೋಪಾಯವು ಅವಶ್ಯವಾಗಿರಬಹುದು; ಆದರೆ ನಿಮ್ಮ ಜೀವನಕ್ಕೇ ಸಂಚಕಾರವು ಬಂದಿದೆಯಲ್ಲ ! ಅದಕ್ಕೇನು ಮಾಡಬೇಕೆಂದಿರುವಿರಿ? ನಿಮ್ಮವರಿಗೆ ತಾವಿರುವ ದೇಶದ ಪರಿಚಯವಿದೆ, ನೀವಿಲ್ಲದಿದ್ದರೂ ಕೆಲವರು ನೆಂಟರಿಷ್ಟರೂ ಪರಿಚಯಸ್ಥರೂ ಅವರಿಗೆ ಸ್ವಲ್ಪ ಮಟ್ಟಿಗಾದರೂ ನೆರವಾಗಬಹುದೆಂಬ ಆಶೆಯಿದೆ. ಆದರೆ ನೀವು ಈ ಮುಪ್ಪು ಬಲವಾದ ಮೇಲೆ ಶರೀರವನ್ನು ಬಿಟ್ಟು ಮುಂದಕ್ಕೆ ಎಲ್ಲಿಗೆ ಹೋಗುವಿರೆಂಬುದನ್ನು ನಿಶ್ಚಯಿಸಿಕೊಂಡಿರುವಿರೇನು? ಅಲ್ಲಿ ಭಗವಂತನೊಬ್ಬನಲ್ಲದೆ, ಮತ್ತೆ ಯಾರೊಬ್ಬರ ಪರಿಚಯವೂ ನಿಮಗೆ ಯಾವ ಸಹಾಯವೂ ಆಗುವದಿಲ್ಲವೆಂಬುದು ನಿಮಗೆ ತಿಳಿದಿಲ್ಲವೇನು? ಅಯ್ಯೋ, ಮಂಕುಗಳಿರ ! ಇನ್ನಾದರೂ ತಡಮಾಡದೆ ಆ ಭಗವಂತನನ್ನು ಸ್ಮರಿಸಿಕೊಳ್ಳಿರಿ. ಮನಸ್ಸಿಗೆ ಒಂದಿಷ್ಟಾದರೂ ಶಾಂತಿಯು ಬರುವಂತೆ ಮಾಡಿಕೊಳ್ಳಿರಿ ! ಶಂ-27, 327

# 6. ಅಧ್ಯಾತ್ಮಜ್ಞಾನ

## ಅಧ್ಯಾತ್ಮಶ್ರವಣ

ಅಧ್ಯಾತ್ಮಜ್ಞಾನವನ್ನು ಮೈಗೂಡಿಸಿಕೊಳ್ಳುವದಕ್ಕೇನು ಮಾಡಬೇಕು? ಆ ಜ್ಞಾನದ ಬಲವು ನಮಗಾಗುವದಕ್ಕೆ ಉಪಾಯಗಳು ಯಾವವು? ಎಂದು ಜಿಜ್ಞಾಸುಗಳು ಕೇಳುವದುಂಟು. ಇದಕ್ಕೆ ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯಮೈತ್ರೇಯೀ ಸಂವಾದದಲ್ಲಿ ಉತ್ತರವಿರುತ್ತದೆ. "ಎಲೆ ಮೈತ್ರೇಯಿ, ಆತ್ಮವನ್ನೇ ಅರಿಯಬೇಕು, ಶ್ರವಣ ಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು; ಆತ್ಮನನ್ನು ಅರಿಯುವದ ರಿಂದ, ಆತ್ಮನ ಶ್ರವಣಮನನ ನಿದಿಧ್ಯಾಸನಗಳಿಂದ ಇದನ್ನೆಲ್ಲವನ್ನೂ ಅರಿತಂತೆಯೇ ಆಗುವದು". ಇಲ್ಲಿ ಆತ್ಮಜ್ಞಾನಕ್ಕೆ ಶ್ರವಣಮನನನಿದಿಧ್ಯಾಸನಗಳೇ ಸಾಧನಗಳೆಂದೂ, ಅವುಗಳಿಂದಾದ ಆತ್ಮಜ್ಞಾನದಿಂದ ಪ್ರಪಂಚಮಾತ್ರದ ತತ್ತ್ವವನ್ನೇ ತಿಳಿದಂತಾಗುವದೆಂದೂ ಹೇಳಿರುತ್ತದೆ. ಆದ್ದರಿಂದ ಶ್ರವಣಮನನನಿದಿಧ್ಯಾಸನಗಳ ಸ್ವರೂಪವನ್ನೂ ಅವುಗಳನ್ನು ನಡೆಸುವ ಕ್ರಮವನ್ನೂ ಕುರಿತು ವಿಚಾರಮಾಡುವದು ಅಗತ್ಯವಾಗಿದೆ.

ಶ್ರವಣವೆಂದರೆ ಶಾಸ್ತ್ರಗಳಿಂದಲೂ ಗುರುಗಳಿಂದಲೂ ಆತ್ಮವಿಚಾರದಲ್ಲಿ ಕೇಳಿ ತಿಳಿದುಕೊಳ್ಳುವದು. ಲೋಕದಲ್ಲಿ ಯಾವದಾದರೊಂದು ವಿಷಯದ ಜ್ಞಾನವು ನಮಗೆ ಬರಬೇಕಾದರೇನು ಮಾಡುತ್ತೇವೆ? ಅದನ್ನು ಬಲ್ಲವರ ಸ್ನೇಹಮಾಡುತ್ತೇವೆ, ಅವರ ನಡೆನುಡಿಗಳನ್ನು ನೋಡುತ್ತೇವೆ, ಸಂಶಯ ಬಂದೆಡೆಯಲ್ಲಿ ಕೇಳಿ ತಿಳಿಯುತ್ತೇವೆ, ಆಮೇಲೆ ಅದರಂತೆಯೇ ಆಚರಿಸಲು ಯತ್ನಮಾಡುತ್ತೇವೆ. ಆತ್ಮವಿಷಯದಲ್ಲಿಯೂ ಹೀಗೆಯೇ ಮಾಡಬೇಕು. ಆತ್ಮವಿಚಾರವನ್ನು ಮಾಡುತ್ತಿರುವ ಸಾಧುಸತ್ಪುರುಷರನ್ನು ಸೇರಿ ಅವರನ್ನು ಕೇಳಿ ತಿಳಿದುಕೊಳ್ಳಬೇಕು. ಕೆಲವರು "ಬರಿಯ ಬಾಯಿವೇದಾಂತದಿಂದ ಪ್ರಯೋಜನವಿಲ್ಲ, ಶಾಸ್ತ್ರಗಳನ್ನು ಹೆಚ್ಚಾಗಿ ಓದುವದರಿಂದಲೂ ಜನರಲ್ಲಿ ಸುಮ್ಮನೆ ವಾದ ಮಾಡುತ್ತಿರುವದ ರಿಂದಲೂ ಮನಸ್ಸು ತಲ್ಲಣಗೊಳ್ಳುವದೇ ಹೊರತು, ಇದರಿಂದ ಮತ್ತೆ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ಶ್ರವಣವನ್ನು ಹೆಚ್ಚಾಗಿ ಉಪಯೋಗಿಸ ಬೇಕಾದ್ದಿಲ್ಲವೆಂದು ಹೇಳುವರು. ಈ ಅಭಿಪ್ರಾಯವನ್ನು ಒಪ್ಪಲಾಗುವದಿಲ್ಲ. ಏಕೆಂದರೆ, ಲೋಕದಲ್ಲಿಯಾದರೂ ಜನರಿಗೆ ಯಾವದಾದರೂ ವಿಷಯದ ಕಡೆಗೆ ಮನಸ್ಸು ಜಗ್ಗುವದಕ್ಕೆ ಮೊದಲು ಶ್ರವಣವೇ ಕಾರಣವಾಗುವದು. ನೋಡಿರಿ! ಕಾಫಿ, ಟೀ, ಬಿಸ್ಕತ್ತು, ಮೊದಲಾದ ಆಹಾರವಸ್ತುಗಳೂ ಹೂ, ಗಂಧ, ಸೆಂಟ್, ಅತ್ತರು ಮುಂತಾದ ಸುವಾಸನೆಯ ದ್ರವ್ಯಗಳೂ ಸಂಗೀತ, ಪಿಟೀಲು, ವೀಣೆ, ಹಾರ್ಮೋನಿಯಂ ಮುಂತಾದ ಶಬ್ದಪ್ರಧಾನವಾದ ವಾದ್ಯಗಳೂ, ಬೈಯಾಸ್ಕೋಪ್, ಸರ್ಕಸ್, ನಾಟಕ, ಮ್ಯೂಸಿಯಮ್

ಮುಂತಾದ ರೂಪಪ್ರಧಾನವಾದ ನೋಟಗಳೂ, ಬೂರುಗದ ಹತ್ತಿಯ ಮೆತ್ತೆ, ಸ್ಪ್ರಿಂಗುಕುಷನ್ ಹಾಕಿದ ಕುರ್ಚಿ, ಪ್ಲಾನಲ್ ಬಟ್ಟೆ, ಉಣ್ಣೆಯ ಕಾಲುಚೀಲ ಮುಂತಾದ ಸುಖಸ್ಪರ್ಶವಾಗಿರುವ ಪದಾರ್ಥಗಳೂ ನಮ್ಮಗಳ ಮನಸ್ಸನ್ನೆಳೆಯುವದಕ್ಕೆ ಮೊದಲನೆಯ ಮೆಟ್ಟಲು ಯಾವದು? ಇವುಗಳ ವರ್ಣನೆಯ ಮಾತುಗಳೇ. ಇವುಗಳು ಹೀಗಿವೆ, ಹಾಗಿವೆ- ಎಂದು ವರ್ತಮಾನಪತ್ರವೇ ಮುಂತಾದೆಡೆಗಳಲ್ಲಿ ನಾನಾವಿಧವಾಗಿ ಸಚಿತ್ರವಾಗಿ ವಿವಿಧಮುದ್ರಾಕ್ಷರಗಳಿಂದ ವರ್ಣಿಸಿರುವ ಪ್ರಕಟಣೆಗಳನ್ನು ಓದುವದು ಅವುಗಳನ್ನನುಭವಿಸಿ 'ಇಂಥ ಸುಖಬಟ್ಟೆವು ಅಂಥ ಸ್ವರ್ಗದಲ್ಲಿದ್ದೆವು'- ಎಂದು ಬಣ್ಣಿಸುವ ನಮ್ಮ ಗೆಳೆಯರ ಮಾತುಗಳನ್ನು ಕೇಳುವದು,-ಇವೆರಡೂ ನಮ್ಮ ಮೇಲೆ ಎಷ್ಟು ಪರಿಣಾಮವನ್ನುಂಟು ಮಾಡುವದೆಂಬುದನ್ನು ನೆನಸಿಕೊಂಡರೆ ವಸ್ತುವಿನ ಶ್ರವಣದಿಂದಾಗುವ ಫಲವನ್ನು ತಿಳಿಯಬಹುದಾಗಿದೆ. ಭಲೆ, ಶಹಬ್ಬಾಸ್-ಮುಂತಾದ ಶಬ್ದಗಳನ್ನು ಕೇಳಿದ ಕೂಡಲೆ ಕುಸ್ತಿಮಾಡುವವರೂ ಕೂಲಿಯಾಳುಗಳೂ ಎಷ್ಟರ ಮಟ್ಟಿಗೆ ಮೈಯುಬ್ಬಿ ಉತ್ಸಾಹದಿಂದ ಕೆಲಸಮಾಡುವರು! ಯುದ್ಧಗಳಲ್ಲಿ ವೀರರಸಪ್ರಧಾನವಾದ ಗಾನಗಳನ್ನು ವಾದ್ಯಗಳಿಂದ ಬಾರಿಸುವಾಗ ಹೇಡಿಗಳಾದ ಸಿಪಾಯಿಯರಿಗೂ ಹೇಗೆ ಧೈರ್ಯವುಕ್ಕೇರುವದು! ಶಬ್ದಮಾತ್ರದಲ್ಲಿ ಇಷ್ಟು ಬಲವಿರುವಾಗ, ಪದಾರ್ಥದ ರೂಪುಲಾವಣ್ಯಗಳನ್ನೂ ಉಪಯೋಗಗಳನ್ನೂ ಬೆಲೆಯನ್ನೂ ವಿವರಿಸುವ ಮಾತಿನ ರೂಪದಲ್ಲಿರುವ ಶಬ್ದಕ್ಕೆಷ್ಟು ಬೆಲೆಯಾಯಿತು? ಶಬ್ದವೂ ವಸ್ತುವೂ ಎಂದೆಂದಿಗೂ ಹೊಂದಿಕೊಂಡೇ ಇರುವದೆಂದು ತಿಳಿದವರು ಹೇಳುವರು. ಆದ್ದರಿಂದ ವಸ್ತುಜ್ಞಾನಕ್ಕೆ ಅದರ ವಿಷಯವಾಗಿ ಶ್ರವಣಮಾಡುವದು ವಸ್ತುವಿನಲ್ಲಿ ತುಂಬ ಆದರವನ್ನು ಹುಟ್ಟಿಸಿ, ಅದರ ಜ್ಞಾನಕ್ಕೆ ಸಹಾಯ ಮಾಡುವದೆಂಬುದರಲ್ಲಿ ಸಂಶಯವಿಲ್ಲ.

ಆತ್ಮಜ್ಞಾನಕ್ಕೂ ಇದೇ ಕಾರಣದಿಂದ ಶ್ರವಣವು ಪ್ರಧಾನವಾದ ಮೊದಲನೆಯ ಮೆಟ್ಟಿಲಾಗಿರುವದು. ಆತ್ಮವಿಷಯಕವಾದ ಗ್ರಂಥಗಳನ್ನು ಓದುತ್ತಲಿರಬೇಕು. ಗ್ರಂಥಗಳನ್ನು ಓದಿದಷ್ಟೂ ಅವುಗಳ ರುಚಿ ಹತ್ತುವದು. ಕಾವ್ಯಶಾಸ್ತ್ರಗಳಲ್ಲಿ ಓದಿದ ಹಾಗೆಲ್ಲ ಹೇಗೆ ಕೌಶಲವೂ ಹೆಚ್ಚು ಕಲ್ಪಿತವಾದ ಕಾದಂಬರಿಗಳನ್ನೋದುವದರಲ್ಲಿ ಹಸಿವುತೃಷೆಗಳನ್ನು ಕೂಡ ಮರೆಯುವದಿಲ್ಲವೆ? ಇದರಂತೆ ಆತ್ಮ ವಿಷಯಕವಾದ ಪುರಾಣೇತಿಹಾಸಗಳನ್ನು ಓದುವದಕ್ಕೂ ಕೇಳುವದಕ್ಕೂ ಮೊದಲುಮಾಡಿದರೆ ಅವುಗಳ ಸವಿಯೂ ನಮಗೆ ತೋರಹತ್ತುವದು. ಒಂದು ವೇಳೆ ನಮಗೇ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿಯಿಲ್ಲದಿದ್ದರೆ, ಓದಿಸಿ ಕೇಳಬೇಕು, ಇದೂ ಶ್ರವಣವೇ ಆಗುವದು. ಇದರ ಜತೆಗೆ ಈಗಿನ ಕಾಲಕ್ಕೆ ಅನುಗುಣವಾಗಿ ದೃಷ್ಟಾಂತಗಳನ್ನು ಕೊಟ್ಟು ಕಥಾದಿರೂಪಗಳಲ್ಲಿ ಬರೆದಿರುವ ಗ್ರಂಥಗಳನ್ನು ಓದಬೇಕು! ಇದರಿಂದ ಮನಸ್ಸಿಗೆ ಬೇಸರ ಹುಟ್ಟದೆ ಆತ್ಮ ವಿಚಾರವೂ ವಿಷಯವಿಚಾರದಂತೆ ವಿನೋದವಾಗಿಯೇ ಪರಿಣಮಿಸುವದು.

ಗ್ರಂಥಗಳನ್ನೋದುವದಕ್ಕಿಂತಲೂ ಸರಿಯಾದ ಸದ್ಗುರು ಸಿಕ್ಕರೆ ಅವಶ್ಯವಾಗಿ ಆತನಿಂದಲೇ ಆತ್ಮ ವಿಷಯವಾಗಿ ಕೇಳಿ ತಿಳಿದುಕೊಳ್ಳುವದುತ್ತಮ. ಪಂಚಾಂಗಕ್ಕಿಂತಲೂ ಜೋಯಿಸನು ಮೇಲಲ್ಲವೆ? ಗ್ರಂಥಗಳಲ್ಲಿ ವಾಕ್ಯರತ್ನಗಳೇ ಇರುವದು ನಿಜವಾದರೂ ಅವುಗಳ ಬೆಲೆಯು ದಿವ್ಯಜ್ಞಾನವೆಂಬ ಚಕ್ಷುಸ್ಸುಳ್ಳ ಸದ್ಗುರುವಿಗೇ ತಿಳಿಯುವದು. ಇದಲ್ಲದೆ ಗ್ರಂಥಗಳು ಜಡವಸ್ತುಗಳು, ಸದ್ಗುರುವೋ ಚೇತನನು. ಆತನ ನುಡಿಯಿಂದ ಶ್ರವಣ ಮಾಡಿದ ವಿಷಯಕ್ಕೆ ಆತನೇ ಉದಾಹರಣೆಯಾಗಿರುವನು. ವಿದ್ಯುಚ್ಛಕ್ತಿಯ ಉಗ್ರಾಣವಾಗಿರುವ ಬ್ಯಾಟರಿಯೆಂಬ ಯಂತ್ರವಿಶೇಷದಂತೆ ಆತ್ಮಶಕ್ತಿಯ ಸರ್ವಸ್ವವೂ ಆಗಿರುವ ಸದ್ಗುರುಮೂರ್ತಿಯನ್ನು ಬಿಟ್ಟರೆ ಮತ್ತೆಲ್ಲಿ ನಮಗೆ ಆತ್ಮವಿಷಯಕವಾದ ಜ್ಞಾನವು ದೊರೆತೀತು? ಆತನು ಪ್ರಸನ್ನನಾದರೆ ವಿದ್ಯುಚ್ಛಕ್ತಿಯು ಉತ್ಪತ್ತಿಸ್ಥಾನದಿಂದ ತಂತಿಯ ಮೂಲಕ ಹೊರಟು ಉದ್ದಿಷ್ಟಸ್ಥಳದಲ್ಲಿ ತೇಜಃಪುಂಜವಾಗಿ ವ್ಯಕ್ತವಾಗುವಂತೆ ಆತ್ಮಜ್ಞಾನವು ಶಿಷ್ಯನ ಹೃದಯದಲ್ಲಿ ಅವಶ್ಯವಾಗಿ ತೋರಿಕೊಳ್ಳುವದು. ಆದ್ದರಿಂದಲೇ ಗೀತೆಯಲ್ಲಿ ಶ್ಲೋ॥ ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ । ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥ "ತತ್ತ್ವವನ್ನು ಮನಗಂಡಿರುವ ಜ್ಞಾನಿಗಳನ್ನು ನಮಸ್ಕರಿಸಿ, ಸೇವೆಮಾಡಿ ಅವರನ್ನು ಕೇಳಿ ಜ್ಞಾನವನ್ನು ಪಡೆಯಬೇಕು. ಅವರೇ ಅದನ್ನುಪ ದೇಶಿಸುವವರು" ಎಂತ ಭಗವಂತನು ಅಪ್ಪಣೆಕೊಟ್ಟಿರುವನು.

ಎಷ್ಟೋ ಜನರು ಗ್ರಂಥಗಳನ್ನು ಓದಿಯೇ ಇರುವರು, ದೊಡ್ಡವರ ಮಾತನ್ನೂ ಕೇಳಿಯೇ ಇರುವರಲ್ಲ? ಅವರಿಗೇತಕ್ಕೆ ಶ್ರವಣದ ಫಲವಾಗಿಲ್ಲ? ಎಂದರೆ ಇಲ್ಲಿ ಒಂದು ರಹಸ್ಯವುಂಟು. ಸುಮ್ಮನೆ ಮಾತುಗಳನ್ನು ಕಿವಿಯಲ್ಲಿ ಹಾಕಿಕೊಂಡರೆ ಶ್ರವಣವೆನಿಸದು. ನಿಜವಾದ ಶ್ರವಣವಾಗಬೇಕಾದರೆ ಕೇಳಿದ ವಿಷಯದಲ್ಲಿಯೆ ಮನಸ್ಸು ನೆಡಬೇಕು. ಫೋಟೋ ಎಂಬ ಭಾವಚಿತ್ರವನ್ನು ತೆಗೆಯುವವನು ತನ್ನ ಯಂತ್ರವನ್ನು ಸರಿಯಾದ ಎತ್ತರದಲ್ಲಿ ಸರಿಯಾದ ದೂರದಲ್ಲಿ ಸರಿಯಾದ ಸ್ಥಳದಲ್ಲಿಟ್ಟು ಎದುರಿಗೆ ಕೂತಿರುವವರ ಪೂರ್ಣಪ್ರತಿಬಿಂಬವು ಯಂತ್ರದ ಕನ್ನಡಿಯಮೇಲೆ ಬೀಳುವಂತೆ ಮಾಡಿಕೊಳ್ಳುವದಕ್ಕೆ ಹೇಗೆ ಯತ್ನಿಸುವನೋ ಹಾಗೆಯೇ ಮನಸ್ಸನ್ನು ನೆಟ್ಟಗೆ ನಿಲ್ಲಿಸಿಕೊಂಡು ವಿಷಯಗಳನ್ನು ತಿಳಿಸುವ ಸದ್ಗುರು ಮಾಡುವ ಯತ್ನಗಳಿಂದ ಅವು ನಮ್ಮ ಮನಸ್ಸಿನಲ್ಲಿ ಮೂಡುವಂತೆ ಮಾಡಿಕೊಳ್ಳುವದೇ ಶ್ರವಣವೆನಿಸುವದು. ಎಷ್ಟೋ ಜನರಿಗೆ ಶ್ರವಣಶಕ್ತಿಯೇ ಇರುವದಿಲ್ಲ. ಇದರಿಂದಲೇ ಕೇಳಿದ ಹರಿಕಥೆ, ಉಪನ್ಯಾಸ, ಪಾಠಪ್ರವಚನಗಳು–ಇವುಗಳಿಂದ ಇಂಥವರ ಮನಸ್ಸಿನಮೇಲೆ ಪರಿಣಾಮವಾಗುವದಿಲ್ಲ. ಗೋರಿಕಲ್ಲಿನಮೇಲೆ ಮಳೆ ಹೊಯ್ದಂತೆ ಅವರ ಮನಸ್ಸಿನಮೇಲೆ ಬಿದ್ದ ಸದುಕ್ತಿಗಳೂ ಜಾರಿಹೋಗುವವು. ಅಧ್ಯಾತ್ಮ ವಿಷಯಗಳನ್ನು ಎಷ್ಟೋಸಲ ಕೇಳಿಕೇಳಿ ನಮಗೇನೂ ತಿಳಿಯಲೆ ಇಲ್ಲವಲ್ಲ! ಎಂದು ನಿಟ್ಟುಸಿರು

ಬಿಡುತ್ತಿರುವವರು ಬಹುಮಂದಿ ಈ ಪಂಗಡದವರೆಂದು ಅರಿಯಬೇಕು. ಇಂಥವರ ಮನಸ್ಸಿಗೆ ಶುದ್ಧಿಸಾಲದು, ಅದು ಸರಿಯಾಗಿ ನಿಂತು ವಿಷಯಗಳನ್ನು ಹಿಡಿದು ಕೊಳ್ಳಲಾರದು. ಇಂಥವರು ಶ್ರುತಿಸ್ಮೃತಿ ಪುರಾಣಗಳಲ್ಲಿ ಹೇಳಿರುವ ಶುದ್ಧಿಪ್ರಯೋಜಕವಾದ ಉತ್ತಮಕರ್ಮಗಳನ್ನು ಆಚರಿಸಬೇಕು. ಮನಸ್ಸಿಗೆ ಸಂಸ್ಕಾರವನ್ನು ಕೊಡುವ ಶಾಸ್ತ್ರಗಳನ್ನು ಅಭ್ಯಾಸಮಾಡಬೇಕು. ಇಂಥ ಉಪಾಯಗಳಿಂದ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ಅದರಲ್ಲಿಯೆ ಮನಸ್ಸಿಟ್ಟು ಶ್ರದ್ಧೆಯಿಂದ ಯಾರು ಅಧ್ಯಾತ್ಮವಿಷಯಕವಾದ ಶ್ರವಣವನ್ನು ಆಚರಿಸುವರೋ ಆ ಮಹನೀಯರಿಗೆ ಆತ್ಮಸಾಕ್ಷಾತ್ಕಾರವೆಂಬುದು ಕರತಲಾಮಲಕ ವಾಗಿರುವದೆಂಬುದರಲ್ಲಿ ಸಂದೇಹವಿಲ್ಲ. **ಸಂ-1, 50**

# ಮನನದ ಸ್ವರೂಪ

ಕಠೋಪನಿಷತ್ತಿನಲ್ಲಿ ಒಂದು ವಾಕ್ಯವುಂಟು. ಶ್ರು॥ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವನ್ತೋಽಪಿ ಬಹವೋ ಯಂ ನ ವಿದ್ಯುಃ॥ ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾಽಽಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ॥ ಇದರ ಅಭಿಪ್ರಾಯವೇನೆಂದರೆ, ಎಷ್ಟೋ ಜನರಿಗೆ ಆತ್ಮನ ಶ್ರವಣವೇ ಸಿಕ್ಕುವದಿಲ್ಲ. ಇನ್ನೂ ಕೆಲವರಿಗೆ ಶ್ರವಣವಾದ ಮೇಲೂ ಈ ಆತ್ಮನ ಅರಿವಾಗುವದಿಲ್ಲ. ಈ ಆತ್ಮತತ್ತ್ವವನ್ನು ಹೇಳುವವನೇ ಆಶ್ಚರ್ಯ ಸ್ವರೂಪನು, ಇದನ್ನು ಪಡೆಯುವವನೇ ಜಾಣನು. ಉಪದೇಶಮಾಡಿದ ಮೇಲಾದರೂ ತಿಳಿದುಕೊಳ್ಳುವವನೂ ಆಶ್ಚರ್ಯಸ್ವರೂಪನೆ. ಎಲ್ಲರಿಗೂ ಈ ತಿಳಿವು ಬರುವದಿಲ್ಲ.

ಈ ಉಪನಿಷದ್ವಾಕ್ಯದಲ್ಲಿ ಶ್ರವಣಮನನಗಳ ಸ್ವರೂಪವನ್ನು ಬಿಡಿಸಿ ಹೇಳಿರುತ್ತದೆ. ಹೇಳಿದ ವಿಷಯವನ್ನು ಮನಸ್ಸುಕೊಟ್ಟು ತನ್ನೊಳಕ್ಕೆ ಬರಮಾಡಿಕೊಂಡರೆ ಶ್ರವಣವಾಯಿತು. ಸುಮ್ಮನೆ ಈ ಕಿವಿಯಿಂದ ಕೇಳಿದ್ದು ಆ ಕಿವಿಯಿಂದ ಸೋರಿಹೋಗುವಂತೆ ಎತ್ತಲೋ ನೋಡುತ್ತ ಹೂಗುಟ್ಟುತ್ತ ತಲೆಹಾಕಿದರೆ ಆಗಲಿಲ್ಲ. ಈ ಶ್ರವಣವೆಂಬುದು ಎಷ್ಟೋ ಜನರಿಗೆ ದಕ್ಕದೆಹೋಗುವದು. ಅಧ್ಯಾತ್ಮವಿಚಾರಗಳ ಗ್ರಂಥಗಳು ಕಡಿಮೆಯೆಂಬುದಾಗಲಿ, ಅಧ್ಯಾತ್ಮ ವಿಚಾರವನ್ನು ತಿಳಿಯಹೇಳುವವರು ಇಲ್ಲವೆಂಬುದಾಗಲಿ ಇದಕ್ಕೆ ಕಾರಣವಲ್ಲ. ಶ್ರವಣಶಕ್ತಿಯಿಲ್ಲದಿರುವದೇ ಇದಕ್ಕೆ ಕಾರಣವು. ಈ ಶ್ರವಣಕ್ಕೆ ಇರುವ ಪ್ರತಿಬಂಧಕಗಳು ಅನೇಕವಾಗಿರುತ್ತವೆ. ಹೊರವಿಷಯಗಳು ನಮ್ಮ ಮನಸ್ಸನ್ನು ಎಳೆಯುತ್ತಿರುವದೊಂದು ಕಾರಣ. "ಒಳಗೆ ಆತ್ಮತತ್ತ್ವವೆಂದು ಹೇಳುತ್ತಾರೆ. ಅದೇನು ನಿಜವಾಗಿ ಇದೆಯೋ ಇಲ್ಲವೋ! ಇದ್ದರೆ ಅದು ವಿಚಾರಮಾಡಿದರೆ ನನಗೆ ತಿಳಿಯುವದೋ ಇಲ್ಲವೊ! ತಿಳಿದರೂ ಅದರಿಂದ ನನಗೇನಾದರೂ ಪ್ರಯೋಜನವುಂಟೋ ಇಲ್ಲವೋ! ಒಂದು ವೇಳೆ ಇದ್ದರೂ ಆಕಡೆಗೆ ಲಕ್ಷ್ಯಕೊಡುವದರಿಂದ ಈ ಲೋಕದಲ್ಲಿರುವ ಅನುಕೂಲ

ಗಳೆಲ್ಲವೂ ನನಗೆ ತಪ್ಪಿಹೋಗುವವೋ ಏನೋ! ನಾನು ಏತಕ್ಕೂ ಬರದವನಾಗಿ ಮೂಗುಹಿಡಿದು ಕೂರುವವನೆಂದು ಜನರು ಹಾಸ್ಯಮಾಡುವದಕ್ಕೆ ಪ್ರಾರಂಭಿಸಿದರೇನು ಗತಿ!"– ಎಂದು ಮುಂತಾಗಿ ಸಂಶಯಗಳು ಅಲೆಗಳಂತೆ ಒಂದರ ಹಿಂದೊಂದು ಬಂದು ಆಕ್ರಮಿಸಿಕೊಳ್ಳುವದೊಂದು ಕಾರಣ. ಇವುಗಳನ್ನು ಒತ್ತಟ್ಟಿಗಿಟ್ಟು ಪ್ರಯತ್ನ ಮಾಡುವಾಗ ಅಭ್ಯಾಸದ ಮೊದಲನೆಯ ಸ್ಥಿತಿಯಲ್ಲಿ ಪ್ರಯೋಜನವು ಕಾಣದೆ ಕಷ್ಟಗಳೊದಗಿ ಕಣ್ಣುಕಟ್ಟಿ ಕಾಡಿಗೆ ಬಿಟ್ಟಂತಾಗುವದೊಂದು ಕಾರಣ. ಈ ಎಲ್ಲಾ ಪ್ರತಿಬಂಧಕ ಗಳನ್ನೂ ದಾಟುವದಕ್ಕೆ ಶಕ್ತನಾದವನಿಗೇ ಆತ್ಮವಿಷಯಕ ಶ್ರವಣವು ದಕ್ಕುವದಾದ್ದರಿಂದ "ಇದನ್ನು ಪಡೆಯುವವನೇ ಜಾಣನು" ಎಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ.

ಇನ್ನು ಕೆಲವರಿಗೆ ಹೀಗೆ ಶ್ರವಣವಾದ ಮೇಲೂ ಈ ಆತ್ಮನ ಅರಿವಾಗುವದಿಲ್ಲ. ಇವರಿಗೆ ಮನನವು ಬೇಕಾಗುವದು. ಅಡಿಗೆ ಮಾಡಿದ ವಸ್ತುಗಳನ್ನು ಸಾರು, ಹುಳಿ, ಕೂಟು, ಪಲ್ಯ ಎಂದು ಗುರ್ತಿಸುವದೂ ಇಂಥಿಂಥ ವಸ್ತುಗಳು ಸೇರಿ ಈ ಅಡಿಗೆಗಳು ಆಗಿರುವವೆಂದು ಮಾಡಿದವರಿಂದ ಕೇಳಿ ತಿಳಿಯುವದೂ ಅಡಿಗೆಯ ಜ್ಞಾನಕ್ಕೆ ಸಹಕಾರಿಗಳೇ ಸರಿ. ಆದರೆ ತಾನೇ ಅವುಗಳನ್ನು ಪಾಕಮಾಡಿದಾಗಲೇ ಅವುಗಳ ಸ್ವರೂಪಜ್ಞಾನವು ನಿಜವಾಗಿ ಹುಟ್ಟುವದು. ಇದರಂತೆಯೇ ಆತ್ಮನ ವಿಷಯದಲ್ಲಿ ಗ್ರಂಥಗಳನ್ನೂ ಉಪದೇಶಗಳನ್ನೂ ಕೇಳಿದರೇ ಸಾಲದು. ಆ ಅಂಶಗಳ ಬೆಲೆಯನ್ನು ಕುರಿತು ತಾನೇ ಆಲೋಚನೆ ಮಾಡಬೇಕು. ಆಲೋಚನೆ ಎಂದರೇನೆಂದು ತಿಳಿಯುವದು ಅವಶ್ಯವಾಗಿದೆ. ಈ ಮಾತಿನ ಧಾತ್ವರ್ಥವನ್ನು ಮನಸ್ಸಿನಲ್ಲಿಟ್ಟರೆ ಎಲ್ಲೆಲ್ಲಿಯೂ ಬೆಳಕು ಬೀಳುವಂತೆ ಮಾಡುವದೆಂದು ಅಭಿಪ್ರಾಯವಾಗುವದು. ಆತ್ಮನ ವಿಷಯದಲ್ಲಿ ನಮಗೆ ಯಾವ ಸಂದೇಹವಾಗಲಿ, ವಿಪರೀತ ಭಾವನೆಯಾಗಲಿ, ಇರದಂತೆ ಮನಸ್ಸು ಎಲ್ಲಾ ಕಡೆಗೂ ಹರಿದಾಡಿ ನೋಡಬೇಕು. ಆಗಲೇ ಮನನವು ಪ್ರಾರಂಭವಾಯಿತು.

ಈ ಮನನದಲ್ಲಿ ಇನ್ನೊಂದು ವಿಶೇಷವಿದೆ. ಹೊರಗಿನ ವಸ್ತುವಿನ ವಿಷಯದಲ್ಲಿ ವಿಚಾರಮಾಡುವದು ನಮಗೆ ಬಹುಸುಲಭ, ಏಕೆಂದರೆ ಅವು ಮನಸ್ಸಿಗೆ ವಿಷಯ ವಾಗಿಯೇ ಇರುವವು. ಆತ್ಮಮನನದಲ್ಲಿಯೋ ಎಂದರೆ ಮನಸ್ಸು ಹಿಂದಿರುಗಬೇಕು. ಹಿಮಾಲಯದಿಂದ ಸಮುದ್ರದ ಕಡೆಗೆ ಹರಿಯುತ್ತಿರುವ ಗಂಗಾನದಿಯನ್ನು ಹಿಂದಕ್ಕೆ ಪ್ರವಹಿಸುವಂತೆ ಮಾಡುವ ಕೆಲಸವೂ ಮನಸ್ಸನ್ನು ವಿಷಯಗಳಿಂದ ಹಿಮ್ಮೆಟ್ಟಿಸುವ ಕೆಲಸವೂ ಸಮವೆನ್ನಬಹುದು. ಇಷ್ಟೇ ಅಲ್ಲ. ಮನಸ್ಸು ಹಿಂದಿರುಗಿದಮೇಲಾದರೂ ಮನಸ್ಸಿಗೆ ಸಿಕ್ಕದ ವಸ್ತುವಿನ ವಿಷಯದಲ್ಲಿ ಮನನ ಮಾಡಬೇಕೆಂದರೆ ಎಂಥ ವಿಚಾರಶೂನ್ಯವಾದ ಮಾತಾಗಿ ತೋರುವದು! "ಮಾತುಗಳೂ ಮನಸ್ಸೂ ಆ ಪರಮಾತ್ಮನನ್ನು ಪಡೆಯ ಲಾರದೇ ಹೋಗುವವು" ಎಂದು ಶ್ರುತಿಯೇ ಹೇಳುತ್ತಿರುವದು. ಹೀಗಿರುವದರಿಂದ

ಆತ್ಮನ ವಿಷಯವಾಗಿ ಮನನ ಮಾಡಬೇಕೆಂದು ಹೇಳುವದು ಕಷ್ಟವೆಂಬುದು ಹಾಗೆ ಇರಲಿ, ಯಾರಿಂದಲೂ ಆಗದ ಮಾತೆಂದೇ ತೋರುತ್ತಿರುವದು.

ಆದರೆ ಬಾಹ್ಯ ವಿಷಯಾಸಕ್ತರಿಗೆ ಮನನವೆಂಬುದು ಕಷ್ಟದ ಮಾತೇ, ಆದರೂ ಸರಿಯಾದ ಸಂಸ್ಕಾರವುಳ್ಳವರಿಗೆ ಅದೇನೂ ಕಷ್ಟವಲ್ಲ. ಕಠೋಪನಿಷತ್ತಿನಲ್ಲಿಯೇ ಈ ವಿಚಾರದಲ್ಲಿ ಹೇಳಿರುವದೇನೆಂದರೆ "ಮನಸೈವೇದಮಾಪ್ತವ್ಯಂ ನೇಹ ನಾನಾಽಸ್ತಿ ಕಿಂಚನ" (ಇದನ್ನು ಮನಸ್ಸಿನಿಂದಲೆ ತಿಳಿಯಬೇಕಾಗಿದೆ, ಇದರಲ್ಲಿ ಯಾವ ಭೇದವೂ ಇರುವದಿಲ್ಲ). ಈ ವಾಕ್ಯಕ್ಕೆ ಶ್ರೀ ಶಂಕರಾಚಾರ್ಯರು ಬರೆದಿರುವ ಭಾಷ್ಯದಲ್ಲಿ ಹೀಗೆಂದು ಹೇಳಿರುತ್ತಾರೆ. "ಆತ್ಮವೊಂದೇ ತತ್ತ್ವವೆಂದು ಅರಿಯುವದಕ್ಕೆ ಮೊದಲು ಆಚಾರ್ಯರಿಂದಲೂ ಶಾಸ್ತ್ರದಿಂದಲೂ ಸಂಸ್ಕಾರವನ್ನು ಹೊಂದಿದ ಮನಸ್ಸಿನಿಂದಲೇ ಈ ಅಖಂಡರಸವಾಗಿರುವ ಬ್ರಹ್ಮವನ್ನು ಅರಿಯಬೇಕಾಗಿದೆ; ಹಾಗೆ ಅರಿತಮೇಲೋ ಎಂದರೆ ಭೇದಗಳನ್ನು ತಿಳಿಸುವ ಅವಿದ್ಯೆಯೇ ಹೋಗಿ ಬಿಡುವದರಿಂದ ಈ ಬ್ರಹ್ಮದಲ್ಲಿ ಸ್ವಲ್ಪವೂ ಭೇದವಿರುವದಿಲ್ಲ". ಈ ಭಾಷ್ಯದಿಂದ ಮೇಲೆ ನಾವು ತಿಳಿಸಿದ ಶಂಕೆಗೂ ಪರಿಹಾರವನ್ನು ಹೇಳಿದಂತಾಗುವದು. ಹೇಗೆಂದರೆ ಮನಸ್ಸಿಗೆ ಸಿಕ್ಕುವದಿಲ್ಲವೆಂಬುದು ಸಂಸ್ಕಾರವಿಲ್ಲದ ಮನಸ್ಸಿನ ವಿಷಯವು ಸರಿಯಾದ ಸಂಸ್ಕಾರವುಳ್ಳ ಮನಸ್ಸಿಗೆ ಆತ್ಮನ ಅರಿವು ಆಗಿಯೇ ತೀರುವದು, ಅಂಥ ಅರಿವನ್ನುಂಟು ಮಾಡುವದಕ್ಕೇ ಶಾಸ್ತ್ರವು ಹೊರಟಿರುವದು. ಮನಸ್ಸಿಗೆ ಆತ್ಮನು ವಿಷಯವಲ್ಲವೆಂಬುದೂ ಇಂಥ ಅರಿವು ಹುಟ್ಟಿದ ಮೇಲೆಯೇ ಗೊತ್ತಾಗುವದು.

ಮನನದ ವಿಷಯದಲ್ಲಿ ಇನ್ನೊಂದು ಮಾತನ್ನು ಹೇಳಿ ಈ ಲೇಖವನ್ನು ಮುಗಿಸುವೆವು. ಮನನವೆಂದರೆ ವಿಚಾರವೆಂದು ಅರ್ಥವಾದರೂ ಸಿಕ್ಕಹಾಗೆ ವಿಚಾರ ಮಾಡುವದು ಮನನವಾಗಲಾರದು. ಶಾಸ್ತ್ರವಿಚಾರವನ್ನು ಅನುಭವಕ್ಕೆ ತಂದುಕೊಂಡಿರುವ ಸದ್ಗುರುವಿನ ಉಪದೇಶದಿಂದ ಸಿಕ್ಕ ವಿಷಯವನ್ನು ಕುರಿತು ವಿಚಾರ ಮಾಡುವದೇ ಮನನವೆನಿಸುವದು. ಬರಿಯ ಬುದ್ಧಿಯಿಂದ ಊಹಿಸಿ ತಿಳಿದ ಜನರು "ಆತ್ಮನು ಇದ್ದಾನೆ, ಇಲ್ಲ; ಕರ್ತೃ, ಅಕರ್ತೃ; ಒಬ್ಬನು, ಅನೇಕ; ಸಗುಣನು, ನಿರ್ಗುಣನು"- ಎಂದು ಮುಂತಾಗಿ ಆನೆಯ ಸ್ವರೂಪವನ್ನು ತಡವರಿಸಿ ತಿಳಿಯುವ ಕುರುಡರಂತೆ ಬಗೆಬಗೆಯಾಗಿ ಕಲ್ಪಿಸುತ್ತಲೂ ಒಬ್ಬರನೊಡನೊಬ್ಬರು ತತ್ತ್ವದ ವಿಷಯದಲ್ಲಿ ಜಗಳವಾಡುತ್ತಲೂ ಇರುವರು. ಆದ್ದರಿಂದಲೇ "ತರ್ಕವು ನಿಲುಗಡೆಗೆ ಬರುವದಿಲ್ಲ" ಎಂದು ಬಾದರಾಯಣರು ಬ್ರಹ್ಮಸೂತ್ರದಲ್ಲಿ ಹೇಳಿರುತ್ತಾರೆ. ಶಾಸ್ತ್ರಾಚಾರ್ಯರ ವಾಕ್ಕಿನ ಶ್ರವಣವನ್ನನುಸರಿಸಿ ಶ್ರುತಿಸಮ್ಮತವಾಗಿ ವಿಚಾರಮಾಡುವದೇ ಸರಿಯಾದ ಅನುಭವವನ್ನು ಕೊಡುವ ಬೋಧಾಭ್ಯಾಸವೆಂದೂ ಮನನವೆಂದೂ ವೇದಾಂತದಲ್ಲಿ ಹೇಳಲ್ಪಡುವದು.

**ಸಂ-1, 72**

# ಮನನದ ಮಹತ್ತ್ವ

ಈ ಕಾಲದಲ್ಲಿ ಅನೇಕರು "ಮನನ"ದ ಬೆಲೆಯನ್ನು ಅರಿಯದೆ ಅದನ್ನು ಅಲ್ಲಗಳೆಯುತ್ತಿರುವರು, ಸುಮ್ಮನೆ ಆಲೋಚನೆ ಮಾಡುತ್ತಿರುವವರಿಂದ ಏನಾಗುವದು? ವ್ಯವಹಾರದಲ್ಲಿ ನುಗ್ಗಿ ಕೆಲಸಮಾಡಬೇಕು. ಪರೋಪಕಾರ ಮಾಡಬೇಕು, ದೇಶಾಭಿವೃದ್ಧಿ ಭಾಷಾಭಿವೃದ್ಧಿ ಮುಂತಾದ ಮಹಾಕಾರ್ಯಗಳಿಗೆ ಕೈಹಾಕಬೇಕು. ವಿಚಾರಮಾಡುತ್ತೇವೆಂದು ಮೂಲೆಯಲ್ಲಿ ಮುದುರಿಕೊಂಡು ಕೂರುವವರು ಹೆಚ್ಚಾದದ್ದರಿಂದಲೇ ನಮ್ಮ ದೇಶವು ಹೀನಸ್ಥಿತಿಗೆ ಬಂತು. ಆದ್ದರಿಂದ ವ್ಯವಹಾರದಲ್ಲಿ ಪ್ರವರ್ತಿಸುವರಿಗೇ ಹೆಚ್ಚು ಬೆಲೆಯೇ ಹೊರತು, ಸುಮ್ಮನೆ ವಿಚಾರ ಮಾಡುತ್ತೇವೆಂದು ಪದ್ಮಾಸನ ಹಾಕಿ ಕೂತುಕೊಳ್ಳುವರಿಗೇನೂ ಬೆಲೆಯಿಲ್ಲ. ಅಂಥವರನ್ನು ಅನುಕರಿಸಿದರೆ ನಮ್ಮ ಜನರು ಸೋಮಾರಿಗಳಾಗುವರು. ಹೀಗೆಂದು ಅನೇಕರ ಭಾವನೆ ಇರುವದು.

ಆದರೆ ಲೋಕದಲ್ಲಿ ನಿಜಸ್ಥಿತಿಯಲ್ಲಿ ನೋಡಿ. ಮಹಾಕಾರ್ಯಗಳನ್ನು ಮಾಡಿರುವರು ಯಾರು? ಯಾರು ತಾವು ಕೈಕೊಳ್ಳಬೇಕಾದ ಕಾರ್ಯದ ಸ್ವರೂಪವನ್ನೂ ಪ್ರಯೋಜನಗಳನ್ನೂ ಅದಕ್ಕೆ ಆಗಬೇಕಾದ ಸಲಕರಣೆಗಳನ್ನೂ ತಮ್ಮ ಯೋಗ್ಯತೆಯನ್ನೂ ಚೆನ್ನಾಗಿ ಯೋಚನೆಮಾಡಿ ತೂಕಹಾಕಿಕೊಂಡು ಕಾರ್ಯದಲ್ಲಿ ಪ್ರವರ್ತಿಸುವರೋ ಅವರೇ ಲೋಕದಲ್ಲಿ ಸಾಮಾನ್ಯರಿಗೆ ಅಸಾಧ್ಯವಾದ ಕಾರ್ಯಗಳನ್ನೂ ಲೀಲಾಪ್ರಾಯವಾಗಿ ಸಾಧಿಸಿರುವರು. ದೇಶಗಳನ್ನು ಕಂಡುಹಿಡಿದವರು, ಯಂತ್ರಗಳನ್ನು ನಿರ್ಮಾಣ ಮಾಡಿದವರು, ಜಗತ್ತಿನ ಭೌತಿಕತತ್ತ್ವಗಳನ್ನು ಶೋಧನೆಮಾಡಿದವರು– ಇವರೆಲ್ಲ ಮೊದಲು ಏನುಮಾಡಿದರು? ಆಯಾ ವಿಷಯವನ್ನು ಕುರಿತು ಉಳಿದವರಿಗೆ ಯಾರಿಗೂ ಆಗದಷ್ಟು ಆಲೋಚನೆ ಮಾಡಿ, ತಮ್ಮ ಆಲೋಚನೆಯನ್ನು ಕೃತಿಯಲ್ಲಿ ರೂಪುಗೊಳಿಸಿದರು. ಆದ್ದರಿಂದ ಲೋಕದಲ್ಲಿ ನಡೆಯುವ ವ್ಯವಹಾರ ದೃಷ್ಟಿಯಿಂದ ನೋಡಿದರೂ ಮನನವೇ ಮಹಾಕಾರ್ಯವಾಗಿ ಪರಿಣಾಮವನ್ನು ಪಡೆಯುವದೆನ್ನಬೇಕಾಗಿದೆ. ಯಾವ ಅವಿವೇಕಿಗಳಿಗೆ ಮನನದ ಶಕ್ತಿಯೇ ಗೊತ್ತಿಲ್ಲವೋ ಅಂಥವರು ಚಟಾಕಿಗಳನ್ನು ಹತ್ತಿಸುವರಲ್ಲಿ ದುಡ್ಡು ವೆಚ್ಚಮಾಡಿ ಸಂತೋಷಪಡುವ ಚಿಕ್ಕಮಕ್ಕಳಂತೆ ತಮಗೆ ಇದ್ದ ಅಲ್ಪ ಸ್ವಲ್ಪ ಶರೀರೇಂದ್ರಿಯಗಳ ಶಕ್ತಿಯನ್ನು ಸಿಕ್ಕಸಿಕ್ಕ ಸಣ್ಣಪುಟ್ಟ ಕೆಲಸಗಳಿಗೆ ವಿನಿಯೋಗಿಸಿ, ಭೀಮಾರ್ಜುನರಂಥ ವೀರಾಗ್ರೇಸರಿಗೂ ಅಸಾಧ್ಯವಾದ ಕೆಲಸಗಳನ್ನು ಮಾಡಿದೆವೆಂದು ಹಿಗ್ಗುತ್ತ, ತಮ್ಮ ಜಯಭೇರಿಗಳನ್ನು ಹೊಡೆಸಿಕೊಳ್ಳುವರು. ಆದರೆ ಯಾರು ಮನಸ್ಸಿನಲ್ಲಿರುವ ಹೆಚ್ಚಿನ ಶಕ್ತಿಯನ್ನು ಅರಿತಿರುವರೋ, ಅವರು ತಮ್ಮ ಆಲೋಚನಾಬಲದಿಂದ ಎಲ್ಲಾ ಶಕ್ತಿವಿಶೇಷಗಳನ್ನೂ ಬಲಪಡಿಸಿ ಒಂದುಗೂಡಿಸಿ, ಬೇಕಾದರೆ ಹಿಮಾಚಲವನ್ನೇ ಕಿತ್ತು ರಾಮೇಶ್ವರಕ್ಕಿಳಿಸುವಷ್ಟು ಅದ್ಭುತವಾದ ಕಾರ್ಯವನ್ನಾದರೂ ನೆರವೇರಿಸಿಬಿಡುವರು.

ವ್ಯವಹಾರವೇ ಮನುಷ್ಯಜನ್ಮದ ಪರಮೋದ್ದೇಶವೆಂದು ಇಟ್ಟುಕೊಂಡು ಈ ಮಾತು ಹೇಳಿದ್ದಾಗಿದೆ. ನಿಜವಾಗಿ ಮನುಷ್ಯನು ಹುಟ್ಟಿದಂದಿನಿಂದ ಸಾಯುವವರೆಗೂ ಜಟಕಾ ಕುದುರೆಗಳಂತೆ ದುಡಿಯುವದಕ್ಕೇ ಹುಟ್ಟಿಲ್ಲ. ಅವನಿಗೆ ಇನ್ನೂ ಹೆಚ್ಚಿನ ಪುರುಷಾರ್ಥ ವುಂಟು. ಗರಡಿಯ ಮನೆಯಲ್ಲಿ ದಂಡೇ ಒತ್ತುವದೇ ಮುಂತಾದ ಸಾಧನ ಮಾಡುವದರಿಂದ ಜನರಿಗೆ ಮೈಬಲ ಹೆಚ್ಚುವದು, ಆರೋಗ್ಯವು ನಿರ್ವಿಘ್ನವಾಗಿರುವದು, ಮನಸ್ಸಿನಲ್ಲಿ ಹರ್ಷವೂ ಇರುವದು. ಆದರೆ ಆ ಗರಡಿಯ ಸಾಧನೆಯೇ ಅವರಿಗೆ ಉದ್ದೇಶವೋ? ಅಲ್ಲ. ಅವರು ಸಾವಿರಾರು ಜನರು ನೋಡುತ್ತಿರುವಾಗ ಕುಸ್ತಿ ಹೊಡೆದು ಲೋಕಪ್ರಸಿದ್ಧರಾದ "ವಸ್ತಾದಿಗಳನ್ನು ಜಯಿಸಿ ಕೀರ್ತಿಯನ್ನು ಹೊಂದಬೇಕೆಂದು ತವಕಿಸುತ್ತಿರುವರು. ಇವರ ಕೈಚಳಕವನ್ನೂ ಎದುರಾಳಿಯನ್ನು ಕೆಡಹುವದಕ್ಕೆ ಮಾಡುವ ಹಂಚಿಕೆಗಳನ್ನೂ ಹಿಡಿಯುವ ಪಟ್ಟುಗಳನ್ನೂ ನೋಡಿ ಪ್ರೇಕ್ಷಕರು ಮೆಚ್ಚಿ ಕೊಡುವ "ಥೋಡಾ" ಮುಂತಾದ ಬಹುಮಾನದಲ್ಲಿಯೇ ಅವರಿಗೆ ದೃಷ್ಟಿಯಿರುವದು. ಇದರಂತೆ ಈ ಪ್ರಪಂಚ ವ್ಯವಹಾರವೆಂಬುದೂ ನಮಗೊಂದು ಗರಡಿಯಮನೆಯಿದ್ದಂತೆ. ಇಲ್ಲಿ ನಾವು ಮಾಡುವ ಮಹಾಕಾರ್ಯಗಳೂ ಪರೋಪಕಾರಗಳೂ ಎಲ್ಲಾ ಗರಡಿಯ ಸಾಧನವೇ ಹೊರತು ಪರುಷಾರ್ಥವಲ್ಲ. ಪರಮಪುರುಷಾರ್ಥವೆಂಬುದು ಅಧ್ಯಾತ್ಮ ವಿದ್ಯೆಯಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯುವದೇ ಹೊರತು ಮತ್ತೆ ಯಾವದೂ ಅಲ್ಲ. ಅಂಥ ಪರಮಪುರುಷಾರ್ಥರೂಪವಾದ ಫಲಕ್ಕಂತೂ ಮನನವು ಬಹುಮುಖ್ಯಸಾಧನವು.

ಅಧ್ಯಾತ್ಮ ಮನನಮಾಡುವವರು ಕೇವಲ ಸ್ವಾರ್ಥಪರರೆಂದು ಮತ್ತೆ ಕೆಲವರು ದೋಷವನ್ನು ತೆಗೆಯುವರು. ಜನರಿಗೆ ಎಷ್ಟೋ ಜನಕ್ಕೆ ಹೊಟ್ಟೆಗಿಲ್ಲ ಬಟ್ಟೆಗಿಲ್ಲ, ವಿದ್ಯೆಯಿಲ್ಲ, ಬುದ್ಧಿಯಿಲ್ಲ, ಜನರು ದ್ವೇಷಾಸೂಯೆಗಳಿಂದ ಒಬ್ಬರೊಬ್ಬರು ಹೊಡೆದಾಡುತ್ತಿರುವರು. ಕ್ಷಾಮಡಾಮರಗಳೂ ರೋಗರುಜಿನಗಳೂ ದೇಹಗಳನ್ನು ಆವರಿಸಿಕೊಂಡಿರುವವು. ಹೀಗಿರುವಲ್ಲಿ ಎಲ್ಲರನ್ನೂ ಕೈಬಿಟ್ಟು ತನ್ನ ಮೋಕ್ಷಚಿಂತೆಯನ್ನು ಮಾಡಿಕೊಂಡರೇನಾಯಿತು? ಅದೇನು ಹೆಚ್ಚಿನ ತಪಸ್ಸು? ಲೋಕದಲ್ಲಿರುವ ದುಃಖಸಾಮಗ್ರಿಗಳನ್ನು ಕಡಿಮೆಮಾಡಿ ಸುಖಸಾಮಗ್ರಿಗಳನ್ನು ಕಡಿಮೆಮಾಡುವದೇ ನಮ್ಮಗಳ ಪ್ರಥಮೋದ್ದೇಶವಾಗಿರಬೇಕು. ಇಂಥ ಸಾಕ್ಷಾತ್ಕರ್ತವ್ಯವನ್ನು ಮರೆತು ಯಾವದೋ ಹಳೆಯ ಕಡಿತಗಳನ್ನು ಬಿಚ್ಚಿಕೊಂಡು ವಿಚಾರಮಾಡುತ್ತಾ ಕೂತುಕೊಳ್ಳುವದು ಮೂಢತನವೂ ಸ್ವಾರ್ಥಪರತೆಯೂ ಆಗುವದಿಲ್ಲವೆ? ಎಂದು ಕೆಲವರು ವಾದಿಸುತ್ತಿರುವರು.

ಆತ್ಮಮನನವೆಂದರೆ ಲೋಕವನ್ನೆಲ್ಲ ಬಿಟ್ಟು ಎಲ್ಲಿಗೋ ಓಡಿಹೋಗುವದೆಂದು ಇಂಥ ಜನರ ಭಾವನೆಯಿರುವದು. ಲೋಕದಲ್ಲಿರುವ ಪ್ರಾಣಿಗಳಲ್ಲೆಲ್ಲ ಪರಮೇಶ್ವರ ಸಾನ್ನಿಧ್ಯವಿರು ವದೆಂದು ಮನನಮಾಡುವವನು ಸ್ವಾರ್ಥಪರನು ಹೇಗಾದಾನು? ಪರೋಪಕಾರವೇ

ಮುಖ್ಯಕರ್ತವ್ಯವೆಂಬುದೂ ನಿಜವೇ, ಆದರೆ ಆ ಅಭಿಪ್ರಾಯವನ್ನು ಸರಿಯಾದ ಆಧಾರದಮೇಲಿಟ್ಟು ಬೋಧಿಸುವದಕ್ಕೆ ಹೊರಟರೆ? ಆತ್ಮಜ್ಞಾನವೇ ಅಂಥ ಆಧಾರ ವಾಗಿರುವದು. ಆ ಜ್ಞಾನಕ್ಕೆ ಮನನವೇ ಮುಖ್ಯಸಾಧನವಾಗುವದು. ಇದು ಹಾಗಿರಲಿ, ಅಧ್ಯಾತ್ಮತತ್ತ್ವವನ್ನು ಯಾರು ಮಾಡುತ್ತಾರೋ ಅವರೇ ನಿಜವಾಗಿ ಪರೋಪಕಾರಿ ಗಳೆನ್ನಬೇಕು. ಏಕೆಂದರೆ, ಲೋಕದಲ್ಲಿ ಜನರ ಸಂಕಟವನ್ನು ಬರಿಯ ಅನ್ನಪಾನಾದಿ ದಾನಗಳನ್ನು ಮಾಡಿ ಪರಿಹರಿಸುವದಕ್ಕೆ ಆಗುವದೇ ಇಲ್ಲ. ಹಸಿವಾದವನಿಗೆ ಎಷ್ಟುಸಲ ಅನ್ನಹಾಕಿದರೆ ಹಸಿವು ಬರದೇ ಇರುವದು? ಗೃಹಸ್ಥರೆಲ್ಲ ತಮ್ಮ ಮನೆಯನ್ನು ಅನ್ನಸತ್ರವನ್ನಾಗಿ ಮಾಡಿದರಾದರೂ ಜನರ ಕ್ಷುಧೆಯನ್ನು ಪರಿಹಾರಮಾಡಲಾದೀತೆ? ಊರುಊರಿಗೂ ಕೇರಿಕೇರಿಗೂ ಆಸ್ಪತ್ರೆಗಳನ್ನು ಇಟ್ಟರಾದರೂ ರೋಗಗಳು ಇಲ್ಲವಾಗು ವವೆ? ಲೋಕದಲ್ಲಿರುವ ದುಃಖಕ್ಕೆಲ್ಲ ಅಜ್ಞಾನವೇ ಕಾರಣವು, ಜ್ಞಾನವಿದ್ದವನು ಹೇಗಾದರೂ ದುಃಖವನ್ನು ಪರಿಹರಿಸಿಕೊಳ್ಳುವನು. ಆದ್ದರಿಂದ ತತ್ತ್ವವಿಚಾರದಿಂದ ಜ್ಞಾನವನ್ನು ಸಂಪಾದಿಸಿಕೊಂಡು ಜ್ಞಾನೋಪದೇಶವನ್ನು ಮಾಡುವದಕ್ಕಿಂತ ಹೆಚ್ಚಿನ ಪರೋಪಕಾರವು ಯಾವದೂ ಇಲ್ಲ. ಆದ್ದರಿಂದಲೇ ಬ್ರಹ್ಮವಿಚಾರ ಮಾಡುವರನ್ನು ಕುರಿತು ದೊಡ್ಡವರು, ಹೇಳುವದೇನೆಂದರೆ.

**ಸ್ನಾತಂ ತೇನ ಸಮಸ್ತತೀರ್ಥಸಲಿಲೇ ಸರ್ವಾಽಪಿದತ್ತಾವನಿ**
**ರ್ಯಜ್ಞಾನಾಂ ಚ ಸಹಸ್ರಮಿಷ್ಟಮಖಿಲಾ ದೇವಾಶ್ಚ ಸಂಪೂಜಿತಾಃ ॥**
**ಸಂಸಾರಾಚ್ಚ ಸಮುದ್ಧೃತಾಃ ಸ್ವಪಿತರಸ್ತ್ರೈಲೋಕ್ಯ ಪೂಜ್ಯೋಽಪ್ಯಸೌ**
**ಯಸ್ಯಬ್ರಹ್ಮವಿಚಾರಣೇ ಕ್ಷಣಮಪಿ ಸ್ಥೈರ್ಯಂ ಮನಃಪ್ರಾಪ್ನುಯಾತ್ ॥**

ಯಾವನಿಗೆ ಬ್ರಹ್ಮವಿಚಾರ ಮಾಡುವದರಲ್ಲಿ ಒಂದು ಕ್ಷಣವಾದರೂ ಮನಸ್ಸು ಸ್ಥಿರವಾಗಿ ನಿಲ್ಲುವದೋ ಆತನು ಎಲ್ಲಾ ತೀರ್ಥೋದಕದಲ್ಲಿಯೂ ಸ್ನಾನಮಾಡಿದಂತಾಯಿತು, ಸಮಸ್ತ ಭೂಮಿಯನ್ನೂ ದಾನಮಾಡಿದಂತಾಯಿತು, ಸಾವಿರಾರು ಯಜ್ಞಗಳನ್ನು ಮಾಡಿದಂತಾಯಿತು, ಎಲ್ಲಾ ದೇವತೆಗಳನ್ನೂ ಪೂಜೆಮಾಡಿದಂತಾಯಿತು, ತನ್ನ ಪಿತೃಗಳನ್ನೆಲ್ಲ ಸಂಸಾರದಿಂದ ದಾಟಿಸಿದಂತಾಯಿತು, ನಿಜವಾಗಿ ಆತನು ಮೂರು ಲೋಕಕ್ಕೂ ಪೂಜ್ಯನಾಗಿರುವನು. **ಸಂ–1, 106**

## ನಿದಿಧ್ಯಾಸನ

ಆತ್ಮಜ್ಞಾನಕ್ಕೆ ಶ್ರವಣಮನನಗಳು ಹೇಗೋ ಹಾಗೆ ನಿದಿಧ್ಯಾಸನವೂ ಅವಶ್ಯ ವಾಗಿರುವದು. ಶಾಸ್ತ್ರಾಚಾರ್ಯರ ವಾಕ್ಯವನ್ನು ಕೇಳಿ ತಿಳಿದುಕೊಳ್ಳುವ ಶಕ್ತಿ ಇರಬಹುದು. ಕೇಳಿದ ವಿಷಯದಲ್ಲಿ ಯುಕ್ತಾಯುಕ್ತವನ್ನು ವಿಚಾರಿಸುವ ಶಕ್ತಿಯೂ ಇರಬಹುದು.

ಇವೆರಡು ಶಕ್ತಿಗಳನ್ನೂ ಉಪಯೋಗಿಸಿ ತನ್ನ ಅನುಭವದಲ್ಲಿ ತತ್ತ್ವವು ಮೂಡಿಕೊಳ್ಳು ವವರೆವಿಗೂ ಅದೇ ಅರ್ಥವನ್ನು ಧಾರಾಕಾರವಾಗಿ ಹರಿಯಿಸುವ ಸ್ಥೈರ್ಯವೊಂದಿಲ್ಲದಿದ್ದರೆ ವ್ಯರ್ಥ. ಹೊಲವನ್ನು ಕೊಂಡುಕೊಂಡದ್ದಾಯಿತು; ಉತ್ತು ಬಿತ್ತು ಬಂದದ್ದೂ ಆಯಿತು; ಕಾಲಕಾಲಕ್ಕೆ ಗೊಬ್ಬರ ಗೋಡನ್ನು ನೋಡಿಕೊಳ್ಳುವದು, ಕಳೆ ಕೀಳುವದು, ಮುಂತಾದ ಎಡೆಬಿಡದೆ ಫಲಪರ್ಯವಸಾನದವರೆಗೂ ಮಾಡುವ ಕಾರ್ಯವನ್ನು ಮಾಡದಿದ್ದರೇನು ಪ್ರಯೋಜನ? ಹೀಗೆಯೇ ಅಧ್ಯಾತ್ಮ ವಿಚಾರದಲ್ಲಿಯೂ ನಿದಿಧ್ಯಾಸನವು ಫಲಪರ್ಯವಸಾನದ ವರೆಗೆ ಮಾಡುತ್ತಿರಬೇಕಾದ ಬಹುಮುಖ್ಯವಾದ ಕಾರ್ಯವಾಗಿರುತ್ತದೆ. ಆದ್ದರಿಂದಲೇ ಶಾಸ್ತ್ರವು ಹೀಗೆಂದು ಹೇಳುತ್ತಿರುವದು: "ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ । ನಾನುಧ್ಯಾಯಾದ್ಬಹೂಞ್ಛಬ್ದಾನ್ ವಾಚೋವಿಗ್ಲಾಪನಂ ಹಿ ತತ್" (ಆತ್ಮನನ್ನೇ ಜಾಣನಾದವನು ಉಪದೇಶದಿಂದಲೂ ಶಾಸ್ತ್ರದಿಂದಲೂ ತಿಳಿದುಕೊಂಡವನಾಗಿ, ಶಾಸ್ತ್ರವೂ ಆಚಾರ್ಯರೂ ಉಪದೇಶಮಾಡಿದ ವಿಷಯದಲ್ಲಿ ತನ್ನ ಜಿಜ್ಞಾಸೆಯನ್ನು ಕೊನೆಮುಟ್ಟಿಸು ವಂಥದ್ದನ್ನಾಗಿ ಮಾಡಬೇಕು. ಬಹುಶಬ್ದಗಳನ್ನು ಧ್ಯಾನಮಾಡಬಾರದು. ಏಕೆಂದರೆ ಮತ್ತೊಂದರ ಧ್ಯಾನವೆಂಬುದು ಮಾತಿಗೆ ಶ್ರಮವನ್ನು ಕೊಡತಕ್ಕದ್ದಾಗಿರುವದು.)

ಲೋಕದಲ್ಲಿ ಆಯಾಯ ವಿಷಯದ ನಿದಿಧ್ಯಾಸನವು ಅದರದರ ಜ್ಞಾನಕ್ಕೆ ಎಷ್ಟು ಸಾಧಕವಾಗಿರುವದೆಂಬುದನ್ನು ಒಂದು ಉದಾಹರಣೆಯಿಂದ ಮನಗಾಣಬಹುದು. ಸಂಗೀತದಲ್ಲಿ ಪ್ರಾವೀಣ್ಯವನ್ನು ಹೊಂದಬೇಕೆನ್ನುವಾತನು ಏನು ಮಾಡುತ್ತಾನೆ? ತನ್ನ ಗುರು ಹೇಳಿಕೊಡುವದನ್ನು ಕೇಳುವದು, ಸಂಗೀತಶಾಸ್ತ್ರದಲ್ಲಿ ಹೇಳಿರುವದನ್ನು ತಿಳಿದುಕೊಳ್ಳುವದು- ಇಷ್ಟೇ ಮಾಡುವದಿಲ್ಲ; ಹಗಲೂ ಇರುಳೂ ಸಂಗೀತಾಭ್ಯಾಸ ದಲ್ಲಿಯೇ ಮಗ್ನನಾಗಿ "ಇದು ಯಾವ ರಾಗವು? ಇದರಲ್ಲಿರುವ ಸ್ವರಸಮುದಾಯದ ಲಕ್ಷಣವೇನು? ಯಾವ ಸಂಗತಿಯಿಂದ ಇಂಥ ಕೃತಿಗೆ ಚೆನ್ನಾಗಿ ಕಳೆಕಟ್ಟುವ ಸ್ಥಿತಿ ಬರುವದು?" ಎಂದು ಅದೊಂದೇ ಯೋಚನೆಯಲ್ಲಿಯೇ ಮನಸ್ಸನ್ನು ಮುಳುಗಿಸಿ ಬಿಟ್ಟಿರುವನು. ಸಂಗೀತವಲ್ಲದ್ದು ಯಾವದೂ ಅವನಿಗೆ ರುಚಿಸುವದಿಲ್ಲ. ಸಂಗೀತವೆಂದ ಮಾತ್ರಕ್ಕೆ ಅವನಿಗೆ ಸಾವಿರ ಕಿವಿಯಾಗುವದು. ಇಂಥ ದೂರನಗರದಲ್ಲಿ ಒಬ್ಬ ಮಹಾಕುಶಲತೆಯುಳ್ಳ ಸಂಗೀತವಿದ್ವಾಂಸನಿರುವನೆಂದರೆ ಅವನ ದರ್ಶನತೆಗೆದುಕೊಂಡು ಅವನಿಂದ ವಿದ್ಯೆಯನ್ನು ಸಂಪಾದಿಸುವದಕ್ಕೆ ಏನು ಏನು ಕಷ್ಟವನ್ನಾದರೂ ಸಹಿಸುವದಕ್ಕೆ ಸಿದ್ಧವಾಗಿರುತ್ತಾನೆ. ಅವನಿಗೆ ಇಹಪರವೆಲ್ಲ ಸಂಗೀತವೇ ಆಗಿರುವದು. ಹೀಗೆ ಅವನು ಸಂಗೀತವನ್ನೇ ಕೇಳಿ, ಸಂಗೀತವನ್ನೇ ಅಭ್ಯಾಸಮಾಡಿ, ಸಂಗೀತದ ಯೋಚನೆಯಲ್ಲಿಯೇ ಕಾಲಕಳೆಯುತ್ತಾ ಕೊನೆಗೆ ಸ್ವರ ದೇವತೆಗಳ ಅಭಿಮಾನಕ್ಕೆ ಪಾತ್ರನಾಗಿ ಲೋಕವನ್ನೇ ಪರಮಾನಂದದಲ್ಲಿ ನಿಮಗ್ನನನ್ನಾಗಿ ಮಾಡುವಂಥ ಸಂಗೀತದ ಮರ್ಮವನ್ನು

ಕೈವಶಮಾಡಿಕೊಂಡುಬಿಡುತ್ತಾನೆ. ಆತ್ಮ ವಿಚಾರದಲ್ಲಿಯೂ ಹೀಗೆ ಏಕನಿಷ್ಠೆಯಿರಬೇಕು. ಆಗ ಮಾತ್ರ ನಿಜವಾದ ಆತ್ಮಜ್ಞಾನವು ಮೈಗೂಡುವುದು.

ನಿದಿಧ್ಯಾಸನ ಎಂಬ ಶಬ್ದದಲ್ಲಿ "ನಿ" ಎಂಬ ಉಪಸರ್ಗವಿರುವದಷ್ಟೆ. ಇದು ಬಹು ಮಹತ್ತ್ವದ್ದಾಗಿರುವದು. ನಿಶ್ಚಿತಬುದ್ಧಿಯಿಂದ ಧ್ಯಾನದ ಉಚ್ಚಕೋಟಿಯನ್ನು ಏರುವದೆಂಬರ್ಥವನ್ನು ಇದು ತೋರಿಸುವದು. ಈ ಅಭಿಪ್ರಾಯವನ್ನು ಚೆನ್ನಾಗಿ ತಿಳಿಯುವದಕ್ಕೆ ಇನ್ನೂ ಒಂದೆರಡು ದೃಷ್ಟಾಂತಗಳನ್ನು ತೆಗೆದುಕೊಳ್ಳಬೇಕು. ಅತ್ಯಂತ ಸುಂದರವಾದ ಚಿತ್ರವನ್ನು ಬರೆಯುತ್ತಿರುವಾಗ, ಯಾವದಾದರೊಂದು ಕಷ್ಟತರವಾದ ಗಣಿತದ ಉದಾಹರಣೆಯನ್ನು ಬಿಡಿಸುತ್ತಿರುವಾಗ, ಅಥವಾ ರಾಜಕಾರ್ಯದಂಥ ಬಹುಮಹತ್ತ್ವದ ಯಾವದಾದರೊಂದು ವಿಷಯವನ್ನು ಕುರಿತು ಸ್ವಗತಾಲೋಚನೆಯನ್ನು ಮಾಡುತ್ತಿರುವಾಗ ಒಬ್ಬ ಮನುಷ್ಯನ ಮನಃಸ್ಥಿತಿಯು ಹೇಗಿರುತ್ತದೆ? ತನ್ನ ಸಕಲವೃತ್ತಿಗಳನ್ನೂ ಒಳಸರಿಸಿ, ಏಕೀಕರಣಮಾಡಿ, ಏಕಾಗ್ರತೆಯಿಂದ ತನ್ನ ಧ್ಯೇಯದಲ್ಲಿ ಬಿಟ್ಟಿರುವನು. ಆ ಕಾಲಕ್ಕೆ ಅವನಿಗೆ ತಾನು, ದೇಹ, ಜಗತ್ತು– ಮುಂತಾದ ಪ್ರಪಂಚ ವೆಂಬುದು ಇರುವದೇ ಗೊತ್ತಿರುವದಿಲ್ಲ. ತನ್ನ ಮುಖ್ಯವಾದ ಧ್ಯೇಯವಾಯಿತು, ತಾನಾಯಿತು– ಹೀಗೆ ತಾದಾತ್ಮ್ಯವನ್ನು ಪಡೆದಿರುತ್ತಾನೆ. ಅಂಥ ಸ್ಥಿತಿಯಲ್ಲಿ ಮಾಡಿದ ಕಾರ್ಯವೂ ಉತ್ತಮತರದ್ದಾಗಿರುವದು. ಹೀಗಾಗುವದಕ್ಕೆ ಬದಲಾಗಿ ಅವನಿನ್ನೂ ತನ್ನ ಮನಸ್ಸನ್ನು ಒಮ್ಮುಖವಾಗಿ ಮಾಡುವಷ್ಟರಲ್ಲಿ ಮತ್ತೆ ಯಾವದಾದರೂ ಆಶ್ಚರ್ಯಭಯಾದಿ ಗಳನ್ನುಂಟುಮಾಡುವ ವಸ್ತುವಿನ ಅರಿವು ಅವನ ಲಕ್ಷ್ಯಕ್ಕೆ ಬಿದ್ದರೆ, ಅವನ ಕೆಲಸವೇ ಹಾಳಾಗುವದು. ಮಕ್ಕಳು ತಮ್ಮ ಆಟದಲ್ಲಿ ಮನಸ್ಸಿಟ್ಟಿರುವವರೆವಿಗೂ ಹೊರಗೆ ತಮ್ಮನ್ನು ಮತ್ತೊಬ್ಬರು ನೋಡುತ್ತಿರುವರೆಂದಾಗಲಿ, ತಾವು ಆಡುತ್ತಿರುವ ಆಟವು ಮೇಲೋ ಕೀಳೋ ಎಂದಾಗಲಿ ಯೋಚಿಸದೆ ಆಟದ ಸವಿಯನ್ನು ಅನುಭವಿಸುತ್ತಿರುವರು; ಆದರೆ ಅತ್ತಿತ್ತ ಅವರು ನೋಡಿ ಅವರ ಕಣ್ಣಿಗೆ ತಮ್ಮ ಗುರುಹಿರಿಯರು ಬಿದ್ದರೆ, ಕೂಡಲೆ ಪ್ರಪಂಚಜ್ಞಾನವೆಲ್ಲ ಹೊಸದಾಗಿ ಸೃಷ್ಟಿಯಾದಂತೆ ಆಗಿ, ಆಟದ ಆನಂದವು ಮಾಯ ವಾಗುವುದು. ಸಂಗೀತಗಾರನು ಸಭೆಯಲ್ಲಿ ತನಗಿಂತ ಉತ್ತಮರಾದ ವಿದ್ವಾಂಸರಿದಾರೆಂದು ಮನಸ್ಸಿಗೆ ತಂದುಕೊಂಡನೋ ಇಲ್ಲವೋ ಅವನಿಗೆ ಕಂಠದಲ್ಲಿದ್ದ ರಾಗ ಸೌಷ್ಟವವು ಹೇಗೋ ಒಳಸರಿದುಕೊಳ್ಳುವದು. ಪರೀಕ್ಷಕನು ತನ್ನನ್ನು ಏನೂ ಕೇಳುವನೋ ಎಂಬ ಯೋಚನೆಯನ್ನು ತಂದುಕೊಳ್ಳುತ್ತಲೂ ಪರೀಕ್ಷ್ಯನಿಗೆ ಗೊತ್ತಿದ್ದ ಎಷ್ಟೋ ವಿಷಯಗಳು ತೋರದೇ ಹೋಗುವವು. ಈ ರೀತಿಯಲ್ಲಿ ಒಂದೇ ವಿಷಯದಲ್ಲಿ ಮನಸ್ಸನ್ನು ಇಟ್ಟು ಬಾಹ್ಯವನ್ನು ಮರೆಯುವಾಗ ಅದರ ಜ್ಞಾನವು, ಆ ವಿಷಯದ ಒಳತತ್ತ್ವವು, ಮನಸ್ಸಿಗೆ ಗೋಚರವಾಗುತ್ತದೆ. ಆದರೆ ಹೊರಬುದ್ಧಿಯಿಂದ ಅದನ್ನು ಕುರಿತು ವಿಚಾರ ಮಾಡುವವರಿಗೆ ಗೊತ್ತಿದ್ದ ವಿಷಯಗಳೂ ಗಲಿಬಿಲಿಯಾಗಿ ಹೇಗೆ ಹೇಗೋ ತೋರುವವು.

ಆದ್ದರಿಂದ ಆ ತತ್ತ್ವವನ್ನು ಒಳಹೊಕ್ಕು ಅರಿಯಬೇಕೆನ್ನುವರೂ ಈ ಮರ್ಮವನ್ನರಿತು ಅವಶ್ಯವಾಗಿ ನಿದಿಧ್ಯಾಸನ ಮಾಡಬೇಕು.

ಆತ್ಮ ವಿಷಯವು ಶ್ರುತಿವಾಕ್ಯದ ಶ್ರವಣ, ಗುರುವಾಕ್ಯದಂತೆ ಮನನ, ತನ್ನಲ್ಲಿ ಅನುಭವವಾಗುವಂತೆ ನಿದಿಧ್ಯಾಸನ- ಈ ಮೂರು ಮರ್ಮಗಳಿಂದ ಪ್ರಸನ್ನವಾಗುವದು. ಮನಸಾರ ಕೇಳಬೇಕು, ಕೇಳಿದ್ದರಲ್ಲಿ ತೋರುವ ಸಂದೇಹಗಳನ್ನು ಯುಕ್ತಿಗಳಿಂದ ನಿವಾರಿಸಿಕೊಳ್ಳಬೇಕು; ಹೀಗೆ ಶ್ರವಣ ಮನನಗಳಿಂದ ಸಿದ್ಧವಾದ ವಸ್ತುವು ತನ್ನ ಅನುಭವಕ್ಕೆ ವಿರುದ್ಧವಾಗದಂತೆ ಇರಬೇಕು. ಹೀಗೆ ಶಾಸ್ತ್ರಪ್ರತಿಪತ್ತಿ, ಗುರುಪ್ರತಿಪತ್ತಿ, ಆತ್ಮಪ್ರತಿಪತ್ತಿ- ಇವು ಮೂರೂ ಹೊಂದಿದರೇ ತತ್ತ್ವಜ್ಞಾನವಾಗುವದು. ಶಾಸ್ತ್ರದಲ್ಲಿ ಆತ್ಮವಿಚಾರವನ್ನು ಹೇಗೆ ವರ್ಣಿಸಿದೆಯೆಂಬುದನ್ನೂ ಅದರರ್ಥವನ್ನು ಬೇರೆಬೇರೆ ದರ್ಶನಕಾರರು ಹೇಗೆ ಮಾಡಿರುವರೆಂಬುದನ್ನೂ ಈಚಿನ ಮತಾಚಾರ್ಯರುಗಳು ಯಾವಯಾವ ರೀತಿಯಲ್ಲಿ ಬೋಧಿಸುವರೆಂಬುದನ್ನೂ ಇನ್ನು ವಿಚಾರಮಾಡಬೇಕಾಗಿದೆ. **ಸಂ-1, 130**

# ಬ್ರಹ್ಮಜ್ಞಾನ

ಅಧ್ಯಾತ್ಮ ವಿಚಾರಕ್ಕೆಲ್ಲಾ ಮೂಲಾಧಾರವಾಗಿರುವ ಉಪನಿಷತ್ತುಗಳಲ್ಲಿ ಬ್ರಹ್ಮವಿದ್ಯೆಯಿಂದ ಪರಮಪುರುಷಾರ್ಥವುಂಟಾಗುವದೆಂದು ಬಹುಕಡೆಗಳಲ್ಲಿ ಹೇಳಿರುತ್ತದೆ. ಈ ಬ್ರಹ್ಮವಿದ್ಯೆಯು ವಿದ್ಯೆಗಳಲ್ಲೆಲ್ಲ ಶ್ರೇಷ್ಠವಾದದ್ದೆಂದೂ ಇದನ್ನು ತಿಳಿದರೆ ತಿಳಿಯದ್ದನ್ನು ತಿಳಿದಂತೆಯೇ ಕೇಳದ್ದನ್ನು ಕೇಳಿದಂತೆಯೇ ಆಗುವದೆಂದು ಬಗೆಬಗೆಯಾಗಿ ಉಪನಿಷತ್ತುಗಳು ಸಾರುತ್ತಿರುವುವು. ಉಪನಿಷತ್ತುಗಳ ಸಿದ್ಧಾಂತವನ್ನು ನಿರ್ಣಯಿಸುವದಕ್ಕಾಗಿ ಬಾದರಾಯಣರು ಬರೆದಿರುವ ಬ್ರಹ್ಮಸೂತ್ರದಲ್ಲಿ ಮೊದಲನೆಯ ಸೂತ್ರದಲ್ಲಿಯೂ, "ಅಥಾತೋ ಬ್ರಹ್ಮಜಿಜ್ಞಾಸಾ" (ಎಂದರೆ ಇನ್ನು, ಆದ್ದರಿಂದ, ಬ್ರಹ್ಮಜ್ಞಾನಕ್ಕಾಗಿ ಇಚ್ಛೆಯನ್ನು ಮಾಡಬೇಕು.) ಎಂದು ಬ್ರಹ್ಮಜ್ಞಾನವಿಷಯವಾದ ವಿಚಾರವನ್ನು ಪ್ರಸ್ತಾಪಿಸಿರುತ್ತದೆ. ಈ ಬ್ರಹ್ಮಜ್ಞಾನದ ಸ್ವರೂಪವೇನು? ಈ ಜ್ಞಾನದಿಂದ ಪರಮಪುರುಷಾರ್ಥವು ದೊರಕುವದು ಹೇಗೆ? ಎಂದು ಸ್ವಾಭಾವಿಕವಾಗಿ ಕುತೂಹಲವು ವಾಚಕರಿಗೆ ಉಂಟಾಗುತ್ತದೆಯಷ್ಟೆ. ಮೊದಲನೆಯ ಪ್ರಶ್ನೆಗೆ ವೇದಾಂತಿಗಳು ಕೊಟ್ಟಿರುವ ಉತ್ತರವನ್ನು ಈ ಕೆಳಗೆ ಸಂಕ್ಷೇಪವಾಗಿ ಬರೆದಿರುತ್ತೇವೆ.

ಈ ವಿಷಯದಲ್ಲಿ ಮುಖ್ಯವಾಗಿ ಎರಡು ಅಭಿಪ್ರಾಯಗಳುಂಟಾಗಿರುತ್ತವೆ. ಒಂದು ಪಕ್ಷದವರು ಹೇಳುವದೇನೆಂದರೆ-ಉಪನಿಷತ್ತುಗಳ ವಾಕ್ಯದ ಅರ್ಥವನ್ನು ತಿಳಿದುಕೊಂಡ ಮಾತ್ರಕ್ಕೆ ಬ್ರಹ್ಮಜ್ಞಾನವಾಗುವುದಿಲ್ಲ. ಏಕೆಂದರೆ, ಬ್ರಹ್ಮಜ್ಞಾನವನ್ನು ಉಪನಿಷತ್ತುಗಳಲ್ಲಿ ವಿಧಾನಮಾಡಿರುತ್ತದೆ. ವಾಕ್ಯಾರ್ಥಜ್ಞಾನವನ್ನು ವಿಧಿಸಬೇಕಾದ ಅವಶ್ಯಕತೆಯಿಲ್ಲ. ವಾಕ್ಯಶ್ರವಣದಿಂದ ಅದು ತಾನೇ ಹುಟ್ಟುವದು. ಆದರೆ ವಾಕ್ಯಾರ್ಥ ಜ್ಞಾನದಿಂದ

ಯಾರಿಗೂ ಸಂಸಾರನಿವೃತ್ತಿಯಾಗುವದು ಕಂಡುಬರುವದಿಲ್ಲ. ಆದ್ದರಿಂದ ವಾಕ್ಯಾರ್ಥ ಜ್ಞಾನದಿಂದ ಬೇರೆಯಾಗಿರುವ "ಉಪಾಸನೆ, ಧ್ಯಾನ" ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಜ್ಞಾನವೇ ಬ್ರಹ್ಮಜ್ಞಾನವು. ಇದನ್ನೇ ಬ್ರಹ್ಮಸೂತ್ರದಲ್ಲಿಯೂ ಸೂಚಿಸುತ್ತಾರೆ. ಇದು ಒಂದು ಪಕ್ಷದವರ ಅಭಿಪ್ರಾಯ. ಇನ್ನೊಂದು ಪಕ್ಷದವರ ಅಭಿಪ್ರಾಯವೇನೆಂದರೆ ಉಪನಿಷತ್ತಿನಲ್ಲಿ ಉಪಾಸನೆಗೆ ಜ್ಞಾನವೆಂದು ಹೆಸರು ಕೊಟ್ಟಿರುವದು ನಿಜ. ಆದರೆ ಈ ಜ್ಞಾನಕ್ಕಿಂತ ಬೇರೆಯಾದ ಜ್ಞಾನವೊಂದುಂಟು. ಆ ಜ್ಞಾನವೇ ಮೋಕ್ಷಕ್ಕೆ ಕಾರಣವಾಗಿರುವದೇ ಹೊರತು ಉಪಾಸನಾರೂಪವಾದ ಜ್ಞಾನದಿಂದ ಸಾಕ್ಷಾತ್ತಾಗಿ ಮುಕ್ತಿಯಾಗುವದಿಲ್ಲ. ಉಪಾಸನಾರೂಪವಾದ ಜ್ಞಾನವು ಬರಿಯ ವಾಕ್ಯದಿಂದ ಆದ ಮಾತ್ರಕ್ಕೆ ಕಾರ್ಯಕಾರಿಯಾಗುವದಿಲ್ಲವೆಂಬುದೂ ಸರಿಯೇ. ಆದರೆ ನಾವು ಹೇಳುವ ಜ್ಞಾನವು ವಾಕ್ಯಾರ್ಥನಿಶ್ಚಯಮಾತ್ರದಿಂದಲೇ ಆಗುವದು, ಅಷ್ಟುಮಾತ್ರದಿಂದಲೇ ಪರಮಪುರುಷಾರ್ಥವು ಕೈಸೇರುವದು. ಈ ಜ್ಞಾನಕ್ಕೂ ಉಪಾಸನೆಗೂ ಸ್ವರೂಪ ದಲ್ಲಿಯೂ ಫಲದಲ್ಲಿಯೂ ಭೇದವಿರುತ್ತದೆ. ಇದು ಜ್ಞಾನವಾದಿಗಳ ಮತ.

ಉಪಾಸನಾರೂಪವಾದ ಜ್ಞಾನವನ್ನು ಎರಡು ಪಕ್ಷದವರೂ ಒಪ್ಪಿರುವದರಿಂದ ಪ್ರಕೃತದಲ್ಲಿ ಉಪಾಸನಾವ್ಯತಿರಿಕ್ತವಾದ ಜ್ಞಾನವನ್ನು ಪ್ರತಿಪಾದಿಸುವವರ ಪಕ್ಷದಿಂದ ಒಂದೆರಡು ಮಾತುಗಳನ್ನು ಇಲ್ಲಿ ಹೇಳುತ್ತೇವೆ. ಶ್ರೀ ಶಂಕರಾಚಾರ್ಯರವರು ಛಾಂದೋಗ್ಯಭಾಷ್ಯದಲ್ಲಿ ಉಪಾಸನೆಗಳ ವಿಷಯವಾಗಿ ಹೇಳಿರುವದೇನೆಂದರೆ, "ಈ ಅದ್ವೈತ ವಿದ್ಯೆಯ ಪ್ರಕರಣದಲ್ಲಿ ಅಭ್ಯುದಯಕ್ಕೆ ಸಾಧನವಾಗಿರುವ ಉಪಾಸನೆಗಳನ್ನೂ ಹೇಳಿರುತ್ತದೆ. ಅದ್ವೈತ ಬ್ರಹ್ಮಕ್ಕಿಂತ ಸ್ವಲ್ಪ ವಿಕಾರವಾಗಿರುವ ಬ್ರಹ್ಮದ ವಿಷಯವಾಗಿರುವ ವಾಗಿಯೂ ಕೈವಲ್ಯಕ್ಕೆ ಸಮೀಪವಾಗಿರುವ ಫಲವನ್ನು ಕೊಡುವವುಗಳಾಗಿಯೂ "ಮನೋಮಯನು ಪ್ರಾಣಶರೀರನು" ಮುಂತಾಗಿ (ಚಿಂತಿಸುವ) ಉಪಾಸನೆಗಳನ್ನೂ ಹೇಳಿರುತ್ತದೆ. ಕರ್ಮಫಲದಲ್ಲಿ ಹೆಚ್ಚಿಗೆಯನ್ನುಂಟುಮಾಡುವಂತೆ ಕರ್ಮದ ಅಂಗಕ್ಕೆ ಸಂಬಂಧಪಟ್ಟ ಉಪಾಸನೆಗಳನ್ನೂ ಇಲ್ಲಿ ಹೇಳಿರುತ್ತದೆ. (ಇಲ್ಲಿ ಉಪಾಸನೆಗಳನ್ನು ಹೇಳಿರುವದಕ್ಕೆ ಕಾರಣವೇನೆಂದರೆ, ಜ್ಞಾನ, ಉಪಾಸನೆ–ಇವು) ಎರಡೂ ರಹಸ್ಯವಾಗಿವೆ (ಅಂದರೆ ಉಪನಿಷತ್ತು ಎನಿಸಿಕೊಂಡಿವೆ), ಮತ್ತು ಇವೆರಡೂ ಮನೋವೃತ್ತಿಯೇ ಆಗಿವೆ. ಅದ್ವೈತ ಜ್ಞಾನವೆಂಬುದು ಹೇಗೆ ಬರಿಯ ಮನೋವೃತ್ತಿಯೋ ಅದರಂತೆ ಮಿಕ್ಕ ಉಪಾಸನೆಗಳೂ ಮನೋವೃತ್ತಿರೂಪವಾಗಿಯೇ ಇರುತ್ತವೆ. ಇದು ಇವೆರಡಕ್ಕೂ ಇರುವ ಹೋಲಿಕೆ. (ಆದ್ದರಿಂದ ಇಲ್ಲಿ ಉಪಾಸನೆಗಳನ್ನು ಹೇಳಿರುತ್ತದೆ.) ಹಾಗಾದರೆ ಅದ್ವೈತಜ್ಞಾನಕ್ಕೂ ಉಪಾಸನೆಗಳಿಗೂ ಇರುವ ಹೆಚ್ಚು ಕಡಿಮೆಯೇನು? ಎಂದರೆ ಹೇಳುತ್ತೇವೆ. ಹಗ್ಗವೇ ಮುಂತಾದವುಗಳಲ್ಲಿ (ಇವು) ಹಾವೇ ಮುಂತಾದವುಗಳೆಂದು ಹುಟ್ಟುಕಟ್ಟಿಕೊಂಡಿರುವ ತಪ್ಪು ತಿಳಿವನ್ನು ಬೆಳಕು ಉಂಟಾಗಲು, ಇದು ಹಗ್ಗ ಮುಂತಾದ್ದೇ

ಎಂದು ನಿಶ್ಚಯಿಸುವ ಜ್ಞಾನವು ಹೇಗೆ ಕಳೆಯುತ್ತದೆಯೋ ಹಾಗೆ, ಕ್ರಿಯಾರಹಿತನಾದ ಆತ್ಮನಲ್ಲಿ ಸ್ವಭಾವವಾಗಿ (ಅಜ್ಞಾನದಿಂದ) ಆರೋಪವಾಗಿರುವ ಕರ್ತೃ ಮೊದಲಾದ ಕಾರಕ, ಕ್ರಿಯೆ, ಫಲ–ಎಂಬ ಭೇದವನ್ನು ಯಾವದು ಕಳೆಯುವದೋ ಅದು ಅದ್ವೈತಜ್ಞಾನವು. ಉಪಾಸನೆಯೋ ಎಂದು ಶಾಸ್ತ್ರದಲ್ಲಿ ಹೇಳಿರುವಂತೆ ಯಾವದಾದರೂ ಒಂದು ವಿಷಯವನ್ನು ತೆಗೆದುಕೊಂಡು ಅದರಲ್ಲಿ ಒಂದೇ ಬಗೆಯಾದ ಚಿತ್ತವೃತ್ತಿಯನ್ನು ನಡುವೆ ಬರಗೊಡದೇ ಇರುವದು. ಇದೇ ಉಪಾಸನೆಗಳಿಗೂ ಜ್ಞಾನಕ್ಕೂ ಇರುವ ವಿಶೇಷವು. ಈ ಉಪಾಸನೆಗಳು ಚಿತ್ತಶುದ್ಧಿಯನ್ನು ಉಂಟುಮಾಡಿಕೊಟ್ಟು ವಸ್ತುವಿನ ತತ್ತ್ವವನ್ನು ಬೆಳಗುವವಾದಕಾರಣ ಅದ್ವೈತಜ್ಞಾನಕ್ಕೆ ಉಪಕಾರವಾಗುವವು. ಇದಲ್ಲದೆ ನಡೆಸುವದೂ ಸುಲಭವಾಗಿರುವದು. ಆದ್ದರಿಂದ ಇವುಗಳನ್ನು ಯಾವದಾದರೊಂದು ಆಲಂಬನವನ್ನು ಇಟ್ಟುಕೊಂಡಿರುವದರಿಂದ ಇವುಗಳನ್ನು ನಡೆಸುವದೂ ಸುಲಭವಾಗಿರುವದು. ಆದ್ದರಿಂದ ಇವುಗಳನ್ನು ಇಲ್ಲಿ ಮೊದಲು ಹೇಳಿರುತ್ತದೆ. ಇದುವರೆಗೆ ಕರ್ಮದ ಅಭ್ಯಾಸವು ದೃಢವಾಗಿ ಬಿಟ್ಟಿರುವದರಿಂದ ಕರ್ಮಗಳನ್ನು ಬಿಟ್ಟುಬಿಟ್ಟೇಮಾಡುವ ಉಪಾಸನೆಗಳಲ್ಲಿ ಮನಸ್ಸು ಹಾಕುವದು ಕಷ್ಟವಾಗುವದೆಂದು ಕರ್ಮಾಂಗ ವಿಷಯವಾದ ಉಪಾಸನೆಯನ್ನೇ ಮೊದಲು ಹೇಳಿರುತ್ತದೆ."

ಈ ಮೇಲಿನ ಭಾಷ್ಯದಿಂದ ನಮಗೆ ಇಷ್ಟು ಗೊತ್ತಾಗುವದು. ಕರ್ಮವು ಸ್ಥೂಲ ಸಾಧನವು, ಜ್ಞಾನವು ತೀರ ಸೂಕ್ಷ್ಮವಾದ ಸಾಧನವು. ಇವೆರಡಕ್ಕೂ ನಡುವೆ ಉಪಾಸನೆಯೆಂಬ ನಡುತರದ ಸಾಧನವಿರುವದು. ಉಪಾಸನೆಯು ಜ್ಞಾನವನ್ನೇ ಬಹುಮಟ್ಟಿಗೆ ಹೋಲುವದು. ಮುಖ್ಯವಾಗಿ ಇವೆರಡಕ್ಕೂ ಎರಡು ಹೋಲಿಕೆಗಳುಂಟು. ಇವು ಎರಡಕ್ಕೂ ಉಪನಿಷತ್ತೆಂಬ ಹೆಸರಿದ್ದು ಎರಡೂ ರಹಸ್ಯವೆನಿಸಿಕೊಂಡಿರುವದು ಒಂದು ಹೋಲಿಕೆ. ಇವೆರಡೂ ಮನೋವೃತ್ತಿಗಳೇ ಎಂಬುದು ಮತ್ತೊಂದು ಹೋಲಿಕೆ. ಈ ಹೋಲಿಕೆಯಿಂದಲೇ ಅನೇಕರು ಇವುಗಳೆರಡನ್ನೂ ಬಿಡಿಸಿ ತಿಳಿದುಕೊಳ್ಳದೇ ಇರುವರು. ಇನ್ನು ಇವೆರಡಕ್ಕಿರುವ ತಾರತಮ್ಯವನ್ನು ನೋಡಿದರೆ, ಜ್ಞಾನವು ಭೇದಬುದ್ಧಿಯನ್ನು ದೂರಮಾಡುವದು. ಉಪಾಸನೆಗೆ ಈ ಸಾಮರ್ಥ್ಯವಿಲ್ಲ. ಈ ಲೋಕದಲ್ಲಿ ಸುಖವನ್ನು ಕೊಡುವದೋ ಮಾಡಿದ ಕರ್ಮವನ್ನು ವೀರ್ಯವತ್ತರ ವೆನಿಸುವದೋ ಅಥವಾ ಕ್ರಮಮುಕ್ತಿಯನ್ನು ಕೊಡುವದೋ ಉಪಾಸನೆಯ ಫಲ ವಾಗಿರುವದು. ಇವು ಚಿತ್ತಶುದ್ಧಿದ್ವಾರಾ ಜ್ಞಾನಕ್ಕೂ ಸಹಾಯವಾಗುವವು. ಆದರೆ ಭೇದವನ್ನು ಕಳೆಯುವದು ಜ್ಞಾನದಿಂದಲೇ ಆಗಬೇಕು. ಮತ್ತೊಂದು ಹೆಚ್ಚು ಕಡಿಮೆಯೇನೆಂದರೆ ಉಪಾಸನೆಯು ಶಾಸ್ತ್ರಾಧೀನವಾಗಿ ಕರ್ತೃವಿನ ಇಚ್ಛೆಗೊಳಪಟ್ಟು ಜರುಗುವದು; ಆದರೆ ಜ್ಞಾನವು ಪ್ರಮಾಣವಶದಿಂದ ಹುಟ್ಟಿ ವಸ್ತ್ವಧೀನವಾಗಿರುವದು.

ಜ್ಞಾನವು ವಸ್ತ್ವಧೀನವೆಂಬುದನ್ನು ಶಾರೀರಕಭಾಷ್ಯದಲ್ಲಿ ಹೀಗೆಂದು ವಿವರಿಸಿರುತ್ತದೆ. "ಧ್ಯಾನವೆಂದರೆ ಚಿಂತಿಸುವದು. ಇದು ಮನಸ್ಸಿನ ವೃತ್ತಿಯಾದರೂ ಪುರುಷನಾದವನು ಇದನ್ನು ಮಾಡುವದಕ್ಕಾಗಲಿ, ಬಿಡುವದಕ್ಕಾಗಲಿ, ಬೇರೆ ವಿಧವಾಗಿ ಮಾಡುವದಕ್ಕಾಗಲಿ, ಆಗುತ್ತದೆ. ಏಕೆಂದರೆ ಇದು ಪುರುಷನ ಅಧೀನವಾಗಿರುವದು. ಜ್ಞಾನವೋ ಎಂದರೆ ಪ್ರಮಾಣದಿಂದ ಹುಟ್ಟತಕ್ಕದ್ದು. ಪ್ರಮಾಣವೆಂಬುದು ಯಾವ ವಸ್ತು ಹೇಗೆ ಇರುವದೋ ಹಾಗೆಯೇ ಅದನ್ನು ವಿಷಯಮಾಡಿಕೊಳ್ಳುವದಾದ್ದರಿಂದ ಜ್ಞಾನವನ್ನು ಮಾಡುವದಕ್ಕಾಗಲಿ, ಬೇರೆ ವಿಧವಾಗಿ ಮಾಡಿಕೊಳ್ಳುವದಕ್ಕಾಗಲಿ ಆಗಲಾರದು. ಅದು ಕೇವಲ ವಸ್ತುವಿನ ಅಧೀನವಾಗಿರುವದು. ಶಾಸ್ತ್ರಕ್ಕೂ ಅಧೀನವಲ್ಲ, ಪುರುಷನಿಗೂ ಅಧೀನವಲ್ಲ. ಹೀಗೆ ಜ್ಞಾನವೂ ಮನಸ್ಸಿನ ವೃತ್ತಿಯೇ ಆದರೂ (ಉಪಾಸನೆಗೂ ಅದಕ್ಕೂ) ತುಂಬ ವೈಲಕ್ಷಣ್ಯವುಂಟು. ಉದಾಹರಣೆಗೆ "ಎಲೈ ಗೌತಮನೇ, ಪುರುಷನೇ ಅಗ್ನಿಯು" "ಎಲೈ ಗೌತಮನೇ, ಸ್ತ್ರೀಯೇ ಅಗ್ನಿಯು" ಎಂಬಲ್ಲಿ ಸ್ತ್ರೀ ಪುರುಷರು ಅಗ್ನಿಯೆಂದು ತಿಳಿಯುವದು ಮಾನಸವೃತ್ತಿಯು. ಇದು ಬರಿಯ ಶಾಸ್ತ್ರವಿಧಿಯಿಂದ ಹುಟ್ಟತಕ್ಕದ್ದಾದ್ದರಿಂದ ಇದು (ಧ್ಯಾನ) ಕ್ರಿಯೆಯೇ, ಇದು ಪುರುಷನಿಗೆ ಅಧೀನವಾಗಿಯೂ ಇರುವದು. ಆದರೆ ಪ್ರಸಿದ್ಧವಾದ ಅಗ್ನಿಯನ್ನು ಅಗ್ನಿಯೆಂದು ಅರಿಯುವುದುಂಟಲ್ಲವೆ? ಅದು ಶಾಸ್ತ್ರದ ವಿಧಿಗೂ ಅಧೀನವಲ್ಲ, ಪುರುಷನಿಗೂ ಅಧೀನವಲ್ಲ. ಮತ್ತೇನೆಂದರೆ, ಪ್ರತ್ಯಕ್ಷ ಪ್ರಮಾಣಕ್ಕೆ ವಿಷಯವಾಗಿರುವ ವಸ್ತುವಿಗೆ ಅಧೀನವಾಗಿರುವದು. ಆದ್ದರಿಂದ ಇದು ಜ್ಞಾನವೇ ಹೊರತು (ಧ್ಯಾನ) ಕ್ರಿಯೆಯಲ್ಲ. ಹೀಗೆಯೇ ಮಿಕ್ಕ ಎಲ್ಲಾ ಪ್ರಮಾಣಗಳಿಗೆ ವಿಷಯ ವಾಗಿರುವ ವಸ್ತುಗಳ ವಿಚಾರದಲ್ಲಿಯೂ ತಿಳಿಯಬೇಕು."

ಉಪಾಸನಾವಾದಿಗಳು ಉಪನಿಷತ್ತಿನಲ್ಲಿ ಜ್ಞಾನವನ್ನು ವಿಧಿಸಿರುತ್ತದೆಯೆಂತಲೂ ಆ ವಿಧಿಯಂತೆ ಉಪಾಸನೆಮಾಡುವದರಿಂದ ಮೋಕ್ಷವಾಗುವದು ಎಂದೂ ಹೇಳುತ್ತಾರೆ. ಉಪಾಸನಾವ್ಯತಿರಿಕ್ತಜ್ಞಾನವಾದಿಗಳೋ ಎಂದರೆ, "ಜ್ಞಾನವನ್ನು ಶಾಸ್ತ್ರದಲ್ಲಿ ವಿಧಿಸಿಲ್ಲ. ಉಪಾಸನೆಯನ್ನು ಮಾತ್ರ ವಿಧಿಸಿರುತ್ತದೆ. ಕೆಲವು ಕಡೆಗಳಲ್ಲಿ ಆತ್ಮಜ್ಞಾನವನ್ನೇ ವಿಧಿಸಿರುವಂತೆ ಕಾಣುವುದುಂಟು. ಆದರೆ ಜ್ಞಾನಸ್ವರೂಪವು ವಿಧಿಸುವದಕ್ಕೆ ಬರುವ ಹಾಗೆಯೇ ಇಲ್ಲವಾದ್ದರಿಂದ ಶಾಸ್ತ್ರಕ್ಕೆ ಜ್ಞಾನವಿಧಿಯಲ್ಲಿ ತಾತ್ಪರ್ಯವಿಲ್ಲವೆಂದು ತಿಳಿಯಬೇಕು. ಸ್ವಾಭಾವಿಕವಾಗಿ ವಿಷಯದ ಕಡೆಗೆ ಹೊರನುಗ್ಗುತ್ತಿರುವ ಬುದ್ಧಿಯನ್ನು ಆತ್ಮನ ಕಡೆಗೆ ಹಿಂತಿರುಗುವಂತೆ ಮಾಡುವದೇ ಆ ವಿಧಿಗಳ ಕಾರ್ಯವು" ಎಂದು ಅಭಿಪ್ರಾಯ ಪಡುವರು. ಆತ್ಮಜ್ಞಾನಕ್ಕಾಗಿ ವಿಧಿಸಿರುವ ಶ್ರವಣ ಮನನ ನಿದಿಧ್ಯಾಸನಗಳಿಗೆ ಹೀಗೆ ಆತ್ಮವನ್ನು ಬಿಟ್ಟು ಆತ್ಮನ ಕಡೆಗೆ ಮನಸ್ಸು ತಿರುಗಿಸುವದೇ ಉದ್ದೇಶ್ಯವೆಂದು ಇವರ ಮತವು.

**ಸಂ-1, 54**

# ಬ್ರಹ್ಮಾತ್ಮಜ್ಞಾನ

ಉಪನಿಷತ್ತುಗಳಿಗೆಲ್ಲಾ ಎರಡು ಮಾತುಗಳು ಮೂಲಮಂತ್ರಗಳಾಗಿರುವವು: ಬ್ರಹ್ಮವೆಂಬುದೊಂದು, ಆತ್ಮವೆಂಬುದೊಂದು. ಮುಖ್ಯವಾದ ಉಪನಿಷತ್ತುಗಳನ್ನು ನೋಡುವಲ್ಲಿ ಈ ಜಗತ್ತಿನ ಮೂಲತತ್ತ್ವಕ್ಕೆ ಬ್ರಹ್ಮವೆಂಬ ಹೆಸರನ್ನು ಮೊದಲು ಕೊಟ್ಟಿರುವದು ಕಂಡುಬರುತ್ತದೆ; ಬರುಬರುತ್ತ "ಆತ್ಮ" ಎಂಬ ಹೆಸರು ಉಪಯುಕ್ತವಾಗಿರುತ್ತದೆ. ಅಂತೂ ಬ್ರಹ್ಮವಿದ್ಯೆ, ಆತ್ಮವಿದ್ಯೆ– ಇವುಗಳಲ್ಲಿ ಯಾವ ಭೇದವೂ ಇಲ್ಲ, ಇವೆರಡೂ ಒಂದೇ ವಿದ್ಯೆಯ ಹೆಸರು.

ಬ್ರಹ್ಮವೆಂದು ಮೊದಲು ಹೆಸರುಕೊಟ್ಟು ಆಮೇಲೆ ಆತ್ಮನೆಂದು ಕರೆಯುವದಕ್ಕೇನು ಕಾರಣವೆಂಬುದನ್ನು ಭಾಷ್ಯಕಾರರು ಅವರವರ ಮತದಂತೆ ವರ್ಣಿಸಿರುವರು. ಉದಾಹರಣೆಗೆ ಶ್ರೀಭಾಷ್ಯಕಾರರಾದ ರಾಮಾನುಜಾಚಾರ್ಯರು ಬ್ರಹ್ಮವೇ "ಸರ್ವಾನ್ತ–ರಾತ್ಮಭೂತ"ವಾದದ್ದು. ಆದ್ದರಿಂದ ಬ್ರಹ್ಮಕ್ಕೆ ಆತ್ಮವೆಂಬ ಹೆಸರು ಬಂದಿರುವದು– ಎನ್ನುತ್ತಾರೆ. "ಯಾವನು ಆತ್ಮನಲ್ಲಿದ್ದುಕೊಂಡು, ಆತ್ಮನಿಗಿಂತಲೂ ಒಳಗೆ ಇರುವನೋ, ಯಾವಾತನನ್ನು ಆತ್ಮನು ಅರಿಯನೋ, ಯಾವಾತನಿಗೆ ಆತ್ಮನೇ ಶರೀರವೋ, ಯಾವಾತನು ಆತ್ಮನ ಒಳಗಿದ್ದುಕೊಂಡು (ಆತ್ಮನನ್ನು) ಆಳುತ್ತಿರುವನೋ", "ಈ ನಾರಾಯಣನೊಬ್ಬನೇ ಎಲ್ಲಾ ಭೂತಗಳಿಗೂ ಅಂತರಾತ್ಮನು, ಪಾಪವಿಲ್ಲದವನು, ದಿವ್ಯಲೋಕದಲ್ಲಿರುವ ದೇವನು"–ಎಂಬುದೇ ಮುಂತಾದ ಶಾಸ್ತ್ರದಿಂದ ಪರಮಾತ್ಮನ ಶರೀರವು ಜೀವಾತ್ಮನು; ಆದ್ದರಿಂದ ಜೀವಾತ್ಮನನ್ನು ಹೇಳುವ "ನಾನು, ನೀನು"– ಮುಂತಾದ ಮಾತುಗಳೆಲ್ಲವಕ್ಕೂ ಪರಮಾತ್ಮನಲ್ಲಿಯೇ ತಾತ್ಪರ್ಯವು. ಹೀಗೆಂಬುದು ಈ ಭಾಷ್ಯಕಾರರ ಮತವು. ಇದರಂತೆಯೇ ಚೈತನ್ಯಮತದಲ್ಲಿ ಬ್ರಹ್ಮಜೀವರಿಗೆ ಭೇದಾಭೇದ ವಿರುವದು; ಆದ್ದರಿಂದ ಅಭೇದಪಕ್ಷವನ್ನಿಟ್ಟುಕೊಂಡು ಆತ್ಮಶಬ್ದವನ್ನು ಬ್ರಹ್ಮಕ್ಕುಪಯೋಗಿಸಬಹುದು. ಅದ್ವೈತವಾದದಲ್ಲಿಯಂತೂ ಆತ್ಮಶಬ್ದವನ್ನು ಉಪಯೋಗಿಸುವದು ನಿರಾಕ್ಷೇಪವಾಗಿರುವದೆಂಬುದು ಹಾಗಿರಲಿ, ಅದೇ ಸಯುಕ್ತಿಕವಾಗಿರುವದು. ಏಕೆಂದರೆ ಈ ಮತದಲ್ಲಿ ಬ್ರಹ್ಮವು ನಮ್ಮೆಲ್ಲರ ಆತ್ಮವೇ ಎಂಬುದೇ ಸಿದ್ಧಾಂತವು.

ಶ್ರೀಶಾರೀರಕಭಾಷ್ಯದಲ್ಲಿ ಶ್ರೀಭಗವತ್ಪಾದರವರು ಬ್ರಹ್ಮಜಿಜ್ಞಾಸೆಯ ವಿಚಾರವಾಗಿ ಮಾತನಾಡುವಾಗ ತೆಗೆದಿರುವ ವಿಚಾರವು ಇಲ್ಲಿ ತಿಳಿಸುವದಕ್ಕೆ ಯೋಗ್ಯವಾಗಿರುತ್ತದೆ. ಅಲ್ಲರಿವುದೇನೆಂದರೆ, "ಈ ಬ್ರಹ್ಮವೆಂಬುದು ಪ್ರಸಿದ್ಧವಾಗಿರುವದೋ ಅಪ್ರಸಿದ್ಧವಾಗಿರುವದೋ? ಪ್ರಸಿದ್ಧವೇ ಆಗಿದ್ದರೆ ಅದನ್ನು ಕುರಿತು ವಿಚಾರಮಾಡತಕ್ಕದ್ದೇ ಇಲ್ಲ; ಅಥವಾ ಅಪ್ರಸಿದ್ಧವೇ ಆಗಿದೆಯೆಂದರೆ ಅದನ್ನು ಕುರಿತು ವಿಚಾರಮಾಡುವದಕ್ಕೇ ಆಗುವದಿಲ್ಲವಲ್ಲ? ಎಂದರೆ ಹೇಳುತ್ತೇವೆ. ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳದ್ದಾಗಿಯೂ

ಸರ್ವಜ್ಞವಾಗಿಯೂ ಸರ್ವಶಕ್ತಿಯುಳ್ಳದ್ದಾಗಿಯೂ ಇರುವ ಬ್ರಹ್ಮವಂತೂ ಇದೆ. ಏಕೆಂದರೆ ಬ್ರಹ್ಮಶಬ್ದಕ್ಕೆ ವ್ಯುತ್ಪತ್ತಿಯನ್ನು ಮಾಡುವಲ್ಲಿ "ಬೃಹ್" ಧಾತುವಿನ ಅರ್ಥದನುಸಾರವಾಗಿ ನಿತ್ಯಶುದ್ಧವಾಗಿರೋಣ ಮುಂತಾದ ಅರ್ಥಗಳು ತೋರುವವು. ಎಲ್ಲರಿಗೂ ಆತ್ಮನಾಗಿರುವದರಿಂದಲೂ ಬ್ರಹ್ಮವಿರುವದೆಂದು ಸಿದ್ಧವಾಗುತ್ತದೆ. ಏಕೆಂದರೆ ಪ್ರತಿಯೊಬ್ಬನೂ ತಾನು ಇದ್ದೇನೆಂದು ಅರಿಯುತ್ತಾನೆಯೇ ಹೊರತು "ನಾನು ಇಲ್ಲ"– ಎಂದು ತಿಳಿಯುವದಿಲ್ಲ; ಆತ್ಮವೇ (ತಾನೇ) ಬ್ರಹ್ಮವು"

ಬ್ರಹ್ಮವು ನಮ್ಮಗಳ ಸ್ವರೂಪವೇ ಆಗಿದ್ದರೆ ಇದನ್ನು ತಿಳಿಸುವದಕ್ಕೆ ಶಾಸ್ತ್ರವೇತಕ್ಕೆ? ಇದನ್ನು ತಿಳಿಯುವದಕ್ಕಾಗಿ ವಿಚಾರವನ್ನಾದರೂ ಮಾಡಬೇಕಾದದ್ದೇನು? ಎಂದರೆ, ಈ ವಿಷಯದಲ್ಲಿ ಭಾಷ್ಯಕಾರರು ಹೀಗೆಂದು ಹೇಳಿರುತ್ತಾರೆ: "ಹಾಗಲ್ಲ, ಏಕೆಂದರೆ ಅದು ಇಂಥದ್ದೆಂಬ ವಿಷಯದಲ್ಲಿ ವಿರುದ್ಧವಾದ ಅಭಿಪ್ರಾಯಗಳುಂಟಾಗಿವೆ. ಚೈತನ್ಯದಿಂದ ಕೂಡಿರುವ ದೇಹವೇ ಆತ್ಮವೆಂದು ಸಾಮಾನ್ಯಜನರೂ ಲೋಕಾಯತಿಕರೂ ತಿಳಿದುಕೊಂಡಿರುವರು; ಕೆಲವರು ಇಂದ್ರಿಯಗಳೇ ಚೇತನರೂಪಗಳೆಂದೂ ಆತ್ಮವೆಂದೂ ಅನ್ನುವರು; ಮನಸ್ಸೇ (ಆತ್ಮವೆಂದು ಕೆಲವರು ಹೇಳುವರು; ಕ್ಷಣಿಕವಾಗಿರುವ ಬರಿಯ ವಿಜ್ಞಾನವೇ (ಆತ್ಮವೆಂದು) ಮತ್ತೆ ಕೆಲವರು ಹೇಳುತ್ತಾರೆ; ಶೂನ್ಯವೇ (ಆತ್ಮವೆಂದು) ಇನ್ನು ಕೆಲವರು; ಇನ್ನೂ ಕೆಲವರು ದೇಹವೇ ಮೊದಲಾದವುಗಳಿಗಿಂತ ಬೇರೆಯಾಗಿರುವ ಸಂಸಾರಿಯೊಬ್ಬನಿರುವನು, ಅವನು ಕರ್ತೃ (ಕೆಲಸವನ್ನು ಮಾಡುವವನೂ) ಮತ್ತು ಭೋಕ್ತೃ (ಫಲವನ್ನು ಅನುಭವಿಸುವವನೂ) ಆಗಿರುವನು ಎನ್ನುತ್ತಾರೆ; ಇವನು ಬರಿಯ ಭೋಕ್ತೃವೇ ಹೊರತು ಕರ್ತೃವಲ್ಲ– ಎಂದು ಕೆಲವರೆನ್ನುವರು; ಮತ್ತೆ ಕೆಲವರು ಇವನಿಗಿಂತ ಬೇರೆಯಾಗಿ ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಈಶ್ವರನೊಬ್ಬನಿರುವನೆನ್ನುವರು; ಆತನು ಭೋಕ್ತೃವಾಗಿರುವ (ಸಂಸಾರಿಯ) ಆತ್ಮನೇ ಆಗಿರುವನೆಂದು ಮತ್ತೂ ಕೆಲವರು ಹೇಳುವರು. ಹೀಗೆ ಬಹುಜನವಾದಿಗಳು ಯುಕ್ತಿ, ವಾಕ್ಯ, ಸರಿಯಾದ ಯುಕ್ತಿವಾಕ್ಯಗಳಂತೆ ತೋರುವ (ಸಲ್ಲದ ಯುಕ್ತಿ ವಾಕ್ಯಗಳು)– ಇವುಗಳನ್ನು ಹಿಡಿದು ವಿರುದ್ಧವಾಗಿ ಹೇಳುತ್ತಿರುವರು. ಹೀಗಿರುವಲ್ಲಿ ಯಾವದನ್ನೋ ಒಂದನ್ನು ವಿಚಾರಿಸದೆ ಇಟ್ಟುಕೊಂಡು ಬಿಟ್ಟರೆ ಅಂಥವನಿಗೆ ಉತ್ತಮಗತಿಯೂ ತಪ್ಪಿ ಅನರ್ಥವೂ ಆಗಬಹುದು. ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ಈ ಮುಖದಿಂದ ವೇದಾಂತವಾಕ್ಯಗಳ ಪೂಜ್ಯವಿಚಾರವನ್ನೂ ಇದಕ್ಕೆ ವಿರೋಧವಾಗಿರುವ ತರ್ಕವನ್ನೂ ಉಪಕರಣವಾಗಿಟ್ಟುಕೊಂಡು ಪ್ರಾರಂಭಮಾಡಲಾಗಿದೆ."

ಉಪನಿಷತ್ತುಗಳಲ್ಲಿ "ಬ್ರಹ್ಮ", "ಆತ್ಮ"–ಎಂಬ ಎರಡುಶಬ್ದಗಳನ್ನೂ ಹೀಗೆ ಒಂದೇ ಅರ್ಥದಲ್ಲಿ ಉಪಯೋಗಿಸಿರುತ್ತದೆಯಾದರೂ ಇವೆರಡಕ್ಕೂ ಪ್ರವೃತ್ತಿ ನಿಮಿತ್ತವನ್ನು

ನೋಡಿದರೆ ಅರ್ಥವ್ಯತ್ಯಾಸವುಂಟು. ಬ್ರಹ್ಮವೆಂಬುದು ಈ ಜಗತ್ತಿನ ಮೂಲತತ್ತ್ವವನ್ನು ಹೇಳುವದು. "ಈ ಭೂತಗಳೆಲ್ಲವೂ ಯಾವದರಿಂದ ಹುಟ್ಟಿರುವವೋ, ಹುಟ್ಟಿ ಯಾವದರಿಂದ ಜೀವಿಸಿರುತ್ತವೆಯೋ, ಯಾವದನ್ನು ಸೇರಿ ಲಯವಾಗುತ್ತವೆಯೋ, ಅದೇ ಬ್ರಹ್ಮವು" (ತೈ) ಆತ್ಮವೆಂದರೆ ನಮ್ಮೊಳಗಿನ ತತ್ತ್ವವು. "ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಕೀರ್ತಿತಃ॥" (ಎಂದರೆ ಬ್ರಹ್ಮವನ್ನು ಪಡೆಯತಕ್ಕವನಾದ್ದರಿಂದಲೂ ವಿಷಯವಾಸನೆಯನ್ನು ಸ್ವೀಕಾರ ಮಾಡುವದರಿಂದಲೂ ವಿಷಯಗಳನ್ನು ಭೋಗಿಸುವವನಾದ್ದರಿಂದಲೂ ವಿಚ್ಛೇದವಿಲ್ಲದೆ ಎಲ್ಲಾ ಕಡೆಯಲ್ಲಿಯೂ ಇರುವನಾದ್ದರಿಂದಲೂ ಇವನು ಆತ್ಮನೆಂದೆನಿಸುವನು.) ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣವಾಗಿರುವ ಬ್ರಹ್ಮವು, ಸರಿಯಾಗಿ ಶೋಧನೆ ಮಾಡಿ ಹುಡುಕಿದರೆ ನಮ್ಮ ಆತ್ಮವೇ ಆಗಿರುವದು-ಎಂಬುದೇ ಉಪನಿಷತ್ಸಿದ್ಧಾಂತದ ಮೂಲಸ್ತಂಭ ವಾಗಿರುವದು. ಈ ಬ್ರಹ್ಮಾತ್ಮಜ್ಞಾನಕ್ಕಾಗಿಯೇ ಜಿಜ್ಞಾಸುವಾದವನು ಶ್ರವಣ ಮನನನಿದಿ ಧ್ಯಾಸನಗಳನ್ನು ಆಚರಿಸಬೇಕಾಗಿರುವದು. **ಸಂ-1, 180**

## ದರ್ಶನಗಳು : ಸಾಂಖ್ಯದರ್ಶನ

ಅಜ್ಞಾನದಿಂದ ಸಂಸಾರದ ಅನರ್ಥವುಂಟಾಗಿರು ವದೆಂಬು ದನ್ನೂ ತತ್ತ್ವಜ್ಞಾನವು ಮೋಕ್ಷಕ್ಕೆ ಅವಶ್ಯವೆಂಬುದನ್ನೂ ಬಹುಮಟ್ಟಿಗೆ ಎಲ್ಲಾ ಅಧ್ಯಾತ್ಮ ವಾದಿಗಳೂ ಒಪ್ಪುತ್ತಾರೆ. ಆದರೆ ಈ ಜ್ಞಾನಾಜ್ಞಾನಗಳ ಸ್ವರೂಪವೇನೆಂಬ ವಿಷಯದಲ್ಲಿ ಬಹಳಮತಭೇದವಿರುತ್ತದೆ. ಜ್ಞಾನವೆಂದರೇನೆಂಬ ವಿಚಾರದಲ್ಲಿ ಎರಡು ಮುಖ್ಯ ಅಭಿಪ್ರಾಯಗಳನ್ನು ಹಿಂದೆಯೇ ತಿಳಿಸಿದ್ದೇವೆ. ವಸ್ತುಸ್ವರೂಪವನ್ನೂ ಪ್ರಮಾಣವನ್ನೂ ಅನುಸರಿಸಿ ಉಂಟಾಗುವ ಅರಿವೇ ಜ್ಞಾನವೆಂಬ ಮತವನ್ನು ಕೆಲವರೂ ಧ್ಯಾನರೂಪ ವಾದ ಮನೋವೃತ್ತಿಯೇ ಜ್ಞಾನವೆಂದು ಕೆಲವರೂ ಹೇಳುತ್ತಾರೆಂದು ಅಲ್ಲಿ ಸ್ಪಷ್ಟಪಡಿಸಲಾ ಗಿತ್ತು. ಇನ್ನು ವಸ್ತುತಂತ್ರವಾದ ಜ್ಞಾನದ ವಿಷಯಕ್ಕೂ ಅಭಿಪ್ರಾಯಗಳು ಭಿನ್ನವಾಗಿರುವ ವೆಂಬುದನ್ನು ಇಲ್ಲಿ ತಿಳಿಸುತ್ತೇವೆ.

ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ, ವೇದಾಂತ ಈ ಆರು ಆಸ್ತಿಕ ದರ್ಶನಗಳೆನಿಸಿವೆ. ಇವುಗಳಲ್ಲಿ ವೇದಾಂತವನ್ನೊಂದು ಬಿಟ್ಟರೆ ಮಿಕ್ಕವುಗಳನ್ನು ಮೋಕ್ಷಕ್ಕೆ ದಾರಿಯೆಂದು ಒಪ್ಪಿ ಅದರಂತೆ ಜನರಿಗೆ ಬೋಧೆ ಮಾಡುತ್ತಿರುವರು ಈಗಿನ ಕಾಲದಲ್ಲಿ ಯಾರೂ ಕಂಡುಬರುವದಿಲ್ಲ. ಆದರೂ ಸಾಂಖ್ಯಾದಿ ದರ್ಶನಗಳ ಎಷ್ಟೋ ವಿಷಯಗಳು ಈಗಿನ ವೇದಾಂತದಲ್ಲಿ ಬೆರೆತುಹೋಗಿವೆ. ಬಹು ಜನಕ್ಕೆ ಈ ದರ್ಶನಗಳ ಅಸಾಧಾರಣ ವಿಷಯವೇನೆಂಬುದು ತಿಳಿಯದೇ ಇರುವದರಿಂದ, ಯಾವದನ್ನು ಹೇಳಿದರೂ ವೇದಾಂತವೆಂದೇ ವ್ಯವಹರಿಸುವರು. ಆದ್ದರಿಂದ ವೇದಾಂತಕ್ಕೂ ಮಿಕ್ಕ

ದರ್ಶನಗಳಿಗೂ ಇರುವ ಮುಖ್ಯಭೇದ, ಆ ದರ್ಶನಗಳಲ್ಲಿ ಗ್ರಹಿಸಬಹುದಾದ ಅಂಶಗಳು–ಇವುಗಳನ್ನು ಜಿಜ್ಞಾಸುವಾದವನು ತಿಳಿಯುವದು ಅವಶ್ಯ. ಈ ದೃಷ್ಟಿಯಿಂದ ಈ ದರ್ಶನಗಳಲ್ಲಿ ತತ್ತ್ವಜ್ಞಾನವೆಂದರೇನೆಂಬುದನ್ನು ಸಂಗ್ರಹವಾಗಿ ಇನ್ನುಮೇಲೆ ಹೇಳುತ್ತಾ ಹೋಗುವೆವು. ಈ ಲೇಖನದಲ್ಲಿ ಸಾಂಖ್ಯ ದರ್ಶನದಂತೆ ತತ್ತ್ವಜ್ಞಾನ ಸ್ವರೂಪವನ್ನು ತಿಳಿಸುತ್ತೇವೆ.

ಸಾಂಖ್ಯ ದರ್ಶನಕಾರರು ಜಗತ್ತನ್ನೆಲ್ಲ ವ್ಯಕ್ತ, ಅವ್ಯಕ್ತ, ಜ್ಞ–ಎಂಬ ಮೂರು ಪಂಗಡವಾಗಿ ವಿಂಗಡಿಸಿರುವರು. ಈ ಮೂರು ಸ್ವರೂಪವನ್ನೂ ಬಿಡಿಸಿ ತಿಳಿದುಕೊಳ್ಳದೇ ಇರುವದೇ ಅಜ್ಞಾನವು. ಅಜ್ಞಾನಕ್ಕೆ ಈ ಮತದಲ್ಲಿ ಅವಿವೇಕವೆಂದು ಹೆಸರು. ಈ ಅವಿವೇಕದಿಂದ ನಮಗೆ ಮೂರು ವಿಧವಾದ ದುಃಖಗಳುಂಟಾಗಿರುವವೆಂದು ಸಾಂಖ್ಯರು ಹೇಳುತ್ತಾರೆ. ನಮ್ಮ ಶರೀರದಲ್ಲಿ ಆಗುತ್ತಿರುವ ಜ್ವರ, ತಲೆನೋವು ಮುಂತಾದ ರೋಗಗಳು ಮತ್ತು ಬೇಕಾದದ್ದು ಸಿಕ್ಕದೆ ಇರುವಾಗ ಮನಸ್ಸಿನಲ್ಲಿ ಉಂಟಾಗುವ ವ್ಯಥೆ–ಇವೆರಡಕ್ಕೂ **ಆಧ್ಯಾತ್ಮಿಕ** ದುಃಖವೆಂದು ಹೆಸರು. ನಮ್ಮ ಹೊರಗಡೆಯಲ್ಲಿ ಮನುಷ್ಯರು, ಪಶುಪಕ್ಷಿಗಳು, ಕ್ರಿಮಿಕೀಟಗಳು ಮುಂತಾಗಿ ಕಾಣಬರುತ್ತಿರುವವಷ್ಟೇ; ಇವುಗಳಿಂದ ಆಗುವ ದುಃಖಕ್ಕೆ **ಆಧಿಭೌತಿಕ** ದುಃಖವೆಂದು ಹೆಸರು. ಹೀಗೆ ನಮ್ಮಲ್ಲಿಯೇ ಆಗುವ ಆಧ್ಯಾತ್ಮಿಕದುಃಖ, ನಮ್ಮ ಹೊರಗಡೆ ಇರುವ ಪ್ರಾಣಿಗಳಿಂದ ನಮಗೆ ಆಗುವ ಆಧಿಭೌತಿಕದುಃಖ–ಈ ಎರಡಲ್ಲದೆ, ಚಳಿಗಾಳಿ, ಮಳೆಬಿಸಿಲು, ಸಿಡಿಲು ಮುಂತಾದ ಕಾರಣಗಳಿಂದ ಆಗಬಹುದಾದ ಮೂರನೆಯ ಬಗೆಯ ದುಃಖವೊಂದುಂಟು. ಇದಕ್ಕೆ **ಆಧಿದೈವಿಕವೆಂದು** ಹೆಸರು. ಈ ದುಃಖಗಳಿಗೆ ನಾವು ಉಪಯೋಗಿಸುವ ಪ್ರತೀಕಾರಗಳಿಂದ ಇವು ಅತ್ಯಂತವಾಗಿ ಹೋಗಿಬಿಡುವದಿಲ್ಲ. ಆಗ್ಗೆ ಮಟ್ಟಾಗಿದ್ದು ಮತ್ತೆ ಕಾಣಿಸಿಕೊಳ್ಳುವವು. ಉದಾಹರಣೆಗೆ, ತಲೆನೋವಿಗೆ ಅಮೃತಾಂಜನವನ್ನು ಹಚ್ಚಿದರೆ ಸದ್ಯಕ್ಕೆ ಪರಿಹಾರವಾದಂತಾಗುವದೇ ಹೊರತು ಮತ್ತೆ ತಲೆನೋವೇ ಬರದಂತೆ ಮಾಡಲಾಗುವದಿಲ್ಲ. ಶಾಸ್ತ್ರದಲ್ಲಿ ಹೇಳಿದ ಕರ್ಮಗಳಿಂದ ಪರಲೋಕವುಂಟಾಗುವದಷ್ಟೆ; ಆ ಲೋಕದಲ್ಲಿ ಆಗುತ್ತಿರುವ ಸುಖವೂ ಕ್ಷಯುವಾಗುವದಾಗಿರುವದಲ್ಲದೆ ಅಲ್ಲಿಗೆ ಹೋದರೂ ದುಃಖತ್ರಯುದಿಂದ ಬಿಡುಗಡೆಯಾಗುವದಿಲ್ಲ. ಈ ದುಃಖತ್ರಯವು ಅವಿವೇಕದಿಂದ ಉಂಟಾಗಿರುವದರಿಂದ ವಿವೇಕದಿಂದಲೇ ಹೋಗುವದು. ಈ ವಿವೇಕವೇ ವ್ಯಕ್ತ, ಅವ್ಯಕ್ತ, ಜ್ಞ–ಎಂಬ ಮೂರನ್ನು ವಿಂಗಡಿಸಿ ತಿಳಿಯುವದು. ಇದಕ್ಕೇ ಸಾಂಖ್ಯದ[illegible] ತ್ತ್ವಜ್ಞಾನವೆಂಬ ಹೆಸರು.

ಈ ವಿವೇಕವನ್ನು ಸಾಂಖ್ಯರು ವರ್ಣಿಸಿ[illegible]ದು ಹೇಗೆಂದರೆ.

**ಆ॥ ಮೂಲಪ್ರಕೃತಿರವಿಕೃತಿರ್ಮಹದಾದ್ಯಾಃ ಪ್ರಕೃತಿವಿಕೃತಯಃ ಸಪ್ತ ।**

**ಷೋಡಶಕಸ್ತು ವಿಕಾರೋ ನ ಪ್ರಕೃತಿರ್ನವಿಕೃತಿಃ ಪುರುಷಃ ॥**

ಇದರಭಿಪ್ರಾಯವೇನೆಂದರೆ ಅವ್ಯಕ್ತವೆಂದರೆ ಪ್ರಧಾನವು, ವ್ಯಕ್ತವೆಂದರೆ ಜಗತ್ತು, ಜ್ಞ ಎಂದರೆ ಇವೆರಡಕ್ಕಿಂತಲೂ ಬೇರೆಯಾಗಿರುವ ಪುರುಷನು ಇವುಗಳಲ್ಲಿ ಪುರುಷನು ಯಾವುದಕ್ಕೂ ಕಾರಣವೂ ಅಲ್ಲ ಕಾರ್ಯವೂ ಅಲ್ಲ. ಮಿಕ್ಕ ಎರಡರಲ್ಲಿಯೇ ಕಾರ್ಯ ಕಾರಣಭಾವವಿರುವದು. ಹೇಗೆಂದರೆ, ಈ ಜಗತ್ತಿಗೆಲ್ಲ ಪ್ರಧಾನವೆಂಬ ಮೂಲಕಾರಣ ವಿರುವದು. ಇದು ಅವ್ಯಕ್ತ ರೂಪವಾಗಿರುವದು. ಇದರಿಂದಲೇ ಮಿಕ್ಕದ್ದೆಲ್ಲವೂ ಆಗುತ್ತಿರುವದು. ಇದಕ್ಕೆ ಯಾವ ಕಾರಣವೂ ಇಲ್ಲ. ಆದ್ದರಿಂದ ಇದು **ಮೂಲ ಪ್ರಕೃತಿ**ಯೆನಿಸುವದು. ಅವ್ಯಕ್ತವಾಗಿ, ಎಂದರೆ ನಮ್ಮ ಇಂದ್ರಿಯಗಳಿಗೆ ಗೋಚರವಾಗದೆ ಇದ್ದುಕೊಂಡು, ಪ್ರಧಾನವು ಜಗತ್ತಿಗೆ ಕಾರಣವಾಗಿರುವದಷ್ಟೆ. ಮಣ್ಣು ಮಡಕೆಯ ಆಕಾರವನ್ನು ಕೈಕೊಂಡಂತೆ ಈ ಅವ್ಯಕ್ತವಾದ ಪ್ರಧಾನವು ರೂಪಾಂತರವನ್ನು ಹೊಂದಿ ವ್ಯಕ್ತವಾದ ಜಗತ್ತಾಗುವದು. ಆದ್ದರಿಂದ ವ್ಯಕ್ತವಾದ ಜಗತ್ತು **ವಿಕೃತಿ** ಎಂದರೆ ಕಾರ್ಯವೆನಿಸುವದು. ಪ್ರಧಾನವು ಪ್ರಕೃತಿ ಎಂದರೆ ಕಾರಣವು; ವ್ಯಕ್ತವಾದ ಜಗತ್ತು ವಿಕೃತಿಯು. ಈ ವ್ಯಕ್ತವಾದ ವಿಕೃತಿಯಾದ ಜಗತ್ತನ್ನು ಎರಡು ರಾಶಿಯಾಗಿ ವಿಂಗಡಿಸಬಹುದು. ಬುದ್ಧಿ, ಅಹಂಕಾರ, ಐದು ತನ್ಮಾತ್ರೆಗಳು-ಇವು ಏಳೂ ಒಂದು ರಾಶಿ; ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಮನಸ್ಸು ಒಂದು, ಆಕಾಶವೇ ಮೊದಲಾದ ಮಹಾಭೂತಗಳು ಐದು-ಈ ಹದಿನಾರೂ ಮತ್ತೊಂದು ರಾಶಿ. ಒಂದನೆಯ ರಾಶಿಯಲ್ಲಿರುವ ಪದಾರ್ಥಗಳು ಒಂದು ದೃಷ್ಟಿಯಿಂದ ನೋಡಿದರೆ ಕಾರಣವೂ ಮತ್ತೊಂದು ದೃಷ್ಟಿಯಿಂದ ನೋಡಿದರೆ ಕಾರ್ಯವೂ ಆಗುವವು. ಹೇಗೆಂದರೆ, ಮೂಲಪ್ರಕೃತಿಯಾದ ಪ್ರಧಾನದಿಂದ ಬುದ್ಧಿ ಹುಟ್ಟುತ್ತದೆಯಾದ್ದರಿಂದ ಬುದ್ಧಿಯು ಪ್ರಧಾನದ ಕಾರ್ಯವೆನ್ನಬೇಕಾಯಿತು. ಈ ಬುದ್ಧಿಯಿಂದಲೇ ಅಹಂಕಾರವು ಹುಟ್ಟುತ್ತದೆ; ಆದ್ದರಿಂದ ಬುದ್ಧಿಯು ಅಹಂಕಾರಕ್ಕೆ ಕಾರಣವೂ ಆಯಿತು. ಇದರಂತೆಯೇ ಅಹಂಕಾರವು ಬುದ್ಧಿಯ ಕಾರ್ಯವೂ ಪಂಚತನ್ಮಾತ್ರೆಗಳಿಗೆ ಕಾರಣವೂ ಆಗುವದು. ಶಬ್ದ, ಸ್ಪರ್ಶ, ರೂಪ, ರಸ, ಗಂಧ-ಇವುಗಳು ಮತ್ತೊಂದರ ಬೆರಕೆಯಿಲ್ಲದೆ ಒಂದೊಂದೇ ಇದ್ದರೆ **ತನ್ಮಾತ್ರೆ**ಯೆಂದು ಹೆಸರು. ಈ ತನ್ಮಾತ್ರೆಗಳು ಅಹಂಕಾರದಿಂದ ಹುಟ್ಟುತ್ತವೆ; ಆದ್ದರಿಂದ ಇವು ಅಹಂಕಾರದ ಕಾರ್ಯವಾಗಿದೆ. ಇವುಗಳಿಂದಲೇ ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ- ಎಂಬ ಭೂತಗಳೂ ಹುಟ್ಟುತ್ತವೆ; ಆದ್ದರಿಂದ ಇವು ಮಹಾಭೂತಗಳಿಗೆ ಕಾರಣವಾಗಿವೆ. ಹೀಗೆ ಬುದ್ಧಿ ಮುಂತಾದ ಏಳು ಪದಾರ್ಥಗಳು ತಮ್ಮ ತಮ್ಮ ಕಾರಣದೃಷ್ಟಿಯಿಂದ ಕಾರ್ಯವಾಗಿವೆ; ಮುಂದೆ ತಮ್ಮಿಂದ ಉಂಟಾಗುವ ಕಾರ್ಯದ ಷ್ಟಿಯಿಂದ ಕಾರಣವಾಗಿವೆ. ಆದ್ದರಿಂದ ಇವಕ್ಕೆ **ಪ್ರಕೃತಿ ವಿಕೃತಿ**ಗಳೆಂದು ಹೆಸರು. ಅಸಾಧಸು ಮೂಲಪ್ರಕೃತಿ, ವಿಕೃತಿಯಲ್ಲ. ಬುದ್ಧಿ (ಇದನ್ನು ಸಾಂಖ್ಯರು ಮಹತ್ತೆಂದೂ ಹೇಳಿದರೂ **ಈ ಮಹತ್ತು)** ಮುಂತಾದ ಏಳೂ ಪ್ರಕೃತಿವಿಕೃತಿಗಳು; ಇವು ವ್ಯಕ್ತದ

ಒಂದು ರಾಶಿಯಾಗಿವೆ. ಎರಡನೆಯ ರಾಶಿಯಾದ ಜ್ಞಾನೇಂದ್ರಿಯ ಮುಂತಾದ ಹದಿನಾರೂ ಬರಿಯ ವಿಕೃತಿ ಎಂದರೆ ಕಾರ್ಯವೇ; ಇವು ಯಾವದಕ್ಕೂ ಕಾರಣವಲ್ಲ, ಪ್ರಕೃತಿ ವಿಕೃತಿಗಳಾದ ತನ್ಮಾತ್ರೆಗಳಿಂದಾಗಿರುತ್ತವೆ. ಅಂತು ಮೂಲ ಪ್ರಕೃತಿಯಾಗಿರುವ ಅವ್ಯಕ್ತ ಮತ್ತು ಪ್ರಕೃತಿವಿಕೃತಿ ರೂಪವಾಗಿರುವ ಅಥವಾ ಕೇವಲ ವಿಕೃತಿರೂಪವಾಗಿರುವ ವ್ಯಕ್ತ–ಇವೆರಡರಲ್ಲಿ ಕಾರ್ಯಕಾರಣಭಾವವಿರುವದು. ಅವ್ಯಕ್ತಕ್ಕೂ ವ್ಯಕ್ತಕ್ಕೂ ಭಿನ್ನವಾಗಿರುವ ಪುರುಷನು ಪ್ರಕೃತಿಯೂ ಅಲ್ಲ, ವಿಕೃತಿಯೂ ಅಲ್ಲ.

ಅವ್ಯಕ್ತವಾಗಿರುವ ಪ್ರಧಾನವೇ ವ್ಯಕ್ತರೂಪವಾಗಿ ಪರಿಣಮಿಸುವದು. ಈ ಪ್ರಧಾನವು ವ್ಯಕ್ತರೂಪಾಗಿ ಪರಿಣಮಿಸಲಾಗಿ ಇದರಿಂದ ಪುರುಷನಿಗೆ ಎರಡು ಕಾರ್ಯವಾಗುತ್ತದೆ. ಶಬ್ದ, ಸ್ಪರ್ಶ ಮುಂತಾದ ವಿಷಯಗಳ ಅನುಭವವೂ ಉಂಟಾಗುತ್ತದೆ. ಪ್ರಕೃತಿ ಪುರುಷರಿಗಿರುವ ಭೇದವಿದು ಎಂಬ ಅರಿವೂ ಉಂಟಾಗುತ್ತದೆ. ವಿಷಯಾನುಭವವೇ ಭೋಗವು, ಪ್ರಕೃತಿ ಪುರುಷರನ್ನು ವಿಂಗಡಿಸಿ ತಿಳಿಯುವದೇ ಮೋಕ್ಷವು. ಪ್ರಧಾನವೆಂಬ ಅವ್ಯಕ್ತವು, ಮಹತ್ತು ಮೊದಲಾದ ಇಪ್ಪತ್ತು ಮೂರು ಬಗೆಯ ವ್ಯಕ್ತವು, ಇವುಗಳಿಗೆ ಬೇರೆಯಾಗಿರುವ ಜ್ಞ ಅಥವಾ ಪುರುಷನು–ಈ ಇಪ್ಪತ್ತೈದು ತತ್ತ್ವಗಳನ್ನು ಮತ್ತೆ ಮತ್ತೆ ವಿಚಾರಮಾಡುವದರಿಂದ ಇದು ಮೂಲಪ್ರಕೃತಿ, ಇವು ಮಹದಾದಿಗಳು, ನಾನು ಇವೆರಡಕ್ಕಿಂತಲೂ ಬೇರೆಯಾಗಿರುವೆನು", ಎಂದು ನಿಸ್ಸಂಶಯವಾಗಿ ತಪ್ಪುತಿಳಿವಿಲ್ಲದ ತತ್ತ್ವಜ್ಞಾನವುಂಟಾಗುತ್ತದೆ. ಆಗ ಪುರುಷನು ತತ್ತ್ವವನ್ನು ತಿಳಿದು ಜಗತ್ತಿನಲ್ಲಿ ಉದಾಸೀನನಾಗುತ್ತಾನೆ. ಅಂದಿನಿಂದ ಅವನಿಗೆ ಜಗತ್ತಿನಲ್ಲಿ ಭೋಗಮೋಕ್ಷಗಳಾಗಬೇಕಾದದ್ದಿರುವದಿಲ್ಲ. ಇನ್ನುಮೇಲೆ ಪ್ರಧಾನಪರಿಣಾಮದಿಂದ ಅವನಿಗಾಗಬೇಕಾದದ್ದೇನೂ ಇರುವದಿಲ್ಲ. ಉಳಿದ ಪುರುಷರಿಗಾಗಿ ಪ್ರಧಾನವು ಪರಿಣಮಿಸುತ್ತಿರುವದು.

ಈ ಜ್ಞಾನವಾಗುವವರೆಗೆ ಧರ್ಮದಿಂದ ಊರ್ಧ್ವಗತಿಯನ್ನೂ ಅಧರ್ಮದಿಂದ ಅಧೋಗತಿಯನ್ನೂ ಪಡೆಯುತ್ತಿರುತ್ತಾರೆ. ಜ್ಞಾನವಾದಮೇಲೋ ಎಂದರೆ ಕುಂಬಾರನು ಮಡಕೆ ಮಾಡುವದಕ್ಕೆ ತಿರುಗಿಸಿ ಕೈಬಿಟ್ಟ ತಿಗರಿಯು ತನ್ನಷ್ಟಕ್ಕೆ ತಾನೇ ಸ್ವಲ್ಪಕಾಲ ತಿರುಗುತ್ತಿರುವಂತೆ ಈ ಶರೀರವು ಇದ್ದುಕೊಂಡಿರುವದು. ಆ ಶರೀರವೂ ಬಿದ್ದು ಹೋದ ಮೇಲೆ ಅತ್ಯಂತವಾದ ಕೈವಲ್ಯವಾಗುತ್ತದೆ, ಎಂದರೆ ಪ್ರಕೃತಿಯೊಡನೆ ಈ ಪುರುಷನಿಗಿದ್ದ ಸಂಬಂಧವು ಪೂರ್ಣವಾಗಿ ಹೋಗಿಬಿಡುವದು.

ಸಾಂಖ್ಯರು ಜಗತ್ತಿಗೆ ಈಶ್ವರನಾಗಲಿ ಆತ್ಮನಾಗಲಿ ಕಾಲವಾಗಲಿ ಸ್ವಭಾವವಾಗಲಿ ಕಾರಣವೆಂದು ಒಪ್ಪುವದಿಲ್ಲ. ಪ್ರಧಾನವೇ ಎಲ್ಲಕ್ಕೂ ಕಾರಣವೆನ್ನುತ್ತಾರೆ. ಪುರುಷನಿಗೆ ನಿಜವಾಗಿ ಬಂಧವುಂಟೆಂಬುದನ್ನೂ ಇವರು ಒಪ್ಪುವದಿಲ್ಲ. ಆ॥ ತಸ್ಮಾನ್ನ ಬಧ್ಯತೇ ನಾಪಿ ಮುಚ್ಯತೇ ನಾಪಿ ಸಂಸರತಿ ಕಶ್ಚಿತ್ । ಸಂಸರತಿ ಬಧ್ಯತೇ ಮುಚ್ಯತೇ ಚ

ನಾನಾಶ್ರಯಾ ಪ್ರಕೃತಿಃ ॥ ಎಂದರೆ, ಯಾವ ಪುರುಷನಿಗೂ ಬಂಧವೂ ಇಲ್ಲ, ಮುಕ್ತಿಯೂ ಇಲ್ಲ, ಸಂಸಾರವೂ ಇಲ್ಲ. ದೇವಮನುಷ್ಯಾದಿ ಶರೀರಗಳನ್ನು ಧರಿಸುತ್ತಾ ಪ್ರಧಾನವೇ ಬಂಧಕ್ಕೆ ಸಿಕ್ಕುತ್ತದೆ, ಸಂಸಾರವನ್ನು ಅನುಭವಿಸುತ್ತದೆ, ಕೊನೆಗೆ ಮುಕ್ತಿಯನ್ನು ಹೊಂದುತ್ತದೆ. ಇದರ ಸಂಬಂಧದಿಂದ ಪುರುಷನಿಗೆ ಬಂಧಾದಿಗಳನ್ನು ಉಪಚಾರಕ್ಕಾಗಿ ಹೇಳುವರೆಂದು ಇವರ ಅಭಿಪ್ರಾಯವು.

ಸಾಂಖ್ಯ ಪ್ರಕ್ರಿಯೆಯನ್ನು ಭಾರತದಲ್ಲಿಯೂ ಪುರಾಣಗಳಲ್ಲಿಯೂ ಉಪಯೋಗಿಸಿ ಕೊಂಡಿರುತ್ತಾರೆ. ಸತ್ತ್ವರಜಸ್ತಮೋಗುಣಗಳ ವಿವರಣೆ, ಸ್ಥೂಲಸೂಕ್ಷ್ಮ ಶರೀರಗಳ ವರ್ಣನೆ, ಅಂತಃಕರಣದಲ್ಲಿ ಮನೋಬುದ್ಧ್ಯಹಂಕಾರಗಳೆಂಬ ಭೇದವನ್ನು ಕಲ್ಪಿಸಿ ಕೊಳ್ಳುವದು, ಆತ್ಮಾನಾತ್ಮ ವಿವೇಕ-ಇದೆಲ್ಲ ಬಹುಮಟ್ಟಿಗೆ ಸಾಂಖ್ಯ ಪ್ರಕ್ರಿಯೆಯನ್ನನುಸರಿಸಿ ವೇದಾಂತ ಗ್ರಂಥಗಳಲ್ಲಿಯೂ ಬರೆದಿರುತ್ತದೆ. ಸಾಂಖ್ಯ ಪ್ರಕ್ರಿಯೆಯು ವೇದಾಂತ ವಿಚಾರಕ್ಕೆ ತುಂಬ ಸಹಾಯಕವಾಗಿರುವದರಿಂದ ಇದನ್ನು ಚೆನ್ನಾಗಿ ತಿಳಿದುಕೊಳ್ಳುವದು ಅವಶ್ಯವಾಗಿರುವದು. ಸಂ-1, 212

## ಯೋಗದರ್ಶನ

ಇಲ್ಲಿ ಯೋಗದರ್ಶನದಂತೆ ಜ್ಞಾನಾಜ್ಞಾನಗಳ ಸ್ವರೂಪವೇನು? ಯೋಗದರ್ಶನ ದಲ್ಲಿಯೂ ಅಜ್ಞಾನವು ಸಂಸಾರಕ್ಕೆ ಕಾರಣವಾಗಿದೆ. ಹೇಗೆಂದರೆ, ದೃಶ್ಯವಾಗಿರುವ ಈ ಪ್ರಪಂಚವು ಸಾಂಖ್ಯರು ಹೇಳುವಂತೆಯೇ ಪುರುಷನಿಗೆ ಭೋಗಕ್ಕೂ ಮೋಕ್ಷಕ್ಕೂ ಕಾರಣವಾಗಿರುವದು. ಪುರುಷನು ಕೇವಲ ಜ್ಞಾನಸ್ವರೂಪನಾಗಿರುವನು, ತಾನು ಶುದ್ಧನಾಗಿರುವನಾದರೂ ಬುದ್ಧಿಯನ್ನನುಸರಿಸಿ ಭೋಗಮೋಕ್ಷಗಳನ್ನನು ಭವಿಸುತ್ತಿರು ವನು. ದೃಶ್ಯವೆಂಬುದು ಒಬ್ಬ ಪುರುಷನ ಮೋಕ್ಷವನ್ನು ಸಂಪಾದಿಸಿ ಕೊಟ್ಟಮೇಲೆ ಮತ್ತೊಬ್ಬನಿಗೋಸ್ಕರ ಕೆಲಸಮಾಡುತ್ತಿರುವದು. ಪ್ರಪಂಚವನ್ನು ನೋಡು ತ್ತಿರುವ ಪುರುಷ, ಅವನಿಂದ ನೋಡಲ್ಪಡುತ್ತಿರುವ ಪ್ರಪಂಚ-ಇವುಗಳ ಸಂಯೋಗವೇ ಸಂಸಾರಕಾರಣ ವಾಗಿರುವದು. ಸಂಯೋಗವೆಂದರೇನು? ಸೂ॥ ಸ್ವಸ್ವಾಮಿ ಶಕ್ತ್ಯೋಃ ಸ್ವರೂಪೋಪ- ಲಬ್ಧಿಹೇತುಃ ಸಂಯೋಗಃ ॥ (ನಾನು, ನನ್ನದು ಎಂಬ ಶಕ್ತಿಗಳು ಹೊರಬೀಳುವದಕ್ಕೆ ಕಾರಣವಾಗಿರುವದೇ ಸಂಯೋಗವು). "ಇದು ನನ್ನದು" ಎಂದು ಶರೀರಾದಿಗಳಲ್ಲಿ ಪುರುಷನಿಗೆ ಬಿದ್ದಿರುವ ಅಭಿಮಾನದ ಗಂಟೇ ಸಂಯೋಗವು ಈ ಸಂಯೋಗಕ್ಕೆ ಅವಿದ್ಯೆಯೇ ಕಾರಣವು.

ಅವಿದ್ಯೆಯೆಂದರೇನು? ಸಾಂಖ್ಯದರ್ಶನದಲ್ಲಿ ಪುರುಷ, ಪ್ರಕೃತಿ-ಇವುಗಳನ್ನು ಬಿಡಿಸಿ ತಿಳಿಯದಿರುವದೇ ಅವಿವೇಕವು, ಎಂದರೆ ಅಜ್ಞಾನವು. ಯೋಗದರ್ಶನದಲ್ಲಿಯೂ

ಸ್ವಲ್ಪಹೆಚ್ಚುಕಡಿಮೆಯಾಗಿ ಇದೇ ಅಭಿಪ್ರಾಯವುಂಟು. ಸೂ॥ ಅನಿತ್ಯಾಽಶುಚಿದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿರವಿದ್ಯಾ ॥ ಎಂಬುದು ಅವಿದ್ಯೆಯ ಲಕ್ಷಣ. ಇದರ ತಾತ್ಪರ್ಯವೇನೆಂದರೆ, ದೃಶ್ಯವಾದ ಪ್ರಪಂಚವು ಅನಿತ್ಯವಾಗಿರುವದು, ಆದರೂ ಇದನ್ನು ನಿತ್ಯವೆಂದು ಪುರುಷನು ತಿಳಿಯುವನು; ದೇಹಾದಿಗಳು ಕೊಳೆಯಿಂದ ಕೂಡಿರುವವು, ಆದರೂ ಇವು ಶುಚಿಯಾಗಿರುವವೆಂದು ತಿಳಿಯುವನು. ವಿಷಯಭೋಗವು ನಿಜವಾಗಿ ನೋಡಿದರೆ ದುಃಖಕರವಾಗಿಯೇ ಇರುವದು; ಆದರೂ ಇದನ್ನು ಸುಖಕರವೆಂದು ತಿಳಿಯುವನು. ತಾನಲ್ಲದೆ ಇರುವವು ದೇಹಾದಿಗಳು; ಆದರೂ ಅವುಗಳು ತಾನೇ ಎಂದು ತಿಳಿಯುವನು. ಈ ತಪ್ಪು ತಿಳಿವಳಿಕೆಯೇ ಅವಿದ್ಯೆಯು. ಅವಿವೇಕದಿಂದ ಮೂರುಬಗೆಯ ದುಃಖವಾಗುವದೆಂದು ಸಾಂಖ್ಯರು ಹೇಳುವಂತೆ, ಅವಿದ್ಯೆಯಿಂದ ಅಸ್ಮಿತೆ, ರಾಗ, ದ್ವೇಷ, ಅಭಿನಿವೇಷ–ಎಂಬ ನಾಲ್ಕು ಬಗೆಯ ಕ್ಲೇಶಗಳುಂಟಾಗುವದೆಂದು ಯೋಗಿಗಳು ಹೇಳುತ್ತಾರೆ. ಅವಿದ್ಯೆಯೂ ಕ್ಲೇಶವೇ; ಆದರೆ ಅವು ಬೀಜವಿದ್ದಂತೆ, ಮಿಕ್ಕ ಕ್ಲೇಶಗಳು ಮೊಳಕೆ, ಗಿಡ, ಹೂ, ಹಣ್ಣುಗಳಿದ್ದಂತೆ. ಅಸ್ಮಿತೆಯೆಂದರೆ ನೋಡುವ (ಪುರುಷನ) ಶಕ್ತಿ, ನೋಡಲ್ಪಡುವ (ಪ್ರಕೃತಿಯ) ಶಕ್ತಿ–ಇವುಗಳನ್ನು ಬೆರಸಿ ತಿಳಿಯುವುದು. ಇದು ಸುಖಕರವೆಂದು ತಿಳಿಯುವದೇ ರಾಗವು. ಇದು ದುಃಖಕರವೆಂದು ತಿಳಿಯುವದೇ ದ್ವೇಷವು. ಎಷ್ಟು ವಿಚಾರಮಾಡಿಕೊಂಡಿದ್ದವನಿಗೂ ಕೂಡ ತನ್ನಲ್ಲಿರುವ ಅಭಿಮಾನಕ್ಕೆ ಅಭಿನಿವೇಶವೆಂದು ಹೆಸರು. ಹೀಗೆ ಸರ್ವಸಂಸಾರಕ್ಕೂ ಕಾರಣವಾಗಿರುವ ಅವಿದ್ಯೆಯು ಹೋದರೆ ಪುರುಷನಿಗೆ ಕೈವಲ್ಯವುಂಟಾಗುವದು, ಎಂದರೆ ಪ್ರಕೃತಿಯ ಸಂಯೋಗವನ್ನು ತಪ್ಪಿಸಿಕೊಂಡು ಪುರುಷನು ತಾನೇ ತಾನಾಗಿರುವನು.

ಅಜ್ಞಾನಸ್ವರೂಪವಿಚಾರದಲ್ಲಿ ಯೋಗದರ್ಶನಕ್ಕೂ ಸಾಂಖ್ಯದರ್ಶನಕ್ಕೂ ತುಂಬ ಸಾಮ್ಯವಿರುವದೆಂದು ಮೇಲೆ ಹೇಳಿದ ಅವಿದ್ಯಾಸ್ವರೂಪದಿಂದ ಗೊತ್ತಾಯಿತಷ್ಟೆ. ಇನ್ನು ಜ್ಞಾನವಿಚಾರಕ್ಕೆ ಹೊರಟರೆ ಸಂಯೋಗವನ್ನು ಬಿಡಿಸಿಕೊಳ್ಳುವದಕ್ಕೆ ಪುರುಷಪ್ರಕೃತಿಗಳ ವಿವೇಕವನ್ನು ಮಾಡಿಕೊಳ್ಳುವದೇ ಉಪಾಯವೆಂದು ಯೋಗಿಗಳು ಹೇಳುವರು. ಆದ್ದರಿಂದ ಈ ಭಾಗದಲ್ಲಿಯೂ ಸಾಂಖ್ಯಮತವೇ ಯೋಗಮತವೆಂದು ಹೇಳಬೇಕಾಗಿದೆ. ಆದರೆ ಆ ಜ್ಞಾನವುಂಟಾಗುವ ಬಗೆ ಏನೆಂದು ಕೇಳಿದರೆ, ಸೂ॥ ಯೋಗಾಂಗಾನುಷ್ಠಾನಾದ ಶುದ್ಧಿಕ್ಷಯೇ ಜ್ಞಾನದೀಪ್ತಿರಾವಿವೇಕಖ್ಯಾತೇಃ ॥ (ಯೋಗದ ಅಂಗಗಳನ್ನು ಅಭ್ಯಾಸ ಮಾಡುವದರಿಂದ ಚಿತ್ತದ ಅಶುದ್ಧಿಯೆಲ್ಲ ನಾಶವಾಗುವದು; ಇದರಿಂದ ಜ್ಞಾನವು ಬೆಳಗಿ ಕೊನೆಗೆ ಪುರುಷಪ್ರಧಾನಗಳ ವಿವೇಕವ್ರುಂಟಾಗುವದು) ಎಂದು ಈ ದರ್ಶನದಲ್ಲಿ ಹೇಳಿರುತ್ತದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ–ಇವೇ ಯೋಗದ ಅಂಗಗಳು. ಯಮವೆಂದರೆ ಅಹಿಂಸೆ ಮೊದಲಾದ ಮನಸ್ಸಿನ ಸಾಧನಗಳು; ನಿಯಮವೆಂದರೆ ಶುಚಿಯಾಗಿರುವದೇ ಮೊದಲಾದ

ಸಾಧನಗಳು; ಸ್ಥಿರವಾಗಿ ಸುಖವಾಗಿ ಕೂತುಕೊಳ್ಳುವದೇ ಆಸನವು; ಶ್ವಾಸ ಪ್ರಶ್ವಾಸಗಳು ನಡೆಯದಂತೆ ತಡೆಯುವದೇ ಪ್ರಾಣಾಯಾಮವು; ಇಂದ್ರಿಯಗಳನ್ನು ತಮ್ಮ ವಿಷಯಗಳಿಂದ ಹಿಡಿದೆಳೆದುಕೊಳ್ಳುವದೇ ಪ್ರತ್ಯಾಹಾರವು; ಚಿತ್ತವನ್ನು ಯಾವದಾದರೊಂದು ಸ್ಥಳದಲ್ಲಿ ಕಟ್ಟಿನಿಲ್ಲಿಸುವದೇ ಧಾರಣೆಯು; ಹಾಗೆ ನಿಲ್ಲಿಸಿಕೊಂಡು ಒಂದೇ ಪ್ರತ್ಯಯವನ್ನು ನಡೆಸುವದೇ ಧ್ಯಾನವು; ಕೊನೆಗೆ ಆ ಧ್ಯಾನವು ತಾನು ಇಲ್ಲದೇ ಇದ್ದರೆ ಹೇಗೋ ಹಾಗೆ ಪರಿಣಮಿಸಿ ಧ್ಯೇಯವಾದ ವಸ್ತುವೊಂದೇ ತೋರುವಂತಾದರೆ ಅದಕ್ಕೆ ಸಮಾಧಿಯೆಂದು ಹೆಸರು.

ಹೀಗೆ ಯೋಗಾಂಗಾನುಷ್ಠಾನವನ್ನು ವಿಸ್ತಾರವಾಗಿ ಹೇಳಿರುವದನ್ನು ಬಿಟ್ಟರೆ ಯೋಗಕ್ಕೂ ಸಾಂಖ್ಯಕ್ಕೂ ಹೆಚ್ಚುಕಡಿಮೆ ಯಾವದನ್ನೂ ಹೇಳುವದಕ್ಕಿಲ್ಲ. ಬಹು ಮುಖ್ಯವಾದ ತಾರತಮ್ಯವೆಂದರೆ, ಯೋಗದಲ್ಲಿ ಈಶ್ವರನನ್ನು ಅಂಗೀಕರಿಸಿದಾರೆ, ಸಾಂಖ್ಯದಲ್ಲಿ ಅಂಗೀಕರಿಸಲಿಲ್ಲ. ಯೋಗದ ಅಂಗಗಳಲ್ಲಿ ಮುಖ್ಯವಾದ ಸಮಾಧಿಯು "ಈಶ್ವರಪ್ರಣಿಧಾನ"ದಿಂದ ಉಂಟಾಗುವದೆಂದು ಹೇಳಿರುತ್ತದೆ. "ಈಶ್ವರಭಕ್ತಿಯೂ ತಪಸ್ಸೂ ವೇದಾಧ್ಯಯನವೂ ಕ್ರಿಯಾಯೋಗವೆನಿಸುವವು; ಇವುಗಳಿಂದ ಸಮಾಧಿಯುಂಟಾಗುವದು ಮತ್ತು ಕ್ಲೇಶಗಳು ಕ್ಷಯವಾಗುವವು" ಹೀಗೆಂಬುದು ಯೋಗಿಗಳ ಅಭಿಪ್ರಾಯವು. ಸಾಂಖ್ಯಕ್ಕೆ ಮಿಕ್ಕ ಎಲ್ಲಾ ಭಾಗಗಳಲ್ಲಿಯೂ ಸಮಾನವಾಗಿರುವದರಿಂದ ಯೋಗವನ್ನು "ಸೇಶ್ವರಸಾಂಖ್ಯ" ವೆಂದೂ ಕರೆಯುವದುಂಟು.

ಸಾಂಖ್ಯವನ್ನು ಇತಿಹಾಸಪುರಾಣಗಳಲ್ಲಿ ಬಹುವಾಗಿ ಹೊಗಳಿರುವಂತೆಯೇ ಯೋಗವನ್ನೂ ಹೊಗಳಿರುತ್ತದೆ. ಸಾಂಖ್ಯಕ್ಕಿಂತ ಹೆಚ್ಚಿನ ಜ್ಞಾನವಿಲ್ಲ, ಯೋಗಕ್ಕಿಂತ ಹೆಚ್ಚಿನ ಸಾಧನವಿಲ್ಲ-ಎಂಬುದು ಅನೇಕ ಸ್ಮೃತಿಕಾರರ ವಚನವು. ಗೀತೆಯಲ್ಲಿಯೂ ಮನುಸ್ಮೃತಿಯಲ್ಲಿಯೂ ಪುರಾಣಗಳಲ್ಲಿಯೂ ಯೋಗವನ್ನು ವಿಸ್ತರಿಸಿ ಹೇಳಿರುವದು ಕಂಡುಬರುತ್ತದೆ. ಬಾದರಾಯಣರ ಸೂತ್ರಗಳಲ್ಲಿ ಯೋಗವನ್ನು ಖಂಡಿಸಿರುತ್ತದೆ ಯಾದರೂ ಸಂರಾಧನೆಯಲ್ಲಿ ಆತ್ಮನ ಸ್ವರೂಪವನ್ನು ಕಂಡುಕೊಳ್ಳಬಹುದೆಂದು ಹೇಳಿದೆ; ಸಾಂಖ್ಯ ಶಾಸ್ತ್ರದಲ್ಲಿಯೂ ಯೋಗದಿಂದಾಗುವ ಸಿದ್ಧಿಗಳನ್ನು ಒಪ್ಪಿಕೊಂಡಿರುತ್ತದೆ. ಕೆಲವರು ಈಚಿನ ವೇದಾಂತಿಗಳು ಯೋಗದಲ್ಲಿ ಹೇಳಿರುವ ಸಮಾಧಿಯೇ ವೇದಾಂತದಲ್ಲಿ ತುರೀಯಾವಸ್ಥೆಯೆನಿಸಿರುವದೆಂದು ವಾದಿಸುತ್ತಿರುವರು. ಧ್ಯಾನರೂಪವಾದ ಜ್ಞಾನವೇ ವೇದಾಂತವಿಹಿತವೆಂದು ಅಂಗೀಕರಿಸುವ ವೇದಾಂತಿಗಳಿಗೂ ಯೋಗದರ್ಶನದ ಸಹಾಯವು ಬಹಳವಾಗಿ ಬೇಕಾಗುತ್ತದೆ. ಶ್ರೀ ರಾಮಕೃಷ್ಣಪರಮಹಂಸರ ಮುಖ್ಯಶಿಷ್ಯರಾದ ವಿವೇಕಾನಂದಸ್ವಾಮಿಗಳು ಸ್ವಭಾವಜನ್ಯಜ್ಞಾನ, ವಿಶೇಷಜ್ಞಾನ, ಸಮಾಧಿಜನ್ಯವಾದ ಅತೀಂದ್ರಿಯಜ್ಞಾನ-ಎಂದು ಜ್ಞಾನಕ್ಕೆ ಮೂರು ಭೂಮಿಕೆಗಳಿರುವವೆಂತಲೂ ಮೂರನೆಯ

ಮೆಟ್ಟಲಾದ ಅತೀಂದ್ರಿಯ ಜ್ಞಾನದ ಆಧಾರದಮೇಲೆ ತತ್ತ್ವಜ್ಞಾನವು ನಿಂತಿರುವದೆಂತಲೂ ಬೋಧಿಸಿರುತ್ತಾರೆ. ಯೋಗದಿಂದ ಅತೀಂದ್ರಿಯಜ್ಞಾನವನ್ನು ಸಂಪಾದಿಸಬಹುದೆಂದು ಅನೇಕರು ಈಗಲೂ ನಂಬುತ್ತಾರೆ. ಈ ಎಲ್ಲಾ ಕಾರಣಗಳಿಂದ ಯೋಗದರ್ಶನವನ್ನು ಚೆನ್ನಾಗಿ ವಿಚಾರಮಾಡುವದು ಜಿಜ್ಞಾಸುಗಳಿಗೆ ಯುಕ್ತವಾಗಿರುತ್ತದೆ. **ಸಂ-1, 236**

## ನ್ಯಾಯದರ್ಶನ

ಜ್ಞಾನವೆಂದರೇನು, ಅಜ್ಞಾನವೆಂದರೇನು? ಈ ದರ್ಶನದಲ್ಲಿ ಅಜ್ಞಾನಕ್ಕೆ ಮಿಥ್ಯಾಜ್ಞಾನ ವೆಂದು ಹೆಸರು. ಪ್ರಮೇಯದ ವಿಷಯದಲ್ಲಿ ತಪ್ಪಾಗಿ ತಿಳಿದುಕೊಳ್ಳುವದೇ ಮಿಥ್ಯಾಜ್ಞಾನವು. ಆತ್ಮ, ಶರೀರ, ಇಂದ್ರಿಯ, ವಿಷಯ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷಗಳು, ಪ್ರೇತ್ಯಭಾವ, ಫಲ, ದುಃಖ, ಅಪವರ್ಗ-ಇವುಗಳಿಗೆ ಪ್ರಮೇಯವೆಂದು ಹೆಸರು. ಇವುಗಳನ್ನು ಸರಿಯಾಗಿ ತಿಳಿದುಕೊಳ್ಳದೆ ತಪ್ಪಾಗಿ ತಿಳಿದುಕೊಂಡರೆ ಮಿಥ್ಯಾಜ್ಞಾನವೆನಿಸುವದು. ಹೇಗೆಂದರೆ ಆತ್ಮನು ಇಲ್ಲವೆಂತಲಾಗಲಿ, ಅನಾತ್ಮವೇ ಆತ್ಮವೆಂತಾಗಲಿ, ತಿಳಿದುಕೊಳ್ಳುವದು ಆತ್ಮವಿಷಯಕವಾದ ಮಿಥ್ಯಾಜ್ಞಾನವು. ಇದರಂತೆಯೇ ದುಃಖವನ್ನು ಸುಖವೆಂದು ತಿಳಿದುಕೊಂಡು ಭಯವಿರುವೆಡೆಯಲ್ಲಿ ಭಯವಿಲ್ಲವೆಂದು ನಂಬಿ, ಸಂಸಾರದಲ್ಲಿ ಯಾವದೋ ಒಂದನ್ನು ಇದು ಬೇಕಾದದ್ದು, ಇದನ್ನು ಬಿಡತಕ್ಕದ್ದಲ್ಲ, ಅದೇ ನನ್ನನ್ನು ಕಾಪಾಡುವದು-ಎಂದು ತಿಳಿದುಕೊಂಡಿರುವದೂ ಮಿಥ್ಯಾಜ್ಞಾನವೇ. ಪ್ರವೃತ್ತಿಯೆಂದರೆ ಧರ್ಮಾಧರ್ಮಗಳು. "ಧರ್ಮವೆಲ್ಲಿದೆ ಅಧರ್ಮವೆಲ್ಲಿದೆ? ಕರ್ಮವೂ ಇಲ್ಲ, ಫಲವೂ ಇಲ್ಲ"-ಎಂದು ತಿಳಿದುಕೊಂಡರೆ ಅದೂ ಮಿಥ್ಯಾಜ್ಞಾನವೇ. ಕ್ಷಯರೋಗದಿಂದ ನರಳುವಾತನು ತನಗೆ ಯಾವ ರೋಗವೂ ಇಲ್ಲವೆಂದು ನಂಬಿರುವಂತೆ ಈ ಸಂಸಾರವು ನಿರ್ದುಷ್ಟವಾದದ್ದು ಎಂದು ನಂಬಿಕೊಂಡು ಕೂತುಕೊಳ್ಳುವದೂ ಮಿಥ್ಯಾಜ್ಞಾನವೇ. ಪ್ರೇತ್ಯಭಾವವೆಂದರೆ ಸತ್ತು ಹುಟ್ಟುವದು. "ಜೀವನೂ ಇಲ್ಲ, ಆತ್ಮನೂ ಇಲ್ಲ. ಸತ್ತುಹುಟ್ಟುವದಕ್ಕೆ ಎರಡು ಜನ್ಮಗಳಲ್ಲಿಯೂ ಇರುವನೊಬ್ಬನು ಇರಬೇಕಲ್ಲ, ಅವನೇ ಇಲ್ಲ. ಹುಟ್ಟುವದಕ್ಕೆ ಯಾವ ಕಾರಣವೂ ಇಲ್ಲ, ಜಂತುಗಳು ತಮಗೆ ತಾವೇ ಹುಟ್ಟುತ್ತವೆ. ಹೀಗೆಯೇ ಸಾವಿಗೂ ಕಾರಣವಿಲ್ಲ, ಪ್ರಾಣಿಗಳು ನಿರ್ನಿಮಿತ್ತವಾಗಿಯೇ ಸಾಯುತ್ತವೆ. ಒಂದು ಸಲ ಸತ್ತರೆ ಸರಿ, ಎಂದೆಂದಿಗೂ ಹಾಗೆಯೇ ಇದ್ದುಬಿಡುವದೇ; ಮತ್ತೆ ಹುಟ್ಟುವದೆಲ್ಲಿಂದ ಬಂತು? ಅಥವಾ ಹುಟ್ಟಿಗೂ ಕಾರಣವಿರಲಿ, ಸಾವಿಗೂ ಕಾರಣವಿರಲಿ; ಇವಕ್ಕೆ ಕರ್ಮವೇನೂ ಕಾರಣವಲ್ಲ. ಸತ್ತಮೇಲೆ ಈ ಶರೀರಾದಿಗಳು ನಾಶವಾಗಿ ಬಿಡುವದರಿಂದ ಏನು ಉಳಿಯುವದು? ಏನೂ ಇಲ್ಲ" ಎಂದು ಮುಂತಾಗಿ ತಿಳಿಯುವದು ಪ್ರೇತ್ಯಭಾವದ ವಿಷಯದಲ್ಲಿ ಮಿಥ್ಯಾಜ್ಞಾನವು. ಅಪವರ್ಗವೆಂದರೆ ಮೋಕ್ಷವು. ಅಪವರ್ಗವೆಂದರೆ ಭಯವಾಗುತ್ತದೆ. ಏಕೆಂದರೆ ಅಪವರ್ಗದಲ್ಲಿ ಎಲ್ಲಾ ಪದಾರ್ಥಗಳೂ

ಹೋಗಿಬಿಡುತ್ತವೆಯಾದ್ದರಿಂದ ನಮಗೆ ಬೇಕಾದದ್ದು ನಾಶವಾಗಿಬಿಡುವದು. ತಿಳಿದವರು ಇಂಥ ಅಪವರ್ಗವನ್ನು ಬಯಸಬಹುದೆ? ಎಂದು ಯೋಚಿಸುವದೂ ಮಿಥ್ಯಾಜ್ಞಾನವೇ.

ಸಾಂಖ್ಯಸಿದ್ಧಾಂತದಲ್ಲಿ ಅವಿವೇಕವನ್ನೂ ಯೋಗದಲ್ಲಿ ಅವಿದ್ಯೆಯನ್ನೂ ಸಂಸಾರಕಾರಣವೆಂದು ಹೇಳಿರುವಂತೆಯೇ ನ್ಯಾಯದಲ್ಲಿ ಮಿಥ್ಯಾಜ್ಞಾನವನ್ನು ಸಕಲ ಸಂಸ್ಕಾರಕ್ಕೂ ಕಾರಣವೆಂದು ವರ್ಣಿಸಿರುತ್ತದೆ. ಮಿಥ್ಯಾಜ್ಞಾನದಿಂದ ಇದು ಬೇಕೆಂಬ ರಾಗ, ಬೇಡವೆಂಬ ದ್ವೇಷ, ಏನೂ ತಿಳಿಯದೆಂಬ ಮೋಹ-ಇವುಗಳುಂಟಾಗುವವು. ರಾಗದ್ವೇಷಗಳಿಂದಲೇ ಕೆಟ್ಟಬುದ್ಧಿ, ಹೊಟ್ಟೇಕಿಚ್ಚು, ಮೋಸ, ಅತ್ಯಾಶೆ-ಮುಂತಾದ **ದೋಷಗಳುಂಟಾಗುವವು.** ದೋಷಗಳಿಂದ ಒಳ್ಳೆಯ ಅಥವಾ ಕೆಟ್ಟ ಪ್ರವೃತ್ತಿಗಳುಂಟಾಗುವವು. ಒಬ್ಬರನ್ನು ತೊಂದರೆಪಡಿಸುವದು, ಕದಿಯುವದು, ಅಗಮ್ಯಗಮನ-ಮುಂತಾದವುಗಳನ್ನು ಮಾಡುವದು; ಕಠಿನವಾಕ್ಕು, ಚಾಡಿ, ಅಸಂಬದ್ಧವಾದ ನುಡಿ-ಇವುಗಳನ್ನಾಡುವದು; ಪರರಿಗೆ ದ್ರೋಹವೆಣಿಸುವದು, ಪರರ ಒಡವೆಯನ್ನು ಬಯಸುವದು, ನಾಸ್ತಿಕ ಬುದ್ಧಿಯನ್ನು ಮಾಡುವದು-ಇವೆಲ್ಲ ಕೆಟ್ಟಪ್ರವೃತ್ತಿಯು. ಇದರಂತೆ ಒಬ್ಬರಿಗೆ ಏನನ್ನಾದರೂ ದಾನಮಾಡುವದು, ಒಬ್ಬರನ್ನು ಕಾಪಾಡುವದು, ಒಬ್ಬರನ್ನು ಸೇವಿಸುವದು; ಸತ್ಯವಾಗಿಯೂ ಹಿತವಾಗಿಯೂ ಪ್ರಿಯವಾಗಿಯೂ ಇರುವ ಮಾತನ್ನಾಡುವದು, ವೇದಾಧ್ಯಯನ ಮಾಡುವದು; ಮತ್ತು ಒಬ್ಬರಲ್ಲಿ ದಯೆಯಿಡುವದು, ಆಶೆಯಿಲ್ಲದಿರುವದು, ಶ್ರದ್ಧೆಯುಳ್ಳವನಾಗಿರುವದು-ಇದೆಲ್ಲ ಒಳ್ಳೆಯ ಪ್ರವೃತ್ತಿಯು. ಕೆಟ್ಟಪ್ರವೃತ್ತಿಯಿಂದ ಕೆಟ್ಟಜನ್ಮವೂ ಒಳ್ಳೆಯ ಪ್ರವೃತ್ತಿಯಿಂದ ಒಳ್ಳೆಯಜನ್ಮವೂ ಉಂಟಾಗುತ್ತವೆ. ಈ ಜನ್ಮದಿಂದ ದುಃಖವುಂಟಾಗುತ್ತದೆ. ಹೀಗೆ ಮಿಥ್ಯಾಜ್ಞಾನದಿಂದ ದೋಷಗಳೂ ದೋಷಗಳಿಂದ ಪ್ರವೃತ್ತಿಯೂ ಪ್ರವೃತ್ತಿಯಿಂದ ಜನ್ಮವೂ ಜನ್ಮದಿಂದ ದುಃಖವೂ ಎಡೆಬಿಡದೆ ಉಂಟಾಗುತ್ತಿರುವದೇ ಸಂಸಾರವು.

ಹೀಗೆ ಸಂಸಾರದಲ್ಲಿ ಕಷ್ಟಪಡುತ್ತಿರುವ ಜೀವನಿಗೆ ತತ್ತ್ವಜ್ಞಾನವುಂಟಾಯಿತೆಂದರೆ, ಅವನಿಗೆ ದುಃಖದಿಂದ ಬಿಡುಗಡೆಯಾಗುತ್ತದೆ; ಮಿಥ್ಯಾಜ್ಞಾನವೆಂದರೇನೆಂಬುದನ್ನು ಮೇಲೆ ವಿವರಿಸಿರುತ್ತೇವೆಯಷ್ಟೆ ಇದಕ್ಕೆ ವಿರುದ್ಧವಾಗಿರುವದೇ ತತ್ತ್ವಜ್ಞಾನವು. ಸರಿಯಾದ ಜ್ಞಾನವು ಇದ್ದದ್ದನ್ನು ಇದ್ದಂತೆಯೇ ತಿಳಿಸುವದಾದ್ದರಿಂದ ಆತ್ಮನು ಇದ್ದಾನೆ, ಅನಾತ್ಮವು ಆತ್ಮವಲ್ಲ-ಎಂದು ತಿಳಿಯುವದು ಆತ್ಮವಿಷಯಕವಾದ ತತ್ತ್ವಜ್ಞಾನವಾಗುವದು. ದುಃಖವನ್ನು ದುಃಖವೆಂತಲೂ ಈ ಸಂಸಾರದಲ್ಲಿ ಯಾವದನ್ನೂ ನಂಬಿರಕೂಡದು, ಇದು ಯಾವದೂ ನನ್ನನ್ನು ಕಾಪಾಡುವದಿಲ್ಲ, ಇದೆಲ್ಲ ಸಭಯವಾದದ್ದೇ-ಎಂತಲೂ ತಿಳಿಯುವದು ತತ್ತ್ವಜ್ಞಾನವು. ರಾಗದ್ವೇಷಾದಿಗಳು ಪ್ರವೃತ್ತಿಗೆ ಕಾರಣವೆಂತಲೂ ಪ್ರವೃತ್ತಿಯಿಂದ ಜನ್ಮವುಂಟೆಂತಲೂ ತಿಳಿಯುವದೂ ತತ್ತ್ವಜ್ಞಾನವೇ. ಸತ್ತುಹುಟ್ಟುವ ಜೀವನೊಬ್ಬನುಂಟು,

ಜನ್ಮಕ್ಕೂ ಸಾವಿಗೂ ಕಾರಣವುಂಟು, ಜನನಮರಣಗಳು ಅನಾದಿಯಾಗಿವೆ, ಅಪವರ್ಗ ವಾದರೆ ಜನ್ಮಾದಿಗಳಿರುವದಿಲ್ಲ-ಎಂದು ತಿಳಿಯುವದೂ ತತ್ತ್ವಜ್ಞಾನವೇ. ಅಪವರ್ಗವು ಶಾಂತಸ್ವರೂಪವಾಗಿದೆ, ಇದರಿಂದ ಎಲ್ಲಾ ಕಷ್ಟವೂ ಭಯವೂ ನಿವಾರಣೆಯಾಗುವದ ರಿಂದ ತಿಳಿದವರು ಅಗತ್ಯವಾಗಿ ಇದನ್ನು ಬಯಸಬೇಕು ಎಂದು ತಿಳಿಯುವದೂ ತತ್ತ್ವಜ್ಞಾನವೇ.

ಈ ತತ್ತ್ವಜ್ಞಾನವು ಏತರಿಂದ ಉಂಟಾಗುತ್ತದೆಯೆಂದರೆ, ನೈಯಾಯಿಕರು ಎರಡು ವಿಧವಾದ ಸಾಧನೆಯನ್ನು ಹೇಳುತ್ತಾರೆ. ಯಮನಿಯಮಗಳಿಂದ ಅಧರ್ಮವನ್ನೆಲ್ಲಾ ಕಳೆದುಕೊಂಡು ಧರ್ಮಾಭಿವೃದ್ಧಿಯನ್ನು ಮಾಡಿಕೊಳ್ಳುತ್ತಾ ಯೋಗಶಾಸ್ತ್ರದಲ್ಲಿ ಹೇಳಿರುವಂತೆ ಅಧ್ಯಾತ್ಮವಿಧಿಯನ್ನರಿತು ಅನುಷ್ಠಾನಮಾಡುವದೊಂದು ಸಾಧನ. ಜ್ಞಾನವನ್ನು ಸರಿಯಾಗಿ ಗ್ರಹಿಸಿಕೊಂಡು ಅದನ್ನೇ ಚಿಂತನೆಮಾಡುತ್ತಾ ಆತ್ಮವಿದ್ಯೆಯನ್ನು ಬಲ್ಲವರೊಡನೆ ವಾದಮಾಡಿ ಜ್ಞಾನವನ್ನು ಪರಿಪಾಕಗೊಳಿಸಿಕೊಳ್ಳುವದು ಮತ್ತೊಂದು ಸಾಧನ. ನ್ಯಾಯಶಾಸ್ತ್ರದಲ್ಲಿ ಈ ಎರಡು ಬಗೆಯ ಸಾಧನಗಳಲ್ಲಿ ಮುಖ್ಯವಾಗಿ ಎರಡನೆಯ ಸಾಧನದ ರೀತಿಯನ್ನು ವಿವರವಾಗಿ ಪ್ರತಿಪಾದಿಸಿರುತ್ತದೆ.

ಈ ತತ್ತ್ವಜ್ಞಾನದಿಂದ ಮೋಕ್ಷವುಂಟಾಗುವ ಕ್ರಮವನ್ನು ಗೌತಮಋಷಿಗಳು ಹೀಗೆಂದು ವರ್ಣಿಸಿರುವರು: ಸೂ॥ ದುಃಖಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಮುತ್ತ-ರೋತ್ತರಾಪಾಯೇ ತದನಂತರಾಪಾಯಾದಪವರ್ಗಃ ॥ ಇದರ ಅಭಿಪ್ರಾಯವೇನೆಂದರೆ, (ಹಿಂದೆ ವರ್ಣಿಸಿರುವ ಮಿಥ್ಯಾಜ್ಞಾನದಿಂದ ಜೀವನಾದವನು) ಶರೀರಾದಿಗಳು ನಾಶವಾದರೆ ತಾನೇ ನಾಶವಾಗುವೆನೆಂದು ತಿಳಿದು, ಮತ್ತೆ ಮತ್ತೆ ಧರ್ಮಾಧರ್ಮಗಳಿಂದ ಇವುಗಳನ್ನು ಸಂಪಾದಿಸುತ್ತಿರುವನಷ್ಟೆ. ಆದರೆ ಯಾವನಿಗೆ ಪ್ರಮೇಯವಾದ ಆತ್ಮಾದಿಗಳ ವಿಷಯದಲ್ಲಿ ಸರಿಯಾದ ಜ್ಞಾನವುಂಟಾಗುವದೋ ಅವನಿಗೆ ಆತ್ಮಾದಿಗಳ ವಿಷಯಕ್ಕೆ ಬಂದಿದ್ದ ಮಿಥ್ಯಾಜ್ಞಾನವು ನಾಶವಾಗುತ್ತದೆ. ಮಿಥ್ಯಾಜ್ಞಾನವು ಹೋಗಲು ಅವುಗಳಿಂದುಂಟಾಗಬೇಕಾದ ರಾಗದ್ವೇಷಮೋಹಗಳೆಂಬ ದೋಷಗಳು ನಾಶವಾಗುತ್ತವೆ. ದೋಷಗಳೇ ಧರ್ಮಾಧರ್ಮರೂಪವಾದ ಪ್ರವೃತ್ತಿಗೆ ಕಾರಣವಾಗಿರುವದರಿಂದ ದೋಷ ನಾಶವಾದ ಮೇಲೆ ಪ್ರವೃತ್ತಿಯೂ ಇಲ್ಲವಾಗುತ್ತದೆ. ಪ್ರವೃತ್ತಿಯಿಂದ ಜನ್ಮವುಂಟಾಗುತ್ತದೆ. ಆದಕಾರಣ ಪ್ರವೃತ್ತಿಯು ಯಾವಾತನಿಗೆ ನಾಶವಾಯಿತೋ ಅವನಿಗೆ ಜನ್ಮವೇ ಇಲ್ಲವಾಗುವದು. ಜನ್ಮವೇ ದುಃಖಕ್ಕೆ ಕಾರಣವಾಗಿರುವದರಿಂದ ಜನ್ಮವಿಲ್ಲದವನಿಗೆ ದುಃಖವೂ ಇರುವದಿಲ್ಲ. ಹೀಗೆ ದುಃಖ, ಜನ್ಮ, ಪ್ರವೃತ್ತಿ, ದೋಷ, ಮಿಥ್ಯಾಜ್ಞಾನ-ಇವುಗಳಲ್ಲಿ ಮುಂದೆ ಮುಂದೆ ಹೇಳಿರುವ ಕಾರಣವು ನಾಶವಾದ ಹಾಗೆ ಹಿಂದೆ ಹಿಂದೆ ಹೇಳಿರುವ ಕಾರ್ಯವು ನಾಶವಾಗುವದು. ಇದರಿಂದ ಸರ್ವದುಃಖಧ್ವಂಸ ರೂಪವಾದ ಮೋಕ್ಷವು ಪ್ರಾಪ್ತಿಯಾಗುವದು. **ಸಂ-1, 263**

# ವೈಶೇಷಿಕದರ್ಶನ

ಸಾಂಖ್ಯಯೋಗದರ್ಶನಗಳಿಗೆ ಹೇಗೆ ಬಹುಸಮೀಪವಾದ ಸಂಬಂಧವಿರುವದೋ ಹಾಗೆಯೇ ನ್ಯಾಯವೈಶೇಷಿಕಗಳಿಗೂ ಬಹುಸಮೀಪವಾದ ಸಂಬಂಧವಿರುವದು. ನ್ಯಾಯದರ್ಶನದಲ್ಲಿ ಜ್ಞಾನಾಜ್ಞಾನಗಳ ಲಕ್ಷಣವನ್ನು ವಿಚಾರಮಾಡಿದ್ದಾಯಿತು. ಈಗ ವೈಶೇಷಿಕರು ಈ ವಿಷಯದಲ್ಲಿ ಏನು ಹೇಳುತ್ತಾರೆಂಬುದನ್ನು ತಿಳಿಯಬೇಕಾಗಿದೆ.

ಈ ಶಾಸ್ತ್ರದಲ್ಲಿ ಅಜ್ಞಾನಕ್ಕೆ ಅವಿದ್ಯೆಯೆಂದು ಹೆಸರು. ಈ ಅವಿದ್ಯೆಯು ಸಂಶಯ, ಸ್ವಪ್ನ, ಅನಧ್ಯವಸಾಯ, ವಿಪರ್ಯಯ-ಎಂದು ನಾಲ್ಕು ಬಗೆಯಾಗಿರುವದು. ವಸ್ತುವನ್ನು ಸಾಮಾನ್ಯಾಕಾರವಾಗಿ ಕಂಡು ವಿಶೇಷರೂಪವನ್ನು ಕಾಣದೆ, ತಾನು ನೆನಸಿಕೊಳ್ಳುವ ವಿಶೇಷದಿಂದ ಬರುವ ಜ್ಞಾನವು ಸಂಶಯವು. ಹೇಗೆಂದರೆ ಮಬ್ಬುಗತ್ತಲೆಯಲ್ಲಿ ಏನೋ ವಸ್ತುವಿರುವಂತೆ ತೋರುತ್ತದೆ; ಆದರೆ ಅದರ ಭಾಗಗಳು ಸ್ಪಷ್ಟವಾಗಿ ತೋರುತ್ತಿರುವದಿಲ್ಲ. ಒಂದು ಬಗೆಯಿಂದ ನೋಡಿದರೆ ಇದು ಕೊಂಬೆ, ರೆಂಬೆ, ಇದು ಪೊಟ್ಟರೆ ಎಂದು ತಿಳಿಯಬಹುದು; ಇನ್ನೊಂದು ಬಗೆಯಿಂದ ನೋಡಿದರೆ ಇದು ತಲೆ, ಇದು ಕೈ, ಇದು ಕಾಲು-ಎಂದೂ ತಿಳಿಯಬಹುದು. ಹೀಗೆ ಎರಡು ಬಗೆಯಲ್ಲಿ ವಿಶೇಷದ ನೆನಪಾದ್ದರಿಂದ ಎರಡು ಬಗೆಯಿಂದಲೂ ಹೊಯ್ದಾಡುವ ಈ ಜ್ಞಾನಕ್ಕೆ ಸಂಶಯವೆಂದು ಹೆಸರು. ಸ್ವಪ್ನವೆಂಬುದು ಪ್ರಸಿದ್ಧವಾಗಿ ಎಲ್ಲರಿಗೂ ಗೊತ್ತಿರುವದೇ. ನಿದ್ರೆಯಲ್ಲಿ ತಾನು ಕಾಣುವ ವಸ್ತುಗಳು ನಿಜವಾಗಿ ಇರುವದಿಲ್ಲ, ಆದೂ ಎಚ್ಚರದ ಸಂಸ್ಕಾರದಿಂದಲೂ ತಾನು ಮಾಡಿರುವ ಪುಣ್ಯಪಾಪಗಳ ಫಲವಾಗಿಯೂ ಬಗೆಬಗೆಯ ನೋಟಗಳು ನಮಗೆ ತೋರಿಕೊಳ್ಳುವವು. ಈ ಅರಿವೇ ಸ್ವಪ್ನವೆಂಬ ಅವಿದ್ಯೆಯು. ಇನ್ನು ಕೆಲವುವೇಳೆ ಸಾಮಾನ್ಯವಾದ ಆಕಾರದಲ್ಲಿ ಜ್ಞಾನವಾಗಿ ಇಂಥದ್ದೆಂಬ ನಿಶ್ಚಯವೂ ಆಗುವದಿಲ್ಲ, ಸಂಶಯವೂ ಆಗಿರುವದಿಲ್ಲ. ಈ ಬಗೆಯ ಅರಿವಿಗೆ ಅನಧ್ಯವಸಾಯವೆಂದು ಹೆಸರು. ಮತ್ತೂ ಕೆಲವು ಸಂದರ್ಭಗಳಲ್ಲಿ ಒಂದನ್ನು ಮತ್ತೊಂದು ಪದಾರ್ಥವೆಂದು ನಿಶ್ಚಯಿಸಿಯೇಬಿಡುತ್ತೇವೆ. ಹಗ್ಗವನ್ನು ಹಾವೆಂದೂ ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದೂ ನಿರ್ಣಯಿಸುವದು ಈ ಬಗೆಯ ಜ್ಞಾನವು. ಇದಕ್ಕೆ ನಮ್ಮ ಕಣ್ಣು ಮುಂತಾದ ಇಂದ್ರಿಯದ ದೋಷವೂ ಮೊದಲು ನಾವು ನೋಡಿರುವ ಹಾವು ಬೆಳ್ಳಿ ಮುಂತಾದವುಗಳ ಜ್ಞಾನದ ಸಂಸ್ಕಾರದೋಷವೂ ಕಾರಣವಾಗಿರುವವು. ಆ ಸಂದರ್ಭಗಳಲ್ಲಿ ನಾವು ಒಂದು ಪದಾರ್ಥವನ್ನು ಮತ್ತೊಂದೆಂತಲೇ ಖಂಡಿತವಾಗಿ ತಿಳಿದುಬಿಡುತ್ತೇವಷ್ಟೆ. ಆ ಜ್ಞಾನಕ್ಕೆ ವಿಪರ್ಯಯವೆಂದು ಹೆಸರು. ಹೀಗೆ ಸಂಶಯ, ಸ್ವಪ್ನ, ಅನಧ್ಯವಸಾಯ, ವಿಪರ್ಯಯ-ಇವು ನಾಲ್ಕೂ ಸರಿಯಾದ ತಿಳಿವಳಿಕೆಯಲ್ಲದ್ದರಿಂದ ಅವಿದ್ಯೆಯೆನಿಸುವವು.

ಈ ದರ್ಶನದಲ್ಲಿ ದೋಷರಹಿತವಾದ ಜ್ಞಾನವನ್ನು ವಿದ್ಯೆ ಎನ್ನುವರು. ಈ ತತ್ತ್ವಜ್ಞಾನವು ಹೇಗೆ ಉಂಟಾಗುತ್ತದೆಯೆಂಬುದನ್ನು ವೈಶೇಷಿಕರು ತಿಳಿಸಿರುವದು ಹೇಗೆಂದರೆ–

**ಧರ್ಮವಿಶೇಷ ಪ್ರಸೂತಾದ್ದ್ರವ್ಯಗುಣಕರ್ಮಸಾಮಾನ್ಯವಿಶೇಷ ಸಮವಾಯಾನಾಂ**
**ಪದಾರ್ಥಾನಾಂ ಸಾಧರ್ಮ್ಯವೈಧರ್ಮ್ಯಾಭ್ಯಾಂ ತತ್ತ್ವಜ್ಞಾನಾನ್ನಿಃಶ್ರೇಯಸಂ ॥"**

(ಭಾವಾರ್ಥ–ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ–ಎಂದು ಪದಾರ್ಥಗಳು ಆರು ವಿಧ. ಇವುಗಳಲ್ಲಿ ಒಂದಕ್ಕೊಂದಕ್ಕೆ ಇರುವ ಹೋಲಿಕೆಯನ್ನೂ ಹೆಚ್ಚುಕಡಿಮೆಯನ್ನೂ ತಿಳಿದರೆ ತತ್ತ್ವಜ್ಞಾನವಾಯಿತು. ಈ ತತ್ತ್ವಜ್ಞಾನದಿಂದಲೇ ಮೋಕ್ಷವಾಗುವದು)

ಇಲ್ಲಿ ಹೇಳಿರುವ ಆರು ಪದಾರ್ಥಗಳನ್ನೂ ಅವುಗಳ ಸಾಮ್ಯವೈಷಮ್ಯಗಳನ್ನೂ ವಿವರಿಸುವದಕ್ಕೆ ಇದು ಸ್ಥಳವಲ್ಲ. ಆದರೆ ಇಲ್ಲಿ ಇಷ್ಟು ಪ್ರಕೃತವಾಗಿರುವದು : ನ್ಯಾಯಶಾಸ್ತ್ರದಲ್ಲಿ ಪ್ರಮಾಣ (ನಿಜವಾದ ಸಾಧನ) ಪ್ರಮೇಯ (ಅಂಥ ಜ್ಞಾನದ ವಿಷಯ)– ಎಂದು ಎರಡು ದೊಡ್ಡ ವಿಭಾಗಗಳನ್ನು ಮಾಡಿ ಇವುಗಳ ಜ್ಞಾನದಿಂದಲೇ ಮೋಕ್ಷವಾಗುವದೆಂದು ಹೇಳಿರುತ್ತದೆ. ಪ್ರಮೇಯವೆಂಬ ಗುಂಪಿನಲ್ಲಿ ಆತ್ಮ, ಶರೀರ, ಇಂದ್ರಿಯ, ವಿಷಯ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರೇತ್ಯಭಾವ, ಫಲ, ದುಃಖ, ಅಪವರ್ಗ–ಎಂಬ ಪದಾರ್ಥಗಳನ್ನು ಸೇರಿಸಿರುತ್ತದೆ. ವೈಶೇಷಿಕದಲ್ಲಿಯೋ ಎಂದರೆ ದ್ರವ್ಯ, ಗುಣ–ಮುಂತಾದ ಆರು ಪಂಗಡದಲ್ಲಿ ಇವೆಲ್ಲವೂ ಸೇರಿರುತ್ತವೆ. ಅಂತೂ ಪದಾರ್ಥಗಳ ಯಥಾರ್ಥಜ್ಞಾನದಿಂದ ಮೋಕ್ಷವೆಂಬದರಲ್ಲಿ ಎರಡು ದರ್ಶನಕ್ಕೂ ಅಭಿಪ್ರಾಯವುಂಟು. ಆದರೆ ಮಿಥ್ಯಾಜ್ಞಾನವೇ ಸಂಸಾರಕ್ಕೆ ಸಾಕ್ಷಾತ್ಕಾರಣವೆಂದು ನ್ಯಾಯದಲ್ಲಿ ಕಂಠೋಕ್ತವಾಗಿ ಹೇಳಿದಾರೆ; ವೈಶೇಷಿಕದಲ್ಲಿ ಜ್ಞಾನದಿಂದ ಮೋಕ್ಷವಾಗುವದು ಎಂದು ಹೇಳಿರುವದರಿಂದ ಅಜ್ಞಾನವೇ ಸಂಸಾರಬಂಧಕ್ಕೆ ಕಾರಣವು ಎಂದಂತೆ ಆಯಿತೆಂದು ಇಟ್ಟುಕೊಳ್ಳಬೇಕಾಗುವದು.

ಇನ್ನು ನ್ಯಾಯಶಾಸ್ತ್ರದಲ್ಲಿ ಹೇಳಿರುವಂತೆಯೇ ಇಲ್ಲಿಯೂ ತತ್ತ್ವಜ್ಞಾನಕ್ಕೆ ಸಹಕಾರಿಯಾಗಿ ಮತ್ತೊಂದು ಸಾಧನವನ್ನೂ ಹೇಳಿದೆ. ಇಲ್ಲಿಯೂ ಯೋಗದಿಂದಾಗುವ ಮನಸ್ಸಂಸ್ಕಾರ ದಿಂದ ಆತ್ಮಜ್ಞಾನವಾಗುವದೆಂದು ಒಪ್ಪಿಕೊಂಡಿರುತ್ತದೆ. ಇದರ ಜೊತೆಗೆ ಧರ್ಮವನ್ನೂ ಉಪದೇಶಮಾಡಿದೆ. ಧರ್ಮವೆಂದರೆ ಅಭ್ಯುದಯನಿಃಶ್ರೇಯಸಗಳಿಗೆ ಕಾರಣವಾದದ್ದು. ಅಭ್ಯುದಯವೆಂದರೇನೆಂಬ ವಿಷಯದಲ್ಲಿ ವ್ಯಾಖ್ಯಾನಕಾರರು ಬೇರೆಬೇರೆ ಅಭಿಪ್ರಾಯ ಪಟ್ಟಿರುವರು. ಸುಖಪ್ರಾಪ್ತಿಯೂ ದುಃಖನಿವೃತ್ತಿಯೂ ಏತರಿಂದಾಗುವದೋ ಅದೇ ಧರ್ಮವೆಂದು ಕೆಲವರು ಹೇಳಿದ್ದಾರೆ. ಈ ವ್ಯಾಖ್ಯಾನದಲ್ಲಿ ಸ್ವರ್ಗವೆಂಬ ಸುಖವನ್ನು

ಹೊಂದುವದೇ ಅಭ್ಯುದಯವು, ಎಲ್ಲಾ ಸಂಸಾರದ ದುಃಖಗಳನ್ನೂ ಕಳೆದು ಕೊಳ್ಳುವದೆಂಬ ಮೋಕ್ಷವೇ ನಿಃಶ್ರೇಯಸವು. ದುಃಖವಿಲ್ಲದಿರುವದೇ ಮೋಕ್ಷವೆಂಬ ವಿಷಯದಲ್ಲೂ ನ್ಯಾಯವೈಶೇಷಿಕದರ್ಶನಗಳು ಒಂದೇ ಅಭಿಪ್ರಾಯವುಳ್ಳವಾಗಿವೆ.

ಸಾಂಖ್ಯಯೋಗಗಳು ಹೇಗೆ ಜತೆಯ ದರ್ಶನಗಳೋ ಹಾಗೆಯೇ ನ್ಯಾಯವೈಶೇಷಿಕ ದರ್ಶನಗಳೂ ಸಮಾನಶಾಸ್ತ್ರಗಳೆಂದು ಮೊದಲೇ ಹೇಳಿದೇವಷ್ಟೆ ಈ ಎರಡು ಶಾಸ್ತ್ರಗಳನ್ನೂ ಪರೀಕ್ಷೆಮಾಡಿದರೆ ನ್ಯಾಯದಲ್ಲಿ ವಿಷಯಗಳು ಪ್ರತಿಪಾದಿತವಾಗಿರುವಷ್ಟು ಚೆನ್ನಾಗಿ ಈ ದರ್ಶನದಲ್ಲಿ ಹೇಳಿಲ್ಲ. ಇದರಿಂದ ಈ ದರ್ಶನವು ಮೊದಲು ಹುಟ್ಟಿತೆಂದೂ ಆಮೇಲೆ ನ್ಯಾಯಶಾಸ್ತ್ರವು ಆಯಿತೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಈ ವಿಷಯದಲ್ಲಿ ತತ್ತ್ವಶೋಧಕರೆಲ್ಲರೂ ಒಪ್ಪಿಗೆಯನ್ನು ಕೊಟ್ಟಿರುವದಿಲ್ಲ. ಇವೆರಡು ದರ್ಶನಗಳ ಬೇರೆಬೇರೆ ಪ್ರಧಾನವಿಷಯಗಳು ಯಾವವೆಂಬುದನ್ನೂ ವಿವಾದವಿಲ್ಲದಂತೆ ನಿರ್ಣಯಮಾಡುವದು ಕಷ್ಟವಾಗಿರುವದು. ಜಗತ್ತು ಪರಮಾಣುಗಳ ಸೇರುವಿಕೆ ಯಿಂದಾಗಿರುವದೆಂಬುದು ವೈಶೇಷಿಕಶಾಸ್ತ್ರದಲ್ಲಿಯೇ ಹೆಚ್ಚಾಗಿ ಕಂಡುಬಂದರೂ ನ್ಯಾಯಶಾಸ್ತ್ರದಲ್ಲಿಯೂ ಅಣುಗಳನ್ನು ಒಪ್ಪಿರುತ್ತಾರೆ. ನಿತ್ಯಪದಾರ್ಥಗಳಲ್ಲಿರುವ ವಿಶೇಷಗಳೆಂಬ ಪದಾರ್ಥಗಳನ್ನು ಒಪ್ಪಿರುವದರಿಂದ ವೈಶೇಷಿಕವೆಂಬ ಹೆಸರು ಬಂತೆಂದು ಕೆಲವರು ಊಹಿಸುತ್ತಾರೆ. ಇದು ಹೇಗಾದರೂ ಇರಲಿ ವೈಶೇಷಿಕದರ್ಶನಕ್ಕೂ ನ್ಯಾಯದರ್ಶನಕ್ಕೂ ವಿಶೇಷವಾಗಿ ಹೆಚ್ಚುಕಡಿಮೆ ಯಾವದೂ ಇಲ್ಲವೆಂಬುದೇನೋ ನಿಶ್ಚಿತವಾದ ಮಾತು.

ವೈಶೇಷಿಕರ ಮತವನ್ನಾಗಲಿ ನ್ಯಾಯಮತವನ್ನಾಗಲಿ ಮನ್ವಾದಿ ಸ್ಮೃತಿಗಳಲ್ಲಿ ಸಾಂಖ್ಯ ಯೋಗದರ್ಶನಗಳಂತೆ ಉಪಯೋಗಮಾಡಿಕೊಂಡಿರುವದು ಕಂಡುಬರುವದಿಲ್ಲ. ತಾರ್ಕಿಕರನ್ನು ಹೇತುವಿದ್ಯೆಯನ್ನು ಅರಿತವರೆಂದು ಅಲ್ಲಲ್ಲಿ ತುಸು ನಿಂದಿಸಿರುವ ವಾಕ್ಯಗಳು ಭಾರತದಲ್ಲಿಯೂ ರಾಮಾಯಣದಲ್ಲಿಯೂ ಸಿಕ್ಕುತ್ತವೆ. ವೈಶೇಷಿಕಮತವನ್ನು ಬ್ರಹ್ಮಸೂತ್ರದಲ್ಲಿ ಖಂಡನೆಮಾಡಿರುತ್ತಾರೆ. ಆರಂಭವಾದ, ಆತ್ಮನನ್ನು ಇಚ್ಛಾದ್ವೇಷಗಳೇ ಮುಂತಾದ ಚಿಹ್ನೆಗಳಿಂದ ಊಹಿಸಿ ತಿಳಿಯಬಹುದೆಂಬ ವಾದ, ಸಮವಾಯವೆಂಬ ಸಂಬಂಧವನ್ನು ಒಪ್ಪಿರುವದು–ಇವೇ ಮುಂತಾದ ವೈಶೇಷಿಕರ ಮತವನ್ನು ಶ್ರೀಶಂಕರಾಚಾರ್ಯರೇ ಮುಂತಾದ ಭಾಷ್ಯಕಾರರೂ ನಿರಾಕರಿಸಿದ್ದಾರೆ.

ಹೀಗಿದ್ದರೂ ನ್ಯಾಯವೈಶೇಷಿಕ ಮತಗಳು ಕೇವಲ ಖಂಡನೆಯ ದೃಷ್ಟಿಯಿಂದ ತಿಳಿಯತಕ್ಕವೆಂದು ಭಾವಿಸಕೂಡದು. "ಪರಮತಮಪ್ರತಿಷಿದ್ಧಂ ಅನುಮತಂ ಭವತಿ" ಎಂದರೆ ಮತ್ತೊಂದು ಮತದಲ್ಲಿ ಯಾವ ಭಾಗವನ್ನು ನಿರಾಕರಣಮಾಡಲಿಲ್ಲವೋ ಅದನ್ನು ಒಪ್ಪಿದಂತೆ–ಎಂದು ನ್ಯಾಯವಿರುವದು. ನ್ಯಾಯವೈಶೇಷಿಕರ ಪರಮಸಿದ್ಧಾಂತವನ್ನು ಇತರ ದರ್ಶನಕಾರರು ಒಪ್ಪದಿದ್ದರೂ ಪ್ರಮಾಣಪ್ರಮೇಯಾದಿವ್ಯವಹಾರ, ಅನುಮಾನ

ಪ್ರಮಾಣ, ಹೇತ್ವಾಭಾಸಗಳ ನಿರೂಪಣೆ–ಇವೇ ಮುಂತಾದ ಸಕಲತಂತ್ರಸಮಾನವಾದ ವಿಷಯಗಳನ್ನು ವಿಚಾರಕ್ಕಾಗಿ ಬಹುಮಟ್ಟಿಗೆ ಎಲ್ಲರೂ ಇಟ್ಟುಕೊಂಡಿರುವರು. ಈಚೆಗೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ–ಮುಂತಾದ ವೇದಾಂತದರ್ಶನಗಳ ಪ್ರಸ್ಥಾನಗಳನ್ನು ಬೆಳೆಸಿರುವ ಕೆಲಕೆಲವು ಗ್ರಂಥಕಾರರು ಸ್ವತಂತ್ರವಾಗಿಯೇ ಪ್ರಮಾಣಲಕ್ಷಣ ಮುಂತಾದವನ್ನೂ ಹೊಸದಾಗಿ ಏರ್ಪಾಡುಮಾಡಿಕೊಂಡಿರುವದೂ ನಿಜವೆ; ಆದರೆ, ಇದುವರೆಗೆ ಎಲ್ಲಾ ಮತಾನುಯಾಯಿಗಳೂ ನ್ಯಾಯವೈಶೇಷಿಕ ಶಾಸ್ತ್ರಗಳನ್ನು ತಾವು ಕಲಿಯುತ್ತಲೂ ಶಿಷ್ಯರಿಗೆ ಕಲಿಸುತ್ತಲೂ ಇರುವದನ್ನು ನೋಡಿದರೆ ಈ ಶಾಸ್ತ್ರಗಳು ಪ್ರಮಾಣತರ್ಕಗಳ ಸ್ವರೂಪವನ್ನು ಗೊತ್ತುಮಾಡುವದಕ್ಕೆ ವೇದಾಂತಕ್ಕೆ ಸಹಾಯಕಗಳೆಂತ ಇವರು ಭಾವಿಸಿರುವರೆಂತಲೇ ಹೇಳಬೇಕಾಗಿದೆ. ಸಂ–2, 35

## ಪೂರ್ವಮೀಮಾಂಸೆ

ಪೂರ್ವಮೀಮಾಂಸದಲ್ಲಿ ಜ್ಞಾನಸ್ವರೂಪವೇನು? ಮೀಮಾಂಸಕರು ಜ್ಞಾನದಿಂದಲೇ ಸಾಕ್ಷಾತ್ತಾಗಿ ಮೋಕ್ಷವುಂಟಾಗುವದೆಂಬುದನ್ನು ಒಪ್ಪುವದಿಲ್ಲ. ಅವರ ಮತದಲ್ಲಿ ಧರ್ಮಾಧರ್ಮಗಳು ನಾಶವಾಗುವದರಿಂದ ಸುಖದುಃಖಗಳು ನಾಶವಾಗುವವು, ಆಮೇಲೆ ಮೋಕ್ಷವಾಗುವದು. ಆದರೂ ಆತ್ಮಜ್ಞಾನವು ಆವಶ್ಯಕವಾದದ್ದೆಂದು ಈ ದರ್ಶನದವರೂ ಒಪ್ಪುತ್ತಾರೆ. ಆತ್ಮಜ್ಞಾನವು ಕರ್ಮಕ್ಕೆ ಉಪಯೋಗವಾಗುತ್ತದೆ. ಆ ಮೂಲಕವಾಗಿ ಮೋಕ್ಷಕ್ಕೂ ಉಪಯೋಗವಾಗುತ್ತದೆ–ಎಂದು ಇವರು ಹೇಳುತ್ತಾರೆ. ಮೋಕ್ಷಸ್ವರೂಪವನ್ನೂ ಅದಕ್ಕೆ ಸಾಧನವಾದ ಕರ್ಮಸ್ವರೂಪವನ್ನೂ ಈ ದರ್ಶನದವರು ಹೇಗೆ ವರ್ಣಿಸಿರುವರೆಂಬುದನ್ನು ಸಾಧನವಿಚಾರವನ್ನು ಪ್ರಸ್ತಾಪಿಸುವಾಗ ತಿಳಿಸಬಹುದಾಗಿರುವದರಿಂದ ಸದ್ಯಕ್ಕೆ ಜ್ಞಾನದ ಸ್ವರೂಪವನ್ನೂ ಉಪಯೋಗವನ್ನೂ ಇಲ್ಲಿ ವಿವರಿಸಿದರೆ ಸಾಕಾಗಿದೆ.

ಮೀಮಾಂಸದಲ್ಲಿ ಜ್ಞಾನವೆಂದರೆ ಆತ್ಮಜ್ಞಾನವು, ಶರೀರಕ್ಕಿಂತ ಬೇರೆಯಾಗಿ ಆತ್ಮನಿದ್ದಾನೆಂದು ತೋರಿಸುವದಕ್ಕೆ ಶಬರಸ್ವಾಮಿಗಳು ಮಾಡಿರುವ ಭಾಷ್ಯ, ಕುಮಾರಿಲ ಭಟ್ಟರವರ ವಾರ್ತಿಕ ಮುಂತಾದ ಗ್ರಂಥಗಳಲ್ಲಿ ವಿಸ್ತಾರವಾಗಿ ಬರೆದಿರುತ್ತದೆ. ನಮ್ಮ ಶರೀರದಲ್ಲಿ ಯಾವನ ಉಸಿರನ್ನು ಮೇಲಕ್ಕೂ ಕೆಳಕ್ಕೂ ಹಾಕುತ್ತ ಕಣ್ಣನ್ನು ಮುಚ್ಚುತ್ತಲು ತೆರೆಯುತ್ತಲೂ ಇರುವನೋ ಅವನೇ ಆತ್ಮನು. ಯಾವದಾದರೊಂದು ವಸ್ತುವಿನಲ್ಲಿರುವ ಗುಣಗಳು ತಮಗೆ ವಿರುದ್ಧವಾದ ಗುಣಗಳುಂಟಾದರೆ ನಾಶವಾಗುವವು. ಉದಾಹರಣೆಗೆ ಕೂದಲಿನಲ್ಲಿ ಬಿಳುಪು ಉಂಟಾದರೆ ಅದರಲ್ಲಿ ಮೊದಲಿದ್ದ ಕಪ್ಪು ಹೋಗಿಬಿಡುವದು, ಆ ವಸ್ತು ನಾಶವಾದ ಮೇಲೆ ಗುಣಗಳು ಹೋಗಿಬಿಡುವವು. ಏಕೆಂದರೆ ವಸ್ತುವೇ

ಇಲ್ಲದ ಮೇಲೆ ಗುಣಗಳು ಎಲ್ಲಿದ್ದಾವು? ಆದರೆ ಉಸಿರುಬಿಡುವದು, ಕಣ್ಣು ಮಿಟಕಿಸುವದು ಮುಂತಾದ ಗುಣಗಳು ಶರೀರವು ಇರುವಾಗಲೇ ನಾಶವಾಗಿ ಬಿಡುವವು. ಉದಾಹರಣೆಗೆ ಸತ್ತವರ ಶರೀರವು ಹಾಗೇ ಇರುತ್ತಿದ್ದರೂ ಅದರಲ್ಲಿ ಪ್ರಾಣಾದಿಗಳು ಕಂಡುಬರುವದಿಲ್ಲ. ಇದಕ್ಕೆ ಕಾರಣವೇನು? ಪ್ರಾಣಾದಿಗಳು ಶರೀರದ ಧರ್ಮವಲ್ಲ. ಇದೂ ಅಲ್ಲದೆ, ನಮ್ಮಲ್ಲಿ ಸುಖದುಃಖಾದಿಗಳು ಪ್ರತ್ಯಕ್ಷವಾಗಿ ನಮಗೆ ತೋರುತ್ತಿದ್ದರೂ ಮತ್ತೊಬ್ಬರಿಗೆ ಅವು ಗೋಚರವಾಗುವದಿಲ್ಲ. ಆದರೆ ನಮ್ಮ ಶರೀರದ ಗುಣಗಳಾದ ರೂಪವೇ ಮುಂತಾದವು ನಮಗೂ ಗೋಚರವಾಗುತ್ತವೆ, ಮಿಕ್ಕವರಿಗೂ ಗೋಚರ ವಾಗುತ್ತವೆ. ಹೀಗಿರುವದರಿಂದ ಸುಖದುಃಖಾದಿಗಳೂ ನಮ್ಮ ಶರೀರದ ಗುಣಗಳಲ್ಲ ವೆಂದು ಸಿದ್ಧವಾಯಿತು. ಹೀಗೆ ಉಸಿರಾಡಿಸುವ ಪ್ರಯತ್ನವು ಶರೀರದ್ದಲ್ಲವಾದ್ದರಿಂದಲೂ ಸುಖದುಃಖಗಳೂ ಶರೀರದ್ದಲ್ಲವಾದ್ದರಿಂದಲೂ ಇವುಗಳು ಮತ್ತೆ ಯಾವುದೋ ಒಂದು ಪದಾರ್ಥದ ಗುಣವಾಗಿರಬೇಕಷ್ಟೆ. ಆ ಪದಾರ್ಥವೇ ನಮ್ಮ ಆತ್ಮವು.

ಹೀಗೆ ಯುಕ್ತಿಯಿಂದ ಆತ್ಮಸಿದ್ಧಿಯನ್ನು ಮಾಡಿಕೊಂಡರೂ ನಿಜವಾಗಿ ದೇಹಾತ್ಮರಿಗೆ ಭೇದವಿರುವದೆಂದು ಸ್ಪಷ್ಟವಾಗುವದಿಲ್ಲ. ಏಕೆಂದರೆ ನಾನು ಹೋಗುತ್ತೇನೆ, ನಾನು ಕೇಳುತ್ತೇನೆ-ಎಂದು ಮೊದಲಾಗಿ ದೇಹೇಂದ್ರಿಯಗಳ ವಿಷಯದಲ್ಲಿಯೇ ಆತ್ಮವ್ಯವಹಾರವು ಕಾಣಬರುತ್ತಿರುವದು. ಹೀಗಿದ್ದರೂ ನನ್ನ ಶರೀರವು, ನನ್ನ ಇಂದ್ರಿಯವು, ನನ್ನ ಬುದ್ಧಿ-ಎಂದೂ ವ್ಯವಹಾರವಿರುವದರಿಂದ ಆತ್ಮನು ಶರೀರಾದಿಗಳಿಗಿಂತ ಬೇರೆಯಿರಬೇಕೆಂದೂ ಆಗುವದು. ಹಾಗಾದರೆ ಈ ಎರಡು ವ್ಯವಹಾರಗಳು ಒಂದಕ್ಕೊಂದು ವಿರುದ್ಧವಾಗಿರು ವದರಿಂದ ಇವೆರಡರಲ್ಲಿ ಯಾವದನ್ನು ನೆಚ್ಚುವದು? ಎಂದರೆ ಇದಕ್ಕೆ ಮೀಮಾಂಸಕರ ಉತ್ತರವೇನೆಂದರೆ "ಸ್ವರ್ಗವನ್ನು ಇಚ್ಛಿಸುವಾತನು ಜ್ಯೋತಿಷ್ಟೋಮವನ್ನು ಮಾಡಬೇಕು" ಎಂದು ಮುಂತಾಗಿ ಶ್ರುತಿಗಳಲ್ಲಿ ಹೇಳಿರುತ್ತದೆ. ಸ್ವರ್ಗವನ್ನು ಇದೇ ಶರೀರದಿಂದ ಅನುಭವಿಸುವದಕ್ಕಾಗುವದಿಲ್ಲ. ಆದ್ದರಿಂದ ಶ್ರುತಿಯು ಪ್ರಮಾಣವಾಗಿರುವದರಿಂದಲೂ ಸ್ವರ್ಗಸುಖವು ಜ್ಯೋತಿಷ್ಟೋಮವನ್ನು ಮಾಡಿದಾತನಿಗೆ ಸಿಕ್ಕುವದೆಂದು ಶ್ರುತಿಯಲ್ಲಿ ಹೇಳಿರುವದರಿಂದಲೂ ಶರೀರಕ್ಕಿಂತ ಆತ್ಮನು ಬೇರೆ ಇದಾನೆಂದು ನಿರ್ಣಯಿಸಬೇಕಾಗಿದೆ. ಇದೇ ಮುಂತಾದ ಯುಕ್ತಿಗಳಿಂದ ಆತ್ಮನು ಶರೀರೇಂದ್ರಿಯಾದಿಗಳಿಗಿಂತ ಬೇರೆಯಾಗಿ ಇರುತ್ತಾನೆಂತಲೂ ಅಹಂಪ್ರತ್ಯಯಕ್ಕೆ (ನಾನು ಎಂಬ ಅರಿವಿಗೆ) ವಿಷಯನೆಂತಲೂ ಇವನು ವ್ಯಾಪಕ (ಎಲ್ಲೆಲ್ಲಿಯೂ ವ್ಯಾಪಿಸಿರುವ) ನೆಂತಲೂ ಕರ್ತೃ (ಕರ್ಮವನ್ನು ಮಾಡುವವನು) ಎಂತಲೂ ಇಂಥ ಆತ್ಮರು ಅನೇಕರೆಂತಲೂ ತಿಳಿಯುವದೇ ಆತ್ಮಜ್ಞಾನವು.

ಆತ್ಮಜ್ಞಾನಕ್ಕಿಂತ ಬೇರೆಯಾದ ಈಶ್ವರನೆಂಬ ಚೇತನವನ್ನು ಮೀಮಾಂಸಕರು ಅಂಗೀಕರಿಸಿರುವದಿಲ್ಲ. ಈಚಿನ ಕೆಲವು ಮೀಮಾಂಸಗ್ರಂಥಗಳಲ್ಲಿ ಕರ್ಮವನ್ನು

ಈಶ್ವರಾರ್ಪಣೆ ಮಾಡಿದರೆ ಅದಕ್ಕೆ ಉತ್ತಮ ಫಲವು ದೊರೆಯುವದೆಂದು ಹೇಳಿರುತ್ತದೆ; ಆದರೆ ಪ್ರಾಚೀನಗ್ರಂಥಗಳಲ್ಲಿ ಕರ್ಮಕ್ಕೆ ತಾನೇ ಫಲವನ್ನು ಕೊಡುವ ಶಕ್ತಿಯಿರುವ ದಾಗಿಯೂ ಆ ಶಕ್ತಿಯೇ ಅಪೂರ್ವವೆಂತಲೂ ಬರೆದಿರುತ್ತದೆ. ಸಾಕ್ಷಾತ್ತಾಗಿ ಜೈಮಿನಿಯ ಸೂತ್ರಗಳನ್ನು ನೋಡಿದರೆ ಈಶ್ವರವಿಚಾರವಾಗಲಿ ಬ್ರಹ್ಮ ವಿಚಾರವಾಗಲಿ ಕಂಡು ಬರುವದಿಲ್ಲ. ಮುಖ್ಯವಾಗಿ ಮೀಮಾಂಸದರ್ಶನದಲ್ಲಿ ಕರ್ಮ, ಅದರ ಫಲ, ಮತ್ತು ಅದನ್ನು ಮಾಡುವ ವಿಧಾನ–ಇವೇ ಪ್ರಧಾನವಾಗಿರುವವು.

ಆತ್ಮಜ್ಞಾನಕ್ಕೆ ಪ್ರಯೋಜನವನ್ನು ಹೇಳುವದರಲ್ಲಿ ಮೀಮಾಂಸಕರು ಎರಡು ಬೇರೆಬೇರೆ ಅಭಿಪ್ರಾಯಪಡುವರು. ಆತ್ಮಜ್ಞಾನಕ್ಕೆ ಶಾಸ್ತ್ರದಲ್ಲಿ ಯಾವ ಫಲವನ್ನೂ ಹೇಳಿರುವದಿಲ್ಲ, ಆದರೂ ಇದನ್ನು ವಿಧಿಸಿರುತ್ತದೆ. ಆದ್ದರಿಂದ ಇದನ್ನು ಪಡೆದವರಿಗೆ ಮೋಕ್ಷವೇ ಆಗುವದೆಂದು ಕಲ್ಪಿಸಿಕೊಳ್ಳಬೇಕಾಗಿದೆ. ಹೀಗೆಂದು ಕೆಲವರೆನ್ನುವರು. ಇಲ್ಲಿ ಜ್ಞಾನವೆಂದರೆ ಉಪಾಸನೆಯು. ಈ ಮೀಮಾಂಸಕರ ಮತದಲ್ಲಿ ಉಪನಿಷತ್ತುಗಳಲ್ಲಿ ಹೇಳಿರುವ ಉಪಾಸನಾರೂಪವಾದ ವಾಕ್ಯಗಳಿಗೆ ಮೋಕ್ಷವು ಫಲವಾಗಿರುವದು. ಆತ್ಮಜ್ಞಾನವು ಕರ್ಮಕ್ಕೆ ಉಪಯೋಗಿ ಎಂಬುದು ಮತ್ತೊಂದು ಮತವು. ಈ ಮತದಲ್ಲಿ ಇದುವರೆಗೆ ನಾವು ಮಾಡಿರುವ ಕರ್ಮಗಳ ಫಲವನ್ನು ಅನುಭವಿಸಿಯೇ ತೀರಬೇಕು; ಆದ್ದರಿಂದ ಆ ಕರ್ಮದಿಂದ ಬಿಡುಗಡೆ ಮಾಡುವದಕ್ಕೆ ಜ್ಞಾನದಿಂದ ಆಗಲಾರದು. ಇನ್ನು ಮುಂದೆ ಮಾಡುವ ಧರ್ಮಾಧರ್ಮಗಳನ್ನು ಮತ್ತೆ ರಾಶಿಹಾಕಿಕೊಳ್ಳದೆ ಇರುವದಕ್ಕೆ ಮಾತ್ರ ಜ್ಞಾನವು ಕಾರಣವಾಗುವದು. ಹೇಗೆಂದರೆ ಆತ್ಮನು ನಿತ್ಯನಾಗಿರುವನೆಂದು ಶಾಸ್ತ್ರದಿಂದ ತಿಳಿದವನು ಕರ್ಮಗಳನ್ನು ಮಾಡಿ ಸ್ವರ್ಗಾದಿಸುಖಗಳನ್ನು ಪಡೆಯುತ್ತಾ ಹೋಗುತ್ತಿರುವನು, ತಿಳಿಯದವನು ನಿಷಿದ್ಧಕರ್ಮಗಳನ್ನು ಮಾಡಿ ದುಃಖವನ್ನು ಪಡೆಯುತ್ತಿರುವನು. ಆದರೆ ಸುಖದುಃಖಾದಿಗಳಿಂದ ಬಿಡುಗಡೆ ಹೊಂದಬೇಕೆಂಬುವನು ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡಿ ಪ್ರತ್ಯವಾಯವೆಂಬ ದೋಷವನ್ನು ತಪ್ಪಿಸಿಕೊಳ್ಳುವನು; ನಿಷಿದ್ಧಕರ್ಮವನ್ನು ಬಿಟ್ಟು ಅಧರ್ಮಫಲವನ್ನು ತಪ್ಪಿಸಿಕೊಳ್ಳುವನು; ಬಂದ ಕರ್ಮದ ಫಲವನ್ನುಪಭೋಗಿಸಿ ತೀರಿಸುವನು. ಇದರಿಂದ ಈ ಶರೀರವು ಬಿದ್ದುಹೋದಮೇಲೆ ಬೇರೆ ಧರ್ಮಾಧರ್ಮ ಗಳಿಲ್ಲದ್ದರಿಂದ ಮತ್ತೊಂದು ಶರೀರವುಂಟಾಗುವದಿಲ್ಲ. ಈ ರೀತಿಯಲ್ಲಿ ಶರೀರಕ್ಕಿಂತ ಬೇರೆಯಾಗಿ ಆತ್ಮನಿರುವನೆಂಬ ಜ್ಞಾನವು ಮಾಡಬೇಕಾದ ಕರ್ಮಗಳಲ್ಲಿ ಶ್ರದ್ಧೆಯನ್ನುಂಟು ಮಾಡುವದಕ್ಕೂ ನಿಷಿದ್ಧ ಕರ್ಮಗಳನ್ನು ಬಿಡಿಸುವದಕ್ಕೂ ಕಾರಣವಾಗಿ ಪರಂಪರೆಯಿಂದ ಮೋಕ್ಷಸಾಧನವಾಗಿರುವದು.

ಮಿಕ್ಕದರ್ಶನಗಳಿಗೂ ಮೀಮಾಂಸದರ್ಶನಕ್ಕೂ ಇರುವ ಮುಖ್ಯಭೇದವೇನೆಂದರೆ, ಇಲ್ಲಿ ವೇದಕ್ಕೇ ಪ್ರಾಧಾನ್ಯವನ್ನು ಕೊಟ್ಟಿರುತ್ತದೆ. ವೇದದಲ್ಲಿ ಮಾಡಬೇಕೆಂದು ಹೇಳಿರುವದೇ

ಧರ್ಮವು. ವೇದವಾಕ್ಯವನ್ನು ನೋಡಿ ಅರ್ಥವನ್ನು ನಿರ್ಣಯಿಸುವದೇ ಮೀಮಾಂಸ ಶಾಸ್ತ್ರದ ಉದ್ದೇಶವು. ಈ ಶಾಸ್ತ್ರದಲ್ಲಿ ಉಪಯೋಗಿಸಿರುವ ಯುಕ್ತಿಗಳೆಲ್ಲ ವೇದದ ಅರ್ಥವನ್ನು ನಿರ್ಣಯಿಸುವದಕ್ಕೇ ಹೊರತು ಸ್ವತಂತ್ರವಾಗಿ ಧರ್ಮದ ಸ್ವರೂಪವನ್ನು ಗೊತ್ತುಮಾಡುವದಕ್ಕಲ್ಲ. ಈ ಕಾರಣದಿಂದ ಈಶ್ವರನಿಗೆ ಅಷ್ಟೊಂದು ಪ್ರಾಧಾನ್ಯ ವಿಲ್ಲದಿದ್ದರೂ ವೇದಪ್ರಾಮಾಣ್ಯವನ್ನು ಒಪ್ಪಿರುವದರಿಂದ ಇದು ಆಸ್ತಿಕದರ್ಶನವೆನ್ನಿಸಿ ಕೊಂಡಿರುವದು. ವೇದಾಂತದರ್ಶನಕ್ಕೂ ಮೀಮಾಂಸಕ್ಕೂ ಈ ವಿಷಯದಲ್ಲಿ ಪೂರ್ಣ ಸಂಬಂಧವಿರುವದು. ಬ್ರಹ್ಮವು ಆಗಮೈಕವೇದ್ಯವೆಂತಲೂ ವೇದಾಂತವಾಕ್ಯಗಳ ತಾತ್ಪರ್ಯವನ್ನು ನಿರ್ಣಯಿಸುವದೇ ಶಾರೀರಕಸೂತ್ರಗಳ ಉದ್ದೇಶವೆಂತಲೂ ವೇದಾಂತಿ ಗಳು ಹೇಳುತ್ತಾರೆ. ಆದರೆ ಇಲ್ಲಿ ಇವೆರಡಕ್ಕೆ ಸ್ವಲ್ಪ ವೈಲಕ್ಷಣ್ಯವೂ ಇದೆ. ಇದನ್ನು ಮುಂದೆ ಸಂದರ್ಭಾನುಸಾರ ತಿಳಿಸುತ್ತೇವೆ. ಪೂರ್ವ ಮೀಮಾಂಸದಲ್ಲಿ ಪ್ರಾಭಾಕರ, ಭಾಟ್ಟ-ಎಂಬ ಎರಡು ಉಪಮತಗಳಾಗಿರುವವು. ಇವುಗಳಲ್ಲಿ ಭಾಟ್ಟ ಮೀಮಾಂಸದ ರೀತಿಯೇ ಈಗ ಎಲ್ಲೆಲ್ಲಿಯೂ ಪ್ರಚಾರದಲ್ಲಿರುವದು. ಮೀಮಾಂಸದಲ್ಲಿ ಹೇಳಿರುವ ಕರ್ಮಗಳು ಈಗ ಆಚಾರದಲ್ಲಿ ಬಲುಮಟ್ಟಿಗೆ ಕಡಿಮೆಯಾಗುತ್ತಿದ್ದರೂ ಮೀಮಾಂಸ ದರ್ಶನದಲ್ಲಿ ಹೇಳಿರುವ ತಾತ್ಪರ್ಯನಿರ್ಣಯದ ನ್ಯಾಯಗಳು ಧರ್ಮಶಾಸ್ತ್ರದಲ್ಲಿಯೂ ವೇದಾಂತದಲ್ಲಿಯೂ ತುಂಬ ಬಳಕೆಯಲ್ಲಿರುತ್ತವೆ. **ಸಂ-2, 67**

## ಸರಿಯಾದ ಜ್ಞಾನದ ಸ್ವರೂಪ

ವೇದಾಂತಿಗಳು ಜ್ಞಾನದಿಂದಲೇ ಮೋಕ್ಷ ಎನ್ನುವಾಗ ಜ್ಞಾನಶಬ್ದಕ್ಕೆ ಏನು ಅರ್ಥವನ್ನು ಹೇಳುತ್ತಾರೆ? ವಸ್ತುತಂತ್ರವಾದ ಜ್ಞಾನವೇ ಇಲ್ಲಿ ಪ್ರಕೃತವಾಗಿರುವದರಿಂದ ಇಂಥ ಜ್ಞಾನವನ್ನು ಪ್ರತಿಪಾದಿಸಿರುವವರಲ್ಲಿ ಜಗತ್ಪ್ರಸಿದ್ಧರಾಗಿರುವ ಶ್ರೀಶಂಕರಾಚಾರ್ಯರ ಭಾಷ್ಯಾನುಸಾರವಾಗಿಯೇ ಈ ವಿಷಯವನ್ನು ಇಲ್ಲಿ ಪ್ರತಿಪಾದನೆ ಮಾಡಲಾಗುವದು.

ಶಾರೀರಕಭಾಷ್ಯದ ಪ್ರಾರಂಭದಲ್ಲಿ ಇವರು ಬರೆದಿರುವದೇನೆಂದರೆ "ನೀನು, ನಾನು-ಎಂಬೆರಡು ಅರಿವುಗಳಿಗೆ ಗೋಚರವಾಗಿರುವವೇ **ವಿಷಯ, ವಿಷಯಿ**-ಎನ್ನಿಸಿ ಕೊಂಡಿರುವವು. ಇವು ಕತ್ತಲೆಬೆಳಕುಗಳಂತೆ ಒಂದಕ್ಕೊಂದು ವಿರುದ್ಧವಾದ ಸ್ವಭಾವವುಳ್ಳವು ಗಳಾದ್ದರಿಂದ ಇವು ಒಂದು ಮತ್ತೊಂದಾಗುವದು ಆಗಲಾರದೆಂದು ಸಿದ್ಧವೇ ಆಗಿರುವದು; ಹೀಗಿರುವಲ್ಲಿ ಇವುಗಳ ಧರ್ಮಗಳು ಒಂದು ಮತ್ತೊಂದರಲ್ಲಿ ಕಂಡು ಬರುವವೆಂಬುದು ಇನ್ನೂ ಆಗದಮಾತಾಗಿರುವದು. ಆದ್ದರಿಂದ ನಾನು-ಎಂಬ ಅರಿವಿಗೆ ಗೋಚರವಾದ ಜ್ಞಾನಸ್ವರೂಪವಾದ ವಿಷಯಿಯಲ್ಲಿ ನೀನು ಎಂಬ ಅರಿವಿಗೆ ಗೋಚರವಾದ ವಿಷಯವನ್ನೂ ಅದರ ಧರ್ಮಗಳನ್ನೂ ಅಧ್ಯಾಸಮಾಡುತ್ತಾರೆಂಬುದೂ

ಇದಕ್ಕೆ ವಿರುದ್ಧವಾಗಿ ವಿಷಯಿ ಮತ್ತು ಅದರ ಧರ್ಮಗಳನ್ನು ವಿಷಯದಲ್ಲಿ ಅಧ್ಯಾಸಮಾಡುತ್ತಾರೆಂಬುದೂ ಸುಳ್ಳು-ಎಂಬುದೇ ಯುಕ್ತವಾಗಿರುವದು. ಹೀಗಿದ್ದರೂ ಇವುಗಳಲ್ಲಿ ಒಂದನ್ನು ಮತ್ತೊಂದರಲ್ಲಿಯೂ ಒಂದರ ಧರ್ಮವನ್ನು ಮತ್ತೊಂದರಲ್ಲಿಯೂ ಅಧ್ಯಾಸಮಾಡಿ ಅತ್ಯಂತವಾಗಿ ಬೇರ್ಪಟ್ಟಿರುವ ಈ ಧರ್ಮಿ ಮತ್ತು ಧರ್ಮ-ಇವುಗಳನ್ನು ಒಂದರಿಂದೊಂದನ್ನು ವಿಂಗಡಿಸಿ ತಿಳಿದುಕೊಳ್ಳದೆ ತಪ್ಪು ತಿಳಿವಳಿಕೆಯಿಂದ ದಿಟವಾದ ದ್ದನ್ನು ಸಟೆಯಾದದ್ದನ್ನೂ ಬೆರಸಿಕೊಂಡು "ನಾನು ಇಂಥದ್ದು ನನ್ನದು ಇಂಥದ್ದು" ಎಂದು ಸ್ವಭಾವವಾಗಿಯೇ ಜನರು ವ್ಯವಹಾರಮಾಡುತ್ತಿರುವರು."........................

"ಹೀಗೆ ಈ ರೀತಿಯಲ್ಲಿ ಜನರು ಮಾಡುತ್ತಿರುವ ಅಧ್ಯಾಸವನ್ನು ಪಂಡಿತರು **ಅವಿದ್ಯೆ** ಯೆನ್ನುವರು. ಈ ಆತ್ಮಾನಾತ್ಮಗಳನ್ನು ವಿಂಗಡಿಸಿ ಇದರ ಸ್ವರೂಪವು ಇಂಥದ್ದೆಂದು ನಿರ್ಣಯಮಾಡುವದನ್ನೇ **ವಿದ್ಯೆ**ಯೆನ್ನುವರು."

ಸದ್ಯಕ್ಕೆ ಇಷ್ಟು ಪ್ರಕೃತ. ಈ ಭಾಷ್ಯಭಾಗದಿಂದ ವಿಷಯಿ, ವಿಷಯ-ಇವುಗಳನ್ನು ವಿಂಗಡಿಸಿ ತಿಳಿಯದೆ ಒಂದರ ಧರ್ಮವನ್ನು ಮತ್ತೊಂದರಲ್ಲಿ ಭ್ರಾಂತಿಯಿಂದ ಹಾಕುವ ಅಧ್ಯಾಸವನ್ನೇ ವೇದಾಂತಿಗಳು ಅವಿದ್ಯೆಯೆಂದು ಕರೆಯುತ್ತಾರೆಂಬುದು ಸ್ಪಷ್ಟವಾಗಿದೆ. ಯಾವದಕ್ಕೆ ಯಾವದು ಗೋಚರವಾಗುತ್ತದೆಯೋ ಅವುಗಳಲ್ಲಿ ಮೊದಲನೆಯದಕ್ಕೆ ವಿಷಯಿಯೆಂತಲೂ ಎರಡನೆಯದಕ್ಕೆ ವಿಷಯವೆಂತಲೂ ಸಂಜ್ಞೆ. ಹೀಗೆ ವಿಂಗಡಿಸಿ ನೋಡುವಾಗ, ಇಂದ್ರಿಯಗಳಿಗೆ ಹೊರಗಣ ದೇಹಾದಿಪ್ರಪಂಚವು ತೋರುತ್ತಿರುವದು; ಆದ್ದರಿಂದ ಇಂದ್ರಿಯಗಳು ವಿಷಯಿ ಎನ್ನಬೇಕಾಯಿತು. ಪ್ರಪಂಚವು ವಿಷಯವಾಯಿತು. ಆದರೆ ಮನಸ್ಸಿಗೆ ಇಂದ್ರಿಯಗಳೂ ಗೋಚರವಾಗುತ್ತಿರುವದರಿಂದ ಇವೂ ವಿಷಯ ಕೋಟಿಗೇ ಸೇರಿರುವವು. ಇದರಂತೆ ನಮ್ಮ ಮನಸ್ಸೂ ನಮ್ಮ ಒಳಗಿನ ಆತ್ಮಕ್ಕೆ ಗೋಚರವಾಗಿರುವದು; ಆದ್ದರಿಂದ ಇದೂ ವಿಷಯವೇ. ಅಂತೂ ಆತ್ಮವೊಂದು ವಿಷಯಿ, ಮಿಕ್ಕದ್ದೆಲ್ಲ ವಿಷಯವೇ. ಆತ್ಮವೆಂಬ ವಿಷಯಿ, ಅನಾತ್ಮನೆಂಬ ವಿಷಯ-ಇವುಗಳಲ್ಲಿ ಒಂದನ್ನು ಮತ್ತೊಂದರಲ್ಲಿಯೂ ಒಂದರ ಧರ್ಮವನ್ನು ಮತ್ತೊಂದರಲ್ಲಿಯೂ ಭ್ರಾಂತಿಯಿಂದ ಆರೋಪಿಸುವದೇ ಅಧ್ಯಾಸವು; ಈ ಅಧ್ಯಾಸವನ್ನೇ ಅಥವಾ **ಅಜ್ಞಾನ**-ಎಂದು ವೇದಾಂತಿಗಳು ಕರೆಯುವರು.

ಸಾಂಖ್ಯರ ದರ್ಶನದಂತೆ ಜ್ಞಾನಾಜ್ಞಾನಗಳ ಸ್ವರೂಪವನ್ನು ವಿಂಗಡಿಸುವಾಗ ವ್ಯಕ್ತ ಮತ್ತು ಅವ್ಯಕ್ತ-ಎಂಬ ಎರಡು ರೂಪಗಳಲ್ಲಿ ಕಂಡುಬರುವ ಪ್ರಕೃತಿ, ಇದಕ್ಕಿಂತ ಬೇರೆಯಾಗಿರುವ ಪುರುಷ-ಈ ಎರಡನ್ನೂ ಬಿಡಿಸಿ ತಿಳಿದುಕೊಳ್ಳದೇ ಇರುವದೇ ಅವಿವೇಕವೆಂಬ ಅಜ್ಞಾನವೆಂತಲೂ ಈ ಅವಿವೇಕವೇ ಸಂಸಾರದ ಎಲ್ಲಾ ಅನರ್ಥಕ್ಕೂ

ಕಾರಣವೆಂತಲೂ ತಿಳಿಸಿದ್ದೆವಷ್ಟೆ. ಅದರಂತೆಯೇ ವೇದಾಂತಿಗಳೂ "ತಪ್ಪುತಿಳಿವಳಿಕೆಯ ರೂಪದಲ್ಲಿರುವ ಅಧ್ಯಾಸವೇ ಕರ್ತೃತ್ವ, ಭೋಕ್ತೃತ್ವ-ಎಂಬ ಸಂಸಾರವನ್ನುಂಟು ಮಾಡುವದೆಂದು ಎಲ್ಲ ಜನರಿಗೂ ಗೊತ್ತಾಗಿರುವದು. ಅನರ್ಥಕ್ಕೆ ಕಾರಣವಾಗಿರುವ ಈ ಅಧ್ಯಾಸವನ್ನು ನಾಶಮಾಡುವದಕ್ಕೇ ಉಪನಿಷತ್ತುಗಳು ಜ್ಞಾನವನ್ನು ಉಪದೇಶಮಾಡುತ್ತಿವೆ" ಎನ್ನುತ್ತಾರೆ.

ಆದರೆ ಈ ಎರಡು ದರ್ಶನಗಳಿಗೂ ಇರುವ ಮುಖ್ಯವಾದ ಭೇದವೇನೆಂದರೆ- ಪ್ರಕೃತಿಯು ಸತ್ಯವಾದದ್ದು, ವ್ಯಕ್ತಾವ್ಯಕ್ತರೂಪಗಳನ್ನು ಪಡೆಯುತ್ತಿರುವದು, ಬೇರೆಬೇರೆ ಆತ್ಮರುಗಳಿಗೆ ಅವಿವೇಕದಿಂದ ಬಂಧವನ್ನೂ ವಿವೇಕದಿಂದ ಮೋಕ್ಷವನ್ನೂ ಉಂಟು ಮಾಡುತ್ತಲೇ ಇರುವದು-ಎಂಬುದು ಸಾಂಖ್ಯರ ಮತವು. ವಿಷಯರೂಪವಾದ ಅನಾತ್ಮವು ಮಿಥ್ಯೆ, ತೋರುತ್ತಿರುವದೇ ಹೊರತು ನಿಜವಾಗಿ ಇರುವದಲ್ಲ; ಸತ್ಯಸ್ವರೂಪನಾಗಿರುವ ಒಬ್ಬನೇ ಒಬ್ಬ ಆತ್ಮನಲ್ಲಿ ಅಧ್ಯಾಸರೂಪವಾದ ಅವಿದ್ಯೆಯಿಂದ ತೋರಿಕೊಳ್ಳುತ್ತಾ ಬಂಧವನ್ನು ಕಲ್ಪಿಸುವದು; ಆತ್ಮಾನಾತ್ಮಗಳ ನಿಜವಾದ ಸ್ವರೂಪವನ್ನು ತಿಳಿದವರಿಗೆ ತಾನೇ ಇರುವದಿಲ್ಲವೆಂಬುದನ್ನು ಗೊತ್ತುಮಾಡಿಕೊಡುವದು-ಎಂಬುದು ವೇದಾಂತಿಗಳ ಮತ. ಸಾಂಖ್ಯರ ಮತದಲ್ಲಿ ಪ್ರಕೃತಿಯೇ ಬಂಧವನ್ನೂ ಮೋಕ್ಷವನ್ನೂ ಪಡೆಯುತ್ತದೆ, ಪುರುಷನು ಅವಿವೇಕದಿಂದ ಬಂಧಮೋಕ್ಷಗಳನ್ನು ಅನುಭವಿಸುತ್ತಾನೆ. ವೇದಾಂತಮತದಲ್ಲಿ ಬಂಧವಾಗಲಿ ಮೋಕ್ಷವಾಗಲಿ ಪರಮಾರ್ಥದೃಷ್ಟಿಯಿಂದ ನೋಡಿದರೆ ಯಾರಲ್ಲಿಯೂ ಇರುವದಿಲ್ಲ; ಅಜ್ಞಾನಿಗಳು ಮೇಲೆ ವರ್ಣಿತವಾಗಿರುವ ಅಧ್ಯಾಸರೂಪವಾದ ಅವಿದ್ಯೆ ಯಿಂದ ಬಂಧಮೋಕ್ಷಗಳನ್ನು ಅನುಭವಿಸುವರು. ಆದ್ದರಿಂದ ಸಾಂಖ್ಯ, ವೇದಾಂತ- ಈ ಎರಡು ದರ್ಶನಗಳಲ್ಲಿಯೂ ಆತ್ಮನಲ್ಲಿ ಬಂಧಮೋಕ್ಷಗಳು ಇರುವವೆಂಬುದು ಉಪಚಾರದ ಮಾತಾಗಿರುವದು.

ಆತ್ಮವು ಒಂದೇ ಎಂಬುದು ಹೇಗೆ, ಇದು ಸತ್ಯವೆಂಬುದು ಹೇಗೆ? ಅನಾತ್ಮವು ಮಿಥ್ಯೆಯೆಂಬುದು ಹೇಗೆ? ಆತ್ಮಾನಾತ್ಮಗಳು ಒಂದರಲ್ಲಿ ಒಂದು ಅಧ್ಯಾಸವಾಗಿರು ವದೆಂದರೆ ಹೇಗೆ?-ಈ ಮೂರು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ವೇದಾಂತಿಗಳು ಕೊಡಬೇಕಾಗಿರುತ್ತದೆ. ಆ ಉತ್ತರದಿಂದ ಅಜ್ಞಾನದಿಂದ ಬಂಧವೂ ಜ್ಞಾನದಿಂದ ಮೋಕ್ಷವೂ ಉಂಟಾಗುವದೆಂದು ಇವರು ಹೇಳುವ ಮಾತಿನ ಅರ್ಥವು ತಾನೇ ವ್ಯಕ್ತವಾಗುವದು. **ಸಂ-2, 99**

# ಜ್ಞಾನಿಗಳಿಗೆ ಪರಮಾತ್ಮನೇ ಬೇಕು

ಭಗವಂತನ ಭಕ್ತರು ನಾಲ್ಕು ಬಗೆ. ತಮ್ಮ ಸಂಕಟವನ್ನು ಪರಿಹಾರಮಾಡಿಕೊಳ್ಳುವದಕ್ಕೆಂದು ಭಗವಂತನನ್ನು ಶರಣು ಹೊಂದುವವರು, ತಮ್ಮ ಇಷ್ಟಾರ್ಥವು ನೆರವೇರಬೇಕೆಂದು ಆತನನ್ನು ಭಜಿಸುವವರು, ಭಗವಂತನ ತತ್ತ್ವವನ್ನು ತಿಳಿದುಕೊಳ್ಳಬೇಕೆಂದು ಹವಣಿಸುವವರು–ಈ ಮೂವರು ಒಂದು ಪಂಗಡ. ಭಗವಂತನ ತತ್ತ್ವವನ್ನರಿತು ಆತನಲ್ಲಿಯೇ ನಿಷ್ಠೆಯನ್ನು ಪಡೆದಿರುವವರು ಮತ್ತೊಂದು ಪಂಗಡ. ಎರಡನೆಯ ಪಂಗಡದ ಭಕ್ತರೇ ಜ್ಞಾನಿಗಳು.

ಭಗವಂತನಿಂದ ಏನನ್ನಾದರೂ ಬಯಸಿ ಅದಕ್ಕಾಗಿ ಆತನನ್ನು ಭಜಿಸುವದು ತಪ್ಪಲ್ಲ. ಈ ಲೋಕದಲ್ಲಿ ನಮಗೆ ಎಲ್ಲಿ ಯಾವದು ಸಿಕ್ಕಬೇಕಾದರೂ ಅದು ಭಗವಂತನಿಂದಲೇ ದೊರಕಬೇಕಾಗಿದೆ ಎಂಬ ಘನತತ್ತ್ವವನ್ನು ತಿಳಿದವರು ಉದಾರಭಾವವುಳ್ಳವರೇ ಸರಿ. ಆದರೆ ಭಗವಂತನು ನಮಗೆ ಬೇಕಾದದ್ದನ್ನೆಲ್ಲಾ ಆಗಲೆ ಸಿದ್ಧಪಡಿಸಿಬಿಟ್ಟಿರುತ್ತಾನೆ; ನಮಗೆ ಯಾವಯಾವಾಗ ಏನೇನು ಬೇಕಾಗುವದೋ ಅದು ಸಕಾಲದಲ್ಲಿ ದೊರೆಯಬೇಕೆಂಬುದೇ ಅವನ ಸಂಕಲ್ಪ–ಎಂಬುದನ್ನು ಅರಿತವರು ಮತ್ತೇತಕ್ಕೆ ಆತನನ್ನು ಏನನ್ನಾದರೂ ಬೇಡುವರು? ಭಗವಂತನೇ ಸರ್ವಪುರುಷಾರ್ಥಗಳಿಗೆ ಮೂಲ, ಆತನೇ ನಮ್ಮಗಳೆಲ್ಲರ ಆತ್ಮನು; ಆತನ ಅನುಸಂಧಾನದಿಂದ ಕಾಲವನ್ನು ಕಳೆಯುವದೇ ಜೀವನದ ಪರಮ ಧ್ಯೇಯ–ಎಂಬುದನ್ನು ಅರಿತ ಭಕ್ತರು ಮತ್ತೆ ಏನನ್ನೂ ಬೇಡರು. ಅವರಿಗೆ ಭಗವಂತನೇ ಬೇಕು. ಆ ಭಗವಂತನು ಇಲ್ಲಿಯೇ ಈಗಲೇ ತಮ್ಮ ಆತ್ಮನೇ ಆಗಿರುತ್ತಾನೆ–ಎಂಬ ದೃಢವಾದ ವಿಶ್ವಾಸವಿರುವ ವಿವೇಕಿಗಳು ಯಾವಾಗಲೆಂದರೆ ಆಗ ಆ ಭಗವಂತನನ್ನು ತಮ್ಮ ಹೃದಯದಲ್ಲಿ ಕಂಡುಕೊಳ್ಳಬಹುದು; ಯಾವಾಗಲೆಂದರೆ ಆಗ ಆನಂದದ ಸವಿಯನ್ನು ಕಂಡುಕೊಳ್ಳಬಹುದು. **ಸಂ–24, 201**

# ಜ್ಞಾನಿಯ ಸ್ಥಿತಿ

ದೇವ, ಪ್ರತಿರಾತ್ರೆಯಲ್ಲಿಯೂ ನೀನು ನಮ್ಮ ಆತ್ಮರುಗಳನ್ನು ದೇಹಬಂಧದಿಂದ ಬಿಡುಗಡೆ ಮಾಡುತ್ತೀಯೆ, ಆಗ ಎಲ್ಲರನ್ನೂ ಬರೆವಣಿಗೆಯನ್ನು ಅಳಿಸಿದ ಸ್ಲೇಟಿನಂತೆ ಪರಿಶುದ್ಧರನ್ನಾಗಿ ಮಾಡಿಬಿಡುತ್ತೀಯೆ ! ಪ್ರತಿರಾತ್ರೆಯಲ್ಲಿಯೂ ಜೀವಾತ್ಮರು ಈ ಪಂಜರದಿಂದ ಬಿಡುಗಡೆಯಾಗುವರು; ಆಗ ಆಳೂ ಇಲ್ಲ, ಅರಸೂ ಇಲ್ಲ ! ರಾತ್ರೆಯಲ್ಲಿ ಬಂಧಿಗಳಿಗೆ ತಮ್ಮ ಕಾರಾಗಾರದ ಅರಿವಿರುವದಿಲ್ಲ, ರಾಜರುಗಳಿಗೆ ತಮ್ಮ ಪ್ರಭುತ್ವದ ಅರಿವಿರುವದಿಲ್ಲ. ಆಗ ಲಾಭದ ಅಥವಾ ನಷ್ಟದ ವಿಚಾರವಾಗಲಿ ಹಗರಣೆಯಾಗಲಿ ಇರುವದಿಲ್ಲ; ಇವನು ಇಂಥವನು, ಇವನು ಅಂಥವನು ಎಂಬ ವಿಶೇಷವಿರುವದಿಲ್ಲ.

ಜ್ಞಾನಿಯು ಎಚ್ಚತ್ತಿರುವಾಗಲೂ ಅವನಿಗೆ ಇಂಥ ಸ್ಥಿತಿಯೇ ಇರುವದು. "ಅವನು ನಿದ್ರಿಸುತ್ತಿದ್ದರೂ ಎಚ್ಚತ್ತಿರುವನೆಂದೇ ಭಾಸವಾಗುತ್ತಿರುವದು" ಎಂದು ಪರಮೇಶ್ವರನು ನುಡಿಯುತ್ತಾನೆ. ಅವನು ಪ್ರಪಂಚದ ವ್ಯವಹಾರಕ್ಕೆ ಹಗಲೂ ರಾತ್ರಿಯೂ ನಿದ್ರಿಸುತ್ತಲೇ ಇರುವನು. ಬರೆಯುವವನ ಕೈಯಲ್ಲಿರುವ ಲೆಕ್ಕಣಿಕೆಯಂತೆಯೇ ಇರುವನು, ಅವನು! ಬರೆಯುವವನ ಕೈಯನ್ನು ಲೆಕ್ಕಕ್ಕೆ ತಾರದಿದ್ದರೆ ಲೆಕ್ಕಣಿಕೆಯ ಓಡಾಟದಿಂದಲೇ ಈ ಕಾರ್ಯವಾಗುತ್ತಿರುವದು ಎನ್ನುವಂತೆ ಆಗುವದು. ಅಲ್ಲವೆ ? ಜ್ಞಾನಿಯು ಅವನ ಸ್ಥಿತಿಯನ್ನು ವಿವರಿಸಿ ಹೇಳಿದರೆ, ಪ್ರಾಕೃತ ಜನರಿಗೆ ವಿಷಯ ಭೋಗದ ನಿದ್ರೆಯೇ ಇಲ್ಲವಾದೀತು ! ಸಂ-17, 272

## ಆತ್ಮವೂ ಕರ್ಮವೂ (ಜೈನ ಸಿದ್ಧಾಂತ)

ಆತ್ಮನು ಚೇತನನು; ಕರ್ಮವು ಅಚೇತನವು. ಆತ್ಮನು ಜ್ಞಾನಸ್ವರೂಪನು; ಕರ್ಮವು ಜಡವು. ಈ ಜ್ಞಾನಮಯನಾದ ಆತ್ಮನಿಗೆ ಕರ್ಮಬಂಧವಾಗುವುದೆಂತು? ಆತ್ಮನೂ ಅನಾದಿಯು; ಕರ್ಮವೂ ಅನಾದಿಯು. ಅನಾದಿಕಾಲದಿಂದಲೂ ಆತ್ಮನು ಕರ್ಮದೊಡನೆ ಕೂಡಿರುವನು. ಕರ್ಮವನ್ನು ಪ್ರತಿನಿಮಿಷದಲ್ಲಿಯೂ ಆಕರ್ಷಿಸುತ್ತಿರುವನು. ಕರ್ಮವು ಬಹಳ ಸೂಕ್ಷ್ಮವಾದ ಜಡ ಪದಾರ್ಥವು. ಕರ್ಮಾಣುಗಳು ವಿಶ್ವವನ್ನು ವ್ಯಾಪಿಸಿರುವುವು. ಬಹಳ ಸೂಕ್ಷ್ಮವಾದ ಧೂಳುಮಣ್ಣು ವಿಶ್ವವನ್ನು ವ್ಯಾಪಿಸಿರುವುದಲ್ಲವೆ? ಈ ಧೂಳುಮಣ್ಣು ತೇವವಾದ ಪದಾರ್ಥಗಳ ಮೇಲೂ, ಜಿಡ್ಡಾದ ವಸ್ತುಗಳ ಮೇಲೂ ಕುಳಿತುಕೊಳ್ಳುತ್ತದೆ. ಅಂದರೆ ತೇದು (ತೊಯ್ದು?) ಹೋದ ಮತ್ತು ಜಿಡ್ಡಿನಿಂದ ಕೂಡಿದ ವಸ್ತುಗಳು ಧೂಳು ಬಂದು ಮುಸುಕಲು ಅವಕಾಶವೀಯುವುವೆಂದಾಯಿತು. ಈ ಧೂಳು ಸಕ್ಕರೆಯ ಪಾಕಕ್ಕೆಬಿದ್ದರೆ ಸಕ್ಕರೆಯ ಸ್ವಭಾವವನ್ನು ಧರಿಸುತ್ತದೆ. ಅಂದರೆ ಸಿಹಿಗುಣವನ್ನು ಪಡೆಯುತ್ತದೆ. ಅದೇ ಧೂಳು ವಿಷದ ಪಾಕದೊಡನೆ ಸಂಪರ್ಕವಾಗಲು ವಿಷದ ಗುಣವನ್ನೇ ಅವಲಂಬಿಸುವುದು. ಅಂತೂ ಧೂಳಿನ ಗುಣವು ಅದು ಯಾವ ರೀತಿಯ ವಸ್ತುವನ್ನಾಚ್ಛಾದಿಸುವುದೋ ಆ ವಸ್ತುವಿನ ಸ್ವಭಾವವನ್ನನುಸರಿಸುವುದೆಂದಾಯಿತು. ಹಾಗೆಯೇ ಆತ್ಮನು ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳಿಂದ ಕೂಡಿದವನಾಗಿ ಈ ಕರ್ಮಾಣುಗಳನ್ನು ಆಕರ್ಷಿಸುತ್ತಾನೆ. ಶುಭಪರಿಣಾಮಯುಕ್ತನಾದ ಆತ್ಮನೊಡನೆ ಸೇರುವ ಕರ್ಮಾಣುಗಳು ಶುಭಕರ್ಮಗಳಾಗುವುವು; ಅಶುಭಪರಿಣಾಮದಿಂದ ಕೂಡಿರುವ ಆತ್ಮನೊಡನೆ ಸೇರುವ ಕರ್ಮಾಣುಗಳು ಅಶುಭಕರ್ಮಗಳಾಗಿ ಪರಿಣಮಿಸುವವುವು. ಅಂದರೆ ಶುಭಕರ್ಮವೇ ಪುಣ್ಯ; ಅಶುಭಕರ್ಮವೇ ಪಾಪ. ಶುಭಕರ್ಮವು ಆತ್ಮನಿಗೆ ಭೋಗೋಪಭೋಗವಸ್ತುಗಳನ್ನೊದಗಿಸಿ ಸುಖಪಡಿಸುವುದು; ಅಶುಭಕರ್ಮವು ಬಡತನ, ರೋಗ, ಅಪಜಯ, ದುಃಖ-ಇವುಗಳನ್ನುಂಟುಮಾಡುವುದು. ಪರಹಿತಕಾರ್ಯದಲ್ಲಿ

ಮಗ್ನನಾಗಿ ಯಾವಾಗಲೂ ಯಾರಿಗೂ ಯಾವ ತರಹದ ಬಾಧೆಯನ್ನೂ ಕೊಡದಿರುವ ದೈವಭಕ್ತನಾದ ಆತ್ಮನು ಯಾವಾಗಲೂ ಶುಭಕರ್ಮಾಣುಗಳನ್ನು ಆಕರ್ಷಿಸುತ್ತಿರುವನು. ಕೋಪ, ಅಸೂಯೆ, ಸಿಡಿಮಿಡುತನ, ಹಿಂಸೆಯನ್ನು ಮಾಡಬೇಕೆಂಬ ಭಾವನೆ, ದುಷ್ಟಯೋಚನೆ, ದುರಾಶೆ, ಬಡವರನ್ನು ಗೋಳಿಡಿಸುವುದು, ಸತ್ಪುರುಷರ ಮನಸ್ಸನ್ನು ನೋಯಿಸುವುದು–ಇವುಗಳಿಂದ ಆತ್ಮನ ಪರಿಣಾಮವು ಕೆಟ್ಟು ಅಶುಭಕರ್ಮಗಳನ್ನು ಅಂದರೆ ಪಾಪಗಳನ್ನು ಗಳಿಸುವನು.

ಆದರೂ ಪ್ರಪಂಚದಲ್ಲಿ ಕಣ್ಣೆದುರಿಗೆ ಕಾಣುತ್ತಿರುವ ದೃಶ್ಯವಾವುದು? ಪರರಿಗೆ ಹಿಂಸೆಯನ್ನು ಮಾಡಿ, ಪ್ರಾಣಿಕೋಟಿಯ ರಕ್ತವನ್ನು ಹೀರಿ ಜೀವನಮಾಡುತ್ತಿರುವ ಕೆಲವು ಮಾನವರು ಅಭಿವೃದ್ಧಿಯಲ್ಲಿದ್ದಂತೆಯೂ ಸುಖಿಗಳಾಗಿರುವಂತೆಯೂ ನಮಗೆ ಬೋಧೆಯಾಗುವುದು. ಪರಹಿತಕಾಂಕ್ಷಿಗಳಾಗಿ ಸದ್ವರ್ತನೆಯುಳ್ಳವರಾಗಿ, ಆಚಾರಶೀಲ ವ್ರತಗಳನ್ನು ಕೈಕೊಂಡವರಾಗಿರುವ ಕೆಲವು ಮನುಷ್ಯರು ಕಷ್ಟಪರಂಪರೆಗಳನ್ನನುಭವಿಸುವಂತೆ ಕಾಣುವುದು. ಇದಕ್ಕೆ ಕಾರಣಗಳೇನು? ಆತ್ಮನು ಯಾವಾಗಲೂ ಅಶುಭಕರ್ಮಗಳನ್ನೇ ಸೆಳೆಯುತ್ತಿರುವುದಿಲ್ಲ. ಹೊಸ ಹೊಸ ಕರ್ಮಗಳು ಉದಯಿಸುತ್ತವೆ. ಮೊದಲು ಬಂಧವಾಗಿದ್ದ ಕರ್ಮಗಳು ಫಲವನ್ನು ಕೊಡುತ್ತಿರುತ್ತವೆ. ಎಷ್ಟೋ ಜನ್ಮಗಳಿಂದ ಆತ್ಮನೊಡನೆ ಕೂಡಿರುವ ಕರ್ಮವು ಈಗ ಫಲವನ್ನು ಕೊಡುತ್ತಿರಬಹುದು. ಹಿಂದೆ ಮಾಡಿದ ಪುಣ್ಯದಿಂದ ಒಬ್ಬ ಮನುಷ್ಯನು ಈಗ ಐಶ್ವರ್ಯವಂತನಾಗಿಯೋ, ಅಧಿಕಾರಿಯಾಗಿಯೋ, ದುರ್ವ್ಯಾಪಾರಿಯಾಗಿ, ಕ್ರೂರಿಯಾಗಿ ಪಾಪಕಾರ್ಯಗಳನ್ನೆಸಗುತ್ತಾ ಹಿಂದಿನ ಪುಣ್ಯದ ಫಲವಾಗಿ ಈಗ ಪಾಪವನ್ನೇ ಗಳಿಸುತ್ತಾನೆ. ಹಾಗೆಯೇ ಹಿಂದಿನ ಪಾಪದಿಂದ ಈಗ ಒಬ್ಬನು ದುಃಖವನ್ನನುಭವಿಸುತ್ತಾ ಸದಾಚಾರಿಯಾಗಿ ದೈವಭಕ್ತ ಸಂಪನ್ನನಾಗಿ, ಅಹಿಂಸಾವ್ರತಿಯಾಗಿ ಪುಣ್ಯವನ್ನು ಗಳಿಸುತ್ತಿರಬಹುದು. ಅಂದರೆ ಹಿಂದಿನ ಪಾಪಫಲವು ಈಗಿನ ಪುಣ್ಯವನ್ನು ಗಳಿಸುವುದಕ್ಕೆ ಕಾರಣಭೂತವಾದಂತಾಯಿತು. ಇದಲ್ಲದೆ ಹಿಂದಿನ ಜನ್ಮದ ಪುಣ್ಯದಿಂದ ಐಶ್ವರ್ಯಸುಖಸಂತೋಷಗಳನ್ನು ಹೊಂದಿರುವ ಮನುಷ್ಯನು ಈಗಲೂ ಪುಣ್ಯವನ್ನು ಮಾಡಿ ಪುಣ್ಯಾಣುಗಳನ್ನು ಆಕರ್ಷಿಸಬಹುದು. ಹಿಮದಿನ ಪುಣ್ಯಬಂಧಕ್ಕೂ ಸಹಾಯಮಾಡಿದಂತಾಯಿತು. ಹಿಂದಿನ ಪಾಪದಿಂದ ಈಗ ದುಃಖಿಸುತ್ತಿರುವ ಮನುಷ್ಯನು ಪುನಃ ಪಾಪಗಳನ್ನು ಮಾಡಿ ಅಶುಭಕರ್ಮಗಳನ್ನೇ ಆಕರ್ಷಿಸಬಹುದು. ಇಲ್ಲಿ ಹಿಂದಿನ ಪಾಪವು ಈಗಿನ ಪಾಪಬಂಧಕ್ಕೆ ಕಾರಣವೆಂದಾಯಿತು. ಆತ್ಮಕ್ಕೂ ಕರ್ಮಕ್ಕೂ ಇಷ್ಟು ನಿಕಟಸಂಬಂಧವಿರುವುದು.

# ಕೋ ವಿಧಿಃ ಕೋ ನಿಷೇಧಃ

**'ನಿಸ್ತ್ರೈಗುಣ್ಯೇ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ' (ತ್ರೈಗುಣ್ಯವನ್ನು ಮೀರಿದ ಮಾರ್ಗದಲ್ಲಿ ಸಂಚರಿಸುತ್ತಿರುವವರಿಗೆ ವಿಧಿ ಯಾವದು, ನಿಷೇಧವು ಯಾವದು?)** ಎಂಬ ಶ್ಲೋಕಪಾದವನ್ನು ಎಲ್ಲರೂ ಕೇಳಿದೇವೆ. ಇದನ್ನು ಅವಲಂಬಿಸಿ ಸಾಧುವೇಷಿಗಳು ಕೆಲವರು ವಿಧಿನಿಷೇಧಗಳನ್ನು ಮೀರಿ ನಡೆಯುತ್ತಾ ತಾವು ನಿಸ್ತ್ರೈಗುಣ್ಯರಾದ್ದರಿಂದ ತಮಗೆ ವಿಧಿನಿಷೇಧಗಳ ಕಟ್ಟಿಲ್ಲವೆಂದು ವಾದಿಸುತ್ತಾ ಮೂಢರನ್ನು ವಂಚಿಸುತ್ತಿರುವದು ಕಂಡುಬರುತ್ತದೆ. ಸ್ವೇಚ್ಛಾಚಾರವು ಮುಕ್ತರ ಅಥವಾ ಮಹಾತ್ಮರ ಲಕ್ಷಣವಾಗಲಾರದೆಂದು ನಮ್ಮ ಮನಸ್ಸಿನಲ್ಲಿ ನಿಶ್ಚಿತವಾಗಿದ್ದರೂ ಮೇಲಿನ ವಾಕ್ಯದ ತಾತ್ಪರ್ಯವೇನಿರಬಹುದೆಂಬ ಬಗ್ಗೆನಮ್ಮಲ್ಲಿ ಕೆಲವರಿಗೆ ಆಗಾಗ್ಗೆ ಸಂದೇಹವು ಉದಿಸುತ್ತಲೇ ಇರುತ್ತದೆ.

ಇದು ಹೇಗಾದರೂ ಇರಲಿ. ತ್ರಿಗುಣಾತೀತನೆಂದರೆ ಯಾರು? ಅವರಿಗೆ ವಿಧಿನಿಷೇಧಗಳಿಲ್ಲವೆಂದರೆ ಹೇಗೆ? ಇದನ್ನು ಸ್ವಲ್ಪಮಟ್ಟಿಗೆ ವಿಚಾರಿಸೋಣ. ಸತ್ತ್ವ, ರಜ, ತಮ-ಎಂಬ ಮೂರು ಗುಣಗಳೂ ಯಾರ ಚಿತ್ತವನ್ನು ವಶಗೊಳಿಸಿಕೊಂಡಿರುವ ದಿಲ್ಲವೋ ಯಾರು ಈ ಮೂರು ಗುಣಗಳನ್ನೂ ದಾಟಿದ ಮೇಲುಮಟ್ಟಕ್ಕೆ ಹೋಗಿರುವರೋ ಅವರೇ **ತ್ರಿಗುಣಾತೀತರು**. ಭಗವದ್ಗೀತೆಯಲ್ಲಿ ಹದಿನಾಲ್ಕನೆಯ ಅಧ್ಯಾಯದಲ್ಲಿ ಇಂಥವರ ವರ್ಣನೆಯನ್ನು ಕೊಟ್ಟಿರುತ್ತದೆ. ಗುಣಗಳು ತಮ್ಮ ಚಿತ್ತದಲ್ಲಿ ವ್ಯಾಪಾರಮಾಡಲಿ ಬಿಡಲಿ, ಆ ವ್ಯಾಪಾರಗಳಲ್ಲಿ ರಾಗದ್ವೇಷಗಳಿಲ್ಲದೆ ಸುಖದುಃಖಗಳಲ್ಲಿ ಸಮನಾಗಿದ್ದುಕೊಂಡು ಹೊರಗೆ ಪ್ರಿಯಾಪ್ರಿಯವೆಂಬ ಭೇದವಿಲ್ಲದೆ ಮಾನಾಪಮಾನ ಗಳಿಗೆ ಹಿಗ್ಗದೆ ಕುಗ್ಗದೆ ಇರುವವನಾಗಿ ಸರ್ವಸಮಬುದ್ಧಿಯುಳ್ಳ ಮಹಾತ್ಮನೇ ಗುಣಾತೀತನೆಂದು ಅಲ್ಲಿ ಹೇಳಿರುತ್ತದೆ. ಇಂಥವರಿಗೆ ವಿಧಿನಿಷೇಧಗಳು ಸೋಂಕಲಾರ ವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಯಾವನಿಗೆ ಇಂಥದ್ದು ಬೇಕು, ಇಂಥದ್ದು ಬೇಡ-ಎಂಬ ಮನೋವೃತ್ತಿಯೇ ಇಲ್ಲವೋ ಅವನನ್ನು ಯಾವ ವಿಧಿಯು ತಾನೆ ಕರ್ಮದಲ್ಲಿ ತೊಡಗಿಸೀತು, ಯಾವ ನಿಷೇಧವು ತಾನೆ ಕರ್ಮದಿಂದ ತೊಲಗಿಸೀತು?

ಇಲ್ಲಿ ಇನ್ನೊಂದು ವಿಷಯವನ್ನು ನಾವು ತಿಳಿದುಕೊಳ್ಳುವದು ಅವಶ್ಯವಾಗಿದೆ. ಒಬ್ಬ ಮನುಷ್ಯನಿಗೆ ಕರ್ತೃತ್ವಬುದ್ಧಿಯಿದ್ದೂ ಮನಸ್ಸಿನ ಕಾಮಗಳೆಲ್ಲವೂ ತೊಲಗುವವೆಂಬುದು ಅತ್ಯಂತ ಅಸಂಭಾವಿತವಾದದ್ದು. 'ನಾನು ಕೆಲಸಮಾಡುವವನು' ಎಂಬ ಬುದ್ಧಿಯಿದ್ದರೆ 'ಅದರ ಫಲವು ನನಗಾಗುವದು' ಎಂಬ ಬುದ್ಧಿಯು ಬೆನ್ನಂಟಿಕೊಂಡೇ ಇರುತ್ತದೆ. ಆದ್ದರಿಂದ ಪರಮಾರ್ಥವಾಗಿ ತ್ರಿಗುಣಾತೀತನಾದವನು ತಾನು ಕರ್ತೃವೆಂಬ ಬುದ್ಧಿಯನ್ನು ಉಳಿಸಿಕೊಳ್ಳುವದಕ್ಕೆ ಆಗುವದಿಲ್ಲ. ಇಷ್ಟೇ ಅಲ್ಲ; ಅವನಿಗೆ ಮಿತ್ರರು, ಶತ್ರುಗಳು-ಮುಂತಾದ

ತಾರತಮ್ಯವಿರುವದೂ ಅತ್ಯಂತ ಅಸಂಭಾವಿತವಾಗಿದೆ. ಏಕೆಂದರೆ "ಸರ್ವತ್ರ ಬ್ರಹ್ಮವೊಂದೇ ಇರುವದು, ಬ್ರಹ್ಮಕ್ಕಿಂತ ವ್ಯತಿರಕ್ತವಾಗಿ ಯಾವದೊಂದೂ ಇರುವದೇ ಇಲ್ಲ. ಜನರು ತ್ರಿಗುಣಗಳು ಎಂದು ವ್ಯವಹರಿಸುವದೆಲ್ಲವು ಆ ವಾಸುದೇವಪ್ರಬ್ರಹ್ಮದಲ್ಲಿ ಕಲ್ಪಿತವಾಗಿರುವ ಮಾಯೆಯಾಗಿರುತ್ತದೆ" ಎಂಬುದೇ ತ್ರಿಗುಣಾತೀತನ ನಿಶ್ಚಯವಾಗಿರುತ್ತದೆ. ಹೀಗೆ ತ್ರಿಗುಣಾತೀತನಾದವನಿಗೆ ಕರ್ತೃ, ಕ್ರಿಯಾ, ಕಾರಕ, ಫಲ-ಎಂಬ ಭೇದವೇ ಇರುವದಿಲ್ಲ. ಆದ್ದರಿಂದಲೂ ಅವನಿಗೆ ವಿಧಿನಿಷೇಧಗಳಿರುವದಿಲ್ಲವೆಂಬುದು ಯುಕ್ತವಾಗಿರುತ್ತದೆ.

ತಮಗೆ ಪ್ರಾಪ್ತವಾಗಿರುವ ಪರಮಾರ್ಥಜ್ಞಾನದ ಬಲದಿಂದ ಸಹಜವಾಗಿ ವಿಧಿನಿಷೇಧಗಳನ್ನು ಮೀರಿರುವವರಿಗೂ ಸ್ವೇಚ್ಛಾಕರ್ಮಕ್ಕಾಗಿ ವಿಧಿನಿಷೇಧಗಳನ್ನು ಮೀರಿ ನಡೆಯುವವರಿಗೂ ಇರುವ ಭೇದವನ್ನು ಈಗ ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿ ರುತ್ತದೆ. ಜ್ಞಾನಿಯಾದವನಿಗೆ ನಿಜವಾಗಿ ತ್ರಿಗುಣಗಳೇ ಇರುವದಿಲ್ಲ, ಆದ್ದರಿಂದ ತ್ರಿಗುಣಾತ್ಮರಿಗಾಗಿ ಶಾಸ್ತ್ರದಲ್ಲಿ ಕಂಡುಬರುವ ವಿಧಿನಿಷೇಧಗಳೂ ಅವನಿಗೆ ನಿಜವಾಗಿ ಇರುವದೇ ಇಲ್ಲ. ಹೀಗಿರುವದರಿಂದ 'ಬಂಜೆಯು ತನ್ನ ಮಕ್ಕಳ ಯೋಚನೆಯನ್ನು ಹಚ್ಚಿಕೊಳ್ಳುವದೇ ಇಲ್ಲ' ಎಂದರೆ ಹೇಗೋ ಹಾಗೆ ಜ್ಞಾನಿಯು ವಿಧಿನಿಷೇಧಗಳಿಗೆ ಕಿಂಕರನಾಗಿರುವದಿಲ್ಲವೆಂಬ ಮಾತಿಗೂ ಅರ್ಥಮಾಡಬೇಕಾಗುವದು. ಅಜ್ಞಾನಿಯೋ ಎಂದರೆ ಅವನು ತ್ರಿಗುಣಗಳ ಮಾಯಾಪಾಶದ ಬಲೆಯಲ್ಲಿ ಕಟ್ಟುಬಿದ್ದಿರುತ್ತಾನೆ; ಅವನು ಆ ಕಟ್ಟನ್ನು ಕಿತ್ತೊಗೆಯುವೆನೆಂದು ಎಷ್ಟೆಷ್ಟು ಒದ್ದಾಡುವನೋ ಅಷ್ಟಷ್ಟೂ ಅವನಿಗೆ ಅದು ಹೆಚ್ಚು ಹೆಚ್ಚಾಗಿ ತೊಡರಿಕೊಳ್ಳುವದು. ಯಾವನಾದರೂ 'ನಾನು ತ್ರಿಗುಣಾತೀತನು, ಆದ್ದರಿಂದ ನನಗೆ ವಿಧಿನಿಷೇಧಗಳ ಕಟ್ಟಿರುವದಿಲ್ಲ!' ಎಂದರೆ ಕೂಡಲೆ ಅವನು ಆತ್ಮವಂಚಕನೆಂದೂ ಪರವಂಚಕನೆಂದೂ ನಿಶ್ಚಯಿಸಿಕೊಳ್ಳಿರಿ; ಏಕೆಂದರೆ ನಿಜವಾಗಿ ತ್ರಿಗುಣಾತೀತನಾದವನಿಗೆ ನಾನು ತ್ರಿಗುಣಾತೀತನು ಎಂಬ ಅಭಿಮಾನವು ಇರುವ ಸಂಭವವೇ ಇಲ್ಲ.

ತ್ರಿಗುಣಗಳನ್ನು ಮೀರುವದು ಹೇಗೆ? ಮೊಟ್ಟಮೊದಲು ತಮೋಗುಣವನ್ನು ರಜೋ ಗುಣದ ಬಲದಿಂದ ಗೆದ್ದುಕೊಳ್ಳಬೇಕು. ಸೋಮಾರಿತನವನ್ನೂ ನಿದ್ರೆಯನ್ನೂ ಮೌಢ್ಯವನ್ನೂ ಗೆದ್ದುಕೊಂಡವನು ತಮೋಗುಣವನ್ನು ಗೆದ್ದುಕೊಂಡಿರುತ್ತಾನೆಂದು ಹೇಳಬಹುದು. ನಿಷಿದ್ಧಪದಾರ್ಥಗಳನ್ನು ಸೇವಿಸುತ್ತಾ ನಿಷಿದ್ಧಾಚಾರಗಳನ್ನು ಮಾಡುತ್ತಾ ತಾನು ತ್ರಿಗುಣಾತೀತನೆಂದು ಹೆಮ್ಮೆಕೊಚ್ಚಿಕೊಳ್ಳುವ ಮೂರ್ಖನು ಪಶುಗಳ ಸಾಲಿಗೆ ಸೇರತಕ್ಕ ವನು, ಅಥವಾ ಪಶುಗಳಿಗಿಂತಲೂ ಕಡೆಯಾದವನು; ಏಕೆಂದರೆ ಪಶುಗಳು ತಿಳಿಯದೆ ತಾಮಸಗುಣವನ್ನವಲಂಬಿಸುತ್ತವೆ, ಆದರೆ ಅವನು ಮಾನವಜನ್ಮವನ್ನು ಹೊಂದಿ ತಿಳಿದು ತಿಳಿದೂ ತಮಸ್ಸಿನಗುಂಡಿಯಲ್ಲಿ ಹೊರಳಾಡುತ್ತಿರುತ್ತಾನೆ. ಇರಲಿ, ಈ ತಮೋಗುಣವನ್ನು ಗೆದ್ದ ಬಳಿಕ ರಜೋಗುಣವನ್ನು ಸತ್ತ್ವಗುಣದಿಂದ ಗೆದ್ದುಕೊಳ್ಳಬೇಕಾಗುವದು. ಚಾಂಚಲ್ಯವನ್ನೂ ವಿಷಯಭೋಗದ ತೃಷ್ಣೆಯನ್ನೂ ಗೆದ್ದುಕೊಂಡಿರುವವನು

ರಜೋಗುಣವನ್ನು ಗೆದ್ದುಕೊಂಡಿರುತ್ತಾನೆಂದು ಹೇಳಬಹುದು. ಯಾವನು ಸಾತ್ತ್ವಿಕವಾದ ಆಹಾರವನ್ನು ಸೇವಿಸುತ್ತಲೂ ಸಾತ್ತ್ವಿಕಗುಣಗಳನ್ನು ಅಭ್ಯಾಸ ಮಾಡುತ್ತಲೂ ಸಾತ್ತ್ವಿಕರಾದ ಸಂತರ ಸೇವೆಯನ್ನು ಮಾಡುತ್ತಲೂ ಪರಮೇಶ್ವರನಲ್ಲಿ ಅನನ್ಯ ಭಕ್ತಿಯನ್ನು ಅವಲಂಬಿಸಿ ಕೊಂಡಿರುವನೋ ಅವನು ಸತ್ತ್ವಗುಣದಲ್ಲಿ ನಿಂತಿರುತ್ತಾನೆ. ಅಂಥವನಿಗೆ ಪರಮೇಶ್ವರನ ದಯೆಯಿಂದ ತಾನು ಸಾತ್ತ್ವಿಕನೆಂಬ ಅಭಿಮಾನವನ್ನೂ ಗೆದ್ದುಕೊಂಡು ಪರಮಾತ್ಮ ನಲ್ಲಿಯೇ ನಿಷ್ಠೆಯನ್ನು ಪಡೆಯುವ ನಿಸ್ತ್ರೈಗುಣ್ಯಪದವಿಯು ದಕ್ಕುವದು. ಇಂಥ ಮಹಾತ್ಮನಿಗೆ ತಮಃಪ್ರಧಾನವಾದವರು ಅವಲಂಬಿಸುವ ಅಧರ್ಮಾಚರಣೆಯು ಎಂದಿಗೂ ರುಚಿಸುವ ಸಂಭವವೇ ಇಲ್ಲವೆಂಬುದನ್ನು ಮತ್ತೆ ಹೇಳಬೇಕೆ?

ತ್ರಿಗುಣಾತೀತರಾಗಿ ಪರಬ್ರಹ್ಮದಲ್ಲಿಯೇ ನಿಷ್ಠೆಯನ್ನು ಪಡೆದಿರುವ ಮಹಾತ್ಮರಲ್ಲಿ ದೇಹಾಭಿಮಾನವು ಒಂದಿಷ್ಟೂ ಇರುವದಿಲ್ಲ. ಆದ್ದರಿಂದ ಅವರು ಯಾವದನ್ನು ಮಾಡತಕ್ಕದ್ದು, ಯಾವದನ್ನು ಬಿಡತಕ್ಕದ್ದು-ಎಂಬ ವಿಚಾರವನ್ನು ಕೂಡ ತಮ್ಮ ಮನಸ್ಸಿನಲ್ಲಿ ಹಾಕಿಕೊಳ್ಳುವಂತಿರುವದಿಲ್ಲ. ದೈವಯೋಗದಿಂದಲೋ ಪ್ರಾರಬ್ಧವಶದಿಂದಲೋ, ಅಂಥವರಲ್ಲಿ ಕೆಲವರು ಬ್ರಹ್ಮಭಾವನೆಯ ಆವೇಶದಲ್ಲಿದ್ದುಕೊಂಡು ಅವರ ದೇಹೇಂದ್ರಿಯ ಗಳು ಯಂತ್ರದಂತೆ ವ್ಯಾಪಾರಮಾಡುತ್ತಾ ನಮ್ಮಗಳ ದೃಷ್ಟಿಯಿಂದ ನಿಷಿದ್ಧವೆಂದು ತೋರುವ ಕೆಲವು ವ್ಯಾಪಾರಗಳನ್ನು ಮಾಡಲೂಬಹುದು. ಆದರೆ ಇಂಥ ಸಂದರ್ಭದಲ್ಲಿ ಆ ಮಹಾನುಭಾವರಿಗೆ ಕರ್ಮಸಂಗವಾಗಲಿ ಫಲಾಸಕ್ತಿಯಾಗಲಿ ಎಳ್ಳಷ್ಟೂ ಇರುವದಿಲ್ಲ ವಾದ್ದರಿಂದ ಆ ಕರ್ಮಗಳನ್ನಾಗಲಿ ಅವುಗಳ ಫಲವನ್ನಾಗಲಿ ಅವರಿಗೆ ಗಂಟು ಹಾಕುವದಕ್ಕೆ ಅವಕಾಶವೇ ಇರುವದಿಲ್ಲ. ಇಂಥವರು ಲೋಕದ ಕರ್ಮಬಂಧವನ್ನು ಉನ್ಮೂಲನಮಾಡಿ ವರ್ಣಾಶ್ರಮಗಳ ಕಟ್ಟನ್ನು ಕೊಡವಿಕೊಂಡಿರುವದರಿಂದ ಅವರನ್ನು **ಅತಿ ವರ್ಣಾಶ್ರಮಿ** ಗಳೆಂದೂ **ಅವಧೂತ**ರೆಂದೂ ಕರೆಯುವದುಂಟು. **ಸಂ-8, 104**

## ವಿಭೂತಿಯೋಗ

ಎಲ್ಲದರಲ್ಲಿಯೂ ಪರಮೇಶ್ವರನೊಬ್ಬನೇ ಇದ್ದುಕೊಂಡಿರುತ್ತಾನಾ ದರೂ ನಮ್ಮಂಥ ಸಾಮಾನ್ಯರ ಕಣ್ಣಿಗೆ ಕೆಲಕೆಲವು ಕಡೆಗಳಲ್ಲಿ ಆತನ ವಿಭೂತಿಯು ಮಿಕ್ಕ ಕಡೆಗಿಂತ ಹೆಚ್ಚಾಗಿ ತೋರಿಕೊಂಡು ಆತನ ಮಹಿಮೆಯ ನೆನಪನ್ನು ಕೊಡುತ್ತಿರುತ್ತದೆ.

ವಿಶಾಲವಾದ ಆಕಾಶ, ಬೆಳಗಿನಜಾವದಲ್ಲಿ ತೋರಿಕೊಂಡು ಮನಸ್ಸನ್ನೆಳೆಯುವ ಅರುಣೋದಯ, ಹಸಲೆ(ಎಳೆಯ ಹುಲ್ಲು, ಹುಲ್ಲುಗಾವಲು)ಯಿಂದ ಕಣ್ಣಿಗೆ ಅಂದವನ್ನು ಬೀರುವ ದೊಡ್ಡ ಬಯಲು, ವಿಶಾಲವಾಗಿ ಹರಡಿಕೊಂಡಿರುವ ಉನ್ನತವಾದ ಅರಳಿ, ಆಲ-ಮುಂತಾದ ಮರಗಳಿಂದ ನಿಬಿಡವಾದ ಅರಣ್ಯಪ್ರದೇಶ, ಆ ಮರಗಳ ಕೊಂಬೆಗಳಲ್ಲಿ ಕಿವಿಗಿಂಪಾಗುವಂತೆ ಕಲನಾದವನ್ನುಂಟುಮಾಡುತ್ತಿರುವ ಸುಂದರವಾದ ಗರಿಗಳಿಂದೆಸೆ

ಯುವ ಪಕ್ಷಿಗಳು, ಚಿತ್ರ ವಿಚಿತ್ರವಾದ ಮೈಸೊಬಗಿನಿಂದ ಅಡ್ಡಾಡುತ್ತಿರುವ ಮೃಗಗಳು, ಅಲ್ಲಿಗಲ್ಲಿಗೆ ಹರಿಯುತ್ತಿರುವ ನಿರ್ಮಲಜಲದ ನದಿಗಳು, ದೂರದೂರಕ್ಕೆ ಕಂಗೊಳಿಸುವ ಸರೋವರಗಳು- ಇಂಥ ಪ್ರಕೃತಿಯ ದೃಶ್ಯಗಳನ್ನು ನೋಡಿದ ಮಾತ್ರದಿಂದ ಮಾನವನ ಮನಸ್ಸು ತನ್ನ ಉಬ್ಬರವಿಳಿತಗಳನ್ನು ಬಿಟ್ಟು ಇಂಥ ವಿಚಿತ್ರಜಗತ್ತನ್ನು ಸೃಷ್ಟಿಸಿರುವ ಪರಮೇಶ್ವರನ ಸ್ಮರಣೆಯಿಂದಲೋ ಎಂಬಂತೆ ಹೊರಗನ್ನೇ ಮರೆಯುವದು ನಮ್ಮಲ್ಲನೇಕರ ಅನುಭವದಲ್ಲಿದೆಯಲ್ಲವೆ? ಇಂಥ ಸುಂದರವಾದ ನೋಟಗಳೆಲ್ಲದ ರಲ್ಲಿಯೂ ಆ ಪರಮಾತ್ಮನ ಸನ್ನಿಧಿಯನ್ನು ನೆನಪಿಗೆ ತಂದುಕೊಳ್ಳುವದೊಂದು ಉತ್ತಮವಾದ ಅಧ್ಯಾತ್ಮಸಾಧನವಾಗಿರುತ್ತದೆಯೆಂದು ಬಲ್ಲವರು ಹೇಳುತ್ತಾರೆ.

ಇನ್ನು ಮನುಷ್ಯನ ನಾಗರಿಕತೆಯಿಂದ ಏರ್ಪಟ್ಟಿರುವ ಭವ್ಯವಾದ ಕಟ್ಟಡಗಳು, ಮಕ್ಕಳ ವಿಹಾರಸ್ಥಾನಗಳು, ವಿದ್ಯಾಮಂದಿರಗಳು-ಮುಂತಾದ ದೃಶ್ಯಗಳಲ್ಲಿಯೂ ಭಗವಂತನ ಸಾನ್ನಿಧ್ಯವನ್ನು ನೆನಪಿಗೆ ತಂದುಕೊಳ್ಳಬಹುದು. ಆಗ ಸಹಜವಾಗಿ ತೋರುವ ಪ್ರಕೃತಿಯೇ ಅಲ್ಲದೆ, ಮಾನವನೂ ಅವನ ಬುದ್ಧಿಯೂ ಆ ಬುದ್ಧಿಯ ಫಲವಾದ ನಾಗರಿಕತೆಯೂ- ಎಲ್ಲವೂ ಆ ಭಗವಂತನಿಂದಲೇ ಬಂದದ್ದು ಎಂಬ ಸುಂದರವಾದ ಭಾವನೆಯು ಹೃದಯದಲ್ಲಿ ನೆಲಸುತ್ತದೆ.

ಇದರಮೇಲೆ ಸಾತ್ತ್ವಿಕರಾದ ಸಾಧುಗಳು, ಅವರುಗಳು ಓಡಾಡುವ ಪವಿತ್ರಸ್ಥಳಗಳು, ಪರಮೇಶ್ವರನ ಅರ್ಚನೆಯನ್ನೂ ಪ್ರಾರ್ಥನೆಯನ್ನೂ ಮಾಡುವದಕ್ಕೆಂದು ಜನರು ಏರ್ಪಡಿಸಿಕೊಂಡಿರುವ ದೇವಾಲಯಗಳು, ಪುರಾಣ, ಪುಣ್ಯಕಥೆ, ಕೀರ್ತನೆ, ತತ್ತ್ವಾರ್ಥ ವಿಚಾರ-ಮುಂತಾದವುಗಳನ್ನು ಆದರದಿಂದ ದೊಡ್ಡವರು ನಡೆಯಿಸುತ್ತಿರುವ ಸಭಾ ಮಂಟಪಗಳು, ತಿಳಿದವರೂ ವಿಚಾರಪರರೂ ಆದವರು ಬರೆದಿರುವ ಉತ್ತಮವಾದ ಧರ್ಮಗ್ರಂಥಗಳು-ಇಂಥ ಸಾತ್ತ್ವಿಕವಸ್ತುಗಳಲ್ಲಿ ಹೆಚ್ಚಿನ ಭಕ್ತಿಯಿಂದ ಪರಮೇಶ್ವರನ ಸಾನ್ನಿಧ್ಯವನ್ನು ನೆನೆದುಕೊಳ್ಳುವದೂ ಸರ್ವಾತ್ಮಭಾವನೆಗೆ ಒಂದು ಉತ್ತಮವಾದ ಸೋಪಾನವಾಗಿರುತ್ತದೆ.

ಸಂಗ್ರಹವಾಗಿ ಹೇಳಿದರೆ, ಯಾವಯಾವದು ನಮಗೆ ಮೆಚ್ಚುಗೆಗೆ ಪಾತ್ರವೆಂದು ತೋರುವದೋ, ಯಾವಯಾವದು ಉದಾತ್ತಭಾವನೆಯನ್ನುಂಟುಮಾಡುವದೋ, ಯಾವಯಾವದು ನಮ್ಮ ವ್ಯಕ್ತಿತ್ವದ ಕಡೆಗೆ ಮನಸ್ಸಿನ ಲಕ್ಷ್ಯವಿರದೆ ಮೈಮರೆಯುವಂತೆ ಮಾಡುವದೋ ಅಂಥದ್ದನ್ನೆಲ್ಲ ಭಗವಂತನ ವಿಭೂತಿಯೆಂದೇ ಭಾವಿಸಬೇಕು. ಸ್ಥಾವರ, ಜಂಗಮ-ಎಂಬ ವಿವೇಕವನ್ನಿಡದೆ, ಎಲ್ಲೆಲ್ಲಿ ನಮಗೆ ಸತ್ಯಶಿವಸುಂದರ ಭಾವನೆಯುಂಟಾಗು ವಂತಿರುವದೋ ಅಲ್ಲೆಲ್ಲ ಭಗವಂತನ ಸಾನ್ನಿಧ್ಯವು ಆಯಾ ರೂಪದಿಂದ ನಮಗೆ ಗೋಚರವಾಗುತ್ತಿರುವದೆಂದು ನೆನೆಯುತ್ತಿರಬೇಕು.

ಹೀಗೆ ಬೇರೆಬೇರೆಯ ಭಾವಗಳಲ್ಲಿ ಭಗವಚ್ಚಿಂತನೆಯನ್ನು ಮಾಡುತ್ತಿರುವವನ ಮನಸ್ಸಿಗೆ ತನ್ನ ನಿತ್ಯಜೀವನಯಾತ್ರೆಯೇ ಪರಮೇಶ್ವರನಿಗಾಗಿ ಮಾಡುತ್ತಿರುವ ಪವಿತ್ರಯಾತ್ರೆಯಾಗಿ ಪರಿಣಮಿಸುತ್ತದೆ. ಅಂಥ ಉತ್ತಮಸಾಧಕನಿಗೇ ಸರ್ವಾತ್ಮ ಭಾವನೆಯು ಸುಲಭವಾಗಿ ದಕ್ಕುವದು. **ಸಂ–13, 150**

## ವಸಂತ

ವಸಂತಋತುವಿನ ತಂಗಾಳಿ ಮೊದಲಾಗಿದೆ. ಬೆಳದಿಂಗಳು ಎಲ್ಲರನ್ನೂ ಬೆರಗುಗೊಳಿಸುತ್ತಿದೆ. ಹೂಗಳ ಕಂಪು ಅಧ್ಯಾತ್ಮಜ್ಞಾನಮೀರುತ್ತಿದೆ. ಪ್ರಕೃತಿದೇವಿಯು ತನ್ನ ನಗೆ ಮೊಗವನ್ನು ಎಂದಿನಂತೆಯೇ ಇಟ್ಟುಕೊಂಡಿದಾಳೆ. ಆದರೆ ಮಾನವ, ನೀನೇನು ಮಾಡುತ್ತಿರುವೆ? ನಿನ್ನ ಮುಖದಲ್ಲೇಕೆ ಕಳೆ ಕಾಣಿಸದು?

ಗಿಡಗಳೂ ಮರಗಳೂ ಚಿಗರುತ್ತಿವೆ, ಹೂಗಳ ಮಿರುಗು ಹೆಚ್ಚುತ್ತಿದೆ. ಪ್ರಕೃತಿಯು ನಲಿದಾಡುತ್ತಿದಾಳೆ. ಆದರೆ ಮಾನವ, ನೀನೇಕೆ ಸಪ್ಪೆಯ ಜೋಲು ಮುಖವನ್ನು ಬಿಟ್ಟುಕೊಂಡಿರುವೆ?

ಗಿಡಗಳೆಲ್ಲ ಒಂದೇ ಜಾತಿಯವಲ್ಲ, ಮರಗಳೆಲ್ಲ ಒಂದೇ ಬಗೆಯಲ್ಲ. ಆದರೇನು? ಅವೆಲ್ಲಕ್ಕೂ ಒಂದೇ ನಿಯಮ. ಹೂಗಳೆಲ್ಲವೂ ಒಂದೇ ಆಕಾರವಲ್ಲ, ಒಂದೇ ಬಣ್ಣವಲ್ಲ, ಒಂದೇ ಕಂಪೂ ಅಲ್ಲ. ಆದರೇನು? ಅವೂ ಅದೇ ಒಂದೇ ನಿಯಮಕ್ಕೆ ಒಳಪಟ್ಟಿವೆ. ಅವುಗಳೆಲ್ಲವೂ ಒಂದೇ ಸಮನೆ ರಸವತ್ತಾಗುತ್ತಿವೆ, ಬೆಳೆಯುತ್ತಿವೆ, ಹಿಗ್ಗುತ್ತಿವೆ, ಅರಳುತ್ತಿವೆ. ಮಾನವ, ನಿನ್ನ ಕುಲದವರು ಹೊರಗೆ ಬೇರೆಬೇರೆಯ ಆಕಾರವಾಗಿ ಕಾಣುತ್ತಿರಬಹುದು, ಬೇರೆಬೇರೆಯ ಬಣ್ಣವಾಗಿ ಬೇರೆಬೇರೆಯ ರೂಪವಾಗಿ ಬೇರೆಬೇರೆಯ ಸಂಸ್ಕೃತಿಯುಳ್ಳವರಾಗಿರಬಹುದು. ಆದರೆ ನೀವೆಲ್ಲರೂ ಪಡೆಯುತ್ತಿರುವಿರಿ. ಆತನ ಪ್ರೇರಣೆಗನುಸಾರವಾಗಿ ನಡೆಯುವದನ್ನು ಕಲಿ. ನಿನ್ನದೇ ಅಡ್ಡದಾರಿಯೊಂದನ್ನು ತೆಗೆಯಬೇಡ ! **ಸಂ–13, 193**

## ಮೂಲಮಂತ್ರ

ತಾನು ಯಾರು? ತಾನು ಪಡೆಯಬೇಕಾಗಿರುವ ಉತ್ತಮಗತಿ ಯಾವುದು? ಆ ಗತಿಯನ್ನು ಹೊಂದುವ ಉಪಾಯವು ಯಾವುದು?–ಈ ಮೂರೇ ಮನುಷ್ಯನಿಗೆ ಬೇಕಾಗಿರುವ ತಿಳಿವಳಿಕೆಗಳು. ಮನುಷ್ಯನು ಈ ಮೂರನ್ನಲ್ಲದೆ ಮತ್ತೆ ಯಾವದನ್ನೂ ತಿಳಿಯಬೇಕೆಂದು ಇಷ್ಟಪಡುವದಿಲ್ಲ.

ಮೂಲಮಂತ್ರ, ದ್ವಯಮಂತ್ರ, ಚರಮಮಂತ್ರ–ಈ ಮೂರಕ್ಕೂ ರಹಸ್ಯತ್ರಯವೆಂದು ಶ್ರೀವೈಷ್ಣವರ ಸಂಕೇತವಿದೆ. ರಹಸ್ಯತ್ರಯದಲ್ಲಿ ಸಕಲ ಶ್ರುತಿಸ್ಮೃತಿಪುರಾಣೇತಿಹಾಸಗಳ

ಸಾರವೂ ಅಡಕವಾಗಿರುವದೆಂದು ಅವರು ನಂಬುತ್ತಾರೆ. ಶ್ರೀವೈಷ್ಣವರು ಮಾತ್ರವೇ ಅಲ್ಲದೆ ಎಲ್ಲರೂ ಅರಿತಿರಬೇಕಾದಂತಹ ಮಹಾವಿಷಯಗಳು ಇವುಗಳಲ್ಲಿ ಅಡಗಿರುತ್ತವೆ.

ಮಂತ್ರಗಳಲ್ಲೆಲ್ಲ ಶ್ರದ್ಧೆಯೇ ಮುಖ್ಯವಾದ್ದರಿಂದ ಇದರಲ್ಲಿ ಶ್ರದ್ಧೆಯಿಲ್ಲದ ನಾಸ್ತಿಕರಿಗೆ ಅಧಿಕಾರವಿಲ್ಲವು. ಮಂತ್ರದಲ್ಲಿಯಾಗಲಿ ಮಂತ್ರದ ದೇವತೆಯಲ್ಲಾಗಲಿ ಮಂತ್ರವನ್ನು ದಾನಮಾಡುವ ಗುರುವಿನಲ್ಲಾಗಲಿ ಶ್ರದ್ಧೆಯಿಲ್ಲದವನಿಗೆ ಮಂತ್ರವು ಎಂದೆಂದಿಗೂ ರಹಸ್ಯವಾಗಿಯೇ ಇರುವದು. ಅಂಥವನ ಕಿವಿಗೆ ಮಂತ್ರದ ಅಕ್ಷರಗಳು ಬಿದ್ದರೂ ಅವು ಮಂತ್ರವಾಗುವದಿಲ್ಲ; ಅವುಗಳ ಸಿದ್ಧಿಯೂ ಅಂಥವನಿಗೆ ಅಲ್ಲವೇ ಅಲ್ಲ.

ಪರಮಾತ್ಮನ ಸ್ವರೂಪವನ್ನು ಹೇಳುವ ಮಂತ್ರಗಳಲ್ಲೆಲ್ಲ ಮೂರು ಮಂತ್ರಗಳು ವ್ಯಾಪಕಮಂತ್ರಗಳು, ಎಂದರೆ ಪರಮಾತ್ಮನು ಸಕಲ ಜಗದ್ವ್ಯಾಪಕನೆಂದು ತಿಳಿಸುವ ಮಂತ್ರಗಳು. ನಾರಾಯಣಮಂತ್ರ, ವಾಸುದೇವಮಂತ್ರ, ವಿಷ್ಣುಮಂತ್ರ–ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ಮೂರೂ **"ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ತನ್ನೋ ವಿಷ್ಣುಃ ಪ್ರಚೋದಯಾತ್"** ಎಂಬ ವಿಷ್ಣು ಗಾಯತ್ರಿಯಲ್ಲಿ ಸೂಚಿತವಾಗಿರುವವು. ಇವುಗಳಲ್ಲಿ ಮೊದಲನೆಯದಾದ ನಾರಾಯಣಾಷ್ಟಾಕ್ಷರಿಯೇ ಮೂಲಮಂತ್ರವು, ಇದು ಮಂತ್ರಗಳಲ್ಲೆಲ್ಲ ಪರಮಮಂತ್ರವೆಂದೂ ಗುಹ್ಯಗಳಲ್ಲೆಲ್ಲ ಗುಹ್ಯ ವಾದದ್ದೆಂದೂ ಪವಿತ್ರವಾದವುಗಳಲ್ಲೆಲ್ಲ ಪವಿತ್ರವಾದದ್ದೆಂದೂ ಶಾಸ್ತ್ರವಚನವಿರುವದು.

ನಾರಾಯಣಾಷ್ಟಾಕ್ಷರಿಯ ಒಟ್ಟರ್ಥವೇನು? ಇದಕ್ಕೆ ಬೇರೆಬೇರೆಯ ಸಿದ್ಧಾಂತದವರು ಬೇರೆಬೇರೆಯ ಅರ್ಥವನ್ನು ಹೇಳುತ್ತಾರೆ. ಶ್ರದ್ಧಾವಂತರಿಗೆ ಆಯಾ ಅರ್ಥದ ಅನುಸಂಧಾನವೇ ಫಲಕಾರಿಯಾಗುತ್ತದೆ. ವಿಶಿಷ್ಟಾದ್ವೈತ ಸಿದ್ಧಾಂತದಂತೆ ಮಂತ್ರದ ಭಾವಾರ್ಥವೇನಾಗುವದೆಂದರೆ, "ಸರ್ವಜಗದ್ರಕ್ಷಕನೂ ಸರ್ವಾನ್ತರ್ಯಾಮಿಯೂ ಶ್ರೀಯಃಪತಿಯೂ ಆಗಿರುವ ಭಗವನ್ನಾರಾಯಣನಿಗೆ ನಾನು ಶೇಷನಾಗಿರುವೆನು. ನನಗೆ ಯಾವ ಸ್ವಾತಂತ್ರ್ಯವೂ ಇರುವದಿಲ್ಲ; ಎಲ್ಲಕ್ಕೂ ಶೇಷಿಯಾಗಿರುವ ಶ್ರೀಮನ್ನಾರಾಯಣ ನಿಗಾಗಿಯೇ ಸರ್ವದೇಶದಲ್ಲಿಯೂ ಸರ್ವಕಾಲದಲ್ಲಿಯೂ ಸರ್ವಾವಸ್ಥೆಗಳಲ್ಲಿಯೂ ಸರ್ವವಿಧದಿಂದಲೂ ನಾನು ಕೈಂಕರ್ಯವನ್ನು ಮಾಡುವೆನು. ಈ ಅರ್ಥವು ಮಂತ್ರದ ಅಕ್ಷರಗಳಿಂದ ಹೇಗೆ ಹೊರಡುವದೆಂಬುದನ್ನು ಬಲ್ಲವರಿಂದ ಕೇಳಿತಿಳಿದುಕೊಳ್ಳಬೇಕು.

ಮಂತ್ರವನ್ನು ಭಕ್ತಿಯಿಂದ ಉಚ್ಚರಿಸುವಾತನು ಇದರ ಅರ್ಥವನ್ನು ಹೇಗೆ ಅನುಸಂಧಾನಮಾಡಬೇಕೆಂಬ ವಿಷಯದಲ್ಲಿ ಶ್ರೀ ಪರಾಶರಭಟ್ಟಾರಕಸ್ವಾಮಿಗಳವರು ಹೀಗೆಂದು ಬರೆದಿರುವರು: **"ದೇಹಾಸಕ್ತಾತ್ಮಬುದ್ಧಿರ್ಯದಿ ಭವತಿ ಪದಂ ಸಾಧು ವಿದ್ಯಾತ್ ತೃತೀಯಂ । ಸ್ವಾತನ್ತ್ರ್ಯಾನ್ಧೋ ಯದಿ ಸ್ಯಾತ್ ಪ್ರಥಮಮಿತರಶೇಷತ್ವಧೀಶ್ಚೇದ್ದ್ವಿತೀಯಮ್॥**

**ಆತ್ಮತ್ರಾಣೋನ್ಮುಖಶ್ಚೇನ್ನಮ ಇತಿ ಚ ಪದಂ ಬಾನ್ಧವಾಭಾಸಲೋಲಃ । ಶಬ್ದಂ ನಾರಾಯಣಾಖ್ಯಂ ವಿಷಯಚಪಲಧೀಶ್ಚೇಚ್ಚತುರ್ಥೀಂ ಪ್ರಪನ್ನಃ ॥"** ಇದರ ತಾತ್ಪರ್ಯವೇನೆಂದರೆ ಭಗವಂತನಲ್ಲಿ ಪ್ರಪನ್ನನಾಗಿರುವಾತನಿಗೆ ತಾನೇ ದೇಹವೆಂಬ ಭ್ರಮೆಯು ಬಂದೊದಗಿದಾಗ ಪ್ರಣವದಲ್ಲಿರುವ ಮಕಾರಾರ್ಥವನ್ನು–ಎಂದರೆ ತಾನು ಜ್ಞಾನಾಶ್ರಯನೂ ಜ್ಞಾನಸ್ವರೂಪನೂ ಆಗಿರುವೆನೆಂಬುದನ್ನು–ಅನುಸಂಧಾನಮಾಡಬೇಕು; ತಾನು ಸ್ವತಂತ್ರನೆಂಬ ತಪ್ಪುತಿಳಿವು ಉಂಟಾದಾಗ ಪರಮಾತ್ಮನೇ ಸಕಲಜಗದ್ರಕ್ಷಕನು. ಸರ್ವಾನ್ತರ್ಯಾಮಿಯು ಎಂಬ ಅಕಾರಾರ್ಥವನ್ನು ಅನುಸಂಧಾನಮಾಡಬೇಕು; ತಾನು ಮತ್ತೊಬ್ಬರಿಗೆ ಶೇಷನೆಂಬ ಬುದ್ಧಿಯು ತಲೆ ಎತ್ತಿದಾಗ ಅನನ್ಯಶೇಷತ್ವವನ್ನು ತಿಳಿಸುವ ಉಕಾರಾರ್ಥವನ್ನು ಅನುಸಂಧಾನಮಾಡಬೇಕು. ತನ್ನನ್ನು ತಾನು ಕಾಪಾಡಿಕೊಳ್ಳುವದರಲ್ಲಿ ಪ್ರವೃತ್ತಿಯುಂಟಾದರೆ ಯಾವಾಗಲೂ ಭಗವಂತನ ಕಾರ್ಯವನ್ನೇ ಮಾಡಬೇಕೆಂಬರ್ಥದ 'ನಮಃ' ಎಂಬ ಪದವನ್ನು ನೆನಸಿಕೊಳ್ಳಬೇಕು; ಬಾಂಧವರಲ್ಲಿ ಆಸಕ್ತಿಯು ಮಿತಿಮೀರಿ ಬಲಿತುಕೊಂಡಾಗ ನಾರಾಯಣಶಬ್ದವನ್ನು ನೆನಸಿಕೊಳ್ಳಬೇಕು; ವಿಷಯಗಳಲ್ಲಿ ಬುದ್ಧಿಯು ಆಸಕ್ತವಾದಾಗ ಭಗವತ್ಕೈಂಕರ್ಯವೇ ಭೋಗ್ಯವು, ಮತ್ತು ಬೇಕಾದದ್ದು–ಎಂಬ ಚತುರ್ಥಿವಿಭಕ್ತಿಯರ್ಥವನ್ನು ನೆನಸಿಕೊಳ್ಳಬೇಕು. ಹೀಗೆ ಮಾಡುವದರಿಂದ ಸಕಲ ಅನಿಷ್ಟ ನಿವೃತ್ತಿಗಳೂ ಆಗುವವು, ಸಕಲ ಇಷ್ಟಾರ್ಥಗಳೂ ನೆರವೇರುವವು–ಎಂಬುದು ಮೇಲಿನ ಶ್ಲೋಕದ ಆಶಯವು. **ಸಂ–7, 288**

# ದ್ವಯಮಂತ್ರ

ದ್ವಯಮಂತ್ರವು ಮೂಲಮಂತ್ರದ ವ್ಯಾಖ್ಯಾನರೂಪವಾಗಿರುವದು. ಮೂಲಮಂತ್ರದ ಎರಡನೆಯ ಪದವಾದ "ನಮಃ" ಎಂಬ ಮಾತಿನಲ್ಲಿ ಸಂಗ್ರಹವಾಗಿ ಹೇಳಿರುವ ಉಪಾಯವನ್ನು ಮೂರನೆಯ ಪದದಲ್ಲಿ ಸಂಗ್ರಹವಾಗಿ ಹೇಳಿರುವ ಪುರುಷಾರ್ಥವನ್ನೂ ಇಲ್ಲಿ ವಿಸ್ತರಿಸಿ ಹೇಳಿರುತ್ತದೆ. ಹೀಗೆ ಉಪಾಯ ಮತ್ತು ಪುರುಷಾರ್ಥ–ಎಂಬ ಎರಡನ್ನೂ ತಿಳಿಸಿಕೊಡುವದರಿಂದ ಇದಕ್ಕೆ ದ್ವಯಮಂತ್ರವೆಂಬ ಹೆಸರು ಬಂದಿರುತ್ತದೆ.

ದ್ವಯಮಂತ್ರವು ಶ್ರೌತವೊ, ತಾಂತ್ರಿಕವೊ?– ಎಂದು ವಿಚಾರಿಸಿದರೆ ಇದು ಶ್ರುತಿಮೂಲಕವಾದ ತಾಂತ್ರಿಕಮಂತ್ರವೆಂದು ಹೇಳಬೇಕಾಗುವದು.

**"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ। ತಾಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ॥"**

–ಇದೇ ಮುಂತಾದ ಶ್ರುತಿಗಳಲ್ಲಿ ಈ ಮಂತ್ರದ ಅರ್ಥವು ಕಂಡುಬರುವದರಿಂದಲೂ ಶ್ರೀಪ್ರಶ್ನ ಸಂಹಿತೆಯೇ ಮುಂತಾದ ಕಡೆಯಲ್ಲಿ ಮಂತ್ರೋದ್ಧಾರವೇ ಮುಂತಾದದ್ದನ್ನು

ಹೇಳಿರುವದರಿಂದಲೂ ಇದು ಶ್ರುತಿಮೂಲಕವಾದ ತಾಂತ್ರಿಕಮಂತ್ರವಾಗಿರುತ್ತದೆ ಯೆನ್ನಬೇಕಾಗಿದೆ.

ದ್ವಯಮಂತ್ರದಲ್ಲಿ ಎರಡು ಭಾಗಗಳಿರುವವು. ಇವುಗಳಲ್ಲಿ ಮೊದಲನೆಯ ಭಾಗವು ಉಪಾಯವನ್ನು ಎಂದರೆ ಸಾಧನವನ್ನು ಹೇಳುತ್ತದೆ; ಎರಡನೆಯದು ಉಪೇಯವನ್ನು ಎಂದರೆ ಪುರುಷಾರ್ಥವನ್ನು ಹೇಳುತ್ತದೆ. ಮೊದಲನೆಯ ಭಾಗವು ಹೇಗಿರುವದೆಂದರೆ **"ಶ್ರೀಮನ್ನಾರಾಯಣಚರಣೌ ಶರಣಂ ಪ್ರಪದ್ಯೇ"**. ಇಲ್ಲಿ ಶ್ರೀಯೆಂದರೆ ಭಗವಂತನನ್ನು ಆಶ್ರಯಿಸಿರುವ ಲಕ್ಷ್ಮೀದೇವಿಯೆಂದರ್ಥ. ಶ್ರೀದೇವಿಯು ಸಮಸ್ತಚೇತನಾಚೇತನಗಳ ಪುರುಷಕಾರಭೂತಳೂ ಪ್ರಾಪ್ಯಳೂ ಆಗಿರುತ್ತಾಳೆ; ಆದರೆ ಇಲ್ಲಿ "ಪುರುಷಕಾರಳಾದ" ಎಂಬುದಿಷ್ಟೇ ವಿವಕ್ಷಿತವಾಗಿದೆ. ಸಮಸ್ತಚೇತನರಿಗೂ ತಾಯಿಯಂತಿದ್ದು ಪರಮಾತ್ಮನ ಪತ್ನಿಯಾಗಿರುವದರಿಂದ ಆಕೆಯ ಮೂಲಕವಾಗಿ ಭಗವಂತನನ್ನು ಶರಣುಹೊಂದಿದವ ರನ್ನು ಆತನು ಅವಶ್ಯವಾಗಿ ಕ್ಷಮಿಸುತ್ತಾನೆ. ನಾರಾಯಣಶಬ್ದಕ್ಕೆ ಆಶ್ರಯಿಸುವದಕ್ಕೆ ತಕ್ಕ ಗುಣಗಳುಳ್ಳಾತನು-ಎಂದರ್ಥ. ಪರಮಾತ್ಮನಲ್ಲಿ ವಾತ್ಸಲ್ಯ, ಸ್ವಾಮಿತ್ವ, ಸೌಲಭ್ಯ, ಸೌಶೀಲ್ಯ-ಎಂಬ ನಾಲ್ಕು ಗುಣಗಳಿರುವದರಿಂದ ಆತನನ್ನು ಆಶ್ರಯಿಸುವದು ಸುಕರವಾಗಿರುವದು. ಆತನಲ್ಲಿ ಜ್ಞಾನ, ಶಕ್ತಿ, ಪೂರ್ತಿ (ಆಪ್ತಕಾಮತ್ವ), ಪ್ರಾಪ್ತಿ (ಸರ್ವರಿಗೂ ಶೇಷಿಯಾಗಿಯೇ ಇರುವದು)-ಎಂಬ ಗುಣಗಳಿರುವದರಿಂದ ಆಶ್ರಯಿಸಿದವರ ಕಾರ್ಯವನ್ನು ಈಡೇರಿಸು ವದಕ್ಕೆ ಆತನು ತಕ್ಕವನಾಗಿರುತ್ತಾನೆ. ಹೀಗೆ ಈ ಎರಡು ಬಗೆಯ ಗುಣಗಳಿರುವಾತನು ಎಂಬುದನ್ನು ನಾರಾಯಣ ಶಬ್ದವು ಸೂಚಿಸುತ್ತದೆ. ಇಂಥ ಶ್ರೀಮನ್ನಾರಾಯಣನ ಪದಕಮಲಗಳನ್ನು ನಾನು ಶರಣುಹೊಕ್ಕಿದ್ದೇನೆ-ಎಂಬುದು ಮಂತ್ರದ ಮೊದಲನೆಯ ಭಾಗದ ಅರ್ಥವು. ಶರಣವೆಂದರೆ ಇಲ್ಲಿ ಉಪಾಯವು-ಎಂದರ್ಥ. ಆತನೇ ಪ್ರಾಪ್ಯನು, ಆತನೇ ಪ್ರಾಪಕನು-ಎಂಬರ್ಥವು ಈ ಮಾತಿನಿಂದ ಸೂಚಿತವಾಗುವದು. ಮೇಲೆ ವಿವರಿಸಿದಂಥ ಪರಮಾತ್ಮನ ಪಾದಕಮಲಗಳನ್ನೇ ಪುರುಷಾರ್ಥಸಾಧನವೆಂದು ನಾನು ಮನಸ್ಸಿನಲ್ಲಿ ನೆರೆನಂಬಿರುತ್ತೇನೆ-ಎಂದು ಒಟ್ಟರ್ಥವಾಯಿತು.

ಇನ್ನು **"ಶ್ರೀಮತೇ ನಾರಾಯಣಾಯ ನಮಃ"** ಎಂಬ ಎರಡನೆಯ ಭಾಗದ ಅರ್ಥವಿವೇಚನೆಗೆ ತೆರಳೋಣ. ಇದು ಮೊದಲೇ ತಿಳಿಸಿರುವಂತೆ ಪ್ರಾಪ್ಯಸ್ವರೂಪವನ್ನು ತಿಳಿಸುವದು. ಉಪಾಯಪರವಾದ ಹಿಂದಿನಭಾಗದಲ್ಲಿ ಶ್ರೀಮತ್ ಎಂಬ ಶಬ್ದಕ್ಕೆ 'ಪುರುಷ ಕಾರಸ್ವರೂಪಗಳಾದ ಲಕ್ಷ್ಮಿಯಿಂದ ಯಾವಾಗಲೂ ಕೂಡಿದ' ಎಂದು ಅರ್ಥಮಾಡಿತ್ತಷ್ಟೆ; ಪ್ರಾಪ್ಯಪರವಾದ ಈ ಭಾಗದಲ್ಲಿ ಪ್ರಾಪ್ಯಳಾದ ಲಕ್ಷ್ಮಿಯಿಂದ ಕೂಡಿದ ಎಂದರ್ಥ. ಭಗವಂತನ ಪ್ರಾಪ್ಯತ್ವವಸ್ಥೆಯಲ್ಲಿ ತಾನೂ ಪ್ರಾಪ್ಯಳಾಗಿ ಶ್ರೀದೇವಿಯು ಕೈಂಕರ್ಯದ ವೃದ್ಧಿಯನ್ನುಂಟುಮಾಡುತ್ತಾಳೆಂಬುದನ್ನು ಈ ಶಬ್ದವು ಸೂಚಿಸುತ್ತದೆ. 'ನಾರಾಯಣಾಯ ನಮಃ' ಎಂಬುದಕ್ಕೆ ಸಮಸ್ತಕಲ್ಯಾಣಗುಣಾಕರನಾಗಿಯೂ ಸರ್ವಶೇಷಿಯಾಗಿಯೂ ದಿವ್ಯ

ಮಂಗಲ ವಿಗ್ರಹಯುಕ್ತನಾಗಿಯೂ ಇರುವ ಭಗವಂತನ ಕೈಂಕರ್ಯವನ್ನು ಮಾಡುತ್ತೇನೆ-ಎಂದರ್ಥ. ಕೈಂಕರ್ಯವು ಸೇವಾರೂಪವಾಗಿರುವದರಿಂದ ಲೋಕದಲ್ಲಿ ದುಃಖರೂಪವಾಗಿದ್ದರೂ ತನಗೆ ಇಷ್ಟವಾದ ಕಡೆಯಲ್ಲಿ ಸುಖರೂಪವಾಗಿರುವದು ಪ್ರಸಿದ್ಧವಾಗಿರುತ್ತದೆ. ಆದ್ದರಿಂದ ಭಗವಂತನು ಎಲ್ಲರಿಗೂ ಬೇಕಾದವನಾಗಿರುವನಾದ್ದರಿಂದ ಆತನ ಕೈಂಕರ್ಯವು ಸುಖರೂಪವಾಗಿಯೇ ಇರುವದೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ.

ಅಂತೂ ದ್ವಯಮಂತ್ರದ ಒಟ್ಟು ತಾತ್ಪರ್ಯವೇನಾಯಿತೆಂದರೆ, ಪರಮಾತ್ಮನು ಆಶ್ರಯಣಕ್ಕೆ ತಕ್ಕ ಸಮಸ್ತಗಳಿಂದ ಕೂಡಿದವನು. ಆತನನ್ನು ಆಶ್ರಯಿಸುವದೆಂಬುದು ಸುಕರವಾಗಿರುವದು. ಆತನ ಆಶ್ರಯದಿಂದ ಸುಖೋಲ್ಲಾಸಕ್ಕೆ ಕಾರಣವಾಗಿರುವ ಆತನ ಕೈಂಕರ್ಯವು ದೊರಕುವದು. ಮನುಷ್ಯನಿಗೆ ಬೇಕಾದದ್ದು ಆದಷ್ಟು ಹೆಚ್ಚಿನ ಸುಖವು. ಇದು ಭಗವಂತನ ಕೈಂಕರ್ಯದಿಂದಲೇ ದೊರೆತು ಅದರಿಂದಲೇ ಬೆಳೆಯುತ್ತಿರುವದು. ಇದಕ್ಕೆ ಸಾಧನವೂ ಭಗವಂತನೇ. ಮನುಷ್ಯನು ತಪ್ಪು ತಿಳಿವಳಿಯಿಂದ ಸುಖಕ್ಕೆ ಸಾಧನವು ಯಾವದು, ಸುಖವು ಎಲ್ಲಿ ಹೇಗೆ ದೊರಕುತ್ತದೆ?–ಎಂಬುದನ್ನರಿಯದೆ ವಿಷಯಗಳನ್ನು ನಂಬಿ ಸಂಕಪಡುತ್ತಿರುವನು. ವಿಷಯಗಳಲ್ಲಿ ಸುಖವಿಲ್ಲ, ಅವುಗಳ ಸಂಗವನ್ನು ವಾಸನಾ ತ್ಯಾಗಪೂರ್ವವಾಗಿ ಕೈಬಿಟ್ಟು ಭಗವಂತನೇ ತನಗೆ ಗತಿಯೆಂದು ನಂಬಿ, ಆತನನ್ನೇ ತನ್ನ ಸಾಧನಕ್ಕೆ ನೆರವಾಗಿ ತೆಗೆದುಕೊಳ್ಳಬೇಕು. ಯಾವದೊಂದು ಸಂದೇಹವೂ ಇಲ್ಲದೆ ವಿಶ್ವಾಸದಿಂದ ಭಗವಂತನನ್ನು ಆಶ್ರಯಿಸಿದರೆ ಪರಮಪುರುಷಾರ್ಥವು ಅವಶ್ಯವಾಗಿ ದೊರೆಯುವದು. ಆದ್ದರಿಂದ ಇದೊಂದು ಸಾಧನವನ್ನೇ ಕೈಕೊಳ್ಳಬೇಕು, ಇದನ್ನು ಉಪದೇಶಿಸುವ ಆಚಾರ್ಯರಲ್ಲಿ ಶ್ರದ್ಧೆಯನ್ನಿಡಬೇಕು, ಇದನ್ನನುಷ್ಠಾನಮಾಡುವಂಥ ಸಾತ್ತ್ವಿಕಸಹವಾಸದಿಂದ ಈ ಅನುಷ್ಠಾನದಲ್ಲಿ ಪ್ರೀತಿಯನ್ನು ಹೆಚ್ಚಿಸಿಕೊಳ್ಳಬೇಕು.

ಸಂ–7, 358

## ಚರಮಶ್ಲೋಕ

ಶ್ರೀವೈಷ್ಣವರಿಗೆ ಪರಮಮಾನ್ಯವಾಗಿರುವದು ರಹಸ್ಯತ್ರಯವು. ಇದರಲ್ಲಿ ಅಡಕವಾಗಿರುವ ಮೊದಲೆರಡು ಮೂಲಮಂತ್ರ, ದ್ವಯಮಂತ್ರಗಳು ಮೂರನೆಯದಾದದ್ದು, ಚರಮಶ್ಲೋಕ.

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥" ಎಂಬ ಗೀತಾಶ್ಲೋಕಕ್ಕೆ ಚರಮಶ್ಲೋಕವೆಂದು ಹೆಸರು. ಈ ಶ್ಲೋಕದಲ್ಲಿ ಕೊನೆಯ ಉಪಾಯವನ್ನು ತಿಳಿಸಿರುವದರಿಂದ ಇದಕ್ಕೆ ಚರಮಶ್ಲೋಕವೆಂದು ಹೆಸರು.

"ಸರ್ವಧರ್ಮಾನ್ ಪರಿತ್ಯಜ್ಯ" (ಎಲ್ಲಾ ಧರ್ಮಗಳನ್ನೂ ಬಿಟ್ಟು): ಮೋಕ್ಷರೂಪಫಲಕ್ಕೆ ಸಾಧನವಾಗಿರುವದನ್ನೇ ಧರ್ಮವೆಂದು ಕರೆದಿದೆ, ಮಕ್ಕಳುಮರಿಗಳು, ದನಕರು, ಅನ್ನಬಟ್ಟೆ –ಮುಂತಾದ ಐಹಿಕಫಲಕ್ಕೆ ಸಾಧನವಾದದ್ದನ್ನಾಗಲಿ ಸ್ವರ್ಗವೇ ಮುಂತಾದ ಪರಲೋಕ ದಲ್ಲಾಗುವ ಫಲಕ್ಕೆ ಸಾಧನವಾದದ್ದನ್ನಾಗಲಿ ಇಲ್ಲಿ ಧರ್ಮವೆಂಬ ಮಾತಿನಿಂದ ಹೇಳಿರು ವದಿಲ್ಲ. ಇದು ಮೋಕ್ಷೋಪದೇಶಪ್ರಕರಣವಾದ್ದರಿಂದಲೇ ಈ ಅರ್ಥವನ್ನು ಸ್ವೀಕರಿಸಬೇಕು.

**ಧರ್ಮಗಳು** ಎಂಬ ಬಹುವಚನದಿಂದ ಮೋಕ್ಷಕ್ಕೆ ಕಾರಣವಾಗಿರುವ ಕರ್ಮ, ಜ್ಞಾನ, ಭಕ್ತಿ, ಅವತಾರರಹಸ್ಯಜ್ಞಾನ, ಪುರುಷೋತ್ತಮವಿದ್ಯೆ, ದಿವ್ಯದೇಶವಾಸ, ಭಗವನ್ನಾಮಕೀರ್ತನೆ–ಮುಂತಾದವುಗಳನ್ನು ಸ್ವೀಕರಿಸಬೇಕು. ಏಕೆಂದರೆ ಇವುಗಳನ್ನೆಲ್ಲ ಗೀತೆಯಲ್ಲಿ ಮೋಕ್ಷೋಪಾಯವನ್ನಾಗಿ ಹಿಂದೆ ಭಗವಂತನು ಅಲ್ಲಲ್ಲಿ ಹೇಳಿರುತ್ತಾನೆ. ಅಂತೂ ನಿತ್ಯನೈಮಿತ್ತಿಕಾದಿಗಳಿಂದೊಡಗೂಡಿದ ಕರ್ಮಯೋಗವೇ ಮುಂತಾದ ಮೋಕ್ಷೋಪಾಯಗಳೆಲ್ಲವನ್ನೂ ಬಿಟ್ಟು ಎಂಬುದು "ಸರ್ವಧರ್ಮಾನ್ ಪರಿತ್ಯಜ್ಯ" ಎಂಬುದರ ಅರ್ಥವಾಯಿತು.

ಇಲ್ಲಿ ಈ ಉಪಾಯಗಳ **"ಪರಿತ್ಯಾಗ"** (ಸರಿಯಾಗಿ ಬಿಡುವದನ್ನು) ಮಾಡಬೇಕೆಂದು ಹೇಳಿರುವದರ ಸ್ವಾರಸ್ಯವೇನೆಂದರೆ ಇವುಗಳನ್ನು ಸ್ವರೂಪದಿಂದಲೇ ಬಿಡಬೇಕೆಂದರ್ಥವಲ್ಲ, ಈ ಉಪಾಯಗಳಲ್ಲಿರುವ ಉಪಾಯತ್ವಾಕಾರವನ್ನು ಬಿಡಬೇಕೆಂದರ್ಥ. ಆದ್ದರಿಂದ ಕರ್ಮಜ್ಞಾನಾದಿಗಳಲ್ಲಿ ಇವುಗಳೇ ಮೋಕ್ಷೋಪಾಯವೆಂಬ ಬುದ್ಧಿಯನ್ನು ಬಿಡುವದೇ ಸರ್ವಧರ್ಮಗಳ ಪರಿತ್ಯಾಗವು.

ಈ ತ್ಯಾಗವನ್ನು ಮಾಡಿದ ಮೇಲೆ ಏನು ಮಾಡಬೇಕೆಂಬುದನ್ನು "ಮಾಮೇಕಂ ಶರಣಂ ವ್ರಜ" (ನನ್ನನ್ನೊಬ್ಬನನ್ನೇ ಶರಣುಹೊಂದು)–ಎಂಬ ಪಾದವು ತಿಳಿಸುವದು. ಇಲ್ಲಿ "ಮಾಮೇಕಂ" ಎಂದರೆ ನನ್ನನ್ನೊಬ್ಬನನ್ನೇ ಎಂದರ್ಥ. ಮಿಕ್ಕ ಉಪಾಯಗಳಲ್ಲಿ ಉಪಾಯಬುದ್ಧಿಯನ್ನು ಬಿಟ್ಟು ಭಕ್ತಪರಾಧೀನನಾದ ನನ್ನನ್ನೊಬ್ಬನನ್ನೇ ಶರಣುಹೊಂದು ಎಂದಭಿಪ್ರಾಯ. ಇಲ್ಲಿ ನನ್ನನ್ನೇ ಶರಣುಹೊಂದು ಎಂದದ್ದರಿಂದ ಮುಖ್ಯವಾಗಿ ನಾನೇ ಮೋಕ್ಷೋಪಾಯನೆಂದು ನಿಶ್ಚಯಿಸಿಕೋ–ಎಂದು ಮಾನಸಶರಣಾಗತಿಯನ್ನೇ ಪ್ರಧಾನ ವಾಗಿ ಹೇಳಿರುತ್ತದೆ ಎಂದರಿಯಬೇಕು. ಇಲ್ಲಿ ಶರಣಾಗತಿಯು ಕೂಡ ಉಪಾಯವಲ್ಲ, ಭಗವಂತನೇ ಮುಖ್ಯೋಪಾಯನಾಗಿರುತ್ತಾನೆಂಬುದನ್ನು ಮರೆಯದಿರಬೇಕು.

ಭಗವಂತನನ್ನೇ ಉಪಾಯವೆಂದು ಸ್ವೀಕರಿಸಿದರೆ ಆಗುವದೇನೆಂಬುದನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿರುತ್ತದೆ. ಅದರಲ್ಲಿ "ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿ–ಷ್ಯಾಮಿ" (ನಾನು ನಿನ್ನನ್ನು ಸಕಲ ಪಾಪಗಳಿಂದಲೂ ಬಿಡುಗಡೆಹೊಂದಿಸುತ್ತೇನೆ)–ಎಂಬ ವಾಕ್ಯವು ಮುಖ್ಯಭಾಗವು. ಇಲ್ಲಿ ಪಾಪಗಳೆಂದರೆ ಭಗವಂತನನ್ನು ಪಡೆಯುವದಕ್ಕೆ

ಅಡ್ಡಿಯಾಗಿರುವ ಪಾಪಗಳು ಮತ್ತು ಪುಣ್ಯಗಳು. ಭಗವಂತನನ್ನು ಪಡೆದುಕೊಳ್ಳುವದೊಂದೇ ಮುಮುಕ್ಷುವಿಗೆ ಇಷ್ಟವಾಗಿರುವದರಿಂದ ಅದಕ್ಕಿಂತ ಬೇರೆಯಾಗಿರುವ ಅನಿಷ್ಟವಾದ ಪುಣ್ಯಗಳನ್ನು ಕೂಡ ಇಲ್ಲಿ ಪಾಪಗಳೆಂದೇ ಕರೆದಿರುತ್ತದೆ. ನರಕ ಯಾತನೆಯನ್ನು ಕೊಡುವ ಪಾಪಗಳಂತೂ ಅತ್ಯಂತ ಅನಿಷ್ಟವಾಗಿರುವದರಿಂದ ಅವುಗಳನ್ನು ಪಾಪಗಳೆಂದು ಕರೆದದ್ದು ಸಹಜವಾಗಿಯೇ ಇರುತ್ತದೆ. ಪುಣ್ಯಗಳು ಸ್ವರ್ಗಾದಿಗಳನ್ನು ಕೊಟ್ಟರೂ ಆ ಫಲಗಳು ಭಗವತ್ಪ್ರಾಪ್ತಿಗೆ ಅಡ್ಡಿಯಾಗಿರುವದರಿಂದ ಅವುಗಳನ್ನು ಕೂಡ ಈ ಗುಂಪಿನಲ್ಲಿಯೇ ಸೇರಿಸಿರುವದು ಯುಕ್ತವೇ ಆಗಿರುತ್ತದೆ.

ಮೋಕ್ಷಕ್ಕೆ ಉಪಾಯವೆಂದು ಭಕ್ತನು ಸ್ವೀಕರಿಸುವ ಭಗವಂತನು ಸ್ವತಃ ಸರ್ವಜ್ಞನು, ಸರ್ವಶಕ್ತನು, ಸರ್ವಸ್ವಾಮಿಯು; ಆದ್ದರಿಂದ ಆತನು ಪ್ರಸನ್ನನಾದ ಮೇಲೆ ಆತನಿಗೆ ಅಪ್ರಿಯವಾದ ಪಾಪಗಳಾಗಲಿ ಅವುಗಳ ಫಲಗಳಾಗಲಿ ಮತ್ತೆ ಎಂದಿಗೂ ಗಂಟು ಬೀಳಲಾರವು. ಆದ್ದರಿಂದಲೇ ಭಗವಂತನು 'ಎಲ್ಲಾ ಪಾಪಗಳಿಂದ ನಿನ್ನನ್ನು ಬಿಡುಗಡೆ ಹೊಂದಿಸುತ್ತೇನೆ' ಎಂದು ವಾಗ್ದಾನಮಾಡಿದ್ದಾನೆ.

"ಮಾ ಶುಚಃ" (ಶೋಚಿಸದಿರು): ಹೀಗೆ ಅವಿದ್ಯೆ, ಕರ್ಮ, ವಾಸನಾ, ರುಚಿ, ಪ್ರಕೃತಿಸಂಬಂಧ ಮತ್ತು ಪಾಪ-ಇವುಗಳೆಲ್ಲದರಿಂದಲೂ ನಾನು ನಿನ್ನನ್ನು ಬಿಡಿಸುತ್ತೇನಾದ್ದರಿಂದ ನೀನು ಶೋಕಿಸಬೇಡ ಎಂಬುದು ಈ ಎರಡು ಪದಗಳಿಗೆ ಅರ್ಥವು.

ಭಗವಂತನನ್ನು ಉಪೇಯವಾಗಿಯೂ ಉಪಾಯವಾಗಿಯೂ ಸ್ವೀಕರಿಸಿ ಆತನಲ್ಲಿ ಭರನ್ಯಾಸವನ್ನು ಮಾಡುವ ಶ್ರೀವೈಷ್ಣವಮಹನೀಯರುಗಳೆಲ್ಲರಿಗೂ ಈ ಲೇಖಕನ ವಂದನೆಗಳು.

**ಸಂ-10-24**

# ಸದ್ದರ್ಶನ

**ಭವನ್ತು ಸದ್ದರ್ಶನಸಾಧನಾನಿ ಪರಸ್ಯ ನಾಮಾಕೃತಿಭಿಃ ಸಪರ್ಯಾಃ**
**ಸದ್ವಸ್ತುನಿ ಪ್ರಾಪ್ತ ತದಾತ್ಮಭಾವಾ ನಿಷ್ಠೈವ ಸದ್ದರ್ಶನಮಿತ್ಯವೇಹಿ**

(ಶ್ರೀ ರಮಣಭಗವಾನರ ಸದ್ವಿದ್ಯೆ)

ಯಾರು ಯಾವ ಹೆಸರನ್ನಿಟ್ಟು ಯಾವ ರೂಪವನ್ನು ಭಜಿಸಿದರೂ ಅದು ನಾಮರೂಪ ರಹಿತನಾದ ಪರಿಪೂರ್ಣವಸ್ತುವಿನ ದರ್ಶನಕ್ಕೆ ಮಾರ್ಗವೇ ಹೊರತು ಸದ್ದರ್ಶನವಲ್ಲ. ಸತ್ಯವಸ್ತುವೇ ತಾನೆಂದು ತಿಳಿದು ತನ್ಮಯತ್ವವನ್ನು ಪಡೆಯುವದೇ ಸದ್ದರ್ಶನ. ಬ್ರಹ್ಮವೇ ನಾನೆಂಬ ಜ್ಞಾನದ ಹೊರತು ದುಃಖನಾಶವಿಲ್ಲ. ತಾನು ಬ್ರಹ್ಮವನ್ನು ಉಪಾಸನೆಮಾಡುವವನೆಂದೂ, ಬ್ರಹ್ಮವು ತನ್ನಿಂದ ಪೂಜೆಯನ್ನು ಮಾಡಿಸಿಕೊಳ್ಳ ತಕ್ಕದ್ದೆಂದೂ, ಎಲ್ಲಿಯವರೆಗೆ ಭೇದ ಭಾವನೆಯಿರುವದೋ ಅಲ್ಲಿಯವರೆಗೂ ಎಳ್ಳಷ್ಟಾದರೂ ದುಃಖವಿದ್ದೇ ಇರುವುದು.

ಭೇದವಿರುವವರೆಗೂ ದುಃಖಭಯಗಳು ತಪ್ಪಿದ್ದಲ್ಲ. ಕಠೋಪನಿಷತ್ತಿನಲ್ಲಿ ಯಮನು ನಚಿಕೇತನಿಗೆ ಇದನ್ನು ಈ ರೀತಿ ಸೂಚಿಸಿರುವನು: "ವಾಯು, ಸೂರ್ಯ, ಅಗ್ನಿ, ಇಂದ್ರ, ಮೃತ್ಯುದೇವತೆ ಇವರೆಲ್ಲಾ ಹಿಂದಿನ ಜನ್ಮದಲ್ಲಿ ಅನೇಕ ಧರ್ಮಕಾರ್ಯಗಳನ್ನು ಮಾಡಿದವ ರಾದರೂ ತಮ್ಮೊಳಗೆ ಆತ್ಮನಿಗೂ ಬ್ರಹ್ಮಕ್ಕೂ ಭೇದವನ್ನು ಮಾಡಿದ್ದರಿಂದ ಈ ಜನ್ಮದಲ್ಲಿ ಆ ಬ್ರಹ್ಮದ ಹೆದರಿಕೆಯಿಂದ ತಮ್ಮ ತಮ್ಮ ಉದ್ಯೋಗಗಳನ್ನು ಮಾಡುತ್ತಿರು ವರು". ಇದರ ಅರ್ಥವೇನೆಂದರೆ ಬ್ರಹ್ಮವೇ ತಾನೆಂಬ ಅಪರೋಕ್ಷಾನುಭವವನ್ನು ಪಡೆದವರಿಗೆ ಮಾತ್ರ ಈ ಲೋಕದ ಅಥವಾ ಪರಲೋಕದ ಭಯಗಳಿರುವದಿಲ್ಲ. ಬೆಂಕಿಗೆ ಅದರ ಜ್ವಾಲೆಯಿಂದಲೇ ಹೇಗೆ ತಾಪವಿಲ್ಲವೋ ಹಾಗೆಯೇ ಅಪರೋಕ್ಷಾ ನುಭವಿಗಳಿಗೆ ಎಲ್ಲವೂ ತಮ್ಮ ಸ್ವರೂಪವೇ ಆದ್ದರಿಂದ ಯಾವದರಿಂದಲಾಗಲಿ ತಾಪವುಂಟಾಗುವದಿಲ್ಲ.

ಬ್ರಹ್ಮಸಾಕ್ಷಾತ್ಕಾರವಾಗುವವರೆಗೂ, ಎಷ್ಟು ಶ್ರವಣಮಾಡಿದ್ದರೂ, ಎಷ್ಟು ಶಾಸ್ತ್ರಪಾಂಡಿತ್ಯ ವಿದ್ದರೂ ಸಂಶಯಗಳು ಇದ್ದೇ ಇರುವವು. ಸುಖಶಾಂತಿಗಳು ಶಾಶ್ವತವಾಗಿರಲಾರವು. ಬ್ರಹ್ಮಸಾಕ್ಷಾತ್ಕಾರದಿಂದಲೇ ಎಂದರೆ ಅಪರೋಕ್ಷಜ್ಞಾನದಿಂದಲೇ ಅಜ್ಞಾನವು ಬೇರುಸಹಿತ ನಾಶವಾಗಿ, ಅಜ್ಞಾನ ಮೂಲಕವಾದ ಸುಖದುಃಖಗಳನ್ನೊದಗಿಸುವ ಕರ್ಮಗಳು ಹೆಸರಿಲ್ಲದಂತಾಗುವವು.

**"ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್"**

ಎಂಬ ಶ್ವೇತಾಶ್ವತರೋಪನಿಷದ್ವಾಕ್ಯದಂತೆ ಈಶ್ವರನನ್ನು ತಮ್ಮ ಆತ್ಮನಲ್ಲಿ ಬಂದರೆ ಆತ್ಮನೆಂದೇ ಯಾವ ವಿದ್ವಾಂಸರು ನೋಡುವರೋ ಅವರಿಗೇ ಶಾಶ್ವತವಾದ ಸುಖವು. ಇತರರಿಗೆ ಇಲ್ಲ. ಪರಮಾತ್ಮಜ್ಞಾನದಿಂದ ಮಮಕಾರಕ್ಕೆ ಕಾರಣವಾದ ಹೃದಯಗ್ರಂಥಿ ಭೇದಿಸಲ್ಪಡುವದು. ಅಂದರೆ ದೇಹ, ದಾರ, ಪುತ್ರ, ಕ್ಷೇತ್ರ ಮುಂತಾದವುಗಳಲ್ಲಿರುವ ನನ್ನದೆಂಬ ಅಭಿಮಾನವು ಭೇದಿಸಲ್ಪಡುವದು; ಸರ್ವಸಂಶಯಗಳೂ ನಾಶವಾಗುವವು; ಕರ್ಮಜಾಲಗಳ ಫಲಗಳೂ ಬೇರಿಲ್ಲದಂತೆ ನಾಶವಾಗುವವು. (ಮುಂಡಕೋಪನಿಷತ್ತು, 2-2-6). "ಕೆಲವುಕಡೆ ಬರಿಯ ಕರ್ಮದಿಂದಲೂ, ಅಥವಾ ಜ್ಞಾನದೊಡನೆಕೂಡಿದ ಕರ್ಮದಿಂದಲೂ ಮೋಕ್ಷದ ನೆರಳು ತೋರಿದರೂ ಪರಮಾತ್ಮನನ್ನು ತನ್ನ ಆತ್ಮನೇ (ತಾನೇ) ಎಂದು ಅರಿತವನು ಸಂಸಾರವನ್ನು ದಾಟಿ ಅಮೃತತ್ವವನ್ನು ಪಡೆಯುವನೇ ಹೊರತು ಮೋಕ್ಷಕ್ಕೆ ಬೇರೆ ದಾರಿಯಿಲ್ಲವೆಂದು ಶ್ವೇತಾಶ್ವತರಶ್ರುತಿ ಹೇಳುವದು. (ತಮೇವ ವಿದಿತ್ವಾ ಅತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇ ಅಯನಾಯ).

ಇಂಥ ಫಲವನ್ನು ಹೊಂದುವ ಮಾರ್ಗವು ಯಾವದು? ಆತ್ಮನನ್ನು ಕಣ್ಣುಗಳಿಂದ ಗ್ರಹಿಸಲಾಗುವದಿಲ್ಲ. ವಾಕ್ಕು ಸಹ ಗ್ರಹಿಸಲಾರದು. ಇಂದ್ರಿಯಗಳಿಗೂ ಅದು ಅಂದ ಲಾರದು;

ತಪಸ್ಸಿನಿಂದಾಗಲಿ ವೈದಿಕಕರ್ಮಗಳಿಂದಾಗಲಿ ಪಡೆಯಲಾಗದು. ಆದರೆ ಈ ನಿರ್ಮಲಾಂತಃಕರಣದಿಂದ ಸರ್ವೇಂದ್ರಿಯಗಳನ್ನೂ ಹಿಡಿತದಲ್ಲಿಟ್ಟು, ಏಕಾಗ್ರಚಿತ್ತದಿಂದ ಆತ್ಮಧ್ಯಾನದಲ್ಲಿ ಮಗ್ನರಾದವರಿಗೆ ಮಾತ್ರ ಅದು ಸಾಧ್ಯ (ಮುಂಡಕೋಪನಿಷತ್ತು 3-1-8).

ಆದ್ದರಿಂದಲೇ ಶ್ರೀಕೃಷ್ಣಪರಮಾತ್ಮನು ಗೀತೆಯ ಆರನೆಯ ಅಧ್ಯಾಯದಲ್ಲಿ 45-46ನೆಯ ಶ್ಲೋಕಗಳ ಮೂಲಕ "ಅನೇಕ ಜನ್ಮಗಳ ಪುಣ್ಯಕರ್ಮಗಳಿಂದ ಪಾಪವೆಂಬ ಕಿಲ್ಬಿಷವನ್ನು ಯಾರು ತೊಳೆದುಕೊಂಡಿರುವರೋ, ಯಾರಿಗೆ ಮುಕ್ತಿಯು ಸಮೀಪದಲ್ಲಿರುವದೋ ಅವರು ಧ್ಯಾನಯೋಗವನ್ನು ಅವಲಂಬಿಸುವರು. ತಪಸ್ವಿಗಳಿಗಿಂತಲೂ, ಪರೋಕ್ಷಜ್ಞಾನಿಗಳಿಗಿಂತಲೂ, ಕರ್ಮಿಗಳಿಗಿಂತಲೂ, ಧ್ಯಾನಯೋಗಿಯು ಶ್ರೇಷ್ಠನು" ಎಂಬ ಅಭಿಪ್ರಾಯವನ್ನು ಸೂಚಿಸಿರುವನು.

ಆದುದರಿಂದ ಮನೋನಾಶವಾಸನಾಕ್ಷಯಗಳೆಂಬ ಹೆಚ್ಚಿನ ಸಂಪತ್ತನ್ನು ಕೈಸೇರಿಸುವ ಧ್ಯಾನಯೋಗವನ್ನು ಅವಲಂಬಿಸುವದು ಮುಮುಕ್ಷುಗಳ ಕರ್ತವ್ಯವಲ್ಲವೆ?

**ಓಂ ! ಶಾಂತಿಃ ! ಶಾಂತಿಃ !! ಶಾಂತಿಃ !!! ಸಮಸ್ತಲೋಕಾಸ್ಸುಖಿನೋ ಭವಂತು**

## ಸದ್ದರ್ಶನದ ಸೂಕ್ತಿಗಳು

1. " 'ಇದೆ', 'ಇದೆ'- ಎಂಬ ಅರಿವುಗಳು ನಿಜವಾಗಿಯೂ ಇರುವ ಒಂದಾನೊಂದು ತತ್ತ್ವವಿಲ್ಲದಿದ್ದರೆ ಉಂಟಾದಾವೇನು? ಆ ಇರವೆಂಬ ತತ್ತ್ವವೇ ಹೃದಯದಲ್ಲಿರುವ ಪರಮಾತ್ಮನು. ಆ ಅಮೇಯನಾದ ಅದ್ವಿತೀಯಾತ್ಮವನ್ನು ಸ್ಮರಣೆ ಮಾಡುವದು ಹೇಗೆ? ಆತನೇ ನಾನೆಂಬ ನಿಷ್ಠೆಯೇ ಆತನ ಸ್ಮರಣೆಯು"

2. "ಮೃತ್ಯುವಿಗೆ ಅಂಜಿ ಯಾರು ಮೃತ್ಯುಂಜಯನನ್ನು ಆಶ್ರಯಿಸುವರೋ ಅವರ ಅಹಂಬುದ್ಧಿಯು ಮೊದಲು ಮೃತ್ಯುವನ್ನೈದುವದು. ಸ್ವಭಾವದಿಂದಲೇ ಅಮೃತರಾಗಿರುವ ಅವರಿಗೆ ಆ ಮೇಲೆ ಮೃತಿ ಎಲ್ಲಿಂದ ಬರಬೇಕು?"

3. "ಜಗತ್ತು ಮನಸ್ಸಿನೊಡನೆ ಹುಟ್ಟುವದು, ಅದು ಹೋದರೆ ತಾನೂ ಇಲ್ಲವಾಗುವದು. ಆದ್ದರಿಂದ ಇದೆಲ್ಲವೂ ಮನೋವೃತ್ತಿಯಿಂದ ಬೆಳಗತಕ್ಕದ್ದಾಗಿರುವದು. ಮನಸ್ಸು, ಜಗತ್ತು- ಇವುಗಳ ಹುಟ್ಟುಹೊಂದುಗಳಿಗೆ ಆಶ್ರಯುವಾಗಿರುವ ಸದ್ವಸ್ತುವೊಂದೇ ಹುಟ್ಟುಹೊಂದುಗಳಿಲ್ಲದ್ದು."

4. "ಪರಮೇಶ್ವರನನ್ನು ಬೇರೆಬೇರೆ ನಾಮರೂಪಗಳಿಂದ ಪೂಜಿಸುವದು ಸದ್ದರ್ಶನಕ್ಕೆ ಸಾಧನವೇ ಸರಿ; ಆದರೆ ಸದ್ವಸ್ತುವೇ ನಾನೆಂಬ ನಿಷ್ಠೆಯೇ ನಿಜವಾದ ಸದ್ದರ್ಶನವು".

5. "ವಿದ್ಯೆಯಿಲ್ಲದೆ ಅವಿದ್ಯೆಯಿಲ್ಲ. ಅವಿದ್ಯೆಯಿಲ್ಲದೆ ವಿದ್ಯೆಯು ತೋರದು. ಇವೆರಡೂ ಯಾರಿಗೆ? -ಎಂಬುದನ್ನು ಯೋಚಿಸಿ ಆ ಮೂಲಸ್ವರೂಪದಲ್ಲಿ ನಿಲ್ಲುವದೇ ಪರಮಾರ್ಥವಾದ ವಿದ್ಯೆಯು".

6. "ನಿತ್ಯಸಿದ್ಧವಾಗಿರುವ ಸದ್ವಸ್ತುವಿನ ಸಿದ್ಧಿಯೇ ಸಿದ್ಧಿಯು. ಮಿಕ್ಕ ಸಿದ್ಧಿಗಳೆಲ್ಲ ಕನಸಿನಂತಿರುವವು. ಎಚ್ಚತ್ತವನಿಗೆ ಕನಸು ಹೇಗೆ ಸತ್ಯವಾಗಿದ್ದೀತು? ಸದ್ವಸ್ತುವಿನಲ್ಲಿ ನಿಂತವನು ಮತ್ತೆ ಮಾಯೆಯನ್ನು ಸೇರುವನೆ?"

7. "ದೇಹವು ನಾನು ಎಂದುಕೊಳ್ಳುವದಿಲ್ಲ, ನಿದ್ರೆಯಲ್ಲಿ ನಾನಿರಲಿಲ್ಲವೆಂದು ಯಾವನೂ ಎಂದುಕೊಳ್ಳುವದಿಲ್ಲ; ಯಾವದಿದ್ದರೆ ಎಲ್ಲವೂ ತೋರುವದೋ ಆ 'ನಾನು' ಎಂಬುದರ ತೌರುಮನೆಯನ್ನು ಸೂಕ್ಷ್ಮವಿಚಾರದಿಂದ ಕಂಡುಹಿಡಿ".

## ಅಮೃತಸ್ಯ ಪುತ್ರಾಃ

ಉಪನಿಷತ್ತಿನಲ್ಲಿ ಒಂದು ವಾಕ್ಯವಿದೆ. "ಶೃಣ್ವನ್ತು ಸರ್ವೇ ಅಮೃತಸ್ಯ ಪುತ್ರಾಃ" ಅಮೃತನ ಪುತ್ರರೆಲ್ಲರೂ ಇದನ್ನು ಕೇಳಬೇಕು ಎಂದು ಅದರ ಅರ್ಥ. ನಾವುಗಳೆಲ್ಲರೂ ಅಮೃತರೂಪನಾದ ಪರಮೇಶ್ವರನ ಪುತ್ರರೆಂಬ ಭಾವನೆಯು ನಮ್ಮ ಮನಸ್ಸಿನಲ್ಲಿ ಮೂಡುತ್ತಾ ಬಂದ ಹಾಗೆಲ್ಲ ನಮ್ಮಲ್ಲಿ ಆಗುವ ಪರಿಣಾಮಗಳನ್ನು ಮನದಂದು ಕೊಳ್ಳುವದಕ್ಕೆ ಪ್ರಯತ್ನಿಸುವದು ಲಾಭದಾಯಕವಾಗಿರುತ್ತದೆ.

ನಾವು ಈಶ್ವರನ ಪುತ್ರರು. ಈಶ್ವರನು ಅಮೃತಸ್ವರೂಪನು; ಆತನಿಗೆ ಯಾವ ಮರಣವೂ ಇಲ್ಲ. ಈಶ್ವರನು ನಿತ್ಯಶುದ್ಧನು; ಆತನಿಗೆ ಯಾವ ದೋಷವೂ ಅಂಟದು. ಈಶ್ವರನು ನಿತ್ಯಬುದ್ಧನು; ಆತನಿಗೆ ಅಜ್ಞಾನದ ಸಂಬಂಧವು ಎಳ್ಳಷ್ಟೂ ಇರುವದಿಲ್ಲ. ಈಶ್ವರನು ನಿತ್ಯಮುಕ್ತನು; ಆತನಿಗೆ ಸಂಸಾರದ ಬಂಧವಿಲ್ಲ, ರಾಗದ್ವೇಷಾದಿಗಳ ಸಂಬಂಧವು ಎಳ್ಳಷ್ಟೂ ಇರುವದಿಲ್ಲ. ಈಶ್ವರನು ಅನಂತನು, ಅವನಿಗೆ ದೇಶಕಾಲಗಳ ಅಳತೆಯಿಲ್ಲ. ಈಶ್ವರನು ಆನಂದರೂಪನು; ಆತನಲ್ಲಿ ದುಃಖವಿಲ್ಲ. ನಾವು ಇಂಥ ಈಶ್ವರನ ಮಕ್ಕಳು !

ನಮಗೆ ಯಾವದಾದರೊಂದು ದುಃಖವು ಒದಗಿತೆಂದು ತೋರುವಾಗ ನಮಗೆ ಧನದ ಅನುಕೂಲ್ಯವು ಇಲ್ಲವೆಂದು ಕಾಣುವಾಗ, ನಮಗೆ ಆರೋಗ್ಯವು ಸಾಲದೆಂದು ಅಥವಾ ರೋಗರುಜಿನಗಳು ಬಾಧಿಸುತ್ತಿರುವವೆಂದು ಭಾವನೆ ಬಂದಾಗ-ಇವೇ ಮುಂತಾದ ಸಂದರ್ಭಗಳಲ್ಲಿ ಈ ಅಭಿಪ್ರಾಯವನ್ನು ಮನದಂದುಕೊಳ್ಳಬೇಕು; "ನಾನು ಈಶ್ವರನ ಪುತ್ರನು; ನನಗೆ ಯಾವ ಕೊರತೆಯೂ ಇಲ್ಲ, ಯಾವದೂ ಅಲಭ್ಯವಲ್ಲ" ಎಂದು ಮನಸ್ಸಿನಲ್ಲಿ ಬಲವಾದ ಭಾವನೆಯನ್ನು ತಂದುಕೊಳ್ಳಬೇಕು. ಕೂಡಲೆ ಕುಂದುಕೊರತೆಗಳೆಲ್ಲ ಮಾಯವಾಗುವವು, ನಮ್ಮ ಆವಶ್ಯಕತೆಗಳೆಲ್ಲ ಪರಿಪೂರ್ತಿ ಯಾಗುವವು; ನಮ್ಮ ಆನಂದಕ್ಕೆ ಅಳತೆಯಿಲ್ಲವಾಗುವದು !

ಈಶ್ವರನು ಪೂರ್ಣನು, ನಾವು ಪೂರ್ಣನಾದ ಈಶ್ವರನ ಮಕ್ಕಳು. ಸಿಂಹದ ಮರಿಯು ಸಿಂಹವೇ ಆಗಿರುವದಲ್ಲವೆ? ಪೂರ್ಣನಾದ ಈಶ್ವರನ ಮಕ್ಕಳು ಅಪೂರ್ಣರು ಹೇಗಾದಾರು? ಅಮೃತಸ್ವರೂಪನಾದ ಈಶ್ವರನ ಮಕ್ಕಳು ಮರ್ತ್ಯರು ಹೇಗಾದಾರು? ಸಂ-18, 142

# ಸ್ವತ್ತಿನ ಸದುಪಯೋಗ

ಸ್ವತ್ತು ಎಂದರೆ ತನ್ನ ಪದಾರ್ಥವು. ತನ್ನ ಶರೀರ, ಹೆಂಡತಿಮಕ್ಕಳು, ಮನೆ, ಹೊಲ, ಹಣ-ಇವುಗಳೇ ಅಲ್ಲದೆ ತನ್ನ ತಿಳಿವಳಿಕೆ, ಕಾರ್ಯದಕ್ಷತೆ, ಕೀರ್ತಿ-ಮುಂತಾದವುಗಳೂ ಈ ಗುಂಪಿನಲ್ಲಿ ಸೇರತಕ್ಕವುಗಳಾಗಿವೆ. ತಾನು ಅಥವಾ ತನ್ನ ಅನುಮತಿಯಿಂದ ಮಾತ್ರ ಮತ್ತೊಬ್ಬರು, ಉಪಯೋಗಿಸುವದಕ್ಕೆ ಬರುವದನ್ನೆಲ್ಲ ಈ ಅರ್ಥದಲ್ಲಿ ಸ್ವತ್ತೆನ್ನಬಹುದು.

ಪರಮಾರ್ಥದೃಷ್ಟಿಯಿಂದ ನೋಡಿದರೆ ಯಾರೊಬ್ಬರಿಗೂ 'ಸ್ವತ್ತು' ಇಲ್ಲವೇ ಇಲ್ಲ. ಜನಾಭಿಪ್ರಾಯದಿಂದ ಅಥವಾ ಸರಕಾರದ ಕಾನೂನಿನ ದೃಷ್ಟಿಯಿಂದ ಸ್ವತ್ತು ಎನ್ನುವದು ಲೋಕವ್ಯವಸ್ಥೆಗಾಗಿ ಮಾಡಿಕೊಂಡಿರುವ ತಾತ್ಕಾಲಿಕ ನಿಯಮವಾಗಿದೆ. ಆದರೆ ಒಳಹೊಕ್ಕು ನೋಡಿದರೆ ಸ್ವತ್ತೆಂಬುದು ಯಾವದನ್ನೂ ನಾವು ಹುಟ್ಟಿದಾಗ ತಂದಿಲ್ಲ; ಸಾಯುವಾಗ ತೆಗೆದುಕೊಂಡು ಹೋಗಲಾಗುವದಿಲ್ಲ. ಆದ್ದರಿಂದ ಈ ದೃಷ್ಟಿಯಿಂದ 'ಇದು ನನ್ನ ಸ್ವತ್ತು' ಎಂಬ ಮಾತಿಗೆ ಅರ್ಥವಿಲ್ಲ.

ಇಡಿಯ ಬ್ರಹ್ಮಾಂಡವೇ ಪರಮೇಶ್ವರನ ಸ್ವತ್ತು. ಪರಮೇಶ್ವರನೊಬ್ಬನೇ ಸೃಷ್ಟಿಗೆ ಪೂರ್ವದಲ್ಲಿದ್ದನು; ಆತನೇ ಇದನ್ನೆಲ್ಲ ತನ್ನ ಸಂಕಲ್ಪಮಾತ್ರದಿಂದ ಸೃಷ್ಟಿಸಿರುತ್ತಾನೆ; ಆತನು ತನ್ನ ಮನಬಂದಂತೆ ಇದನ್ನೆಲ್ಲ ಮಾರ್ಪಡಿಸಬಲ್ಲನು; ಇದೆಲ್ಲವನ್ನೂ ತನ್ನಲ್ಲಿಯೇ ಪ್ರಲಯಕಾಲದಲ್ಲಿ ಅಡಗಿಸಿಕೊಳ್ಳುವದಕ್ಕೂ ಸ್ವತಂತ್ರನಾಗಿರುತ್ತಾನೆ. ಇಡಿಯ ಜಗತ್ತೇ ಆ ಪರಮೇಶ್ವರನದು; ಇದು ಮತ್ತೆ ಯಾರ ಸ್ವತ್ತೂ ಅಲ್ಲ. "ಕಸ್ಯ ಸ್ವಿದ್ ಧನಮ್?" ಯಾವದು ಯಾರ ಸ್ವತ್ತು? ಯಾರದೂ ಅಲ್ಲ-ಎಂದು ಶಾಸ್ತ್ರವು ಸಾರುತ್ತಿದೆ; ದೊಡ್ಡವರೂ ಹಾಗೆಂದೇ ಉಪದೇಶಮಾಡುತ್ತಿರುವರು.

ಆದರೂ ಒಂದರ್ಥದಲ್ಲಿ ನಮ್ಮ 'ಸ್ವತ್ತು' ಎನಿಸಿಕೊಳ್ಳುವ ಕೆಲವು ವಸ್ತುಗಳು ಇವೆ. ಇಹಲೋಕದಲ್ಲಿ ವ್ಯವಹಾರದ ಕಣ್ಣಿನಲ್ಲಿ, ನಾವು ಯಾವದರ ವಿನಿಯೋಗಮಾಡಲು ಸ್ವತಂತ್ರರೆಂದು ಜನರು ಒಪ್ಪಿರುತ್ತಾರೋ ಅದನ್ನು ನಮ್ಮ 'ಸ್ವತ್ತು' ಎಂದು ಕರೆದುಕೊಳ್ಳಬಹುದು. ಈ ಸ್ವತ್ತನ್ನು ನಾವೇನೂ ಸೃಷ್ಟಿಸಿರುವದಿಲ್ಲ; ಇದರ ಸ್ವಭಾವವು ನಮ್ಮ ಇಚ್ಛೆಗೆ ಅನುಗುಣವಾಗಿರುವದಿಲ್ಲ. ಆದರೆ ನಾವು ಇದನ್ನು ಸದ್ವಿನಿಯೋಗಮಾಡಿ ಜನ್ಮಸಾರ್ಥಕ್ಯವನ್ನುಂಟುಮಾಡಿಕೊಳ್ಳಬಹುದು; ಅಥವಾ ದುರ್ವಿನಿಯೋಗಮಾಡಿ ಮುಂದಿನ ದುಃಖಕ್ಕೆ ಸಂಚಕಾರವನ್ನು ತಂದುಕೊಳ್ಳಬಹುದು. ಇಷ್ಟರಮಟ್ಟಿಗೆ ಅದು ನಮ್ಮ ಸ್ವತ್ತು. ಸ್ವತ್ತಿನ ಸದುಪಯೋಗವೆಂದರೆ ಇದೆಲ್ಲವೂ ಪರಮೇಶ್ವರನದೇ ಎಂಬ ಜ್ಞಾನವು ನಮ್ಮ ಮನಸ್ಸಿನಲ್ಲಿ ಗಟ್ಟಿಯಾಗಿ ನಿಲ್ಲುವಂತೆ ಅದನ್ನು ವಿನಿಯೋಗಿಸುವದು; ಅದರ ದುರ್ವಿನಿಯೋಗವೆಂದರೆ 'ಇದೆಲ್ಲವೂ ನಿಜವಾಗಿ ನನ್ನದೇ, ನಾನೇ ಈ ಜಗತ್ತಿಗೆ ಕೇಂದ್ರವು. ನನಗಾಗಿಯೇ ಇದೆಲ್ಲವೂ ಇದೆ' ಎಂದು ತಿಳಿಯುವದು.

ಇದೆಲ್ಲವೂ ಪರಮೇಶ್ವರನದು ಎಂಬ ಬುದ್ಧಿ ಬರುವದು ಹೇಗೆ? ಸ್ವತ್ತನ್ನು ದುರ್ವಿನಿಯೋಗಮಾಡಿ ನಮ್ಮ ಬಾಳನ್ನು ಕೆಡಿಸಿಕೊಳ್ಳದೆ ಇರುವ ಉಪಾಯವು ಯಾವದು? ಈ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ನಾವು ಬಹಳ ಯೋಚಿಸಬೇಕಾಗಿಲ್ಲ. 'ಇದೆಲ್ಲವೂ ನನ್ನದು' ಎಂಬ ಬುದ್ಧಿಯನ್ನು ಬಿಟ್ಟುಬಿಡಬೇಕು ಎಂಬುದೇ ಉತ್ತರವು. 'ನಾನು ನನ್ನದು' ಎಂಬ ಭಾವನೆಯೇ ಮೃತ್ಯುವು, 'ನನ್ನದಲ್ಲ' ಎಂಬುದೇ ಅಮೃತವು ಎಂದು ಶ್ರುತಿಸ್ಮೃತಿಗಳು ಸಾರುತ್ತಿವೆ. "ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ಧನದಿಂದಲ್ಲ; ತ್ಯಾಗದಿಂದಲೇ ಅಮೃತತ್ವವನ್ನು ಪಡೆಯುವರು" ಎಂದು ಶ್ರುತಿಯ ಡಂಗುರವು ಮೊಳಗುತ್ತಿದೆ.

'ನಾನು ಎಂಬುದು ಸಂಪೂರ್ಣವಾಗಿ ಹೋದರೆ 'ನನ್ನದು' ಎಂಬ ಭಾವನೆಯೂ ಸಂಪೂರ್ಣವಾಗಿ ಹೋಗುವದು. 'ಪರಮೇಶ್ವರನೇ ಸರ್ವವೂ' ಎಂಬ ಭಾವನೆಯು ಗಟ್ಟಿಯಾದ ಬಳಿಕವೇ 'ನಾನು' ಎಂಬುದು ಸಂಪೂರ್ಣವಾಗಿ ತೊಲಗುವದು. ಅಲ್ಲಿಯವರೆಗೆ "ಭಗವಂತ, ಇದೆಲ್ಲವೂ ನಿನ್ನದು; ನೀನು ನನಗೆ ಇದನ್ನು ನೋಡಿಕೊಂಡಿರುವದಕ್ಕೂ ವಿನಿಯೋಗಿಸುವದಕ್ಕೂ ಕೊಟ್ಟಿರುತ್ತೀಯೆ. ನಾನು ಇದನ್ನು ಸ್ವಾರ್ಥಕ್ಕೆ ವಿನಿಯೋಗಿಸದಂತೆಯೂ ವ್ಯರ್ಥಮಾಡಿ ದುರ್ವಿನಿಯೋಗಮಾಡದಂತೆಯೂ ಅನುಗ್ರಹಿಸು. ನಿನ್ನ ಭಕ್ತರ ಸೇವೆಗೆ, ಆಯಾ ಕೊರತೆಯಿಂದ ನರಳುತ್ತಿರುವ ಮಾನವರ ಸೇವೆಗೆ, ಮೂಗಜಂತುಗಳ ಸೇವೆಗೆ-ಹೀಗೆ ನೀನಿತ್ತಿರುವ ಈ ಸ್ವತ್ತೆಲ್ಲವೂ ಆದಮಟ್ಟಿಗೂ ವಿನಿಯೋಗವಾಗಲಿ! ನಿನ್ನ ಸ್ಮರಣೆಯು ಸದಾ ನನ್ನ ಚಿತ್ತದಲ್ಲಿರಲಿ; ನಿನ್ನ ಚರಣಾರವಿಂದವನ್ನು ಬಿಟ್ಟು ನನ್ನ ಮನಸ್ಸು ಮತ್ತೆಲ್ಲಿಯೂ ಹರಿಯದಿರಲಿ !" ಎಂದು ಬೇಡಿಕೊಳ್ಳುತ್ತಿರಬೇಕು. **ಸಂ-18, 286**

## ಭಗವಂತನ ಸ್ಮರಣೆಯು ಪವಿತ್ರವಾದದ್ದು

ಶರೀರವನ್ನು ಅಶುದ್ಧವಾಗಿಟ್ಟುಕೊಂಡು ಎಂದಿಗೂ ಪವಿತ್ರಗ್ರಂಥಗಳನ್ನು ನಿಯಮದಿಂದ ಪಠಿಸುವದಕ್ಕೆ ಹೋಗಬಾರದು; ಏಕೆಂದರೆ ಮನಃಪೂರ್ವಕವಾಗಿ ಮಾಲಿನ್ಯವನ್ನು ಬಯಸುವವರಿಗೆ ಎಂದಿಗೂ ಅಧ್ಯಾತ್ಮಸಾಧನವು ಪ್ರಯೋಜನಕರವಾಗದು. ಆದರೆ ಭಗವಂತನ ನಾಮವಾಗಲಿ, ಭಗವಂತನ ವಾಗ್ಧಾನರೂಪವಾದ ಶ್ಲೋಕಗಳಾಗಲಿ, ಉತ್ತಮವಾದ ಭಾವನೆಗಳಾಗಲಿ, ತಾವೇ ನೆನಪಿಗೆ ಬಂದರೆ ಎಂದಿಗೂ ಅಂಜಬಾರದು. ಅಮೃತವನ್ನು ನಾವೇ ಕುಡಿದರೂ ಅದೇ ಬಾಯಿಗೆ ಬಿದ್ದರೂ ಅದು ಅಮೃತವೇ ಅಲ್ಲವೆ? ಅತ್ಯಂತಪವಿತ್ರನಾದ ಪರಮಾತ್ಮನ ಸ್ವರಣೆಯು ಯಾವ ಮೂಲಕವಾಗಿ ಆದರೂ ನಮಗೆ ಪಾವಿತ್ರ್ಯವೇ ಉಂಟಾಗುವದು. ಮೊದಲೇ ಅಶುಚಿಯಾಗಿರುವವನು ಇನ್ನಷ್ಟು ಕೊಳೆಯನ್ನು ಮೈಮೇಲೆ ಹಾಕಿಕೊಂಡರೆ ಕೊಳಕು ಹೆಚ್ಚಾಗುವಂತೆ ಇಂಥ ಸಂದರ್ಭದಲ್ಲಿ ನಾವು ಕೊಳೆಯಾದ ಭಾವಗಳನ್ನು ಮನಸ್ಸಿಗೆ ತಂದುಕೊಳ್ಳುವದಕ್ಕಿಂತ ಪವಿತ್ರಭಾವಗಳನ್ನು ಮನಸ್ಸಿಗೆ ತಂದುಕೊಳ್ಳುವದು ಸರ್ವಥಾ ಉತ್ತಮವಾದದ್ದು.

ಕರ್ಮದ ಆದಿಯಲ್ಲಿಯೂ ಕೊನೆಯಲ್ಲಿಯೂ ನಾವು ಭಗವಂತನ ಸ್ಮರಣೆಯನ್ನು ತಪ್ಪದೆ ಮಾಡುತ್ತೇವೆ. "ಅಪವಿತ್ರನಾಗಿರಲಿ ಪವಿತ್ರನಾಗಿರಲಿ, ಎಂಥ ದುರವಸ್ಥೆಯನ್ನು ಪಡೆದಿರಲಿ, ಪುಂಡರೀಕಾಕ್ಷನನ್ನು ಸ್ಮರಿಸಿದವನು ಒಳಗೂಹೊರಗೂ ಶುಚಿಯಾಗುವನು" ಎಂಬರ್ಥದ ಶ್ಲೋಕದಲ್ಲಿ ಭಗವತ್ಸ್ಮರಣೆಯ ಪಾವಿತ್ರ್ಯವು ಉಕ್ತವಾಗಿದೆ. ಯಜ್ಞಗಳಲ್ಲಿಯೂ ತಪಸ್ಸಿನಲ್ಲಿಯೂ ಏನಾದರೂ ಕುಂದು ಕೊರತೆಗಳಾಗಿದ್ದರೆ ವಿಷ್ಣುವಿನ ಸ್ಮರಣೆಯಿಂದಲೇ ಅದರ ದೋಷವು ಹೋಗಿಬಿಡುವದು-ಎಂಬರ್ಥದ ಶ್ಲೋಕವೊಂದನ್ನೂ ಅನುಷ್ಠಾನದಲ್ಲಿ ಜನರು ಪಠಿಸುತ್ತಾರೆ. ಭಗವಂತನ ಸಂಬಂಧದಿಂದಲೇ ಎಲ್ಲವೂ ಶುಚಿಯಾಗುತ್ತಿರುವದು. ಆದ್ದರಿಂದ ಭಗವಂತನ ಸ್ಮರಣೆಯನ್ನು ಅಶುದ್ಧಿಗೊಳಿಸುವ ಅಡ್ಡಿಯಾವದೂ ಇರುವದೇ ಇಲ್ಲ. **ಸಂ-19, 69**

## ಭಗವದ್ಗೀತೆಯ ಸಾಕ್ಷಾತ್ಕಾರ

ಭಗವಂತನು ಇದಾನೆಂದು ನಂಬಿದರೆ ಸಾಲದು; ಅವನ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು, ಅವನು ಇರುವಂತೆಯೇ ಆತನನ್ನು ಅನುಭವದಲ್ಲಿ ಕಂಡುಕೊಳ್ಳಬೇಕು. ಇದು ಪರಮಾತ್ಮನ ಸಾಕ್ಷಾತ್ಕಾರವು. ಇದರಂತೆ ಭಗವದ್ಗೀತೆಯನ್ನು ಓದಿದರೆ, ಅಥವಾ ಅದರ ವಿಷಯದ ಉಪನ್ಯಾಸವನ್ನು ಕೇಳಿದರೆ, ಅಥವಾ ತಾನೇ ಉಪನ್ಯಾಸವನ್ನು ಮಾಡಿದರೆ ಕೂಡ, ಸಾಲದು. ಅದರಲ್ಲಿರುವ ಉಪದೇಶವಿಶೇಷವನ್ನು ಅನುಭವದಲ್ಲಿ ಕಂಡುಕೊಳ್ಳಬೇಕು. ಇದು ಭಗವದ್ಗೀತೆಯ ಸಾಕ್ಷಾತ್ಕಾರವು.

ಸಂಗೀತದ ವಿಷಯವಾಗಿ ನಾವು ಉಪನ್ಯಾಸಗಳನ್ನು ಕೇಳಿರಬಹುದು; ಸಂಗೀತ ಗಾರರು ಹಾಡಿರುವದನ್ನು ಕೇಳಿ ಆನಂದಿಸಿದರೂ ಇರಬಹುದು. ರಾಗ ತಾಳಗಳ ವಿಷಯವನ್ನು ಪುಸ್ತಕಗಳಲ್ಲಿ ಓದಿರಬಹುದು, ಅಥವಾ ಯಾರಾದರೊಬ್ಬರಿಂದ ಕೇಳಿರ ಬಹುದು. ಆದರೂ ನಮಗೆ ಸಂಗೀತದ ಸಾಕ್ಷಾತ್ಕಾರವಾಗಿರುವದಿಲ್ಲ. ರಾಗತಾಳಗಳ ಮರ್ಮವನ್ನು ಶಾಸ್ತ್ರೀಯವಾಗಿ ಅರಿತುಕೊಂಡು, ಅವುಗಳನ್ನು ನಾವೇ ನೇರಾಗಿ ಅನುಭವದಲ್ಲಿ ಕಂಡುಕೊಂಡು, ಉಪಯೋಗಿಸಿಕೊಂಡು ಸುಖಿಸಿದರೆ ಆಗ ನಮಗೆ ಸಂಗೀತದ ಸಾಕ್ಷಾತ್ಕಾರವಾದಂತೆ ಆಗುವದು.

ಭಗವದ್ಗೀತೆಯಲ್ಲಿ ಭಗವಂತನು ಗಾನಮಾಡಿದ ತತ್ತ್ವವಿಚಾರದ ಧಾರೆಯು ಇರುತ್ತದೆ. ಅದನ್ನು ಅರ್ಜುನನು ಕಿವಿಯಾರೆ ಕೇಳಿ ಅದರ ಮರ್ಮವನ್ನು ಮನದಟ್ಟು ಮಾಡಿಕೊಂಡು ಸುಖಿಸಿರುತ್ತಾನೆ. "ಭಗವಂತನೆ, ನಿನ್ನ ಅನುಗ್ರಹದಿಂದ ನನ್ನ ಮೋಹವು ನಷ್ಟವಾಯಿತು; ತತ್ತ್ವದ ನೆನಪು ಬಂತು. ಯಾವ ಸಂಶಯವೂ ಇಲ್ಲದೆ ಇರುತ್ತೇನೆ. ನೀನು ಹೇಳಿದಂತೆ ಮಾಡುವೆನು" ಎಂದಿರುತ್ತಾನೆ. ಆದ್ದರಿಂದ ಅವನಿಗೆ ಗೀತೆಯ ಸಾಕ್ಷಾತ್ಕಾರವಾಯಿತು ಎಂದು ನಿಶ್ಚಯಿಸಬಹುದು.

ಮಾರ್ಗಶೀರ್ಷ ಶುಕ್ಲ ಏಕಾದಶಿಯ ದಿನ ಗೀತಾಜಯಂತಿಯ ಉತ್ಸವವನ್ನು ಮಾಡುವ ಪದ್ಧತಿಯು ನಮ್ಮ ದೇಶದಲ್ಲಿ ಈಗ ಹರಡುತ್ತಿದೆ. ಆ ದಿನ ಭಗವಂತನ ಹಾಡಿರುವ ಗೀತೆಯ ಉಪದೇಶದ ಮರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವದಕ್ಕೆ ನಾವು ಹವಣಿಸಬೇಕು. ಅರ್ಜುನನಂತೆ "ನಷ್ಟೋ ಮೋಹಃ (ಮೋಹವು ತೊಲಗಿತು), ಸ್ಮೃತಿರ್ಲಬ್ಧಾ (ತತ್ತ್ವದ ನೆನಪು ಬಂತು)" ಎಂದು ಹೇಳುವ ಎದೆಯು ನಮಗೂ ಬರಬೇಕು! ಅದು ಭಗವಂತನ ಪ್ರಸಾದದಿಂದಲೇ ಲಭ್ಯವಾಗಬೇಕು. "ತ್ವತ್ಪ್ರಸಾದಾತ್ (ನಿನ್ನ ಪ್ರಸಾದದಿಂದ) ಮಯಾ ಅಚ್ಯುತ (ಎಲೈ ಅಚ್ಯುತನೆ, ನನಗೆ ತತ್ತ್ವದ ನೆನಪು ಬಂತು)" ಎನ್ನುವಂತೆ ಆಗಬೇಕು. ಆಗಲೇ ಗೀತಾಜಯಂತಿಯ ಉತ್ಸವವು ನಮ್ಮನಮ್ಮ ಹೃದಯದಲ್ಲಿಯೇ ಆಗುವದು.

ಭಗವದ್ಗೀತೆಯ ಸಾಕ್ಷಾತ್ಕಾರವೆಂದರೆ ಭಗವಂತನ ಮತ್ತು ಆತನು ಹಾಡಿರುವ ತತ್ತ್ವೋಪದೇಶದ ಸಾಕ್ಷಾತ್ಕಾರವು. ಭಗವಂತನು ಕರ್ಮಯೋಗ, ಜ್ಞಾನಯೋಗ–ಎಂಬ ಎರಡು ಉಪದೇಶಗಳನ್ನು ಮಾಡಿರುತ್ತಾನೆ. ಜ್ಞಾನವುಂಟಾಗುವ ಯೋಗ್ಯತೆಯು ಬಂದಬಳಿಕ ಜ್ಞಾನಯೋಗವು ನಮಗೆ ದಕ್ಕುವದು; ಆದರೆ ಕರ್ಮಯೋಗವು ಆ ಯೋಗ್ಯತೆಯನ್ನೂ ಕೊಡುವದು, ನಿತ್ಯಜೀವನದ ವಿಷಯಕ್ಕೆ ನಮ್ಮ ದೃಷ್ಟಿಕೋಣವನ್ನೂ ಬದಲಾಯಿಸುವದು.

ಕರ್ಮಯೋಗವೆಂದರೆ ನಾವು ಮಾಡುವ ಕರ್ಮವನ್ನು ಭಗವಂತನಿಗೆ ಅರ್ಪಣೆ ಮಾಡುವದು. ನಮ್ಮ ಜೀವನಕ್ಕೆಲ್ಲ ಭಗವಂತನೇ ಕೇಂದ್ರವೆಂಬ ದೃಷ್ಟಿಕೋಣವು ಇದಕ್ಕೆ ಬಹಳ ಮುಖ್ಯವಾಗಿರುತ್ತದೆ. ಇಡಿಯ ವಿಶ್ವದ ವ್ಯವಹಾರವೆಲ್ಲಕ್ಕೂ ಭಗವಂತನೇ ಆಧಾರ, ಭಗವಂತನೇ ಎಲ್ಲಕ್ಕೂ ಕೇಂದ್ರ, ಆತನು ನಮ್ಮ ನಮ್ಮ ವ್ಯಕ್ತಿಜೀವನಕ್ಕೂ ಕೇಂದ್ರವಾಗಿರುತ್ತಾನೆ. ಆತನನ್ನು ನಮ್ಮ ನಮ್ಮ ಹೃದಯದಲ್ಲಿಯೇ ಮೊದಲು ಕಂಡುಕೊಳ್ಳಬೇಕಾಗಿರುತ್ತದೆ. ಇದಕ್ಕೆ ನಾವು ಮಾಡುವ ಕರ್ಮಗಳನ್ನೆಲ್ಲ ಭಗವಂತನಿಗೆ ಅರ್ಪಣೆಮಾಡಿ, ನಮ್ಮ ಕರ್ಮವೆಲ್ಲವೂ ಆತನ ಆರಾಧನೆ ಎಂಬ ತತ್ತ್ವವನ್ನು ನಾವು ಮೊದಲು ಮನಗಾಣಬೇಕು. ಇದನ್ನು ಆರಾಧನೆ ಎಂಬ ತತ್ತ್ವವನ್ನು ನಾವು ಮೊದಲು ಮನಗಾಣಬೇಕು. ಇದನ್ನು ಮನಗಂಡರೆ ಭಗವಂತನೇ ನಿಜವಾಗಿ ನಾವು ಮಾಡುತ್ತಿರುವ ಕರ್ಮಗಳಿಗೂ ಮೂಲಸೂತ್ರಧಾರನೆಂಬುದು ನಮ್ಮ ಮನಸ್ಸಿನಲ್ಲಿ ಮಿಂಚುವದು. ಬಳಿಕ ಇಡಿಯ ಪ್ರಪಂಚವ್ಯವಹಾರಕ್ಕೂ ಆತನೇ ಸೂತ್ರಧಾರನು; ಆತನ ಶಾಸನವೇ ಎಲ್ಲೆಲ್ಲಿಯೂ ತಪ್ಪದೆ ನಡೆಯುತ್ತಿರುವದು–ಎಂಬ ಅಮೋಘತತ್ತ್ವವು ನಮ್ಮ ಕಣ್ಣಿಗೆ ಕಟ್ಟಿದಂತಾಗುವದು. ಅದೇ

**"ಗೀತೆಯ ಸಾಕ್ಷಾತ್ಕಾರ": ಭಗವಂತನ ಪ್ರಸಾದದಿಂದಲೇ ಸಾಧಕರ ಹೃದಯದಲ್ಲಿ ಭಗವದ್ಗೀತೆಯ ಸಾಕ್ಷಾತ್ಕಾರವಾಗುವದು. ಸಂ–19, 89**

# ಅವಚನೇನೈವ ಪ್ರೋವಾಚ

ಭರತಖಂಡದ ಸಂಸ್ಕೃತಿಯಲ್ಲಿ ಅಧ್ಯಾತ್ಮವಿದ್ಯೆಗೆ ಬಹಳ ಹೆಚ್ಚಿನ ಸ್ಥಾನವಿದೆ. ಅಧ್ಯಾತ್ಮವಿದ್ಯೆಯೆಂದರೆ ಪರಮಾರ್ಥವನ್ನು ಸಾಕ್ಷಾತ್ಕರಿಸಿಕೊಂಡು ಆನಂದಿಸುವದು. ಈ ವಿದ್ಯೆಯಿಂದ ಒಂದಾನೊಂದು ತತ್ತ್ವವನ್ನು ಅರಿತುಕೊಂಡದ್ದರಿಂದ ಎಲ್ಲವನ್ನೂ ಅರಿತುಕೊಂಡಂತೆ ಆಗುವದೆಂದು ಉಪನಿಷತ್ತುಗಳಲ್ಲಿ ಮತ್ತೆ ಮತ್ತೆ ಹೇಳಿರುತ್ತದೆ.

ಆದ್ದರಿಂದಲೇ ಅಧ್ಯಾತ್ಮವಿದ್ಯೆಯ ಸಂಪಾದನೆಗಾಗಿ ಮಿಕ್ಕ ಎಲ್ಲವನ್ನೂ ಕಡೆಗಣಿಸಿ ಎಲ್ಲವೂ ಅನಿತ್ಯವು. ಅಸಾರವು, ಎಂದು ಮನಗಂಡು ವೈರಾಗ್ಯದಿಂದ ಸದ್ಗುರುವನ್ನು ಸೇರಬೇಕು. ಇದಕ್ಕಿಂತ ಹೆಚ್ಚಿನ ವಿದ್ಯೆಯಿಲ್ಲ, ಇದರಲ್ಲಿ ಹೇಳಿರುವ ವಿಷಯಕ್ಕಿಂತ ಹೆಚ್ಚಿನ ತತ್ತ್ವವೂ ಇಲ್ಲ. ಎಲ್ಲಾ ವಿದ್ಯೆಗಳೂ ಈ ವಿದ್ಯೆಯಲ್ಲಿ ಕೊನೆಕಾಣುವವು; ಆದ್ದರಿಂದ ಇದನ್ನು ಬ್ರಹ್ಮವಿದ್ಯೆ ಎಂದೂ ಕರೆಯುತ್ತಾರೆ.

ಆದರೆ ಅಧ್ಯಾತ್ಮವಿದ್ಯೆಯು, ಅಥವಾ ಬ್ರಹ್ಮವಿದ್ಯೆಯು, ಹೇಳುವ ಪರಮಾರ್ಥತತ್ತ್ವವು ಎಂಥದ್ದು? ಅದರ ಸ್ವರೂಪವು ಹೇಗಿರುವದು? ಎಂಬ ಪ್ರಶ್ನೆಗೆ ಬಲ್ಲವರು ಒಂದು ವಿಲಕ್ಷಣಭಾಷೆಯಿಂದ ಉತ್ತರವನ್ನು ಹೇಳಿರುತ್ತಾರೆ. ಆ ತತ್ತ್ವವು ಅನುಭವೈಕವೇದ್ಯವು; ಅದನ್ನು ಇಂಥದ್ದು ಅಂಥದ್ದು ಎಂದು ವರ್ಣಿಸಿ ತಿಳಿಸುವದಕ್ಕೆ ಆಗಲಾರದು. ಅದನ್ನು ಯಾವದಾದರೂ ಲಕ್ಷಣವಾಕ್ಯದಿಂದ ತಿಳಿಸಿದರೆ ಅದಕ್ಕೆ ಪರಿಚ್ಛೇದವನ್ನು ಕಲ್ಪಿಸಿದಂತೆ ಆಗುತ್ತದೆ; ಆ ವರ್ಣನೆಯಿಂದ ಅದನ್ನು ಹೆಚ್ಚಿನದೆಂದು ತಿಳಿಸುವದಕ್ಕೆ ಬದಲು ಅದರ ಗೌರವವನ್ನು ಕಡಿಮೆಮಾಡಿದಂತೆ ಆಗುತ್ತದೆ ಎಂಬುದೇ ಅನುಭವಿಗಳ ಉತ್ತರವು. ಹಿಂದೆ ಬಾಷ್ಕಲಿ ಎಂಬಾತನು ಬಾಧ್ವನೆಂಬ ಋಷಿಯನ್ನು 'ಪರಮಾರ್ಥತತ್ತ್ವವನ್ನು ನನಗೆ ತಿಳಿಸಿಕೊಡಿ' ಎಂದು ಮತ್ತೆ ಮತ್ತೆ ಕೇಳಿದರೂ ಏನೊಂದು ಮಾರುತ್ತರವನ್ನೂ ಕೊಡದೆ ಸುಮ್ಮನೆ ಇರುತ್ತಿದ್ದನಂತೆ. ಕೊನೆಗೆ ಮತ್ತೂ ಶಿಷ್ಯನು ಕೇಳಿದ್ದಕ್ಕೆ "ಅಪ್ಪ, ನಾನು ಹೇಳುತ್ತಲೇ ಇದ್ದೇವೆ, ಆದರೆ ನೀನು ಇದನ್ನು ಅರಿತುಕೊಳ್ಳದೆ ಇರುವೆ. ಈ ಪರಮಾತ್ಮನು ಉಪಶಾಂತನಾಗಿರುವನು, ಸಕಲವಿಶೇಷಣಗಳನ್ನೂ ಮೀರಿದವ ನಾಗಿರುತ್ತಾನೆ" ಎಂದು ನುಡಿದನಂತೆ !

ಮೌನದಿಂದಲೇ ಪರಮಾರ್ಥವನ್ನು ವ್ಯಾಖ್ಯಾನಮಾಡಬಹುದೆಂಬುದಕ್ಕೆ ಈ ನಮ್ಮ ಕಾಲದಲ್ಲಿಯೂ ಕೆಲವರು ಮಹಾತ್ಮರು ನಿದರ್ಶನವಾಗಿರುತ್ತಾರೆ. ಇದಕ್ಕೆ ತೀರ ಇತ್ತೀಚಿನ ಉದಾಹರಣೆಗಳನ್ನು ಕೊಡಬೇಕೆಂದರೆ ಅರುಣಾಚಲದ ರಮಣಮಹರ್ಷಿಗಳನ್ನೂ ಪಾಂಡಿಚೆರಿಯ ಶ್ರೀ ಅರವಿಂದ ಘೋಷರನ್ನೂ ಉದಾಹರಿಸಬಹುದಾಗಿದೆ. ಆ ಇಬ್ಬರು ಮಹನೀಯರೂ ಅಧ್ಯಾತ್ಮವಿದ್ಯೆಯ ಮಹತ್ತ್ವವನ್ನೂ ಮೌನದ ಉಚ್ಚಭೂಮಿಕೆಯನ್ನೂ ತಮ್ಮ ಜೀವನಕ್ರಮದಿಂದ ನಮಗೆ ತಿಳಿಸಿಕೊಟ್ಟಿರುತ್ತಾರೆ.

ರಮಣಮಹರ್ಷಿಗಳು ಬಾಲ್ಯದಿಂದಲೇ ಅರುಣಾಚಲದ ಮಹಿಮೆಯನ್ನು ಕೇಳಿ ಪರಮವೈರಾಗ್ಯವನ್ನು ತಳೆದು ಆ ಪವಿತ್ರಕ್ಷೇತ್ರಕ್ಕೆ ದಯಮಾಡಿಸಿದರು. ಪರಮಾತ್ಮನನ್ನು ನಮ್ಮ ಹೃದಯಾಂತರಾಳದಲ್ಲಿರುವ ಆಕಾಶದಲ್ಲಿ ನೇರಾಗಿ ಕಂಡು ಆನಂದಿಸಬಹುದು ಎಂಬುದನ್ನು ತಮ್ಮ ತಪಃಪ್ರಧಾನವಾದ ಜೀವನದಿಂದ ಲೋಕಕ್ಕೆ ಹೇಳಿಕೊಟ್ಟರು. ಅವರ ಕೀರ್ತಿಯು ಅವರ ಪ್ರಯತ್ನವಿಲ್ಲದೆಯೇ ನಾಗರಿಕಭೂಮಂಡಲವನ್ನೆಲ್ಲ ವ್ಯಾಪಿಸಿತು. ಅವರ ದರ್ಶನವನ್ನು ತೆಗೆದುಕೊಂಡು, ಅವರಿಂದ ಯಾವದೊಂದು ಉತ್ತರವನ್ನೂ ಪಡೆಯದೆ ಇದ್ದರೂ, ಪ್ರಶಾಂತಹೃದಯರಾಗಿ ಹಿಂತಿರುಗಿದವರು ನೂರಾರು ಮಂದಿ ಇರುತ್ತಾರೆ. ಅವರು ತಮಿಳಿನಲ್ಲಿ ರಚಿಸಿರುವ "ಉಳ್ಳದುನಾಲ್ಪದು" ಎಂಬ ಸದ್ವಿದ್ಯಾ ದರ್ಶನದ ನಲವತ್ತು ಪದ್ಯಗಳನ್ನು ನೇರಾಗಿ ಅಥವಾ ಭಾಷಾಂತರದಿಂದ ಓದಿ ಮನಃಶಾಂತಿಯನ್ನು ಹೊಂದಿದವರು ಲೆಕ್ಕವಿಲ್ಲದಷ್ಟು ಜನರು ಈಗಲೂ ಇರುತ್ತಾರೆ.

ಅರವಿಂದಘೋಷರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಪಡೆದು, ನಮ್ಮ ದೇಶದ ತರುಣರ ತಲೆಯನ್ನು ತಿರುಗಿಸುವ ರಾಜಕೀಯ ಚಳುವಳಿಯ ಸಮುದ್ರದಲ್ಲಿ ಈಜಿ ಲೋಕವಿಖ್ಯಾತರಾದವರು. ಅವರು ಸಂಪಾದಕರಾಗಿದ್ದ 'ವಂದೇ ಮಾತರಮ್', 'ಕರ್ಮಯೋಗಿನ್', 'ಧರ್ಮ'–ಎಂಬ ರಾಜಕೀಯ ವಿಚಾರದ ಪತ್ರಿಕೆಗಳಲ್ಲಿಯೂ ಅವರಿಗೆ ಪ್ರಾಚೀನಸಂಸ್ಕೃತಿಯಲ್ಲಿದ್ದ ಗೌರವವು ಹೊರಸೂಸುತ್ತಿತ್ತು. ಆದರೆ ಕಾಲಕರ್ಮ ಸಂಯೋಗದಿಂದ ಅಧ್ಯಾತ್ಮಯೋಗದ ಹೆಚ್ಚುಗಾರಿಕೆಯು ಅವರ ಮನಸ್ಸನ್ನು ಸೆಳೆಯಿತು. ಪಾಂಡಿಚೆರಿಯಲ್ಲಿ ಅವರು ಸ್ಥಾಪಿಸಿದ ಆಶ್ರಮವು ನಾನಾಜನಾಂಗದವರನ್ನೂ ಶಾಂತಿಯ ಅನ್ವೇಷಣೆಗಾಗಿ ಅಲ್ಲಿಗೆ ಕರೆತಂದಿತು. ಅವರ ದರ್ಶನಮಾತ್ರದಿಂದಲೇ ಧನ್ಯರಾದೆವೆಂದು ಎಣಿಸುವ ಸಾವಿರಗಟ್ಟಲೆಯ ಸಾಧಕರು ಅಲ್ಲಿ ನೆರೆಯುತ್ತಿದ್ದರು. ಅವರು ಇಂಗ್ಲಿಷಿನಲ್ಲಿ ಬರೆದಿರುವ "ದಿವ್ಯಜೀವನ" (Life Divine) ಎಂಬ ಗ್ರಂಥವು ಅನೇಕ ತತ್ತ್ವಜಿಜ್ಞಾಸುಗಳಿಗೆ ವೇದವಾಗಿ ಪರಿಣಮಿಸಿದೆ.

ಮೌನದ ಮಾಹಾತ್ಮ್ಯವನ್ನು ಮೌನದಿಂದಲೇ ವ್ಯಾಖ್ಯಾನಮಾಡಿ ಮಹಾಮೌನ ಸಮಾಧಿಯನ್ನು ನಮ್ಮ ಕಣ್ಣಮುಂದೆಯೇ ಪಡೆದು ಎಲ್ಲರನ್ನೂ ಬೆರಗುಮಾಡಿರುವ ಈ ಮಹಾತ್ಮರ ಚರಿತ್ರೆಯನ್ನು ನಮ್ಮ ದೇಶದ ಯುವಕರು ಮನನಮಾಡುವದರಿಂದ ಲಾಭವುಂಟು.

# ಸಾಧು ಸಂಗದ ಫಲ

ಸಾಧುಶಬ್ದದ ಅರ್ಥವು ಈಗ ಕೆಳಮಟ್ಟಕ್ಕೆ ಇಳಿಯುತ್ತಿದೆ. ನಿಜವಾಗಿ ಸಾಧುಗಳೆಂದರೆ ಪರೋಪಕಾರವನ್ನು ಮಾಡುವವರು; ಯಾರಿಂದ ಸಮತಾನಂದವು ದೊರೆಯುತ್ತದೆಯೋ ಅವರೇ ಸಾಧುಗಳು ಎಂದು ವಾಸಿಷ್ಠರಾಮಾಯಣದಲ್ಲಿದೆ.

ದುಷ್ಟಸಂಗವನ್ನು ಬಿಡಿಸಿ ಪರಮಾತ್ಮನ ಕಡೆಗೆ ತಿರುಗಿಸುವವರೇ ಸಾಧುಗಳು. ಸಾಧುಗಳು ನಮ್ಮನ್ನು ಹಗ್ಗಕಟ್ಟಿ ಎಳೆದುಕೊಂಡು ಸದ್ವರ್ತನೆಗೇನೂ ಬಿಡುವದಿಲ್ಲ. ಸಾಧುಗಳ ನಡತೆಯನ್ನು ಚೆನ್ನಾಗಿ ಪರೀಕ್ಷಿಸುತ್ತಿದ್ದರೆ, ಕನ್ನಡಿಯಲ್ಲಿ ತನ್ನ ಮುಖದ ಕೊಳಕು ಕಾಣಿಸುವಂತೆ, ಸತ್ಸಂಗವನ್ನು ಮಾಡಿದವನಿಗೂ ತನ್ನ ದೋಷವು ಎದ್ದು ಕಾಣಿಸುತ್ತದೆ. ಅವರ ಸೇವೆಯಿಂದಲೂ ಉದಪೇಶದಿಂದಲೂ ಭಗವಂತನಿಗೆ ನಾವೂ ಹತ್ತಿರವಾಗಬಹುದು. ನಾರದರು ಶೂದ್ರಜಾತಿಯಲ್ಲಿ ಹುಟ್ಟಿದ್ದವರು ಚಾತುರ್ಮಾಸ್ಯದಲ್ಲಿ ಕೆಲವರು ಋಷಿಗಳ ಸೇವೆಯನ್ನು ಮಾಡಲಾಗಿ, ಅದರ ಫಲವಾಗಿ ಆ ಜನ್ಮದಲ್ಲಿಯೇ ಮಹಾಭಕ್ತರಾದರು; ಮುಂದಿನ ಜನ್ಮದಲ್ಲಿ ದೇವರ್ಷಿಗಳಾಗಿ ಹುಟ್ಟಿದರು. ಮಹತೀ ವೀಣೆಯನ್ನು ಬಾರಿಸಿಕೊಂಡು ಭಗವಂತನ ಮಹಿಮೆಯನ್ನು ಕೀರ್ತನೆಮಾಡುತ್ತಾ ಮೂರು ಲೋಕಗಳಿಗೂ ಭಕ್ತಿಮಾರ್ಗಕ್ಕೆ ಆದರ್ಶಪ್ರಾಯರಾದರು !

ಕಬ್ಬಿಣದ ತುಂಡು ನೀರಿನಲ್ಲಿ ಮುಳುಗುತ್ತದೆ; ಅದನ್ನು ತಟ್ಟಿ ತಗಡುಮಾಡಿ ಕೊಡವೇ ಮುಂತಾದದ್ದನ್ನು ಮಾಡಿದರೆ ಅದೇ ತೇಲುತ್ತದೆ. ಸಾಧುಗಳು ಪಾಪವಾಸನೆಯಿಂದ ಸಂಸಾರಸಾಗರದಲ್ಲಿ ಮುಳುಗುವಂಥವರನ್ನು ಕೂಡ, ತಮ್ಮ ಸಾಮೀಪ್ಯ, ಸೇವೆ, ಉಪದೇಶಶ್ರವಣ-ಮುಂತಾದವುಗಳಿಂದ ಹಗುರವಾಗಿ ಜೀವನಸಾಗರದಲ್ಲಿ ಹರ್ಷದಿಂದ ಈಜಾಡುವಂತೆ ಮಾಡುತ್ತಾರೆ. ಸತ್ಸಂಗದಿಂದ ಭಗವದ್ಭಕ್ತಿಯು ದೊರಕುತ್ತದೆ. ಸಂಸಾರದ ಭಯವು ತೊಲಗುತ್ತದೆ. ಆಮೇಲೆ ಭಗವಂತನ ಉಪಾಸನೆಯಿಂದಲೇ ಆನಂದಜೀವನ ವನ್ನು ಮಾಡುವ ಬುದ್ಧಿಯು ಬಂದು ಸೇರಿಕೊಳ್ಳುತ್ತದೆ.

ಶೃಂಗೇರಿಯ ಪೀಠಾಧಿಪರಾಗಿದ್ದ ಶ್ರೀಸಚ್ಚಿದಾನಂದಶಿವಾಭಿನವನರಸಿಂಹ ಭಾರತೀ ಸ್ವಾಮಿಗಳು ಒಮ್ಮೆ ಉಪದೇಶಕಾಲದಲ್ಲಿ ಹೀಗೆಂದರು; ಕಾಡುಗಳಲ್ಲೆಲ್ಲ ಯಾವ ಯಾವದೋ ಗಿಡಗಳನ್ನೋ ಮೃಗಗಳನ್ನೋ ಹುಡುಕುವವರುಂಟು. ಅದರ ಅರ್ಧದಷ್ಟು ಆಯಾಸದಿಂದ ಹುಡುಕಿದರೂ ಈಗಲೂ ಸತ್ಪುರುಷರು ಸಿಕ್ಕುತ್ತಾರೆ. ಸಾಧುಗಳಿಗೆ ಹಣ್ಣು, ಬಾದಾಮಿ, ಕಲ್ಲುಸಕ್ಕರೆ, ಹೂಗಳು-ಮುಂತಾದವುಗಳನ್ನು ಕಾಣಿಕೆಯಾಗಿ ಕೊಡುವವರುಂಟು. ಅವರಿಗೆ ತಮ್ಮ ಹೃದಯವನ್ನು ಸಮರ್ಪಿಸಿದವರಿಗೆ ಇಹಪರ ಗಳೆರಡರಲ್ಲಿಯೂ ಸದ್ಗತಿಯಾದೀತು. ಗತಿ ಏಕೆ? ಎಲ್ಲಾ ಗತಿಯನ್ನೂ ಮೀರಿದ ಪರಮಪುರುಷಾರ್ಥವೇ ದೊರಕೀತು. **ಸಂ-31, 182**

## ನಾನು ಕೊಟ್ಟಿದ್ದನ್ನು ಹೇಗೆ ಉಪಯೋಗಿಸಿದೆ?

ನಿಮಗೆ ಮನೆ, ಹೊಲ, ಹಣ, ಮಕ್ಕಳು, ವಿದ್ಯೆ, ಕಲಾಕೌಶಲ-ಯಾವದು ಎಷ್ಟುಮಟ್ಟಿಗೆ ಈ ಜೀವಮಾನದಲ್ಲಿ ದೊರೆತಿದೆಯೋ ಅದನ್ನು ನೀವು ಹೇಗೆ ಉಪಯೋಗಿಸಿ ಕೊಳ್ಳುವಿರೋ ನೋಡಿ. ಉತ್ತಮರೀತಿಯಿಂದ ಉಪಯೋಗಿಸಿಕೊಂಡಿದ್ದರೆ ಭಗವಂತನು ಅದನ್ನು ಇನ್ನಷ್ಟು ಕೊಡುತ್ತಾನೆ. ಅಥವಾ ಈಗ ಕೊಟ್ಟಿರುವದರಲ್ಲಿಯೇ ನಿಮಗೆ ಶಾಂತಿಸೌಖ್ಯಗಳು ದೊರೆಯುವಂತೆ ಮಾಡುತ್ತಾನೆ; ಉಪಯೋಗಿಸದೆ ಬಿಟ್ಟಿದ್ದರೆ, ಅಥವಾ ದುರುಪಯೋಗ ಮಾಡಿಕೊಂಡಿದ್ದರೆ, ಅದನ್ನು ನಿಮ್ಮಿಂದ ಕಸಿದುಕೊಳ್ಳುತ್ತಾನೆ, ಅಥವಾ ಅದರ ಮೂಲಕವೇ ನಿಮಗೆ ಮನಃಕ್ಷೋಭೆಯೂ ದುಃಖವೂ ಆಗುವಂತೆ ಏರ್ಪಡಿಸುತ್ತಾನೆ.

ಭಗವಂತನಿಗೆ ಯಾರಲ್ಲಿಯೂ ಪಕ್ಷಪಾತವಿಲ್ಲ. ತಾನು ಅನುಗ್ರಹಿಸಿರುವ ಶರೀರೇಂದ್ರಿಯಗಳು, ವಿದ್ಯೆ, ಬುದ್ಧಿ, ಕೌಶಲ, ಧನ-ಮುಂತಾದವುಗಳನ್ನು ಜನರು ಸದುಪಯೋಗ ಮಾಡಿಕೊಳ್ಳಲಿ, ಸೌಖ್ಯದಿಂದಿರಲಿ-ಎಂಬುದೇ ಅವನ ಉದ್ದೇಶ. ಆ ಉದ್ದೇಶವನ್ನು ಅವನು ತಾನು ಕೊಟ್ಟಿರುವ ವಸ್ತುಗಳ ಸ್ವಭಾವದಿಂದಲೂ, ಸಜ್ಜನರ ಆದರ್ಶದಿಂದಲೂ, ಗುರುಜನರ ಹಿತೋಪದೇಶಗಳಿಂದಲೂ ಶಾಸ್ತ್ರಗಳ ವಿಷಯಪ್ರತಿಪಾದನೆಯಿಂದಲೂ ತಿಳಿಸಿರುತ್ತಾನೆ. ಆ ತಿಳಿವಳಿಕೆಯನ್ನು ಉಪಯೋಗಿಸಿಕೊಳ್ಳದೆ ಇದ್ದರೆ ನಮ್ಮದೇ ತಪ್ಪು; ಭಗವಂತನಿಗೆ ಮರುಕವಾಗುತ್ತದೆ, ಅಷ್ಟೆ.

'ನಾನು ಕೊಟ್ಟದ್ದನ್ನು ಹೇಗೆ ಉಪಯೋಗಿಸಿದೆ !' ಎಂದು ಭಗವಂತನು ಕೇಳುತ್ತಲೇ ಇರುತ್ತಾನೆ. ಚಾಕಿನಿಂದ ಪದಾರ್ಥಗಳನ್ನು ಕತ್ತರಿಸುವದನ್ನು ಬಿಟ್ಟು ಕೈಬೆರಳನ್ನು ಕತ್ತರಿಸಿಕೊಂಡರೆ, ಹಣವನ್ನು ನಿಮ್ಮ ಸೌಖ್ಯಕ್ಕೂ ಮತ್ತೊಬ್ಬರಿಗೆ ಉಪಕಾರಮಾಡುವದಕ್ಕೂ ಉಪಯೋಗಿಸದೆ ಜೂಜು, ಜಗಳ, ದುರ್ವ್ಯಸನ-ಇವುಗಳಿಗೆ ಉಪಯೋಗಿಸಿದರೆ 'ನಾನು ಕೊಟ್ಟಿದ್ದನ್ನು ಹೇಗೆ ಉಪಯೋಗಿಸಿದೆ ?'-ಎಂದು ಕೇಳುವನು. ನಿಮಗೆ ದೊರೆತಿರುವ ಶರೀರಧನಾದಿಗಳನ್ನು ಹೇಗೆ ಸದ್ವಿನಿಯೋಗಮಾಡಬೇಕು?- ಎಂಬುದನ್ನು ಮೊದಲು ತಿಳಿದುಕೊಳ್ಳಿರಿ. ಆಗ ನಿಮಗೆ ಭಗವಂತನು ಪ್ರಸನ್ನನಾಗುವನು. **ಸಂ-31, 213**

## ಬೌದ್ಧಸಿದ್ಧಾಂತದ ಮೂಲತತ್ತ್ವಗಳು

(ಶ್ರೀ॥ ಯಾಮಕಾಮಿ ಸೋಜೆನ್-ಇವರು ಬರೆದಿರುವ (Systems of Buddhistic Thought) ಎಂಬ ಗ್ರಂಥದ ಆಧಾರದಿಂದ ಬರೆದದ್ದು.)

ಬೌದ್ಧರು ತಮ್ಮ ಧರ್ಮದ ಸಿದ್ಧಾಂತದ ಮೂಲತತ್ತ್ವಗಳು ಯಾವದೆಂದು ಎಣಿಸುತ್ತಾರೆಂಬ ವಿಷಯದಲ್ಲಿ ನಮ್ಮವರು ಬರೆದಿರುವ ಶಾಸ್ತ್ರಗ್ರಂಥಗಳೇ ಇದುವರೆಗೆ

ನಮಗೆ ಆಧಾರವಾಗಿದ್ದವು. ಬೌದ್ಧಮತದ ತತ್ತ್ವಗಳನ್ನು ಖಂಡನೆಗಾಗಿ ಅಲ್ಲಲ್ಲಿ ನಮ್ಮ ಶಾಸ್ತ್ರಕಾರರು ಉದಾಹರಿಸಿರುತ್ತಾರೆ; ಆದರೆ ಅವು ಬೌದ್ಧರೂ ಒಪ್ಪಿರುವ ಸಿದ್ಧಾಂತಗಳೆ?- ಎಂದು ಅನೇಕರಿಗೆ ಸಂಶಯವು ಉಂಟಾಗಿ ಈಗಿನ ಬೌದ್ಧರು ಈ ವಿಷಯದಲ್ಲಿ ಏನು ಹೇಳುತ್ತಾರೋ, ಅವರ ಮೂಲಗ್ರಂಥಗಳಲ್ಲಿ ಏನು ಹೇಳಿದೆಯೋ ಅದನ್ನೇ ನೇರವಾಗಿ ನೋಡಬೇಕೆಂಬ ತವಕವು ಸಹಜವಾಗಿ ಉಂಟಾಯಿತು. ಪಾಶ್ಚಾತ್ಯ ವಿದ್ವಾಂಸರು ಅನೇಕ ಬೌದ್ಧಗ್ರಂಥಗಳನ್ನು ಪರಿಶೋಧಿಸಿ ಅವುಗಳನ್ನು ಇಂಗ್ಲಿಷು ಮುಂತಾದ ಭಾಷೆಗಳಿಗೆ ಪರಿವರ್ತನೆ ಮಾಡಿರುತ್ತಾರೆ; ಸಿಂಹಳ, ಬರ್ಮ, ಟಿಬೆಟ್, ಚೀನ, ಜಪಾನು-ಮುಂತಾದ ಸೀಮೆಗಳಲ್ಲಿರುವ ಬೌದ್ಧರೂ ಈ ಕಾರ್ಯಕ್ಕೆ ಸಹಾಯಮಾಡಲು ಈಗ ಮುಂದಕ್ಕೆ ಬರುತ್ತಿದ್ದಾರೆ. ಆದ್ದರಿಂದ ನಾವು ದುರಭಿಮಾನ ವನ್ನು ಬಿಟ್ಟು ಆಯಾಮತದ ತತ್ತ್ವಗಳನ್ನು ಆಯಾ ಮತದವರಿಂದಲೇ ತಿಳಿಯಬೇಕೆಂಬ ಕುತೂಹಲವುಳ್ಳವರಾಗಿದ್ದರೆ ಈಗ ನಾವು ನಮ್ಮವರು ಹೇಳಿರುವ ಬೌದ್ಧವಿಚಾರಗಳನ್ನು ಒತ್ತಟ್ಟಿಗೆ ಇಟ್ಟು ನೇರಾಗಿ ಬೌದ್ಧಧರ್ಮದ ವಿಚಾರಗಳನ್ನು ತಿಳಿಯಲು ತಕ್ಕ ಕಾಲವಾಗಿದೆ. ಇದರಿಂದ ಬೌದ್ಧರ ವಿಷಯದಲ್ಲಿ ನಮಗಿರುವ ಅಸಡ್ಡೆಯೂ ಕರಗಿಹೋಗುವದು; ಒಬ್ಬರನ್ನೊಬ್ಬರು 'ವೇದಬಾಹ್ಯ', 'ಪ್ರಚ್ಛನ್ನಬೌದ್ಧ', 'ಶೂನ್ಯವಾದಿ'-ಎಂದು ಮುಂತಾಗಿ ಬಯ್ಯುವ ಚಟವೂ ನಿಂತುಹೋಗುವ ಸಂಭವವಿರುವದು. ಆದ್ದರಿಂದ ಬೌದ್ಧರ ಸಿದ್ಧಾಂತಗಳನ್ನು ಸ್ವಲ್ಪದರಲ್ಲಿ ಅಡಗಿಸಿ ಆಗಿಂದಾಗ್ಗೆ ತಿಳಿಸಬೇಕೆಂದು ನಿಶ್ಚಯಿಸಿ ಇದನ್ನು ಲೇಖನವನ್ನು ಪೀಠಿಕೆಯಾಗಿ ಬರೆದಿರುತ್ತೇವೆ.

ಬೌದ್ಧರ ಸಿದ್ಧಾಂತವನ್ನು ಮುಖ್ಯವಾಗಿ ಮೂರು ವಾಕ್ಯಗಳಿಂದ ತಿಳಿಸಬಹುದು. ಎಲ್ಲವೂ ಅನಿತ್ಯ, ಎಲ್ಲವೂ ಅನಾತ್ಮ, ನಿರ್ವಾಣವೇ ಶಾಂತವಾದದ್ದು. ಬೌದ್ಧರಲ್ಲಿ ಅನೇಕ ಪಂಗಡಗಳಿರುವವು, ಅವರಲ್ಲಿ ಅನೇಕ ಮತಭೇದಗಳಿರುವವು; ಆದರೆ ಈ ಮೂರನ್ನು ಒಪ್ಪದೆ ಇರುವ ಬೌದ್ಧನಿಲ್ಲ; ಯಾವನಾದರೂ ಈ ಮೂರನ್ನೂ ಒಪ್ಪಿದರೆ ಬೌದ್ಧನಾ ದಂತೆಯೇ. ಮಹಾಯಾನದವರು 'ಸರ್ವವೂ ತಾನು ಇರುವಂತೆಯೇ ಇರುವದು' ಎಂಬ ಮತ್ತೊಂದು ತತ್ತ್ವವನ್ನೂ ತಾವು ಒಪ್ಪಿರುವದಾಗಿ ಹೇಳಿಕೊಳ್ಳುವರು; ಆದರೆ ಇದು ಮೂರನೆಯ ತತ್ತ್ವದಿಂದ ಸಿದ್ಧವಾಗುವದಾದ್ದರಿಂದ ಇದನ್ನು ಸ್ವತಂತ್ರವಾಗಿರುವ ತತ್ತ್ವವೆಂದು ಭಾವಿಸಬೇಕಾದದ್ದಿಲ್ಲ. ಇದರಂತೆಯೇ 'ಸರ್ವವೂ ದುಃಖವೂ' ಎಂಬ ತತ್ತ್ವವೂ 'ಸರ್ವವೂ ಅನಿತ್ಯ'ವೆಂಬದರಲ್ಲಿಯೇ ಸೇರಿಹೋಗಿರುವದರಿಂದ ಅದೂ ಹೊಸ ದಲ್ಲ. ಇಲ್ಲಿ ಹೇಳಿರುವ ಮೂರು ತತ್ತ್ವಗಳನ್ನೂ ಬೌದ್ಧರು 'ಮುದ್ರೆ'ಗಳೆಂದು ಕರೆಯುತ್ತಾರೆ.

**1.** ಸರ್ವವೂ ಅನಿತ್ಯವೆಂಬ ಮುದ್ರೆಯಲ್ಲಿ ಮೂರು ವಿಷಯಗಳು ಅಡಕ ವಾಗಿರುವವು. ಈ ಪ್ರಪಂಚದಲ್ಲಿ ನಮಗೆ ತೋರುವದು ಯಾವದೂ ನಾಶವಾಗದೆ

ಇರುವದಿಲ್ಲ; ಹುಟ್ಟಿದ್ದು ಸಾಯಲೇಬೇಕು. ಯಾವದು ಉಂಟಾಯಿತೋ ಅದು ಇಲ್ಲವಾಗಲೇ ಬೇಕು. ಇದು ಮೊದಲನೆಯ ಭಾಗ. ಪ್ರತಿಯೊಂದು ವಸ್ತುವೂ ಕ್ಷಣಿಕವಾಗಿರುವದು, ಒಂದೊಂದು ಕ್ಷಣದಲ್ಲಿಯೂ ಹುಟ್ಟಿ ಸವೆಯುತ್ತಿರುವದು, ಒಂದು ಕ್ಷಣದಲ್ಲಿ ಇದ್ದಂತೆ ಮತ್ತೊಂದು ಕ್ಷಣದಲ್ಲಿ ಇರುವದಿಲ್ಲ. ಹಿಂದಿನ ಕ್ಷಣವು ಆಗಿಹೋಯಿತು, ಈಗ ಇರುವದಿಲ್ಲ, ಮುಂದಕ್ಕೂ ಇರುವದಿಲ್ಲ; ಈಗಿನ ಕ್ಷಣವು ಹಿಂದೆ ಇರಲಿಲ್ಲ, ಮುಂದೆಯೂ ಇರುವದಿಲ್ಲ; ಮುಂದಿನ ಕ್ಷಣವೆಂಬುದು ಈಗ ಇಲ್ಲ, ಹಿಂದೆಯೂ ಇರಲಿಲ್ಲ. ಪ್ರತಿಯೊಂದು ವಸ್ತುವೂ ಹುಟ್ಟುವದು, ಇರುವದು, ಸವೆಯುವದು, ಹಾಳಾಗುವದು. ಈ ನಾಲ್ಕೂ ವಸ್ತುವಿಗೆ ಗಂಟುಬಿದ್ದ ಸ್ವಭಾವಗಳು; ಈ ಚತುರ್ಲಕ್ಷಣವಿಲ್ಲದ ವಸ್ತುವೇ ಇಲ್ಲ. ಹೀಗಿರುವದರಿಂದ ಎರಡು ಕ್ಷಣಗಳವರೆಗಾದರೂ ಯಾವ ವಸ್ತುವೂ ಇರುವದಕ್ಕಿಲ್ಲ. ಇದು ಅನಿತ್ಯವಾದದ ಎರಡನೆಯ ಭಾಗ. ಇನ್ನು ಎಲ್ಲವೂ ಶೂನ್ಯವೆಂಬುದು ಈ ವಾದದ ಮೂರನೆಯ ಭಾಗವು. ವಸ್ತುವು ನಾಶವಾಗುವದಕ್ಕೆ ಅದು ಕ್ಷಣಿಕವಾಗಿರುವದೆಂಬುದು ಹೇಗೆ ಅವಶ್ಯಕವೋ, ಹಾಗೆಯೇ ವಸ್ತುವು ಕ್ಷಣಿಕವಾಗಿರುವದಕ್ಕೆ ಅದು ಶೂನ್ಯವಾಗಿರುವದೂ ಅವಶ್ಯಕವು. ಶೂನ್ಯವೆಂದರೆ ಬರಿದಾಗಿರುವದೆಂದಾಗಲಿ, ಏನೂ ಇಲ್ಲದುದೆಂದಾಗಲಿ ಅರ್ಥವಲ್ಲ. ಸ್ವಭಾವವಿಲ್ಲದಿರುವದು, ಸ್ವರೂಪವಿಲ್ಲದಿರುವದು-ಎಂಬುದೇ ಶೂನ್ಯವೆಂಬ ಮಾತಿನ ಅರ್ಥವು. ಈ ತೋರಿಕೆಯ ಪ್ರಪಂಚದಲ್ಲಿ ಎಡೆಬಿಡದೆ ಮಾರ್ಪಾಡುಗಳು ಆಗುತ್ತಲೇ ಇರುವವು. ಯಾವದೊಂದಕ್ಕೂ ನಿಲುಗಡೆಯುಳ್ಳ ಅದರ ಸ್ವಭಾವವೆಂಬುದು ಇಲ್ಲವೇ ಇಲ್ಲ-ಎಂಬುದು ಅನಿತ್ಯವಾದದ ಜೀವಾಳವು.

**2. ಎಲ್ಲವೂ ಅನಾತ್ಮವು,** ಯಾವದೊಂದಕ್ಕೂ ಆತ್ಮವಿಲ್ಲ- ಎಂಬ ಎರಡನೆಯ ಮುದ್ರೆಯನ್ನು ಕುರಿತು ಈಗ ವಿಚಾರಿಸಬಹುದು. ನಮ್ಮೊಳಗಿನ ಆತ್ಮವೂ ಇಲ್ಲ, ಹೊರಗಿನ ವಸ್ತುಗಳ ಆತ್ಮವೂ ಇಲ್ಲ-ಎಂಬುದೇ ನೈರಾತ್ಮವಾದವು. ಆತ್ಮವೆಂದರೆ ಸ್ವತಂತ್ರವಾಗಿ ನಿತ್ಯವಾಗಿ ನಿರಪೇಕ್ಷವಾಗಿರುವ ವಸ್ತು. ಶರೀರವೂ, ಮನಸ್ಸೂ ಸೇರಿ 'ನಾನು' ಎಂಬ ಒಂದು ವಸ್ತುವಾಗಿರುವದೆಂದು ಕೆಲವರು ಭಾವಿಸುವರು. ಇದು ಸಾಮಾನ್ಯರ ಭಾವನೆ; ಅವರಿಗೆ 'ನಾನು' ಎಂಬ ಪದಾರ್ಥವು ಯಾವದೆಂಬ ವಿಷಯದಲ್ಲಿ ನಿಶ್ಚಯವಿಲ್ಲ. ಶರೀರಮನಸ್ಸುಗಳಿಗಿಂತ ಬೇರೆಯಾಗಿ ಇವುಗಳೆರಡನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಪದಾರ್ಥವೇ ನಾನು ಎಂದು ಕೆಲವರು ತಿಳಿದಿರುವರು. ಇನ್ನು ಕೆಲವರಿಗೆ ಶರೀರಮನಸ್ಸುಗಳಿಗಿಂತ ಈ 'ನಾನು' ಎಂಬುದು ಬೇರೆಯೂ ಅಲ್ಲ, ಅವುಗಳೇ ಎಂದೂ ಅಲ್ಲ; ಇಂಥ ವಿಚಿತ್ರಸ್ವಭಾವದ ವಸ್ತು. ಈ ಮೂರು ವಿಧವಾದ ಆತ್ಮವನ್ನೂ ಬೌದ್ಧರು ಒಪ್ಪುವದಿಲ್ಲ. ಸ್ಥಿರವಾದ ಸ್ವತಂತ್ರವಸ್ತುವಿಲ್ಲವೇ ಇಲ್ಲವೆಂದು ಅವರು ಅಭಿಪ್ರಾಯ

ಪಟ್ಟಿರುವದರಿಂದ ಅವರ ಮತದಲ್ಲಿ ಇಂಥ ಆತ್ಮವು ಇರುವದೆಂಬುದಕ್ಕೆ ಸಾಧಕವೇನೂ ಇರುವದಿಲ್ಲ; ಅನಿತ್ಯವಸ್ತುವಿಗೆ ಸ್ವಾತಂತ್ರ್ಯವೆಲ್ಲಿ ಬಂದೀತು? ಬೌದ್ಧಮತದಲ್ಲಿ ಆತ್ಮವುಂಟೆಂದು ಕೆಲವು ಕಡೆಗಳಲ್ಲಿ ಹೇಳಿರುವದು ವ್ಯವಹಾರದೃಷ್ಟಿಯಿಂದಲೇ ಹೊರತು ಅದೇನೂ ಪರಮಾರ್ಥವಲ್ಲ.

ಅನಾತ್ಮವಾದದಲ್ಲಿ ಶರೀರಕ್ಕಿಂತ ಬೇರೆಯಾಗಿ ಸ್ವತಂತ್ರವಾಗಿರುವ ಆತ್ಮವನ್ನು ಒಪ್ಪಿರುವದಿಲ್ಲವೆಂಬುದೊಂದೇ ಅಲ್ಲ; ಇದರಂತೆ ಜಗತ್ಕರ್ತನಾದ ಈಶ್ವರಾತ್ಮನೊಬ್ಬನು ಇದಾನೆಂಬುದನ್ನೂ ಒಪ್ಪಿರುವದಿಲ್ಲ. ಯದೃಚ್ಛಾ (ಎಂದರೆ ಹೇಗೋ ಕಾರಣವಿಲ್ಲದೆ ಆಗುವದು), ನಿಯತಿ (ಎಂದರೆ ಹೀಗೆ ಆಗಿಯೇ ತೀರಬೇಕೆಂಬ ಅದೃಷ್ಟನಿಯಮ), ಈಶ್ವರ (ದೇವರು)-ಇಂಥ ಕಾರಣಗಳಿಂದ ಮನುಷ್ಯನ ಸುಖದುಃಖಾದಿಗಳು ಉಂಟಾಗುವವೆಂದು ನಂಬುವದು ಮನುಷ್ಯನ ಸೋಮಾರಿತನಕ್ಕೆ ಕಾರಣವೆಂದು ಬೌದ್ಧರ ಅಭಿಪ್ರಾಯವು. ಈ ಮತದಲ್ಲಿ ಜೀವಾತ್ಮ, ಈಶ್ವರಾತ್ಮ-ಈ ಎರಡು ಆತ್ಮರನ್ನೂ ತಿರಸ್ಕರಿಸಿ ಮಹಾತ್ಮ, ಪರಮಾತ್ಮ-ಎಂಬ ಒಂದು ಆತ್ಮವನ್ನು ಬೋಧಿಸುವದುಂಟು. ಇದಕ್ಕೆ **ತಥಾಗತ ಗರ್ಭ**ವೆಂದೂ ಹೆಸರು. ತಥಾಗತನೆಂದರೆ ಬುದ್ಧನು. ಪ್ರತಿಯೊಂದು ಪ್ರಾಣಿಯಲ್ಲಿ ತಥಾಗತಸ್ವಭಾವವು ಇದ್ದೇ ಇರುವದಾದರೂ ಕ್ಲೇಶಗಳ ಮುಸುಕಿನಲ್ಲಿ ಈ ಸ್ವಭಾವವು ಸಿಕ್ಕಿರುವದರಿಂದ ಹೊರತೋರಿಕೊಳ್ಳದೆ ಇರುವದೆಂದು ಹೇಳುವರು. ಬೌದ್ಧರು ಹೇಳುವ ಈ ತಥಾಗತಗರ್ಭಕ್ಕೂ ವೇದಾಂತಿಗಳು ಹೇಳುವ ನಿರ್ಗುಣಪರಮಾತ್ಮನಿಗೂ ಬಹಳ ಹೋಲಿಕೆಯುಂಟೆಂದು ಮೇಲೆ ನೋಡುವದಕ್ಕೆ ತೋರುವದು. ಆದರೆ ಆತ್ಮವಾದಿಗಳನ್ನು ತಮ್ಮ ಕಡೆಗೆ ಎಳೆದುಕೊಳ್ಳುವದಕ್ಕೂ, ಅನಾತ್ಮವಾದವೆಂದರೆ ಬೆಚ್ಚಿ ಬೀಳುವವರ ಹೆದರಿಕೆಯನ್ನು ತಪ್ಪಿಸುವದಕ್ಕೂ ಬುದ್ಧರು ತಥಾಗತಗರ್ಭವನ್ನುಪದೇಶಿಸಿದರೆಂದು **ಲಂಕಾವತಾರ ಸೂತ್ರ**ವೇ ಮುಂತಾದ ಗ್ರಂಥಗಳಲ್ಲಿ ಹೇಳಿರುವದರಿಂದ ನೈರಾತ್ಮ್ಯವೆಂದರೆ ಆತ್ಮವು ಇಲ್ಲವಾಗುವದೆಂಬ ಅರ್ಥವನ್ನು ಮಾಡಿಕೊಳ್ಳಬಾರದೆಂಬುದೇ ಈ ವಾದದ ತಿರುಳೆಂದು ತೋರುವದು.

**3. ನಿರ್ವಾಣವೇ ಶಾಂತವಾದದ್ದು** ಎಂಬ ಮೂರನೆಯ ಮುದ್ರೆಯು ಬೌದ್ಧ ಸಿದ್ಧಾಂತಕ್ಕೆಲ್ಲ ಕೇಂದ್ರರೂಪವಾದದ್ದು. ಎಲ್ಲವೂ ಅನಿತ್ಯವಾಗಿ ಯಾವದಕ್ಕೂ ತಿರುಳಿಲ್ಲವೆಂಬುದು ನಿಜವಾದರೆ, ನಿರ್ವಾಣವೇ ಶಾಂತವೆಂಬುದು ತಾನೇ ಸಿದ್ಧವಾಗುವದು. ಈ ನಿರ್ವಾಣವೆಂಬುದರ ಸ್ವಭಾವವನ್ನು ಮಾತುಗಳಿಂದ ತಿಳಿಯಪಡಿಸುವದು ಆಗಲಾರದು; ಅದನ್ನು ಶಾಸ್ತ್ರದಲ್ಲಿ ಹೇಳಿರುವ ಸಾಧನಗಳ ಅಭ್ಯಾಸದಿಂದ ಪಡೆದ ಅನುಭವದಿಂದಲೇ ಕಂಡುಕೊಳ್ಳಬೇಕು. ಅದು ಸಾಧನದಿಂದ ಪಡೆಯತಕ್ಕದ್ದಲ್ಲ, ಹೋಗಿ ತಲುಪತಕ್ಕ ಸ್ಥಳವಲ್ಲ, ತಾನೇ ಹುಟ್ಟತಕ್ಕದ್ದಲ್ಲ, ಯಾವದಾದರೂ

ನಾಶವಾಗಿ ಬರತಕ್ಕದ್ದಲ್ಲ. ಬಯಕೆ, ಹೊಟ್ಟೆಯ ಕಿಚ್ಚು, ಕೆಟ್ಟ ಬುದ್ಧಿ-ಎಂಬ ಮೂರು ದೋಷಗಳೂ ಹೋಗಿ, ಎಲ್ಲಾ ವಿಧವಾದ ದುಃಖವೂ ತೊಲಗಿ, ಹುಟ್ಟುಹೊಂದುಗಳಲ್ಲಿ ತೊಳಲುವದು ನಿಂತುಹೋಗುವದು ನಿರ್ವಾಣವು; ಪರೋಪಕಾರ, ಪ್ರೇಮ, ಜ್ಞಾನ-ಇವುಗಳಿಂದ ಹೃದಯವನ್ನು ಶುದ್ಧಿಗೊಳಿಸಿ ಕೊಂಡು ಅಜ್ಞಾನವೇ ಮುಂತಾದವುಗಳ ಸಂಕೋಲೆಯನ್ನು ಕಳಚಿಕೊಳ್ಳುವದೇ ನಿರ್ವಾಣವು.

ನಿರ್ವಾಣವೆಂದರೆ ಮಾಡಬೇಕಾದ ಯಾವ ಕಾರ್ಯವೂ ಇಲ್ಲದೆ ಧ್ಯಾನದಿಂದ ಕಾಲವನ್ನು ಕಳೆಯುವ ಸ್ಥಿತಿಯೆಂದು ಹೀನಯಾನಮಾರ್ಗದ ಕೆಲವು ಬೌದ್ಧರ ಅಭಿಪ್ರಾಯ ವಿರುವದು; ಯಾರು ಹಳೆಯ ಕರ್ಮವನ್ನು ತೀರಿಸಿಕೊಂಡು ಹೊಸದಾಗಿ ಕೂಡಿಹಾಕ ಕೊಳ್ಳದೆ, ಮುಂದೆ ಹುಟ್ಟಬಾರದೆಂಬ ಉದ್ದೇಶದಿಂದ ವಾಸನೆಯನ್ನೆಲ್ಲ ಕಳೆದುಕೊಂಡು ಆಶೆಯನ್ನೆಲ್ಲ ಕತ್ತರಿಸಿಕೊಂಡಿರುವರೋ ಅವರು ದೀಪವು ಆರಿ ಹೋಗುವಂತೆ ನಿರ್ವಾಣ ವನ್ನು ಹೊಂದುವರೆಂಬುದು ಹೀನಯಾನದ ಸಿದ್ಧಾಂತವು.

**ಮಹಾಯಾನಮಾರ್ಗ**ದ ಬೌದ್ಧರ ಅಭಿಪ್ರಾಯವು ಹೀಗಿಲ್ಲ. ಅವರು ಹೇಳುವದೇ ನೆಂದರೆ, ಮಾಯಾಸಮಾಧಿಯೇ ಮುಂತಾದ ಎಲ್ಲಾ ಸಮಾಧಿಗಳ ಅಂತಸ್ತುಗಳನ್ನೂ ಏರಿ ತಥಾಗತಸ್ಥಿತಿಗೆ ಏರುವದರಿಂದ ಮನಸ್ಸನ್ನು ಲಯಗೊಳಿಸುವದೇ ನಿರ್ವಾಣ ವೆನಿಸುವದು. ಇದಕ್ಕೆ ಮೊದಲು ಹೊರಗಿನ ವಸ್ತುಗಳೆಲ್ಲ ಮನಸ್ಸಿನ ಕಲ್ಪನೆ ಯೆಂಬುದನ್ನು ತಿಳಿದಿರಬೇಕು; ವಸ್ತುಸ್ಥಿತಿಯಲ್ಲಿ (ಇರುವಿಕೆ, ಇಲ್ಲದಿರುವಿಕೆ, ಇದ್ದೂ ಇಲ್ಲದಿರುವಿಕೆ, ಇರುವದು ಇಲ್ಲದ್ದು-ಎಂಬ ಎರಡೂ ಅಲ್ಲದಿರುವಿಕೆ ಎಂಬ) ನಾಲ್ಕು ಕೋಟಿಗಳೂ ಇಲ್ಲವೆಂದು ತಿಳಿದಿರಬೇಕು; ಅರಿಯುವದು ಅರಿಯಲ್ಪಡುವದು ಎಂಬಿವೆರಡೂ ಮನಃಕಲ್ಪಿತವೆಂಬುದನ್ನು ತಿಳಿದು ಅವುಗಳು ಕಾಣದಂತೆ ಮಾಡಿಕೊಂಡಿರಬೇಕು; ಯಾವ ಪ್ರಮಾಣವೂ ನೆಲೆಗೆ ನಿಲ್ಲದೆಂಬುದನ್ನು ಗೊತ್ತಮಾಡಿಕೊಂಡಿರಬೇಕು; ತತ್ತ್ವವೆಂಬುದೂ ಭ್ರಾಂತಿಯೇ ಎಂದು ತಿಳಿದಿರಬೇಕು; ಆರ್ಯಧರ್ಮವೇ ಸಕಲ ಪ್ರಮಾಣಗಳನ್ನೂ ಒಳಗೊಂಡಿರುವದೆಂದು ತಿಳಿದಿರಬೇಕು; ಎರಡು ನೈರಾತ್ಮ್ಯವನ್ನೂ ಮನಗಂಡಿರಬೇಕು. ಎರಡು ಕ್ಲೇಶಗಳೂ, ಎರಡು ಮುಸುಕುಗಳೂ ಹೋಗಿರಬೇಕು. ಅಂಥವರಿಗೆ ನಿರ್ವಾಣವಾಗುವದೆಂಬುದು ಮಹಾಯಾನದ ಸಿದ್ಧಾಂತವು.

ಮೇಲೆ ಕೊಟ್ಟಿರುವ ನಿರ್ವಾಣದ ವರ್ಣನೆಯನ್ನು ಚೆನ್ನಾಗಿ ಅರ್ಥಮಾಡಿ ಕೊಳ್ಳಬೇಕಾದರೆ ಅದರಲ್ಲಿ ಹೇಳಿರುವ ಒಂದೊಂದು ಸಾಧನೆಯ ಸ್ವರೂಪವನ್ನೂ ಬಿಚ್ಚಿ ತಿಳಿದುಕೊಳ್ಳಬೇಕಾಗುವದು. **ಸಂ-3, 290**

# ಬೌದ್ಧಮತದಲ್ಲಿ ಕರ್ಮವಿಪಾಕ

ಭರತಖಂಡದಲ್ಲಿ ಹುಟ್ಟಿರುವ ದರ್ಶನಗಳಿಗೂ ಮಿಕ್ಕ ದರ್ಶನಗಳಿಗೂ ಕರ್ಮವಿಚಾರದಲ್ಲಿ ಒಂದು ಮುಖ್ಯವಾದ ಮತಭೇದವುಂಟು. ಮಾಡಿದ ಕರ್ಮಕ್ಕೆ ತಕ್ಕಂತೆ ಫಲವು ಆಗಲೇಬೇಕೆಂಬುದನ್ನು ಎಲ್ಲರೂ ಒಪ್ಪಿರುತ್ತಾರಾದರೂ ಈ ಫಲವು ಈ ಜನ್ಮದಲ್ಲಿ ಆಗದಿದ್ದರೆ ಮತ್ತೊಂದು ಜನ್ಮದಲ್ಲಿಯಾದರೂ ಆಗಿಯೇ ತೀರುವದೆಂಬ ಅಭಿಪ್ರಾಯವು ನಮ್ಮ ದೇಶದ ಸಿದ್ಧಾಂತಗಳಲ್ಲಿ ಮಾತ್ರವೇ ಕಂಡುಬರುತ್ತದೆ. ಬುದ್ಧನು ಕ್ಷತ್ರಿಯನಾಗಿ ಹುಟ್ಟಿ ವೈದಿಕಸಂಸ್ಕಾರದಿಂದ ಬೆಳೆದವನಾದ್ದರಿಂದ ಅವನಿಗೆ ಜನ್ಮಾಂತರದಲ್ಲಿ ನಂಬಿಕೆಯು ಸ್ವಾಭಾವಿಕವಾಗಿಯೇ ಉಂಟಾಗಿತ್ತು.

ಆದರೆ ಬೌದ್ಧಮತದಲ್ಲಿ ಆತ್ಮನೊಬ್ಬನಿದಾನೆಂಬುದನ್ನು ಅಂಗೀಕರಿಸಿರುವದಿಲ್ಲ. ಸಕಲವೂ ನಿರಾತ್ಮಕಾಗಿರುವದು; ನಮ್ಮ ಹೊರಗೆ ಕಾಣಿಸುವ ಪದಾರ್ಥಗಳಲ್ಲಾಗಲಿ, ನಮ್ಮಲ್ಲಾಗಲಿ ಹೊರಗೆ ತೋರುವ ವಿಕಾರರಾಶಿಯನ್ನು ಬಿಟ್ಟು ಅದಕ್ಕೆ ಆಧಾರವಾಗಿರುವ ಸ್ಥಿರವಸ್ತುವೊಂದು ಇರುವದೆಂಬುದೇ ಭ್ರಾಂತಿಯು, ಎಂಬುದು ಈ ಮತದಲ್ಲಿ ಒಂದು ಬಹು ಮುಖ್ಯವಾದ ತತ್ತ್ವವಾಗಿರುತ್ತದೆ. ಹೀಗೆ ನಿರಾತ್ಮವಾದವನ್ನು ಇಟ್ಟುಕೊಂಡಿದ್ದರೂ ಭರತಖಂಡದ ಮಿಕ್ಕ ದರ್ಶನಗಳಂತೆ ಜನ್ಮಾಂತರಗಳನ್ನೂ ಒಪ್ಪಿರುವದು ಈ ಮತದಲ್ಲಿ ಒಂದು ವಿಶೇಷವಾಗಿರುತ್ತದೆ.

ಲೋಕದಲ್ಲಿ ಜನರ ಶರೀರಬಲ, ಆರೋಗ್ಯ, ಬುದ್ಧಿ, ಐಶ್ವರ್ಯ-ಮುಂತಾದವುಗಳು ಎಲ್ಲರಲ್ಲಿಯೂ ಒಂದೇ ಸಮನಾಗಿರುವದಿಲ್ಲ; ತಾವು ತಾವು ಮಾಡಿದ ಕರ್ಮಗಳಿಗೆ ಫಲಗಳನ್ನು ಈ ಜನ್ಮದಲ್ಲಿಯೇ ಎಲ್ಲರೂ ಹೊಂದುವದೂ ಕಂಡುಬರುವದಿಲ್ಲ. ಹೀಗಿರುವ ಜನರ ಸ್ಥಿತಿಯ ವೈಚಿತ್ರ್ಯವನ್ನೂ ಕರ್ಮದ ಫಲದ ನಿಯಮವನ್ನೂ ತೃಪ್ತಿಕರವಾಗಿ ಬಿಡಿಸಿ ಹೇಳಬೇಕಾದರೆ ಲೋಕಾಂತರಗತಿಯನ್ನೂ ಜನ್ಮಾಂತರವಾದವನ್ನೂ ಇಟ್ಟುಕೊಳ್ಳಲೇಬೇಕಾಗುವದೆಂಬುದು ಈ ದೇಶದ ಕರ್ಮವಾದಿಗಳಿಗೆಲ್ಲ ಸಮವಾಗಿರುವದು; ಆದರೆ ಬೌದ್ಧಮತದಲ್ಲಿ ಕರ್ಮವನ್ನು ಮಾಡುವ ಆತ್ಮನೇ ಇಲ್ಲವಾದ ಮೇಲೆ, ಅದರ ಫಲವನ್ನು ಅನುಭವಿಸುವದಕ್ಕೆ ಲೋಕಾಂತರಕ್ಕೆ ಹೋಗುವವನು ಯಾರು? ದೇಹಾಂತರವನ್ನು ಪಡೆಯುವವನು ಯಾರು?-ಎಂಬ ಪ್ರಶ್ನೆಯು ಸಹಜವಾಗಿ ತಲೆದೋರುವದಷ್ಟೆ. ಅದಕ್ಕೆ ಬೌದ್ಧರ ಉತ್ತರವು ಹೀಗಿರುವದು : ರೂಪ, ವೇದನಾ, ವಿಜ್ಞಾನ, ಸಂಜ್ಞಾ, ಸಂಸ್ಕಾರ-ಎಂಬ ಐದು ಸ್ಕಂಧಗಳ ಗುಂಪನ್ನೇ ನಾವು ಮನುಷ್ಯನೆಂದು ಕರೆಯುವೆವು. ಈ ಸ್ಕಂಧಗಳಲ್ಲಿ ಯಾವದೊಂದೂ ನಿತ್ಯವಲ್ಲ; ಪ್ರತಿಯೊಂದೂ ಕ್ಷಣಕ್ಷಣಕ್ಕೂ ಮಾರ್ಪಡುತ್ತಲೇ ಇರುವದು. ಇವುಗಳಲ್ಲಿ ಯಾವದೊಂದೂ ಆತ್ಮನಲ್ಲ. ಇವುಗಳಿಗಿಂತ ಬೇರೆಯಾಗಿ ಆತ್ಮನೊಬ್ಬನು ಇಲ್ಲವೂ ಇಲ್ಲ. ಆದರೂ ಒಂದು ಪ್ರಾಣಿಯು ಸತ್ತಮಾತ್ರ

ದಿಂದ ಅದರ ಕರ್ಮಗಳೆಲ್ಲವೂ ಅಲ್ಲಿಗೇ ತೀರುವದಿಲ್ಲ; ಅವುಗಳ ಫಲವನ್ನು ಅನುಭವಿಸುವದಕ್ಕೆ ತಕ್ಕ ಮತ್ತೊಂದು ಪ್ರಾಣಿಯು ಹುಟ್ಟುವದು. ಒಂದು ದೀಪದಿಂದ ಮತ್ತೊಂದು ದೀಪವನ್ನು ಹಚ್ಚಿಕೊಂಡರೆ, ಮೊದಲನೆಯ ದೀಪವು ಎರಡನೆಯ ದೀಪವಿರುವ ಸ್ಥಳಕ್ಕೇನೂ ದಾಟಿ ಬಂದಿರುವದಿಲ್ಲ; ಒಂದು ಪದ್ಯವನ್ನು ಮತ್ತೊಬ್ಬರಿಂದ ನಾವು ಕಲಿತುಕೊಂಡರೆ ಆ ಪದ್ಯವು ಅವರಿಂದ ಹೊರಟು ನಮ್ಮ ಬಳಿಗೇನೂ ಬರುವದಿಲ್ಲ, ಈ ದೃಷ್ಟಾಂತಗಳಲ್ಲಿ ಹೊಸ ದೀಪವು ಹಳೆಯ ದೀಪದ ಸಂಬಂಧದಿಂದ ಹುಟ್ಟಿರುವಂತೆಯೂ, ಮತ್ತೊಬ್ಬರ ಉಪದೇಶದಿಂದ ನಮ್ಮಲ್ಲಿ ಪದ್ಯವು ತಲೆದೋರಿರುವಂತೆಯೂ ಒಂದು ಸ್ಕಂಧಗಳ ರಾಶಿಯು ನಾಶವಾಗುತ್ತಲೂ ಅದರ ಕರ್ಮದ ಫಲವಾಗಿ ಅದರಂತೆಯೇ ಇರುವ ಮತ್ತೊಂದು ಸ್ಕಂಧರಾಶಿಯು ಯೋಗ್ಯಕಾಲದಲ್ಲಿ ಯೋಗ್ಯ ದೇಶದಲ್ಲಿ ಹುಟ್ಟಿ ತೋರುತ್ತದೆ. ಇದೇ ಕರ್ಮವಿಪಾಕದ ಫಲವಾದ ಪುನರ್ಜನ್ಮವು.

ಈಗ ಮತ್ತೊಂದು ಪ್ರಶ್ನೆಯು ಮುಂದಕ್ಕೆ ಬರುವದು. ಒಂದೊಂದು ಸಲವೂ ಹೀಗೆ ಬೇರೆಬೇರೆಯ ಸ್ಕಂಧಗಳ ಗುಂಪೇ ಹುಟ್ಟುವದೆಂದಮೇಲೆ ಹಿಂದಿನ ಜನ್ಮದಲ್ಲಿ ಮಾಡಿದ್ದ ಪಾಪದ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತೇವೆಂಬ ನಂಬಿಕೆಗೇನು ಗತಿ? ಇದಕ್ಕೆ ಬೌದ್ಧರ ಉತ್ತರವೇನೆಂದರೆ, ಒಬ್ಬನು ಮತ್ತೊಬ್ಬನ ತೋಟದಲ್ಲಿ ಮಾವಿನಹಣ್ಣುಗಳನ್ನು ಕದಿಯುತ್ತಾನೆಂದು ಇಟ್ಟುಕೊಳ್ಳಿ; ಆಗ ಅವನನ್ನು ಕಳ್ಳನೆಂದು ಹಿಡಿದು ಶಿಕ್ಷಿಸುತ್ತಾರೆ. ಆದರೆ ಅವನು "ತೋಟದವನು ಬಿತ್ತಿದ ಹಣ್ಣನ್ನೇನೂ ನಾನು ಕದ್ದಿರುವದಿಲ್ಲ, ನಾನು ನಿರಪರಾಧಿ"– ಎಂದು ವಾದಿಸಬಹುದೆ? ಕೂಡದು. "ನೀನು ಕದ್ದ ಹಣ್ಣುಗಳು ಅವನು ಹಾಕಿದ ಬೀಜದ ಫಲವೇ, ಆದ್ದರಿಂದ ನೀನು ಅಪರಾಧಿಯೇ" ಎಂದು ತೀರ್ಪುಕೊಡುತ್ತೇವಲ್ಲವೆ? ಇದರಂತೆ ಒಂದು ಸ್ಕಂಧಗಳ ಗುಂಪಾದ ನಾಮರೂಪವು ಮಾಡಿದ ಒಳ್ಳೆಯ ಮತ್ತು ಕೆಟ್ಟ ಕರ್ಮಗಳ ಫಲವಾಗಿ ಮತ್ತೊಂದು ನಾಮರೂಪವು ಹುಟ್ಟುತ್ತದೆ. ಆದ್ದರಿಂದ ಹಿಂದಿನ ಕರ್ಮದ ಫಲವು ಅದಕ್ಕೂ ಗಂಟುಬಿದ್ದೇತೀರುವದು.

ಸ್ವಲ್ಪದರಲ್ಲಿ ಹೇಳಿದರೆ ಬೌದ್ಧರ ಕರ್ಮವಿಪಾಕವಾದವು ಇಷ್ಟರಲ್ಲಿ ಅಡಕವಾಗುವದು: ಕರ್ಮವೆಂಬುದು ವೈದಿಕರು ಹೇಳುವಂತೆ ಶರೀರಕ್ಕಿಂತ ಬೇರೆಯಾಗಿರುವ ಜೀವನ ಕ್ರಿಯೆಯಲ್ಲ. ಜೈನರು ಹೇಳುವಂತೆ ಆತ್ಮನಿಗೆ ಅಂಟಿಕೊಂಡಿರುವ ಒಂದು ಬಗೆಯ ದ್ರವ್ಯವೂ ಅಲ್ಲ. ಪ್ರಪಂಚದಲ್ಲಿರುವ ಚೇತನಾಚೇತನವಸ್ತುಗಳಲ್ಲಿ ಕಾಣಬರುವ ವ್ಯಾಪಾರವೇ ಕರ್ಮವು. ಇಡಿಯ ಪ್ರಪಂಚವೇ ಹೇತುಫಲಾತ್ಮಕವಾಗಿರುವದು; ಎಂದರೆ ಒಂದೊಂದು ಬಗೆಯ ಕರ್ಮಗಳ ಫಲವಾಗಿ ಒಂದೊಂದು ಮಾರ್ಪಾಡು ಎಲ್ಲೆಲ್ಲಿಯೂ ಆಗುತ್ತಲೇ ಇರುವದು. ಹಿಂದಿನ ಕರ್ಮದ ಫಲವು ಈಗ ತೋರುವಂತೆ ಈಗಿನ ಕರ್ಮದ ಫಲವು

ಮುಂದೆ ತೋರಿಯೇ ತೋರುವದು. ಜಿಗಣಿಯ ಹುಳು ಗಿಡದ ಒಂದು ಎಲೆಯಿಂದ ಮತ್ತೊಂದು ಎಲೆಗೆ ದಾಟಿಹೋಗುವಂತೆ ಜೀವನು ಈ ಲೋಕವನ್ನೂ ಜನ್ಮವನ್ನೂ ಬಿಟ್ಟು ಲೋಕಾಂತರಕ್ಕೂ ಜನ್ಮಾಂತರಕ್ಕೂ ಹೋಗುವನೆಂಬ **ಶಾಶ್ವತವಾದವೂ** ತಪ್ಪು; *ಪ್ರತಿಸಂಧಿವಿಜ್ಞಾನವೆಂಬ ಒಂದಾನೊಂದು ವಿಜ್ಞಾನವು ಸತ್ತವನ ಶರೀರದಿಂದ ಹೊಸದಾಗಿ ಹುಟ್ಟುವ ಮಗುವಿನೊಳಕ್ಕೆ ಬಂದು ಸೇರುವದೆಂದು ಬೌದ್ಧರಲ್ಲಿಯೂ ಕೆಲವರು ಈಚೆಗೆ ಅಭಿಪ್ರಾಯಪಟ್ಟಿರುತ್ತಾರೆ. ಆದರೆ ವಿಜ್ಞಾನವು ಬರಿಯ ಮನಃಸ್ಥಿತಿಯಾದ ಒಂದು ಸ್ಕಂಧವಾದ್ದರಿಂದ ಅದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲಾರದು; ಈ ವಾದವು ಪಾಲಿ ಗ್ರಂಥಗಳಲ್ಲಿರುವ ಪ್ರಾಚೀನಬೌದ್ಧಮತಕ್ಕೆ ವಿರುದ್ಧವಾಗಿರುತ್ತದೆ. ಸ್ವರ್ಗ, ನರಕ, ದೇವಲೋಕ, ಅಸುರಲೋಕ, ಮನುಷ್ಯಲೋಕ, ತಿರ್ಯಕ್ಪ್ರಾಣಿಗಳ ಲೋಕ, ಶ್ರಾವಕ, ಪ್ರತ್ಯೇಕಬುದ್ಧ, ಬೋಧಿಸತ್ತ್ವ, ಬುದ್ಧ–ಇವೆಲ್ಲ ಕರ್ಮಫಲಗಳೆಂದು ಬೌದ್ಧರ ಹೇಳುತ್ತಾರಾದರೂ ಒಬ್ಬನೇ ಜೀವನು ಒಂದು ಕಡೆಯಿಂದ ಹೋಗಿ ಮತ್ತೊಂದು ಕಡೆಯಲ್ಲಿ ಈ ಫಲವನ್ನು ಅನುಭವಿಸುತ್ತಾನೆಂದು ಅವರು ನಂಬುವದಿಲ್ಲ; ಇಲ್ಲಿ ಮಾಡಿದ್ದು ಇಲ್ಲಿಗೆ ತೀರಿತೆಂಬ **ಉಚ್ಛೇದವಾದವೂ** ತಪ್ಪು. ಕರ್ಮಕ್ಕೆ ಅನುಗುಣವಾಗಿ ಫಲವು ಇಲ್ಲಿಯೋ ಜನ್ಮಾಂತರದಲ್ಲಿಯೋ ಆಗಿಯೇ ತೀರುವದು. ಮನುಷ್ಯನು ಸತ್ತು ಐದು ಸ್ಕಂಧಗಳೂ ಒಂದನ್ನೊಂದು ಆಗಿಯೇ ತೀರುವದು. ಮನುಷ್ಯನು ಸತ್ತು ಐದು ಸ್ಕಂಧಗಳು ಒಂದನ್ನೊಂದು ಅಗಲಿದರೂ ಅವನ ಕರ್ಮವು ಮಾತ್ರ ಹಾಗೆಯೇ ಇರುತ್ತದೆ. ಇದರ ಫಲವಾಗಿ ಮತ್ತೊಂದು ಜನ್ಮದಲ್ಲಿ ಹುಟ್ಟುವ ಪ್ರಾಣಿಯಲ್ಲಿರುವ ಸ್ಕಂಧಗಳು ಯಾವ ಪರಿಮಾಣದಲ್ಲಿಯೇ ಸೇರಿಕೊಂಡಿರಲಿ, ಅದರ ಸಾಧನವಾದ ಕರ್ಮವು ಮಾತ್ರ ಮೊದಲಿನ ಕರ್ಮಕ್ಕನುಗುಣವಾಗಿಯೇ ಇರುತ್ತದೆ. ಹೀಗೆ ನೋಡಿದರೆ ಸಂಸಾರವೆಲ್ಲ ಕರ್ಮದ ವಿಪಾಕವಾಗಿರುತ್ತದೆ ಎನ್ನಬಹುದು.

ಬೌದ್ಧರ ಮತದಲ್ಲಿ ಅನಾತ್ಮವಾದವು ಬಹುಮುಖ್ಯವಾದದ್ದು; ಅನಾತ್ಮವಾದವನ್ನು ತಿಳಿಯಬೇಕಾದರೆ ಐದು ಸ್ಕಂಧಗಳ ವಿಚಾರವನ್ನು ಚೆನ್ನಾಗಿ ತಿಳಿದುಕೊಳ್ಳುವದು ಅತ್ಯವಶ್ಯವಾಗುವದು. **ಸಂ–6, 156**

## ಬೇಕಾದದ್ದನ್ನು ಆರಿಸಿಕೊ

ಪರೋಪಕಾರವೆಂಬ ಧ್ಯೇಯವನ್ನು ಬಲವಾಗಿಟ್ಟುಕೊಂಡಿದ್ದ ತರುಣನೊಬ್ಬನು ನನ್ನ ಬಳಿಗೆ ಬಂದು ಸ್ವಲ್ಪ ಅನುತಾಪದಿಂದ ಇಂತೆಂದನು: "ಇಷ್ಟುದಿನ ಕಷ್ಟಪಟ್ಟರೂ ಏನೂ ಮಾಡಿದಂತೆ ಆಗಲಿಲ್ಲ. ಏಳು ವರ್ಷಗಳಿಂದ ಪರಾರ್ಥವಾಗಿಯೇ ದುಡಿದೆನು, ಒಂದು ದಿನವೂ ಸ್ವಾರ್ಥಕ್ಕಾಗಿ ಕೆಲಸಮಾಡಲಿಲ್ಲ. ಈಗ ನೋಡಿದರೆ ನನ್ನ ಶ್ರಮಕ್ಕೆ

ಫಲವೇನಾಯಿತು? ಇಷ್ಟು ವರ್ಷಗಳ ದುಡಿತಕ್ಕೆ ಪ್ರತಿಫಲವೆಲ್ಲಿ ಹೋಯಿತು? ಅಥವಾ ಇಂಥ ಸ್ವಾರ್ಥತ್ಯಾಗವನ್ನು ಸ್ವಲ್ಪವೂ ಲೆಕ್ಕಿಸದವರಿಗಾಗಿಯೇ ಆತ್ಮಾರ್ಪಣೆ ಮಾಡುವದು ಅವಿವೇಕವೆನ್ನೋಣವೆ?"

ಆಗ ನಾನಿಂತೆಂದೆನು : "ಅಪ್ಪ, ಉಪಕಾರವೆಂಬುದು ಹೃದಯಶುದ್ಧಿಯಿಂದ ಆಗಬೇಕಾದರೆ ಪ್ರತಿಫಲದ ಕಡೆಗೆ ಕಣ್ಣುಹಾಕದಿರು. ಇನ್ನೊಬ್ಬರಿಗೆ ಉಪಕಾರ ಮಾಡಿದರೆ ಅವರು ಅದನ್ನು ನೆನಸಬೇಕೆಂದು ನಿರೀಕ್ಷಿಸುವಾತನು ಅವಿವೇಕಿಯು. ಕಾಲಾನುಕಾಲಕ್ಕೆ ಅವನಿಗೆ ಪೂರ್ಣವಾದ ಪ್ರತಿಫಲವುಂಟಾಗುವದೆಂಬುದೊಂದು ಸಾಕು. ಅಚ್ಯುತವಾದ ಧರ್ಮವನ್ನನುಸರಿಸಿ ಬಾಳಿದರೆ ಆಯಿತು ಎನ್ನುವವನೇ ವಿವೇಕಿಯು; ಏಕೆಂದರೆ ಅದರಲ್ಲಿ ಕರ್ಮದ ಅವಶ್ಯಕತೆಯೂ ಕರ್ಮವೂ ಒಂದಾಗಿರುತ್ತವೆ.

ಈ ಮಾನವಮಂಡಲದಲ್ಲಿ ಯಾರಿಗೂ ಕಾಣಿಸಿಕೊಳ್ಳದೆ, ಯಾರಿಗೂ ಅರಿವಾಗದಂತೆ, ಇಂಥ ಧರ್ಮವನ್ನು ಅನುಸರಿಸಿಕೊಂಡೇ ಜೀವಿಸುವವರು ಕೆಲವರು ಇರುವರು. ಅವರು, ತಮ್ಮ ಪ್ರೀತಿಗೆ ಪಾತ್ರನಾದ ಧಣಿಯನ್ನು ಸೇವಿಸುವ ಭಂಟರಂತೆಯೂ ಸಮಷ್ಟಿಯನ್ನು ಸೇವಿಸುವ ವ್ಯಷ್ಟಿಯಂತೆಯೂ, ಆ ಧರ್ಮದ ಸೇವೆಗೆ ಆತ್ಮನಿವೇದನೆಯನ್ನು ಮಾಡಿಕೊಂಡಿರುತ್ತಾರೆ. ಅವರಿಗೆ ಮತ್ತೆ ಯಾವ ಕರ್ತವ್ಯಗಳಾಗಲಿ ಹಕ್ಕುಬಾಧ್ಯತೆಗಳಾಗಲಿ ಇರುವದಿಲ್ಲ; ಅವರವರಿಗೆ ಬೇಕಾಗಿರುವಷ್ಟು ಮಟ್ಟಿಗೆ ಎಲ್ಲರಿಗೂ ಬೋಧೆಯುಂಟಾಗುವಂತೆ ಸಹಾಯಮಾಡುವದೊಂದೇ ಅವರ ಉದ್ದೇಶವು. ಜನರ ದುಃಖವನ್ನು ಕಂಡು ಮನಮರುಗಿ, ಈ ಧೀರರು ತಮ್ಮ ಭೋಗ, ಭಾಗ್ಯ, ವಿಲಾಸ– ಎಲ್ಲವನ್ನೂ ಮಾನವಜಾತಿಗಾಗಿ ಮುಡಿಪುಮಾಡಿ ಕೈಬಿಟ್ಟು, ನಿಶ್ಚಲಮನಸ್ಸಿನಿಂದ ತಮ್ಮ ಸ್ವಾರ್ಥತ್ಯಾಗದಿಂದ ಏನಾದರೂ ಆಗಲೆಂದು ಸೊಂಟಕಟ್ಟಿ ಹೊರಟಿರುತ್ತಾರೆ, ವೈಮನಸ್ಯ, ಚಿತ್ರಹಿಂಸೆ, ಒಂಟಿಯಾಗಿರುವದು, ಸ್ವಾರ್ಥಾನ್ವೇಷಣೆ, ಮೋಸ, ನಿರಾಶೆ–ಇವೆಲ್ಲವೂ ನಿನ್ನ ಹಾದಿಗೆ ಅಡ್ಡಲಾಗಿ ಬರುವವು, ಇವೇ ನಿನಗೆ ಸಿಕ್ಕುವ ಪ್ರತಿಫಲಗಳು. ಮತ್ತೆ ಯಾವದಾದರೂ ಪ್ರತಿಫಲವನ್ನು ಬಯಸುವದು ವ್ಯರ್ಥ. ಹಾಗಾದರೆ ಯುಕ್ತಿಗೂ ಮನಸ್ಸಿನ ಕಲ್ಪನೆಗೂ ಹೊಂದದೆ ಇರುವ ಈ ಸ್ವಾರ್ಥತ್ಯಾಗದಿಂದೇನು ಎಂದು ನೀನು ಕೇಳಬಹುದು. ಆದರೆ ಮರುಕವೆಂಬುದು ಬುದ್ಧಿಯಿಂದ ಉಂಟಾಗುವದಲ್ಲ; ಹೃದಯದ ತೀರ ಒಳಗಿನ ಭಾಗದಿಂದ, ಅಖಿಲ ಮಾನವವರ್ಗದ ಹೃದಯದಿಂದಲೇ, ಅದು ಹೊರಕ್ಕೆ ಬರುತ್ತದೆ ಎಂದು ತಿಳಿ.

ಅಯ್ಯ, ಹೀಗಿರುವದರಿಂದ ನಿನಗೆ ಯಾವದು ಬೇಕೋ ಅದನ್ನು ಆರಿಸಿಕೋ; ಏಕೆಂದರೆ ಇಲ್ಲಿ ಯಾವದಾದರೊಂದನ್ನು ಆರಿಸಿಕೊಳ್ಳಲೇಬೇಕಾಗಿರುತ್ತದೆ. ಜನರ ಶರೀರಗಳ ಯೋಗಕ್ಷೇಮಕ್ಕಾಗಿ ಕೆಲಸಮಾಡು; ಆಗ ಅವರ ಕೃತಜ್ಞತೆಯು ನಿನಗೆ

ದೊರಕುವದು. ಇಲ್ಲವೆ ಅವರಿಗೆ ಜ್ಞಾನೋದಯವಾಗುವದಕ್ಕೆ ನೆರವಾಗಲು ಪ್ರಯತ್ನಿಸು; ಆಗ ಅವರ ಕೃತಜ್ಞತೆಯನ್ನು ನಿರೀಕ್ಷಿಸುವದು ಮಾತ್ರ ವ್ಯರ್ಥವಾಗಿರುವದು, ಒಂದಲ್ಲದಿದ್ದರೆ ಒಂದುದಿನ ಎಲ್ಲರಿಗೂ ಜ್ಞಾನವುಂಟಾಗಲೇಬೇಕು; ಆದ್ದರಿಂದ ಜನರನ್ನು ಅದರ ಕಡೆಗೆ ತಿರುಗಿಸುವವರು ಧನ್ಯರು. ಆದರೆ ಇದನ್ನು ಆಲೈಸಿಕೇಳು, ಇದೇ ಪರಮಾರ್ಥವು. ಹೀಗೆ ಜನರನ್ನು ಜ್ಞಾನಾರ್ಜನೆಯ ಕಡೆಗೆ ತಿರುಗಿಸುವದಕ್ಕೆ ಸ್ವಾರ್ಥವನ್ನು ಬಲಿಯಾಗಿ ಕೊಡಲೇ ಬೇಕಾಗುತ್ತದೆ. ಹೀಗಿರುವದರಿಂದ ಇವೆರಡರಲ್ಲಿ ಒಂದನ್ನು ನೀನು ಆರಿಸಿಕೊ; ಆದರೆ ಯಾವದನ್ನು ಆರಿಸಿಕೊಳ್ಳಬೇಕೆಂಬುದನ್ನು ಮೊದಲು ಚೆನ್ನಾಗಿ ಆಲೋಚನೆಮಾಡಿ ಆರಿಸಿಕೊ, ಧರ್ಮಕ್ಷೇತ್ರದಲ್ಲಿ ಅದೂ ಇರಲಿ, ಇದೂ ಇರಲಿ ಎನ್ನುವದಕ್ಕೆ ಆಗುವದೇ ಇಲ್ಲ. **ಸಂ-17, 153**

## ಉತ್ಥಾನ ದ್ವಾದಶಿ

ಪ್ರತಿಯೊಂದು ವರ್ಷದ ಕಾರ್ತಿಕಮಾಸದಲ್ಲಿಯೂ ಉತ್ಥಾನದ್ವಾದಶಿಯ ಹಬ್ಬವು ಬರುತ್ತದೆ. ಭಗವಂತನು ಈ ದಿನ ಎಚ್ಚರುತ್ತಾನೆಂದು ಭಾವಿಸಿ ಮನೆಯ ಮುಂದಿರುವ ವೃಂದಾವನದಲ್ಲಿ ಶ್ರೀಕೃಷ್ಣನನ್ನು ಪೂಜಿಸುವ ಪದ್ಧತಿಯು ನಮ್ಮ ದೇಶದಲ್ಲಿ ಬಹುಕಾಲದಿಂದ ರೂಢಿಯಲ್ಲಿದೆ. ಆದರೆ ಭಗವಂತನು ಎಚ್ಚರುವದೆಂದರೇನು? ಅವನಿಗೆ ಯಾವಾಗಲೂ ನಿದ್ರೆಯೇ ಇಲ್ಲವಲ್ಲ ! ನಿತ್ಯ ಪ್ರಬುದ್ಧನಾದ ಭಗವಂತನನ್ನು ಎಚ್ಚರಗೊಳಿಸುವದೆಂದರೇನು? ಈ ಪ್ರಶ್ನೆಗೆ ನಾವು ಉತ್ತರವನ್ನು ಕಂಡುಕೊಳ್ಳಬೇಕು.

ಭಗವಂತನು ನಮ್ಮೆಲ್ಲರ ಹೃದಯದಲ್ಲಿಯೇ ಇದ್ದರೂ ನಾವು ಆತನನ್ನು ಕಾಣದೆ ಇರುವೆವು; ಏಕೆಂದರೆ ಭಗವದ್ಬುದ್ಧಿಯು ನಮ್ಮೆಲ್ಲರನೇಕರಲ್ಲಿ ಎಚ್ಚರವಾಗಿರುವದಿಲ್ಲ. ಭಗವಂತನು ಪುರುಷನು, ಎಂದರೆ ಹೃದಯವೆಂಬ ಪುರದಲ್ಲಿ ಶಯನಮಾಡಿರುವವನು, ಎಂದು ಶಾಸ್ತ್ರದಲ್ಲಿ ವರ್ಣಿಸಿರುತ್ತದೆ. ಜನರಿಗೆ ಅನುಗ್ರಹಮಾಡಬೇಕೆಂಬ ಆಕಾಂಕ್ಷೆಯಿಂದ ಭಗವಂತನು ನಮ್ಮ ಹೃದಯದಲ್ಲಿಯೇ ಮಲಗಿರುತ್ತಾನೆ. ಮಾನವರಲ್ಲೆಲ್ಲ ಭ್ರಾತೃಪ್ರೇಮ, ಕೀಳುಪ್ರಾಣಿಗಳಲ್ಲಿ ಕೂಡ ಕರುಣಾಯುತವಾದ ಪ್ರೇಮ, ಅಹಿಂಸೆ, ಸತ್ಯ-ಮುಂತಾದ ಸಾಧನಗಳಿಂದ ಯಾರ ಅಂತಃಕರಣವು ಪರಿಶುದ್ಧವಾಗಿ ಅನಾದಿನಿದ್ರೆಯಿಂದೆಚ್ಚತ್ತಂತೆ ಭಗವದ್ಭಾವವನ್ನು ಪಡೆದು ಎಚ್ಚರುವದೋ ಅವರ ಹೃದಯದಲ್ಲಿ ಭಗವಂತನು ಎಚ್ಚತ್ತಂತೆ. ಆ ಎಚ್ಚತ್ತ ಭಗವಂತನು ಆ ಭಕ್ತನಿಗೂ ಅವನ ಸುತ್ತುವಳಯಕ್ಕೂ ಮಂಗಲವನ್ನುಂಟು ಮಾಡುತ್ತಾನೆ. "ಭಗವಂತನೆ, ಏಳು ! ಎಲ್ಲರಿಗೂ ಮಂಗಲವನ್ನುಂಟುಮಾಡು!" ಎಂಬರ್ಥವುಳ್ಳ ಈ ಶ್ಲೋಕವನ್ನು ಭಾವಪೂರಿತವಾಗಿ ಗಾನಮಾಡಿರಿ. ನಿಮ್ಮ ಹೃದಯದಲ್ಲಿ ಉತ್ಥಾನದ್ವಾದಶಿಯಾಗುವದು. **"ಉತ್ತಿಷ್ಠೋತ್ತಿಷ್ಠ ಗೋವಿಂದ ಉತ್ತಿಷ್ಠ ಗರುಡಧ್ವಜ । ಉತ್ತಿಷ್ಠಕಮಲಾಕಾನ್ತ ತ್ರೈಲೋಕ್ಯಂ ಮಙ್ಗಲಂ ಕುರು." ಸಂ-20, 94**

## ಭಕ್ತಿಯ ಸೆಳವು

ಭಕ್ತಿ ಎಂಬುದೊಂದು ಹೊಳೆಯಿದ್ದಂತೆ. ಹೊಳೆಯಲ್ಲಿ ಬಿದ್ದ ಹುಳುವೊಂದು ಅದರ ಸೆಳವಿನಿಂದ ಕೊಚ್ಚಿಕೊಂಡು ಹೋಗುತ್ತಿತ್ತು. ಇಷ್ಟರಲ್ಲಿ ಅದಕ್ಕೆ ನೀರಡಿಕೆಯಾಯಿತು. ಅದು ಒಂದಿಷ್ಟು ನೀರನ್ನು ಕುಡಿಯಿತು. ಆಹ ! ಏನು ರುಚಿ! ಅಮೃತದಂತೆ ಇತ್ತು ನೀರು ! ಇನ್ನು ಹುಳುವಿಗೆ ಹೊಳೆಯ ಅಂಜಿಕೆಯಿಲ್ಲ. ಅದು ಹೊಳೆಯ ಸೆಳವು ಹೆಚ್ಚಿದಷ್ಟೂ ಆನಂದದಿಂದ ಅದರೊಡನೆ ಹೋಗುವದಕ್ಕೆ ಸಿದ್ಧವಾಯಿತು. ಪರಮಾತ್ಮನ ಭಕ್ತಿಯ ಹೊಳೆಯಲ್ಲಿ ಬಿದ್ದವನಿಗೆ ಮೊದಮೊದಲು ಒಂದು ಹೊಸ ಅನುಭವವಾಗುತ್ತದೆ. ಆದರೆ ಅವನು ಆ ಹೊಳೆಯ ಒಂದು ಗುಟುಕು ನೀರನ್ನು ಕುಡಿದರೆ ಸಾಕು, ಅಲ್ಲಿಂದ ಹೊಳೆಯ ಸೆಳವಿಗೆ ಆತ್ಮಾರ್ಪಣ ಮಾಡಿ ಕೊಂಡುಬಿಡುತ್ತಾನೆ ! **ಸಂ–27, 227**

## ನಿಜವಾದ ಭಕ್ತಿಯ ಸ್ವಭಾವ

ಭಕ್ತನಿಗೆ ಭಗವಂತನಲ್ಲದೆ ಮತ್ತೇನೂ ಕಾಣಿಸುವದೇ ಇಲ್ಲ. ಅವನಿಗೆ ತನ್ನ ಭಕ್ತಿಯಿಂದ ಆಗಬೇಕಾದ ಯಾವ ಪುರುಷಾರ್ಥವೂ ಇರುವದಿಲ್ಲ. ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಭಗವಂತನನ್ನು ಕಾಣುವದು ಅವನ ಸ್ವಭಾವವಾಗಿ ಬಿಟ್ಟಿರುತ್ತದೆ. ಸ್ಥಲಚರಪ್ರಾಣಿಗಳು ನೆಲದಮೇಲೂ ಜಲಚರಪ್ರಾಣಿಗಳು ನೀರಿನಲ್ಲಿಯೂ ಖೇಚರಪ್ರಾಣಿಗಳು ವಾಯು ಮಂಡಲದಲ್ಲಿಯೂ ವಿಹರಿಸುವದು ಹೇಗೆ ಸ್ವಭಾವವೋ, 'ನಾವು ಹೀಗೆ ವಿಹರಿಸುತ್ತಿದ್ದೇವೆ' ಎಂಬುದರಲ್ಲಿ ಯಾವ ಹೆಚ್ಚುಗಾರಿಕೆಯೂ ಅವಕ್ಕೆ ಹೇಗೆ ಕಾಣುವದಿಲ್ಲವೋ, ಅದರಂತೆ ಎಲ್ಲೆಲ್ಲಿಯೂ ಭಗವಂತನನ್ನು ಕಾಣುತ್ತಾ ಆತನ ಪ್ರೇಮವನ್ನು ಮಾಡುತ್ತಲೇ ವಿಹರಿಸುವದು ಭಕ್ತನ ಸ್ವಭಾವವಾಗಿಬಿಟ್ಟಿರುತ್ತದೆ; ಅದರಲ್ಲಿ ಅವನಿಗೆ ಯಾವ ಹೆಚ್ಚುಗಾರಿಕೆಯೂ ತೋರುತ್ತಿರುವದಿಲ್ಲ. ಅವನಿಗೆ ತಾನು, ಭಕ್ತಿ, ಭಗವಂತ–ಎಂಬ ಭೇದವೇ ಕಾಣಿಸುತ್ತಿರುವದಿಲ್ಲ.

## ಪರಮಾತ್ಮ

ಈ ಪ್ರಪಂಚದಲ್ಲಿ ಬ್ರಹ್ಮನಿಂದ ಹಿಡಿದು ಸ್ಥಾವರಾಂತವಾದ ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ಅವರ ಆತ್ಮನಾಗಿರುವ ಒಂದೇಒಂದು ತತ್ತ್ವವುಂಟು. ಆ ಪ್ರಾಣಿಗಳು 'ನಾನು ಬೇರೆ, ನೀನು ಬೇರೆ'–ಎಂದು ಎಷ್ಟೇ ಬಲವಾಗಿ ಭೇದಬುದ್ಧಿ ಯುಳ್ಳವರಾಗಿರಲಿ, ಅವರಿಗೆಲ್ಲ ಪರಮಾತ್ಮನಾದ, ನಿಜವಾದ ಸ್ವರೂಪವಾದ, ಒಂದೇ ಒಂದು ತತ್ತ್ವವು ಸಮಾನವಾಗಿರುತ್ತದೆ. ಪ್ರತಿಬಿಂಬಗಳೆಲ್ಲವೂ ಬಿಂಬವನ್ನು ಆಶ್ರಯಿಸಿ ತೋರಿಕೊಳ್ಳುವಂತೆ, ಜೀವಾತ್ಮರೆಲ್ಲರೂ ಪರಮಾತ್ಮನನ್ನೇ ಆಶ್ರಯಿಸಿಕೊಂಡು ಇರುತ್ತಿರುವರು.

ಒಂದು ಮರದ ಬೇರೆಬೇರೆಯ ಕೊಂಬೆಗಳು ಬೇರೆಬೇರೆಯ ದಿಕ್ಕಿಗೆ ಹೋಗಿ ಬೆಳೆದುಕೊಂಡಿದ್ದರೂ ಅವುಗಳಿಗೆಲ್ಲ ಒಂದೇ ಬುಡವು ಸಮಾನವಾಗಿರುವಂತೆ, ಜೀವರುಗಳಿಗೆಲ್ಲ ಹಿರಣ್ಯಗರ್ಭನೆಂಬ ಒಂದೇ ಬುಡವು ಆಧಾರವಾಗಿರುತ್ತದೆ. ಮರದ ಕೊಂಬೆ, ರೆಂಬೆ, ಚಿಗುರು, ಎಲೆ, ಹೂ, ಹಣ್ಣು-ಎಲ್ಲಕ್ಕೂ ಬೇರಿನ ಮೂಲಕವಾಗಿಯೇ ಭೂಮಿಯಿಂದಲೇ ಜೀವರಸವು ಬರುತ್ತಿರುವಂತೆ, ಎಲ್ಲಾ ಜೀವರುಗಳಿಗೂ ಶರೀರೇಂದ್ರಿಯಗಳ ಪುಷ್ಟಿಯೂ ತುಷ್ಟಿಯೂ ಕಾರ್ಯಕ್ಷಮತೆಯೂ ಆ ಪರಮಾತ್ಮನಿಂದಲೇ ಬರುತ್ತಿರುವವು. ಪರಮಾತ್ಮನನ್ನು ಬಿಟ್ಟು ನಾವು ಯಾರೊಬ್ಬರೂ ಒಂದು ಅರೆಗಳಿಗೆಯೂ ಜೀವಿಸಿರಲಾರೆವು. ನಮ್ಮ ಇರವು, ಜೀವನ, ಬೆಳೆವಣಿಗೆ, ತುಷ್ಟಿ-ಎಲ್ಲಕ್ಕೂ ಆತನೊಬ್ಬನೇ ಮೂಲವಾಗಿರುತ್ತಾನೆ. ಆದ್ದರಿಂದ ಪರಮಾತ್ಮನು ಇಲ್ಲವೆಂದವನು ತಾನೇ ಇಲ್ಲವಾಗುವನು.

**ಸಂ-29, 155**

## ಪರಮಯೋಗಿ ಯಾರು?

**ಗುಹಾಯಾಂ ಗೇಹೇ ವಾ ಬಹಿರಪಿ ವನೇ ವಾದ್ರಿ ಶಿಖರೇ, ಜಲೇ ವಾ ವಹ್ನೌ ವಾ ವಸತು ವಸತೇಃ ಕಿಂ ವದ ಫಲಮ್ । ಸದಾ ಯಸ್ಯೈ ವಾಂತಃಕರಣಮಪಿ ಶಮ್ಭೋ ತವ ಪದೇಸ್ಥಿತಂ ಚೇದ್ಯೋನೊಂತಸಾ ಸ ಚ ಪರಮಯೋಗೀ ಸ ಚ ಸುಖೀ ॥** "ಶಂಭುವೇ, ಗವಿಯಲ್ಲಿರಲಿ, ಮನೆಯಲ್ಲಿರಲಿ, ಕಾಡಿನಲ್ಲಿರಲಿ, ಬೆಟ್ಟದ ತುದಿಯಮೇಲಿರಲಿ, ನೀರಿನಲ್ಲಿ, ಬೆಂಕಿಯಲ್ಲಿರಲಿ, ಎಲ್ಲಿ ವಾಸ ಮಾಡಿದರೆ ತಾನೆ ಫಲವೇನು? ಯಾವಾತನಿಗೆ ಅಂತಃಕರಣವು ನಿನ್ನ ಪಾದದಲ್ಲಿಯೇ ನಿತ್ಯವೂ ಇರುವದೋ ಅದೇ ಯೋಗವು. ಅವನೇ ಪರಮಯೋಗಿಯು, ಅವನೇ ಸುಖಿಯು"

**ಶಿವಾನಂದಲಹರಿ, ಸಂ-13, 146**

**ಸ್ಪರ್ಶಮಣಿ :** "ಸಾಧುಗಳಿಗೆ ಒಂದು ಹಿಡಿ ಭಿಕ್ಷವನ್ನೂ ಹಾಕುವುದಕ್ಕೂ ನನಗೆ ಗತಿಯಿಲ್ಲವಲ್ಲ" ಎಂದು ಕುದಿದುಕೊಳ್ಳುತ್ತಿದ್ದ ಸದ್ಗೃಹಸ್ಥಿಗೆ, ಬಾಗಿಲಿಗೆ ಬಂದಿದ್ದ ಸಾಧುವಿನ ಕರುಣೆಯಿಂದ ಅರೆಯುವ ಕಲ್ಲೇ ಸ್ಪರ್ಶಮಣಿಯಾಗಿ, ಅದು ತಗುಲಿದೊಡನೆ ಮನೆಯ ಎಲ್ಲ ಕಬ್ಬಿಣ ವಸ್ತುಗಳೂ ಚಿನ್ನವಾಯಿತು ಸಾಧುಗಳು "ಇಂಥ ಸ್ಪರ್ಶಮಣಿಗಳ ರಾಶಿರಾಶಿಗಳನ್ನೇ ನಿನಗೆ ಅನುಗ್ರಹಿಸಬಲ್ಲ ವಿಶ್ವನಾಥನೇ ನಿನ್ನ ಆತ್ಮನಾಗಿದ್ದುಕೊಂಡು ನಿನ್ನ ಹೃದಯದಲ್ಲಿರುತ್ತಾನೆ. ಸ್ಪರ್ಶಮಣಿಗೂ ಸ್ಪರ್ಶಮಣಿಯಾದ ಆ ಪರಮಾತ್ಮನನ್ನು ಮರೆಯಬಹುದೇ" ಎಂದು ಆತನಿಗೆ ಅಸ್ಪರ್ಶಯೋಗದ ಪರಮರಹಸ್ಯವನ್ನು ಉಪದೇಶಿಸಿದರು.

**ಸಂ-13, 147**

# ಆಕಾಶಪರೀಕ್ಷೆ

ಹೊರಗಿನ ಆಕಾಶವು ಋತುಮಾನಕ್ಕೆ ಅನುಗುಣವಾಗಿ ಆಗಾಗ್ಗೆ ಮಾರ್ಪಡುತ್ತಲೇ ಇರುತ್ತದೆ. ಅದರಂತೆ ನಮ್ಮ ಹೃದಯಾಕಾಶವೂ ಆಗಾಗ್ಗೆ ಮಾರ್ಪಡುತ್ತಲೇ ಇರುತ್ತದೆ. ಜನರು ಅಂತರಿಕ್ಷದ ಕಡೆಗೆ ಆಗಾಗ್ಗೆ ನೋಡುತ್ತಿರುವರು; ಅದರಲ್ಲಿ ಕಾಣುತ್ತಿರುವ ದೃಶ್ಯಗಳನ್ನು ಕುರಿತು ಒಬ್ಬರೊಡನೊಬ್ಬರು ಮಾತಾಡುತ್ತಲೂ ಇರುವರು. ಆದರೆ ತಮ್ಮ ಹೃದಯದ ಒಳಗೆ ಆಗುತ್ತಿರುವ ಅನುಭವಗಳನ್ನು ಲಕ್ಷ್ಯವಿಟ್ಟು ನೋಡಿಕೊಳ್ಳುವವರು ಕಡಿಮೆ; ಅದರ ವಿಷಯವಾಗಿ ಯೋಚನೆಮಾಡುವದು, ಮತ್ತೊಬ್ಬರೊಡನೆ ಮಾತನಾಡುವದು ಇನ್ನೂ ಕಡಿಮೆ.

'ಇಂದು ಬಹಳ ಮೋಡವಾಗಿದೆ, ಸ್ವಲ್ಪ ಬೆಳಕೂ ಇಲ್ಲ!' ಎಂಬ ವಾಕ್ಯವು ಜನರ ಬಾಯಿಂದ ಮಳೆಗಾಲದಲ್ಲಿ ಬರುತ್ತಿರುವದೇನೂ ಅಪರೂಪವಲ್ಲ. ಆದರೆ ಇಂದು ನನ್ನ ಮನಸ್ಸಿಗೆ ಬಹಳ ಮಂಕು ಕವಿದಿದೆ; ಏನುಮಾಡಬೇಕೆಂಬ ಬಗ್ಗೆ ಯಾವ ಯೋಚನೆಯೂ ಹೊಳೆಯದು–ಎನ್ನುವವರು ವಿರಳ.

"ಆಕಾಶವು ನಿರ್ಮಲವಾಗಿದೆ; ಹವೆಯು ಉತ್ತಮವಾಗಿದೆ; ಸ್ವಲ್ಪ ಅಡ್ಡಾಡಿಕೊಂಡು ಬರೋಣ !" ಎಂದು ಜನರು ಮಾತನಾಡಿಕೊಳ್ಳುತ್ತಿರುತ್ತಾರೆ. "ಇಂಥ ಮನಸ್ಸಿನಲ್ಲಿ ಯಾವ ವ್ಯಥೆಯೂ ಇಲ್ಲ. ಸ್ವಲ್ಪ ಪರಮೇಶ್ವರಧ್ಯಾನವನ್ನು ಮಾಡಿ ನೋಡೋಣ !" ಎನ್ನುವವರು ಬಹಳ ಸಿಕ್ಕುತ್ತಿಲ್ಲ. "ನಮಗೆ ವ್ಯವಹಾರದ ತಂಟೆಯಿದೆ; ವಕೀಲರನ್ನು ಕಂಡು ಬರಬೇಕು. ಆದರೆ ಮಳೆಗಾಲದ ಕಾರಣದಿಂದ ರೈಲು ಸರಿಯಾಗಿ ನಡೆಯುತ್ತಿಲ್ಲವಲ್ಲ!" "ನನಗೆ ಹಿಮದಿಂದ ಕೆಮ್ಮು ಹೆಚ್ಚುತ್ತಲೇ ಇದೆ; ಡಾಕ್ಟರನ್ನು ಕೇಳೋಣವೆಂದರೆ ಕೈಯಲ್ಲಿ ದುಡ್ಡಿಲ್ಲ !" "ನೆರೆಯ ಊರಿನಲ್ಲಿ ಸಿನೆಮದ ಇಂಥ ಚಿತ್ರವನ್ನು ಸಾಯಂಕಾಲಕ್ಕೆ ತೋರಿಸುತ್ತಾರಂತೆ; ಉರಿಬಿಸಿಲು ಇಲ್ಲದಿದ್ದರೆ ಹೋಗಿ ಬರುತ್ತಿದ್ದೆನಲ್ಲ !"– ಎನ್ನುವವರು ಬೇಕಾದಷ್ಟು ಮಂದಿ. ಆದರೆ "ಮನಸ್ಸಿನಲ್ಲಿ ಹಲವು ಯೋಚನೆಗಳ ಹರಿದಾಟವೆದ್ದಿದೆ; ಸಂತರನ್ನು ಕಂಡು ಪರಿಹಾರಕ್ಕೆ ಉಪಾಯವನ್ನು ಕೇಳಬೇಕು ! ಹರಟೆಮಲ್ಲರ ಮಾತಿನ ಸುರಿಮಳೆ ನಿಲ್ಲಲಿಲ್ಲವಲ್ಲ !" "ಸಂಸಾರದ ತಾಪತ್ರಯಗಳು ಹೆಚ್ಚುತ್ತಲೇ ಇವೆ; ಸದ್ಗುರುವನ್ನು ಕಾಣುವ ಶಿಷ್ಯಗುಣಗಳು ಮಾತ್ರ ಬರಲಿಲ್ಲವಲ್ಲ !" ಧ್ಯಾನ ಮೋರೆಯವರ ಸಂದಣಿ ನನ್ನನ್ನು ಬಿಡದಲ್ಲ !" ಎನ್ನುವವರು ಎಲ್ಲಿಯೋ ಒಬ್ಬಿಬ್ಬರು ಇರಬಹುದು. ಅಷ್ಟೆ.

'ನನ್ನ ಹೃದಯಾಕಾಶದಲ್ಲಿ ಇಂದು ಶೋಕ, ಮೋಹ, ಕಾಮ, ಕ್ರೋಧ–ಮುಂತಾದವುಗಳ ಹಾವಳಿಯಿದೆಯೆ? ಅಥವಾ ಅದು ನಿರ್ಮಲವಾಗಿದೆಯೆ ?' ಎಂಬುದನ್ನು ದಿನದಿನವೂ ನೋಡಿಕೊಳ್ಳುತ್ತಿರಿ. ಅದರಿಂದ ಲಾಭವುಂಟು. ಸಂ–30, 142

# ವಾಯು

ಪ್ರಪಂಚವೆಲ್ಲ ನಿರಂತರಕ್ರಿಯಾಮಯವಾಗಿರುತ್ತದೆ. ಭೂಮಿಯು ತನ್ನ ರಚನೆಯಲ್ಲಿ ಮಾರ್ಪಡುತ್ತಲೇ ಇರುವದು. ಭೂಮಿಯಮೇಲಿರುವ ಕಾಡುಗಳು, ಬೆಟ್ಟಗಳು, ನದಿಗಳು, ಸಮುದ್ರಗಳು, ಮರಗಿಡಬಳ್ಳಿಗಳು, ಹುಳುಹುಪ್ಪಟೆಗಳು, ದನಕರುಗಳು, ಹಕ್ಕಿಗಳು- ಎಲ್ಲವೂ ಎಡೆಬಿಡದೆ ಮಾರ್ಪಡುತ್ತಿರುತ್ತವೆ, ಚಲಿಸುತ್ತಿರುತ್ತವೆ, ಸದ್ದು ಮಾಡುತ್ತಿರುತ್ತವೆ. ಇದೆಲ್ಲ ಆಧಿಭೌತಿಕಶಕ್ತಿಯ ವಿಭೂತಿಗಳು.

ಅಂತರಿಕ್ಷದಲ್ಲಿ ಹಾರಾಡುತ್ತಿರುತ್ತವೆ. ಪಕ್ಷಿಗಳೇ ಅಲ್ಲದೆ, ಒಂದೇ ಸಮನೆ ಗಾಳಿ ಮನ ಬಂದಂತೆ ಬೀಸುತ್ತಿರುತ್ತದೆ, ಅದರ ಅಂತರಾಳದಲ್ಲಿ ನಮಗೆ ಇನ್ನೂ ಗೋಚರವಾಗದೆ ಇರುವ ವಿಶೇಷಗಳು ಅಡಗಿರುತ್ತವೆ. ಅವೆಲ್ಲವೂ ಕ್ರಿಯಾತ್ಮಕವಾಗಿಯೇ ಇರುತ್ತವೆ.

ಆಕಾಶವೆಂದು ಸಾಮಾನ್ಯಜನರು ಕರೆಯುತ್ತಿರುವ ಮೇಲುಗಡೆಯಲ್ಲಿ ಸೂರ್ಯ, ಚಂದ್ರ, ಮಂಗಳ, ಬುಧ-ಮುಂತಾದ ಗ್ರಹಗಳಿರುತ್ತವೆ. ಅವುಗಳೆಲ್ಲವೂ ನಿಯತವಾದ ಒಂದೊಂದು ದಾರಿಯನ್ನು ಗೊತ್ತುಮಾಡಿಕೊಂಡು ಸಂಚರಿಸುತ್ತಿರುವವು. ಅವುಗಳ ಬೆಳಕು ಭೂಮಿಯಮೇಲಿರುವ ಮನುಷ್ಯನಮೇಲೆ ಬಿದ್ದಹಾಗೆಲ್ಲ ಬಗೆಬಗೆಯ ಪರಿಣಾಮಗಳು ಆಗುತ್ತಿರುವವು. ಗ್ರಹಗಳ ಚಾಲವೆಂಬುದೂ ಕ್ರಿಯಾತ್ಮಕವೇ.

ಇನ್ನು ಆಧ್ಯಾತ್ಮಿಕವಾಗಿ, ಎಂದರೆ ನಮ್ಮೊಳಗೇ ನಡೆಯುತ್ತಿರುವವಾಗಿ, ಅನುಭವಕ್ಕೆ ಬರುವ ಕ್ರಿಯಾಶಕ್ತಿಯ ರೂಪಗಳನ್ನು ಮನದಂದರೆ ಅತ್ಯಂತ ಆಶ್ಚರ್ಯವಾಗುವದು. ಕಣ್ಣು, ಕಿವಿ, ಮೂಗು, ನಾಲಗೆ, ತೊಗಲು-ಎಂಬ ಸ್ಥಾನಗಳನ್ನು ಆಶ್ರಯಿಸಿಕೊಂಡು ಕೆಲಸಮಾಡುತ್ತಿರುವ ಜ್ಞಾನೇಂದ್ರಿಯಗಳ ವ್ಯಾಪಾರ ಎಷ್ಟು ವಿಚಿತ್ರವಾಗಿದೆ ! ನಾಲಗೆ, ಕೈ, ಕಾಲು-ಮುಂತಾದವುಗಳ ಮೂಲಕ ಕೆಲಸಮಾಡುತ್ತಿರುವ ಕರ್ಮೇಂದ್ರಿಯಗಳ ವ್ಯಾಪಾರವು ಎಷ್ಟು ಅದ್ಭುತವಾಗಿದೆ ! ಇನ್ನು ಈ ಇಂದ್ರಿಯಗಳ ವ್ಯಾಪಾರಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಮನಸ್ಸಿನ ವ್ಯಾಪಾರವು ಎಂಥ ವಿಲಕ್ಷಣವಾದದ್ದು !- ಇವುಗಳ ಎಡೆಬಿಡದ ವ್ಯಾಪಾರಗಳು ಎಲ್ಲಿಂದ ಉಂಟಾಗಿ, ಹೇಗೆ ನಡೆಯವವೆಂಬುದನ್ನು ಕಲ್ಪಿಸುವದು ಕೂಡ ಆಗುವಂತಿಲ್ಲವಲ್ಲ !

ಈ ಮೂರು ಬಗೆಯ ಚಲನವಲನಗಳಿಗೂ ಕಾರಣವಾಗಿರುವ ತತ್ತ್ವವನ್ನು ಪ್ರಾಣ, ವಾಯು, ಸೂತ್ರ-ಮುಂತಾದ ಹೆಸರುಗಳಿಂದ ಶಾಸ್ತ್ರಗಳಲ್ಲಿ ಕರೆದಿರುತ್ತದೆ. ಪ್ರಪಂಚದಲ್ಲಿ ಕಾಣಿಸಿಕೊಳ್ಳುತ್ತಿರುವ ಸರ್ವವಿಧವಾದ ಕ್ರಿಯೆಗಳೂ ಈ ಪ್ರಾಣನ ಅಥವಾ ವಾಯುವಿನ ಮಹಿಮೆಯನ್ನು ಸಾರುತ್ತಿರುವವು. ಭೌತಿಕವಿಜ್ಞಾನಶಾಸ್ತ್ರದಲ್ಲಿ ಕಂಡುಹಿಡಿದಿರುವ ಯಂತ್ರವಿಶೇಷಗಳೆಲ್ಲ ಈ ವಾಯುವಿನ ನಿಯಮವನ್ನನುಸರಿಸಿಯೇ ಕೆಲಸಮಾಡುತ್ತಿರುವವು.

ನಮಗೆ ಪ್ರತ್ಯಕ್ಷವಾಗಿ ತೋರುತ್ತಿರುವ ಈ ವಾಯುವೇ ಪರಮೇಶ್ವರನ ಕ್ರಿಯಾಶಕ್ತಿಯ ವಿಕಾಸವು. "ಹೇ ವಾಯುದೇವ, ನಿನಗೆ ನಮಸ್ಕಾರ ! ನಿನ್ನ ಅನುಗ್ರಹದಿಂದ ನಮ್ಮ ಇಂದ್ರಿಯಗಳೆಲ್ಲವೂ ಯೋಗ್ಯವಾದ ಕ್ರಿಯೆಗಳನ್ನು ಮಾಡುವ ಸಾಮರ್ಥ್ಯವುಳ್ಳವವಾಗಲಿ!" ಎಂದು ಪ್ರಾರ್ಥಿಸಿಕೊಳ್ಳಿರಿ. ಸಂ-30, 165

## ಅಗ್ನಿ

ಪರಮಾತ್ಮನು ಸರ್ವಕಾರಣನೂ ಸರ್ವವ್ಯಾಪಕನೂ ಪರಮಸೂಕ್ಷ್ಮನೂ ಆಗಿದ್ದುಕೊಂಡು ಎಲ್ಲಕ್ಕೂ ಆತ್ಮನಾಗಿರುತ್ತಾನೆ. ಆದ್ದರಿಂದ ಅವನ ಹೊರಮೈಯ್ಯಾದ ಈ ಜಗತ್ತನ್ನು ನಾವು ಒಳಹೊಕ್ಕು ಸೂಕ್ಷ್ಮಸೂಕ್ಷ್ಮತರವಾಗಿರುವ, ಉತ್ತರೋತ್ತರ ವ್ಯಾಪಕವಾದ, ಕಾರಣತತ್ತ್ವಗಳನ್ನು ಕಂಡುಕೊಂಡು ಅವುಗಳನ್ನು ಕುರಿತು ಚಿಂತನೆ ಮಾಡುವದರಿಂದ ಕ್ರಮಕ್ರಮವಾಗಿ ಪರಮಾತ್ಮತತ್ತ್ವವನ್ನು ನೇರಾಗಿ ಕಂಡುಕೊಳ್ಳುವದಕ್ಕೆ ಸಹಾಯವಾಗುತ್ತದೆ. ಅತ್ಯಂತಸೂಕ್ಷ್ಮವಾಗಿರುವ ಆಕಾಶವನ್ನು ಅರಿತುಕೊಳ್ಳುವದಕ್ಕೆ ಮೊದಲು ವಾಯುತತ್ತ್ವವನ್ನು ತಿಳಿದುಕೊಳ್ಳಬೇಕಾಗಿರುವಂತೆ, ವಾಯುತತ್ತ್ವವನ್ನು ಅರಿತುಕೊಳ್ಳುವದಕ್ಕೆ ಅದರ ಕಾರ್ಯವಾದ, ಅದರಿಂದ ವ್ಯಾಪ್ತವಾಗಿರುವ, ಅದಕ್ಕಿಂತಲೂ ಸ್ಥೂಲವಾಗಿರುವ ಅಗ್ನಿಯನ್ನು ಕುರಿತ ಚಿಂತನೆಯನ್ನು ಮಾಡಬೇಕು.

ಅಗ್ನಿ ಎಂದರೆ ಬೆಂಕಿ ಎಂದು ನಾವು ಸಾಧಾರಣವಾಗಿ ತಿಳಿಯುತ್ತೇವೆ. ಇದು ತಪ್ಪಲ್ಲ. ಆದರೆ ಎಲ್ಲೆಲ್ಲಿ ಔಷ್ಣ್ಯವಿರುವದೋ, ಎಲ್ಲೆಲ್ಲಿ ಬೆಳಕಿರುವದೋ, ಎಲ್ಲೆಲ್ಲಿ ಶಕ್ತಿಯು ಪ್ರಕಟವಾಗಿರುವದೋ ಅದೆಲ್ಲವೂ ಅಗ್ನಿ, ತೇಜಸ್ಸು-ಎಂಬುದು ನಿಜಕ್ಕೆ ಹತ್ತಿರವಿರುತ್ತದೆ. ವಾಯುಮಂಡಲದಲ್ಲಿ ಘರ್ಷಣೆಯಿಂದ ಕಾಣಿಸಿಕೊಳ್ಳುತ್ತಿರುವ ಬೆಳಕೆಲ್ಲವೂ ಅಗ್ನಿಯೇ. ಆಕಾಶದಲ್ಲಿ ನಮ್ಮ ಮೇಲುಗಡೆಯಲ್ಲಿ ಕಾಣಿಸಿಕೊಳ್ಳುತ್ತಿರುವ ಸೂರ್ಯ, ಚಂದ್ರ, ಅಂಗಾರಕಾದಿಗ್ರಹಗಳು, ನಕ್ಷತ್ರಗಳು-ಇವೆಲ್ಲ ಅಗ್ನಿಯ ರೂಪಗಳೇ. ಮೋಡದಲ್ಲಿ ಕಾಣಿಸಿಕೊಳ್ಳುವ ಮಿಂಚೂ ನಮ್ಮ ಸುತ್ತಲಿನ ಸಂನಿವೇಶವನ್ನೆಲ್ಲ ವ್ಯಾಪಿಸಿಕೊಂಡಿರುವ ವಿದ್ಯುಚ್ಛಕ್ತಿಯೂ ಅಗ್ನಿಯೇ. ಭೂಮಿಯ ಮೇಲೆ ವಾಸಿಸುತ್ತಿರುವ ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ಹುದುಗಿರುವ ಶಾಖವೂ ಅಗ್ನಿಯದೇ. ಅಗ್ನಿಯ ನೆರವಿಲ್ಲದೆ ಪೃಥ್ವಿಯಮೇಲೆ ಸ್ಥಾವರಜಂಗಮ ಪ್ರಾಣಿಗಳು ಜೀವಿಸಲಾರವು. ಕೆಲಸಮಾಡಲಾರವು, ಬೆಳೆಯಲಾರವು. ಭೂಗರ್ಭದಲ್ಲಿಯೂ ಈ ಅಗ್ನಿಯ ವ್ಯಾಪಾರವೇ ಇರುತ್ತದೆ. ಅಗ್ನಿಯ ಪಾಕದಿಂದ, ಅಗ್ನಿಯ ಪಾಚನಶಕ್ತಿಯಿಂದ, ಅಗ್ನಿಯ ಬೆಳಕು ಬೀರುವ ಶಕ್ತಿಯಿಂದ-ಎಲ್ಲಾ ಬಗೆಯಿಂದಲೂ ಅಗ್ನಿಯಿಂದಲೇ ಈ ವಿಶ್ವವು ತನ್ನ ಕಾರ್ಯವನ್ನು ಮಾಡುತ್ತಿರುವದು.

ಹೊರಗೆ ಕಾಣುವ ಬಿಸಿ, ಬೆಳಕು, ಬೇಯಿಸುವ ಶಕ್ತಿ-ಇವುಗಳಿಷ್ಟೇ ಅಗ್ನಿಯಲ್ಲ. ಈ ಅಗ್ನಿಯ ತಿರುಳಾಗಿರುವ ಚೈತನ್ಯವೇ ಅಗ್ನಿಯ ಪರಮಾರ್ಥಸ್ವರೂಪ. ಪರಮಾತ್ಮನು

ಆಕಾಶವಾಯುಗಳಂತೆ ಅಮೂರ್ತನಾಗಿಯೂ ಇರುವನು, ತೇಜಸ್ಸುಳ್ಳ ವಸ್ತುಗಳಂತೆ ಮೂರ್ತನೂ ಆಗಿ ಕಾಣಿಸಿಕೊಳ್ಳುತ್ತಿರುವನು. **ಸಂ–30, 189**

# ನೀರು

ಭೂಮಿಯ ಮೇಲಿರುವ ಪ್ರಾಣಿಗಳಿಗೆ ನೀರಿನ ಬೆಲೆಯು ಬಹಳ ಹೆಚ್ಚು. ಆಕಾಶದಿಂದ ಮಳೆಯು ಮೋಡಗಳ ರೂಪದಿಂದ ಇಳಿದುಬರುವದು ಪರಮಾತ್ಮನು ಅಪಾರ ಕರುಣೆಯಿಂದ ಅವತರಿಸಿ ಭಕ್ತರನ್ನುದ್ಧಾರಮಾಡುವದರ ಚಿಹ್ನೆಯಾಗಿರುವದು. ಮಳೆಯು ಬೀಳುವಾಗ ಆನಂದಿಸದ ಪ್ರಾಣಿಗಳಿಲ್ಲ. ಮರಗಿಡಗಳು ಮಳೆಯ ನೀರಿನ ಅಭಿಷೇಕದಿಂದ ನಳನಳಿಸುತ್ತಾ, ಗಾಳಿಯ ಹೊಡೆತಕ್ಕೆ ತಲೆದೂಗುತ್ತಿರುವವು. 'ಇನ್ನುಮೇಲೆ ಭೂಮಿಯ ಮೂಲಕ ನಮಗೆ ಸಾರವಾದ ಆಹಾರವು ದೊರಕುವದು, ನಾವು ಭೂಮಿಯೊಳಕ್ಕೆ ಬೇರುಬಿಟ್ಟುಕೊಂಡು ಸ್ಥಿರವಾಗಿ ನಿಲ್ಲಬಹುದು' ಎಂದು ಅವು ನಲಿಯುತ್ತಿರುವಂತೆ ತೋರುವದು. ಪ್ರಾಣಿಗಳೆಲ್ಲವು 'ಭೂಮಿಯಮೇಲೆ ನಮ್ಮ ಆಹಾರವು ಯಥೇಷ್ಟವಾಗಿ ಬೆಳೆಯುವದು' ಎಂದು ಸಂತೋಷದಿಂದ ನೆಗೆದಾಡುವವು, ಧ್ವನಿಗೈಯುವವು. ಮನುಷ್ಯನು 'ನನ್ನ ಬಾಳು ಇನ್ನು ಸರಸವಾಗುವದು' ಎಂದು ಹೆಮ್ಮೆಪಡುವನು.

ನದಿಗಳು ನೀರುತುಂಬಿಕೊಂಡು ಕಲಕಲಧ್ವನಿಯನ್ನು ಮಾಡುತ್ತಾ ಸಂತೋಷದಿಂದ ಸಮುದ್ರದತ್ತ ಓಡುತ್ತಿರುವವು. ಬೇಡುವವರಿಗೆ ಕಾಲುವೆಗಳ ಮೂಲಕ ಪೈರುಪಚ್ಚೆಗಳಿಗೆ ಜೀವನವನ್ನು ದಾನಗೈಯುತ್ತಿರುವವು. ಅವು ಯಾವ ಬೆಟ್ಟದಮೇಲೆ ಹುಟ್ಟಿರುವವೋ ಅದನ್ನು ತಿಳಿಯದ ಸಾಮಾನ್ಯರೂ ಅವುಗಳ ಉಪಕಾರದ ಲಾಭವನ್ನು ಪಡೆಯುವದಕ್ಕೆ ಅವಕಾಶವನ್ನೀಯುವವು. ಸ್ನಾನಮಾಡಿದವರ ಮೈಕೊಳೆಯನ್ನು ತೊಳೆಯುವವು; ಮನಸ್ಸಿನ ಪಾಪವನ್ನು ಹೋಗಲಾಡಿಸುವವು. ತಮ್ಮ ದಡದಲ್ಲಿ ಕುಳಿತು ತಪಸ್ಸುಮಾಡಿದ ಋಷಿಗಳ ಸ್ಮರಣೆಯನ್ನು ಕೊಡುವವು. ತೀರ್ಥಕ್ಷೇತ್ರಗಳಿಗೆ ಬಂದು ಕೃತಕೃತ್ಯರಾಗಿರೆಂದು ಹೇಳುತ್ತಿರುವವು.

ಭೂಮಿಯಲ್ಲಿ ಒಳಗೆ ಹರಿದಾಡುತ್ತಿರುವ ನೀರಿನ ನಿಧಿಯು ಮಾನವನ ನೀರಡಿಕೆಯನ್ನು ಹೋಗಲಾಡಿಸುವದಕ್ಕೆ ಸಿದ್ಧವಾಗಿದೇನೆಂದು ಹೇಳುತ್ತಿರುವದು. ಅಲ್ಲಲ್ಲಿ ತೋಡಿದ ಭಾವಿಗಳು, ಚಿಮ್ಮುತ್ತಿರುವ ಚಿಲುಮೆಗಳು, ಕೆರೆಗಳು, ಕಟ್ಟೆಗಳು–ಮುಂತಾದವು ಪರಮಾತ್ಮನ ವಿಶಾಲವಾದ ಪ್ರೇಮಪೂರ್ಣಹೃದಯವನ್ನು ನೆನಪಿಗೆ ತರುತ್ತಿರುವವು.

ನಮಗೆ ಗೊತ್ತಿರುವ ಭೂಭಾಗಕ್ಕಿಂತಲೂ ನೀರಿನ ಭಾಗವೇ ಹೆಚ್ಚಾಗಿರುವದು. ನಮಗೆ ಆಹಾರವಿಲ್ಲದಿದ್ದರೂ ಸಾಗೀತು, ಕುಡಿಯುವ ನೀರಿಲ್ಲದಿದ್ದರೆ ಎಂದಿಗೂ ಆಗದು, ಪರಮಾತ್ಮನು ರಸರೂಪನೇ, ರಸವನ್ನು ಸವಿದೇ ಜೀವರು ಆನಂದಿಸುವದು–ಎಂಬ ತತ್ತ್ವವು ನೀರಿನ ಭಾವನೆಯಿಂದ ನಮಗೆ ಲಭಿಸುತ್ತದೆ. **ಸಂ–30, 214**

# ಭೂಮಿ

ಭೂಮಿಯ ತತ್ತ್ವವನ್ನು ಅನುಸಂಧಾನಮಾಡುವದರಿಂದ ಸಾಧಕರಿಗೆ ಅನೇಕ ಉತ್ಕೃಷ್ಟಫಲಗಳು ಲಭಿಸುತ್ತವೆ.

ಭೂಮಿಯಲ್ಲಿ ನಮಗೆ ಬೇಕಾದ ಆಹಾರವನ್ನೊದಗಿಸುವ ಸಸ್ಯಸಂಪತ್ತು ತುಂಬಿರುವದು. ಚಳಿಮಳೆಗಳಿಂದ ರಕ್ಷಣೆಯನ್ನು ಪಡೆಯುವದಕ್ಕೆ ಬೇಕಾದ ಬಟ್ಟೆಗಳನ್ನೂ ಛತ್ರಿಗಳನ್ನೂ ಮಾಡಿಕೊಳ್ಳುವದಕ್ಕೆ ಬೇಕಾದ ಸಾಮಗ್ರಿ ದೊರೆಯುವದು. ನಮಗೆ ಬೇಕಾದ ಪಾನೀಯಗಳನ್ನು ಒದಗಿಸುವ ಗಿಡಮರಗಳೂ ಪ್ರಾಣಿಗಳೂ ಇದರಮೇಲೆ ವಾಸಿಸುವವು. ಆದ್ದರಿಂದ ಇದು ನಮಗೆ ಪ್ರಾಪ್ತಿ, ನಮ್ಮನ್ನು ಪೋಷಿಸುವ ದಾದಿ–ಎನ್ನಬಹುದು.

ನಮ್ಮ ಶರೀರವು ಹುಟ್ಟಿದ್ದು ಭೂಮಿಯ ಮತ್ತು ಭೂಮಿಯ ಸಂನಿವೇಶದ ಪದಾರ್ಥಗಳಿಂದ. ನಮ್ಮ ಗೆಳೆಯರಾದ ಮನುಷ್ಯರು, ಪ್ರಾಣಿಗಳು, ಸಸ್ಯಗಳು–ಎಲ್ಲವೂ ಭೂಮಿಯಿಂದ ಹುಟ್ಟಿರುತ್ತವೆ. ನಮ್ಮ ಜೀವನಕ್ಕೆ ಬೇಕಾದ, ಸಂಚಾರಕ್ಕೆ ಬೇಕಾದ, ವಿನೋದಗಳಿಗೆ ಬೇಕಾದ ವಾಹನಗಳೂ ಸಾಮಗ್ರಿಗಳೂ ಎಲ್ಲವೂ ದೊರೆಯುವದು ಭೂಮಿಯಿಂದ. ಇದರಲ್ಲಿ ಬಗೆಬಗೆಯ ಖನಿಜಗಳಿರುವವು. ರತ್ನಗಳಿರುವವು. ಆದ್ದರಿಂದ ಇದು **ವಸುಂಧರೆ**. ಈ ದೃಷ್ಟಿಯಿಂದ ಭೂಮಿಯು ನಮಗೆ ತಾಯಿಯೇ.

ಭೂಮಿಯ ಮೇಲಿರುವ ಗಿಡಮರಗಳೂ, ಪ್ರಾಣಿಗಳೂ, ಮನುಷ್ಯರೂ–ಎಲ್ಲರೂ ಭೂಮಿಯಿಂದ ಹುಟ್ಟಿ, ಭೂಮಿಯಮೇಲೆ ತಮ್ಮ ಜೀವನವನ್ನು ಸಾಗಿಸುತ್ತಿದ್ದು ಕೊನೆಗೆ ಭೂಮಿಯಲ್ಲಿಯೇ ಬೆರೆತುಹೋಗುತ್ತವೆ. ಆದ್ದರಿಂದ ಭೂಮಿಯು ಬ್ರಹ್ಮದ ಅಥವಾ **ಪರಮಾತ್ಮನ ಸ್ಥೂಲಶರೀರ**ವೆನ್ನಬಹುದು.

ನಮ್ಮನ್ನೆಲ್ಲ ಹೆತ್ತು, ಹೊತ್ತು, ನಾವು ಮಾಡುವ ಯಾವ ಅಪಚಾರವನ್ನೂ ಲೆಕ್ಕಿಸದೆ ಕಷ್ಟಸಹಿಷ್ಣುತೆ, ಪರೋಪಕಾರ–ಇವುಗಳನ್ನು ಕಲಿಯಿರೆಂದು ಬೋಧಿಸುತ್ತಿರುವವಳು ಭೂದೇವಿ. ಆದ್ದರಿಂದ ಶ್ರೀದೇವಿಯಂತೆ ಭೂದೇವಿಯೂ **ವಿಷ್ಣುಪತ್ನಿ** ಎಂದು ನಮ್ಮವರು ವರ್ಣಿಸುತ್ತಿರುವದು ಅತ್ಯುಕ್ತಿಯಲ್ಲ.

ಕರ್ಮದಕ್ಷತೆ, ಬಲ, ಬುದ್ಧಿ–ಮುಂತಾದವುಗಳು ನಮಗೆ ದೊರಕುವದು ಭೂಮಿಯಿಂದ. ಕಾಮಕ್ರೋಧಗಳಿಗೆ ವಶರಾಗಿ ಹಲವುಜನ ಮಾನವರು ಈ ವರಗಳನ್ನು ದುರುಪಯೋಗಮಾಡಿಕೊಳ್ಳುತ್ತಿದ್ದಾರೆ. ತಮ್ಮಲ್ಲಿರುವ ಈ ಅನುಗ್ರಹವನ್ನು ಪರೋಪಕಾರ, ಸರ್ವಭೂತಕ್ಷೇಮ, ಈಶ್ವರಭಕ್ತಿ–ಇವುಗಳಿಗೆ ಮೀಸಲಾಗಿರಿಸುವ ಸುಬುದ್ಧಿಯನ್ನು ಅನುಗ್ರಹಿಸೆಂದು ಎಲ್ಲರೂ ಭೂದೇವಿಯನ್ನು ಪ್ರಾರ್ಥಿಸೋಣ. **ಸಂ–30,263**

# ಭಗವಂತ !

ಸಾಧಕರಾದವರು ಭಗವಂತನನ್ನು ಹೀಗೆಂದು ಪ್ರಾರ್ಥಿಸಬೇಕು; ಭಗವಂತ ಭೂಮಿಯು ನಿನ್ನದೊಂದು ವಿಭೂತಿಯು. ಜನರು ಮಾಡುತ್ತಿರುವ ಅನ್ಯಾಯಗಳನ್ನೆಲ್ಲ ಸಹಿಸಿಕೊಂಡು, ಅವರನ್ನು ಹೆತ್ತು, ಹೊತ್ತು, ಸಲಹುತ್ತಿರುವ ಭೂಮಿಯ ಕ್ಷಾಂತಿಯನ್ನು ನನಗೆ ಕರುಣಿಸು !

ಅಪ್ತತ್ತ್ವವು ನಿನ್ನ ಮತ್ತೊಂದು ವಿಭೂತಿಯು. ಅದಕ್ಕೆ ರಸವೇ ಸಾರವು. ಭಗವಂತ, ಪ್ರಪಂಚದಲ್ಲಿರುವ ವಸ್ತುಗಳಲ್ಲಿ ಕಾಣಬರುವ ರಸವೆಲ್ಲ ನೀನೆ. ರಸದಿಂದಲೇ ಅಲ್ಲವೆ, ನಮಗೆ ಆನಂದವಾಗುತ್ತಿರುವದು? ರಸಸ್ವರೂಪನಾದ ನಿನ್ನ ಕರುಣಾಸಾಗರದಲ್ಲಿ ಆನಂದದಿಂದ ನಾವೆಲ್ಲರೂ ತೇಲಾಡುತ್ತಿರುವಂತೆ ಅನುಗ್ರಹಿಸು ! ನಿನ್ನ ಆನಂದ ಸ್ವರೂಪವನ್ನು ಮರೆತು ನಾವು ಒಬ್ಬರನ್ನೊಬ್ಬರು ಹಗೆಮಾಡದಂತೆ ಆಶೀರ್ವದಿಸು !

ತೇಜೋನಿಧಿಯೆ, ಜಗತ್ತಿನಲ್ಲಿರುವ ಔಷ್ಣ್ಯವೆಲ್ಲವೂ ನೀನೇ, ಬೆಳಕೆಲ್ಲವೂ ನೀನೇ. ಈ ಜಗತ್ತಿಗೆಲ್ಲ ಆತ್ಮನಾಗಿರುವ ಚೈತನ್ಯಜ್ಯೋತಿಯೇ ನೀನೆಂಬ ಬುದ್ಧಿಯನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳುವಂತೆ ದಯಮಾಡು. ಸೂರ್ಯ, ಚಂದ್ರ, ನಕ್ಷತ್ರಗಳು, ಬೆಂಕಿ, ಮಿಂಚು-ಮುಂತಾದ ಯಾವ ಬೆಳಕಿನಲ್ಲಿಯಾದರೂ ನಿನ್ನ ಜ್ಯೋತಿಯೇ ಇರುವದೆಂಬುದನ್ನು ನೆನಪಿಡುವಂತೆ ಮಾಡು. ನಿನ್ನ ದಿವ್ಯಸನ್ನಿಧಿಯಲ್ಲಿ ನಿನ್ನ ಮಕ್ಕಳಾಗಿರುವ ಯಾವ ಮಾನವರಿಗೂ ಯಾವ ಪ್ರಾಣಿಗೂ ತನುಮನೋವಾಕ್ಕುಗಳಿಂದ ದ್ರೋಹವನ್ನು ಬಗೆಯದಂಥ ಸಾತ್ತ್ವಿಕ ಬುದ್ಧಿಯನ್ನು ಕೊಡು !

ಹಿಂದೆ, ಈಗ, ಮುಂದೆ-ಎಂಬ ಕಾಲತ್ರಯದಲ್ಲಿಯೂ ವ್ಯಾಪಿಸಿರುವ ಸೂತ್ರಾತ್ಮನೆಂಬ ವಾಯು ನೀನೇ ಅಲ್ಲವೆ? ಗಾಳಿಯು ಬೀಸುವಾಗಲೆಲ್ಲ, ಜಗತ್ತಿಗೆಲ್ಲ ಕ್ರಿಯಾಶಕ್ತಿಯನ್ನನು ಗ್ರಹಿಸಿರುವ ನಿನ್ನನ್ನು ಸ್ಮರಿಸಿಕೊಳ್ಳುವ ಬುದ್ಧಿಯನ್ನು ಕೊಡು ! ಜ್ಞಾನಶಕ್ತಿಕ್ರಿಯಾಶಕ್ತಿಗಳೆಲ್ಲ ನಿನ್ನ ಅನುಗ್ರಹವೆಂಬ ಅರಿವನ್ನು ಮನದಲ್ಲಿ ನಿಲ್ಲಿಸು ! ಎಲೈ ಸರ್ವಗತನಾದ ಭಗವಂತನೆ, ಊರ್ಧ್ವಲೋಕ, ಮಧ್ಯಮಲೋಕ, ಅಧೋಲೋಕ-ಎಲ್ಲವೂ ನಿನ್ನ ಉದರದಲ್ಲಿಯೇ ಅಡಕವಾಗಿದೆ ಎಂಬ ಸುಬುದ್ಧಿಯನ್ನು ಮನದಲ್ಲಿ ನಿಲ್ಲಿಸು ! ಸಂ-30, 285

# ನಾರದರು ಎಲ್ಲರಿಗಿಂತಲೂ ದೊಡ್ಡವರೆಂಬುದೇಕೆ ?

ಒಮ್ಮೆ ನಾರದರು ಜಗತ್ತಿನಲ್ಲಿ ದೊಡ್ಡವರು ಯಾರು ?-ಎಂಬುದನ್ನು ತಿಳಿಯುವದಕ್ಕೆ ವೈಕುಂಠಕ್ಕೆ ಹೋಗಿ ಭಗವಂತನಲ್ಲಿಯೇ ಈ ವಿಷಯವನ್ನು ಪ್ರಸ್ತಾಪಿಸಿದರಂತೆ. ಆಗ ಭಗವಂತನು ಹೇಳಿದ್ದೇನೆಂದರೆ :

ಪೃಥ್ವೀ ತಾದವತೀವ ವಿಸ್ತೃತಿಮತೀ ತದ್ವೇಷ್ಟನಂ ವಾರಿಧಿಃ
ಪೀತೋಽಸೌಕಲಶೋದ್ಭವೇನ ಮುನಿನಾ ಸ ವ್ಯೋಮ್ನಿ ಖದ್ಯೋತವತ್ ।
ತದ್ವ್ಯಾಪ್ತಂ ದನುಜಾಧಿಪಸ್ಯ ಜಯಿನಾ ಪಾದೇನ ಚೈಕೇನ ಖಂ
ತಂ ತ್ವಂ ಚೇತಸಿ ಧಾರಯಸ್ಯವಿರತಂ ತ್ವತ್ತೋಽಸ್ತಿ ನಾನ್ಯೋ ಮಹಾನ್ ॥

ಭೂಮಿಯು ಅತಿವಿಶಾಲವಾದದ್ದು. ಅದನ್ನು ಸಮುದ್ರವು ಸುತ್ತುಹಾಕಿಬಿಟ್ಟಿರುತ್ತದೆ. ಆ ಕಡಲನ್ನು ಅಗಸ್ತ್ಯನು ಆಚಮನಮಾಡಿಬಿಟ್ಟನಲ್ಲ ! ಆದರೆ ಆಕಾಶದಲ್ಲಿ ಅವನೊಂದು ಮಿಣುಕುಹುಳುವಿನಂತಿರುವನು. ಆ ಅನಂತಾಕಾಶವನ್ನು ಕೂಡ ಬಲಿರಾಜನನ್ನು ಜಯಿಸಿದ ತ್ರಿವಿಕ್ರಮನು ತನ್ನ ಒಂದು ಹೆಜ್ಜೆಯಲ್ಲಿ ಅಳೆದುಬಿಟ್ಟನು. ಎಲೈ ನಾರದನೆ, ಆ ಭಗವಂತನನ್ನೂ ನೀನು ಚಿತ್ತದಲ್ಲಿ ಧಾರಣೆಮಾಡಿರುವೆಯಲ್ಲ ! ನಿನಗಿಂತ ದೊಡ್ಡವರು ಯಾರಿರುವರು ? ಸಂ–26, 47

## ಶುಭ ಹಾರೈಕೆ

ಪ್ರತಿಯೊಬ್ಬ ಸಾಧಕನಲ್ಲಿಯೂ ಇಹಲೋಕದ ಸುಖವನ್ನು ಅನುಭವಿಸುವದಕ್ಕೆ ಪ್ರಯತ್ನವನ್ನು ಮಾಡುವ ಯೋಗ್ಯತೆ ಇದೆ, ಪರಲೋಕದ ಸುಖಕ್ಕಾಗಿ ತನ್ನ ದೃಷ್ಟಿಯನ್ನು ಹವಣಿಸುವ ಯೋಗ್ಯತೆಯೂ ಇದೆ; ಇಹಪರಗಳೆರಡನ್ನೂ ಮೀರಿ ಇಡಿಯ ಬ್ರಹ್ಮಾಂಡದ ತಿರುಳಾಗಿರುವ ಪರಮಾತ್ಮನ ಸ್ವರೂಪವನ್ನೇ ಸಂಪಾದಿಸಿಕೊಂಡು ನಿತ್ಯಸುಖದಲ್ಲಿ ಪ್ರತಿಷ್ಠಿತವಾಗುವ ಯೋಗ್ಯತೆಯೂ ಇದೆ. ಈ ಯೋಗ್ಯತೆಯು ಬೀಜರೂಪದಲ್ಲಿ ಎಲ್ಲರಲ್ಲಿಯೂ ಇದ್ದುಕೊಂಡಿರುವದೇ ಆದರೂ ಅದು ಹೊರತೋರಿಕೊಳ್ಳುವದಕ್ಕೆ ಕೆಲವು ತೊಡಕುಗಳಿರುತ್ತವೆ; ಅವು ತೊಲಗಬೇಕು. ಅವು ಬೇಗನೆ ತೊಲಗುವದಕ್ಕೆ ಕೆಲವು ಉತ್ತೇಜಕಸಾಮಗ್ರಿಗಳು ಬೇಕು, ಅವುಗಳು ಕೂಡಿಕೊಂಡು ಬರಬೇಕು.

ಯಾರು ನಿರಂತರವಾಗಿ ಭಗವಂತನನ್ನು ಸ್ಮರಿಸುತ್ತಿರುವರೋ, ಯಾರು ಭಗವದ್ಭಕ್ತರ ಸಂಗದಲ್ಲಿಯೇ ಕಾಲಹರಣವನ್ನು ಮಾಡುತ್ತಿರುವರೋ, ಅಂಥ ಸತ್ಪುರುಷರಿಗೆ ಧರ್ಮದಲ್ಲಿ ಅನುರಕ್ತಿಯೂ ಸಾತ್ತ್ವಿಕಜೀವನದಲ್ಲಿ ಪ್ರೀತಿಯೂ ಉಂಟಾಗುವವು; ಇಹಸಂಪತ್ತು ನಿಜವಾದ ಸಂಪತ್ತಾಗುವದು. ಅಂಥವರಿಗೆ ಶಾಸ್ತ್ರೋಕ್ತಕರ್ಮದಲ್ಲಿ ಆಸಕ್ತಿಯೂ ಹೆಚ್ಚುವದರಿಂದ ಪರದಲ್ಲಿ ಗತಿಯೂ ಆಗುವದೆಂಬುದು ನಿಶ್ಚಿತ.

ಇನ್ನು ಯಾರು ಇಹಪರವಿಷಯಭೋಗಗಳಲ್ಲಿ ವಿರಕ್ತರಾಗಿರುವರೋ ಅಂಥವರಿಗೆ ಭಗವಂತನ ಅನುಗ್ರಹವು ದೊರೆತರೆ ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ–ಮುಂತಾದ ಆಸುರಗುಣಗಳ ಕಾಟವು ತಪ್ಪುವದು; ಸತ್ಯ, ಅಹಿಂಸೆ, ಕ್ಷಮೆ, ತ್ಯಾಗ, ದಯೆ ಮುತಾದ ದೈವಗುಣಗಳು ಅವರಲ್ಲಿ ಮೂಡಿಕೊಳ್ಳುವವು.

ಭಗವಂತನ ಕೃಪೆಯಿಂದ ತಮ್ಮೆಲ್ಲರಲ್ಲಿಯೂ ಹುದುಗಿಕೊಂಡಿರುವ ಆಧ್ಯಾತ್ಮಿಕಶಕ್ತಿಯು ವಿಕಾಸವಾಗಲಿ ! ತಮ್ಮ ಇಂದ್ರಿಯಗಳಲ್ಲಿಯೂ ಮನಸ್ಸಿನಲ್ಲಿಯೂ ಇರಬಹುದಾದ ಆಸುರಸಂಸ್ಕಾರಗಳು ಮಾಯವಾಗಲಿ ! ಅವ್ಯಕ್ತವಾಗಿರುವ ದೈವಿಕ ಸಂಸ್ಕಾರಗಳು ಎದ್ದುಕೊಳ್ಳಲಿ ! ಅಧ್ಯಾತ್ಮಸಾಧನೆಯಲ್ಲಿ ತಮಗೆಲ್ಲ ಆಸಕ್ತಿಯು ಹೆಚ್ಚಲಿ. ಅಭ್ಯುದಯ ನಿಃಶ್ರೇಯಸಗಳಿಗೆ ಪಾತ್ರರಾಗಿ, ದೀರ್ಘಕಾಲ ಬಾಳುವಂತೆ ಭಗವಂತನು ತಮ್ಮನ್ನೆಲ್ಲ ಅನುಗ್ರಹಿಸಲಿ !

****

**4. ವೇದಾಂತ ಸಂದೇಶಗಳು : ಸಂಪುಟ 3 (ಅಧ್ಯಾತ್ಮ ಬೆಳಕು)**

ಅ.ಪ್ರ. ಪತ್ರಿಕೆಯಲ್ಲಿ 1923ರಲ್ಲಿ ಪ್ರಾರಂಭವಾಗಿ 1974ರವರೆಗೂ ಕೆಲವೊಮ್ಮೆ ಪ್ರತಿ ತಿಂಗಳೂ ಮತ್ತು ಕೆಲವು ಒಂದೆರಡು ವರ್ಷಗಳ ಅಂತರದಲ್ಲೂ ಶ್ರೀ ಶ್ರೀಗಳವರು ಬರೆದು ಪ್ರಕಟಿಸಿದ್ದ ಸುಮಾರು 210 ಲೇಖನಗಳ ಸಂಗ್ರಹ. ಅರ್ಧ ಪುಟದಿಂದ ಹಿಡಿದು ಮೂರು ನಾಲ್ಕು ಪುಟಗಳ ಲೇಖನಗಳನ್ನೊಳಗೊಂಡಿವೆ. ಸ್ಥೂಲವಾಗಿ (1) ಅಧ್ಯಾತ್ಮ ವಿದ್ಯೆ (2) ಅಧ್ಯಾತ್ಮದ ಮೊದಲ ಸೋಪಾನ (3) ಅಧ್ಯಾತ್ಮ ಸಾಧನಗಳು (4) ಅಧ್ಯಾತ್ಮ ಪ್ರಕಾಶ (5) ಅಧ್ಯಾತ್ಮ ಚಿಂತನೆ (6) ಅಧ್ಯಾತ್ಮಜ್ಞಾನ ಎಂಬ ಆರು ಅಧ್ಯಾಯಗಳಾಗಿ ವರ್ಗೀಕರಿಸಿ ಎಲ್ಲಾ ಲೇಖನಗಳನ್ನೂ ಅಳವಡಿಸಿದೆ.

ಸಭ್ಯಗೃಹಸ್ಥನ ಲೌಕಿಕ, ಧಾರ್ಮಿಕ ಕರ್ತವ್ಯಗಳೇನು, ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು, ಮನಃಶಾಂತಿಗೆ ಸುಲಭೋಪಾಯ, ನಮ್ಮ ಜೀವನದ ಸ್ವರೂಪ ಮತ್ತು ಹೆಗ್ಗುರಿ ಇತ್ಯಾದಿ ಸಾಮಾನ್ಯ ಜನರ ಪ್ರಶ್ನೆಗಳಿಗೆಲ್ಲಾ ಸರಳವಾಗಿಯೂ, ಶಾಸ್ತ್ರಯುಕ್ತಿಗಳಿಗೆ ಒಪ್ಪಾಗಿಯೂ ಇರುವ ಉತ್ತರಗಳಿವೆ. ದಿನಕ್ಕೊಂದು ಲೇಖನದಂತೆ ಪಠಿಸಿದರೂ ವರ್ಷವಿಡೀ ಓದಬಹುದಾದ ಉತ್ತಮ ಗ್ರಂಥ. ವೇದಾಂತದ ಆರಂಭದಲ್ಲಿರುವ ಮನುಷ್ಯರಿಂದ ಹಿಡಿದು ಜಿಜ್ಞಾಸುಗಳಿಗೂ ಅನ್ವಯಿಸುವ ಅತ್ಯುಪಯುಕ್ತವಾದ ವಿಷಯಗಳಿವೆ.

(ಎರಡನೆಯ ಮುದ್ರಣ, 2012, ಪು. 356, ಬೆಲೆ. 70 ರೂ.)

**5. ವೇದಾಂತ ಸಂದೇಶಗಳು : ಸಂಪುಟ 4 (ಅಧ್ಯಾತ್ಮದ ಔನ್ನತ್ಯದೆಡೆಗೆ)**

ಅ.ಪ್ರ. ಪತ್ರಿಕೆಯ 19, 20, 22, 23 ಸಂಪುಟಗಳಲ್ಲಿ ''ಈ ತಿಂಗಳ ಸಂದೇಶಗಳು'' ಎಂಬ ಶೀರ್ಷಿಕೆಯಲಿ ಕ್ರಮ ಕ್ರಮವಾಗಿ ಪ್ರಕಟಿಸಿದ್ದ 48 ಲೇಖನಗಳ ಸಂಗ್ರಹ. (1) ಮಾಯೆಯಿಂದ ಮಾಯಾತೀತನೆಡೆಗೆ (2) ಸತ್ಯಜ್ಞಾನಾನಂದರ ದರ್ಶನದ ದಾರಿ (3) ಅದ್ಯಾತ್ಮ ಪ್ರಗತಿಯ ಮಾರ್ಗಗಳು (4) ಸಾಧನಗಳಿಂದ ಪರಮಾತ್ಮನ ಆನಂದ ಎಂಬ ಆಲ್ಕು ಅಧ್ಯಾಯಗಳಲ್ಲಿ ಅಳವಡಿಸಿದೆ. (ಎರಡನೆಯ ಮುದ್ರಣ, 2012, ಪು. 334, ಬೆಲೆ. 60 ರೂ.)

**6. ವೇದಾಂತ ಸಂದೇಶಗಳು : ಸಂಪುಟ 5 (ಶ್ರೀ ಶ್ರೀಗಳವರ ಹಿತವಚನಗಳು)**

ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 14ರಿಂದ ಸಂ. 44ರವರೆಗೆ (ಜನವರಿ 1943–ಫೆಬ್ರವರಿ 1975) ಶಂಕರರ ಪತ್ರಗಳು ಎಂಬ ಶೀರ್ಷಿಕೆಯಲ್ಲಿ ಕೆಲವೊಮ್ಮೆ ಒಂದು ಮತ್ತು 2–3 ಪುಟಗಳಂತೆ ಪ್ರಶ್ನೋತ್ತರ ರೂಪದಲ್ಲಿ ಶ್ರೀಶ್ರೀಗಳವರೇ ಬರೆದು ಪ್ರಕಟಿಸಿದ್ದ 337 ಲೇಖನಗಳ (583 ಪು.) ಸಂಗ್ರಹ. ಲೇಖನಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು : 1) ಕುಟುಂಬ ಭಾವನೆ, ಹರಿಜನ ಪ್ರೇಮ , ಧನದ ಉಪಯೋಗ ಇತ್ಯಾದಿ ಸಾಮಾನ್ಯ ವಿಷಯಗಳನ್ನೂ 2) ಪಾರಿವ್ರಾಜ್ಯ, ವೇದಾಂತದ ವಿಚಾರವನ್ನು ಚರ್ಚಿಸುವ ಕ್ರಮ, ಸಂನ್ಯಾಸಧರ್ಮ, ಆಧ್ಯಾತ್ಮಿಕ ಸಾಧನಗಳು, ನಿಜವಾದ ವಿದ್ಯೆ ಇತ್ಯಾದಿ ಶಾಸ್ತ್ರೀಯವಾದ ಲೇಖನಗಳನ್ನೂ ಒಳಗೊಂಡಿದೆ. ಪರಮಪುರುಷಾರ್ಥಕ್ಕೆ ಸಾಧನವಾದ ವಿಚಾರವನ್ನು ತಿಳಿಸುವ ಲೇಖನಗಳಾದ್ದರಿಂದ ಎಲ್ಲರಿಗೂ ಉಪಯುಕ್ತವಾದ ಗ್ರಂಥ. (ಎರಡನೆಯ ಮುದ್ರಣ, 2012, ಪು. 583, ಬೆಲೆ. 120 ರೂ.)

**ಇತರ ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.**

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ  ಸ್ವಾಮಿಗಳವರ ಜೀವನ ಮತ್ತು ಅವರ ಅಸಾಧಾರಣ ಶ್ರೇಷ್ಠ ಸಾಧನೆಯನ್ನು ಅವಲೋಕಿಸಿದಾಗ, ಅವರ ಜನ್ಮ ಮತ್ತು ಬಾಳು ಎಲ್ಲವೂ ವೇದಾಂತಾಧ್ಯಯನ ಮತ್ತು ವೇದಾಂತ ಪ್ರಸಾರಕ್ಕೇ ಮೀಸಲಾಗಿರಬೇಕೆಂಬುದು ಭಗವಂತನ ಇಚ್ಛೆ ಮತ್ತು ನಿಯಾಮಕವಾಗಿತ್ತೆಂದು ತೋರುತ್ತದೆ. ಇದೇನೂ ಉತ್ಪ್ರೇಕ್ಷೆಯಲ್ಲ, ಏಕೆಂದರೆ ಇನ್ನೂ ಅವರ ವಿದ್ಯಾರ್ಥಿದೆಶೆಯಲ್ಲಿಯೇ ತರಗತಿಯ ಸಂಸ್ಕೃತ ಪಾಠ ಪುಸ್ತಕವನ್ನು ಕೇಳಿದಾಗ ಅಂಗಡಿಯವನು ಕೊಟ್ಟದ್ದು "ಭಗವದ್ಗೀತಾ ಭಾಷ್ಯ" ("ಅತ್ಯಂತ ಅನಿರೀಕ್ಷಿತವಾದ ಘಟನೆಯಿಂದ ನನಗೆ ಅರಿವಿಲ್ಲದೆಯೇ ಭಗವದ್ಗೀತಾ ಭಾಷ್ಯದಲ್ಲಿ ಪ್ರವೇಶವಾಯಿತು"–ಶ್ರೀಗಳು), ಮತ್ತೊಮ್ಮೆ ಅಗ್ಗದ ಸಣ್ಣ ಪುಸ್ತಕ ಕೋರಿದಾಗ ಕೈಗೆ ಬಂದದ್ದು "ವಿವೇಕ ಚೂಡಾಮಣಿ", ಸೆಂಟ್ರಲ್ ಕಾಲೇಜಿನ ಎಫ್‌ಎ ತರಗತಿಯಲ್ಲಿದ್ದಾಗ ಶ್ರೀಕೃಷ್ಣಸ್ವಾಮಿ ಅಯ್ಯರ್ ರವರ ಮನೆಯಲ್ಲಿ ಅವರಿಂದ ಕೆಲವು ವೇದಾಂತ ಪಾಠಗಳು ಹಾಗೂ ಸೂತಸಂಹಿತೆಯನ್ನು ಓದಲು ಅವರ ಪ್ರೋತ್ಸಾಹ, ... ಹೀಗೆ ಪ್ರವೃತ್ತಿ, ಉತ್ಸುಕತೆ, ಕ್ರಿಯಾಪ್ರಯತ್ನ ಹರಿದದ್ದೇ ವೇದಾಂತ ಮಾರ್ಗದಲ್ಲಿ.

"ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವಿತದಲ್ಲಿ ಸಂಭವಿಸಬಹುದಾದ ಸಾಧಾರಣ ..... ಘಟನೆಗಳ ನಡುವೆ ಶ್ರೀ ಸುಬ್ಬರಾಯರು (ಶ್ರೀ ಗಳವರ ಪೂರ್ವಾಶ್ರಮದ ಹೆಸರು) ಸಾಧಿಸಿದ ಅಪೂರ್ವ ಸಿದ್ಧಿಗಳು ತೆರೆದು ನಿಲ್ಲುತ್ತವೆ. ಶ್ರೀ ಶ್ರೀ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳಿಂದ ಶ್ರೀ ಶಾಂಕರ ಭಾಷ್ಯ, ಶಾಂತಿಪಾಠ, ವಿದ್ವದಗ್ರೇಸರರಾದ ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳ (ಮಾರ್ಗದರ್ಶನ), ಕೃಷ್ಣಸ್ವಾಮಿ ಅಯ್ಯರ್, ಕುರ್ತುಕೋಟಿ ಮಹಾಭಾಗವತರು, ಹೊಸಕೆರೆ ಚಿದಂಬರಯ್ಯನವರು–ಮುಂತಾದವರ ಸಹವಾಸ ಸುಬ್ಬರಾಯರಿಗೆ ದೇವದತ್ತ ವರಗಳಾಗಿ ಪರಿಣಮಿಸಿದುವು.... ಮನುಷ್ಯನಲ್ಲಿ ಪ್ರಬಲವಾದ ಉತ್ಸಾಹವೂ, ಕರ್ತೃತ್ವ ಶಕ್ತಿಯೂ ಇದ್ದಲ್ಲಿ ಆತನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀಗಳೇ ನಿದರ್ಶನ. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಅವರು ಗಳಿಸಿದ, ಬಳಸಿದ ಪ್ರೌಢಪಾಂಡಿತ್ಯ, ಶೈಲಿ ವಿಸ್ಮಯಕಾರಿಯಾದದ್ದು. ಶ್ರೀಗಳವರ ಅಧ್ಯಯನ ಆಳ, ಜನೋಪಯೋಗ ವಾಗಲೆಂಬ ಹೃದಯದ ಕಳಕಳಿ ಗಮನೀಯ. ಆಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಲೇಖನಗಳೂ ಗಂಭೀರವಾದವು, ಮತ್ತೆ ಮತ್ತೆ ಓದಬೇಕಾದವು–ಆ ಲೇಖನಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ಜಿಜ್ಞಾಸುಗಳಿಗೆ ಮಹೋಪಕಾರವಾಗುತ್ತದೆ"–ಶ್ರೀ ಎನ್. ರಂಗನಾಥ ಶರ್ಮ (ಶ್ರೀಗಳವರ ಆತ್ಮಚರಿತ್ರೆಯ 2006 ಮುನ್ನುಡಿಯಲ್ಲಿ). ಪಂಡಿತರಾಗಿದ್ದ ಶ್ರೀ ಲಕ್ಷ್ಮೀ ನರಸಿಂಹ ಮೂರ್ತಿಯವರು ಸಂಗ್ರಹಿಸಿ ಪ್ರಕಟಿಸಿದ 15, 18 ಗ್ರಂಥಗಳು ಈ ಮೊದಲೇ ಪ್ರಕಟವಾಗಿವೆ. ಅನಂತರದಲ್ಲೂ ಕೆಲವು ಸಂಪುಟಗಳು ಬಂದಿವೆ. ಅದರ ಮುಂದುವರಿಕೆಯ ಪ್ರಯತ್ನ ಇಲ್ಲಿದೆ.